K. Mohamed Ahmed, Secretary to Government, Home, Forest and Agriculture Departments, June 1954.

(5) R. J. Rego, Development Secretary to Government, 20—2—1950.

(6) D. K. Srinivasachar, Secretary to Government, Public Works and Electrical Departments, 22—4—1953.

(7) G. Venkatakrishna Rao, Secretary to Chief Minister, 11—4—1952; and Secretary to Government, L. S. G. and Planning Departments, 29—11—1952.

(8) B. M. Krishnan, Education Secretary to Government, 5—9—1953.

(9) C. V. Channappa, Law Secretary to Government, 6—7—1953.

(10) M. Sadasivayya, Additional Secretary to Government, 6—7—1953.

(11) M. K. Varadarajan, Joint Secretary to Government, 6—3—1953.

(*c*) Only one.

(*d*) In the interest of Government work.

Sri R. ANANTARAMAN.—Do all these officers of the Secretariat belong to the I.A.S. Cadre ?

Sri K. HANUMANTHAIYA.—Yes, except the Law Secretary, the Additional Secretary and the Joint Secretary to Government. They belong to the Judicial Service. Barring these I think the rest of them belong to the Administrative Service.

Sri R. ANANTARAMAN.—Is it a rule that all these officers should be of the I.A.S. Cadre ?

Sri K. HANUMANTHAIYA.—Yes.

Sri R. ANANTARAMAN.—Then how is it that these three officers do not belong to the I.A.S. cadre ?

Sri K. HANUMANTHAIYA.—Not all the Secretaries. Secretaries of technical departments like the Law Department—it is the usual practice of Government to take officers who are well-versed in law.

ಶ್ರೀ ಟಿ. ಹನುಮಯ್ಯ.—(ಡಿ) ಪ್ರಶ್ನೆಯಲ್ಲಿ. ದೀರ್ಘಕಾಲ ಆ ಹುದ್ದೆಗಳಲ್ಲಿರುವುದಕ್ಕೆ ಕಾರಣವೇನು ಎಂದು ಕೇಳಿರುವುದಕ್ಕೆ ಉತ್ತರವಾಗಿ ಸರ್ಕಾರಿ ಕೆಲಸಗಳ ಸೌಕರ್ಯಕ್ಕಾಗಿ ಎಂದು ಹೇಳಿದ್ದೀರಿ. ಇತರಕಡೆಯಿಂದ ಬಂದವರು ಸೆಕ್ರೆಟೇರಿಯಟ್‌ನಲ್ಲಿ ಸೌಕರ್ಯವಾಗಿ ಕೆಲಸ ಮಾಡುವುದಿಲ್ಲವೇ ?

ಶ್ರೀ ಕೆ. ಹನುಮಾಂತಯ್ಯ.—ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಸೆಕ್ರೆಟೇರಿಯಟ್‌ನಲ್ಲಿರುವವರೇ ಸರ್ಕಾರದ ಕೆಲಸ ಸೌಕರ್ಯವಾಗಿ ಮಾಡುತ್ತಾರೆ, ಡೆಪ್ಯುಟಿ ಕಮೀಷನರನ್ನು ಸೆಕ್ರೆಟರಿಯಾಗಿ ಹಾಕಿದರೆ ಸರ್ಕಾರದ ಕೆಲಸ ಸೌಕರ್ಯವಾಗಿ ಮಾಡುವುದಿಲ್ಲ ಎಂದು ಭಾವನೆಯೇ ?

ಶ್ರೀ ಕೆ. ಹನುಮಂತಯ್ಯ.—ಅದು ಆ ರೀತಿ ಅರ್ಥವಾಗುವುದಿಲ್ಲ. ಇಲ್ಲಿರುವವರೂ ಇದ್ದಾರೆ ಮತ್ತು ಅನೇಕಸಾರಿ ಡೆಪ್ಯುಟಿ ಕಮೀಷನರನ್ನೂ ಸೆಕ್ರೆಟರಿ ಆಗಿ ವರ್ಗಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಇಲ್ಲಿರುವವರನ್ನು ಬೇರೆ ಕಡೆಗೆ ಹಾಕಿಬಿಟ್ಟರೆ ಸರ್ಕಾರದ ಕೆಲಸ ಸೌಕರ್ಯವಾಗಿ ನಡೆಯುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ನಡೆಯುತ್ತದೆ ಎಂದು ಆಗಲೇ ಹೇಳಿದೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅವರನ್ನು ಮತ್ತೆ ಬದಲಾಯಿಸುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಹನುಮಂತಯ್ಯ.—ಬದಲಾವಣೆಯ ಅವಶ್ಯಕತೆ ಕಂಡು ಬಂದಾಗ ಆ ಬದಲಾವಣೆ ಆಗುತ್ತದೆ. ಒಂದು ತೊಂದರೆ ಇದೆ. ಸೀನಿಯರ್‌ಮೋಸ್ಟ್ ಐ.ಎ.ಎಸ್. ಆಫೀಸರನ್ನು ಡೆಪ್ಯುಟಿ ಕಮಿಷನರ್ ಆಗಿ ಕಳುಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರು ಡೆಪ್ಯುಟಿ ಕಮಿಷನರ್‌ಆಗಿ ಹತ್ತಾರುವರ್ಷ ಕೆಲಸ ಮಾಡಿರುತ್ತಾರೆ. ಆದ್ದರಿಂದ ಅಡ್ಮಿನಿಸ್ಟ್ರೇಟಿವ್ ಕನ್ವೀನಿಯನ್ಸ್ ನೋಡಿಕೊಂಡು ಯಾರು ಯಾರು ಎಲ್ಲೆಲ್ಲಿ ಇರಬೇಕೆಂಬುದನ್ನು ನಿರ್ಧರಿಸಿ ವರ್ಗಾವಣೆ ಮಾಡತಕ್ಕ ಪದ್ಧತಿ ಉಂಟು. ಬಹಳದಿನದಿಂದ ಇಲ್ಲೇ ಇದ್ದಾರೆ ಇನ್ನೊಂದು ಕಡೆಗೆ ವರ್ಗಮಾಡಿ ಎಂದರೆ ಕಾರ್ಯರೂಪಕ್ಕೆ ತರುವಾಗ ಬಹಳ ಕಷ್ಟವಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಜೂನಿಯರ್ ಐ.ಎ.ಎಸ್. ಅಧಿಕಾರಿಗಳು ಡೆಪ್ಯುಟಿ ಕಮಿಷನರು ಆಗುವುದರಿಂದಲೂ ಮತ್ತು ಸೀನಿಯರ್ ಐ.ಎ.ಎಸ್. ಅಧಿಕಾರಿಗಳನ್ನು ಸೆಕ್ರೆಟೇರಿಯಟ್‌ಗೆ ಕೊಟ್ಟಿರುವುದರಿಂದಲೂ ಡಿಸ್ಟ್ರಿಕ್ಟ್ ಲೆವಲ್ಲಿನಲ್ಲಿ ತೃಪ್ತಿಕರವಾಗಿ ಕೆಲಸ ನಡೆಯುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri K. HANUMANTHAIYA.—I am not prepared to concede the implication of the question, Sir.

ಶ್ರೀ ಕೆ. ಪುಟ್ಟಸ್ವಾಮಿ.—ಇಂಪ್ಲಿಕೇಷನ್ ಅಲ್ಲ, ಸ್ವಾಮಿ. ಬಹಳ ಜೂನಿಯರ್ ಆಫೀಸರುಗಳನ್ನೂ ಡೆಪ್ಯುಟಿ ಕಮಿಷನರ್‌ಆಗಿ ಹಾಕುತ್ತಾ ಇರುವುದರಿಂದ ಅಲ್ಲಿ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಾ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ?

ಶ್ರೀ ಕೆ. ಹನುಮಂತಯ್ಯ.—ಒಂದೆರಡು ಸಂದರ್ಭಗಳಲ್ಲಿ ಜೂನಿಯರ್ ಆಫೀಸರುಗಳನ್ನು ಡೆಪ್ಯುಟಿ ಕಮಿಷನರ್‌ಆಗಿ ಹಾಕಿದ್ದರಿಂದ ಕೆಲಸ ಕಾರ್ಯಗಳು ಅಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ವರದಿ ಬಂದಿದೆ. ಆದರೆ ಅದು ಆಯಾ ವ್ಯಕ್ತಿಯ ದಕ್ಷತೆಯಮೇಲೆ ಹೋಗುತ್ತದೆಯೇ ಹೊರತು ವರ್ಗಾವಣೆ ಮಾಡುವುದರಿಂದಾಗಲಿ ಸೀನಿಯರ್ ಅಥವಾ ಜೂನಿಯರ್ ಎಂಬ ಆಧಾರದ ಮೇಲಾಗಲಿ ಹೋಗುವುದಿಲ್ಲ. Many a time junior officers may be efficient and the senior officer may be indolent. Therefore it is not possible to get satisfactory work merely because of seniority. Much depends upon the efficiency of the individual himself.

N.G.Os'. Dearness Allowance.

Q.—155. **Sri V. R. NAIDU** (Malleswaram).—

Will the Government be pleased to state :—

whether Government would think of increasing the Dearness Allowance that is being paid to N.G.Os. and lowest class of servants at least by a small amount ?

A.—**Sri K. HANUMANTHAIYA** (Chief Minister).—

No increase is feasible so long as the financial position of the State continues to be what it is.

ಶ್ರೀ ವಿ. ಆರ್. ನಾಯ್ಡು.—ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯು ಈಗಿರುವಂತೆಯೇ ಇದ್ದುಕೊಂಡು ಬರುವವರಿಗೆ ತುಟ್ಟಿಭತ್ಯವನ್ನು ಹೆಚ್ಚಿಸುವುದು ಕಾರ್ಯತಃ ಸಾಧ್ಯವಿಲ್ಲವೆಂದು ಹೇಳಿದ್ದೀರಿ. ಮೊನ್ನೆ ತಾವು ಒಂದು ಸಂದರ್ಭದಲ್ಲಿ ಭಾಷಣ ಮಾಡುತ್ತಾ ಸಹಾಯಮಾಡುತ್ತೇವೆ ಎಂದು ಭರವಸೆಕೊಟ್ಟಿಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಈಗಿರತಕ್ಕ ಸಂಬಳವನ್ನು ಹೆಚ್ಚಿಸುತ್ತೇನೆ ಎಂದು ನಾನು ಭರವಸೆ ಕೊಟ್ಟಿಲ್ಲ.

ಶ್ರೀ ವಿ. ಆರ್. ನಾಯ್ಡು.—ಕಾರಣ ಏನಾದರೂ ಹೇಳಿ ಸ್ವಾಮಿ !

ಶ್ರೀ ಕೆ. ಹನುಮಂತಯ್ಯ.—ಸಂಬಳಸಾರಿಗೆ ಹೆಚ್ಚು ಮಾಡತಕ್ಕದ್ದು ಎರಡು ಮೂರು ಕಾರಣಗಳಿಗಾಗಿ ಮಾಡಬೇಕಾಗುತ್ತದೆ. ಆದಾಯ ಇದ್ದು ಆ ಖರ್ಚನ್ನು ನಿರ್ವಹಿಸುವ ಶಕ್ತಿ ಸರ್ಕಾರಕ್ಕೆ ಇರಬೇಕು. ಎರಡನೆಯದು ಅವರ ಸೀನಿಯಾರಿಟಿ, ಸ್ಕೇಲು ಇದಕ್ಕನುಸಾರ

(ಶ್ರೀ ಕೆ. ಹನುಮಂತಯ್ಯ.)

ವಾಗಿ ಮೇಲೆ ಹೋಗುತ್ತಾ ಹೋಗುತ್ತಾ ಹೆಚ್ಚು ಸಂಬಳ ಬಂದೇ ಬರುತ್ತದೆ.

ಶ್ರೀ ವಿ. ಆರ್. ನಾಯ್ಡು.—ಈಗಿನ ಕಷ್ಟಕಾಲದಲ್ಲಿ ನಾನ್‌ಗೆಜೆಟೆಡ್ ಆಫೀಸರುಗಳು ಮತ್ತು ಲೋಯರ್ ಗ್ರೇಡ್. ನೌಕರರುಗಳಿಗೆ ಸ್ವಲ್ಪಮಟ್ಟಿಗಾದರೂ ಅಲೋಯನ್ಸ್ ಹೆಚ್ಚಿಸುವುದು ಒಳ್ಳೆಯದಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಅನೇಕಸಾರಿ ಒಳ್ಳೆಯ ಕೆಲಸಗಳನ್ನು ಕೂಡ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಡಿ.ಎ. ಕೊಡುತ್ತಾ ಇರುವುದು ಸಾಧಾರಣವಾಗಿ ಅವರ ಪ್ರಯಾಣದ ದೂರದ ಮೇಲೆ ತಾನೆ ಕೊಡುತ್ತಾ ಇರುವುದು?

ಶ್ರೀ ಕೆ. ಹನುಮಂತಯ್ಯ.—ಡಿ.ಎ. ಎನ್ನುವುದನ್ನು ತುಟ್ಟಿಭತ್ಯ ಎನ್ನುವುದಕ್ಕೆ ಹೇಳುತ್ತಾರೆ, ಪ್ರಯಾಣ ಮಾಡಿದ್ದಕ್ಕಾಗಿ ಕೊಡುವುದಕ್ಕಲ್ಲ; ಅದು ಟಿ.ಎ.

ಶ್ರೀ ಬಿ. ರಾಚಯ್ಯ.—ನಾನ್‌ಗೆಜೆಟೆಡ್ ಆಫೀಸರುಗಳಿಗೆ ಸರ್ಕಾರಿ ಡಿಪೋಗಳಲ್ಲಿರತಕ್ಕ ದವಸಧಾನ್ಯಗಳನ್ನು ಕೊಡುವುದಕ್ಕೇನಾದರೂ ಏರ್ಪಾಡು ಮಾಡಿದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಹಿಂದೆ ಮಾಡಿದ್ದೆವು.

ಶ್ರೀ ಬಿ. ರಾಚಯ್ಯ.—ಆಗ ಸಂಸ್ಥಾನದಲ್ಲಿರತಕ್ಕ ಎಲ್ಲಾ ನಾನ್‌ಗೆಜೆಟೆಡ್ ಆಫೀಸರುಗಳಿಗೂ ಒದಗಿಸಲಾಯಿತೆ?

ಶ್ರೀ ಕೆ. ಹನುಮಂತಯ್ಯ.—ಆ ರೀತಿ ನಾವು ರೂಲ್ಸ್ ಜಾರಿ ಮಾಡಿದ್ದೆವು. ಎಲ್ಲರಿಗೂ ತಲಪಿದೆಯೋ ಇಲ್ಲವೋ ಎಂಬ ವಿಚಾರದಲ್ಲಿ ಸರ್ಕಾರದವರಿಗೆ ಯಾವ ದೂರೂ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಸಂಸ್ಥಾನದಲ್ಲಿರತಕ್ಕ ಎಲ್ಲಾ ನಾನ್‌ಗೆಜೆಟೆಡ್ ಆಫೀಸರುಗಳಿಗೂ ಕೊಡಬೇಕು ಎಂದು ತಾನೆ ತಾವು ಮಾಡಿದ್ದು?

ಶ್ರೀ ಕೆ. ಹನುಮಂತಯ್ಯ.—ಸಾಧ್ಯವಾದಮಟ್ಟಿಗೂ.

ಶ್ರೀ ಬಿ. ರಾಚಯ್ಯ.—ಕೆಲವು ಕಡೆಗಳಲ್ಲಿ ಕೆಲವರಿಗೆ ಮಾತ್ರ ಕೊಟ್ಟು ಮತ್ತೆ ಕೆಲವರಿಗೆ ಕೊಡದೇ ಇರುವುದು ಸರ್ಕಾರಧವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಇದೇ ರೀತಿಯಲ್ಲಿ ನಾನ್‌ಗೆಜೆಟೆಡ್ ಆಫೀಸರುಗಳಿಗೆ ಉಚಿತ ಔಷಧೋಪಚಾರ ಕೊಡಬೇಕೆಂದು ಸರ್ಕಾರದ ಆರ್ಡರ್ ಆಗಿದೆಯೇ?

Sri K. HANUMANTHAIYA.—That does not pertain to this question, Sir.

ಶ್ರೀ ಎ. ಭೀಮಪ್ಪನಾಯಕ್.—ತುಟ್ಟಿಭತ್ಯವನ್ನು ಸಂಬಳದ ಜೊತೆಗೆ ಸೇರಿಸಿ ಕನ್ಸಾಲಿಡೇಟ್ ಮಾಡುವ ಪ್ರಪೋಸಲ್ ಇದೆಯೆ?

ಉಪಾಧ್ಯಕ್ಷರು.—ಅದಕ್ಕೆ ಸಂಬಂಧಪಟ್ಟ ಪ್ರಶ್ನೆ ಬೇರೆ ಇದೆ; ಅದು ಬಂದಾಗ ಕೇಳಿ.

Central and State Scales of pay, bringing about uniformity.

Q.—396. **Sri G. A. THIMMAPPA GOWDA** (Arkalgud).—

Will the Government be pleased to state :—

(*a*) the steps taken by the State Government to bring about uniformity in scales of pay, etc., between the Central Government Officials and the State Government Officials ;

(*b*) whether the Government have prepared a definite scheme in this respect; if so, what is the period within which the scheme is going to be implemented in full ?

A.—**Sri K. HANUMANTHAIYA** (Chief Minister).—

(*a*) There is no question of bringing about uniformity in scales of pay, etc., between the Central Government Officials and State Government Officials.

(*b*) Does not arise in view of reply to (*a*).

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಂಸ್ಥಾನದಲ್ಲಿ ಕೆಲಸಮಾಡುವ ಕೇಂದ್ರ ಸರ್ಕಾರದ ನೌಕರರ ಮತ್ತು ನಮ್ಮ ಸರ್ಕಾರದ ನೌಕರರ ಸಂಬಳ ಸಾರಿಗೆಗಳಲ್ಲಿ ವಿಪರೀತವಾದ ಏರುಪೇರುಗಳಿರುವುದರಿಂದ ನಮ್ಮ ಸರ್ಕಾರದ ನೌಕರರ ಸಂಬಳ ಸಾರಿಗೆಯನ್ನು ಸ್ವಲ್ಪ ಉತ್ತಮ ಪಡಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Sri K. HANUMANTHAIYA.—Yes.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಏರುಪೇರು ಅಂದರೆ ಕೇಂದ್ರ ಸರ್ಕಾರದ ಸಂಬಳ ಸಾರಿಗೆಯನ್ನು ನಮ್ಮ ಸರ್ಕಾರದ ನೌಕರರಿಗೆ ಕೊಡುವುದಾದರೆ ಎಷ್ಟು ಹಣಕಾಸಿನ ಹೊರೆಯಾಗಬಹುದೆಂದು ಸರ್ಕಾರದವರು ಲೆಕ್ಕಾಚಾರ ಮಾಡಿದ್ದಾರೆಯೆ?

Sri K. HANUMANTHAIYA.—We have not made calculation on that basis. But, it will cost so heavily that this Government will never be able to bear it.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಿದ್ದಮೇಲೆ ಈ ಸರ್ಕಾರದವರು ನಮ್ಮ ನೌಕರರಿಗೆ ಕೇಂದ್ರ ಸರ್ಕಾರದಲ್ಲಿ ಕೊಡುತ್ತಿರುವ ಸಂಬಳ ಸಾರಿಗೆಯನ್ನು ಕೊಡಲು ಹಣದ ಜವಾಬ್ದಾರಿಯನ್ನು ಕೇಂದ್ರದವರು ಒಪ್ಪಿಕೊಳ್ಳುವಂತೆ ಮನವಿಮಾಡಿ ಒತ್ತಾಯ ಮಾಡಿದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಈ ಸಂದರ್ಭದಲ್ಲಿ 'ಹೀಗೆ ವ್ಯತ್ಯಾಸವಿರುವುದು ನ್ಯಾಯವಲ್ಲ, ಇದಕ್ಕೆ ಒಂದು ಪರಿಹಾರ ಕಂಡುಹಿಡಿಯಬೇಕು' ಎಂದು ಈ ಮೊದಲೇ ಈ ಸರ್ಕಾರ ಇಂಡಿಯ ಸರ್ಕಾರಕ್ಕೆ ಬರೆದಿತ್ತು. ಸುಮಾರು ಎರಡು ವರ್ಷಗಳ ಕೆಳಗೆ ನಡೆದ ಫೈನಾನ್ಸ್ ಮಿನಿಸ್ಟರ್ಸ್ ಕಾನ್ಫರೆನ್ಸಿನ ಅಜೆಂಡಾದಲ್ಲೂ ಈ ವಿಷಯವನ್ನು ಸೇರಿಸಿತ್ತು. ಏನೋ ಕಾರಣದಿಂದ ಆ ಕಾನ್ಫರೆನ್ಸ್ ಪುನಃ ನಡೆಯಲಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದಕ್ಕೆ ಮದ್ರಾಸು ಮತ್ತು ಬೊಂಬಾಯಿ ಸರ್ಕಾರಗಳ ಜೊತೆಯಲ್ಲಿ ತಾವೂ ಸೇರಿ ಒಂದು ಯುನೈಟೆಡ್ ಫ್ರಂಟ್ ಇದ್ದ ಹಾಗೆ ಮಾಡಿಕೊಂಡು ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡುವುದು ಸೂಕ್ತವಲ್ಲವೆ?

Sri K. HANUMANTHAIYA.—We cannot create a United Front against Government of India. After all, whether it is Government of India or State Governments, we are working under the same Constitution and serving the same set of people. It is merely a matter of mutual consultation and right decision arrived at rather than creating a Front.

Non-Gazetted Officers, merging Dearness Allowance in pay.

Q.—449. **Sm. Bellary SIDDAMMA** (Davangere).—

Will the Government be pleased to state :—

(*a*) the amount of expenditure that will have to be incurred if 50 per cent of the Dearness Allowance paid to the N. G. Os. working in the State is merged in their pay ;

(*b*) the action to remove the disparity existing in their pay and allowances between the officers of the Central Government and the State Government with a view to maintain efficiency ;

(*c*) the results achieved ?

A.—**Sri K. HANUMANTHAIYA** (Chief Minister).—

(*a*) About Rs. 6¼ lakhs per annum.

(*b*) and (*c*) This is not a feasible proposition.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇದಕ್ಕೆ ತಗಲುವ ವೆಚ್ಚ ಕೇವಲ 6¼ ಲಕ್ಷ ರೂಪಾಯಿಗಳೆಂದು ಹೇಳಿದ್ದೀರಿ. ಇಷ್ಟನ್ನು ಖರ್ಚು ಮಾಡುವುದರಿಂದ ಎಷ್ಟೋ ಬಡಜನರ ಸಂಸಾರಗಳಿಗೆ ಸಹಾಯವಾಗುತ್ತದೆ. ಆದ್ದರಿಂದ ಮುಖ್ಯವಾದ ಈ ವಿಷಯಕ್ಕೆ ಮನಸ್ಸು ಮಾಡುತ್ತೀರಾ, ಸ್ವಾಮಿ ?

ಶ್ರೀ ಕೆ. ಹನುಮಂತಯ್ಯ.—ಈ ವಿಷಯವನ್ನು ನಾವು ಇನ್ನೂ ಯೋಚನೆ ಮಾಡಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇದನ್ನು ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಮುಂದೆ ಬರತಕ್ಕ ಬಡ್ಜೆಟ್ ಅಧಿವೇಶನಕ್ಕೆ ಮೊದಲು ಬಡ್ಜೆಟ್ ಫ್ರೇಂ ಮಾಡುವಾಗ ಇದರ ಸಾಧಕ ಬಾಧಕಗಳನ್ನು ಯೋಚನೆ ಮಾಡುತ್ತೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅನೇಕ ದಿವಸಗಳಿಂದ ಒಂದೇ ಮನೆಯಲ್ಲಿ ಸಂಸಾರ ಮಾಡಿಕೊಂಡಿದ್ದಂತೆ ಇದ್ದ ನಮ್ಮ ಕೆಲವು ನೌಕರರಿಗೆ ಈ ದಿವಸ ಅವರು ಕೇಂದ್ರ ಸರ್ಕಾರಕ್ಕೆ ಸೇರಿದ್ದರಿಂದ ಕೆಲಸ ಒಂದೇ ಆದರೂ ಸಂಬಳ ಸಾರಿಗೆ ಹೆಚ್ಚಾಗಿ ಬರುತ್ತಿದೆ. ಅದೇ ಅವರ ಜೊತೆಯಲ್ಲಿದ್ದು ಈಗ ನಮ್ಮ ಸರ್ಕಾರದಲ್ಲೇ ಉಳಿದಿರುವವರಿಗೆ ಕೇವಲ ಕಡಮೆ ಸಂಬಳ ಸಾರಿಗೆ ಬರುತ್ತಿದೆ. ಇದನ್ನು ಸರಿತೂಗಿಸಲು ಕೇಂದ್ರದಿಂದ ಸಬ್ಸಿಡಿಯನ್ನಾದರೂ ಪಡೆದು ಅನುಕೂಲಪಡಿಸುವುದು ಸೂಕ್ತವಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಕೇಂದ್ರ ಸರ್ಕಾರದವರು ಸಬ್ಸಿಡಿ ಕೊಟ್ಟರೆ ಮಾಡಬಹುದು. ಆದರೆ ಇದಕ್ಕೆ ಅವರು ಸಬ್ಸಿಡಿ ಕೊಡುವುದಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈಗ ಹಿಂದೆ ಕೊಡುತ್ತಿದ್ದ ತುಟ್ಟಿ ಭತ್ಯವನ್ನಾದರೂ ಮುಂದುವರಿಸುತ್ತಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಅದನ್ನು ಈಗ ಕಡಮೆ ಮಾಡಬೇಕಾದ ಪ್ರಸಂಗ ಬಂದಿದೆ. ಆಹಾರ ಧಾನ್ಯಗಳ ಬೆಲೆ ಹೆಚ್ಚಾಗಿದ್ದಾಗ ತುಟ್ಟಿ ಭತ್ಯದ ಪ್ರಮಾಣವನ್ನು ನಿಗದಿಮಾಡಲಾಗಿತ್ತು. ಈಗ ಆಹಾರ ಧಾನ್ಯಗಳ ಬೆಲೆ ಶೇಕಡ 50ರಷ್ಟು ಕಡಮೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಏನಾದರೂ ಅವರಿಗೆ ಕಡಮೆ ಮಾಡಬೇಕೆಂದು ಯೋಚನೆ ಮಾಡಬೇಕೇ ಹೊರತು ಹೆಚ್ಚು ಮಾಡಬೇಕೆಂದು ಯೋಚನೆ ಮಾಡಲು ಸಾಧ್ಯವೆ ?

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ತುಟ್ಟಿ ಭತ್ಯದಲ್ಲಿ ಸ್ವಲ್ಪವನ್ನಾದರೂ ಸಂಬಳಕ್ಕೆ ಸೇರಿಸಿದರೆ ಒಳ್ಳೆಯದು. ಆದ್ದರಿಂದ ಈಗ ಕೊಡುವುದರಲ್ಲಿ ಕಾಲು ಭಾಗವನ್ನಾದರೂ ಸೇರಿಸಿದರೆ ಸಹಾಯಮಾಡಿದ ಹಾಗಾಗುವುದಿಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಬೆಲೆ ತುಟ್ಟಿಯಾಗಿದ್ದಾಗ ಸಂಬಳ ಸಾಲದೆಂದು ಈ ಅಲೋಯನ್ಸ್ ಕೊಟ್ಟಿತ್ತು. ಆದ್ದರಿಂದ ಬೆಲೆ ಕಡಮೆಯಾದಾಗ ಸಂಭಾವನೆಯನ್ನು ಕೂಡ ಕಡಮೆಮಾಡಬೇಕು.

Sri S. SRINIVASA IYENGAR.—Will the Government be pleased to state the total number of N.G.Os. that will be benefited by this expenditure ?

Sri K. HANUMANTHAIYA.—I have not calculated ; I want notice.

Sri S. SRINIVASA IYENGAR.—Is it not a fact that by such a step you will be helping them to get a better pension ?

Sri K. HANUMANTHAIYA.—As I have already said, this is a matter for deep consideration at the time of framing the Budget taking into consideration the financial implication.

Sri S. SRINIVASA IYENGAR.—Thank you for that. But, I want to know whether the relief from this will only come into play when the N.G.O. retires ?

Sri K. HANUMANTHAIYA.—Yes.

Sri S. SRINIVASA IYENGAR.—So, is the amount of 6½ lakhs an immediate expenditure or the average expenditure ?

Sri K. HANUMANTHAIYA.—This is an immediate expenditure.

Sri S. SRINIVASA IYENGAR.—Then, what is the total number of N.G.Os. that retire annually ?

Sri K. HANUMANTHAIYA.—I have already answered that question. Taking the financial implication into consideration at the time of framing the Budget, we have to devote some thought to this. At the middle of the year this suggestion cannot be worked out.

Sri S. SRINIVASA IYENGAR.—Is it not a fact that the employees of the Central Government who are in the State are already enjoying this benefit ?

Sri K. HANUMANTHAIYA.—The Central Government employees are so fortunate that they enjoy more amenities and prospects of pay.

Sri S. SRINIVASA IYENGAR.—Since the N.G.O's. had the advantage of D. A. all these years, would it not be better to safeguard their interest when they retire ?

Sri K. HANUMANTHAIYA.—I have already answered that question, Sir.

Sri A. BHEEMAPPA NAIK.—What was the index of living of these officials then and now, Sir ?

Sri K. HANUMANTHAIYA.—I have not got the figures now.

Sri A. BHEEMAPPA NAIK.—If the suggestion of Srimathi Siddamma for merging part of D. A. into the salary is accepted, will it not affect the pay of the officials ?

Sri K. HANUMANTHAIYA.—What the Hon'ble member has said is more by way of suggestion: that will be considered.

Sri A. BHEEMAPPA NAIK.—What I meant is, can they cut their coats shorter and wear it ?

Sri K. HANUMANTHAIYA.—I am not proposing to cut their cost ; I am merely proposing to cut their allowance.

(*Laughter*)

Sri A. BHEEMAPPA NAIK.—Would it not amount to cutting their stomach itself ?

(No answer)

Munsiff-Magistrate Court for Chennarayapatna.

1 P. M.

Q.—12. **Sri K. LAKKAPPA** (Chennarayapatna).—

Will the Government be pleased to state :—

(*a*) whether they are aware that the people of Chennarayapatna Taluk and Chennarayapatna Municipality have represented to the Government and the Courts' Re-organisation Committee, the need for opening a Munsiff-Magistrate's Court at Chennarayapatna ;

(*b*) whether the Committee has submitted its report to Government in the matter ;

(*c*) if so, what is the recommendation of the Committee on this matter ?

A.—**Sri Kadidal MANJAPPA** (Minster for Revenue and Public Works) [On behalf of SRI A. G. RAMACHANDRA RAO (Minister for Law and Education)].—

(*a*) No.

(*b*) No.

(*c*) Does not arise in view of the answer to (*b*).

ಶ್ರೀ ಕೆ. ಲಕ್ಕಪ್ಪ.—"ಎ" ಭಾಗದ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ತಿಳಿಸಿದೆ. ಅಂದರೆ ಚೆನ್ನರಾಯಪಟ್ಟಣ ಮುನಿಸಿಪಾಲಿಟಿಯವರು Courts Re-organisation Committee ಯವರಿಗೆ ಅಲ್ಲಿ ಒಂದು ಮುನ್ಸೀಫ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ಸ್ಥಾಪನೆ ಮಾಡುವ ಬಗ್ಗೆ ಏನೊಂದೂ represent ಮಾಡಿಕೊಂಡಿಲ್ಲವೆಂದು ಅರ್ಥವೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರಿಗೆ ಆ ವಿಚಾರ ಗೊತ್ತಿಲ್ಲವೆಂದು ಹೇಳಿದೆ.

ಶ್ರೀ ಕೆ. ಲಕ್ಕಪ್ಪ.—ಅವರಿಗೆ ಈ ವಿಚಾರ ವರದಿ ಮಾಡಿರುವುದಾದರೂ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಆ ಸಮಿತಿಯವರು ಯಾವಾಗ ತಮ್ಮ final report ಸರ್ಕಾರದ ಮುಂದೆ ಇಡುತ್ತಾರೆ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ಧರವಾಗಿ ಹೇಳಲಾರೆ.

ಶ್ರೀ ಕೆ. ಲಕ್ಕಪ್ಪ.—ಈ ಸಮಿತಿ ನೇಮಕವಾಗಿ ಎಷ್ಟು ಕಾಲವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಒಂದು ವರ್ಷ ಕಾಲವಾಯಿತು?

ಶ್ರೀ ಕೆ. ಲಕ್ಕಪ್ಪ.—ಇಷ್ಟೇ ದಿನದಲ್ಲಿ ಸಮಿತಿಯು ವರದಿ ಬರಬೇಕೆಂದು ನಿರ್ಧಾರ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಲಕ್ಕಪ್ಪ.—ಜರೂರಾಗಿ ವರದಿ ತರಿಸಿ ಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ದೇಶಾದ್ಯಂತ ಈ ಕಮಿಟಿಯವರು ತಿರುಗುತ್ತಿದ್ದಾರೆಂಬುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ತಿರುಗುತ್ತಿದ್ದಾರೆ ; ಎಲ್ಲೆಲ್ಲಿ ತಿರುಗುತ್ತಿದ್ದಾರೆಂಬುದು ಗೊತ್ತಿಲ್ಲ.

ಶ್ರೀ ಕೆ. ಲಕ್ಕಪ್ಪ.—ಇದುವರೆಗೆ ಇವರ ಟಿ. ಎ. ಮತ್ತು ಡಿ. ಎ. ಬಗ್ಗೆ ಎಷ್ಟು ಖರ್ಚಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

Assistant Commissioners, I. A. S. eligibility list.

Q.—4. **Sri S. KARIAPPA** (Virupakshapura).—

Will the Government be pleased to state :—

(*a*) whether a Committee was formed to prepare a list of persons from among the Assistant Commissioners for the I.A.S. ;

(*b*) at the instance of whom the Committee was so formed ;

(*c*) whether the Committee prepared a list of eligible persons, from among the Assistant Commissioners for the I.A.S. ;

(*d*) the stage at which the question stands at present ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) There was an understanding between this Government and the Central Government that an eligibility list should be prepared. The Committee was constituted by this Government to prepare the list.

(*c*) Yes.

(*d*) The matter is still under correspondence with the Government of India.

ಶ್ರೀ ಎಸ್. ಕರಿಯಪ್ಪ.—ಅಸಿಸ್ಟೆಂಟ್ ಕಮಿಷನರ್ ದರ್ಜೆಯವರ ಪೈಕಿ ಕೆಲವರನ್ನು ಐ.ಎ.ಎಸ್. ದರ್ಜೆಗೆ ಸೇರಿಸಿಕೊಳ್ಳುವ ಪ್ರಶ್ನೆ ಎಷ್ಟು ದಿನದಿಂದ ಸರ್ಕಾರದ ಮುಂದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—1950 ರಿಂದ.

ಶ್ರೀ ಎಸ್. ಕರಿಯಪ್ಪ.—ಮೂರು ವರ್ಷಗಳಿಂದ ಈ ವಿಚಾರ ನಿಧಾನವಾಗಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಸರ್ಕಾರದಿಂದ ಈ ಬಗ್ಗೆ ಪಟ್ಟಿಯೊಂದು ತಯಾರಾಗಿ ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಹೋಗಿದೆ. ಈಗ ಅದು ಅವರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಕರಿಯಪ್ಪ.—ಈ ವಿಚಾರ ಮೂರು ವರ್ಷದಿಂದ ಅವರ ಪರಿಶೀಲನೆಯಲ್ಲಿದೆಯೇ ಅಥವಾ ಪಟ್ಟಿಯನ್ನು ಈಚೆಗೆ ಕಳುಹಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪಟ್ಟಿ ತಯಾರಾದುದು 1953ರಲ್ಲಿ. ಆ ಲಾಗಾಯ್ತು ಈ ವಿಚಾರ correspondence ನಲ್ಲಿದೆ.

ಶ್ರೀ ಎಸ್. ಕರಿಯಪ್ಪ.—ಆ ಪಟ್ಟಿಯಲ್ಲಿ ಸುಮಾರು ಎಷ್ಟು ಜನರ ಹೆಸರು ಸೇರಿರಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು 58–59 ಮಂದಿಯ ಹೆಸರು ಸೇರಿರಬಹುದು.

ಶ್ರೀ ಎಂ. ಮಾದಯ್ಯ.—ಈ ಪಟ್ಟಿಯಲ್ಲಿಲ್ಲದಿರುವ ಅಸಿಸ್ಟೆಂಟ್ ಕಮಿಷನರ್ ಪೈಕಿ ಐ.ಎ.ಎಸ್. cadreಗೆ ಸೇರಿರುವವರು ಯಾರಾದರೂ ಇದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಮೋಷನ್ ಮೇಲೆ ಕೆಲವರು ಐ.ಎ.ಎಸ್. cadreಗೆ ಬಂದಿರಬಹುದು.

Sri M. MADIAH.—May I know the total number of Assistant Commissioners whose names are included in the I.A.S. cadre ?

Sri Kadidal MANJAPPA.—I want notice.

ಶ್ರೀ ಎಂ. ಮಾದಯ್ಯ.—ಈ ಪೈಕಿ ಎಷ್ಟು ಜನ ಅಸಿಸ್ಟೆಂಟ್ ಕಮಿಷನರನ್ನು ಸಮಿತಿಯವರು interview ಮಾಡಿದರು ?

ಶ್ರೀ ಕಡಿದಾಳ್ ಮಂಜಪ್ಪ.—I.A.S. listಗೆ ಸೇರಿಸಬೇಕೆಂಬ ಉದ್ದೇಶದಿಂದಲೇ ಸಮಿತಿಯವರು interview ಮಾಡಿಲ್ಲ.

ಶ್ರೀ ಎಂ. ಮಾದಯ್ಯ.—ಆ ಸಮಿತಿಯಲ್ಲಿ ಯಾರಾರಿದ್ದಾರೆ ?

Sri Kadidal MANJAPPA.—The Revenue Minister ; the Revenue Commissioner ; the Chief Secretary ; the Excise Commissioner ; Sri J. B. Mallaradhya and Sri H. B. Gundappa Gowda, the Chairman of the Public Service Commission.

ಶ್ರೀ ಎಂ. ಮಾದಯ್ಯ.—ಈ ಸಮಿತಿಯವರು ಸಂಸ್ಥಾನದ ನಾನಾ ಭಾಗದಲ್ಲಿರುವ ಅಸಿಸ್ಟೆಂಟ್ ಕಮಿಷನರುಗಳನ್ನು ಕರೆಯಿಸಿ ಇಂಟರ್‌ವ್ಯೂ ಮಾಡಿರುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದ ಮಟ್ಟಿಗೂ ಮಾಡಿರುತ್ತಾರೆ.

ಶ್ರೀ ಎಂ. ಮಾದಯ್ಯ.—ಆ ರೀತಿ ಇಂಟರ್‌ವ್ಯೂಗೆ ಬಂದಿದ್ದವರ ಹೆಸರನ್ನೆಲ್ಲಾ ಶಿಫಾರ್ಸು ಮಾಡಿ ಕಳುಹಿಸಿರುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಮಿತಿಯವರು ಸೆಲೆಕ್ಟ್ ಮಾಡಿರುವವರನ್ನೆಲ್ಲಾ ಕಳುಹಿಸಿರುತ್ತದೆ.

Sri M. MADIAH.—What are the principles followed by the Committee, what is the procedure adopted by it ?

ಶ್ರೀ ಕಡಿದಾಳ್ ಮಂಜಪ್ಪ.—ಅವರ ಗುಣ, ಅವರ ದಕ್ಷತೆ ಮತ್ತು ಅವರ ಅರ್ಹತೆ ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಸೆಲೆಕ್ಟ್ ಮಾಡಿರುತ್ತಾರೆ.

Sri M. MADIAH.—Of them, how many belong to the Scheduled Castes ?

Sri Kadidal MANJAPPA.—Notice.

ಶ್ರೀ ಎಂ. ಮಾದಯ್ಯ.—ಈ ಲಿಸ್ಟಿನಲ್ಲಿ ಸಮಿತಿಯವರು ಇಂಟರ್‌ವ್ಯೂ ಮಾಡಿದವರನ್ನು ಮಾತ್ರ ತೋರಿಸಿರುತ್ತೀರಾ ಅಥವಾ ಸರ್ಕಾರದವರು piece-meal ಆಗಿ ಶಿಫಾರ್ಸುಮಾಡಿರುವ ಹೆಸರನ್ನೂ ಸೇರಿಸಿರುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ.—ಇತ್ತೀಚೆಗೆ ಕೆಲವು ಹೆಸರುಗಳನ್ನು ಸೇರಿಸಿ, ಇನ್ನೂ ಕೆಲವು ಹೆಸರುಗಳನ್ನು ಸೇರಿಸದೆ ಇರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ.—ಕೆಲವು ಹೆಸರುಗಳು ಐ.ಎ.ಎಸ್. ಜೂನಿಯರ್ ಕೇಡರಿಗೆ ಸೇರಿಸಲ್ಪಟ್ಟ ಪ್ರಯುಕ್ತ, ಕೆಲವು ಅಸಿಸ್ಟೆಂಟ್ ಕಮಿಷನರುಗಳ ಸೀನಿಯಾರಿಟಿಗೆ ಧಕ್ಕೆ ಬಂದಿರುವುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ.—ಈಗ ಪ್ರಮೋಷನ್ ಕೊಟ್ಟಿರುವುದು ಸಿವಿಲ್ ಲಿಸ್ಟ್ ಆರ್ಡರ್ ಪ್ರಕಾರ ಸರಿಯಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾಗಿದೆ.

Sri M. MADIAH.—Is it against the provisions of the Constitution ?

Sri Kadidal MANJAPPA.—It is not against the provisions of the Constitution.

Sri M. MADIAH.—So, any action taken by the State Government or the Central Government or any Commission with regard to the selection of candidates to this cadre will not offend the provisions of the Constitution—am I correct ?

Sri Kadidal MANJAPPA.—I cannot follow the Hon'ble Member.

Sri M. MADIAH.—If the names of the Assistant Commissioners selected for the I.A.S. cadre are placed above the names of officers who are not selected, will that not offend the provisions of the Constitution ?

Sri Kadidal MANJAPPA.—The Hon'ble Member must remember that the I.A.S. cadre is quite different from the nomination cadre.

Sri M. MADIAH.—That I understand. But what I ask is, will it not be taken by the officers who are not selected for the I.A.S. cadre, as a serious punishment ?

Sri Kadidal MANJAPPA.—No question of Punishment arises here.

Sales-Tax Subjects Committee (Action on recommendations)

Q.—454. **Sm. Bellary SIDDAMMA** (Davangere)—

Will the Government be pleased to state :—

(*a*) the stage at which the decision on the recommendations of the Sales Tax Subjects Committee stands ;

(*b*) when will it be given effect to?

A.—**Sri Kadidal MANJAPPA** (Minister for Revenue and Public Works).—

(*a*) and (*b*) In accepting the recommendations of the Committee with certain modifications, a Bill to amend the Mysore Sales Tax Act was brought up before the Houses of Legislature at the last Budget Session. The Bill as approved by the Legislature has been sent to the Government of India for obtaining the assent of the President. After the assent of the President is received, the amended Act will come into effect.

Sri M. PALANIYAPPAN.—May I know when the Bill was sent to the President for approval ?

* **Sri Kadidal MANJAPPA.**—I do not remember the exact date on which it was sent.

Sri M. PALANIYAPPAN.—May I know whether it has been referred back to the Government with corrections by the President ?

Sri Kadidal MANJAPPA.—No.

Mr. DEPUTY SPEAKER.—The next questions Nos. 317 and 417 may be taken up together.

Inspector-General of Police (Reversion of Sri N. V. Babu Reddy and appointment of new officer from outside.)

Q.—317. **Sri M. V. RAMA RAO** (Tumkur)—

Will the Government be pleased to state :—

(*a*) whether and if so why Sri N. V. Babu Reddy has been reverted from the post of Inspector-General of Police to that of Deputy Inspector-General ;

(*b*) whether the officer has appealed from the order to the Government of India and if so, whether his appeal has been forwarded by the State Government;

(*c*) the terms upon which the present Inspector-General of Police has been appointed?

A.—**Sri H. SIDDAVEERAPPA** (Minister for Home and Industries).—

(*a*) Yes; Sri N. V. Babu Reddy was reverted from the post of Inspector-General of Police in Mysore to that of Deputy Inspector-General of Police, because Government found him to be unfit to be continued as the Head of the Police Department.

(*b*) Yes—and the appeal memo has been forwarded by the State Government to the Government of India.

(*c*) The present Inspector-General of Police has been appointed on payment of the differenee between the pay he drew as Inspector-General of Police, Madras, and the pension admissible to him on superannuation.

Q.—417. **Sri H. C. LINGA REDDY** (Malur).—

Will the Government be pleased to state:—

(*a*) when the present Inspector-General of Police was appointed;

(*b*) the terms of appointment;

(*c*) his salary;

(*d*) the special reasons for the selection from outside the State?

A.—**Sri H. SIDDAVEERAPPA** (Minister for Home and Industries).—

(*a*) In May 1954.

(*b*) and (*c*) On payment of the difference between the pay that the officer drew as I.G.P., Madras, and the pension admissible to him on superannuation.

(*d*) Government considered it necessary in the interests of the Department.

Sri M. V. RAMA RAO.—May I know how long this officer has been I.G.P.?

Sri H. SIDDAVEERAPPA.—From March 1952 to April 1954.

Sri M. V. RAMA RAO.—When did the Government find him to be unfit to be continued as the Head of the Police Department?

* **Sri H. SIDDAVEERAPPA**.—At the time they passed the orders.

Sri M. V. RAMA RAO.—May I know whether any charge has been framed against this officer?

Sri H. SIDDAVEERAPPA.—That question, Sir, does not arise for the reason that the appeal is before the Central Government now.

Sri M. V. RAMA RAO.—My question is, whether any charges have been framed against this officer before his reversion?

Sri H. SIDDAVEERAPPA.—Reversion did not require any charges being framed, because the officer was only acting. He was not a permanent officer there and so there was no reversion as such.

Sri M. V. RAMA RAO.—My question was whether and if so why Sri Babu Reddy has been reverted from the post of I.G. of Police to that of Deputy Inspector-General of Police and the answer given is: "Yes, Sri N. V. Babu Reddy was reverted from the post of Inspector-General of Police in Mysore to that of Deputy Inspector-General..."

Sri H. SIDDAVEERAPPA.—Yes, it was only an acting promotion given to him, as I already said.

Sri M. V. RAMA RAO.—But the answer to a supplementary given was that there was no question of reversion and therefore I read out the answer given to my question. As the answer indicates that no charges have been framed, may I know whether it is the opinion of the Hon'ble Minister or whether it is the finding of the Government that that particular officer has been found to be unfit to be continued as the Head of the Police Department?

Mr. DEPUTY SPEAKER.—It is stated in the answer: "Government found him to be unfit."

Sri M. V. RAMA RAO.—May I know whether the finding of the Government has been recorded anywhere or whether it is the opinion formed by the Government collectively or by the Ministers individually and that is expressed by way of answer to my question?

---

* Indicates that the speech has not been revised by the Member concerned.

Sri H. SIDDAVEERAPPA.—That is the decision of the Government.

Sri M. V. RAMA RAO.—When was the appeal preferred by this officer forwarded to the Government of India ?

Sri H. SIDDAVEERAPPA.—In the month of September 1954.

Sri M. V. RAMA RAO.—When was the appeal preferred ?

Sri H. SIDDAVEERAPPA.—It was received by the Government in the month of June 1954.

Sri M. V. RAMA RAO.—May I know whether any comments have been made by the State Government upon the appeal forwarded to the Government of India ?

Sri H. SIDDAVEERAPPA.—I do not know whether it would be right on my part to make a statement, however much I wish to, because the matter is on appeal. I do not know whether I am quite right in making it known.

Sri M. V. RAMA RAO.—I am merely asking whether any comments have been made or whether the appeal is forwarded without comment to the Government of India ?

Sri H. SIDDAVEERAPPA.—Of course, with comments we have forwarded

Sri M. V. RAMA RAO.—What are the materials upon which the Government came to the finding that the officer is unfit to be continued as the Head of the Department ?

Sri H. SIDDAVEERAPPA.—Again, Sir, all these things are contained in the reply the Government have sent to the Government of India and I do not think it will be in public interest to disclose all this at this stage, because the appeal is before the Government of India.

Mr. DEPUTY SPEAKER.—The entire matter is under investigation by the Government of India. Details need not be gone into now.

Sri M. V. RAMA RAO.—Is it because of inefficiency or disobedience of orders, he is found to be unfit ?

Sri H. SIDDAVEERAPPA.— Again, I am not able to give those. . . .

Sri M. V. RAMA RAO.—Has the Hon'ble Minister no reasons to give ?

Sri H. SIDDAVEERAPPA.—I have reasons. But I do not know whether I am right in placing them before this House at this stage.

Sri M. V. RAMA RAO.—Will there be anything wrong in indicating the reason without disclosing the reasons which prompted the Government to find him unfit ?

Sri H. SIDDAVEERAPPA.—Because those reasons are for determination by the Government of India.

Sri H. C. LINGA REDDY.—May I know why the Government imported an officer from outside to man this high post in the State ?

Sri H. SIDDAVEERAPPA.—It is not a question exactly of importing anybody. There is an all-India cadre and he belonged to that cadre.

Sri H. C. LINGA REDDY.—Had that officer retired from service in that State ?

Sri H. SIDDAVEERAPPA.—Yes.

Sri H. C. LINGA REDDY.—What was the salary that he was being paid in Madras, because you have not given that here ?

Sri H. SIDDAVEERAPPA.—In Madras at the time he retired from service he was drawing Rs. 2,750. According to the terms of the contract, we have to pay him whatever he was getting in Madras minus the pension he gets from the Madras Government. The pension he is entitled to per month is presumed to be Rs. 791—10—8 and excluding that the Government will pay him the balance.

Sri H. C. LINGA REDDY.—What is the salary Sri Babu Reddy is given ?

Sri H. SIDDAVEERAPPA.—Tentatively Rs. 1,250 per month pending finalisation of it by the Government of India.

Sri H. C. LINGA REDDY.—Are the Government now satisfied that by having him as the head of the Department, their object is achieved ?

Sri H. SIDDAVEERAPPA.—I am not able to follow the Hon'ble Member.

Sri H. C. LINGA REDDY.—My question is, you have appointed this officer in the interest of the Department as you have stated in the answer. Are the Government satisfied that by this costly appointment they have achieved their object ? By this appointment of an outsider, is not the Police Department demoralised, Sir ?

Sri K. HANUMANTHAIYA.—No, Sir.

Sri H. C. LINGA REDDY.—Has it not caused demoralisation among the highly placed officers of the Police Department and has it not affected the morale of other officers also ?

Sri K. HANUMANTHAIYA.—I am in a position definitely to say that it has distinctly improved the morale of the Department.

Sri H. C. LINGA REDDY.—Has it come to the notice of the Government that, after this promotion, thefts and other offences are on the increase in all the districts, Sir ?

Sri H. SIDDAVEERAPPA.—So far as that position is concerned, there is another interpellation. I am making a fuller statement. It is not true to connect this appointment with the alleged increase in the offences.

Mr. DEPUTY SPEAKER.—That has nothing to do with these thefts.

Sri A. BHEEMAPPA NAIK.—Is it not that Sri N. V. Babu Reddy was considered as one of the most efficient officers of the Police Department from the beginning of his service ?

Sri K. HANUMANTHAIYA.—Again, Sir, if these questions are to be answered we have to disclose all the charges that have been made against him and I must inform the Hon'ble Members of this House who are very enthusiastic about this question that this question cannot be answered without disclosing all the charges pending; apart from this question of reversion that has taken place. there are other charges pending against him. In his own interest and in the interest of service, it is better that the Members do not probe into the matter.

Sri A. BHEEMAPPA NAIK.—The Hon'ble Chief Minister is so solicitous about the services and he does not want to give out the reasons because it is not in the interest of the services to give out reasons. Would it not have been discreet for the Government not to have used the word 'unfit' in the open House ? When once you condemn him, why don't you give reasons ?

Sri K. HANUMANTHAIYA.—Giving a decision is quite different from giving reasons.

Sri A. BHEEMAPPA NAIK.—You have given the decision and I want to know what are the reasons that led you to that decision ?

Mr. DEPUTY SPEAKER.—Even that is under the examination of the Government of India. That word has been used in the Government order and has therefore been referred to.

Sri A. BHEEMAPPA NAIK.—When you award a conviction the reasons for which that conviction was awarded must also be given. The appeal is there and the appellate authority is looking into the word 'unfit' and it also looks into the reasons.

Sri B. V. NARAYANA REDDY.—Was he awarded the Gold Medal from the Central Government because he was unfit ?

Sri A. BHEEMAPPA NAIK.—Would the Government give any instance when he was found unfit in his lower cadre or any instance when he was judged as inefficient when he was in the lower rungs of the Department in his career as Probationary A.S.P. and later as D.S.P. and D.I.G ? Was there any remark of that kind during his 20 years' service ?

Mr. DEPUTY SPEAKER.—The service register will disclose all that.

Sri H. SIDDAVEERAPPA.—Again, Sir, I wish I was in a position to inform the Hon'ble friend of the reasons he wanted to know. What he says may find a place in the records.

Sri A. BHEEMAPPA NAIK.—I am not concerned with 'may'; can this Government state whether there are any such remarks as 'unfit' made during his career apart from the opinion of the present Government ?

Sri H. SIDDAVEERAPPA.—I am not going to disclose what is in the confidential reports of the officer, Sir.

Sri A. BHEEMAPPA NAIK.—Will the cadre of the I.G.P. in Mysore be the same hereafter as the present I.G.P. ?

Sri H. SIDDAVEERAPPA.—This is a matter which, as I have already told you, is before the Government of India; they are finalising what the cadre of the I.G.P. should be in Mysore ; it has not yet been decided.

Sri A. BHEEMAPPA NAIK.—Were not all the previous I.G.Ps. as efficient as

(SRI A. BHEEMAPPA NAIK.)

the present incumbent whose efficiency is exhibited ever since his appointment?

Mr. DEPUTY SPEAKER.—That has nothing to do with the question of efficiency. Question-hour is over.

QUESTION FOR ANSWER ON THE DAY.

(But not taken up.)

Public Service Commission (Taking a Scheduled Caste Member).

Q.—105. Sri B. T. KEMPARAJ (Bangalore South—Scheduled Castes).—

Will the Government be pleased to state :—

whether they have been thinking of taking a Scheduled Caste Member on the Public Service Commission ?

A.—Sri Kadidal MANJAPPA (Minister for Revenue and Public Works).—

There is no such idea at present. Under Section 3 of the Mysore Public Service Commission Regulation, the Commission shall consist of the Chairman and two other members and they are already there.

PANEL OF CHAIRMEN.

Mr. DEPUTY SPEAKER.—Under Rule 6 of the Rules of Procedure and Conduct of Business in the Mysore Legislative Assembly, the following persons will constitute the panel of Chairmen for this Session of the Legislative Assembly:—

Sri D. Devaraja Urs,
,, B. T. Kemparaj,
,, B. Hutche Gowda,
,, B. Narayanaswamy.

RECOMMENDATION BY RAJPRAMUKH.

Mr. DEPUTY SPEAKER.—I have received the following order from the Rajpramukh :

"In pursuance of clause (1) of Article 207 of the Constitution of India, I, Jaya Chamaraja Wadiyar, Rajpramukh of Mysore, do hereby recommend that the Mysore Revenue Laws (Extension to Bellary) Bill, 1954, be introduced and moved in the Mysore Legislative Assembly."

ADJOURNMENT MOTION.

Sri Mulka GOVINDA REDDY (Chitaldrug).—Mr. Speaker, I have sent an adjournment motion.

Mr. DEPUTY SPEAKER.—You have sent an adjournment motion and it will be taken up tomorrow.

INTRODUCTION OF BILLS.

Sri T. CHANNIAH (Minister for Local Self-Government and Public Health).—Sir, I beg to introduce :

(i) The Mysore Laws (Extension to Bellary) Bill, 1954.
(ii) The Mysore Revenue Laws (Extension to Bellary) Bill, 1954.
(iii) The Mysore Revision of State Laws Bill, 1954.
(iv) The Mysore Tenancy (Second Amendment) Bill, 1954.
(v) The Mysore Board of Revenue Bill, 1954.
(vi) The Madras Tenants and Ryots Protection (Mysore Amendment) Bill, 1954.

PAPER LAID ON THE TABLE.

Madras Tenants and Ryots Protection (Mysore Amendment) Ordinance, 1954.

Sri T. CHANNIAH (Minister for Local Self-Government and Public Health).—Sir, I lay on the Table the Madras Tenants and Ryots Protection (Mysore Amendment) Ordinance, 1954.

PRESIDING OFFICER'S CONFERENCE.

Mr. DEPUTY SPEAKER.—The Secretary will now read the Proceedings of the Presiding Officers' Conference.

SECRETARY.—Sir, I have received the following communication from the Secretary, Lok Sabha Secretariat, New Delhi, (camp Srinagar) dated 14th June 1954 :—

'I am directed to inform you that the Conference of Presiding Officers which met in Srinagar on the 14th June 1954 adopted the following resolution :

> "This Conference mourns the loss of Dr. Satyapal and Shri H. Siddaiya, Speakers of the Punjab and Mysore Legislative Assemblies, respectively, and places on record its deep appreciation of the contributions that they made to the cause of parliamentary democracy."

The Presiding Officers stood for awhile in silence as a mark of respect to the memory of the deceased.

I am also to request that resolution of the Conference may be brought to the notice of your House.'

CONDOLENCE REFERENCES.

Demise of Sri H. Siddaiya, Speaker

ಶ್ರೀ ಕೆ. ಹನುಮಂತಯ್ಯ (ಸಭಾ ನಾಯಕರು ಮತ್ತು ಮುಖ್ಯ ಮಂತ್ರಿಗಳು).—ಸ್ವಾಮಿ, ಈ ಸಭೆ ಪ್ರಾರಂಭವಾದ ಮೇಲೆ ಕೆಲವು ವ್ಯಕ್ತಿಗಳು ನಮ್ಮಗಳ ದೈವಾಧೀನರಾದ ಸಂಗತಿಯನ್ನು ತಿಳಿಸಿ ಸಂತಾಪವನ್ನು ಸೂಚಿಸಬೇಕಾದ ಪ್ರಮೇಯಗಳು ಬಂದುವು. ಈ ಸಭೆಯ ಹಿಂದೆ ಇದ್ದ ಸಭೆಗಳಲ್ಲೂ ಕೂಡ ಈ ತರಹ ಪ್ರಸಂಗಗಳು ಬಂದವು. ಆದರೆ ನಾನು ವೈಯಕ್ತಿಕವಾಗಿ ಹೇಳಬೇಕಾದರೆ—ಹಾಗೆಯೇ ಅನೇಕ ಮಾನ್ಯ ಸಧಸ್ಯರುಗಳು ಈ ಸಭೆಯಲ್ಲಿರುವವರು ಹೇಳಬೇಕಾದರೆ—ಇಷ್ಟು ದಾರುಣವಾದ ದುಃಖವನ್ನುಂಟುಮಾಡಿದ ಪ್ರಸಂಗ ಮತ್ತೆ ಯಾವುದೂ ನನ್ನ ಅನುಭವದಲ್ಲಿ ಇಲ್ಲ. ಶ್ರೀಮಾನ್ ಸಿದ್ದಯ್ಯನವರ ಕೊನೆಯಕಾರ್ಯ ಕ್ಷೇತ್ರ ಈ ಸಭೆಯ ಸ್ಪೀಕರ್ ಅಧಿಕಾರಕ್ಕೆ ಸಂಬಂಧಪಟ್ಟದ್ದಾಗಿತ್ತು. ಈ ದಿವಸ ಅವರ ವ್ಯಕ್ತಿತ್ವವನ್ನು ನಾವೆಲ್ಲಾ ಅಳೆಯುತ್ತಾ ಇರತಕ್ಕದ್ದು ಈ ಒಂದು ಕಾರ್ಯಕ್ಷೇತ್ರದಲ್ಲಿ ಅವರು ಸೇವೆ ಮಾಡಿದ್ದಕ್ಕಲ್ಲ. ಅವರ ಜೀವಮಾನವೇ ಸೇವಾಮಯವಾದ ಜೀವಮಾನ. ಮೊದಲು ಡಿಸ್ಟ್ರಿಕ್ಟ್ ಬೋರ್ಡ್‌ನಲ್ಲಿ ಅವರು ಸದಸ್ಯರಾಗಿ ಅನಂತರ ಅಧ್ಯಕ್ಷರಾಗಿ ನಿಸ್ಪೃಹವಾದ ಸೇವೆಯನ್ನು ಸಲ್ಲಿಸಿ ಜನಾನುರಾಗಕ್ಕೆ ಪಾತ್ರರಾದರು. ಅದೇ ಕಾಲದಲ್ಲಿ ಆಗಿದ್ದ ಶಾಸನ ಸಭೆಗಳ ಸದಸ್ಯರಾಗಿ ಪ್ರತಿಭಾಯುತರಾಗಿ ಕೆಲಸ ಮಾಡಿದ್ದಾರೆ. 1936-37 ವರ್ಷಕ್ಕೆ ಅವರು ಮೈಸೂರು ದೇಶದ ಪ್ರಖ್ಯಾತ ಮುಖಂಡರ ದರ್ಜೆಗೆ ಸೇರಿದರು. ಮೈಸೂರಿನ ಆಗುಹೋಗುಗಳನ್ನು ರೂಪಿಸತಕ್ಕಂಥ ಅಂತಸ್ತು ಅವರಿಗೆ ದೊರಕಿತು. ಆ ಶಕ್ತಿ, ಅದಕ್ಕೆ ಬೇಕಾದ ಸೇವಾತತ್ಪರತೆ ಎಲ್ಲವೂ ಅವರಲ್ಲಿ ಸಂಪೂರ್ಣವಾಗಿ ಇತ್ತು. 1936-37ನೆಯ ಇಸವಿಯಲ್ಲಿ ರಾಜಕೀಯ ಒಂದು ಹೊಸ ರೂಪವನ್ನು ತಾಳಿತು, ಸಾತಂತ್ರ್ಯದ ದಾಹ ಹೆಚ್ಚಿತು. ಆ ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೆ ಬೇಕಾದ ಅಪೇಕ್ಷೆಗಳು ಏನಿವೆಯೋ ಆ ಅಪೇಕ್ಷೆಗಳನ್ನು ಮಾಡತಕ್ಕ ಮನಸ್ಸು ಇವರಲ್ಲಿ ಹುಟ್ಟಿತು. ಆ ರೀತಿ ಹುಟ್ಟಿದ ಭಾವನೆಗಳ ಅಲೆಗಳ ಮೇಲೆ ಅವರು ಕಲಶಪ್ರಾಯರಾಗಿದ್ದರು ಎಂದು ಹೇಳಬಹುದು. ಆ ಭಾವನೆಯನ್ನು ಪ್ರಚೋದಿಸುವುದರಲ್ಲೂ, ಅದನ್ನು ಕಾರ್ಯರೂಪಕ್ಕೆ ತರುವುದರಲ್ಲೂ, ಅದನ್ನು ಯಶಸ್ವಿಯಾಗಿ ಜಯಪ್ರದಮಾಡುವುದರಲ್ಲೂ, ಅವರು ವಹಿಸಿದ ಪಾತ್ರ ಅಸಾಮಾನವಾದದ್ದು. ಅವರಿಗಿಂತಲೂ ಮಿಗಿಲಾಗಿ ಕೆಲಸ ಮಾಡಿರತಕ್ಕವರು, ಕಷ್ಟಪಟ್ಟಿರತಕ್ಕವರು ಯಾರಾದರೂ ಇದ್ದಾರೆಯೇ ಎಂದು ಲೆಕ್ಕ ಹಾಕಿದರೆ, ಅವರಷ್ಟು ಕಷ್ಟಪಟ್ಟಿರತಕ್ಕವರನ್ನೂ ಅವರಷ್ಟು ತ್ಯಾಗ ಮಾಡಿರತಕ್ಕವರನ್ನೂ ನಾವು ಕಾಣಬಹುದು. ಆದರೆ ಅವರಿಗಿಂತ ಮಿಗಿಲಾದವರನ್ನು ಕಾಣುವುದು ಕಷ್ಟವಾಗಿದೆ.

1-30 P.M.

ಮೈಸೂರು ದೇಶದ ಈಚಿನ ಇತಿಹಾಸವೇನಿದೆಯೋ ಆ ಇತಿಹಾಸ ಮತ್ತು ಶ್ರೀಮಾನ್ ಸಿದ್ದಯ್ಯನವರ ಜೀವನ ಚರಿತ್ರೆ ಇವೆರಡೂ ಹಾಸುಹೊಕ್ಕಾಗಿ ಸೇರಿಹೋಗಿವೆಯೆಂದು ಹೇಳಬಹುದು. ಸುಮಾರು ಎರಡು ವರ್ಷಗಳ ಕಾಲ ಅವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ದಕ್ಷತೆಯಿಂದ ಕೆಲಸಮಾಡಿದರು. ನಮಗೆಲ್ಲಾ ಗೊತ್ತಿರುವ ಹಾಗೆ ಅನೇಕ ಸದಸ್ಯರುಗಳ ಪ್ರಶ್ನೆಗಳನ್ನೂ ಉತ್ತರಗಳನ್ನೂ ಸದಸ್ಯರುಗಳೇ ಸಂಪೂರ್ಣವಾಗಿ ಜ್ಞಾಪಕವಿಟ್ಟುಕೊಳ್ಳುವುದು ಅನೇಕ ಸಾರಿ ಕಷ್ಟ. ಈ ಪರಿಸ್ಥಿತಿಯಲ್ಲಿ ಯಾವ ಪ್ರಶ್ನೆಯೇ ಆಗಲಿ, ಯಾವ ಉತ್ತರವೇ ಇರಲಿ, ಯಾವುದಾದರೂ ಕೇಳಲಿ, ಕರತಲಾಮಲಕವಾಗಿ ಹೇಳತಕ್ಕಂಥ ಅದ್ಭುತ ಮೇಧಾಶಕ್ತಿ ಅವರಲ್ಲಿತ್ತು. ಅವರ ಜ್ಞಾಪಕಶಕ್ತಿ ಅಸಾಧಾರಣವಾದುದು. ನಾನಂತೂ ನನ್ನ ಜೀವಮಾನದಲ್ಲಿ ಅಂಕಿಅಂಶಗಳನ್ನೂ ಸನ್ನಿವೇಶಗಳನ್ನೂ ಅಷ್ಟು ಶೀಘ್ರವಾಗಿ ಜ್ಞಾಪಕವಿಟ್ಟುಕೊಳ್ಳತಕ್ಕ ಮನುಷ್ಯರನ್ನು ಕಂಡೇ ಇಲ್ಲ. ಇದು ಈ ಸಭೆಯ ಅಧ್ಯಕ್ಷರ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕೆ ಬಹಳಮಟ್ಟಿಗೆ ಸಹಕಾರಿಯಾಯಿತು. ಅವರು ಬಹಳ ದಾಕ್ಷಿಣ್ಯಪರರು; ಯಾರ ಮನಸ್ಸನ್ನೂ ನೋಯಿಸತಕ್ಕಂಥ ಪ್ರಕೃತಿ ಅವರಲ್ಲಿರಲಿಲ್ಲ. ಎಲ್ಲರಲ್ಲೂ ಸ್ನೇಹ ವಿಶ್ವಾಸಗಳನ್ನು ಸಂಪಾದಿಸತಕ್ಕದ್ದು ತಮ್ಮ ಕರ್ತವ್ಯವೆಂದು ತಿಳಿದು ಆ ಕರ್ತವ್ಯ ಪಾಲನೆಯನ್ನು ಬಹಳ ಮಟ್ಟಿಗೆ ಮಾಡಿದರು. ಇಂಥ ಒಬ್ಬ ದೊಡ್ಡ ವ್ಯಕ್ತಿಯನ್ನು ಮೈಸೂರು ದೇಶ ಕಳೆದುಕೊಂಡಿರತಕ್ಕದ್ದು ನಮ್ಮ ದುರದೃಷ್ಟ. ಶ್ರೀ ಸಿದ್ದಯ್ಯನವರು ಮಾಡಿರತಕ್ಕ ಸೇವೆ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿದೆ. ಅವರು ಈ ಸಭೆಯ ಅಧ್ಯಕ್ಷರಾಗಿ ದಕ್ಷತೆಯಿಂದ ತಮ್ಮ ಕೆಲಸವನ್ನು ನಿರ್ವಹಿಸಿರತಕ್ಕದ್ದು ನಮ್ಮೆಲ್ಲರ ಸ್ಮರಣೆಯಲ್ಲೂ ಚಿರಸ್ಥಾಯಿಯಾಗಿರುವುದು. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ, ಅವರ ಆತ್ಮಕ್ಕೆ ಸದ್ಗತಿಯನ್ನು ಕೊಡಲಿ ಎಂದು ಹೇಳಿ ಸಭೆಯ ಪರವಾಗಿಯೂ ನಮ್ಮ ಪರವಾಗಿಯೂ ಪ್ರಾರ್ಥಿಸುತ್ತೇನೆ.

***Sri J. MOHAMED IMAM** (Jagalur).—Sir, I am not going to take much time. Suffice it to say that I entirely associate myself with the feelings and sentiments expressed by the Leader of the House. My heart is full of sadness for the untimely demise of Sri H. Siddaiya with whom I worked with comradeship for over twenty years. He dedicated his life to the service of the country and the people. He served the State in various capacities. He served in local bodies as President of the District Board, as a Minister of the Government and lastly as the Speaker of this House. Cruel fate snatched him away from our midst. Sir, I happened to know Sri Siddaiya from a long time. We were colleagues in the old Council and the old Assembly and we were colleagues here also. Though we belonged to different political groups, still our friendship was very cordial. Everybody respected him because of his character and of his integrity. As a Minister he was a good administrator and he did exert himself a good deal to help the poor.

Sir, when Sri Siddaiya became the Speaker of this House, I and those belonging to my party had our own misgivings and we expressed it at that time that his belonging to a political party may come in the way of his discharging his duties. I must admit that he did his best to please and satisfy one and all. He did his best to safeguard the interest of the Opposition and gave all the protection. On behalf of my party I must acknowledge the service and help rendered by him to the Opposition. Sir, as a friend and person, he was a lovable personality. Everybody knows his hospitality. Whoever that went to his house never came back without sharing bellyful of hospitality. We miss a great personality and it is a loss to the country. On behalf of my party and myself I pay tribute to Sri H. Siddaiya. I pray that his soul may rest in peace. I convey our heart-felt sympathies to the members of the bereaved family.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಸಭೆಯು ಕಳೆದ ಅಧಿವೇಶನದ ಕಡೆಯದಿನ ನಾವು ಇಲ್ಲಿಂದ ಹೋಗುವಾಗ ಮತ್ತು ಈ ಸಭೆ ಸೇರುವಾಗ ಇಂಥ ಒಂದು ದುಃಖಮಯವಾದ ಸಂದರ್ಭ ಒದಗುತ್ತದೆಂದು ತಿಳಿದಿರಲಿಲ್ಲ. ಶ್ರೀಮಾನ್ ಸಿದ್ದಯ್ಯನವರು ಕಾಲವಾದದ್ದರಿಂದ ಈ ಸಭೆಗೆ ಮಾತ್ರವೇ ಅಲ್ಲ, ಮೈಸೂರು ಸಂಸ್ಥಾನಕ್ಕೇ ದೊಡ್ಡ ನಷ್ಟವುಂಟಾಗಿದೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯ ಮಾತಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀ ಸಿದ್ದಯ್ಯನವರು ಯಾವಯಾವ ಸ್ಥಾನಮಾನಗಳನ್ನು ಗಳಿಸಿದ್ದರೋ ಯಾವಯಾವ ಕಾರ್ಯಗಳನ್ನೆಸಗಿದ್ದರೋ ಅವೆಲ್ಲವನ್ನೂ ಸಹ ಜ್ಞಾಪಿಸಿಕೊಂಡರೆ ಅವು ಅವರ ಖ್ಯಾತಿಯನ್ನು ಹೆಚ್ಚಿಸುವಂತಿವೆಯೇ ವಿನಾ ಯಾವ ವಿಧದಲ್ಲೂ ಕುಂದಿಸುವಂತಿಲ್ಲ. ಶ್ರೀ ಸಿದ್ದಯ್ಯನವರನ್ನು ಸುಮಾರು 28 ವರ್ಷಗಳಿಂದ ಬಲ್ಲೆ. ಹಿಂದೆ ಶಿವಮೊಗ್ಗ ಜಿಲ್ಲೆಯಿಂದ ಪ್ರಜಾಪ್ರತಿನಿಧಿ ಸಭೆಗೆ ಮತ್ತು ನ್ಯಾಯವಿಧಾಯಕ ಸಭೆಗೆ ಪ್ರಜೆಗಳ ಪ್ರತಿನಿಧಿಯಾಗಿ ಚುನಾಯಿತರಾಗಿ ಬರುತ್ತಿದ್ದಂಥ ಶ್ರೀ ಬಸಪ್ಪನವರು ಕಾಲವಾದನಂತರ ಆ ಪ್ರಾಮುಖ್ಯಸ್ಥಾನಕ್ಕೆ ಇವರು ಬಂದರು. ಇವರು ಮೊದಲು ನ್ಯಾಯವಿಧಾಯಕ ಸಭೆಗೆ ಸದಸ್ಯರಾಗಿ ಚುನಾಯಿಸಲ್ಪಟ್ಟು ಬಂದಾಗ ಸೂಟ್ ಹಾಕಿಕೊಂಡು ಬರುತ್ತಿದ್ದರು; ಮತ್ತೆ ಕೆಲವು ದಿವಸಗಳ ಮೇಲೆ ಕಚ್ಚೆಪಂಚೆ ಉಡುವುದನ್ನು ಅಭ್ಯಾಸ ಮಾಡಿದರು. ಅದಕ್ಕೆ ತಮಾಷೆಯಾಗಿ ನಾನು ಕಾರಣ ಕೇಳಲು, ''ನೀವು ಶಿವಮೊಗ್ಗಾಕ್ಕೆ ಬಂದಾಗ ನನಗೆ ಇದನ್ನು ಜ್ಞಾಪಿಸಿ'' ಎಂದು ಹೇಳಿದರು. ಕೆಲವು ಕಾಲದನಂತರ ಕಾರಣ ಅಲ್ಲಿ ಗೊತ್ತಾಯಿತು. ಕಾಂಗ್ರೆಸ್ ಸಂಸ್ಥೆಗೆ ಸೇರಿ ಅವರ ಜೊತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ದುಡಿಯುವ ಸಂದರ್ಭದಲ್ಲಿ ಒಂದು ದಿನ ಅವರ ಜೊತೆಯಲ್ಲಿ ನಾನು ಶಿವಮೊಗ್ಗಾ ಪೇಟೆ ಬೀದಿಯಲ್ಲಿ ಹೋಗುತ್ತಿದ್ದಾಗ ಅಂಗಡಿಗಳಲ್ಲಿ ಕುಳಿತಿದ್ದ ಅನೇಕರು ಬಂದು ಅವರ ಪಾದವನ್ನು ಮುಟ್ಟಿ ನಮಸ್ಕರಿಸಿದರು. ಆಗ ''ನೀವು ಹಿಂದೆ ಒಂದು ದಿವಸ ಕೇಳಿದ್ದ ಪ್ರಶ್ನೆಗೆ ಇದು ಉತ್ತರ'' ಎಂದು ಹೇಳಿದರು. ''ಹೀಗೆ ಜನರು ಬಂದು ಕಾಲಿಗೆ ನಮಸ್ಕಾರ ಮಾಡುತ್ತಿದ್ದುದರಿಂದ ಬೂಟ್ ಹಾಕಿದರೆ ಸರಿಯಾಗಿರುವುದಿಲ್ಲವೆಂದು ಯೋಚಿಸಿ ಸೂಟ್ ಹಾಕುವುದನ್ನು ಬಿಟ್ಟು ಬಿಟ್ಟೆ'' ಎಂದು ತಿಳಿಸಿದರು. ಇದರಿಂದ ಜನರಿಗೆಲ್ಲಾ ಶ್ರೀ, ಸಿದ್ದಯ್ಯನವರಲ್ಲಿ ಎಂಥ ಪ್ರೀತಿ ವಿಶ್ವಾಸ ಇತ್ತೆಂಬುದು ವ್ಯಕ್ತವಾಗುತ್ತದೆ. ಜಂಗಮರೆನಿಸಿದ ಗುರುಪರಂಪರೆಗೆ ಇವರು ಸೇರಿದ್ದರಿಂದ ಅನೇಕ ಶಿಷ್ಯರು ಇವರ ಕಾಲಿಗೆ ನಮಸ್ಕಾರ ಮಾಡುತ್ತಿದ್ದರು. ಆದರೂ ಶ್ರೀ ಸಿದ್ದಯ್ಯನವರು ಯಾವ ಅಹಂಭಾವವೂ ಇಲ್ಲದೆ, ಯಾವ ವಿಧದಲ್ಲೂ ದೂರು ಬರಲು ಅವಕಾಶವಿಲ್ಲದೆ ಇರುವಂತೆ ಬಹಳ ವಿನಯದಿಂದ ನಡೆದುಕೊಂಡು ಜನರ ವಿಶ್ವಾಸಕ್ಕೂ ಗೌರವಕ್ಕೂ ಪಾತ್ರರಾಗಿದ್ದರು. ಇವರು ಶಿವಮೊಗ್ಗ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿಯೂ, ಶಾಸನ ಸಭಾ ಸದಸ್ಯರಾಗಿ ಈಚೆಗೆ ಈ ಸಭೆಯ ಅಧ್ಯಕ್ಷರಾಗಿಯೂ ಮತ್ತು ಈ ಸಂಸ್ಥಾನದ ಮಂತ್ರಿಮಂಡಲದಲ್ಲಿದ್ದುಕೊಂಡೂ ಮಾಡಿರುವ ಕೆಲಸ ಕಾರ್ಯಗಳು ದೇಶದ ಹಿತದೃಷ್ಟಿಯಿಂದ ಮಾಡಿರತಕ್ಕವುಗಳೇ ಆಗಿವೆ. ಇವರು ಕಾಂಗ್ರೆಸ್ ಸದಸ್ಯರಾಗಿಯೂ, ಕಾಂಗ್ರೆಸ್ ಸಂಸ್ಥೆಯ ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ, ಅವರ ಅಧ್ಯಕ್ಷರಾಗಿಯೂ ಮಾಡಿರುವ ಸೇವಾ ಕಾರ್ಯ, ಪಟ್ಟಿರುವ ಕಷ್ಟ, ಮಾಡಿರುವ ತ್ಯಾಗ ಬಹಳವಾಗಿ ಮೆಚ್ಚತಕ್ಕದ್ದಾಗಿದೆ. ಶ್ರೀ ಸಿದ್ದಯ್ಯನವರು ಈ ಸಭಾ ನಾಯಕರಾದ ಶ್ರೀ ಹನುಮಂತಯ್ಯನವರು ಹೇಳಿರುವ ಹಾಗೆ, ಪಟ್ಟಿರುವ ಕಷ್ಟ, ಮಾಡಿರುವ ತ್ಯಾಗ ಅಸಮಾನವಾದುದು ಎಂದು

ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ಸೆಂಟ್ರಲ್ ಜೈಲಿನಲ್ಲಿ ಇವರು ಒಂದೂವರೆ ವರ್ಷ ಅಥವಾ ಒಂದು ವರ್ಷ ಒಂಬತ್ತು ತಿಂಗಳು ಕಠಿಣ ಶಿಕ್ಷೆ ಅನುಭವಿಸುತ್ತಿದ್ದಾಗ ತಿಂಗಳುಗಟ್ಟಲೆ ರಾಗಿ ಬೀಸಿದ್ದಾರೆ. ಒಂದು ದಿನಕ್ಕೆ 25 ಸೇರು ರಾಗಿಯನ್ನು ಕಡ್ಡಾಯವಾಗಿ ಬೀಸಲೇಬೇಕಾಗಿತ್ತು. ಕೈಲಾಗದೇಯಿದ್ದರೂ ಸಹ ಜೈಲಿನ ಅಧಿಕಾರಿ ಬೀಸು, ಬೀಸು ಎಂದು ಅಧಿಕಾರಯುತವಾಗಿ ಹೇಳುತ್ತಿದ್ದಾಗ ಬೀಸುತ್ತೇನೆ ಎಂದು ಇವರು ಹೇಳುತ್ತಿದ್ದರು. ಹಾಗೆ ಹೇಳಿರುವುದನ್ನು ಕಣ್ಣಾರೆ ನೋಡಿ ನಾನು ಕಣ್ಣಿನಲ್ಲಿ ನೀರು ಸುರಿಸಿದ್ದೇನೆ. ಹೀಗೆ ಶ್ರೀ ಸಿದ್ದಯ್ಯನಂಥವರು ಎಷ್ಟೇ ಕಷ್ಟವಾದರೂ ಪಡಬೇಕು ಎಂದು ದೃಢ ಮನಸ್ಸಿನಿಂದ ಕೂಡಿ ದೇಶ ಸೇವೆ ಮಾಡಿದ್ದರಿಂದ ಈ ದಿನ ನಾವು ಈ ಸ್ವಾತಂತ್ರ್ಯ ಸಂಪಾದನೆ ಮಾಡುವುದಕ್ಕೆ ಕಾರಣವಾಯಿತು ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ಏಕೆಂದರೆ ಇವರಂಥವರು ಅಂದು ಮನಸ್ಸನ್ನು ಸಡಿಲಬಿಟ್ಟಿದ್ದರೆ ಈ ದಿವಸ ಇಷ್ಟು ಬೇಗ ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕಾಗುತ್ತಿರಲಿಲ್ಲ. ದೇಶಕ್ಕಾಗಿ ಕಷ್ಟಪಟ್ಟು ನಿರ್ಧರವಾದ ಮನಸ್ಸಿನಿಂದ ಈ ರೀತಿಯಾಗಿ ತ್ಯಾಗಮಾಡಿದ್ದರಿಂದ ನಮಗೆ ಈ ದಿವಸ ಅನುಕೂಲವೊದಗಿದೆ. ಹೀಗೆ ತ್ಯಾಗಮಾಡಿ ದುಡಿದ ವ್ಯಕ್ತಿಗಳ ಪೈಕಿ ಶ್ರೀ ಸಿದ್ದಯ್ಯನವರು ಗಣ್ಯರು ಎಂದು ಹೇಳಿದರೆ ತಪ್ಪಾಗಲಾರದು. ಇಂಥ ಮಹಾವ್ಯಕ್ತಿಯನ್ನು ಕಳೆದುಕೊಳ್ಳುವ ದೌರ್ಭಾಗ್ಯ ನಮಗುಂಟಾಗಿರುವುದು ಬಹಳ ವ್ಯಸನಕರ; ಇದು ನಮ್ಮ ದುರದೃಷ್ಟ. ಶ್ರೀ ಸಿದ್ದಯ್ಯನವರ ಕುಟುಂಬವರ್ಗಕ್ಕೆ ಉಂಟಾಗಿರುವ ದುಃಖವನ್ನು ಸಹಿಸಲು ಭಗವಂತ ಅವರಿಗೆ ಶಕ್ತಿಯನ್ನು ನೀಡಲಿ, ಇವರ ಸಂಸಾರ ಸುಖಮಯವಾಗಿ ಜರುಗುವಂಥ ಒಂದು ಸನ್ನಿವೇಶವನ್ನು ಕರುಣಿಸಲಿ, ಮತ್ತು ಶ್ರೀ ಸಿದ್ದಯ್ಯನವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ ಎಂದು ನಾನು ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈ ಸಂದರ್ಭದಲ್ಲಿ ನಾಲ್ಕಾರು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದನೆಗಳನ್ನರ್ಪಿಸುತ್ತೇನೆ. ಶ್ರೀಮಾನ್ ಸಿದ್ದಯ್ಯನವರನ್ನು ನಾನು ಕಳೆದ ಎರಡು ವರ್ಷಗಳಿಂದ ಮಾತ್ರ ಚೆನ್ನಾಗಿ ಬಲ್ಲೆ. ಅವರು ಈ ಶಾಸನ ಸಭೆಯ ಅಧ್ಯಕ್ಷರಾದಮೇಲೆ ನನಗೆ ಹೆಚ್ಚಾಗಿ ಪರಿಚಯವಾಗುವುದಕ್ಕೆ ಅವಕಾಶವಾಯಿತು. ಈಗಾಗಲೇ ಈ ಸಭಾ ನಾಯಕರು ಹೇಳಿದ ಹಾಗೆ ಅವರ ಅಸಾಧಾರಣ ಜ್ಞಾಪಕ ಶಕ್ತಿಯು ನನ್ನ ಮೇಲೆ ಬಹಳ ಪರಿಣಾಮವನ್ನುಂಟುಮಾಡಿತು; ಕಾರಣ ಪ್ರಶ್ನೋತ್ತರಗಳ ವೇಳೆಯಲ್ಲಿ ಪ್ರಶ್ನೆಗಳಿಗೆ ಮಂತ್ರಿಮಂಡಲದವರು ಉತ್ತರಗಳನ್ನು ಒದಗಿಸುವುದಕ್ಕೆ ಮುಂಚೆಯೇ ಅವರು ಆ ಪ್ರಶ್ನೆಗಳಿಗೆ ಪ್ರಶ್ನೆ ಪತ್ರಿಕೆಯಲ್ಲಿ ಉತ್ತರಗಳನ್ನು ಬರೆದಿಡುತ್ತಿದ್ದರು. ಅವರು ಮಂತ್ರಿಗಳಾಗಿದ್ದ ಕಾಲದಲ್ಲಿ ಪಡೆದ ಅನುಭವದ ಮೇಲೆ ಮತ್ತು ಅವರ ಜ್ಞಾಪಕ ಶಕ್ತಿಯಿಂದ ಯಾವ ಮುಖ್ಯ ವಿಷಯವಾದರೂ ಸಹ ಪ್ರಶ್ನೆ ಪತ್ರಿಕೆಯಲ್ಲಿ ಉತ್ತರ ಬರೆದು ಮೇಜಿನಮೇಲಿಡುತ್ತಿದ್ದರು. ಮಂತ್ರಿಗಳು ಜವಾಬು ಕೊಟ್ಟಮೇಲೆ ಅವರು ಬರೆದಿಟ್ಟಿರುವುದನ್ನು ಅದರೊಡನೆ ಹೋಲಿಕೆ ಮಾಡಿದರೆ ಅದು ಸರಿಯಾಗಿರುತ್ತಿತ್ತು. ಅವರ ಕೆಲಸಕಾರ್ಯಗಳಲ್ಲಿ ಅಷ್ಟುಮಟ್ಟಿಗೆ ಜ್ಞಾಪಕವಿಟ್ಟುಕೊಂಡಿರುತ್ತಿದ್ದುದು ಅವರ ಅಸಾಧಾರಣವಾದ ಜ್ಞಾಪಕಶಕ್ತಿಯನ್ನು ಸೂಚಿಸುತ್ತದೆ. ಅದು ಸರ್ವಸಾಮಾನ್ಯವಾಗಿ ಎಲ್ಲರಿಗೂ ಇರುವುದಿಲ್ಲ; ಎಷ್ಟೇ ಅಭ್ಯಾಸ ಮಾಡಿದರೂ ಬರುವುದಿಲ್ಲ. ಅದು ಹುಟ್ಟುಗುಣ. ಆಗಾಗ್ಗೆ ನನಗೆ ಅವರು ಒಂದು ಅವಕಾಶವನ್ನು ಕೊಡುತ್ತಿದ್ದರು. ಆಗ ನಾನು ಶಾಸನ ಸಭೆ ಅಧ್ಯಕ್ಷತೆ ವಹಿಸಿದಾಗ ಅವರು ಮೇಜಿನ ಮೇಲೆ ಬಿಟ್ಟಿರುತ್ತಿದ್ದ ರಿಕಾರ್ಡುಗಳನ್ನು ನೋಡುತ್ತಿದ್ದೆ. ಆಗ ಪ್ರಶ್ನೋತ್ತರಗಳ ಕಾಲದಲ್ಲಿ ಅವರು ಬರೆದಿಡುತ್ತಿದ್ದ ಉತ್ತರಗಳು ನನಗೆ ಗೊತ್ತಾಗುತ್ತಿತ್ತು. ಸಾಮಾನ್ಯವಾಗಿ ಅವರು ಸರಳ ಸ್ವಭಾವದವರು, ಬಹಳವಾಗಿ ಇತರರ ಮನಸ್ಸಿನಮೇಲೆ ಒಂದು ಒಳ್ಳೆಯ ಪರಿಣಾಮವನ್ನುಂಟುಮಾಡುತ್ತಿದ್ದರು. ಈ ಶಾಸನ ಸಭೆಯಲ್ಲಿ ಅನೇಕ ಸನ್ನಿವೇಶಗಳಲ್ಲಿ ಸಭಿಕರಿಗೂ ಅಧ್ಯಕ್ಷರಿಗೂ ಬಹಳ ಚರ್ಚೆ ನಡೆದಾಗ, ಯಾವುದಾದರೂ ಸಂದರ್ಭದಲ್ಲಿ ಬಿರುಸಾಗಿ ಚರ್ಚೆ ನಡೆದು ಉತ್ತರಗಳು ಕೊಡಲ್ಪಟ್ಟಾಗ, ಯಾರು ಏನೇ ಹೇಳಿದರೂ ಸದಸ್ಯರಿಗೆ ಸಮಾಧಾನವಾಗದಿರುವಾಗ ಸಂಬಂಧಪಟ್ಟ ಸದಸ್ಯರನ್ನು ಕರೆಸಿಕೊಂಡು ಅವರಿಗೆ ಸಮಾಧಾನ ಹೇಳಿ ಶಾಂತಿಯನ್ನುಂಟುಮಾಡುತ್ತಿದ್ದರು. ಚರ್ಚೆ ಬಹಳವಾಗಿ ನಡೆದ ಸಂದರ್ಭಗಳಲ್ಲಿ ಸದಸ್ಯರನ್ನು 'ಟೀ'ಗಾಗಿ ಕರೆಸಿಕೊಂಡು ಸಮಾಧಾನ ಹೇಳುತ್ತಿದ್ದರು. ಹೇಗಾದರೂ ಸದಸ್ಯರನ್ನು ಕರೆಸಿಕೊಂಡು ಅವರಲ್ಲಿ ಶಾಂತಿ ಮೂಡುವಂತೆ ಮಾಡಲು ಪ್ರಯತ್ನಪಡುತ್ತಿದ್ದರು. ನಾನು ಬಹಳವಾಗಿ ಓದಿ ವಿಷಯಗಳನ್ನು ತಿಳಿದುಕೊಂಡು ಮಾತನಾಡುತ್ತೇನೆಂದು ಭಾವಿಸಿ ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದರು ಮತ್ತು ಬುದ್ಧಿವಾದವನ್ನು ಸಹ ಹೇಳುತ್ತಿದ್ದರು. ಆದರೆ ನಾನು ಅಷ್ಟಾಗಿ ಅವರು ಭಾವಿಸಿದ್ದಷ್ಟು ಓದುತ್ತಿರಲಿಲ್ಲ.

ಅನೇಕಸಾರಿ ಸಭಾ ಸದಸ್ಯರು ಉಪಪ್ರಶ್ನೆಗಳನ್ನು ಹಾಕುವಾಗ ಮೊಟಕು ಮಾಡುವ ಸ್ವಭಾವ ಅವರದಾಗಿತ್ತು. ಅದು ಸಂಬಂಧವಿಲ್ಲದ ಪ್ರಶ್ನೆ, ಅನಾವಶ್ಯಕವಾದ ಪ್ರಶ್ನೆ ಎಂಬುದಾಗಿ ಬಹುಬೇಗ ಸೂಚನೆಯಿತ್ತು ಬುದ್ಧಿವಾದ ಹೇಳುತ್ತಿದ್ದರು.

ಅವರಲ್ಲಿದ್ದ ಬಹುದೊಡ್ಡ ಗುಣ ವಿಶೇಷವೆಂದರೆ ಅವರದು ನಿರಾಳ ಜೀವನ, ಸರಳ ಸ್ವಭಾವ. ಅಧಿಕಾರದಲ್ಲಿದ್ದಾಗಲೂ ಇಲ್ಲದ ದರ್ಪ ತೋರುತ್ತಿರಲಿಲ್ಲ. ಯಾರೊಬ್ಬರ ವಿಚಾರದಲ್ಲಿಯೂ ಕಟು ಮನೋಭಾವ ತೋರುತ್ತಿರಲಿಲ್ಲ. ಬಡವರಂತೆಯೇ ಜೀವನ ಮಾಡುತ್ತಿದ್ದರು. ಯಾರು ಎಷ್ಟೇ ಕಷ್ಟ ಹೇಳಿಕೊಳ್ಳಲಿ, ಎಲ್ಲವನ್ನೂ ನಿಧಾನದಿಂದ ಆದರದಿಂದ ಲಾಲಿಸಿ, ಕೈಲಾದ ಸಹಾಯ ಮಾಡುತ್ತಿದ್ದರು. ಮನೆಗೆ ಬಂದವರನ್ನು ಅವರೂ ಮತ್ತು ಅವರ ಧರ್ಮಪತ್ನಿಯವರೂ ಆದರೋಪಚಾರಗಳಿಂದ ಕಾಣುತ್ತಿದ್ದರು.

ಕೆಲವು ಸಂದರ್ಭಗಳಲ್ಲಿ ಸಭಾಧ್ಯಕ್ಷತೆಯ ಕಾರ್ಯ ಮುಗಿಸಿಕೊಂಡು ಆ ಸ್ಥಾನದಿಂದ ಇಳಿದುಬರುವಾಗ ಸಾಯಂಕಾಲ ಐದು ಗಂಟೆಯ ಮೇಲೆ ನನ್ನನ್ನು ಆದರದಿಂದ ಜೊತೆಯಲ್ಲಿಯೇ ಕರೆದುಕೊಂಡು ಹೋಗಿ ತಮ್ಮ ಸ್ವಂತ ವಿಚಾರವನ್ನು ನನಗೆ ತಿಳಿಸುತ್ತಿದ್ದರು. ಅವರಲ್ಲಿಯೂ ಸಹ educative value ನನಗೆ ಕಂಡುಬರುತ್ತಿತ್ತು. ಅವರ ಬಾಯಲ್ಲಿ ಬರತಕ್ಕ ಪ್ರತಿಯೊಂದು ಮಾತು ಸಹ ಅನುಭವಸ್ಥರ ಮಾತಾಗಿತ್ತು. 'ನಾನೊಬ್ಬ ಜಂಗಮ, ನನ್ನ ಕಸಬು ಯಾಚನೆಮಾಡುವುದು, ನಾನು ಸಾಧ್ಯವಾದಷ್ಟು ಮಂದಿಗೆ ಭಿಕ್ಷೆಬೇಡಿ ಅನ್ನ ಹಾಕುವುದರಿಂದ ನನಗೇನೂ ದೇವರು ಕಡಿಮೆ ಮಾಡುವುದಿಲ್ಲ, ನನ್ನ ಕುಟುಂಬ ವರ್ಗದವರ ಮುಂದಿನ ಗತಿಯನ್ನು ದೇವರು ನೋಡಿಕೊಳ್ಳುತ್ತಾನೆ '' ಎಂದು ಮುಂತಾಗಿ ಹೇಳುತ್ತಿದ್ದರು. ಇಂಥ ಒಬ್ಬ ಮಹಾಪುರುಷರನ್ನು, ಗಣ್ಯವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ನನ್ನ ಜ್ಞಾನಾರ್ಜನೆಯ ಸೌಕರ್ಯಕ್ಕೆ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಇವರು ಬಹುಮಟ್ಟಿಗೆ ಉಪಕಾರಿಯಾಗಿದ್ದರು. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ, ಇವರ ಕುಟುಂಬವರ್ಗಕ್ಕೆ ಇವರ ನಿಧನದಿಂದಾಗಿರುವ ಅಪಾರ ದುಃಖವನ್ನು ಸಹಿಸಲು ಸರ್ವಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).— ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಬಹಳ ದುಃಖದಿಂದ ಮತ್ತು ಬಹಳ ಸಂಕಟದಿಂದ ಮಾತನಾಡುತ್ತೇನೆ. ಸೂರ್ಯದೇವನು ಯಾವ ರೀತಿ ಪೂರ್ವ ದಿಕ್ಕಿನಲ್ಲಿ ಬೆಳಗ್ಗೆ ಪ್ರಕಾಶಮಯನಾಗಿ ಹುಟ್ಟಿ ಸಂಜೆಯವೇಳೆಗೆ ಪಶ್ಚಿಮದಲ್ಲಿ ತಂಗುತ್ತಾನೆಯೋ ಹಾಗೆ ದೇಶಕ್ಕೆಲ್ಲಾ ಬೆಳಕನ್ನು ಬೀರುತ್ತಿದ್ದ ಈ ಮಹಾವ್ಯಕ್ತಿ ಒಂದು ಸಂಜೆ ನಮ್ಮ ಕಣ್ಮರೆಯಾದರು. ದಿವಂಗತ ಶ್ರೀ ಸಿದ್ದಯ್ಯನವರು ನಮ್ಮ ದೇಶಕ್ಕೇ ಅಲ್ಲ, ಇಡೀ ಕರ್ಣಾಟಕಕ್ಕೇ ಅಲ್ಲ, ಇಡೀ ಇಂಡಿಯಾ ದೇಶಕ್ಕೇ ಕಳಶಪ್ರಾಯರಾಗಿದ್ದರೆಂದರೆ ಅತಿಶಯೋಕ್ತಿಯಲ್ಲ. ಇಂಥ ದಕ್ಷರನ್ನೂ, ಇಂಥ ಮೇಧಾವಿಗಳನ್ನೂ ಕಳೆದುಕೊಂಡಿರುವುದು ನಮ್ಮೆಲ್ಲರ ದೌರ್ಭಾಗ್ಯ. ಇವರ ಕಷ್ಟಸಹಿಷ್ಣುತೆ, ಇವರ ದಾನಧರ್ಮಾದಿ ಕಾರ್ಯ ಚಟುವಟಿಕೆ, ಇವರ ಅದ್ಭುತ ಜ್ಞಾಪಕಶಕ್ತಿ, ಇವರ ಮೇಧಾವಿತನ ಎಲ್ಲರಿಗೂ ಮೇಲ್ಪಂಗ್ತಿಯಾಗಿತ್ತು. ಜನಸೇವೆ ಮತ್ತು ದೇಶಸೇವೆಗಳೇ ಇವರ ಜೀವನದ ಹೆಗ್ಗುರಿಯಾಗಿತ್ತು. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ದೇಶಕ್ಕಾಗಿ ಬಹ ಮಟ್ಟಿಗೆ ದುಡಿದಿದ್ದಾರೆ. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ನಾಯಕತ್ವ ವಹಿಸಿ, ಕಾರಾಗೃಹವಾಸವನ್ನು ಸಹ ಅನುಭವಿಸಿ, ಅಲ್ಲಿ ಬಹು ಕಷ್ಟಕರವಾದ ಕೆಲಸವನ್ನು ಕೈಗೊಂಡು, ಜೈಲಿನಲ್ಲಿದ್ದ ಇತರ ಖೈದಿಗಳಿಗೆಲ್ಲಾ ಮಾರ್ಗದರ್ಶಕರಾಗಿ ಹಲವಾರು ಖೈದಿಗಳ ಬಂಧವಿಮೋಚನೆಗೆ ಕಾರಣಕರ್ತರಾಗಿದ್ದರು. ಇವರನ್ನು ಬೆಂಗಳೂರು ಜೈಲಿನಲ್ಲಿಟ್ಟಿದ್ದರೆ ಜೈಲು ಖಾಲಿಯಾಗುವ ಸಂಭವವಿದೆಯೆಂದು ಸಂಬಂಧಪಟ್ಟ ಅಧಿಕಾರಿಗಳು ಹೆದರಿ, ಮೈಸೂರು ಜೈಲಿಗೂ, ಅನಂತರ ಹಾಸನ ಜೈಲಿಗೂ ವರ್ಗಮಾಡಿದರೂ ಸಹ ಅಲ್ಲಿಯೂ ಸಹ ಹಲವಾರು ಖೈದಿಗಳ ಬಿಡುಗಡೆಗೆ ಇವರೇ ಕಾರಣಕರ್ತರಾಗಿದ್ದರು. ಶ್ರೀ ಸಿದ್ದಯ್ಯನವರು ಒಬ್ಬ ಘನವ್ಯಕ್ತಿಯಾದರೂ ಜೈಲಿನಲ್ಲಿದ್ದಾಗ ರಾಗಿ ಬೀಸುತ್ತಿದ್ದರೆಂಬ ಅಂಶವನ್ನು ಸಭಾಧ್ಯಕ್ಷರೇ ತಿಳಿಸಿರುತ್ತಾರೆ. ಅವರ ಜೊತೆಗಿದ್ದ ನಾನು ಅವರ ಕೈಯನ್ನು ನೋಡಿದ್ದೇನೆ. ಬಹು ಕಷ್ಟಕರವಾದ ಕೆಲಸ ಮಾಡಿದ ಆ ಕೈಗಳಲ್ಲಿ ಗುಳ್ಳೆಗಳೆದ್ದು ಒಡೆದ ಮಚ್ಚೆಯ ಗುರುತುಗಳು ಅಲ್ಲಲ್ಲಿ ಕಂಡುಬರುತ್ತಿದ್ದುವು. ಇವರು ಮಹಾತ್ಯಾಗಿಗಳು.

ಇವರ ಗುಣಗಾನ ಮಾಡುತ್ತಿರುವ ಈ ಸಂದರ್ಭದಲ್ಲಿ ಮರುಳ ಸಿದ್ಧಸ್ವಾಮಿ ಮಠದ ದೀಪದ ಪ್ರಾರಂಭೋತ್ಸವ ಸಮಾರಂಭದಲ್ಲಿ ಇವರು ಭಾಗಿಗಳಾಗಿದ್ದುದು ನನಗಿಂದು ಜ್ಞಾಪಕಕ್ಕೆ ಬರುತ್ತಿದೆ. ಆ ದಿನದ ಸಮಾರಂಭವನ್ನು ನೆರವೇರಿಸಿ ಅವರು ಪ್ರಮುಖ ಪಾತ್ರ ವಹಿಸಿ ಸಾಯಂಕಾಲ 7½ ಗಂಟೆಯವರೆಗೂ ನಮ್ಮೆಲರ ಜೊತೆಯಲ್ಲಿಯೇ ಇದ್ದು ಅಲ್ಲಿದ್ದವರೆಲ್ಲರೂ ಅವರೊಡನೆ ಕಲೆತು ಅಣ್ಣತಮ್ಮಂದಿರಂತೆ, ಸ್ನೇಹಿತರಂತೆ ಬಹಳ ಸಂತೋಷವಾಗಿ ಕಾಲ ಕಳೆದು ಅಲ್ಲಿಂದ ನಮ್ಮ ಮನೆಯಲ್ಲಿ ನಮ್ಮ ಅಣ್ಣತಮ್ಮಂದಿರ ಜೊತೆಯಲ್ಲಿ ಊಟಮಾಡಿದ ಚಿತ್ರ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಮೈಸೂರು ಸಂಸ್ಥಾನದಲ್ಲಿ ಇಂಥ ಗಣ್ಯವ್ಯಕ್ತಿ ಸಿಕ್ಕುವುದು ಬಹಳ ಅಪರೂಪ. ಮೊದಲನೆಯದಾಗಿ ಈ ತಿಂಗಳು 13ನೆಯ ತಾರೀಖು ಅಸೆಂಬ್ಲಿ ಸ್ಪೀಕರ್ ಜಾಗಕ್ಕೆ ಇಷ್ಟೊಂದು ಮೇಧಾವಿಯಾದ ಮತ್ತೊಬ್ಬ ವ್ಯಕ್ತಿಯನ್ನು ಚುನಾಯಿಸುವುದು ಅಸಾಧ್ಯವಾದ ಕೆಲಸವೇ ಆಗಿದೆ. ನಾನು ಈ ಅಸೆಂಬ್ಲಿಯಲ್ಲಿ ಕೇಳುತ್ತಿದ್ದ ಹಲವಾರು ಉಪಪ್ರಶ್ನೆಗಳಿಗೆ ಸರ್ಕಾರದವರು ಒದಗಿಸುವುದಕ್ಕಿಂತಲೂ ಮುಂಚಿತವಾಗಿ ಅವರೇ ಅಂಕಿ ಅಂಶಗಳ ರೂಪದಲ್ಲಿ ಉತ್ತರ ಹೇಳಿಬಿಡುತ್ತಿದ್ದರು. ಅವರ ಅದ್ಭುತ ಜ್ಞಾಪಕಶಕ್ತಿಗೆ ಇದೊಂದು ಉದಾಹರಣೆ.

ಸಾಧಾರಣವಾಗಿ ನಾವು ಇಂದು ಮತ್ತಾವ ಕಾರ್ಯಕ್ರಮಗಳನ್ನೂ ಈ ಸಭೆಯಲ್ಲಿಟ್ಟುಕೊಳ್ಳಬಾರದಾಗಿತ್ತು. ಇಂಥ ಗಣ್ಯವ್ಯಕ್ತಿಯೊಬ್ಬರನ್ನು ಕಳೆದುಕೊಂಡಿರುವ ಬಗ್ಗೆ ಇವರ ವಿಚಾರದಲ್ಲಿ ಸಂತಾಪ ಸೂಚನೆಯನ್ನು ಸೂಚಿಸುವ ಒಂದೇ ಕಾರ್ಯಕ್ರಮವನ್ನು ಇಂದು ಇಟ್ಟುಕೊಳ್ಳಬೇಕಾಗಿದ್ದುದು ಸೂಕ್ತವಾಗಿತ್ತು ಎಂದು ನನ್ನ ಅಭಿಪ್ರಾಯ. ಇಂಥ ಸಂತಾಪಸೂಚಕ ಸಂದರ್ಭದಲ್ಲಿ ಮತ್ತಾವ ಕಾರ್ಯಕಲಾಪಗಳಿಗೂ ಮನಸ್ಸು ಒಗ್ಗದು. ಈ ಗಣ್ಯವ್ಯಕ್ತಿಯ ಬಗ್ಗೆ ಗುಣಗಾನವು ದೇಶಾದ್ಯಂತವೂ ನಡೆದಿದೆ. ಇಂಥ ಮಹಾವ್ಯಕ್ತಿಯನ್ನು ಕಳೆದುಕೊಂಡು ನಮಗೆಲ್ಲಾ ಇಂದು ಒಂದು ಅಪಾರ ನಷ್ಟವಾಗಿದೆ. ದಿವಂಗತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ, ಅವರ ಕುಟುಂಬ ವರ್ಗಕ್ಕೆ ಇವರ ನಿಧನದಿಂದ ಆಗಿರುವ ಅಪಾರ ದುಃಖವನ್ನು ಸಹಿಸಲು ಸರ್ವಶಕ್ತಿಯನ್ನೂ ಕೊಡಲಿ ಎಂದು ಪ್ರಾರ್ಥಿಸಿ, ನನಗೆ ಈ ವಿಚಾರವಾಗಿ ಮಾತನಾಡಲು ಅವಕಾಶವಿತ್ತುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).— ಮೈಸೂರಿನ ಮಹಾನಾಯಕರಲ್ಲೊಬ್ಬರಾದ ಶ್ರೀ ಎಚ್. ಸಿದ್ದಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಕ ಸಮಯ ಒದಗುವುದೆಂದು ನಾನು ಭಾವಿಸಿರಲಿಲ್ಲ. ಆದರೆ ಮಾನವನ ಇಚ್ಛೆಯೇ ಒಂದಾದರೆ, ದೈವೇಚ್ಛೆಯೇ ಬೇರೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಸಂಸ್ಥಾನದ ಜನತೆ ದಾಸ್ಯಶೃಂಖಲೆಯನ್ನೇ ಬಂಗಾರದ ಬಳೆಯೆಂದು ಭಾವಿಸಿದ್ದಾಗ ಅವರಲ್ಲಿ ರಾಜಕೀಯ ಜಾಗ್ರತಿಯನ್ನುಂಟುಮಾಡಿ, ಅವರಿಗೆ ಒಂದು ಸ್ಫೂರ್ತಿ ಕೊಟ್ಟು ಹುರುಪನ್ನುಂಟುಮಾಡಿ ದೇಶವು ಸ್ವಾತಂತ್ರ್ಯದ ಪಥವನ್ನು ಹಿಡಿಯುವುದಕ್ಕೆ ದಾರಿ ಹಾಕಿಕೊಟ್ಟವರಲ್ಲಿ ಗಣ್ಯವ್ಯಕ್ತಿ ಶ್ರೀ ಎಚ್. ಸಿದ್ದಯ್ಯನವರು. ಮಹಾತ್ಮಾಗಾಂಧಿಯವರು ಯಾವ ರೀತಿ ಅಹಿಂಸಾತತ್ವದ ಪ್ರತಿಪಾದನೆಯಲ್ಲಿ ನಿರತರಾಗಿ, ಅವಿಚ್ಛಿನ್ನವಾಗಿ ತಮ್ಮ ಚಳವಳಿಯಲ್ಲಿ ಭಾಗವಹಿಸಿ ಯಶಸ್ವಿಯಾದರೋ ಅದೇ ರೀತಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಅಂಕುರಾರ್ಪಣ ಹಾಕಿದ ಮೊದಲಿಗರಲ್ಲಿ ಇವರೊಬ್ಬರು. ಇವರಲ್ಲಿದ್ದ ವಿಶೇಷ ಗುಣವೆಂದರೆ ಕಷ್ಟಕಾರ್ಪಣ್ಯದಲ್ಲಿ ಸಿಲುಕಿದ ಯಾರಾದರೂ ಬಂದು ತಮ್ಮ ಕಷ್ಟಸುಖಗಳನ್ನು ಹೇಳಿಕೊಂಡರೆ ಅದನ್ನೆಲ್ಲಾ ಶಾಂತರೀತಿಯಲ್ಲಿ ಕೇಳಿ ತಮ್ಮ ಕೈಲಾದ ಸಹಾಯವನ್ನು ಅವರಿಗೆ ನೀಡುತ್ತಿದ್ದರು. ಯಾವುದಾದರೊಂದು ಕೆಲಸಕ್ಕೆ ಕೈಹಾಕಿದರೆ ಅದನ್ನು ಸಾಧಿಸತಕ್ಕ ನಿರ್ಧಾರದಲ್ಲೂ ರೀತಿಯಲ್ಲೂ ಇವರದೇ ಒಂದು ಮಾರ್ಗದರ್ಶಕ ಹಾದಿಯಾಗಿತ್ತು. ಒಂದು ವಾದಸರಣಿಯಲ್ಲಿ, ಒಂದು ಕೆಲಸ ಸಾಧನೆಯಲ್ಲಿ ಇವರದೇ ಒಂದು ಮಾರ್ಗವಾಗಿತ್ತು. ಸಂಘಟನಾಕಾರ್ಯದಲ್ಲಿ ಇವರ ಮಹಾ ಸಾಧನೆ ಯಾವ ರೀತಿ ಇತ್ತೆಂಬುದು ಕಾಂಗ್ರೆಸ್ ಸಂಸ್ಥೆಗಾಗಿ ದುಡಿಯುತ್ತಿರುವ ಪ್ರತಿಯೊಬ್ಬರಿಗೂ ತಿಳಿದಿರುವ ಅಂಶವೇ ಆಗಿದೆ. ಸಮಸ್ತರೂ

ಇವರ ವಿಚಾರದಲ್ಲಿ ಒಂದು ಗುರುಭಾವನೆ ಇಟ್ಟುಕೊಂಡು ಇವರು ಹೇಳಿದುದನ್ನು ಒಂದು ಮೇಲ್ಪಂಗ್ತಿಯಾಗಿ ಅನುಸರಿಸುತ್ತಿದ್ದರು. ಇವರು ನಮ್ಮ ಸಂಸ್ಥಾನದಲ್ಲಿಯ ಮೊದಲನೆಯ ಪ್ರಜಾಸರ್ಕಾರ ಸ್ಥಾಪನೆಯಲ್ಲಿ ಆಡಳಿತ ವಹಿಸಿ ಬಹು ಯಶಸ್ವಿಯಾಗಿ ತಮ್ಮ ಕಾರ್ಯಭಾರವನ್ನು ನಿರ್ವಹಿಸಿದರು. ಇಂಥ ಅದ್ಭುತ ಮೇಧಾಶಕ್ತಿ, ಕಾರ್ಯದಕ್ಷತೆ, ಕಾರ್ಯನಿರ್ವಹಣಶಕ್ತಿ ಪಡೆದಿರುವ ಮಹಾವ್ಯಕ್ತಿ ದೇಶದಲ್ಲಿ ದೊರಕುವುದು ಅತಿ ವಿರಳ. ಇವರ ರಾಜಕಾರಣಪಟುತ್ವ, ಇವರ ಸರಳ ಜೀವನ ಸಮಸ್ತರಿಗೂ ಮಾರ್ಗದರ್ಶಕವಾಗಿತ್ತು. ಇಂಥ ಗಣ್ಯವ್ಯಕ್ತಿ ಇಂದು ನಮ್ಮ ಕಣ್ಮರೆಯಾಗಿರುವುದು ನಮಗೆಲ್ಲಾ ಅಪಾರ ದುಃಖವನ್ನುಂಟುಮಾಡಿದೆ. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಟ್ಟು ಇವರ ಕುಟುಂಬ ವರ್ಗಕ್ಕೂ ಮತ್ತು ಬಂಧುಮಿತ್ರರಿಗೂ ಇವರ ನಿಧನದಿಂದಾಗಿರುವ ದುಃಖವನ್ನು ಸಹಿಸಲು ಸರ್ವ ಶಕ್ತಿಯನ್ನೂ ಭಗವಂತನು ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

2 P.M.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಶ್ರೀಮಾನ್ ಸಿದ್ದಯ್ಯನವರು ಮಹಿಳೆಯರಿಗೂ ಕೂಡ ಒಬ್ಬ ತಂದೆ ಇದ್ದಹಾಗೆ ಇದ್ದರು ಎಂದು ತಿಳಿದುಕೊಂಡಿದ್ದೇನೆ. ಮಹಿಳೆಯರು ಎಂದರೆ ಅವರನ್ನು ಬಹಳ ಕರುಣೆಯಿಂದ ನೋಡುತ್ತಾ ಇದ್ದರು. ಈಗಾಗಲೇ ಎಷ್ಟೋ ಜನ ಅವರ ಗುಣಗಾನ ಮಾಡಿದ್ದಾರೆ. ಅವರ ಗುಣಗಾನ ಮಾಡುತ್ತಾ ಹೋದರೆ ನಿಜವಾಗಿಯೂ ಅವರ ಮೂರ್ತಿಯೇ ನಮ್ಮ ಎದುರು ನಿಂತಂತಾಗುತ್ತದೆಯೋ ಏನೋ ಎಂಬ ಶಂಕೆ ನನ್ನ ಮನಸ್ಸಿಗೆ ಬರುತ್ತಾ ಇದೆ. ಒಬ್ಬ ಮನುಷ್ಯನು ಮುಖಂಡನಾಗುವುದಕ್ಕೆ ಮುಖ್ಯವಾದ ಕೆಲವು ಗುಣಗಳಿವೆ. ಯಾವುವು ಆ ಗುಣಗಳು ಎಂದರೆ : ಸಿಂಹದಂಥ ಶಕ್ತಿ ಇರಬೇಕು, ಹದ್ದಿನಂತಹ ದೃಷ್ಟಿ ಇರಬೇಕು ಮತ್ತು ನರಿಯಂಥ ಯುಕ್ತಿ ಇರಬೇಕು. ಹೀಗಿದ್ದರೆ ಅಂಥ ಮನುಷ್ಯ ನಾಯಕನಾಗುತ್ತಾನೆ ಎಂದು ಹೇಳುವುದುಂಟು. ಹಾಗೆ ನೋಡಿದರೆ ಈ ಮೂರು ಗುಣಗಳೂ ಸಿದ್ದಯ್ಯನವರಲ್ಲಿತ್ತು. ಯಾವುದಕ್ಕೂ ಕೊರತೆ ಇರಲಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಏಕೆಂದರೆ ಯಾವ ಮನುಷ್ಯರನ್ನೇ ತೆಗೆದುಕೊಳ್ಳಿ, ಅವರನ್ನು ನೋಡಿದ ತಕ್ಷಣ ಅವರ ನಡತೆ, ಅವರ ಮನಸ್ಸಿನಲ್ಲಿ ಏನೊಂದು ಭಾವನೆ ಇದೆ ಎಂಬುದನ್ನು ತಕ್ಷಣ ಹೇಳಬಹುದು. ಆದ್ದರಿಂದ ಅವರ ತೀಕ್ಷ್ಣ ಬುದ್ಧಿಯನ್ನು ತಿಳಿದುಕೊಂಡು ನಮ್ಮ ದೇಶದ ಜನರು ಅವರಲ್ಲಿಗೆ ಅನೇಕ ಕಡೆಗಳಿಂದ ಬರುತ್ತಾ ಇದ್ದರು. ಅವರು ಸ್ವಾಮಿಗಳು, ಅವರು ಭವಿಷ್ಯ ಹೇಳುತ್ತಾರೆ ಎಂದು ತಿಳಿದುಕೊಂಡಿದ್ದರು. ನಿಜವಾಗಿಯೂ ಅವರು ಬಹಳ ಬುದ್ಧಿವಂತರು. ಅವರ ಬುದ್ಧಿ ಎಷ್ಟು ಚುರುಕಾಗಿತ್ತು ಎಂಬುದನ್ನು ನೆನೆಸಿಕೊಂಡರೆ ನಮಗೆ ಈ ದಿವಸ ಅಂಥ ನಾಯಕರು ಸಿಕ್ಕುತ್ತಾರೆಯೇ, ಅವರ ಮಟ್ಟಕ್ಕೆ ಯಾರಾದರೂ ಬರುತ್ತಾರೆಯೇ ಎಂಬ ಶಂಕೆಯುಂಟಾಗುತ್ತದೆ. ನನಗಂತೂ ಅಂಥವರು ಸಿಕ್ಕುವುದಿಲ್ಲ ಎಂದೂ ಅನ್ನಿಸುತ್ತದೆ. ಅಂತಹ ಸ್ಪೀಕರ್ ಅನ್ನು ಎಂದೂ ಕಾಣಲಾರೆವು ಎಂದರೆ ತಪ್ಪಾಗಲಾರದು. ಅವರದು ಬಹಳ ಸರಳ ಜೀವನ. ಅವರಲ್ಲಿಗೆ ಭಾಗ್ಯವಂತರೇ ಹೋಗಲ, ಬಡವರೇ ಹೋಗಲ ಅವರ ಜೊತೆಗೆ ಬೆರೆತು ಅವರ ಕಷ್ಟ ಸುಖ ಕೇಳಿ, ಒಳಗಡೆ ಕರೆದುಕೊಂಡು ಊಟ ಮಾಡುತ್ತಾ ಮಾತನಾಡೋಣ ಬನ್ನಿ ಎಂದು ಹೇಳಿ ಪಕ್ಕದಲ್ಲಿ ಕುಳಿತುಕೊಂಡು ಮಾತನಾಡಿಸುತ್ತಿದ್ದರು. ಅವರು ಎಷ್ಟು ಬುದ್ಧಿವಂತಿಕೆಯಿಂದ ಕೆಲಸ ಮಾಡುತ್ತಿದ್ದರು, ಎಲ್ಲರ ಮೆಚ್ಚಿಗೆಗೂ ಪಾತ್ರರಾಗಿದ್ದರು ಎಂಬುದನ್ನು ನೋಡಿದರೆ ಅವರು ರಾಜಕೀಯದಲ್ಲಿ ನಿಜವಾಗಿಯೂ ಪಳಗಿದ್ದರು ಎಂಬುದರಲ್ಲಿ ಅನುಮಾನವೇ ಇಲ್ಲ. ಅನೇಕ ಸಂದರ್ಭಗಳಲ್ಲಿ ನಾವು ಪ್ರಶ್ನೆ ಕೇಳಬೇಕೇ ಬೇಡವೇ ಎಂದು ಅನುಮಾನಿಸುತ್ತಿದ್ದಾಗ ಅವರಾಗಿಯೇ ಅದನ್ನರಿತು ಪ್ರಶ್ನೆ ಕೇಳುವುದಕ್ಕೆ ಅವಕಾಶಕೊಟ್ಟು ಪ್ರೋತ್ಸಾಹ ನೀಡುತ್ತಿದ್ದರು. ಅಂತಹವರು ಈ ದಿನ ನಮ್ಮನ್ನು ಅಗಲಿದ್ದಾರೆ. ಅದು ನಮಗೆಲ್ಲರಿಗೂ ತುಂಬಬಾರದ ಹಾನಿಯಾಗಿದೆ. ಅಷ್ಟೇ ಅಲ್ಲದೆ ಸಮಾಜಕ್ಕೆ ಒಂದು ಧಕ್ಕೆ ಆದಂತಾಗಿದೆ. ಆದು ಭಗವಂತನ ಇಚ್ಛೆ, ಅನುಭವಿಸಲೇ ಬೇಕು. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೂ ಸದ್ಗತಿಯನ್ನೂ ಕೊಡಲೆಂದು ಪ್ರಾರ್ಥಿಸುತ್ತೇನೆ. ಜಂಗಮ ಎಂದರೆ ಬಸವಣ್ಣನವರಂತೆ ರಾಜ್ಯಭಾರ ನಡೆಸಿದರೂ ಮಂತ್ರಿಗಳಾದರೂ ಸ್ಪೀಕರ್ ಆದರೂ ಒಂದು ಕಾಸೂ ಸಂಪಾದಿಸಲಿಲ್ಲ. ಜಂಗಮರಲ್ಲಿ ಜಂಗಮರಾಗಿದ್ದ ಅವರಿಗೆ ಭಗವಂತನು ಸದ್ಗತಿಯನ್ನು ಕೊಡಲೆಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮಾನ್ ಸಿದ್ದಯ್ಯನವರ ನಿಧನದಿಂದ ದೇಶಕ್ಕೆ ಅಪಾರವಾದ ನಷ್ಟವಾಗಿದೆ. ಶ್ರೀಮಾನ್ ಸಿದ್ದಯ್ಯನವರನ್ನು ನಾನು 1930ನೇ ಇಸವಿಯಿಂದಲೂ ಬಲ್ಲೆ. ನಾನು 1930ನೇ ಇಸವಿಯಲ್ಲಿ ಶಿವಮೊಗ್ಗಕ್ಕೆ ಅಗ್ರಿಕಲ್ಚರಲ್ ಫೀಲ್ಡ್‌ಮನ್ ಆಗಿಹೋದೆ. ಅಲ್ಲಿ ಹರಿಜನರು ನಾವು ಎಂದು ಹೇಳಿ ನನಗೆ ಯಾರೂ ಮನೆ ಕೊಡಲಿಲ್ಲ. ಅಲ್ಲಿ ಗಣ್ಯವ್ಯಕ್ತಿಗಳು, ವಿಭೂತಿ ಪುರುಷರು ಯಾರಿದ್ದಾರೆ ಎಂದು ವಿಚಾರಿಸಿದಾಗ ಶ್ರೀಮಾನ್ ಸಿದ್ದಯ್ಯನವರ ಹೆಸರನ್ನು ಹೇಳಿದರು. ಆಗ ನಾನು ಅವರಲ್ಲಿಗೆ ಹೋದೆ. ಹೋಗಿ "ಸ್ವಾಮಿ, ನನಗೆ ಮನೆ ಯಾರೂ ಕೊಡುವುದಿಲ್ಲ ಎಂದು ಹೇಳುತ್ತಾರೆ ; ನಾನು ಮನುಷ್ಯನಲ್ಲವೆ, ವ್ಯಕ್ತಿ ಗೌರವವಿಲ್ಲವೆ, ಏನುಮಾಡುವುದು '' ಎಂದು ಕೇಳಿದಾಗ ನನ್ನ ಮನೆಯಲ್ಲೇ ಇದ್ದುಬಿಡಿ ಎಂದು ಹೇಳಿದರು. ಒಂದು ದಿವಸ ಅವರ ಮನೆಯಲ್ಲಿ ಇದ್ದೆ. ಮಾರನೆದಿನ ನಾನು ಹರಿಜನರ ಮತಕ್ಕೆ ಸೇರಿದವನು ಎಂಬ ವಿಷಯ ಅವರ ಮನೆಯವರಿಗೆ ಗೊತ್ತಾಗಿ ಮನೆಗೆಲ್ಲಾ ಸುಣ್ಣ ಹಚ್ಚಿಸಿ, ಶುದ್ಧಿಮಾಡಿದರು. ಸಾಯಂಕಾಲ ನಾನೂ ಕೂಡ ಅವರ ಜೊತೆಯಲ್ಲಿ ಮನೆಗೆ ಹೋದೆ. ಆಗ ಅವರು ಅದನ್ನೆಲ್ಲಾ ನೋಡಿ ಇದೇನು ಎಂದು ಕೇಳಿದಾಗ ವಿಷಯ ಗೊತ್ತಾಗಿ "ಹಾಗಾದರೆ ದಿನವೂ ಕರೆದುಕೊಂಡು ಬರುತ್ತೇನೆ, ದಿನವೂ ಮಾಡಿಸಿ, ಒಳ್ಳೆಯದೇ ಆಯಿತು '' ಎಂದು ಹೇಳಿದರು. ಅಂತಹ ಮಹಾಪುರುಷರು ಅವರು. ಅವರು ಪ್ರತಿಯೊಬ್ಬರಲ್ಲೂ ಮಾತನಾಡಿದಾಗ ಏನು ಮಾತನಾಡುತ್ತಿದ್ದರೂ ಅದು ಸರಿಯೋ ತಪ್ಪೋ ಎಂದು ಯೋಚನೆಮಾಡಿ ಮಾತನಾಡುತ್ತಾ ಇದ್ದರು. ವಿವೇಕಶಾಲಿಗಳು ಮತ್ತು ಅವರು ಕೋರ್ಟಿಗೆ ಹೋದಾಗ ಜಯಪ್ರದವಾಗುತ್ತದೆಯೋ ಇಲ್ಲವೋ ಎಂಬುದನ್ನು ಬಹಳ ಸೂಕ್ಷ್ಮವಾಗಿ ಯೋಚನೆಮಾಡತಕ್ಕ ಶಕ್ತಿಯಿತ್ತು ಅವರಲ್ಲಿ ; ಒಂದು ವಾಕ್‌ಶುದ್ಧಿ ಇತ್ತು. ನಡೆದಂತೆ ನುಡಿ, ನುಡಿದಂತೆ ನಡೆ ಎಂಬ ವಾಕ್ಯವನ್ನು ಅನುಷ್ಠಾನಕ್ಕೆ ತಂದಿದ್ದರು. ಅಸ್ಪೃಶ್ಯತೆಯನ್ನು ನಿವಾರಣೆ ಮಾಡಿದ ಹೊರತು ಗತ್ಯಂತರವಿಲ್ಲ ಎಂಬ ನಂಬಿಕೆಯನ್ನಿಟ್ಟುಕೊಂಡಿದ್ದ ಮಹಾವ್ಯಕ್ತಿ ಸಿದ್ದಯ್ಯನವರು. 1946ರಲ್ಲಿ ದಾವಣ

(ಶ್ರೀ ಸಿ. ಟಿ ಹನುಮಂತಯ್ಯ.)

ಗೆರೆಯಲ್ಲಿ ಒಂದು ಪಬ್ಲಿಕ್ ಮೀಟಿಂಗ್ ನಡೆದಾಗ, ಅವರು ಮಾತನಾಡುತ್ತಾ ಇದ್ದಾಗ, "ಏನು ಸ್ವಾಮಿ, ಕಾಂಗ್ರೆಸ್‌ನವರು ಬಹಳವಾಗಿ ಓಡಾಡುತ್ತಾ ಇದ್ದಾರೆ ಸ್ವರಾಜ್ಯದ ವಿಷಯವೇ ನಾಗುತ್ತದೆ" ಎಂದು ಒಂದು ಪ್ರಶ್ನೆಯನ್ನು ಹಾಕಿದಾಗ "ಇಷ್ಟರಲ್ಲೇ ಬರುತ್ತದೆ, ಜನರು ಇನ್ನು ಹೆಚ್ಚುಕಾಲ ತಡೆಯುವುದಿಲ್ಲ, ಬೇಗ ಸ್ವರಾಜ್ಯಬರುತ್ತದೆ" ಎಂದು ಹೇಳಿದರು. ಇನ್ನೊಂದು ಸಾರಿ ರಾಮಸ್ವಾಮಿ ಮೊದಲಿಯಾರರು ಗಾರ್ಡನ್ ಪಾರ್ಟಿಗೆ ಕರೆದಿದ್ದರು. ಆ ಸಂದರ್ಭದಲ್ಲಿ ಅನೇಕ ಜನ ಅಲ್ಲಿಗೆ ಬಂದಿದ್ದರು. ಅವರಲ್ಲಿ ಅನೇಕರಿಗೆ ಸಿದ್ದಯ್ಯನವರ ಪರಿಚಯವಿತ್ತು. ಅವರೆಲ್ಲರೂ ಇವರ ಮನೆಯಲ್ಲೇ ಇಳಿದುಕೊಂಡಿದ್ದರು. ನಾವು 11 ಘಂಟೆಗೆ ಮನೆಗೆ ಹೋದಾಗ ಸ್ವಲ್ಪವೂ ಜಾಗವಿರಲಿಲ್ಲ. ಅದನ್ನೆಲ್ಲಾ ಅವರು ಸಹನೆಯಿಂದ ನೋಡಿಕೊಂಡು ವರ್ತಿಸುತ್ತಿದ್ದರು. ಈ ರೀತಿ ದೇಶಸೇವೆ, ಜನಸೇವೆ ಮಾಡುತ್ತಿದ್ದವರ ಉದಾಹರಣೆ ತೆಗೆದುಕೊಂಡರೆ ಇದೊಂದು ಉದಾಹರಣೆ ಮಾತ್ರ ದೊರೆಯುತ್ತದೆ. ಅವರು ತಮ್ಮ ಸರ್ವಸ್ವವನ್ನೂ ಕೂಡ ದೇಶಕ್ಕಾಗಿ ದಾನಮಾಡಿದರು. ಇದು ಏನನ್ನು ತೋರಿಸುತ್ತದೆ ಎಂದರೆ ಅವರ ಒಂದು ಭ್ರಾತೃತ್ವವನ್ನು ತೋರಿಸುತ್ತದೆ. ಬೇಕಾದಷ್ಟು ದ್ರವ್ಯ ಸಂಪಾದನೆ ಮಾಡುವುದಕ್ಕೆ ಶಕ್ತಿ ಇದ್ದರೂ ಸಹ ದ್ರವ್ಯವನ್ನಾಗಲಿ ಜಮೀನನ್ನಾಗಲಿ ತಮ್ಮ ಸ್ವಂತಕ್ಕಾಗಿ ಮಾಡಲಿಲ್ಲ. ಅಂತಹ ವಿಭೂತಿ ಪುರುಷರನ್ನು ನಾವು ಕಳೆದುಕೊಂಡಿದ್ದೇವೆ. ಅದರಲ್ಲೂ ಹರಿಜನರಿಗಂತೂ ಅಪಾರವಾದ ನಷ್ಟವಾಗಿದೆ, ಸಂಕಟವಾಗಿದೆ. ಆ ಸಂಕಟವನ್ನು ನಾನು ವಿಶೇಷವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಅವರು ಬಹು ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನುಂಟುಮಾಡಲಿ. ಅವರ ಸಂಸಾರಕ್ಕೆ ಅಪಾರವಾದ ದುಃಖ ಉಂಟಾಗಿದೆ. ಅದನ್ನು ಬೇಗ ದೇವರು ಬಗೆಹರಿಸಲಿ ಎಂದು ಹೇಳಿ ಅಧ್ಯಕ್ಷರು ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri L. SIDDAPPA (Chennagiri).—Sir, much as I wish to speak on the occasion, I cannot speak on account of my ill-health. I only got up to pay my humble tribute to the memory of late Sri Siddaiya.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ).—ಅಧ್ಯಕ್ಷ ಮಹಾಶಯರೇ, ಅನೇಕ ಜನ ಈಗಾಗಲೇ ಶ್ರೀಮಾನ್ ಸಿದ್ದಯ್ಯನವರ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ನಮಗಿಂತಲೂ ಕೂಡ ತಾವು ಮಂತ್ರಿವರ್ಯರಾಗಿದ್ದಾಗ ಅವರ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಬಹಳ ಅವಕಾಶವಿತ್ತು; ಅವರ ಸ್ವಭಾವವನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಅವರ ವಿಷಯವನ್ನು ಪ್ರತಿಯೊಬ್ಬರೂ ಕೂಡ ಹೇಳಿದ್ದಾರೆ. ಅಂಥವರ ವಿಷಯವನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳದೇ ವಿಧಿಯೇ ಇಲ್ಲ. ಇದು ಸ್ಪೀಕರ್‌ರವರ ವಿಷಯದಲ್ಲಿ ನಮಗೆ ಇರುವ ಸಂಪೂರ್ಣ ಗೌರವವನ್ನು ತೋರಿಸುತ್ತದೆ. ಶ್ರೀಮಾನ್ ಸಿದ್ದಯ್ಯನವರು, ಈಗಾಗಲೇ ನಮ್ಮ ಸ್ನೇಹಿತರು ಹೇಳಿದಂತೆ, ನುಡಿದಂತೆ ನಡೆ, ನಡೆದಂತೆ ನುಡಿ ಎಂಬುದನ್ನು ಸಂಪೂರ್ಣವಾಗಿ ಪಾಲಿಸುತ್ತಾ ಇದ್ದರು. ಮುಂದೆ ಬರುವ ಸ್ಪೀಕರ್‌ರವರೂ ಕೂಡ ಅವರು ಯಾವ ಒಂದು ಭಾವನೆಯನ್ನಿಟ್ಟುಕೊಂಡಿದ್ದರೋ, ಯಾವ ರೀತಿ ಜನಗಳ ವಿಶ್ವಾಸವನ್ನು ಸಂಪಾದಿಸಿದ್ದರೋ ಅದೇ ರೀತಿ ಮಾಡುತ್ತಾರೆ ಎಂದು ನಂಬಿದ್ದೇನೆ. ಶ್ರೀಮಾನ್ ಸಿದ್ದಯ್ಯನವರು ಈ ಸಭೆಯ ಯಾವ ಸದಸ್ಯರ ಮನಸ್ಸನ್ನೂ ನೋಯಿಸದೆ ಪ್ರತಿಯೊಬ್ಬರಿಗೂ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟು ಸಮಾಧಾನ ಮಾಡುತ್ತಿದ್ದರು. ಅಂಥ ಮಹಾನುಭಾವರ ವಿಷಯದಲ್ಲಿ ನಮ್ಮ ಗೌರವವನ್ನು ಎಷ್ಟುಮಾತ್ರ ವ್ಯಕ್ತಪಡಿಸಿದರೂ ಕಡಮೆ ಆಗುತ್ತದೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ ಎಂದು ಹೇಳಿ ಪ್ರಾರ್ಥಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಪೂಜ್ಯರಾದ ಶ್ರೀಮಾನ್ ಸಿದ್ದಯ್ಯನವರು ನಿಧನಹೊಂದಿದ ವಾರ್ತೆಯು ದೇಶದಲ್ಲೆಲ್ಲಾ ಹರಡಿ ಬಹಳ ಜನಗಳಿಗೆ ದುಃಖವನ್ನುಂಟುಮಾಡಿತು. ಸಾಧಾರಣವಾಗಿ ಶ್ರೀಮಾನ್ ಸಿದ್ದಯ್ಯನವರಿಗೂ ನನಗೂ ಸುಮಾರು ಹತ್ತು ವರ್ಷಗಳಿಂದ ಪರಿಚಯವಿತ್ತು. ಶ್ರೀ ಸಿದ್ದಯ್ಯನವರ ನಡೆವಳಿಕೆಗಳನ್ನು ನೋಡಿದರೆ ಸಾಧಾರಣವಾಗಿ ನಮ್ಮ ಮೈಸೂರು ಸಂಸ್ಥಾನದಲ್ಲೇ ಅಲ್ಲ, ಇತರ ಕಡೆಗಳಲ್ಲೂ ಕೂಡ, ಇಂಡಿಯಾ ದೇಶದ ನಾನಾ ಭಾಗಗಳಲ್ಲೂ ಕೂಡ ಅವರಂಥ ಸರಳ ಮನೋಭಾವವುಳ್ಳವರಿರಲಿಲ್ಲವೆಂದು ನನಗೆ ಕಂಡುಬರುತ್ತದೆ. ಹಿಂದೆ ಬಸವೇಶ್ವರರ ಕಾಲದಲ್ಲಿ ಗಣಗಳಿಗೆ ಯಾವ ರೀತಿ ಊಟ ಉಪಚಾರ ನಡೆಯುತ್ತಿತ್ತೋ ಅದೇ ರೀತಿ ಪ್ರತಿನಿತ್ಯವೂ ಬಡವರು, ಬಲ್ಲಿದರು, ಐಶ್ವರ್ಯವಂತರು, ಅಧಿಕಾರಿಗಳು, ಅಧಿಕಾರದಲ್ಲಿಲ್ಲದವರು, ಕೂಲಿಯವರು ಅಥವಾ ಬೇರೆಯವರು ಯಾರೇ ಹೋದರೂ ಕೂಡ ಅವರು ಅನ್ನವನ್ನಾಗಲಿ ಅಥವಾ ನೀರನ್ನಾಗಲಿ ಕೊಡದೆ ಕಳುಹಿಸುತ್ತಿರಲಿಲ್ಲ. ಅಂಥ ಒಂದು ದೊಡ್ಡ ಮನೋಭಾವ ಅವರಲ್ಲಿತ್ತು. ಪೂಜ್ಯ ಸಿದ್ದಯ್ಯನವರು ನಮ್ಮ ಮೈಸೂರು ದೇಶದ ನಾಯಕರುಗಳಲ್ಲೊಬ್ಬರು. ಅವರ ಹಿಂದಿನ ಚರಿತ್ರೆಯನ್ನು ಅನೇಕ ಮಹಾಶಯರುಗಳು ಈಗಾಗಲೆ ಹೇಳಿದ್ದಾರೆ. ನಾನು ಪುನಃ ಅದನ್ನು ಮತ್ತೊಮ್ಮೆ ಹೇಳಲು ಇಷ್ಟಪಡುವುದಿಲ್ಲ. ಸಾಧಾರಣವಾಗಿ ಯಾರ ಮೇಲಾದರೂ ಕೋಪಿಸಿಕೊಂಡರೆ, ಅದರಿಂದ ಅವರಿಗೆ ತೊಂದರೆಯಾಗಿದೆಯೆಂದು ತಿಳಿದ ಕೂಡಲೆ ಅದನ್ನು ಕೂಡಲೆ ಪರಿಹಾರ ಮಾಡುತ್ತಿದ್ದರು. 1940ನೆಯ ಇಸವಿಯಲ್ಲಿ ಶಿವಮೊಗ್ಗದಲ್ಲಿ ಶ್ರೀ ವೀರಪ್ಪ ಎಂಬ ಒಬ್ಬ ಹರಿಜನ ಸದಸ್ಯರಿದ್ದರು. ಅವರು ಶ್ರೀ ಸಿದ್ದಯ್ಯನವರ ಪಟ್ಟ ಶಿಷ್ಯರಾಗಿದ್ದರು. ಹಿಂದೆ ಕಾಂಗ್ರೆಸ್ ಸಂಸ್ಥೆ ಬಲಯುತವಾಗಿಲ್ಲದಿದ್ದುದರಿಂದ ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ಒಂದು ಸಂಧಾನ ಮಾಡಲು 1940ರಲ್ಲಿ ಶ್ರೀ ವೀರಪ್ಪನವರು ಶಾಸನ ಸಭೆಯ ಸದಸ್ಯರಾಗಿ ಚುನಾಯಿತರಾದರು. ಆದರೆ ಕೊನೆಗೆ ಯಾರೋ ಅವರಿಗೆ ಕಾಂಗ್ರೆಸ್ ಬಿಟ್ಟುಬಿಡಿ, ಆ ಬಗ್ಗೆ ಒಂದು ಹೇಳಿಕೆ ಕೊಡಿ ಎಂದು ಬೋಧನೆ ಮಾಡಿದರು. ಅದೇ ರೀತಿಯಲ್ಲಿ ಶ್ರೀ ವೀರಪ್ಪನವರು ತಾವು ಕಾಂಗ್ರೆಸ್ ಸಂಸ್ಥೆಗೆ ರಾಜೀನಾಮೆ ಕೊಟ್ಟಿರುವುದಾಗಿ ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಆಗ ಶ್ರೀಮಾನ್ ಸಿದ್ದಯ್ಯನವರ ಮನಸ್ಸಿಗೆ ಬಹಳ ನೋವುಂಟಾಯಿತು. ಏಕೆಂದರೆ ಚಿಕ್ಕಂದಿನಿಂದ ಹರಿಜನರ ಪಟ್ಟ ಶಿಷ್ಯರಾಗಿ ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲಸಮಾಡಿ ಶಾಸನ ಸಭೆಯ ಸದಸ್ಯರಾಗಿದ್ದು ಕಾಂಗ್ರೆಸ್ ಬಿಟ್ಟಿದ್ದೇನೆಂದು ಹೇಳಿಕೆಯಿತ್ತರಲ್ಲಾ ಎಂದು ಮನನೊಂದಿತು. ಹಾಗೆ ಮಾಡಿದ ಒಂದು ವಾರದೊಳಗೇ ಅವರು ನಿಧನ ಹೊಂದಿದರು. ಇದೆಲ್ಲಾ ನನಗೆ ಚೆನ್ನಾಗಿ ಗೊತ್ತು.

ಇದರಿಂದ ಶ್ರೀ ಸಿದ್ದಯ್ಯನವರು ಎಂತಹ ವ್ಯಕ್ತಿಯೆಂಬುದು ಅರ್ಥವಾಗುತ್ತದೆ. ಅವರು ಅಕಾಲ ಮರಣಕ್ಕೆ ತುತ್ತಾಗಿದ್ದಾರೆ; ಹಾಗೆ ಮರಣ ಹೊಂದಿ ಕೈಲಾಸವಾಸಿಗಳಾಗಿದ್ದಾರೆ. ಈ ದಿವಸ ಅವರು ನಿಧನಹೊಂದಿದ್ದರೂ ಕೂಡ ನಮ್ಮ ಕಣ್ಣೆದುರಿಗೆ ಬಂದು ನಿಂತಹಾಗೆ ಕಾಣುತ್ತಿದೆ. ಏಕೆಂದರೆ ಅವರು ಇಷ್ಟು ಜನಗಳಲ್ಲೂ ವಿಶ್ವಾಸ ಮತ್ತು ಪ್ರೇಮವನ್ನಿಟ್ಟುಕೊಂಡಿದ್ದರು. ನಾನು ಸಾಧಾರಣವಾಗಿ ಅವರ ಬಳಿಗೆ ಹೆಚ್ಚಾಗಿ ಹೋಗುತ್ತಿರಲಿಲ್ಲವಾದರೂ ಸಹ ಅದೇನೋ ನನ್ನಲ್ಲಿ ಬಹಳ ಹೆಚ್ಚಿನ ಒಂದು ಪ್ರೀತಿ ವಿಶ್ವಾಸ ಅವರಿಗಿತ್ತು. ಮೊನ್ನೆ ಬಡ್ಜೆಟ್ ಅಧಿವೇಶನದಲ್ಲಿ ಪ್ರತಿ ದಿವಸವೂ ನನಗೆ ಇನ್‌ವಿಟೇಷನ್ ಕಳುಹಿಸಿ ಟೀ ಗೆ ಕರೆಸಿಕೊಳ್ಳುತ್ತಿದ್ದರು. ನನ್ನ ಅಕ್ಕಪಕ್ಕದ ಸದಸ್ಯರು ಇದಕ್ಕೆ ಕಾರಣವೇನೆಂದು ನನ್ನನ್ನು ಕೇಳುತ್ತಿದ್ದರು. ಅನೇಕರಿಗೆ ವಾರಕ್ಕೊಂದು ದಿನ ಆಹ್ವಾನ ಬರುವುದೇ ಕಷ್ಟವಾಗಿರುವಾಗ ನನಗೆ ನಿತ್ಯವೂ ಬಂದು ನಾನು ಪ್ರತಿ ದಿವಸವೂ ಹೋಗುತ್ತಿದ್ದೆ. ನನ್ನಲ್ಲಿ ಅವರಿಗೆ ಹೆಚ್ಚು ವಿಶ್ವಾಸವಿದೆಯೆಂದು ಇದರಿಂದ ಚೆನ್ನಾಗಿ ಅರ್ಥವಾಗುತ್ತಿತ್ತು. ಈ ಸಮಯದಲ್ಲಿ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮ ಪಿತೃಗಳು ಸತ್ತಾಗಕೂಡ ಅಷ್ಟು ದುಃಖವಾಗಿರಲಿಲ್ಲ. ಶ್ರೀ ಸಿದ್ದಯ್ಯನವರ ನಿಧನದಿಂದ ಎಲ್ಲಕ್ಕಿಂತಲೂ ಮಿಗಿಲಾದ ದುಃಖವುಂಟಾಗಿದೆ. ಅಂಥ ಮಹಾ ವ್ಯಕ್ತಿಯನ್ನು ಕಳೆದುಕೊಂಡುದರಿಂದ ದೇಶಕ್ಕೆಲ್ಲಾ ಅಪಾರ ದುಃಖವಾಗಿದೆ. ಅವರ ವಿಷಯದಲ್ಲಿ ನಾನು ಹೆಚ್ಚಾಗಿ ಹೊಗಳುವುದಕ್ಕೆ ಹೋಗುವುದಿಲ್ಲ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಮತ್ತು ಅವರ ಕುಟುಂಬ ವರ್ಗದವರಿಗೆ ಕೂಡ ಶಾಂತಿಯನ್ನು ಇತ್ತು ಕೈಲಾಸದಲ್ಲಿ ಅವರಿಗೆ ಸ್ಥಾನವನ್ನು ದಯಪಾಲಿಸಲೆಂದು ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri M. PALANIYAPPAN (Ulsoor).—Sir, I associate myself with the sentiments expressed by several Hon'ble Members who have already spoken. I knew Sri H. Siddaiya from about three or four years. Providence has been so cruel as to snatch him away from our midst so soon. Sir, whenever he saw me or I saw him, there was spontaneous love between as. He used to like me so much that I might say, without exaggeration, that I held the position of his brother. Whenever there was some heated discussion between us, as member and the Speaker, he would console me afterwards. He would take me to his Chambers and give me his valuable advice. Such was his temperament towards me and also with all. It is very rare that we come across persons with such qualities and kindness. Such a soul has departed. This is not an occasion to make a long speech. Let me share the sorrow with the Leader of the House. I pray Almighty to give peace to the departed soul.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಶ್ರೀಮಾನ್ ಸಿದ್ದಯ್ಯನವರ ವಿಚಾರದಲ್ಲಿ ಮಾನ್ಯ ಸಭೆಯವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ನಾನು ಸುಮಾರು ಇಪ್ಪತ್ತು ವರ್ಷಗಳಿಂದ ಅವರ ವಿಷಯವನ್ನು ತಿಳಿದವನಾಗಿದ್ದೇನೆ. ಆದ್ದರಿಂದ ಇಂದು ಒಂದೆರಡು ವಿಷಯಗಳನ್ನು ತಮ್ಮ ಮುಂದಿಡಬೇಕೆಂದು ಇಷ್ಟಪಡುತ್ತೇನೆ. ಎಂಥ ಕಠಿಣ ಪರಿಸ್ಥಿತಿಯೇ ಬಂದಿರಲಿ ಎದುರಾಳಿಯ ಮನಸ್ಸನ್ನು ತಮ್ಮ ಕಡೆಗೆ ಒಲಿಸಿಕೊಂಡು ಪರಿಸ್ಥಿತಿಯನ್ನು ಹತೋಟಿಗೆ ತರುವ ಶಕ್ತಿ ಅವರಲ್ಲಿತ್ತು. ಅನೇಕ ಹಳ್ಳಿಗಳಲ್ಲಿ ಪಾರ್ಟಿಗಳ ದೆಸೆಯಿಂದ ವಿವಾದ, ವ್ಯಾಜ್ಯ ಉಂಟಾದ ಸಂದರ್ಭಗಳಲ್ಲಿ ಅವನ್ನು ಪರಿಹರಿಸಿ ಜನರನ್ನು ಸರಿಯಾದ ಮಾರ್ಗಕ್ಕೆ ತರಲು ಪ್ರಯತ್ನಪಟ್ಟಿದ್ದಾರೆ. ಜೈಲಿನಲ್ಲಿದ್ದಾಗ ಅನೇಕ ಖೈದಿಗಳ ಪರವಾಗಿ ಹೈಕೋರ್ಟಿಗೆ ಅಪೀಲು ಹಾಕಿಸಿ ಬಹುಮಂದಿ ಖೈದಿಗಳನ್ನು ಜೈಲಿನಿಂದ ಬಿಡಿಸಿದ್ದಾರೆ. ಅಂಥವರನ್ನು ಹಾಗೆ ಬಿಡುಗಡೆಯಾದವರು ಇಂದು ಕೂಡ ಮರೆತಿಲ್ಲ. ಯಾರಾದರೂ ಒಬ್ಬ ದೊಡ್ಡ ಮನುಷ್ಯ ಸತ್ತರೆ ಸತ್ತಮೇಲೆ ಅವನ ಗುಣಗಳನ್ನು ಕೊಂಡಾಡುತ್ತಾರೆ, ಬದುಕಿರುವಾಗ ಅಷ್ಟಾಗಿ ಹೊಗಳುವುದಿಲ್ಲ ಎಂದು ಹಿಂದಿನ ಕಾಲದಲ್ಲಿ ಪಟ್ಟಣಗಳಲ್ಲಿ ಹೇಳುತ್ತಿದ್ದರು. ಅದರಂತೆ ಶ್ರೀಮಾನ್ ಸಿದ್ದಯ್ಯನವರು ನಿಧನಹೊಂದಿದ ಮೇಲೆ ಇಡೀ ಮೈಸೂರು ಸಂಸ್ಥಾನದಲ್ಲೆಲ್ಲಾ ಕಡೆಯೂ ಸಭೆಗಳು ನಡೆದು ದುಃಖ ಸೂಚಿಸಿ ಮೃತಪಟ್ಟವರ ಆತ್ಮಕ್ಕೆ ಗೌರವವನ್ನು ಸಲ್ಲಿಸಿದರು. ಇದರಿಂದ ಅವರಲ್ಲಿ ಜನರಿಗೆಷ್ಟು ಪ್ರೀತಿ ವಿಶ್ವಾಸವಿತ್ತು, ಅವರು ದೇಶಸೇವೆ ಎಷ್ಟು ಮಾಡಿದ್ದಾರೆ ಎಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಅವರ ನೆರೆಹೊರೆಯವರು, ಅಕ್ಕಪಕ್ಕದ ಮನೆಯವರು "ನೀವೇಕೆ ಯಾವ ಆಸ್ತಿಯನ್ನೂ ಮಾಡಿಲ್ಲ, ಹಣ ಕೂಡಿಟ್ಟಿಲ್ಲ" ಎಂದು ಕೇಳಿದರೆ "ಅದರಿಂದೇನಾಗಬೇಕು, ಇರುವವರೆಗೆ ಜನಸೇವೆ ಮಾಡಿ ಅವರ ಪ್ರೀತಿ ವಿಶ್ವಾಸ ಪಡೆದರೆ ಸಾಲದೆ" ಎಂದು ಸೂಚಿಸುವಂತೆ ಹೇಳಿ ಅದಕ್ಕೆ ತಕ್ಕಂತೆ ಕೆಲಸಮಾಡುತ್ತಿದ್ದರು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಯಾವಾಗಲೂ ಒಬ್ಬ ಸಾಧಾರಣ ಮನುಷ್ಯ ಅವರ ಮನೆಗೆ ಹೋದರೂ ಸಹ, ಊಟಕ್ಕೆ ಬರಬೇಕು, ತಿಂಡಿಗೆ ಬರಬೇಕು ಎಂದು ಯಾರೇ ಹೇಳಿದರೂ ಸಹ ಅದನ್ನು ತಿರಸ್ಕರಿಸದೆ ಅಂಥವರನ್ನು ಗೌರವದಿಂದ ಕಾಣುತ್ತಿದ್ದರು. ಎದುರಾಳಿ ಅಥವಾ ಹಾಗೆ ಕರೆಯುತ್ತಿದ್ದವರು ಏನಾದರೂ ಮೋಸ ಮಾಡುತ್ತಾರೆಂದಾಗಲಿ, ಹಾಗೆ ಇತರರ ಮನೆಗಳಿಗೆ ಊಟ ಉಪಚಾರಗಳಿಗೆ ಹೋದರೆ ತಮ್ಮ ಆರೋಗ್ಯ ಕೆಡುತ್ತದೆಂದಾಗಲಿ ಅವರು ಆಲೋಚನೆ ಮಾಡುತ್ತಿರಲಿಲ್ಲ. ಯಾರೇ ಕರೆದರೂ ಇಲ್ಲ ಎಂದು ಹೇಳುತ್ತಿರಲಿಲ್ಲ. ನಾಲ್ಕುಸಲ ಅಥವಾ ಎಂಟುಸಲ ಊಟಕ್ಕೆ ಅಥವಾ ಕಾಫಿಗೆ ಯಾರಾದರೂ ಕರೆದರೂ ಕೂಡ ಒಬ್ಬ ಮನುಷ್ಯನ ಮನಸ್ಸನ್ನೇಕೆ ನೋಯಿಸಬೇಕೆಂದು ಪ್ರೀತಿ ವಿಶ್ವಾಸದಿಂದ ಕರೆಯುವವರನ್ನು ಸ್ವಾಗತಿಸುತ್ತಿದ್ದರೇ ಹೊರತು ವಿನಾಕಾರಣ ಹೇಳಿ ಆರೋಗ್ಯ ಚೆನ್ನಾಗಿಲ್ಲ ಎಂಬ ನೆಪದಿಂದ ತಪ್ಪಿಸಿಕೊಳ್ಳುತ್ತಿರಲಿಲ್ಲ. ಮನೆಗೆ ಯಾರೇ ಬಂದರೂ, ಏನೇ ಕಷ್ಟವಿದ್ದರೂ ಅವರಿಗೆ ಅತಿಥಿ ಸತ್ಕಾರಮಾಡದೆ ಖಂಡಿತ ಒಬ್ಬರನ್ನೂ ಕಳುಹಿಸುತ್ತಿರಲಿಲ್ಲ. ಇದನ್ನೆಲ್ಲಾ ಹೇಗೆ ಮಾಡುತ್ತೀರಿ ಎಂದು ಯಾರೋ ಮಿತ್ರರು ಕೇಳಿದರೆ, ಭಗವಂತ ಕೊಟ್ಟಿರುವುದನ್ನು ಖರ್ಚು ಮಾಡೋಣ, ಕೂಡಿಡಬಾರದು ಎಂದು ಹೇಳಿಬಿಡುತ್ತಿದ್ದರು. ಬಹಳವಾಗಿ ಅವರು ನಮ್ಮ ಸಂಸ್ಥಾನದಲ್ಲೂ, ಇಡೀ ಹಿಂದೂಸ್ಥಾನದಲ್ಲೂ ಸ್ವಾತಂತ್ರ್ಯಕ್ಕಾಗಿ ಹೋರಾಡಿ ದೇಶಸೇವೆ ಮಾಡಿದ

(ಶ್ರೀ ಎಸ್. ಅರ್. ನಾಗಪ್ಪಶೆಟ್ಟಿ.)

ಹಿರಿಯರ ಪೈಕಿ ಮೊದಲನೆಯವರಾಗಿ ಈ ದಿವಸ ನಿಧನ ಹೊಂದಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಅನೇಕ ವಿಚಾರಗಳನ್ನು ಅವರ ನಡೆನುಡಿಗಳನ್ನು ನೋಡಿ ತಿಳಿದು, ಅವರು ಹೇಳಿರುವ ಮಾರ್ಗದಲ್ಲಿ ಇನ್ನು ನಾವು ಹೋಗುವುದು ಮುಖ್ಯವಾದುದು. ಅವರ ನಿಧನದಿಂದ ನಮ್ಮ ಮೈಸೂರು ದೇಶಕ್ಕೇ ಅಪಾರ ನಷ್ಟವಾಗಿದೆ, ಅವರ ಆತ್ಮಕ್ಕೆ ಮತ್ತು ಅವರ ಮನೆಯವರಿಗೆ ಭಗವಂತನು ಶಾಂತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

2-30 P.M.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮನ್ನಗಲಿ ಕಣ್ಮರೆಯಾದ ಶ್ರೀ ಎಚ್. ಸಿದ್ಧಯ್ಯನವರ ಗುಣಗಾನ ಮಾಡಲು ನನಗೊಂದು ಅವಕಾಶ ದೊರೆತುದು ನನ್ನ ಅದೃಷ್ಟವೆಂದು ಭಾವಿಸುತ್ತೇನೆ. ಅವರು ಇಡೀ ದೇಶದ ಜನತೆಗೇ ಮಾರ್ಗದರ್ಶಕರಾಗಿದ್ದರು. ಇವರು ನಿಧನ ಹೊಂದಿದ ವರ್ತಮಾನ ಕೇಳಿದ ದಿನ ನನಗೆ ಸಿಡಿಲು ಬಡಿದಂತಾಯಿತು. ಯಾವಾಗ ಮನೆಗೆ ಹೋದರೂ ಬಿಸಿ ಬಿಸಿ ಕಾಫಿ, ತಿಂಡಿ ಕೊಟ್ಟು ವಿನಯದಿಂದ ಮಾತನಾಡುತ್ತಿದ್ದರು. ದಿವಂಗತ ಸಿದ್ದಯ್ಯನವರ ಮರಣ ವಾರ್ತೆಯನ್ನು ಕೇಳಿದ ನಮ್ಮ ಕ್ಷೇತ್ರದ ಕೆಲವರು ಪತ್ರಿಕೆಯ ಪ್ರಕಟನೆಯನ್ನು ತಿಳಿದು, ನನ್ನ ಹೆಸರೂ ಸಿದ್ದಯ್ಯನಾದ್ದರಿಂದ ನಾನೇ ಮರಣ ಹೊಂದಿದೆನೋ ಎಂದು ಗಾಬರಿಗೊಂಡು ನನ್ನ ಯೋಗಕ್ಷೇಮ ವಿಚಾರಿಸಲು ಊರೂರುಗಳಿಂದ ನನ್ನ ಊರಿಗೆ ಓಡಿಬಂದರು. ಅನಂತರ ನಮ್ಮ ಶಾಸನ ಸಭಾಧ್ಯಕ್ಷರಾಗಿದ್ದ ಶ್ರೀ ಸಿದ್ದಯ್ಯನವರು ನಿಧನ ಹೊಂದಿದ್ದ ವರ್ತಮಾನವನ್ನು ನಾನು ತಿಳಿಸಲು ಕೇಳಿ ಬಹುವಾಗಿ ಪರಿತಪಿಸಿದರು. ಇಂಥ ಗಣ್ಯವ್ಯಕ್ತಿಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲೆಂದು ಹಾರೈಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಶ್ರೀ ಎಚ್. ಸಿದ್ದಯ್ಯನವರು ನಿಧನ ಹೊಂದಿದುದು ಮೈಸೂರು ಸಂಸ್ಥಾನಕ್ಕೇ ಅಪಾರ ನಷ್ಟವಾಗಿದೆ. ಅಷ್ಟೇ ಅಲ್ಲ, ಇಡೀ ಇಂಡಿಯಾ ದೇಶಕ್ಕೇ ಅಪಾರ ನಷ್ಟವಾಗಿದೆಯೆಂದರೂ ಅತಿಶಯೋಕ್ತಿಯಾಗಲಾರದು. ಅವರು ತಮ್ಮ ಜೀವಮಾನದಲ್ಲಿ ಎಷ್ಟರ ಮಟ್ಟಿಗೆ ಕಷ್ಟಪಟ್ಟಿರುತ್ತಾರೆ, ದೇಶಕ್ಕಾಗಿ ಎಷ್ಟರ ಮಟ್ಟಿಗೆ ತ್ಯಾಗ ಮಾಡಿರುತ್ತಾರೆ ಎಂಬುದನ್ನು ಈಗಾಗಲೇ ಹಲವು ಮಾನ್ಯ ಮಿತ್ರರು ಹೇಳಿರುತ್ತಾರೆ. ಅವರು ಹಿಂದೆ ಮಿನಿಸ್ಟರ್ ಆಗಿದ್ದಾಗ ನಾನೂ ಅಸೆಂಬ್ಲಿ ಸದಸ್ಯನಾಗಿದ್ದೆ. ಅವರು ಮಂತ್ರಿಪದವಿಯಲ್ಲಿದ್ದಾಗ ಅವರಲ್ಲಿದ್ದ ಘನತೆ, ಅವರಲ್ಲಿದ್ದ ಸೇವಾ ಮನೋಭಾವನೆ, ಅವರಲ್ಲಿದ್ದ ಜನರ ಮೇಲಿನ ಪ್ರೀತಿ ವಿಶ್ವಾಸ—ಇವುಗಳನ್ನು ಎಷ್ಟು ಕೊಂಡಾಡಿದರೂ ಸಾಲದು. ಯಾವಾಗಲೂ ಜನರ ವಿಚಾರದಲ್ಲಿ, ಬಡ ನೌಕರರ ವಿಚಾರದಲ್ಲಿ ಸೌಜನ್ಯ ಮನೋಭಾವನೆಯಿಂದ ವರ್ತಿಸಿ ಅವರನ್ನೆಲ್ಲಾ ಬಹು ಕನಿಕರ ದೃಷ್ಟಿಯಿಂದ ನೋಡುತ್ತಿದ್ದರು. ಅವರ ಮನೆಯಲ್ಲಿ ಪ್ರತಿದಿನವೂ 50 ಜನರಾದರೂ ಊಟಮಾಡುತ್ತಿದ್ದರು. 'ನಾನು ಜಂಗಮನಾಗಿ ಹುಟ್ಟಿದ್ದೇನೆ, ಜಂಗಮನಾಗಿಯೇ ಸಾಯುತ್ತೇನೆ. ಯಾವುದನ್ನೂ ಯೋಚನೆ ಮಾಡುವುದಿಲ್ಲ ; ನನ್ನ ಸಂಸಾರ, ಮಕ್ಕಳು ಮರಿಗಳನ್ನು ದೇವರು ನೋಡಿಕೊಳ್ಳುತ್ತಾನೆ' ಎಂದು ಹೇಳುತ್ತಿದ್ದರು. ಮೊದಲಿನಿಂದಲೂ ಅವರ ಜೀವಮಾನವನ್ನೇ ತ್ಯಾಗ ಮನೋಭಾವನೆಯಲ್ಲಿಯೇ ಕಳೆದರು. ಅವರು ಖಂಡಿತವಾಗಿಯೂ ಭಗವಾನ್ ಬಸವಣ್ಣನವರಂಶೆಯೇ ಇದ್ದರೆಂದರೆ ಅತಿಶಯೋಕ್ತಿಯಾಗಲಾರದು. ಇಂಥ ಮಹಾವ್ಯಕ್ತಿಯೊಬ್ಬರನ್ನು ನಾವು ಇಂದು ಕಳೆದುಕೊಂಡಿರುವುದು ನಮ್ಮ ದೌರ್ಭಾಗ್ಯವೆಂದೇ ಹೇಳಬೇಕು. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲ, ಅವರ ಕುಟುಂಬ ವರ್ಗಕ್ಕೆ ಈ ಮಹಾವ್ಯಕ್ತಿಯ ನಿಧನದಿಂದಾಗಿರುವ ದುಃಖವನ್ನು ಸಹಿಸಲು ಸರ್ವಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಶ್ರೀ ಎಚ್. ಸಿದ್ದಯ್ಯನವರ ಗುಣಗಾನದ ವಿಚಾರದಲ್ಲಿ ಈಗಾಗಲೇ ಈ ಸಭೆಯ ಅನೇಕ ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಆದುದರಿಂದ ಹೆಚ್ಚಿಗೆ ಹೇಳದೆ ಕೆಲವೇ ಮಾತುಗಳನ್ನಾಡುತ್ತೇನೆ. ಶ್ರೀ ಸಿದ್ದಯ್ಯನವರು ಒಬ್ಬ ವ್ಯಕ್ತಿಯಲ್ಲ, ಒಂದು ದೊಡ್ಡ ಸಂಸ್ಥೆ. ಅಂದರೆ, ಒಬ್ಬ ಮುಖಂಡರಲ್ಲಿ ಇರಬೇಕಾದ ಎಲ್ಲ ಗುಣ ವಿಶೇಷಗಳೂ ಇವರಲ್ಲಿ ಅಡಗಿದ್ದುವು. ಅವರ ಸರಳ ಜೀವನ ಸಮಸ್ತರಿಗೂ ಆದರ್ಶವಾಗಿತ್ತು. ಕಳೆದ 20 ವರ್ಷಗಳಿಂದಲೂ ಅವರ ಮನೆಯು ಒಂದು ಆಶ್ರಮದೋಪಾದಿಯಲ್ಲಿತ್ತು. ಯಾವಾಗಲೂ ಅವರ ಮನೆ 20-30 ಮಂದಿ ವಿದ್ಯಾರ್ಥಿಗಳಿಗೆ ಆಶ್ರಯವಾಗಿತ್ತು. ಯಾರಾದರೂ ಬಡಬಗ್ಗರು ಒಂದು ಕೋರ್ಟಿಗೆ ಕೇಸ್ ಬಗ್ಗೆಯಾಗಲಿ ಅಥವಾ ಮತ್ತಾವ ವಿಚಾರದಲ್ಲಾಗಲಿ ಇವರ ಬಳಿಗೆ ಬಂದು ಸಹಾಯವನ್ನಪೇಕ್ಷಿಸಿದರೆ, ಅದನ್ನು ನಿಸ್ಪೃಹತೆಯಿಂದ ಒಂದು ಕಾಸು ಫೀಜು ಸಹ ಅಪೇಕ್ಷಿಸದೆ ಕೆಲಸ ನಿರ್ವಹಿಸಿ ತಮ್ಮ ಕೈಲಾದ ಸಹಾಯ ಮಾಡುತ್ತಿದ್ದರು. ಬೆಂಗಳೂರಿನಲ್ಲಿ ಸಹ ಅವರ ಮನೆಯು ಸಕಲರಿಗೂ ಆಶ್ರಯವಾಗಿತ್ತು. ಯಾರೇ ಅವರ ಮನೆಗೆ ಹೋಗಲಿ, ಅವರನ್ನು ಉಪಚರಿಸಿ ಅವರ ಕಷ್ಟಗಳಲ್ಲಿ ಸಹಾನುಭೂತಿಯನ್ನು ತೋರಿ ಸಹಾಯವನ್ನು ಧಾರಾಳವಾಗಿ ಮಾಡುತ್ತಿದ್ದರು ; ಅವರಂತೆ ಸರಳ ಜೀವನ ಜರುಗಿಸಬೇಕೆಂಬುದೇ ಅವರ ಆಶಯವಾಗಿತ್ತು. ಅವರದು ಯಾವಾಗಲೂ ನಿರಾಳ ಮನಸ್ಸು. ಇವರು ಯಾವುದೇ ಕಾರ್ಯ ಕೈಗೊಳ್ಳಲಿ ತಮ್ಮದೇ ಒಂದು ಹಾದಿ ಹಿಡಿದು ಅದು ಸರ್ವರಿಗೂ ಮಾರ್ಗದರ್ಶಕವಾಗುವಂತೆ ಮಾಡುತ್ತಿದ್ದರು. ಇಂಥ ಅಪೂರ್ವವ್ಯಕ್ತಿಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ, ಇಂತ ಅಮೂಲ್ಯ ವ್ಯಕ್ತಿಯನ್ನು ಕಳೆದುಕೊಂಡ / ಅವರ ಕುಟುಂಬವರ್ಗಕ್ಕೆ / ದುಃಖ ಸಹಿಷ್ಣುತೆಗೆ ,ಸರ್ವಶಕ್ತಿಯನ್ನು ಕೊಡಲ / ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಮಾನ್ಯ ಅಧ್ಯಕ್ಷರೇ, ದಿವಂಗತ ಶ್ರೀ ಎಚ್. ಸಿದ್ದಯ್ಯನವರ ವಿಚಾರದಲ್ಲಿ ನಾನೇನೂ ಹೆಚ್ಚು ಮಾತನಾಡಬೇಕಾದ ಸಂದರ್ಭವಿಲ್ಲ. ಆ ಪ್ರಮೇಯವೂ ಇಲ್ಲ. ಆದರೂ ಅವರ ಗುಣಗಾನ ಮಾಡಿ ಅವರಂತೆ ಇತರರೂ ನಡೆಯಬೇಕಾದ ಪೂರ್ಣ ಜವಾಬ್ದಾರಿ ಎಲ್ಲರ ಮೇಲೆಯೂ ಇದೆ ಎಂದು ಹೇಳಿದರೆ ಸಾಕು. ಶ್ರೀ ಸಿದ್ದಯ್ಯನವರು ಇಂದಿನ ಪ್ರಮುಖ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ ಸಂಸ್ಥೆಯ ಮೇಲ್ಮೆಗಾಗಿ ಅವಿಚ್ಛಿನ್ನವಾಗಿ ದುಡಿದು ಮೈಸೂರು ಸಂಸ್ಥಾನದಲ್ಲಿ ಆ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷ ಪೀಠವನ್ನು ಸಹ ಅಲಂಕರಿಸಿದ್ದರು. ಈ ಸಂಸ್ಥೆಯನ್ನು ಬಲಪಡಿಸಲು ಬಹಳ ವರ್ಷಗಳ ಕಾಲ ಶ್ರಮಿಸಿದರು. ಈ ಸಂಸ್ಥೆಯ ಅಧ್ಯಕ್ಷರಾಗಿದ್ದಾಗ ಸಂಸ್ಥಾನಾದ್ಯಂತವೂ ಸಂಚರಿಸಿ ಜನತೆಯನ್ನು ಹುರಿದುಂಬಿಸಿ ಅವರಿಗೆಲ್ಲಾ ರಾಜಕೀಯ

ಜ್ಞಾನವನ್ನು ನೀಡಿರುತ್ತಾರೆ. ಅವರ ಕಾಲದಲ್ಲಿ ದೇಶದ ಜನತೆಗೆ ಬಹಳ ಅನುಕೂಲ ದೊರೆತಿದೆ. ಇಡೀ ದೇಶದಲ್ಲಿ ಅಷ್ಟೊಂದು ಜನರ ಮನ್ನಣೆಗೆ ಪಾತ್ರರಾದ ವ್ಯಕ್ತಿ ಅತಿ ವಿರಳವೆಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ದೇಶದ ಸ್ವಾತಂತ್ರ್ಯ ಹೋರಾಟಕ್ಕಾಗಿ ಹಗಲಿರುಳೂ ಅವಿಶ್ರಾಂತವಾಗಿ ಶ್ರಮಿಸಿ, ಸ್ವಾತಂತ್ರ್ಯ ದೊರೆತ ಮೇಲೆ ಮೊದಲ ಮಂತ್ರಿಮಂಡಲದಲ್ಲಿ ಹೆಚ್ಚಿನ ಸೇವೆ ಸಲ್ಲಿಸಿರುತ್ತಾರೆ. ಸಾರ್ವತ್ರಿಕ ಚುನಾವಣೆ ಆದಮೇಲೆ ಮೊದಲನೆಯ ಪ್ರಜಾಪ್ರತಿನಿಧಿ ಸಭೆಯ ಮೊದಲನೆಯ ಅಧ್ಯಕ್ಷರಾಗಿ ಇವರು ಕೆಲಸ ಮಾಡಿರುತ್ತಾರೆ. ಅವರ ಗುಣ ವಿಶೇಷದಲ್ಲಿದ್ದ ಮತ್ತೊಂದು ವೈಶಿಷ್ಟ್ಯವನ್ನು ತಮಗೆ ತಿಳಿಸಬೇಕಾಗಿದೆ. ಅವರು ಮಹಾದಾನಿಗಳು—ಕೆಲವು ಸಂದರ್ಭದಲ್ಲಿ ಅವರು ಎದುರು ಪಕ್ಷದ ಕಕ್ಷಿಗಾರರಿಗೆ ಅನ್ನ ದೊರಕುವುದು ಕಷ್ಟವಾಗಿದ್ದಾಗ ಸಹ ಅವರಿಗೂ ತಮ್ಮ ಮನೆಯಲ್ಲಿ ಅನ್ನ ನೀಡಿದ್ದಾರೆ. ಎಂಥ ಕಠಿಣ ಮನೋಭಾವವುಳ್ಳವರೇ ಆಗಿದ್ದರೂ ಬಹು ಬೇಗ ಅವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುತ್ತಿದ್ದರು. ಇಂಥ ಕನಿಕರ ಸ್ವಭಾವವುಳ್ಳ ವ್ಯಕ್ತಿ ಅಪರೂಪ. ಇವರು ರೋಗಗ್ರಸ್ತರಾಗಿ ಆಸ್ಪತ್ರೆಗೆ ದಾಖಲಾದ 24 ಗಂಟೆಗಳೊಳಗಾಗಿ ಅಕಾಲಮೃತ್ಯುವಶರಾದರು. ಅವರ ಖಾಯಿಲೆ ಏನು ಎಂಬುದನ್ನು diagnose ಮಾಡುವುದಕ್ಕೂ ವೈದ್ಯರಿಗೆ ಕಾಲಾವಕಾಶ ದೊರಕಲಿಲ್ಲ. ಇಂಥ ಗಣ್ಯ ವ್ಯಕ್ತಿಯ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತನು ಕೊಡಲಿ, ಇವರ ಕುಟುಂಬವರ್ಗಕ್ಕೂ ಮತ್ತು ಬಂಧುಮಿತ್ರರಿಗೂ ಇವರ ನಿಧನದ ಬಗ್ಗೆ ಉಂಟಾಗಿರುವ ದುಃಖವನ್ನು ಸಹಿಸಲು ಸರ್ವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಪ್ರಾರ್ಥಿಸಿ ಈ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಪೂರ್ಣ ಬೆಂಬಲ ನೀಡುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಈ ದಿನ ಶ್ರೀ ಸಿದ್ದಯ್ಯನವರ ವಿಚಾರದಲ್ಲಿ ಸಂತಾಪ ಸೂಚನೆ ನಡೆಯುತ್ತಿದೆ. ಅನೇಕರು ಅವರ ನಡೆ ನುಡಿ, ಅವರ ಸ್ವಭಾವದ ಬಗ್ಗೆ ಬಹುವಾಗಿ ಮಾತನಾಡಿರುತ್ತಾರೆ. ನಾನು ಅವರೊಡನೆ ಆಗಾಗ ಸ್ವಲ್ಪ ಕಾಲ ಕಳೆದಿದ್ದೇನೆ. ಅವರಿಂದ ನಾವು ತಿಳಿದುಕೊಳ್ಳಬೇಕಾದ ಅನೇಕ ಅಂಶಗಳಿದ್ದುವು. ಅವರು ದೇಶ ಸೇವೆಗಾಗಿ ಹಗಲಿರುಳೂ ದುಡಿದು ಆ ಬಗ್ಗೆ ಅಗಾಧ ಪ್ರಗತಿ ಸಾಧಿಸಿ ಇಂದು ನಮ್ಮನ್ನಗಲಿ ಕಣ್ಮರೆಯಾಗಿದ್ದಾರೆ. ಇಷ್ಟಾದರೂ ಇವರು ತಮ್ಮ ಕುಟುಂಬ ವರ್ಗದ ಮೇಲ್ಮೆಗಾಗಿ ಯಾವ ಸೌಲಭ್ಯವನ್ನೂ ಮಾಡಲಿಲ್ಲ. ಒಂದು ಇರುವೆಯಾದರೂ ಬೇಸಿಗೆ ಕಾಲದಲ್ಲಿ ಅವಿಶ್ರಾಂತವಾಗಿ ದುಡಿದು ಮಳೆಗಾಲದಲ್ಲಿ ತನ್ನ ಕುಟುಂಬ ವರ್ಗಕ್ಕೆ ಬೇಕಾದ ಸೌಲಭ್ಯಗಳನ್ನೆಲ್ಲಾ ಕಲ್ಪಿಸಿಕೊಳ್ಳುತ್ತದೆ. ಇಂಥದರಲ್ಲಿ ದೇಶದ ಮಹಾನಾಯಕರೆಂದು ಹೆಸರುಗಳಿಸಿದ್ದ ಇವರು ತಮ್ಮ ಕುಟುಂಬ ವರ್ಗಕ್ಕೆ ಏನನ್ನೂ ಸಹ ಕಲ್ಪಿಸಿಕೊಡಲಿಲ್ಲ. ಇದನ್ನು ನಮ್ಮ ಸಭಾನಾಯಕರು ಮನಗಂಡು ಈ ಬಗ್ಗೆ ಅವರ ಕುಟುಂಬವರ್ಗಕ್ಕೆ ಹೆಚ್ಚಿನ ಸಹಾಯವನ್ನು ಕಲ್ಪಿಸಿಕೊಟ್ಟಿರುತ್ತಾರೆ ಎಂಬ ಅಂಶವನ್ನು ನಾನು ಈ ಸಮಯದಲ್ಲಿ ತಿಳಿಸಬೇಕಾಗಿದೆ. ಇಷ್ಟೇ ಅಲ್ಲದೆ, ಅವರ ಇತರ ಎಲ್ಲ ಯೋಗಕ್ಷೇಮದ ಬಗ್ಗೆ ಸಹ ಆಗಿಂದಾಗ್ಗೆ ವಿಚಾರಿಸಿಕೊಳ್ಳುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಶ್ರೀ ಸಿದ್ದಯ್ಯನವರ ಫೋಟೋ ಒಂದನ್ನು ಈ ಸಭಾಂಗಣದಲ್ಲಿ ಅನಾವರಣ ಮಾಡಿಸುವುದು ಸೂಕ್ತವೆಂಬ ಸೂಚನೆಯನ್ನು ಸಹ ಕೊಡಲಿಚ್ಛಿಸುತ್ತೇನೆ. ಈ ದಿನ ಶ್ರೀ ಸಿದ್ದಯ್ಯನವರ ಗುಣಕಥನವನ್ನು ಇಷ್ಟೊಂದು ಮಂದಿ ಮಾಡಿರುವುದು, ಇವರು ಒಬ್ಬ ಮಹಾವ್ಯಕ್ತಿಯೆಂಬುದನ್ನು ವ್ಯಕ್ತಪಡಿಸುತ್ತದೆ. ಇವರ ಗುಣಕಥನವನ್ನು ಈಗಾಗಲೇ ಈ ಸಭಾಧ್ಯಕ್ಷರೂ, ಈ ಸಭಾನಾಯಕರೂ ಬಹುವಾಗಿ ಮಾಡಿರುತ್ತಾರೆ. ಇವರ ನಿಧನದಿಂದ ದೇಶಕ್ಕೇ ಅಪಾರ ನಷ್ಟವುಂಟಾಗಿದೆ. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ, ಇವರ ಕುಟುಂಬ ವರ್ಗಕ್ಕೆ ಈ ಬಗ್ಗೆ ಉಂಟಾಗಿರುವ ದುಃಖವನ್ನು ಸಹಿಸಲು ಭಗವಂತನು ಸರ್ವಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ, ಈ ವಿಚಾರವಾಗಿ ನಾಲ್ಕು ಮಾತುಗಳನ್ನಾಡಲು ಕಾಲಾವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ಈಗಾಗಲೇ ಶ್ರೀ ಸಿದ್ದಯ್ಯನವರ ವಿಷಯದಲ್ಲಿ ಅನೇಕ ಮಹನೀಯರು ಮಾತನಾಡಿದ್ದಾರೆ. ಅವರ ನಿಧನದಿಂದ ದೇಶಕ್ಕೆ ಅಪಾರವಾದ ನಷ್ಟ ಉಂಟಾಗಿರತಕ್ಕದ್ದು ಜನಜನಿತವಾಗಿದೆ. ಅವರು ಸಾರ್ವಜನಿಕ ಜೀವನದಲ್ಲಿ ಹೇಗೆ ಕೆಲಸ ಮಾಡಬೇಕು ಎಂಬುದನ್ನು ನಮಗೆ ತೋರಿಸಿಕೊಟ್ಟಿದ್ದಾರೆ. ನಾವೆಲ್ಲಾ ಸಿದ್ದಯ್ಯನವರ ವಿಷಯದಲ್ಲಿ ಗೌರವ ತೋರಿಸಬೇಕೆಂದಿದ್ದಲ್ಲಿ, ಅವರು ತ್ರಿಕರಣಶುದ್ಧವಾಗಿ 'ಅವರು ಸಮಾಜ ಸೇವೆಯನ್ನು ಯಾವ ರೀತಿ ಮಾಡಿದರೋ ಅದೇ ರೀತಿ ತ್ರಿಕರಣಶುದ್ಧವಾದ ಸಮಾಜ ಸೇವೆ ಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ಸಿದ್ದಯ್ಯನವರಿಗೆ ಗೌರವ ತೋರಿಸಿದಂತೆ ಆಗುತ್ತದೆ. ಅವರು ಸುಮಾರು 35 ವರ್ಷಗಳು ರಾಜಕೀಯ ಜೀವನದಲ್ಲಿ ಅದ್ವಿತೀಯವಾಗಿ ಕೆಲಸಮಾಡಿದ್ದಾರೆ. ಜಿಲ್ಲಾಬೋರ್ಡಿನ ಅಧ್ಯಕ್ಷರಾಗಿ ಕೆಲಸಮಾಡಿದರು ; ಸಂಸ್ಥಾನದ ಮಂತ್ರಿಗಳಾಗಿ ಕೆಲಸಮಾಡಿದರು; ಈ ಸಭೆಯ ಅಧ್ಯಕ್ಷರಾಗಿ ಕೆಲಸಮಾಡಿದರು. ಸಾಯುವಾಗ ಹುಟ್ಟಿದಾಗ ಯಾವ ರೀತಿ ಬಂದರೋ ಅದೇ ರೀತಿ ಹೋದರು. ಇದು ದೇಶಕ್ಕೆ ಮಾದರಿಯಾಗಿರುವುದಲ್ಲದೆ ಆದರ್ಶವಾಗಿದೆ. ಅವರ ಚರಿತ್ರೆ ಎಲ್ಲರಿಗೂ ಗೊತ್ತಾದ ವಿಷಯ. ಅಂತಹ ಮಹನೀಯರು ಇಡೀ ನಮ್ಮ ಸಂಸ್ಥಾನದಲ್ಲೇ ಅಲ್ಲ, ಭರತ ಖಂಡದಲ್ಲಿ ಯಾರಾದರೂ ಇದ್ದಾರೆಯೇ ಎಂದು ಪ್ರಶ್ನೆ ಮಾಡುತ್ತೇನೆ. ಇಷ್ಟೆಲ್ಲಾ ವ್ಯವಹಾರ ಮಾಡಿ ಕೊನೆಗೆ ಯಾವ ರೀತಿ ಹುಟ್ಟಿ ಬಂದರೋ ಅದೇ ರೀತಿ ಅವರು ಹೋದರು. ಅವರ ರಾಜಕೀಯ ಜೀವನ, ಸಮಾಜ ಸೇವಾ ಜೀವನ ಬಹಳ ಪರಿಶುದ್ಧವಾದದ್ದು. ಅದೇ ರೀತಿ ಪರಿಶುದ್ಧವಾದ ಸಮಾಜ ಸೇವೆ ಮಾಡಬೇಕು ಎಂಬುದನ್ನು ಮನಸ್ಸಿಗೆ ತಂದುಕೊಂಡು ನಾವು ನಡೆದರೆ ಪೂಜ್ಯ ಸಿದ್ದಯ್ಯನವರಿಗೆ ಗೌರವ ಸೂಚಿಸಿದಂತಾಗುತ್ತದೆ. ಈ ವಿಷಯ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರದಲ್ಲೂ ಸಮಾಜ ಸೇವಕರು ಅವರ ಆದರ್ಶವನ್ನು ಮುಂದೆ ಇಟ್ಟುಕೊಂಡು, ಸಮಾಜ ಸೇವೆಮಾಡಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ನಮಗೆ ದೊಡ್ಡ ವ್ಯಸನವೆಂದರೆ ಸಿದ್ದಯ್ಯನವರ ಸೇವೆ ಯಾವ ಕಾಲದಲ್ಲಿ ಅತ್ಯವಶ್ಯಕವಾಗಿತ್ತೋ ಅಂಥ ಕಾಲದಲ್ಲಿ ಅವರು ಇಲ್ಲದೇ ಹೋದದ್ದು ಬಹಳ ವ್ಯಸನಕರ. ಸಿದ್ದಯ್ಯನವರು ಬಹಳ ಬುದ್ಧಿವಂತರೂ, ಹೆಚ್ಚು ವ್ಯವಹಾರ ಜ್ಞಾನವುಳ್ಳವರೂ, ಮತ್ತು ಹೆಚ್ಚಿನ ಅನುಭವಿಗಳೂ ಆಗಿದ್ದರು. ಅವರಂಥ ರಾಜಕೀಯ ಧುರೀಣರು ಸಿಕ್ಕುವುದು ಬಹಳ ಕಷ್ಟ. ಅನುಭವ ಎನ್ನುವುದು ದುಡ್ಡು ಕೊಟ್ಟರೆ ಸಿಕ್ಕುವುದಿಲ್ಲ. ನಮ್ಮ ದೇಶದಲ್ಲಿರತಕ್ಕ ಕಷ್ಟ ಪರಿಸ್ಥಿತಿಯನ್ನು ಎದುರಿಸಲು ಬಹಳ ಅನುಭವಿಗಳಾದ ರಾಜಕಾರಣಿಗಳು ಬೇಕು. ನಮ್ಮ ದೇಶದಲ್ಲಿ ಇಂಥ ಸಮಯದಲ್ಲಿ ಬಹಳ ವಿಶೇಷ ರೀತಿಯ ಅನುಭವವುಳ್ಳವರಾಗಿದ್ದ ಸಿದ್ದಯ್ಯನವರು ನಮ್ಮನ್ನು

(ಶ್ರೀ ಎಚ್. ಎಂ. ಚನ್ನಬಸಪ್ಪ)

ಅಗಲಿದ್ದರಿಂದ ಅವರ ಒಂದು ಸೇವೆ ದೇಶಕ್ಕೆ ಇಲ್ಲದಂತಾಯಿತಲ್ಲಾ ಎಂದು ಬಹಳ ವ್ಯಸನಪಡಬೇಕಾಗಿದೆ. ಒಟ್ಟಿನಲ್ಲಿ ಶ್ರೀ ಸಿದ್ದಯ್ಯನವರು ನಮಗೆ ತೋರಿಸಿರುವಂತೆ ತ್ರಿಕರಣಶುದ್ಧವಾದ ರೀತಿಯಲ್ಲಿ ಸೇವೆ ಮಾಡಬೇಕೆಂಬುದೇ ನನ್ನ ಆಸೆ. ಅದರಂತೆ ನಡೆದುಕೊಂಡು ಗೌರವ ಸೂಚನೆ ಮಾಡಬೇಕೆಂದು ಪ್ರಾರ್ಥನೆ ಮಾಡಿ, ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತೇನೆ.

Mr. DEPUTY SPEAKER.—I wish to associate myself with the sentiments of sorrow expressed by the Leader of the House and the other Hon'ble Members who have spoken just now. The late Mr. Siddaiya was one of the earliest to join the Congress. He soon became an accepted leader. He was also the President of the Congress. He gave up an active and lucrative practice at the bar and underwent considerable sufferings for the convictions he held. Both his wife and himself sacrificed money and comforts for the cause which they held so dear to themselves. When the first responsible Government was formed, the choice for a ministership naturally fell on him.

I have been closely associated with him ever since I entered the Congress. We were together on the Working Committee. We were together in the Ministry. He was always kind and generous towards me. His death has been a great personal loss to me.

He was the first Speaker after the General Elections. He possessed all the qualities which are necessary for an ideal Speaker. He was gentle and sweet-tempered. At the same time he was firm and insisted on respect for law and order. He had an extraordinary memory. His rulings were marked by learning and a knowledge of the practice and precedents of other Legislatures. He was fair, just and impartial. Many of his rulings, being the first to be delivered under the new Constitution, will form, I am sure, valuable precedents for the future.

I request you all kindly to stand in silence for two minutes in memory of Sri Siddaiya to express our respect for him.

(The House stood in silence for two minutes).

Late Sri Channanarasimhaiya.

Mr. DEPUTY SPEAKER.—There is another reference in respect of late Mr. Channanarasimhaiya.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು)—ಸ್ವಾಮಿ, ಈ ಹಿಂದೆ ಇದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬ ಮಾನ್ಯ ಸದಸ್ಯರಾಗಿದ್ದ ಶ್ರೀಮಾನ್ ಚನ್ನನರಸಿಂಹಯ್ಯನವರು ದೈವಾಧೀನರಾಗಿದ್ದಾರೆ. ಅವರ ವಿಷಯದಲ್ಲೂ ಕೂಡ ಸಂತಾಪ ಸೂಚನೆಯನ್ನು ಮಾಡತಕ್ಕ ಉದ್ದೇಶದಿಂದ ಎದ್ದು ನಿಂತಿದ್ದೇನೆ. ಇಲ್ಲಿ ಅನೇಕ ಮಂದಿ ಹಿಂದಿನ ಪ್ರಜಾಪ್ರತಿನಿಧಿ ಸಭೆಯಲ್ಲೂ ಕೂಡ ಸದಸ್ಯರಾಗಿದ್ದರು. ಚನ್ನನರಸಿಂಹಯ್ಯನವರು ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಲ್ಲದೇ ಇದ್ದರೂ ಕೂಡ ಅದ್ವಿತೀಯವಾದ ಸೇವೆಯನ್ನು ಆ ಶಾಸನ ಸಭೆಯಲ್ಲಿ ಮಾಡಿದ್ದನ್ನು ನಾನು ಕಣ್ಣಾರೆ ನೋಡಿದವನಾಗಿದ್ದೇನೆ. 1945-46ನೇ ಇಸವಿಯಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಘೋರವಾದ ಹೋರಾಟ ನಡೆಯುತ್ತಾ ಇದ್ದ ಪ್ರಸಂಗಗಳು ಆಗ ಒದಗುತ್ತಾ ಇದ್ದವು. ಮುಖ್ಯವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಆ ಪ್ರಸಂಗಗಳು ಒದಗುತ್ತಾ ಇದ್ದವು. ಆಗ ವಿರೋಧಪಕ್ಷವಾಗಿದ್ದ ಕಾಂಗ್ರೆಸ್ ಪಕ್ಷಕ್ಕೂ, ಸರ್ಕಾರದ ಬೆಂಬಲಿಗರಿಗೂ ಅನೇಕ ಸಲ ಈ ಶಕ್ತಿಯ ಅಳತೆ ಆಗತಕ್ಕ ಸಂಭವ ಬರುತ್ತಾ ಇತ್ತು. ಕಾಂಗ್ರೆಸ್ ಪಾರ್ಟಿ ಆಗ 300 ಜನ ಸದಸ್ಯರಿದ್ದ ಸಭೆಯಲ್ಲಿ ಮೈನಾರಿಟಿ ಪಾರ್ಟಿ ಆಗಿತ್ತು; 120 ಜನ ಮಾತ್ರ ಇದ್ದರು. ಆದರೆ ಅನೇಕ ಮಾನ್ಯ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ಸೇರದೇ ಇದ್ದರೂ ಕೂಡ ಕಾಂಗ್ರೆಸ್ ಯಾವ ಧ್ಯೇಯಕ್ಕಾಗಿ ಹೋರಾಡುತ್ತಾ ಇತ್ತೋ ಆ ಧ್ಯೇಯಗಳನ್ನು ಅವರೂ ಎತ್ತಿ ಹಿಡಿದು ಪ್ರಜಾಪ್ರತಿನಿಧಿ ಸಭೆಯ ಸ್ವಾತಂತ್ರ್ಯಕ್ಕೆ ಮತ್ತು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಬೆಂಬಲ ಕೊಟ್ಟಿದ್ದಾರೆ. ಆ ರೀತಿ ಉದಾತ್ತ ಮನಸ್ಸಿನಿಂದ ಸ್ವಾತಂತ್ರ್ಯಕ್ಕಾಗಿ ಕೆಲಸಮಾಡಿ ಸಹಾಯಮಾಡಿದ ಮಾನ್ಯ ಸದಸ್ಯರು ಹಿಂದೆ ಅಲ್ಲಿ ಇದ್ದವರು ಇಲ್ಲೂ ಅನೇಕರು ಇದ್ದಾರೆ. ಒಂದು ಪ್ರಸಂಗ ನಡೆಯಿತು. ಒಂದು ದಿವಸ ದಿವಾನ್ ಸರ್ ರಾಮಸ್ವಾಮಿ ಮೊದಲಿಯಾರ್‌ರವರು ಇದ್ದಾಗ ಬಿಲ್ಲುಗಳನ್ನೆಲ್ಲಾ ಸೋಲಿಸಿ ಸರ್ಕಾರಕ್ಕೆ ಜನರ ಬೆಂಬಲವಿಲ್ಲ ಎಂದು ಹೇಳಿ ತೋರಿಸಿಕೊಡಬೇಕಾದ ನೀತಿಯನ್ನು ಅನುಸರಿಸಬೇಕಾಯಿತು. ಓಟು ಎಣಿಕೆ ಆದಾಗ ಒಂದು ಬಿಲ್ಲಿನ ಮೇಲೆ ಸಮಸಮ ಓಟು ಬಂತು. ಆಗ ಚನ್ನನರಸಿಂಹಯ್ಯನವರು ಸ್ವಪ್ರೇರಿತರಾಗಿ ಹೊರಗಡೆ ಇದ್ದವರು ಅಸೆಂಬ್ಲಿ ಒಳಗೆ ಬಂದು ನಾನು ಇದಕ್ಕೆ ವಿರೋಧವಾಗಿ ಓಟು ಮಾಡುತ್ತೇನೆ ಎಂದು ಓಟು ಮಾಡಿದರು; ಆ ಒಂದು ಓಟಿನಿಂದ ಅವೊತ್ತಿನ ದಿವಸ ಸರ್ಕಾರದ ಸೋಲಾಯಿತು. ಅವರಿಗೆ ಸದಾ ಸರ್ಕಾರದಲ್ಲಿ ದಾಕ್ಷಿಣ್ಯ ಇದ್ದರೂ ಕೂಡ ದೇಶಭಕ್ತಿ, ಸ್ವಾತಂತ್ರ್ಯ ಪ್ರೇಮ ಎಂಬುದು ಅವರನ್ನು ಸೆಳೆದುಕೊಂಡು ಬಂದು ಕೊನೆ ಘಳಿಗೆಯಲ್ಲಿ ಬಿಲ್ಲು ಬಿದ್ದು ಹೋಗಿ ಸ್ವಾತಂತ್ರ್ಯಕ್ಕಾಗಿ ಹೂಡಿದ ಕಾರ್ಯ ಜಯವಾಗುವ ಹಾಗೆ ಮಾಡಿಸಿತು. ಅದನ್ನು ಯಾವಾಗಲೂ ನಾವು ಸ್ಮರಿಸಿಕೊಳ್ಳಬೇಕು. ಅಂಥ ಮಹನೀಯರಾದ ಸದಸ್ಯರು ದೈವಾಧೀನರಾಗಿರತಕ್ಕದ್ದನ್ನು ಈ ಸಭೆಯಲ್ಲಿ ಸ್ವಾತಂತ್ರ್ಯದ ಫಲವನ್ನು ಅನುಭವಿಸುತ್ತಾ ಇರತಕ್ಕ ನಾವು ಸ್ಮರಿಸಿಕೊಳ್ಳಬೇಕಾಗಿದೆ. ನಾವು ಅವರಿಗೆ ಚಿರಋಣಿಗಳಾಗಿರಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಅವರು ಮಾಗಡಿ ಟೌನ್‌ನಲ್ಲಿ ಇದ್ದು ಅಲ್ಲಿ ದೊಡ್ಡ ಪ್ರಖ್ಯಾತ ಮುಖಂಡರಾಗಿದ್ದರು. ಬಹಳ ಕಾಲ ಮುನಿಸಿಪಲ್ ಪ್ರೆಸಿಡೆಂಟರಾಗಿ ಅವರು ಸೇವೆಯನ್ನು ಸಲ್ಲಿಸಿದರು. ಇನ್ನೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಆ ತಾಲ್ಲೂಕು, ಡಿಸ್ಟ್ರಿಕ್ಟಿನಲ್ಲೂ ಕೂಡ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ. ಮತ್ತು ನಾವುಗಳೆಲ್ಲಾ ನಮ್ಮ ಸಹಾನುಭೂತಿಯನ್ನು ಅವರ ಕುಟುಂಬದವರಿಗೆ ಸಲ್ಲಿಸೋಣ ಎಂದು ತಮ್ಮಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಶ್ರೀಮಾನ್ ಚನ್ನನರಸಿಂಹಯ್ಯನವರು ನನಗೂ ಪರಿಚಿತರಾಗಿದ್ದರು. ಅವರು ಹಿಂದೆ ಅಸೆಂಬ್ಲಿಯಲ್ಲಿದ್ದಾಗ್ಗೆ ನನಗೂ ಅವರಿಗೂ ವಿಶ್ವಾಸ ಚೆನ್ನಾಗಿತ್ತು. ಮಾಗಡಿ ಅವರ ಸ್ಥಳ. ಸ್ನೇಹಿತರಲ್ಲಿ ಅವರು ಬಹಳ ವಿಶಾಲಹೃದಯದಿಂದ ಇದ್ದವರು. ಬಹಳ ದೊಡ್ಡ ಮನುಷ್ಯರು. ಅವರ ನಿಧನದಿಂದ ಮಾಗಡಿ ಮುನಿಸಿಪಾಲಿಟಿಗೇ ಅಲ್ಲ, ಮೈಸೂರು ದೇಶಕ್ಕೇ ಬಹಳವಾಗಿ ನಷ್ಟವಾಗಿದೆ. ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲ ಎಂದು ಕೊರುತ್ತೇನೆ.

ಅವರ ಜೊತೆಗೆ ಶ್ರೀಮಾನ್ ವೆಂಕಟಸ್ವಾಮಿಗೌಡರ ನಿಧನಕ್ಕಾಗಿಯೂ ಕೂಡ ಸಂತಾಪ ಸೂಚಿಸಬೇಕಾಗಿದೆ. ಅವರು ಮಾಲೂರು ತಾಲ್ಲೂಕಿನವರು. ಅವರೂ ಸಹ ಹಿಂದೆ ಅಸೆಂಬ್ಲಿಯಲ್ಲಿ ಸದಸ್ಯರಾಗಿದ್ದರು. ಬಹಳ ದಿನ ಸದಸ್ಯರಾಗಿದ್ದು ತಮ್ಮ ಕೈಲಾದ ಸೇವೆಯನ್ನು ದೇಶಕ್ಕೆ ಸಲ್ಲಿಸಿದ್ದಾರೆ. ಅವರು ಬಹಳ ಅನುಭವಸ್ಥರು, ಬಹಳ ದೊಡ್ಡ ಮನುಷ್ಯರು. ಅಂತಹ ಅನುಭವಸ್ಥ ವ್ಯಕ್ತಿಗಳ ಸೇವೆ ನಮ್ಮ ದೇಶದಲ್ಲಿ ಇಲ್ಲದಹಾಗಾಯಿತಲ್ಲಾ ಎಂದು ನಮಗೆಲ್ಲರಿಗೂ ವ್ಯಸನವಾಗಿದೆ. ಇಂತಹವರ ನಿಧನಕ್ಕಾಗಿ ನಮ್ಮ ಅಸೆಂಬ್ಲಿಯವರು ಎರಡು ನಿಮಿಷ ಮೌನದಿಂದ ನಿಂತುಕೊಂಡು ಸಂತಾಪವನ್ನು ಅರ್ಪಿಸೋಣ.

The House stood in silence for two minutes.

Mr. DEPUTY SPEAKER.—The House will now adjourn and meet tomorrow at 12 O'Clock.

The House adjourned at Three of the Clock to meet again at Twelve of the Clock on the next day, Tuesday 12th October 1954.

WD 3539—GPB—550—22-10-54

MYSORE LEGISLATIVE ASSEMBLY

SECOND DAY

Tuesday, 12th October 1954

The House met in the Assembly Hall, Old Public Offices, Bangalore, at Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS.

Alleged molestation of women by Police in Talagunda Village.

Q.—525. **Sri S. GOPALA GOWDA** (Sagar-Hosanagar).—

Will the Government be pleased to state :—

(*a*) whether the recent 'case of molestation of women by the police in Talagunda Village, Shiralkoppa Taluk, Shimoga District, has come to their notice ;

(*b*) whether a public enquiry would be held in this connection ?

A.—**Sri H. SIDDAVEERAPPA** (Minister for Home and Industries).—

(*a*) and (*b*) The matter is *sub judice* and hence no reply can be furnished.

ಶ್ರೀ ಎಸ್. ಗೋಪಾಲಗೌಡ.—ಈಗ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಾ ಇರುವುದು ಯಾವ ಸಂದರ್ಭದಲ್ಲಿ ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ raid party ಯವರನ್ನು ಕೆಲವರು ಸೇರಿಕೊಂಡು ಹೊಡೆದು, ಬಡಿದು ಸಂಚಾರಕ್ಕೆ ಅಡಚಣೆ ಮಾಡಿದರು ಎಂದು ಕೇಸು ನಡೆಯುತ್ತಾ ಇದೆ.

ಶ್ರೀ ಎಸ್. ಗೋಪಾಲಗೌಡ.—Raid ಆದ ಮಾರನೆ ದಿವಸ ಪೋಲೀಸ್‌ನವರು ಸ್ತ್ರೀಯರಮೇಲೆ ಅತ್ಯಾಚಾರ ಮಾಡಿದ ಬಗ್ಗೆ ಸರ್ಕಾರಕ್ಕೆ ಏನಾದರೂ ವರದಿ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಕೆಲವು ಪತ್ರಿಕೆಗಳಲ್ಲಿ ವರದಿ ಆಗಿತ್ತು. ಅದನ್ನು ತನಿಖೆ ಮಾಡಿ ನೋಡಿಸಿದ್ದರಲ್ಲಿ ಅದೆಲ್ಲಾ ಸುಳ್ಳು ಎಂದು ಗೊತ್ತಾಯಿತು.

ಶ್ರೀ ಎಸ್. ಗೋಪಾಲಗೌಡ.—ಈ ತನಿಖೆಯನ್ನು ಯಾರು ಮಾಡಿದರು ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಡಿ.ಐ.ಜಿ. ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮಾಡಿದರು.

ಶ್ರೀ ಎಸ್. ಗೋಪಾಲಗೌಡ.—ಡಿ.ಐ.ಜಿ. ಅವರ ವರದಿಯ ಒಂದು ಪ್ರತಿಯನ್ನು ಈ ಸಭೆಯ ಮುಂದೆ ಇಡಲು ಸಾಧ್ಯವೇ ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಅದು ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಡಿ.ಐ.ಜಿ. ಯವರು ದಾಳಗುಂದ ಪ್ರಾಂತ್ಯಕ್ಕೆ ಹೋಗಿ ಅಲ್ಲಿ ತನಿಖೆ ಮಾಡಿದರು ಎಂದು ತಿಳಿಸಿದಿರಿ. ಅವರು ಯಾವರೀತಿ ತನಿಖೆಯನ್ನು ಅಲ್ಲಿ ನಡೆಸಿದರು ?

ಶ್ರೀ ಎಚ್. ಸಿದ್ದವೀರಪ್ಪ.—ವಿಚಾರಣೆ ಮಾಡಿದರು. ಯಾರು ಈ ವಿಚಾರದಲ್ಲಿ ಒಂದು ದೂರು ಕೊಟ್ಟು ಪತ್ರಿಕೆಗಳಲ್ಲಿ ಹಾಕಿಸಿದರೋ ಅವರನ್ನೂ ಮತ್ತು ಯಾರಾರನ್ನು ಅತ್ಯಾಚಾರ ಮಾಡಿದರು ಎಂದು ಹೇಳುತ್ತಾ ಇದ್ದರೋ ಅದಕ್ಕೆ ಸಂಬಂಧಪಟ್ಟವರೆಲ್ಲರನ್ನೂ ಕರೆಸಿ ವಿಚಾರಣೆ ಮಾಡಿದರು.

ಶ್ರೀ ಎಸ್. ಗೋಪಾಲಗೌಡ.—ಆ ವಿಚಾರಣೆ ಮಾಡಿದಾಗ ಅಲ್ಲಿ ಅಂತಹ ಕೃತ್ಯ ನಡೆಯಲಿಲ್ಲ ಎಂದು ಹೇಳಿ ಅವರೆಲ್ಲರೂ ಡಿ.ಐ.ಜಿ. ಅವರಿಗೆ ವರದಿ ಮಾಡಿದ್ದಾರೆಯೇ ಸ್ವಾಮಿ ?

Sri H. SIDDAVEERAPPA.—I am making this statement, Sir, on the distinct understanding that it would not refer to any matter that is now before the court. The matter that is now before the court is about the incident that is said to have taken place on the night of 23rd June 1954. Since the question that is now put by Sri Gopala Gowda relates to an incident that is said to have taken place according to him on the next day, I am making all these statements. I want to make that position very clear.

ಶ್ರೀ ಎಸ್. ಗೋಪಾಲಗೌಡ.—24-6-1954ನೇ ದಿವಸ ತಾಳಗುಂದ ಗ್ರಾಮದಲ್ಲಿ ಪೋಲೀಸರು ನಡೆಸಿದ ಅತ್ಯಾಚಾರದ ಬಗ್ಗೆ ವಿಚಾರಣೆ ನಡೆಯಿತು ಎಂದು ಅಪ್ಪಣೆಕೊಡಿಸಿದಿರಿ. ಆ ವಿಚಾರಣೆ ನಡೆದ ಕಾಲದಲ್ಲಿ

(ಶ್ರೀ ಎಸ್. ಗೋಪಾಲಗೌಡ)

ಎಲ್ಲರೂ ಯಾವ ಅತ್ಯಾಚಾರವೂ ನಡೆಯಲಿಲ್ಲ ಎಂದು ಹೇಳಿ ಹೇಳಿಕೆ ಕೊಟ್ಟಿದ್ದಾರೆಯೇ ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಅತ್ಯಾಚಾರ ನಡೆಸಿದ ಬಗ್ಗೆ ವಿಚಾರಣೆ ನಡೆಯಲಿಲ್ಲ; ಅತ್ಯಾಚಾರ ನಡೆಯಿತು ಎಂಬ ಕೆಲವು ಅಂಶಗಳು ಪ್ರಚಾರ ಆಗಿದ್ದರ ವಿಷಯದಲ್ಲಿ ತನಿಖೆ ನಡೆಯಿತು. ಯಾರಯಾರ ವಿಚಾರದಲ್ಲಿ ಅತ್ಯಾಚಾರ ನಡೆಯಿತು ಎಂದು ಹೇಳಿದರೋ ಅವರೆಲ್ಲರನ್ನೂ ವಿಚಾರಣೆ ಮಾಡಿದರು. ಅದಕ್ಕೆ ಸಂಬಂಧಪಟ್ಟ ಮುಖಂಡರುಗಳೆಲ್ಲಾ ಇದ್ದರು. ಅನೇಕ ಜನ ಹೆಣ್ಣು ಮಕ್ಕಳ ಮೇಲೆ ಅಪಚಾರ ಆಯಿತು ಎಂದು ಯಾರಮೇಲೆ ಏನು ದೂರು ಹೇಳಿದರೋ ಆ ಹೆಣ್ಣು ಮಕ್ಕಳು ಆ ದಿವಸ ಅಲ್ಲಿ ಇರಲೇ ಇಲ್ಲ, ಬೇರೆ ಊರಲ್ಲಿ ಅವರು ಇದ್ದರು, ಇದೆಲ್ಲಾ ಸಂಪೂರ್ಣವಾಗಿ ಸುಳ್ಳು ಎಂದು ಸಮಾಚಾರ ಬಂತು.

ಶ್ರೀ ಎಸ್. ಗೋಪಾಲಗೌಡ.—ಅತ್ಯಾಚಾರ ನಡೆಯಿತು ಎಂದು ಹೇಳಲಾದ ದಿವಸ ಶಿವಮೊಗ್ಗಾ ಡಿ. ಎಸ್. ಪಿ. ಮಹದೇವಪ್ಪನವರು, ಎ. ಎಸ್. ಪಿ. ಶೆಲ್ಕೆಯವರು ತಾಳಗುಂದದ ಹತ್ತಿರ ಇದ್ದರಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಅತ್ಯಾಚಾರ ನಡೆದ ದಿವಸ ಡಿ. ಎಸ್. ಪಿ. ಮಹದೇವಪ್ಪ, ಪೋಲೀಸ್ ಇನ್ಸ್ಪೆಕ್ಟರ್ ಪುಟ್ಟಪ್ಪ, ಸಬ್ ಇನ್ಸ್ಪೆಕ್ಟರ್ ಹಸನೇರಿ, ನಾರಾಯಣರಾವ್ ಇವರುಗಳು ಅಲ್ಲದೆ 50 ಜನ ಕಾನ್ಸ್ಟೇಬಲ್‌ಗಳು ಮತ್ತು 50 ಜನ ರಿಸರ್ವ್ ಪೋಲೀಸ್‌ನವರು ತಾಳಗುಂದ ಗ್ರಾಮದಲ್ಲಿ ಜೂನ್ 24 ನೆಯ ತಾರೀಖು 1954 ರಲ್ಲಿ ಇರಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅತ್ಯಾಚಾರ ನಡೆಯಿತು ಎಂದ ದಿವಸ ಅಲ್ಲ. Raid party ಯವರನ್ನು ಅಲ್ಲಿ ಕೆಲವರು ಸೇರಿಕೊಂಡು ತಡೆಗಟ್ಟಿದರು. ಗಲಾಟೆ ಆಯಿತು ಎಂದು ವರದಿ ಬಂದ ಮೇಲೆ ಮುಂದಿನ ತನಿಖೆ ಕ್ರಮಕ್ಕೆ ಹೋಗಿದ್ದರು.

ಶ್ರೀ ಎಸ್. ಗೋಪಾಲಗೌಡ.—ಆ ದಿನ ಎಂದರೆ ಜೂನ್ 24 ನೇ ತಾರೀಖು 1954, ತಾಳಿ ವೀರಬಸಕ್ಕ, ಗುಪ್ಪವ್ವ ತಳವಾರ, ಚಂಬೂರು ಕರಿಯವ್ವ, ಸಣ್ಣಮ್ಮ, ಶಿವಕ್ಕ, ಬಸಮ್ಮ, ವೀರವ್ವ ದೊಡ್ಡಮನೆ, ಕಾಡಿದುರುಗಕ್ಕ ಮುಂತಾದ ಹೆಂಗಸರ ಮೇಲೆ ಪೋಲೀಸ್‌ನವರು ಅತ್ಯಾಚಾರ ಮಾಡಲಿಲ್ಲವೇ, ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದೆಲ್ಲಾ ಸುಳ್ಳು. ಯಾವ ಹೆಂಗಸರಮೇಲೂ ಅತ್ಯಾಚಾರಮಾಡಲಿಲ್ಲ. ಅತ್ಯಾಚಾರ ಆಯಿತು ಎಂದು ಹೇಳಿದ ತಳವಾರ ಗುಪ್ಪವ್ವ, ಬಸಮ್ಮ, ವೀರಬಸಮ್ಮ, ಕರಿಯವ್ವ, ಸಣ್ಣಮ್ಮ ಇವರನ್ನೆಲ್ಲಾ ವಿಚಾರಣೆ ಮಾಡಿದರು. ಅದೂ ಅಲ್ಲದೆ ಇದು ಒಂದು ರಾಜಕೀಯಕ್ಕಾಗಿ ಮಾಡಿದ್ದು ಎಂಬುದಕ್ಕೆ ನನ್ನಲ್ಲಿ ದಾಖಲೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಕಾಡಿ ಲೋಕಪ್ಪ ಎಂಬವರು ಹೋದ ಜನರಲ್ ಎಲೆಕ್ಷನ್‌ನಲ್ಲಿ ಕೆ.ಎಂ.ಪಿ. ಪಾರ್ಟಿಯಿಂದ ನಿಂತಿದ್ದರು ಅನ್ನುವ ಕಾರಣಕ್ಕಾಗಿ ಕಾಂಗ್ರೆಸ್ ಪಾರ್ಟಿಯವರು ಬೇಕೆಂತಲೇ ಪೋಲೀಸ್‌ನವರ ಮುಖಾಂತರ ಇದನ್ನು ಮಾಡಿಸಿದ್ದಾರೆ ಎಂಬುದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ರಾಜಕೀಯ ಪ್ರಕರಣಕ್ಕಾಗಿ ನಡೆದದ್ದಲ್ಲ ಎಂದು ಹೇಳಿದಿರಿ. ಆದ್ದರಿಂದ ಕಾಂಗ್ರೆಸ್‌ನವರು ರಾಜಕೀಯ ಪ್ರಕರಣದ ಆಧಾರದಮೇಲೆ ಅತ್ಯಾಚಾರ ನಡೆಸಿದರು ಎಂದು ಹೇಳಿದರೆ ಒಪ್ಪುತ್ತೀರಾ?

Mr. DEPUTY SPEAKER.—You are getting into too many details. It amounts to cross-examination.

Sri S. GOPALA GOWDA.—Because the Hon'ble Minister is saying that such a thing has not happened.

Mr. DEPUTY SPEAKER.—You cannot enter into all these details. The Minister has already said that the matter is *sub judice*.

ಶ್ರೀ ಎಸ್. ಗೋಪಾಲಗೌಡ.—ಗಂಗೊಳ್ಳಿ ಮಲ್ಲಣ್ಣನ ಮನೆಯಲ್ಲಿ ಒಂದು ಟೀಕಿಮನ್ನು ಪೋಲೀಸ್‌ನವರು ಅಪಹಾರ ಮಾಡಿಕೊಂಡು ಹೋಗಿರುವುದು ಗೊತ್ತೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಆ ರೀತಿ ಯಾವುದೂ ನಡೆದಿಲ್ಲ.

ಶ್ರೀ ಎಸ್. ಗೋಪಾಲಗೌಡ.—15,000 ರೂಪಾಯಿ ಬೆಲೆ ಬಾಳುವ ಬತ್ತ, ಅಕ್ಕಿ, ಹುಣಸೆಹಣ್ಣು ಬಂಗಾರ, ಬೆಳ್ಳಿ, ಸಾಮಾನು, ಕೋಳಿ, ಬಾಳೆಹಣ್ಣು ಮುಂತಾದ ಸಾಮಾನುಗಳನ್ನು ಪೋಲೀಸ್‌ನವರು ಲೂಟಿ ಮಾಡಿದ್ದಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಛೇ ! ಛೇ ! ಆ ರೀತಿ ಯಾವುದೂ ಮಾಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಡಿ.ಐ.ಜಿ. ಅವರು ಭೇಟಿ ಕೊಟ್ಟಾಗ ಮಹೇಶ್ವರಪ್ಪ, ಗುರುಸಿದ್ದಸ್ವಾಮಿ, ನಾಗೇಂದ್ರಯ್ಯ, ಸೀತಾರಾಮಯ್ಯಂಗಾರ್, ಎಸ್. ರಾಮಯ್ಯ, ರೇವಣ್ಣ ಸಿದ್ದಯ್ಯ, ಬಸವಯ್ಯ ಮುಂತಾದ ಸಾರ್ವಜನಿಕರು ತಾಳಗುಂದಕ್ಕೆ ಹೋಗಿ ವರದಿಮಾಡಿದ್ದನ್ನು ಡಿ. ಐ. ಜಿ. ಯವರು ಸರ್ಕಾರಕ್ಕೆ ವರದಿ ಮಾಡಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ದಿವಸ ತನಿಖೆ ಆಗುವಾಗ ಕಾಂಗ್ರೆಸ್ ಪಾರ್ಟಿಯವರೂ ಇದ್ದರು ; ಇತರರೂ ಇದ್ದರು. ಎರಡು ಪಾರ್ಟಿಗಳ ಸಮಕ್ಷಮ ವಿಚಾರಣೆ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಆ ಸಂದರ್ಭದಲ್ಲಿ ಐ.ಜಿ.ಪಿ. ಯವರು ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರೇ, ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ನನಗೆ ಜ್ಞಾಪಕವಿಲ್ಲ ; ಡಿ.ಐ.ಜಿ. ಅವರು ಕೊಟ್ಟಿದ್ದುದು ಜ್ಞಾಪಕವಿದೆ, ವರದಿ ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಈಗ ಎಷ್ಟು ಜನರ ಮೇಲೆ ಕೇಸು ಹಾಕಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೇಸು ಹಾಕಿರತಕ್ಕದ್ದು ಸುಮಾರು 39 ಜನರಮೇಲೆ.

ಶ್ರೀ ಎಸ್. ಗೋಪಾಲಗೌಡ.—ಅವರಮೇಲೆ ಹೊರಿಸಿರುವ ಆಪಾದನೆಯೇನು ?

ಶ್ರೀ ಎಚ್. ಸಿದ್ದವೀರಪ್ಪ.—ಇಂಡಿಯನ್ ಪೀನಲ್ ಕೋಡ್ (I.P.C.) 143, 149, 147, 148, 332, 333, 326 ಮತ್ತು 307ನೆಯ ಸೆಕ್ಷನ್ ಮೇರೆಗೆ ಆಪಾದನೆ ಹೊರಿಸಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಗ್ರಾಮದಲ್ಲಿ 24ನೆಯ ತಾರೀಖಾದನಂತರ ಎಷ್ಟು ದಿವಸ ಎಷ್ಟು ಜನ ಪಿ. ಆರ್. ಪಿ.ನವರು ಮತ್ತು ಪೋಲೀಸಿನವರು ಇದ್ದರು ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಆವಶ್ಯಕತೆಯಿದ್ದಷ್ಟು ಜನರಿದ್ದರು; ಇಷ್ಟು ದಿವಸವಿದ್ದರು ಎಂಬ ಸಮಾಚಾರ ನನ್ನಲ್ಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ ತಾಳಗುಂದ ಗ್ರಾಮದಲ್ಲಿ ಪೋಲೀಸಿನವರು ಯಾವ ವಿಧವಾಗಿ ಅಪಚಾರ ನಡೆಸಿದ್ದಾರೆಂಬುದನ್ನು ಸಾರ್ವಜನಿಕವಾಗಿ ಪರಿಶೀಲಿಸಲು ಅಭ್ಯಂತರವೇನು?

ಶ್ರೀ ಎಚ್. ಸಿದ್ದವೀರಪ್ಪ.—ಅದರ ಆವಶ್ಯಕತೆ ಕಂಡುಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಆವಶ್ಯಕತೆ ಕಂಡು ಬಂದಿಲ್ಲ ಎಂಬುದನ್ನು ನಿರ್ಧರಿಸುವವರು ಯಾರು ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದವರು.

ಶ್ರೀ ಎಸ್. ಗೋಪಾಲಗೌಡ.—ಈಗ ಅಲ್ಲಿ ಪೋಲೀಸಿನವರು ಯಾವುದೋ ನೆಪದಿಂದ ಜನರ ಮೇಲೆ ಅಪಚಾರವೆಸಗಿದ್ದಾರೆಂದು ಸಾರ್ವಜನಿಕ ಅಭಿಪ್ರಾಯವಿರುವಾಗ ಸರ್ಕಾರ ಆ ರೀತಿ ಮಾಡಿಲ್ಲವೆಂದು ಹೇಳುವುದು ನ್ಯಾಯವೆ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಜನರ ಅಭಿಪ್ರಾಯ ಆ ರೀತಿಯಿದೆ.

ಶ್ರೀ ಎಸ್. ಗೋಪಾಲಗೌಡ.—ಆ ಕೆಲವು ಜನರು ಯಾರು?

Mr. DEPUTY SPEAKER.—You need not answer that.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ಶ್ರೀ ಗೋಪಾಲಗೌಡರು ಹೇಳಿದ ಆಪಾದನೆಯಿರುವುದು ಖಚಿತವಾಗಿದೆಯಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸರ್ಕಾರಕ್ಕೆ ಖಚಿತವಾಗಿ ಗೊತ್ತಾದಮೇಲೆ ಏಕೆ ಕ್ರಮ ಕೈಕೊಂಡಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಕೇಸ್ ಆಗಿದೆ. ಅದಿರುವವರೆಗೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

Sri Mulka GOVINDA REDDY.—When and where the enquiry was conducted, Sir ?

Sri H. SIDDAVEERAPPA.—In the village on 29-8-1954.

Sri Mulka GOVINDA REDDY.—At whose instance this enquiry was conducted?

Sri H. SIDDAVEERAPPA.—At the instance of the Government.

Sri Mulka GOVINDA REDDY.—Why did the Government take 2½ months to order an enquiry into this affair, Sir ?

Sri H. SIDDAVEERAPPA.—By that time I had already received a report from the District Magistrate. But since there were persistent demands and one or two responsible papers wrote leaders also on this subject, I thought it was necessary to go deep into the matter and have a thorough enquiry. Then I asked the Police Authority to send one of the top men for the enquiry.

Sri Mulka GOVINDA REDDY.—In whose presence was this enquiry conducted ?

Sri H. SIDDAVEERAPPA.—Apart from the officers, there were the Secretary of the Taluk Congress Committee Sri Mariswamy Hiremutt, the President of the Shikarpur Congress Committee and some top ranking men of that local area. There were P.S.P. men also.

ಶ್ರೀ ಜೆ. ಮಹಮ್ಮದ್ ಇಮಾಂ.—ಅಲ್ಲಿ ಹೋಗಿ ವಿಚಾರ ಮಾಡಿದವರು ಪೋಲೀಸು ಇಲಾಖೆ ಡಿ. ಐ. ಜಿ. ಎಂದು ಹೇಳಲಾಯಿತು. ಅಂಥ ಸಂದರ್ಭದಲ್ಲಿ ಪೋಲೀಸಿನವರಮೇಲೆ ಆಪಾದನೆಯಿರುವಾಗ ಇಂಡಿಪೆಂಡೆಂಟ್ ಪರ್ಸನಲ್‌ನಿಂದ, ಹೈಕೋರ್ಟ್ ಜಡ್ಜಿಗಳಿಂದ ಪರಿಶೀಲನೆ ಮಾಡಿಸುವುದು ಆವಶ್ಯಕವಲ್ಲವೆ ?

Sri H. SIDDAVEERAPPA.—If there was any *prima facie* case, Government would not have hesitated to accept your suggestion. In fact, the whole foundation of the allegation is baseless.

ಶ್ರೀ ಜೆ. ಮಹಮ್ಮದ್ ಇಮಾಂ.—ತಾವು ಡಿ.ಐ.ಜಿ. ಯವರ ವರದಿಯ ಮೇಲೆ ಈ ಅಭಿಪ್ರಾಯಕ್ಕೆ ಬಂದಿದ್ದೀರಿ. ಆದರೆ ಒಬ್ಬ ಸ್ವತಂತ್ರರಾದ ಹೈಕೋರ್ಟ್ ಜಡ್ಜಿಗಳಿಂದ ಅಥವಾ ಇಂಡಿಪೆಂಡೆಂಟ್ ಪರ್ಸನಲ್‌ನಿಂದ ವಿಚಾರಣೆ ನಡೆಸಿದ್ದರೆ ಸತ್ಯಾಂಶ ಹೊರಕ್ಕೆ ಬರುತ್ತಿರಲಿಲ್ಲವೆ? That would have been a more appropriate course.

Sri H. SIDDAVEERAPPA.—Not only from the reports of my officers but also from the important non-officials and certain M. L. A.'s of the place, taking all the facts into consideration, I have come to the conclusion that all this is baseless.

ಶ್ರೀ ಜೆ. ಮಹಮ್ಮದ್ ಇಮಾಂ.—ಇರಬಹುದು. ಎಂ. ಎಲ್. ಎ. ಗಳು ಅಂದರೆ ಕಾಂಗ್ರೆಸ್ಸಿನವರು ಅಥವಾ ಪಿ. ಎಸ್. ಪಿ. ಎಂ. ಎಲ್. ಎ. ಗಳು ಹೆಚ್ಚಾಗಿದ್ದರೆ?

Sri H. SIDDAVEERAPPA.—M.L.A.'s and others too.

ಶ್ರೀ ಜೆ. ಮಹಮ್ಮದ್ ಇಮಾಂ.—ಅವರಲ್ಲಿ ಪಿ. ಎಸ್. ಪಿ. ಯ ಎಂ. ಎಲ್. ಎ. ಗಳು ಹೆಚ್ಚಾಗಿದ್ದರೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ಏರಿಯಾದಲ್ಲಿ ಪಿ. ಎಸ್. ಪಿ. ಯವರು ಯಾರೂ ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಅಲ್ಲಿರುವ ರಾಜಕೀಯ ಉದ್ದೇಶ ಮತ್ತು ಗೂಢಾರ್ಥವೇನು?

ಶ್ರೀ ಎಚ್. ಸಿದ್ದವೀರಪ್ಪ.—ಬೈ ಎಲೆಕ್ಷನ್ ಬಂದಾಗ ಇದನ್ನು ಪ್ರಚಾರಕ್ಕಾಗಿ ಉಪಯೋಗಿಸುವ ಉದ್ದೇಶದಿಂದ ಕಲ್ಪಿಸಿದೆಯೆಂದು ನನಗೆ ವರದಿ ಬಂದಿದೆ.

Sri J. MOHAMED IMAM.—Will the Government believe that there cannot be a more absurd and more frivolous reason than what has been attributed to this ?

Sri H. SIDDAVEERAPPA.—I leave it to the House to judge.

Sri J. MOHAMED IMAM.—Would not the Government feel that such frivolous report is only to shield this?

Sri H. SIDDAVEERAPPA.—In fact the allegations are more frivolous than the report.

Cement Concreting Bangalore-Mangalore Road near Chennarayapatna.

Q.—13. **Sri K. LAKKAPPA** (Chennarayapatna).—

Will the Government be pleased to state :—

(*a*) whether the Municipality of Chennarayapatna requested the Government to cement-concrete the portion of Bangalore-Mangalore road which passes through the town area of Chennarayapatna;

(*b*) what action they have taken in the matter?

A.—**Sri Kadidal MANJAPPA** (Minister for Revenue and Public Works).—

(*a*) Yes

(*b*) The estimate is under consideration.

ಶ್ರೀ ಕೆ. ಲಕ್ಕಪ್ಪ.—ಸಿಮೆಂಟ್ ಕಾಂಕ್ರೀಟ್ ಹಾಕಿಸಬೇಕೆಂದು ತಯಾರುಮಾಡಿರುವ ಅಂದಾಜಿನಲ್ಲಿ ಎಷ್ಟು ಮೈಲಿ ಪ್ರದೇಶಕ್ಕೆ ಸಿಸೆಂಟ್ ಕಾಂಕ್ರೀಟ್ ಮಾಡಬೇಕೆಂದು ಹೇಳಿದೆ?

ಶ್ರೀ ಕಡಿದಾಳ್ ಮಂಜಪ್ಪ.—13 ಫರ್ಲಾಂಗುಗಳಿಗೆ.

ಶ್ರೀ ಕೆ. ಲಕ್ಕಪ್ಪ.—ಸಿಮೆಂಟ್ ಕಾಂಕ್ರೀಟ್ ಮಾಡಲು ಮುನಿಸಿಪಾಲಿಟಿಯವರು ತಮ್ಮ ಕೋಟಾ ಕೊಡಬೇಕೆಂದು ಅವರನ್ನು ಕೇಳಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕೇಳಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಆ ಮುನಿಸಿಪಾಲಿಟಿಯು ಬಹಳ ಬಡತನದಲ್ಲಿರುವುದರಿಂದ ಅದು ತನ್ನ ಕೋಟಾ ಕೊಡಲು ಸಾಧ್ಯವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಆ ವಿಚಾರ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಹೀಗೆ ಸಿಮೆಂಟ್ ಕಾಂಕ್ರೀಟ್ ಹಾಕಿರುವ ಇತರ ಕಡೆಗಳಲ್ಲಿ ಯಾವ ಮುನಿಸಿಪಾಲಿಟಿಯಿಂದಲಾದರೂ ಕೋಟಾ ತೆಗೆದುಕೊಂಡಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಮುನಿಸಿಪಾಲಿಟಿಗಳನ್ನು ಅವುಗಳ ಕೋಟಾ ಕೊಡಬೇಕೆಂದು ಕೇಳಿದ್ದೇವೆ. ಕೆಲವಕ್ಕೆ ಹಿಂದೆ ಕೋಟಾ ತೆಗೆದುಕೊಳ್ಳದೆ ಕಾಂಕ್ರೀಟ್ ಮಾಡಿದೆ.

ಶ್ರೀ ಕೆ. ಲಕ್ಕಪ್ಪ.—ಬೆಂಗಳೂರು-ಮಂಗಳೂರು ರಸ್ತೆ ಹೈವೇ ಆಗಿರುವುದರಿಂದ ಅಂಥ ಕಡೆ ಕೋಟ ಕೇಳದಿರುವುದು ಸೂಕ್ತವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಈ ಎಸ್ಟಿಮೇಟ್ ತಯಾರಾಗಿ ಎಷ್ಟು ದಿವಸವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಎಗ್ಸಿಕ್ಯುಟಿವ್ ಇಂಜಿನಿಯರ ಆಫೀಸಿಗೆ 11-9-54 ರಲ್ಲಿ ಎಸ್ಟಿಮೇಟ್ ಬಂದಿದೆ.

ಶ್ರೀ ಕೆ. ಲಕ್ಕಪ್ಪ.—ಕೂಡಲೆ ಅದನ್ನು ಮಂಜೂರು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲಿಸಲಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಜರೂರಾಗಿ ಅಂದಾಜನ್ನು ಮಂಜೂರು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮುನಿಸಿಪಾಲಿಟಿಯವರು ಕೋಟಾ ಕೊಡುತ್ತಾರೆಯೆ ಎಂಬುದು ನಿರ್ಧಾರವಾಗಬೇಕು. ಅದಾದಮೇಲೆ ಪರಿಶೀಲಿಸುತ್ತೇವೆಂದು ಹೇಳಿದ್ದೇನೆ.

ಶ್ರೀ ಟಿ. ಸಿ. ಬಸಪ್ಪ.—ಹಿಂದೆ ಪೌರಸಭೆಯವರು ಕೋಟಾ ಕೊಡುತ್ತಿದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡುತ್ತಿದ್ದರೆಂದು ಕಾಣುತ್ತದೆ.

ಶ್ರೀ ಟಿ. ಸಿ. ಬಸಪ್ಪ.—ಈಚೆಗೆ ಕೆಲವು ಕಡೆ ನಿಲ್ಲಿಸಿದೆಯೆಂದು ಹೇಳಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಸಿ.. ಬಸಪ್ಪ.—ಅಂದಮೇಲೆ ಕಾಂಕ್ರೀಟ್ ಮಾಡುವ ಜವಾಬ್ದಾರಿ ಯಾರದು?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಧ ಸರ್ಕಾರದ್ದು, ಇನ್ನರ್ಧ ಪೌರಸಭೆಯದು ಎಂದು ನಿಯಮವಿದೆ.

ಶ್ರೀ ಟಿ. ಸಿ. ಬಸಪ್ಪ.—ಕೆಲವು ಕಡೆ ಕೋಟಾ ಪಡೆಯದೆ ಮಾಡಿದಮೇಲೆ ಪುನಃ ಕೋಟಾ ಪಡೆಯಬೇಕಾದ ಸಂದರ್ಭ ಯಾವಾಗ ಬಂತು?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನಗೆ ನೆನಪಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ಈ ರೀತಿ ನೀತಿಯನ್ನು ಪುನಃ ಸರ್ಕಾರ ವಿಮರ್ಶೆಮಾಡಿ ಪೌರಸಭೆಯ ರಸ್ತೆಗಳನ್ನು ಸರ್ಕಾರವೇ ವಹಿಸುವುದು ನ್ಯಾಯವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಮುನಿಸಿಪಲ್ ಸರಹದ್ದಿನಲ್ಲಿ ಹೋಗುವ ಸ್ಟೇಟ್‌ಫಂಡ್ ರಸ್ತೆಯನ್ನು ಟಾರು ಮಾಡಲು ಪೌರಸಭೆಯವರನ್ನು ಕೋಟಾ ಕೇಳುವುದಿಲ್ಲ; ಕಾಂಕ್ರೀಟ್‌ಮಾಡುವಾಗ ಮಾತ್ರ ಅರ್ಧಭಾಗ ಅವರು ವಹಿಸಬೇಕೆಂದು ಒತ್ತಾಯ ಮಾಡಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಕೆಲವು ಪಟ್ಟಣಗಳಲ್ಲಿ ಸಿಮೆಂಟ್ ಕಾಂಕ್ರೀಟ್‌ಮಾಡಿದೆ, ಅಲ್ಲಿ ಕೋಟಾ ಕೇಳಿಲ್ಲ ಎಂಬುದು ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಹಾಗೆ ಮಾಡಿದ್ದಾರೆಂದು ಆಗಲೇ ಹೇಳಿದೆ.

Culvert across Siddalipura Stream

Q.—30. **Sri B. MADHAVACHAR** (Bhadravathi).—

Will the Government be pleased to state :—

(*a*) whether they are aware that a number of representations have been received regarding the construction of a culvert across the stream near Siddalipura ;

(*b*) whether an estimate has been made and if so, the amount ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Yes, Rs. 20,000.

ಶ್ರೀ ಬಿ. ಮಾಧವಾಚಾರ್.—ಈ ಅಂದಾಜನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಮಂಜೂರಾಗಿಲ್ಲ.

ಶ್ರೀ ಬಿ. ಮಾಧವಾಚಾರ್.—ಈ ಸಾಲಿನಲ್ಲಿಯೇ ಅದನ್ನು ಮಂಜೂರುಮಾಡಿ ಕೆಲಸ ಪ್ರಾರಂಭಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಬರುವ ವರ್ಷ ಆ ಕೆಲಸ ತೆಗೆದುಕೊಳ್ಳಬೇಕೆಂದಿದೆ.

Bhadra Channel (Villages to be shifted up)

Q.—31. **Sri B. MADHAVACHAR** (Bhadravathi).—

Will the Government be pleased to state :—

the names of villages which will have to be shifted to a higher level when the left and right bank channels in Bhadravathi Taluk are completed ?

A.—**Sri Kadidal MANJAPPA** (Minister for Revenue and Public Works).—

Statements appended below.

No. 4 B. R. LEFT BANK CHANNEL DIVISION.

Statement showing the names of villages which are proposed to be shifted as per recommendations of Bhadra Reservoir Development Committee, Bhadravati Taluk.

	Names of villages proposed to be shifted	*Population*	*Name of Taluk*	*Approximate cost of shifting*	*Remarks*
	19th Meeting of Bhadra Reservoir Development Committee held on 22nd March 1950 at Circuit House, Shimoga.				
	Zone No. 1.				
				Rs.	
1	Nellisara ...	148	Bhadravati ...	...	To be shifted to S. Nos. 37 and 36 of Nellisara and S. No. 43 of Malenahalli.
2	Malenahalli ...	128	Do		
	Zone No. 2.				
3	Gonibid ...	106	Bhadravati ...	...	Proposed to be shifted to S. Nos. 18, 22 and 23 of the same village.
	Zone No. 3.				
4	Honnehatti ...	105	Bhadravati ...	12,000	To be shifted to S. No. 24 of Kambadal Hosur village.
5	Kambadal Hosur.	132	Do ...		
	Zone No. 4.				
6	Gonibid (Chikkagopanahalli 2nd meeting).	87	Bhadravati ...	...	To be shifted to S. No. 65 of Gopenahalli on 12th August 1954, 10 A.M.

(SRI KADIDAL MANJAPPA.)

	Names of villages proposed to be shifted	*Population*	*Name of Taluk*	*Approximate cost of shifting*	*Remarks*
				Rs.	
			Zone No. 5.		
7	Aralikoppa ...	163	Bhadravati ...	...	To be shifted to S. Nos. 45, 72, 54, 53 of the same village.
8	Janjooru ...	138	Do ...	...	To be shifted to Aralekoppa to S. No. 45 of the side of S. Nos. 80, 50, 45 of Bilemaranahalli.
9	Bilemaranahalli ...	153	Do ...	...	To be shifted.
10	Dodgopenahalli ...	136	Do ...	...	To be shifted to S. No. 38 of Dodgopenahalli.
			Zone No. 6.		
11	Thimmalapura ...	287	Bhadravati ...	...	To be shifted to S. No. 19 of Thimmalapura.
12	Hiriyur ...	557	Do ...	51,780	To be shifted to road or as already proposed.
13	Bommanakatte ...	84	Do ...	...	To be shifted to S. Nos. 44 and 45 of Bommanakatte.
			Zone No. 7.		
14	Siddapura ...	453	Bhadravati ...	...	To be shifted to S. No. 28, boundary of Jennapur village.
	26th Meeting held at Circuit House, Shimoga, on 24th February 1954.				
			Zone No. 8.		
15	Kalhalla ...	122	Bhadravati ...	...	To be shifted to S. Nos. 38, 41, 49 and 50 of Kalhalla dry belt proposed for new site.
16	Veerapura ...	41	Do ...	...	To be shifted to S.Nos. 28, 29, 30 and 31 of Hiriyur village and to group it with Siriyur village for which dry belt is proposed.

	Names of villages proposed to be shifted	*Population*	*Name of Taluk*	*Approximate cost of shifting*	*Remarks*
				Rs.	
17	Siriyur with hamlet of Hosur.	192	Bhadravati ...	...	Both to be shifted to S. Nos. 28, 29, 30 and 31 of Siriyur village and grouped with Veerapura dry belt is proposed.
			Zone No. 10.		
18	Bhadravati Peerappanahalli.	193	Bhadravati ...	...	To be shifted to S. Nos. 1, 2 and 36 of Kadadakatte for which dry belt is proposed.
			Zone No. 11.		
19	Neralakere ...	65	Bhadravati ...	...	To be shifted to Hebbandi.
20	Hebbandi Thanda.	353	Do ...		

Names of villages which are proposed to be shifted in Bhadravati Taluk when the Right Bank Main Canal is completed.

Sl. No.	Zone No.	Name of Village
1.	4	(*a*) Karahalli (*b*) Gopala (Bussenahalli)
2.	6	(*a*) Mosarahalli (*b*) Davaranarasipura (*c*) Cablikatte
3.	7	(*a*) Kallappanahally (*b*) Hosahally (*c*) Sitharampur (*d*) Attigunda
4.	10	(*a*) Chandanakere (*b*) Tattihalli
5.	11	Jenibaraghatta

ಶ್ರೀ ಬಿ. ಮಾಧವಾಚಾರ್.—ಈ ಪ್ರಶ್ನೆಯ ಪರಿಶಿಷ್ಟದಲ್ಲಿ ಒದಗಿಸಿರುವ ಗ್ರಾಮಗಳನ್ನು ಬದಲಾಯಿಸಬೇಕೆಂದು ಮಾಡಿದೆ. ಆದರೆ ಬಲಭಾಗದ ನಾಲಾ ಬದಲಾವಣೆ ಮಾಡಿರುವುದನ್ನು ಪೂರ್ಣವಾಗಿ ಪರಿಶೀಲನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವಶ್ಯಕವಾಗಿ.

ಶ್ರೀ ಬಿ. ಮಾಧವಾಚಾರ್.—ನಾಲಾ ಅಚ್ಚುಕಟ್ಟು ಪ್ರದೇಶ ತಾಲ್ಲೂಕುಗಳಲ್ಲಿ ಹೆಚ್ಚು ಇರುವುದರಿಂದ ಮಲೇರಿಯಾ ಪರಿಸ್ಥಿತಿಯ ಹತೋಟಿ ಬಗ್ಗೆ ಮುಂಜಾಗ್ರತೆಯ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚಿಸುತ್ತೇವೆ.

Amildari List (reservation for Depressed Classes).

Q.—48. **Sri H. K. SIDDAIYA** (Belur—Scheduled Castes).—

Will the Government be pleased to state :—

(*a*) whether there is the Amildari list before Government ;

(*b*) the total number in the list ;

(*c*) the number in the list that belong to Depressed Classes ;

(*d*) whether due representation according 16 2/3 per cent reservation to the members of the Depressed Classes is given as shown in the list ?

A.—**Sri Kadidal MANJAPPA** (Minister for Revenue and Public Works).—

(*a*) The Public Service Commission has sent a list which is under the consideration of the Government.

(*b*), (*c*) and (*d*) Cannot be disclosed at this stage.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಅಮಲ್ದಾರಿ ಪಟ್ಟಿಯಲ್ಲಿರತಕ್ಕ ಸಂಖ್ಯೆಯಲ್ಲಿ ನಿಮ್ಮ ವರ್ಗದ ಸಂಖ್ಯೆ ಎಷ್ಟೆಂದು ಕೇಳಿದೆ; ಅದಕ್ಕೆ ಉತ್ತರ ಹೇಳಲು ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುವವರೆಗೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ನಿಮ್ಮ ವರ್ಗದವರಿಗೆ ಮೀಸಲಾಗಿಡುವ ಸ್ಥಾನಗಳ ಬಗ್ಗೆ ಸರ್ಕಾರದವರು ಇತ್ತೀಚೆಗೆ ಹೊರಡಿಸಿರುವ ಶೇಕಡಾವಾರು $16\frac{2}{3}$ರ ಬಗ್ಗೆ ನಿಯಮವನ್ನು ಪರಿಪಾಲಿಸಿ ಈ ಸ್ಥಾನಗಳನ್ನು ಕಲ್ಪಿಸಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈ ಬಗ್ಗೆ ನೀತಿ ನಿಯಮವೇನಿದೆಯೋ ಅದನ್ನು ಅನುಸರಿಸಿಯೇ ಕ್ರಮ ಕೈಕೊಳ್ಳುತ್ತೇವೆಂದು ತಿಳಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ.—ಈ ಪಟ್ಟಿ ತಯಾರು ಮಾಡಿರುವುದರಲ್ಲಿ direct recruitment ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಇದು eligibility list. ಇದರಲ್ಲಿ direct recruitment ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಲಿಸ್ಟ್‌ನಲ್ಲಿ ಎಷ್ಟು ಜನರ ಹೆಸರುಗಳನ್ನು ಸೇರಿಸಿದೆ?

ಶ್ರೀ ಕಡಿದಾಳ್ ಮಂಜಪ್ಪ.—75 ಜನರ ಹೆಸರುಗಳನ್ನು ಸೇರಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಅದರಲ್ಲಿ ನಿಮ್ಮ ವರ್ಗದವರ ಹೆಸರುಗಳನ್ನು ಹೆಚ್ಚಾಗಿ ಸೇರಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಆಗಲೇ ಉತ್ತರ ಹೇಳಿದೆ.

ಶ್ರೀ ಜಿ ಪುಟ್ಟಸ್ವಾಮಿ.—ಒಟ್ಟು ಪ್ರಜಾ ಸಂಖ್ಯೆಯ ಆಧಾರದಮೇಲೆ proportional ಆಗಿ ನೋಡಿದರೆ ಈ ಸಂಖ್ಯೆ ಆ ಲಿಸ್ಟ್‌ನಲ್ಲಿ ಬಹಳ ಕಡಮೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ನಿಯಮಕ್ಕನುಸಾರವಾಗಿ ನಡೆಯುತ್ತಾರೆಂದು ಆಗಲೇ ಹೇಳಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಸಂಖ್ಯೆ ಕಡಮೆಯಾಗಿದ್ದು ಅನ್ಯಾಯವಾಗಿದೆಯೆಂದು ಹೇಳುತ್ತೇನೆ. ಇದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಅನ್ಯಾಯವಾಗಿದೆಯೆಂದು ಒಪ್ಪಿಕೊಂಡಿಲ್ಲ.

ಶ್ರೀ ಆರ್. ಅನಂತರಾಮನ್.—ಅಮಲ್ದಾರಿ ಪಟ್ಟಿಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಹಿಂದುಳಿದ ಪಂಗಡದಿಂದ ಒಂದು ಹೆಸರನ್ನೂ ಸೇರಿಸಿಲ್ಲ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ information ಸರಿಯಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—75 ಜನರಿರುವ ಈ ಲಿಸ್ಟ್‌ನಿಂದ ಯಾರನ್ನಾದರೂ ತೆಗೆದುಹಾಕುವ ಅಧಿಕಾರ ಸರ್ಕಾರಕ್ಕಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಎಂ. ಮಾದಯ್ಯ.—ಈ ಪಟ್ಟಿಯನ್ನು ತಯಾರು ಮಾಡಿರುವುದರಲ್ಲಿ ಯಾವ ನೀತಿಯನ್ನು ಅನುಸರಿಸಿರುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಯಾವ ನೀತಿಯನ್ನು ಅನುಸರಿಸಬೇಕೋ ಅದನ್ನು ಅನುಸರಿಸಿದೆ.

ಶ್ರೀ ಎಂ. ಮಾದಯ್ಯ.—ಅದೇನು?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಹತೆ, ಸರ್ವಿಸ್ ಮುಂತಾದುವನ್ನು ಗಣನೆಗೆ ತೆಗೆದುಕೊಂಡು ಮಾಡಿರುತ್ತಾರೆ.

ಶ್ರೀ ಎಂ. ಮಾದಯ್ಯ.—ಪಬ್ಲಿಕ್ ಸರ್ವಿಸ್ ಕಮಿಷನ್‌ನವರು 75 ಜನರ ಪಟ್ಟಿಯನ್ನು ಕಳುಹಿಸಿರುವುದರಲ್ಲಿ ಅದನ್ನು order of merit ಪ್ರಕಾರ ಕಳುಹಿಸಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿರ್ಧರವಾಗಿ ಹೇಳಲಾರೆ.

ಶ್ರೀ ಎಂ. ಮಾದಯ್ಯ.—4-5 ವರ್ಷದ ಹಿಂದೆ ಸೇರಿಸಲ್ಪಟ್ಟವರ ಹೆಸರುಗಳು ಸಹ ಈ ಲಿಸ್ಟ್‌ನಲ್ಲಿದ್ದು ಅವರಿಗೆಲ್ಲ ಅವಕಾಶ ದೊರಕಬೇಕಾದರೆ ಇನ್ನೂ 4·5 ವರ್ಷಗಳಾಗುತ್ತದೆ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಾದಯ್ಯ.—ಈ ದೃಷ್ಟಿಯಿಂದ inadequate representation ಇರತಕ್ಕ communityಗೆ adequate representation ಕೊಡುವ ಬಗ್ಗೆ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮದೊಂದು ನಿರ್ಣಯ ಈ ಬಗ್ಗೆ ಈ ಮಾನ್ಯ ಸಭೆಯ ಒಪ್ಪಿಗೆ ಪಡೆದಿತ್ತು. ಅದರ ಪ್ರಕಾರ ಕಾರ್ಯಕ್ರಮವನ್ನು ಕೈಕೊಳ್ಳಲು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ತಿಳಿಸಿದೆ.

ಶ್ರೀ ಎಂ. ಮಾದಯ್ಯ.—ತಮ್ಮ ತಿಳಿವಳಿಕೆಯ ಪ್ರಕಾರ ಅವರು ಕಾರ್ಯಕ್ರಮ ಕೈಕೊಂಡಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೇಮಕಮಾಡುವಾಗ ಸಾಮಾನ್ಯವಾಗಿ ಪ್ರಾತಿನಿಧ್ಯವಿಲ್ಲದೇ ಇರತಕ್ಕಂಥ communityಗೆ ಕೊಡಬೇಕೆಂದು ನಿಯಮವಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಿಂದೆ ಇದಕ್ಕಾಗಿ ಒಂದು ಸಮಿತಿಯನ್ನು ನೇಮಕಮಾಡಿ ಒಂದು ಲಿಸ್ಟ್ ತಯಾರು ಮಾಡಿದಿರಿ, ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಭೀಮಪ್ಪನಾಯಕ್.—ಹಿಂದಿನ ಲಿಸ್ಟ್‌ನಲ್ಲಿದ್ದವರ ಹೆಸರುಗಳನ್ನೆಲ್ಲಾ ಈಗ ಹೊಸದಾಗಿ ತಯಾರಿಸಿರುವ ಲಿಸ್ಟ್‌ನಲ್ಲಿ ಸೇರಿಸಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಈ ಲಿಸ್ಟ್‌ನಲ್ಲಿ ಬಂದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಏಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನ್‌ನವರ ಅಭಿಪ್ರಾಯದಲ್ಲಿ ಅವರಿಗೆ ಸಾಕಾದಷ್ಟು ಅರ್ಹತೆ ಇಲ್ಲವೆಂದು ಕಂಡುಬಂದಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಿಂದೆ ಇದ್ದ ಹಾಗೆ ಪೋಲೀಸ್, ಎಕ್ಸೈಜ್, ರಿಜಿಸ್ಟ್ರೇಷನ್, ರೆವಿನ್ಯೂ ಮತ್ತು ಇತರ ಇಲಾಖೆಗಳಿಂದ ಆರಿಸಿ ಈ ಲಿಸ್ಟ್ ತಯಾರಿಸಲಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥಿಂಥ ಇಲಾಖೆಗಳಿಂದ ಎಂಬುದನ್ನು ನಿರ್ಧರವಾಗಿ ಹೇಳಲಾರೆ.

With these few remarks, I would once again personally request the Hon'ble the Revenue Minister to think over the matter, consider all aspects of the matter that have been raised and then bring such amendments as he may prefer or bring in a new measure which would certainly give the desired benefit to the masses. The Revenue Department is a department which has the closest touch with the masses and the Government should help them to maintain this contact with the masses.

Sri V. M. MASCARENHAS (St. John's Hill).—Mr. Speaker, Sir, I support the stand taken by my Hon'ble friend Sri T. Mariappa. Fears have been expressed by other members that the Bill as it stands will not serve its purpose. The Board as contemplated to be constituted will not serve the purpose for which it is proposed to be constituted. Three officers who have already heavy work on hand sit in judgment over cases which they might have individually dealt with already. I am afraid that a system of that kind where a person sits in judgment over his own judgment is not to be found anywhere. I do not think it will appeal to anybody. Over and above that, Sir, it is within our experience,

(SRI V. M. MASCARENHAS.)

how difficult it is to get an ordinary Government official and how often meetings of committees are postponed weeks and months to get the Head of a Department to the committee. When this is the case, when here are thousands of applications pending, with these three officers who are touring officers, who are at the mercy of the Ministers while they (Ministers) are on tour, is it possible for the Board to sit 8 or 10 days in Bangalore and hear these revision petitions? I for one, do not believe it. If you have a Board with absolute whole-time people who do nothing but this work, I agree. But, if you want to save money and therefore put these three officers who are already burdened with heavy work, I am definitely of the opinion that no useful work will be turned out. Sri Mariappa suggested that the Hon'ble Minister for Revenue, Sri Kadidal Manjappa, may sit a little overtime and work. No Sir; I for one, would not agree for this. The poor Revenue Minister.........(*Loud laughter*)......... I will tell you why I have called him as poor. He has the revenue portfolio which is a heavy portfolio. He has a revenue collecting department in the Sales Tax Department. Added to this, he has the Muzrai Department and the Public Works. In my opinion, it is inhuman to burden one single minister with so many portfolios. Every month he has to hear hundreds of appeals. The mistake has been with our system, not with the man. So, if only the Revenue portfolio is given to the Minister, I am certain that he can look after the appeals and the need for this Board will automatically vanish.

A MEMBER.—You are making a suggestion to have another Minister.

Sri Kadidal MANJAPPA.—I have disposed of nearly 1,500 appeals.

Sri V. M. MASCARENHAS.—Congratulations, Sir. If you say that, then this Bill falls through. Because you said that you are rather overworked, we thought of having this Board. If however you say that you have disposed of so many cases, I will merely say that the *status quo* may continue; I shall wish the best of luck to the Hon'ble Minister Sri Kadidal Manjappa and sit down.

(*Loud laughter.*)

Sri B. T. KEMPARAJ (Bangalore South—Scheduled Castes).—Mr. Speaker, Sir, many Hon'ble Members have already spoken on this Bill. I personally feel that it is high time that such measure should be brought into force. Sir, the number of revenue as well as sales-tax appeals are increasing day by day. Again, there are the excise appeals. It is a matter which requires great deal of consideration as to how these three officers sit together and work together. All the three Members of the Board attend to the appeals against the orders of the Deputy Commissioner whether it is in respect of revenue, sales-tax, or excise. In one person, that is the Deputy Commissioner, we see that there are so many branches of work wherein he passes orders on which different appeals lie with different authorities. I feel, Sir, there will be no harm if all these Heads of Departments are made to sit together as a Board and dispose of the appeals. But, one point which we have to consider seriously is, whether one Head of Department can sit in judgment over an order passed by him as an appellate authority, again in the Board as a member of the Board. That has to be clarified here before we think of giving any powers to the Board or think of constituting a Board of this kind. As already pointed out by several Hon'ble Members, if one officer who sits in judgment as an appellate authority over the orders passed by the Deputy Commissioner, is made to sit again in the Board where he has to give a decision, some inconvenience will be caused to such officer. It will be somewhat irksome for him to give his decision on a matter which he has already disposed of. To make this process easy, it should be clearly pointed out that the appeal over the orders of the Deputy Commissioner should lie only before the Board; otherwise, it will mean that the Board will be an intermediary body between the Government and Heads of Departments who are now acting as the Appellate Authority. Sir, as has already been pointed out by some of my Hon'ble friends, we have to think of the working of this Board from the point of view of illiterate persons who are not aware of the proceedings of law. As it is, a person who has to prefer an appeal against the orders of the Deputy Commissioner either in respect of revenue or excise or sales-tax, finds it very difficult as to whom he should go and file his appeal. Under such circumstances, the poor man who is ignorant of law will very much be handicapped as to where and how he should appeal to the members of the Board. Again, as far as the constitution of the Board is concerned, it is very misleading because of the reason as to who should be the chairman is not mentioned. If an appeal should be preferred, should it be preferred to the Board or to the Chairman of the Board? Therefore, there is also some misleading factor as far as the formation of the Board is concerned. It is essential for us to see how the Board should be constituted, who should be members, who should be the Chairman, who should directly receive appeals when there are no members of the Board and when the Board is not sitting, and the time and place where exactly the members should sit and when the appeals will be entertained by the members of the Board. These also should be mentioned clearly for the guidance of the people who seek redress at the hands of the Board.

The Government may be thinking that by constituting this kind of Board their work may be lessened, that the work of the Hon'ble the Revenue Minister may decrease. But under clause 6, it could be seen that on a point of law there may be revision preferred to the Government. Though the Board comes into existence, anyway revision lies to the Government under this clause. As the Hon'ble Member Sri T. Mariappa pointed out, it is necessary, for some time more, to have even the appellate authority retained by the Government for the simple reason that in some of the cases the party may not be aware of the judgment awarded by several officers, the executive Heads of Departments. Sometimes we see that in most of the cases relief given is not timely. Thereby justice will not be meted out to the party in difficulty. Let us take for instance a case. There will be two parties to a case. The appellant will prefer the appeal but there will be no notice served on the respondent. Under such circumstances the Government should reserve such power so that justice may be done to the parties. The Government should not think that our people have all the enlightenment which this Act or statute contemplates, because our people have not come up to the mark. Therefore I feel it is necessary that the Government should have a provision for appeal being heard by Government.

With these remarks I welcome this Bill; because of the existing conditions the necessity for the Board is welcome and I thank in particular the Minister for having attempted to bring forward such a Bill before this House.

Mr. CHAIRMAN.—There are only four minutes more to Five of the Clock. I do not think any Hon'ble Members are willing to speak in this short time. So we will continue the debate on this Bill tomorrow.

Several MEMBERS.—Yes, Sir.

Mr. CHAIRMAN.—The House stands adjourned and will meet again at 12 NOON tomorrow.

The House adjourned at Fifty-six Minutes past Four of the Clock to meet again at 12 Noon on Wednesday, the 13th October 1954.

WD 3539—GPB—550—28-10-54

MYSORE LEGISLATIVE ASSEMBLY.

THIRD DAY.

Wednesday 13th October 1954

The House met in the Assembly Hall, Old Public Offices, Bangalore, at Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS

Restoration of Madaga Tank.

Q.—137. Sri D. M. GOVINDARAJU (Nelamangala).—

Will the Government be pleased to state :—

(*a*) when the estimate for the restoration of Madaga tank, Sompur Hobli, Nelamangala Taluk was prepared ;

(*b*) at what stage this question is at present ;

(*c*) since how long the people of the locality are representing before Government for the restoration of this tank ?

A.—Sri Kadidal MANJAPPA (Minister for Revenue and Public Works).—

(*a*) In July 1953.

(*b*) The estimate is under scrutiny.

(*c*) Since 1937.

ಶ್ರೀ ಡಿ. ಎಂ. ಗೋವಿಂದರಾಜು.—ಇದರ ಅಂದಾಜಿನ ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಲಕ್ಷ 80 ಸಾವಿರ ರೂಪಾಯಿಗಳು.

ಶ್ರೀ ಡಿ. ಎಂ. ಗೋವಿಂದರಾಜು.—ಜಾಗ್ರತೆಯಾಗಿ ಈ ಅಂದಾಜನ್ನು ಮಂಜೂರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿಖರವಾಗಿ ಈಗ ಹೇಳಲಾರೆ.

ಶ್ರೀ ಎಸ್. ಸಿದ್ದಪ್ಪ.—ಇದರ ಅಚ್ಚುಕಟ್ಟೆಷ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—350 ಎಕರೆಯೆಂದು ಕಾಣುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬರೀ ಜೀರ್ಣೋದ್ಧಾರಕ್ಕೇ ಇಷ್ಟು ಹಣ ಖರ್ಚಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ತಯಾರು ಮಾಡಿರುವುದರಿಂದ ಹಿಂದೆ ಎಷ್ಟಾಗುತ್ತಿತ್ತೋ ಅದಕ್ಕಿಂತ ಜಾಸ್ತಿಯಾಗಿದೆ. ಈಗ ಮಾಡಿರುವುದು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರ ಪರಿಶೀಲನೆಯಲ್ಲಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಯಾವಾಗ ತಯಾರು ಮಾಡಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ.

ಶ್ರೀ ಎ. ವಿ. ನರಸಿಂಹರೆಡ್ಡಿ.—300 ಚಿಲ್ಲರೆ ಎಕರೆ ಅಚ್ಚುಕಟ್ಟಿಗೆ ಅನುಕೂಲವಾಗುವುದರಿಂದ ಈ ಜೀರ್ಣೋದ್ಧಾರ ಕೆಲಸ ರೆಮ್ಯೂನರೇಟಿವ್ ಅಲ್ಲವೆ ? ಆದ್ದರಿಂದ ಇದನ್ನು ಜಾಗ್ರತೆ ಜೀರ್ಣೋದ್ಧಾರ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಬಾಕಿ ಅಂಶಗಳನ್ನೂ ಕೂಡ ಗಮನಿಸಬೇಕು. ಎಷ್ಟು ಜಮೀನು ನೀರು ಮುಳುಗಡೆಯಾಗುತ್ತದೆ, ಎಷ್ಟು ಪ್ರದೇಶ ಸಾಗುವಳಿಗೆ ಬರುತ್ತದೆ, ಮುಳುಗಡೆಯಾದ ಪ್ರದೇಶಕ್ಕೆ ಕಾಂಪೆನ್ಸೇಷನ್ ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನೆಲ್ಲಾ ಗಮನದಲ್ಲಿಟ್ಟು ಅನಂತರ ತೀರ್ಮಾನಮಾಡಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಸ್ಟಿಮೇಟ್ ಮಾಡುವಾಗ ಅದರಲ್ಲಿ ಕಾಂಪೆನ್ಸೇಷನ್ ಕೊಡಬೇಕಾಗುವ ಮೊಬಲಗನ್ನು ಸೇರಿಸುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಸೇರಿಸುತ್ತಾರೆ. ಈಗ ಸೇರಿಸಿದೆಯೆ, ಇಲ್ಲವೆ ಎಂಬುದನ್ನು ನಿರ್ಧಾರವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದರಿಂದ ರಿಟರ್ನ್ ಎಷ್ಟು ಬರುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಲೆಕ್ಕ ಹಾಕಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಎಷ್ಟು ಬರಬೇಕೆಂಬ ಅಭಿಪ್ರಾಯವಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಶೇಕಡ ಮೂರರಷ್ಟು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಕಾಂಟ್ರಿಬ್ಯೂಷನ್ ಮೇಲೆ ಲೆಕ್ಕ ಹಾಕುತ್ತೀರೋ ಅಥವಾ ವಾಟರ್ ರೇಟ್, ಕಂದಾಯ ಎಲ್ಲಾ ಸೇರಿಸಿ ಲೆಕ್ಕ ಹಾಕುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್ ಮೇಲೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಶೇಕಡ ಮೂರಕ್ಕಿಂತ ಕಡಮೆ ಬರುವುದನ್ನು ತೆಗೆದುಕೊಳ್ಳುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಸಂದರ್ಭದಲ್ಲಿ ಶೇಕಡ ಮೂರಕ್ಕಿಂತ ಕಡಮೆ ಬರುವುದನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಕೆರೆ ಬಿಟ್ಟು ಬೇರೆ ನೀರಿನ ಆಶ್ರಯವಿಲ್ಲದಿದ್ದಾಗ, ನೀರಿಗೆ ಬಹಳ ತೊಂದರೆಯಾಗಿರುವಾಗ, ರೈತರಿಗೆ ಹೆಚ್ಚು ಸಹಾಯವಾಗುವಾಗ—ಇಂಥ ಸಂದರ್ಭಗಳಲ್ಲಿ ಯೋಚನೆಮಾಡಿ ಶೇಕಡ ಮೂರಕ್ಕಿಂತ ಕಡಮೆ ಬರುವುದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೀರು ಮುಳುಗಡೆಯಾಗುವ ಜಮೀನಿನವರು ತಮಗೆ ಕಾಂಪೆನ್ಸೇಷನ್ ಬೇಕಾಗಿಲ್ಲವೆಂದು ಬರೆದುಕೊಟ್ಟರೆ ಆ ಹಣವನ್ನು ಒಟ್ಟು ಅಂದಾಜಿನಲ್ಲಿ ಕಡಮೆಮಾಡಿ ತೀರ್ಮಾನ ಮಾಡಲು ಸಾಧ್ಯವೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಆಯಾ ಸಂದರ್ಭದಮೇಲೆ ಅವಲಂಬಿಸಿರುತ್ತದೆ.

ಶ್ರೀ ಜಿ. ನಾರಾಯಣಗೌಡ.—ಈಗ ಹಾಕತಕ್ಕ ವಾಟರ್ ರೇಟಿನ ಪರಮಾವಧಿ ಮೊಬಲಗೆಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ನಿಗದಿ ಮಾಡಿಲ್ಲ.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ ಯಾವ ಆಧಾರದ ಮೇಲೆ ನಿಗದಿ ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ನಷ್ಟವಾಗದಿರುವ ರೀತಿಯಲ್ಲಿ ನಿಗದಿ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಈಗ ಶೇಕಡ ಮೂರರಷ್ಟು ಬರಬೇಕೆಂದು ಹೇಳಿದೆ. ಅದರ ಮೇಲೆ ವಾಟರ್ ರೇಟ್ ನಿಗದಿ ಮಾಡುತ್ತೀರೋ ಅಥವಾ ಬೇರೆ ಯಾವ ಆಧಾರದ ಮೇಲಾದರೂ ನಿಗದಿ ಮಾಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ತಕ್ಕಷ್ಟು ರಿಟರ್ನ್ ಬರುವ ಆಧಾರದ ಮೇಲೆ ನಿಗದಿ ಮಾಡುತ್ತಾರೆ.

ಶ್ರೀ ಜಿ. ನಾರಾಯಣಗೌಡ.—ಹಾಗೆ ನಿಗದಿ ಮಾಡುವಾಗ ವಾಟರ್ ರೇಟ್, ಏಕರೇಜ್ ಮೇಲಿರುವ ಕಂದಾಯ ಇದನ್ನೆಲ್ಲಾ ಸೇರಿಸುತ್ತೀರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿಸುವುದಕ್ಕಾಗುವುದಿಲ್ಲ. ವಾಟರ್ ರೇಟ್ ಪ್ರತ್ಯೇಕ ಮಾಡಬೇಕು.

ಶ್ರೀ ಜಿ. ನಾರಾಯಣಗೌಡ.—ವಾಟರ್ ರೇಟ್ ಒಂದನ್ನೇ ವಸೂಲು ಮಾಡುತ್ತೀರೋ ಅಥವಾ ಖುಷ್ಕಿ ದರವಿದೆಯಲ್ಲಾ ಅದನ್ನೂ ಸೇರಿಸಿ ವಾಟರ್ ರೇಟಿನೊಂದಿಗೆ ವಸೂಲು ಮಾಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಹೊಸದಾಗಿ ಹಾಕುವಾಗ ವಾಟರ್ ರೇಟ್ ಬಿಟ್ಟು ಖುಷ್ಕಿ ಕಂದಾಯವನ್ನು ಪ್ರತ್ಯೇಕವಾಗಿ ವಸೂಲು ಮಾಡಲಾಗುವುದು.

ಶ್ರೀ ಜಿ. ನಾರಾಯಣಗೌಡ.—ಹಾಗೆ ಮಾಡುವಾಗ ದರಗಳು ಬಹಳ ಹೆಚ್ಚಾಗುವುದಿಲ್ಲವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಿತಿಗತಿ ನೋಡಿ ಹೆಚ್ಚದ ಹಾಗೆ ನೋಡಿಕೊಳ್ಳುತ್ತಾರೆ.

ಶ್ರೀ ಜಿ. ನಾರಾಯಣಗೌಡ.—ಸಾಮಾನ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಎಕರೆಗೆ 6½ ರೂಪಾಯಿಗಳ ದರವಿರುವಾಗ 9½ ರೂಪಾಯಿಗಳಂತೆ ತಾವು ಅಂದಾಜು ಮಾಡಿರಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಜ್ಞಾಪಕವಿಲ್ಲ.

ಶ್ರೀ ಜಿ. ನಾರಾಯಣಗೌಡ.—ಈಗ ಹೊಸದಾಗಿ ಅಂದಾಜು ಮಾಡಿರುವ ಕೆರೆಗಳಿಗೆ 15 ರೂಪಾಯಿಗಳ ವಾಟರ್ ರೇಟ್ ಕೇಳಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಕೆರೆ ಜೀರ್ಣೋದ್ಧಾರ ಮಾಡುವುದರಿಂದ ರೈತರಿಗೆ ಹೆಚ್ಚು ಪ್ರತಿಫಲವುಂಟಾಗುವುದಿಲ್ಲ. ಸರ್ಕಾರಕ್ಕೂ ಲಾಭದಾಯಕವಾಗಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ರೈತರು 'ಜೀರ್ಣೋದ್ಧಾರ ಮಾಡಬೇಕು, ಅಷ್ಟು ವಾಟರ್ ರೇಟ್, ಕಾಂಟ್ರಿಬ್ಯೂಷನ್ ಕೊಡುತ್ತೇವೆ' ಎಂದು ಕೇಳುತ್ತಾರೆ.

ಶ್ರೀ ಜಿ. ನಾರಾಯಣಗೌಡ.—ರೈತರಿಗೆ ಜೀವನೋಪಾಯಕ್ಕೆ ಮಾರ್ಗವಾಗುವಾಗ ಸರ್ಕಾರ ಅದನ್ನು ಒಂದು ಒಳ್ಳೆಯ ದೃಷ್ಟಿಯಿಂದ ನೋಡಬೇಕಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಕೂಡ ಗಮನಿಸಬೇಕು.

ಶ್ರೀ ಜಿ. ನಾರಾಯಣಗೌಡ.—ವಾಟರ್ ರೇಟ್ 15 ರೂಪಾಯಿಗಳು ಹಾಕುವುದು ಬಹಳ ಹೆಚ್ಚೆಂಬುದನ್ನು ಪರಿಶೀಲಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಿದರ್ಶನ ಹೇಳಿದರೆ ವಿಚಾರ ಮಾಡುತ್ತೇವೆ.

Low level causeway near Muthusandra Village.

Q.—148. H. T. PUTTAPPA (Hosakote-Anekal—Scheduled Castes).—

Will the Government be pleased to state :—

whether it has come to their notice that the work of constructing a low level causeway near Muthusandra Village, Anugondahalli Hobli, has not been taken up, though the estimate for the same has been prepared ?

A.—Sri Kadidal MANJAPPA (Minister for Revenue and Public Works).—

Yes ; Government are aware that the work has not been taken up yet. A detailed estimate is under preparation.

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ಕೆಲಸವನ್ನು ಷುರು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ತಯಾರಾಗುತ್ತಿದೆ, ತಯಾರಾದನಂತರ ತೀರ್ಮಾನ ಮಾಡುತ್ತೇವೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಷ್ಟು ದಿವಸಗಳಿಂದ ಎಸ್ಟಿಮೇಟ್ ತಯಾರಾಗುತ್ತಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ತಯಾರು ಮಾಡುತ್ತಿದ್ದಾರೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಸ್ಟಿಮೇಟ್ ತಯಾರಾಗುವುದಕ್ಕೆ ಇನ್ನೂ ಎಷ್ಟು ದಿವಸ ಬೇಕು?

ಶ್ರೀ ಕಡಿದಾಳ್ ಮಂಜಪ್ಪ.—ಹೇಳುವುದಕ್ಕಾಗುವುದಿಲ್ಲ. ಆವಶ್ಯಕವಾಗಿ ಎಷ್ಟು ಕಾಲ ಬೇಕೋ ಅಷ್ಟು ಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಕೆರೆಗೆ ಎಷ್ಟು ಸಲ ಅಂದಾಜುಮಾಡಿದ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಯನ್ನಲ್ಲ, 'ಕಾಸ್‌ವೆ' ಯನ್ನು ಈಗ ಮಾಡುತ್ತಿದೆ, ಹಿಂದಿನ ವಿಚಾರ ಗೊತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಹೀಗೆ ಕಾಲಹರಣ ಮಾಡುವುದರಿಂದ ಸರ್ಕಾರಕ್ಕೆ ನಷ್ಟವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕಾಲಹರಣ ಮಾಡುತ್ತಿದ್ದಾರೆಂದು ಒಪ್ಪಿಕೊಂಡಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕಾಸ್‌ವೆಯಿಂದ ಎಷ್ಟು ಗ್ರಾಮಗಳಿಗೆ ಅನುಕೂಲವಾಗುತ್ತದೆಂಬುದನ್ನು ಪರಿಶೀಲಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಗೊತ್ತಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಷ್ಟು ಕಾಲದಿಂದ ಇದನ್ನು ಕೇಳುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಕಾಲದಿಂದ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದು ಬಹಳ ಆವಶ್ಯಕವಾದ ಕಾಸ್‌ವೆಯಾಗಿರುವುದರಿಂದ ಬೇಗ ಮಾಡಲು ಸರ್ಕಾರದವರು ಯೋಚನೆಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಸ್ಟೇಟ್‌ಫಂಡ್ ರಸ್ತೆಗೆ ಕಟ್ಟುವ ಕಾಸ್‌ವೆ. ಇದೊಂದು ಗ್ರಾಮಾಂತರದ ರಸ್ತೆ. ಹಳ್ಳಿಗಾಡಿನ ರಸ್ತೆಗಳಿಗೆ ಸೇತುವೆ ವಗೈರೆ ಕಟ್ಟುವ ಜವಾಬ್ದಾರಿ ಸ್ಥಳೀಯ ಸಂಸ್ಥೆಗೆ, ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳಿಗೆ ಸೇರಿದ್ದು. ತಮ್ಮ ಕೋರಿಕೆಯನ್ನು. ಪರಿಶೀಲಿಸುತ್ತೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕಾಸ್‌ವೆಯನ್ನು ದಕ್ಷಿಣ ಪಿನಾಕಿನಿ ನದಿಗೆ ಕಟ್ಟತಕ್ಕಂಥಾದು . ಇದಕ್ಕೆ ಹಣ ಹೆಚ್ಚಾಗಿ ಬೇಕು. ಆದ್ದರಿಂದ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ ನಿರ್ದೇಶನಕೊಟ್ಟು ಮಾಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಯನ್ನು ಪರಿಶೀಲಿಸುತ್ತೇವೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಎಸ್ಟಿಮೇಟ್ ಈಗ ಯಾವ ಲೆವಲ್‌ನಲ್ಲಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಗ್ಸಿಕ್ಯೂಟಿವ್ ಇಂಜನಿಯರ್ ಲೆವಲ್‌ನಲ್ಲಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಸರ್ಕಾರದ ಮಟ್ಟಕ್ಕೆ ಬರಲು ಇನ್ನೂ ಎಷ್ಟು ಕಾಲ ಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಾದಷ್ಟು ಕಾಲ ಹಿಡಿಯಬಹುದು.

ಶ್ರೀ ಬಿ. ಟಿ. ಕೆಂಪರಾಜ್.—ಈಗಾಗಲೆ ಎಗ್ಸಿಕ್ಯುಟಿವ್ ಇಂಜನಿಯರ ಸಲಹೆಯ ಮೇಲೆ ಟೆಕ್ನಿಕಲ್ ಅಬ್ಜೆಕ್ಷನ್ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ಅವರನ್ನೇ ಕೇಳಬೇಕು, ವರದಿ ಬಂದಿಲ್ಲ.

Land Revenue (Remission in Kolar District).

Q.—360. Sri K. S. VASAN (Kolar Gold Fields).—

Will the Government be pleased to state :—

the talukwar figures Re. Remission of Land Revenue granted in Kolar District for the years 1951-52, 1952-53 and 1953-54 ?

A.—Sri Kadidal MANJAPPA (Minister for Revenue and Public Works).—Statement appended below.

Statement showing the Talukwise figures of remission of Land Revenue granted in Kolar District for the years 1951-52, 1952-53 and 1953-54.

Name of the tank	1951–52			1952–53			1953–54
	Rs.	a.	p.	Rs.	a.	p.	
1. Bangarapet ...	24,594	14	5	63,017	5	10	Nil.
2. Srinivasapur ...	21,016	14	11	52,104	11	1	...
3. Sidlaghatta ...	19,301	15	0	14,655	13	3	...
4. Gudibanda ...	8,633	12	0	4,709	12	11	...
5. Goribidanur ...	40,037	11	6	39,424	2	0	...
6. Kolar ...	8,330	8	0	73,215	14	7	...
7. Chickballapur ...	32,890	2	1	10,945	11	9	...
8. Bagepalli ...	1,25,151	7	1	66,495	2	5	...
9. Mulbagal ...	14,148	0	3	71,131	10	6	...
10. Chintamani ...	63,957	6	2	79,085	15	11	...
11. Malur ...	...			9,075	6	6	...
Total .	3,58,062	11	5	4,83,861	10	9	...

Sri K. S. VASAN.—Have the distress conditions in Gudibanda Taluk in the years 1952 and 1953 really improved and are they better than what they were previously ?

Sri Kadidal MANJAPPA.—It may be in the same condition.

Sri K. S. VASAN.—Have not representations been made that the conditions remained the same in the years 1953 and 1954 in some of the taluks ?

Sri Kadidal MANJAPPA.—No distress conditions in any taluk in these years.

Sri K. S. VASAN.—Are not the Government aware that even now the agriculturists in some taluks are not completely free from the adverse effects of distress conditions ?

Sri Kadidal MANJAPPA.—That is so in every taluk. That some Agriculturists have not recovered from distress conditions is not peculiar to Gudibanda.

Sri K. S. VASAN.—In some other taluks, I mean.

Sri Kadidal MANJAPPA.—Conditions have improved.

High Level Causeway near B. Kalapanahalli, (Construction).

Q.—457. **Sm. Bellary SIDDAMMA** (Davangere).—

Will the Government be pleased to state :—

whether action has been taken to construct a high level causeway near B. Kalapanahalli, Davangere Taluk ?

A.—**Sri Kadidal MANJAPPA** (Minister for Revenue and Public Works).—

Yes.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನನ್ನ ಪ್ರಶ್ನೆಗೆ ಹೌದು ಎಂಬುದಾಗಿ ಉತ್ತರ ಕೊಟ್ಟಿದ್ದೀರಿ. ಯಾವಾಗ ಈ ಕೆಲಸ ಪ್ರಾರಂಭಿಸುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಕೂಡ ಡಿಸ್ಟ್ರಿಕ್ಟ್ ಬೋರ್ಡ್‌ಗೆ ಸಂಬಂಧಪಟ್ಟ ಕಾಲುವೆ. ಮಾನ್ಯ ಸದಸ್ಯರನೇಕರು ರಸ್ತೆ, ಕಾಲುವೆ ರಿಪೇರಿ ಕೆಲಸಗಳನ್ನೆಲ್ಲಾ ಸರ್ಕಾರದವರೇ ಮಾಡಿಸಿಕೊಡಬೇಕೆಂದು ಹೇಳುತ್ತಾರೆ. ಆದರೆ ಈ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್‌ನವರ ಜವಾಬ್ದಾರಿಯೂ ಇದೆ. ಅಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ್ ಸ್ಪೆಷಲ್ ಆಫೀಸರಿಗೆ ಎಸ್ಟಿಮೇಟ್ ಕಳುಹಿಸಿದೆ. ಬಂದಮೇಲೆ ಯೋಚನೆ ಮಾಡುತ್ತೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನನ್ನ ಪ್ರಶ್ನೆಗೆ ಹೌದು ಎಂಬುದಾಗಿ ಉತ್ತರ ಕೊಟ್ಟಿದ್ದೀರಲ್ಲಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಬಗ್ಗೆ ಕಾರ್ಯಕ್ರಮ ಕೈಗೊಂಡಿದೆ, ಎಸ್ಟಿಮೇಟ್ ತಯಾರಾಗಿದೆ. ಆದುದರಿಂದ ಆ ರೀತಿ ಉತ್ತರ ಕೊಟ್ಟಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಡಿಸ್ಟ್ರಿಕ್ಟ್ ಬೋರ್ಡ್‌ನಲ್ಲಿ ಹಣವಿಲ್ಲವೆಂದು ಹೇಳುತ್ತಾರಲ್ಲ ; ಯಾರು ಮಾಡಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಡಿಸ್ಟ್ರಿಕ್ಟ್ ಬೋರ್ಡ್‌ನಲ್ಲಿ ಹಣವಿಲ್ಲದಿದ್ದರೆ ಯೋಚನೆ ಮಾಡೋಣ.

ಶ್ರೀ ಜಿ. ಶಿವಪ್ಪ.—ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್‌ನಲ್ಲಿ ಕೆಲಸ ಮಾಡಿಸಲು ಒಂದು ಬಿಲ್ಲೆ ಕಾಸು ಸಹ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರೂಪಾಯಿಗಟ್ಟಲೆ ಹಣವಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ.

Sri G. SIVAPPA.—Has it come to the notice of the Government that certain works are not maintained or repaired even ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ; ಸಾಕಾದಷ್ಟು ಕೆಲಸ ನೆರವೇರಿದೆ ಎಂದು ಗಮನಕ್ಕೆ ಬಂದಿದೆ.

Sri G. SIVAPPA.—Have not representations been made complaining about the non-maintenance or non-repairs of these works ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸಾಮಾನ್ಯವಾಗಿ ಬರತಕ್ಕ complaint.

ಶ್ರೀ ಜೆ. ಮಹಮ್ಮದ್ ಇಮಾಂ.—'ಡಿಸ್ಟ್ರಿಕ್ಟ್ ಬೋರ್ಡ್‌ನವರ ಕೆಲಸವಿದು, ನಮ್ಮ ಜವಾಬ್ದಾರಿ ಇಲ್ಲ' ಎಂದು ಹೇಳಿದಿರಿ. ಡಿಸ್ಟ್ರಿಕ್ಟ್ ಬೋರ್ಡ್ ಸರಿಯಾಗಿ ಕೆಲಸ ಮಾಡುವಂತೆ ಮಾಡುವ ಜವಾಬ್ದಾರಿ ಸರ್ಕಾರದ್ದಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಜೆ. ಮಹಮ್ಮದ್ ಇಮಾಂ.—ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡಿಗೆ ಸುಮಾರು 8-10 ಲಕ್ಷ ರೂಪಾಯಿಗಳಷ್ಟು liability ಇದೆಯೆಂಬುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ರೀತಿ ಇದ್ದು ಅದಕ್ಕೆ normal work ನೋಡಿಕೊಳ್ಳಲೂ ಶಕ್ತಿ ಇಲ್ಲದಿದ್ದರೆ ಅದಕ್ಕೆ ಸರ್ಕಾರದವರು ಗಮನ ಕೊಟ್ಟು ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದಷ್ಟು ಜಾಗ್ರತೆಯಾಗಿ.

Sri A. BHEEMAPPA NAIK.—Has it come to the notice of the Government that they have passed orders to the effect that all income of District Boards would be adjusted towards loans due by the Boards ?

Mr. DEPUTY SPEAKER.—Questions about District Board administration are not relevant to the question now under discussion.

Railway line from Bangalore to Salem via Bannerghatta and Anekal, (survey).

Q.—529. **Srimathi LAKSHMIDEVI RAMANNA** (Hoskote-Anekal).—

Will the Government be pleased to state :—

(*a*) whether any surveys have been conducted to lay out a railway line from Bangalore to Salem *via* Bannerghatta and Anekal ;

(*b*) if so, how many times and the years in which those surveys were conducted ;

(*c*) whether any change in the above railway route has been contemplated recently ;

(*d*) whether recommendation would be made to Central Government to start the laying of this railway line from this year alone ?

A.—**Sri Kadidal MANJAPPA** (Minister for Revenue and Public Works).—

(*a*) Information not available since all the records of the Railway Department have been transferred to the Central Government during April 1950.

(*b*), (*c*) and (*d*) These do not arise in view of reply to (*a*).

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ.—ಇಂಡಿಯಾ ಸರ್ಕಾರದವರಾದರೂ ಇದನ್ನು ಪರಿಶೀಲಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರ ಈಗ ಕೇಂದ್ರ ಸರ್ಕಾರದವರಿಗೆ ಸೇರಿದ್ದು. ಆದುದರಿಂದ ನಾವೇನೂ ಮಾಡುವಹಾಗಿಲ್ಲ.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ.—ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರಿಗೆ ನಮ್ಮ ಸರ್ಕಾರದವರು ಶಿಫಾರ್ಸು ಮಾಡಲು ಸಾಧ್ಯವೇ ಎಂದು ಕೇಳಿರುವ ಪ್ರಶ್ನೆಗೆ ಉತ್ತರವಾಗಿ, ಇದನ್ನು ಕೇಳುವುದಕ್ಕೆ ಅವಕಾಶವೇ ಇಲ್ಲವೆಂದು ತಿಳಿಸಿದ್ದೀರಿ. ಅಂದರೆ, ಇದನ್ನು ಶಿಫಾರ್ಸು ಮಾಡಲು ಸಹ ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಬಹುದು.

ಶ್ರೀ ಬಿ. ಟಿ. ಕೆಂಪರಾಜ್.—ಕೇಂದ್ರ ಸರ್ಕಾರದವರು ಪ್ರಾಂತ್ಯ ಸರ್ಕಾರಕ್ಕೆ ಸಂಬಂಧಿಸಿದ ಹಾಗೆ ರೈಲ್ವೆ ಲೈನ್ ಹಾಕುವಾಗ ಪ್ರಾಂತ ಸರ್ಕಾರದ ಸಲಹೆ ಕೇಳುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದುವರೆಗೆ ಕೇಳಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಇದುವರೆಗೆ ಕೇಂದ್ರ ಸರ್ಕಾರದವರು ಪ್ರಾಂತ ಸರ್ಕಾರದ ಸಲಹೆ ಕೇಳಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ರೈಲ್ವೆ ಲೈನ್ ಹಾಕುವ ವಿಚಾರದಲ್ಲಿ ಕೇಳಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಮೈಸೂರು ಸರ್ಕಾರದವರೇನಾದರೂ ಈ ವಿಚಾರದಲ್ಲಿ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಲಹೆಗಳನ್ನು ಕಳುಹಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಯಾವ ಯಾವ ಮಾರ್ಗಗಳನ್ನು ಸೇರಿಸಿ ಸಲಹೆ ಕಳುಹಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಮನಸ್ಸಿನಲ್ಲಿರುವ ಮಾರ್ಗವೂ ಸಹ ಆ ಸಲಹೆಯಲ್ಲಿ ಸೇರಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರು-ಕಡೂರು-ಮಂಗಳೂರು ರೈಲ್ವೆ ಲೈನ್ ಅದರಲ್ಲಿ ಸೇರಿದೆಯೋ ?

Sri Kadidal MANJAPPA.—That does not arise.

Sri M. PALANIYAPPAN.—Has it come to the notice of the Government that there are no adequate railway facilities in the State ?

Sri Kadidal MANJAPPA.—That is too general a question.

Sri M. PALANIYAPPAN.—Will the Government represent to the Central Government and see that more railway facilities are given ?

Mr. DEPUTY SPEAKER.—That is also a general question. It is a suggestion you are making.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನಿಂದ ಸೇಲಂಗೆ ಬನ್ನೇರುಘಟ್ಟದ ಮಾರ್ಗವಾಗಿ ರೈಲ್ವೆ ಲೈನ್ ಹಾಕುವ ವಿಚಾರದಲ್ಲಿ ಕೇಂದ್ರ ಸರ್ಕಾರದವರೇನಾದರೂ ಸರ್ವೇ ನಡೆಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ತಿಳಿದುಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಲೈನ್ ಹಾಕುವ ವಿಚಾರ ಬಹಳ ದಿನಗಳಿಂದ ಸರ್ಕಾರದ ದೃಷ್ಟಿಯಲ್ಲಿದ್ದು ಕೈಬಿಟ್ಟಿರುವುದರಿಂದ ಇದನ್ನು ತೆಗೆದುಕೊಳ್ಳುವುದುಚಿತವೆಂಬ ವಿಚಾರದಲ್ಲಿ ನಮ್ಮ ಸರ್ಕಾರದವರು ಕೇಂದ್ರಸರ್ಕಾರದವರನ್ನು ಕೇಳಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಪ್ರದೇಶದ ಪಾರ್ಲಮೆಂಟ್ ಮೆಂಬರಿಗೆ ಜನರು ಮನವಿ ಸಲ್ಲಿಸಿರುವುದು ಸರ್ಕಾರದವರಿಗೆ ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗೆ ಒಂದುವೇಳೆ ಮನವಿ ಬಂದರೆ ಈಗಲಾದರೂ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಈ ಲೈನ್ ತೆಗೆದುಕೊಳ್ಳುವ ವಿಚಾರವನ್ನು ಒತ್ತಾಯಪಡಿಸುತ್ತೀರಾ ?

Mr. DEPUTY SPEAKER.—That is hypothetical.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಾನು ಮತ್ತು ಆ ಪ್ರದೇಶದ ಪಾರ್ಲಿಮೆಂಟ್ ಮೆಂಬರೊಬ್ಬರು ಮೈಸೂರು ಸರ್ಕಾರದವರಲ್ಲಿ ಈ ವಿಚಾರವಾಗಿ ಮನವಿ ಮಾಡಿರುವುದು ಗೊತ್ತೇ ?

Sri M. MADIAH.—I rise to a point of order. According to rule 26 (f) a question shall not relate to a matter which is not the concern of Government. The subject matter of the question now is one which does not relate to this Government.

Mr. DEPUTY SPEAKER.—I do not think there is any point of order. His concern is about the railway facilities in the Mysore State not being adequate. Even though the Government of India have to provide the facilities, this Government is concerned with making recommendations. That is his object.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಲೈನು ಹಾಕುವ ವಿಚಾರದಲ್ಲಿ ಸರ್ಕಾರದವರನ್ನು ಒತ್ತಾಯಪಡಿಸಿರುವುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಯೋಚನೆ ಮಾಡತಕ್ಕ ವಿಚಾರ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಮ್ಮ ಸರ್ಕಾರದವರು ಇನ್ನು ಮುಂದಾದರೂ ಈ ಲೈನನ್ನು ಅವರ ಕಾರ್ಯ ಕ್ರಮದಲ್ಲಿ ಸೇರಿಸಿಕೊಂಡು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡೋಣ.

Sri A. BHEEMAPPA NAIK.—Does the State's second Five-Year Plan contain a proposal to lay a railway line with in the Mysore State ?

Sri Kadidal MANJAPPA.—The State's Five-Year Plan cannot necessarily contain a provision relating to the laying of a railway line.

Sri A., BHEEMAPPA NAIK.—I am not asking you about the necessities or otherwise. Do you wish to propose this line in the second Five-Year Plan ?

Sri Kadidal MANJAPPA.—We have proposed already certain lines.

Mr. DEPUTY SPEAKER.—This question refers only to a particular line. Your question is too general.

Sri A. BHEEMAPPA NAIK.—I am putting the question whether the Government of Mysore propose to recommend to include in the second Five-Year Plan of Mysore this particular bit to be done by the Government of India ?

Sri Kadidal MANJAPPA.—That we may recommend. But in view of the other factors, I do not know whether the Government of India will give priority to this line.

Sri A. BHEEMAPPA NAIK.—I am not asking whether the Government of India will give priority. Do you recommend this line particularly to be included in the second Five-Year Plan ?

Sri Kadidal MANJAPPA.—I have already said, I am aware of it.

Lakkavalli Project.

Q.—632. **Sri T. C. BASAPPA** (Tarikere).—

Will the Government be pleased to state :—

The amount spent for Lakkavalli Project towards (i) the dam, and (ii) the channels ?

A.—**Sri Kadidal MANJAPPA** (Minister for Revenue and Public Works).—

(i) The amount spent on Lakkavalli Project since commencement and up to end of August 1954 is as follows :—

		Rs.
(ii) Dam	...	1,92,57,551
Channels	...	34,09,679
Total	...	2,26,67,230

ಶ್ರೀ ಟಿ. ಸಿ. ಬಸಪ್ಪ.—ಈ ಒಂದು ಕೋಟಿ ಚಿಲ್ಲರೆ ರೂಪಾಯಿಗಳ Dam foundation ಕೆಲಸ ಪೂರ್ತಿ ಆಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿದೆ.

ಶ್ರೀ ಟಿ. ಸಿ. ಬಸಪ್ಪ.—ಇದರಲ್ಲಿ Left Bank Channel Labour Colony ಗೆ housing ಮತ್ತು Water Supply Scheme ಸಹ ಸೇರಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—Housing ಬಗ್ಗೆ ಕೆಲವು ಕಡೆಗಳಲ್ಲಿ ಷೆಡ್ಸ್ ಹಾಕಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಹಳೇ ಲಕ್ಕವಳ್ಳಿ ಟೌನಿನಲ್ಲಿ ವಾಟರ್ ಸಪ್ಲೈಗೆ 23 ಲಕ್ಷ ರೂಪಾಯಿಗಳ ಸ್ಕೀಂ ಸೇರಿಸಲು ಯೋಜನೆ ಮಾಡಿರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಲಕ್ಕವಳ್ಳಿ ಕೆಲಸ ಪೂರ್ತಿ ನಡೆದ ಮೇಲೆ ಅದು ಬರುತ್ತಿತ್ತು. ಈಗ ಕೇಂದ್ರ ಸರ್ಕಾರದವರ ಸಹಾಯ ಬಂದಿದ್ದರಿಂದ ಲಕ್ಕವಳ್ಳಿ ಗ್ರಾಮಕ್ಕೆ ನೀರು ಸರಬರಾಯಿ ಮಾಡಲು ಎಸ್ಟಿಮೇಟ್ ತಯಾರು ಮಾಡುತ್ತಾ ಇದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಕಾಲರಾದಿಂದ ಸುಮಾರು ನೂರಾರು ಹೆಣ ಇಲ್ಲಿಯುವರೆಗೂ ಬಿದ್ದಿದೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಲರಾ ಇದೆ ಎಂದು ಹೇಳಿ ನನ್ನ ಗಮನಕ್ಕೆ ಬಂದಿದೆ. ನೂರಾರು ಹೆಣ ಬಿದ್ದಿದೆ ಎಂದು ಬಂದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ಇಲ್ಲಿಯವರೆಗೂ ಕಾಲರಾದಿಂದ ಕೊನೆಯಪಕ್ಷ ನೂರಾರು ಜನ ಸತ್ತುಹೋಗಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಜನ ಸತ್ತು ಹೋಗಿದ್ದಾರೆ ಎಂಬ ಸರಿಯಾದ ಅಂಕಿಅಂಶಗಳು ಇಲ್ಲ. ಮಾನ್ಯ ಸದಸ್ಯರು ಸನ್ನ ಗಮನಕ್ಕೆ ತಂದಿದ್ದರಿಂದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆಜ್ಞೆಮಾಡುತ್ತಾರೆ ಮತ್ತು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಲೂ ಇದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಇದುವರೆಗೂ ಹಳೇ ಲಕ್ಕವಳ್ಳಿಗೆ ಸಂಬಂಧಪಟ್ಟ ನೀರು ಸರಬರಾಯಿ ಯೋಜನೆ ತಡವಾಗುವುದಕ್ಕೆ ಕಾರಣ ಏನು, ಸ್ವಾಮಿ?

Sri Kadidal MANJAPPA.—I submit Sir, this question will not arise out of the main question.

Sri T. C. BASAPPA.—Because it is included in the figures, Sir, ಒಂದು ಕೋಟಿ ರೂಪಾಯಿಗಳಲ್ಲಿ ಎಲ್ಲ ಯೋಜನೆಯೂ ಅಡಕವಾಗಿದೆ; ಆದ್ದರಿಂದ ಹಳೇ ಟೌನ್ನ ವಾಟರ್ ಸಪ್ಲೈ ಸ್ಕೀಂ ಸಹ ಇದರಲ್ಲಿ ಸೇರಬೇಕಾಗಿತ್ತು. ಆದಷ್ಟು ಜಾಗ್ರತೆ ಈ ನೀರು ಸರಬರಾಯಿ ಯೋಜನೆಯನ್ನು ಮಂಜೂರುಮಾಡಲಿಕ್ಕಾದರೂ ಯೋಚನೆ ಮಾಡಲಿಕ್ಕೆ ಸಾಧ್ಯವೇ, ಸ್ವಾಮಿ?

Mr. DEPUTY SPEAKER.—You can put any question arising out of the answers given. If there is anything outside the scope of this question, it will be very difficult to admit. Supplementaries will generally arise out of the answers given; they should not be completely different from the main question.

Sri T. C. BASAPPA.—In the figures they have furnished this scheme is included, Sir.

Mr. DEPUTY SPEAKER.—It may have been furnished. But my duty is to confine supplementaries to the main question.

ಶ್ರೀ ಟಿ. ಸಿ. ಬಸಪ್ಪ.—ಈಗ ಈ ಚಾನಲ್‌ಗಾಗಿ ಖರ್ಚುಮಾಡಿರುವ ಹಣದಲ್ಲಿ ಅದರಲ್ಲೂ ಸಹ ಹೆಲ್ತ್ ವಿಚಾರದಲ್ಲಿ ಸೂಕ್ತ ಏರ್ಪಾಡು ಮಾಡುವ ವಿಚಾರ ಸೇರಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟಿನಲ್ಲಿ ಸೇರಿದೆ.

ಶ್ರೀ ಟಿ. ಸಿ. ಬಸಪ್ಪ.—ರೈಟ್ ಬ್ಯಾಂಕ್ ಚಾನಲ್‌ಗೆ ಒಬ್ಬ ಡಾಕ್ಟರೂ ಇಲ್ಲದೆ ದಿನವಹಿ 8-10 ಜನ ಸಾಯುತ್ತಾ ಇದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ, ಸ್ವಾಮಿ?

Sri Kadidal MANJAPPA.—Does this question arise, Sir?

Mr. DEPUTY SPEAKER.—If the Hon'ble Minister has no information, he can ask for notice.

Sri Kadidal MANJAPPA.—There are doctors and arrangements have been made for the visit of doctors to these areas.

ಶ್ರೀ ಟಿ. ಸಿ. ಬಸಪ್ಪ.—ಅಲ್ಲಿ ಒಬ್ಬ ಡಾಕ್ಟರನ್ನು ಇಡತಕ್ಕ ಯೋಜನೆಯನ್ನು ಬಿಟ್ಟು ವಿಸಿಟ್ ಮಾಡತಕ್ಕ ಯೋಜನೆಯನ್ನು ಇಟ್ಟುಕೊಂಡಿದ್ದೀರೋ ಅಥವಾ ಒಬ್ಬ ಡಾಕ್ಟರನ್ನೇ ಇಡಲಿಕ್ಕೆ ಏರ್ಪಾಡು ಮಾಡುತ್ತೀರೋ ಎಂದು?

ಶ್ರೀ ಕಡಿದಾಳ್ ಮಂಜಪ್ಪ.—ಖಾಯಂ ಆಗಿ ಒಬ್ಬ ಹೆಲ್ತ್ ಆಫೀಸರನ್ನು ಇಡಬೇಕೆಂಬ ಸಲಹೆ ಇದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಜಲಾಶಯ ಪ್ರಾರಂಭವಾದದ್ದು ಯಾವಾಗ?

Sri Kadidal MANJAPPA.—I think it is in the year 1946-47.

ಶ್ರೀ ಎಸ್. ಗೋಪಾಲಗೌಡ.—ಒಟ್ಟು ತಗಲತಕ್ಕ ವೆಚ್ಚದ ಮೊಬಲಗೆಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು 132 ಲಕ್ಷ ರೂಪಾಯಿಗಳು.

ಶ್ರೀ ಎಸ್. ಗೋಪಾಲಗೌಡ.—ಮೊದಲನೆ ಪಂಚವಾರ್ಷಿಕ ಯೋಜನೆ ಮುಕ್ತಾಯವಾಗುವ ಹೊತ್ತಿಗೆ ನಿರೀಕ್ಷಿಸಿದಷ್ಟು ಕೆಲಸ ಆಗುವುದಕ್ಕೆ ಸಾಧ್ಯವಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಿದೆ.

ಶ್ರೀ ಎಸ್. ಗೋಪಾಲಗೌಡ.—ಈಗ ಎಷ್ಟನ್ನು ಕಾರ್ಯ ರೂಪಕ್ಕೆತಂದಿದ್ದೀರಿ, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ಆ ಸಮಾಚಾರ ನನ್ನ ಹತ್ತಿರ ಇಲ್ಲ. ಬೇಕಾದರೆ ಆಮೇಲೆ ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈಗ ನಡೆಯುತ್ತಾ ಇರುವ ಕೆಲಸಗಳಲ್ಲಿ ಎಷ್ಟು ಭಾಗವನ್ನು ಅಮಾನಿ ಮೇಲೆ ನಡೆಸಲಾಗುತ್ತಿದೆ ಮತ್ತು ಎಷ್ಟು ಭಾಗವನ್ನು ಕಂಟ್ರಾಕ್ಟ್‌ದಾರರಿಗೆ ಕೊಡುತ್ತಾರೆ ಎಂಬ ವಿಷಯವನ್ನು ಸಭೆಗೆ ತಿಳಿಸುವುದಕ್ಕೆ ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಕನ್‌ಸ್ಟ್ರಕ್ಷನ್ ಕೆಲಸ ಅಮಾನಿ ಮೇಲೆ ಮಾಡುತ್ತಾರೆ. Departmental ಆಗಿ ಬಾಕಿ ಕೆಲಸಗಳನ್ನು Piecework system ಮೇಲೆ ಮಾಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಅಮಾನಿ ಸಿಸ್ಟಂ ಮೇಲೆ ಮಾಡತಕ್ಕ ಕೆಲಸದ ಮೇಲೆ ಸರಿಯಾದ ಸೂಪರ್‌ವಿಷನ್ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಅನೇಕ ಸಾರಿ ಅನೇಕ ಸಂದರ್ಭಗಳಲ್ಲಿ ಪರಿಶೀಲನೆ ಮಾಡಿದ್ದೇನೆ. ಸೂಪರ್‌ವಿಷನ್‌ಗೆ ಸಾಕಾದಷ್ಟು ಸಿಬ್ಬಂದಿ ಕೊಟ್ಟಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಈ ಕೆಲಸಕ್ಕೆ ಅಡಿಷನಲ್ ಎಸ್ಟ್ಯಾಬ್ಲಿಷ್‌ಮೆಂಟ್ ಇಟ್ಟುಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಬೇಕಾದಷ್ಟು ಮಾತ್ರ ಇಟ್ಟುಕೊಂಡಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಇದರ ಅಂದಾಜು ತಯಾರು ಮಾಡಿದಾಗ ಇದನ್ನು ಯಾವ ವರ್ಷದಲ್ಲಿ ಪೂರೈಸಬೇಕೆಂದು ಇತ್ತೋ ಆ ವರ್ಷದಲ್ಲಿ ಇದು ಮುಗಿಯದೇ ಇರುವುದರಿಂದ ಸರ್ಕಾರದವರಿಗೆ ನಷ್ಟವಾಗುತ್ತದೆ ಎಂಬುದು ಗೊತ್ತೇ?

ಶ್ರೀ ಕಡಿದಾಳ್ ಮಂಜಪ್ಪ.—ಫಸ್ಟ್ ಸ್ಟೇಜ್ ಯಾವಾಗ ಮುಗಿಯಬೇಕೆಂದು ಇತ್ತೋ ಆ ಅವಧಿಯೊಳಗೆ ಮುಗಿಯತಕ್ಕ ಸನ್ನಿವೇಶವಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಈ ಅಂದಾಜಿನಲ್ಲಿ ಯಾವ ಅವಧಿಯೊಳಗೆ ಮುಗಿಸಬೇಕೆಂದು ಕಾಣಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಫಸ್ಟ್‌ಸ್ಟೇಜು 1956 ರಲ್ಲಿ ಮುಗಿಯಬೇಕೆಂದಿದೆ.

ಶ್ರೀ ಯು. ಎಂ. ಮಾದಪ್ಪ.—ಈ ಪ್ರಾಜೆಕ್ಟು ಮುಗಿಯಬೇಕಾದರೆ ಎಷ್ಟು ವರ್ಷಗಳಲ್ಲಿ ಮುಗಿಯಬೇಕು ಎಂಬುದನ್ನು ಅಂದಾಜಿನಲ್ಲಿ ಸೂಚಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಫಸ್ಟ್‌ಸ್ಟೇಜ್‌ನಲ್ಲೇ ಮುಗಿಯಬೇಕೆಂದು ಇತ್ತು.

ಶ್ರೀ ಯು. ಎಂ. ಮಾದಪ್ಪ.—ಪ್ರಾಜೆಕ್ಟು ಪೂರ್ತಿ ಮಾಡಬೇಕಾದರೆ ಇಷ್ಟು ವರ್ಷಗಳಲ್ಲಿ ಪೂರೈಸಬೇಕು ಎಂದು ಅಂದಾಜಿನಲ್ಲಿ ನಮೂದಾಗಿತ್ತೇ ಎಂದು ನನ್ನ ಪ್ರಶ್ನೆ.

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟು ವರ್ಷಗಳಲ್ಲಿ ಮುಗಿಯಬೇಕೆಂದು ಅಂದಾಜಿನಲ್ಲಿ ನಮೂದು ಮಾಡುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಈಗ ಎಸ್ಟಿಮೇಟ್ಸ್ ಸಮಿತಿಯವರು ನಮ್ಮ ಮುಂದೆ ಇಟ್ಟಿರತಕ್ಕ 1954ನೇ ಇಸವಿ ವರದಿಯ ಪ್ರಕಾರ ತಿಳಿಸಿರುವ ಅಂಶ ತಮ್ಮ ಗಮನಕ್ಕೆ ಬಂದಿದೆಯೋ ?

ಶ್ರೀ ಕಡಿದಾಳ್ ಮಂಜಪ್ಪ.—ನೋಡಿದ್ದೇನೆ.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಈಗ ತಾವು ಹೇಳಿದ್ದು ಸರಿ ತಾನೆ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಅಂದಾಜಾದರೂ ಕೂಡ ಇಷ್ಟು ಅವಧಿ ಒಳಗೆ ಮುಗಿಯಬೇಕೆಂದು ಇಟ್ಟುಕೊಂಡಿರುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಅದು ಯಾವ ಅವಧಿ ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವುದು ಎಂಬುದು ನೆನಪಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಆ ಅವಧಿಯೊಳಗೆ ಮುಗಿಯದೇ ಇರುವುದರಿಂದ ಸರ್ಕಾರದವರಿಗೆ ನಷ್ಟವಾಗುತ್ತದೆ ಎಂದು ತಿಳಿಸಿರುವುದು ತಮ್ಮ ಗಮನಕ್ಕೆ ಬಂದಿದೆ ತಾನೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲ ರೀತಿಯಲ್ಲೂ ಕೆಲಸ ನಿಧಾನವಾಗಿಯೇ ಆಗುತ್ತದೆ. ಈ ಪ್ರಾಜೆಕ್ಟಿನ ವಿಚಾರದಲ್ಲಿ ಹೇಳುವುದಾದರೆ ಹಣ ಕಾಸಿನ ಅಭಾವದಿಂದ ಈ ಕೆಲಸವನ್ನು ಜಾಗ್ರತೆಮಾಡುವುದಕ್ಕೆ ಆಗಲಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರದ ಡಿಫೆಕ್ಟಿವ್ ಪಾಲಿಸಿ ತಾನೆ ಇದಕ್ಕೆ ಕಾರಣವಾಗಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲ.

12-30 P.M.

Additional District Court at Mysore (re-starting).

Q.—264. **Sri M. LINGANNA** (Nanjangud).—

Will the Government be pleased to state :—

(*a*) whether the Government have been requested to re-start additional District Court at Mysore ;

(*b*) if so, what action they have taken by now ?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) The matter is under consideration of Government.

ಶ್ರೀ ಎಂ. ಲಿಂಗಣ್ಣ.—ಎಷ್ಟು ತಿಂಗಳಿಂದ ಸರ್ಕಾರದವರು ಈ ವಿಷಯವನ್ನು ಪರ್ಯಾಲೋಚಿಸುತ್ತಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಸುಮಾರು ಎರಡು ತಿಂಗಳಿಂದ.

ಶ್ರೀ ಎಂ. ಲಿಂಗಣ್ಣ.—ಹಾಗಾದರೆ ಈಗ ಇದರ ಸಂಬಂಧದಲ್ಲಿ ಆಖೈರು ತೀರ್ಮಾನವಾಗಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಈ ವಿಷಯ ಪರ್ಯಾಲೋಚನೆಯಲ್ಲಿದೆಯೆಂದು ಹೇಳಿದೆ.

ಶ್ರೀ ಎಂ. ಲಿಂಗಣ್ಣ.—ಈ ವಿಷಯವನ್ನು ಎರಡು ತಿಂಗಳಿಂದ ಪರ್ಯಾಲೋಚನೆಮಾಡಬೇಕಾದ ಆವಶ್ಯಕತೆಯೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಕೋರ್ಟುಗಳ ರೀ-ಆರ್ಗನೈಜೇಷನ್‌ಗಾಗಿ ಸಮಿತಿಯನ್ನೇರ್ಪಡಿಸಿರುವುದು ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ಆ ಸಮಿತಿಯ ವರದಿ ಬಂದಮೇಲೆ, ಯಾವ ರೀತಿ ಮಾಡಬೇಕೆಂಬುದನ್ನು ಇತ್ಯರ್ಥಮಾಡಬೇಕಾಗುತ್ತದೆ.

Sri M. LINGANNA.—Shall I take it that till the report of that Committee comes to Government, no action will be taken so far as this matter is concerned ?

Sri A. G. RAMACHANDRA RAO.—The view is, as far as possible, to reorganize the courts after we receive the report.

Sri M. LINGANNA.—Is it not a fact that because of the abolition of this court, the work has accumulated ?

Sri A. G. RAMACHANDRA RAO.—It is not a question of abolition ; it was an additional court and when the work was completed, it ceased to work.

Sri M. LINGANNA.—Did Government take the consent of the judiciary before they abolished the additional court ?

Sri A. G. RAMACHANDRA RAO.—Yes.

Sri M. LINGANNA.—May I know the opinion of the Judiciary on this point, Sir ?

Sri A. G. RAMACHANDRA RAO.—They recommended for its continuance.

Sri M. LINGANNA.—Then, what was the reason for abolishing this additional court ?

Sri A. G. RAMACHANDRA RAO.—The acceptance of the recommendation is not inexorable.

Sri M. LINGANNA.—But, still was it not the duty of Government to see that in the interest of proper working of justice, this court was continued ?

Sri A. G. RAMACHANDRA RAO.—Certainly justice has not suffered.

Sri M. LINGANNA.—Is it not a fact that justice has been delayed to a certain extent ?

Sri A. G. RAMACHANDRA RAO.—Whenever we think of a reorganisation, consequential inconveniences may happen.

Sri M. LINGANNA.—Shall I take it that Government will not act till the report is received ?

Sri A. G. RAMACHANDRA RAO.—That would be the best way of doing it.

Sri M. LINGANNA.—What would they do in the intermediate period for the speedy disposal of the heavy files before the District Judge ?

Sri A. G. RAMACHANDRA RAO.—The existing court will attend to the work.

Sri M. LINGANNA.—Have Government not received representations from the Judiciary as well as by the Bar that an additional court is necessary and it should be opened in the immediate future ?

Sri A. G. RAMACHANDRA RAO.—As I said, their views are under consideration of Government.

ಶ್ರೀ ಟಿ. ಎ. ತಿಮ್ಮಪ್ಪಗೌಡ.—ಮೈಸೂರಿಗೆ ಅಡಿಷನಲ್ ಕೋರ್ಟನ್ನು ಕೊಡುವುದಕ್ಕೆ ಬದಲಾಗಿ ಹಾಸನದಲ್ಲಿ ಒಂದು ಕೋರ್ಟನ್ನು ಸ್ಥಾಪಿಸುವುದು ಒಳ್ಳೆಯದಲ್ಲವೆ ?

Sri A. G. RAMACHANDRA RAO.—In fact, the main purpose of reorganising these courts is to meet the demands of the nature mentioned by the Hon'ble member.

Jurisdiction of Courts (Reorganisation).

Q.—350. **Sri A. BHEEMAPPA NAIK** (Molakalmuru).—

Will the Government be pleased to state :—

(*a*) whether the High Court of Mysore are contemplating to reorganise the Civil and Criminal jurisdiction of Courts in the State ;

(*b*) whether any Committee has been appointed to make a report in this respect ;

(*c*) whether any report has been received so far ;

(*d*) whether they will consult the House before finalising the proposal ?

A.—**Sri A. G. RAMACHANDRA RAO** (Minister for Law and Education).—

(*a*) and (*b*) A Committee consisting of Justice Sri T. N. Mallappa as Chairman and Sri M. P. Somasekhara Rao and Sri Neele Gowda, Advocates, has been appointed by the Government for suggesting measures for reorganising the territorial and pecuniary jurisdiction of Courts.

(*c*) No.

(*d*) This will be considered by Government at the time of taking action on the report of the Committee.

Sri A. BHEEMAPPA NAIK.—What are the terms of reference to this Committee, Sir ?

Sri A. G. RAMACHANDRA RAO.—As the Hon'ble member knows various people were urging for establishing courts in their area, some near the existing courts and some far away. Therefore, it was felt that it would be better to assess the work of each of the locality and then distribute the courts.

Sri A. BHEEMAPPA NAIK.—Will the cost of litigation and also the nearness of the area be taken into consideration in reorganising this, Sir ?

Sri A. G. RAMACHANDRA RAO.—Yes, those two factors and other factors also will be taken into consideration.

Sri A. BHEEMAPPA NAIK.—Will the opinion of the people nearby those areas also be taken into consideration as regards including a taluk either to one court or to the other ?

Sri A. G. RAMACHANDRA RAO.—Yes.

Sri A. BHEEMAPPA NAIK.—Before implementing this, will the Government be pleased to assure that they would place that report before this House and take the general opinion of the House ?

Sri A. G. RAMACHANDRA RAO.—Certainly the report will be placed before the House; whether they would be consulted, will be considered and decided at an appropriate time.

National Extension Service (Chitaldrug District).

Q.—77. **Sri T. HANUMIAH** (Hiriyur—Scheduled Castes).—

Will the Government be pleased to state :—

(*a*) the taluk of the Chitaldrug District in which the National Extension Service has been brought into force ;

(*b*) the taluk in which the Government desire to bring into force the said Extension Service during this year ?

A.—**Dr. R. NAGAN GOWDA** (Minister for Agriculture).—

(*a*) Harihar-Davangere.

(*b*) Holalkere.

ಶ್ರೀ ಟಿ. ಹನುಮಯ್ಯ.—ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವಿಸ್ ಯಾವಯಾವ ಆಧಾರದ ಮೇಲೆ ಜಾರಿಗೆ ತರುತ್ತೀರಿ ? ಯಾವ ನೀತಿ ನಿಯಮಗಳ ಮೇಲೆ ಸ್ಥಳಗಳನ್ನು ಚುನಾಯಿಸುತ್ತೀರಿ ?

ಡಾ॥ ಆರ್. ನಾಗನಗೌಡ.—ಅಡ್ಮಿನಿಸ್ಟ್ರೇಟಿವ್ ಅನುಕೂಲತೆ ನೋಡಿಕೊಂಡು ಆವಶ್ಯಕತೆ ಹೆಚ್ಚಾಗಿರುವ ಕಡೆಗಳನ್ನು ಚುನಾಯಿಸಲಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಸೆಂಟ್ರಲ್ ಪ್ಲಾನಿಂಗ್ ಕಮಿಷನ್‌ನವರು ಇದನ್ನು ಜಾರಿಗೆ ತರಬೇಕಾದರೆ ಇಂಥ ನೀತಿ ನಿಯಮಗಳನ್ನನುಸರಿಸಬೇಕು, ಇಂಥ ಕಡೆಗಳಿಗೆ ಮೊದಲು ಪ್ರಿಫರೆನ್ಸ್ ಕೊಡಬೇಕು ಎಂದು ಏನಾದರೂ ಸಂಸ್ಥಾನದ ಸರ್ಕಾರಕ್ಕೆ ತಿಳಿಸಿದ್ದಾರೆಯೆ ?

ಡಾ॥ ಆರ್. ನಾಗನಗೌಡ.—ಜನರಲ್ ಇನ್‌ಸ್ಟ್ರಕ್ಷನ್ಸ್ ಕಳುಹಿಸಿದ್ದಾರೆ.

ಶ್ರೀ ಟಿ. ಹನುಮಯ್ಯ.—ಆ ಇನ್‌ಸ್ಟ್ರಕ್ಷನ್ಸ್ ದಾವಣಗೆರೆ, ಹರಿಹರ ಮತ್ತು ಹೊಳಲ್ಕೆರೆ ಕಾನ್‌ಸ್ಟಿಟ್ಯುಯೆನ್ಸಿಗೆ ಅನ್ವಯಿಸುತ್ತದೆಯೆ ?

ಡಾ॥ ಆರ್. ನಾಗನಗೌಡ.—ಇಡೀ ಸಂಸ್ಥಾನಕ್ಕೆಲ್ಲಾ ಅನ್ವಯಿಸುತ್ತದೆ.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಿಗೆ ಫಸ್ಟ್ ಪ್ರಿಫರೆನ್ಸ್ ಕೊಡಬೇಕೆಂದು ಸೆಂಟ್ರಲ್ ಪ್ಲಾನಿಂಗ್ ಕಮಿಷನ್‌ನವರು ಅಭಿಪ್ರಾಯಪಟ್ಟಿಲ್ಲವೆ ?

ಡಾ॥ ಆರ್. ನಾಗನಗೌಡ.—ಆ ತಾಲ್ಲೂಕುಗಳ ಟರ್ನ್ ಸಹ ಬರುತ್ತದೆ.

ಶ್ರೀ ಟಿ. ಹನುಮಯ್ಯ.—ಈಗ ಹೊಳಲ್ಕೆರೆ ತಾಲ್ಲೂಕನ್ನು ಬಿಟ್ಟು ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳನ್ನು ತೆಗೆದುಕೊಳ್ಳಲು ಕಾರಣವೇನು ? ಯಾವ ಉದ್ದೇಶದಿಂದ ಯಾವ ಆಧಾರದ ಮೇಲೆ ತೆಗೆದುಕೊಂಡಿರಿ ?

ಡಾ॥ ಆರ್. ನಾಗನಗೌಡ.—ಅದನ್ನು ತೆಗೆದುಕೊಳ್ಳಬೇಕೆಂದು ಗೊತ್ತು ಮಾಡಿತ್ತು. ಅಡ್ಮಿನಿಸ್ಟ್ರೇಟಿವ್ ಅನುಕೂಲತೆ ನೋಡಿ ತೆಗೆದುಕೊಳ್ಳಲಾಯಿತು.

Mr. DEPUTY SPEAKER.—I just want to know whether the Hon'ble Minister has anything to say ?

Dr. R. NAGAN GOWDA.—As you were kind enough to remark, I have already answered the question.

Sri A. BHEEMAPPA NAIK.—That is not correct. Simply to say something and after another supplementary say is put to that he has already answered the question, is not correct. Let him give reasons as to why they left off Harihar Taluk or Davangere Taluk. What was the recommendation made ? What are the reasons for leaving out that taluk ? We are very serious about this.

(*Interruptions*)

Mr. DEPUTY SPEAKER.—I am very sorry that this is not the way of proceeding with our business.

Sri A. BHEEMAPPA NAIK.—And it is not also the way of answering.

Mr. DEPUTY SPEAKER.—That is also true. I hope the concerned Minister may be in a position to satisfy the members as far as possible. The question is simple and definite. I think he must be in a position to answer satisfactorily. He has, no doubt, in a way answered but there is no harm in repeating a satisfactory answer.

Dr. R. NAGAN GOWDA.—Thank you, Sir. But since you were kind enough already to remark that the Minister has already answered, I did not of think of answering. Anyhow I I will answer it again. We have had to select one of the Taluks from Chitaldrug District and so we suggested Holalkere. The other taluks also get their turn in due course of time.

ಶ್ರೀ ಟಿ. ಹನುಮಯ್ಯ.—ಹೊಳಲ್ಕೆರೆ ತಾಲ್ಲೂಕನ್ನು ಈ National Extension Service ಗೆ ಚುನಾಯಿಸಿ ಕೊಳ್ಳುವ ವಿಚಾರದಲ್ಲಿ ಯಾರನ್ನಾದರೂ ಸಲಹೆ ಕೇಳಿದ್ದರೇ ?

Dr. R. NAGAN GOWDA.—It is not necessary.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಡಿಸ್ಟ್ರಿಕ್ಟ್‌ನಲ್ಲಿ ಇದಕ್ಕೆ ಯಾವ ತಾಲ್ಲೂಕು ಸರಿಯಾಗಿದೆಯೆಂಬ ಬಗ್ಗೆ ಇಲಾಖೆಯ ಅಧಿಕಾರಿಗಳನ್ನೇನಾದರೂ ಸಲಹೆ ಕೇಳಿದ್ದರೇ ?

Dr. R. NAGAN GOWDA.—We had not asked the Agricultural Department about that.

ಶ್ರಿ ಟಿ. ಹನುಮಯ್ಯ.—ಈ ವಿಚಾರದಲ್ಲಿ ಯಾರಿಂದಲೂ ಅರ್ಜಿ ಬಂದಿಲ್ಲ, ಯಾವ ಇಲಾಖೆಯ ಅಧಿಕಾರಿಗಳ ಸಲಹೆಯನ್ನೂ ಕೇಳಿಲ್ಲ, ಕೇಂದ್ರದಿಂದ ಈ ಬಗ್ಗೆ ಬಂದಿರುವ general instructions ಅನುಸರಿಸಿಲ್ಲ—ಹೀಗಿರುವಾಗ ಯಾವ ಆಧಾರದ ಮೇಲೆ ತಾವು ಹೊಳಲ್ಕೆರೆ ತಾಲ್ಲೂಕನ್ನು select ಮಾಡಿದಿರಿ ?

Mr. DEPUTY SPEAKER.—That I think has already been answered. Your very first question was that, namely, the principles on which the Government selected areas for the National Extension Service scheme. He has replied to that question. After all you will be repeating the same question and the answer also will be repeated. It is left to you whether you are satisfied with the answers or not. But repeating the same question will not help; the answers also will be repeated.

ಶ್ರೀ ವಿ. ಮಸಿಯಪ್ಪ.—ಮಾನ್ಯ ಸಚಿವರ ಉತ್ತರ ಕೇಳಿದರೆ, ಈ ವಿಚಾರದಲ್ಲಿ ಯಾವ ನಿರ್ದಿಷ್ಟ ನೀತಿ ನಿಯಮವನ್ನೂ ಅನುಸರಿಸದೆ at random Holalkere Taluk has been selected ಎಂಬುದಾಗಿ ಅರ್ಥವಾಗುತ್ತದೆ, ಇದು ಸರಿಯೇ ?

Dr. R. NAGAN GOWDA.—Last time when we selected Davangere in Chitaldrug there were complaints from other Hon'ble Members. This time also we thought that if we selected the rest of the area from Chitaldrug or Davangere area, the same complaint would be coming in. So we left of and selected the next one.

Sri V. MASIYAPPA.—Is it not a fact that the Development Commissioner had in the very first instance recommended Harihar Taluk to be selected for the first year and then contiguous areas from Harihar Taluk ? This recommendation was made last year itself but that re-commendation was not heeded to. Why ?

Dr. R. NAGAN GOWDA.—Last year we selected from one end of the district.

Sri V. MASIYAPPA.—Will the Government be pleased to say whether they have gone into the records in this matter ?

Mr. DEPUTY SPEAKER.—How can they say ?

Sri V. MASIYAPPA.—Is it not found in the records that the Development Commissioner has recommended Harihar Taluk last year itself when it was given to Harihar ?

Dr. R. NAGAN GOWDA.—Well, I will look into the matter.

Sri V. MASIYAPPA.—If any injustice has been done to that taluk, will the Government assure that it will be rectified next year ?

Dr. R. NAGAN GOWDA.—It is not proposed to do any injustice. On the other hand it is proposed to do justice for all the taluks. So far as what would be done next year, we cannot say anything now.

ಶ್ರೀ ಜೆ. ಮಹಮ್ಮದ್ ಇಮಾಂ.—National Extension Centres select ಮಾಡಬೇಕಾದರೆ ಸಾಧಾರಣವಾಗಿ contiguous area select ಮಾಡುವುದು ಒಳ್ಳೆಯದಲ್ಲವೇ ?

Dr. R. NAGAN GOWDA.—That is one consideration.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗಾದರೆ, ದಾವಣಗೆರೆಗೆ ಸೇರಿದಹಾಗೆ contiguous area ಎಂದೆನ್ನಿಸಿಕೊಂಡಿರುವ ಜಗಳೂರಿನಲ್ಲಿ ಇದನ್ನು ಏಕೆ ಮಾಡಲಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೂ ಆ ಕಡೆ ಬಂದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗಾದರೆ ಅಪ್ರದಕ್ಷಿಣೆ ಮಾಡಿದ ಹಾಗಾಯಿತಲ್ಲವೇ ?

Sri K. HANUMANTHAIYA.—We have followed the Leader of the Opposition.

Dr. R. NAGAN GOWDA.—It is no doubt in a contiguous area. We have got an entirely independent organisation. It is a unit by itself. We have got a Block Development Officer. He is the Revenue Sub-Division Officer and also there are a number of workers at the village level. They will do. In this case, being in the border Taluk, we left it off. The whole difficulty arises from the fact that we get only a very small number of blocks. This year we got seven blocks for the entire ten districts of the State. So there is the difficulty. But we will have in our mind what you have said and see whether we can take up the taluk contiguous and also far off.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಸ್ಕೀಂ ಆವಶ್ಯಕತೆ ದಾವಣಗೆರೆ ತಾಲ್ಲೂಕಿನಲ್ಲಿ ಹೆಚ್ಚಾಗಿದೆಯೆಂಬುದು ತಮ್ಮ ಅವಗಾಹನೆಗೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಒಂದೊಂದು ಕಡೆಯಿಂದ ಮಾಡಿಕೊಂಡು ಬರುತ್ತಿದ್ದೇವೆ.

Sri G. DUGGAPPA.—Sir, whether it is not a fact that there are three co-operative societies in Holalkere Taluk ?

Dr. R. NAGAN GOWDA.—Yes.

Sri G. DUGGAPPA.—The co-operative farms are working very well and there are 1,500 acres in each co-operative farm—is it not a fact that this is one of the reasons why this Holalkere Taluk was selected for the National Extension Service Block ?

(No answer.)

Sri A. BHEEMAPPA NAIK.—Are there contiguous areas between Davangere Taluk and Harihar Taluk which are not taken up when the last scheme was introduced ?

Dr. R. NAGAN GOWDA.—We have taken only parts of the two taluks. So there are some villages which have been left out.

Sri A. BHEEMAPPA NAIK.—If these villages were taken up, the grant which you get from the Government of India would have been doubled, is it not ?

Dr. R. NAGAN GOWDA.—I want notice for that. So far as each block is concerned, the grant is fixed. I do not know how we would be able to get double the grant if we had selected these taluks.

Sri A. BHEEMAPPA NAIK.—Will the Hon'ble Minister kindly consult his colleague to his left whether he told that the grant that the State would get would have been doubled if the Harihar and Davangere areas were taken up when he selected the Holalkere Taluk ?

Mr. DEPUTY SPEAKER.—Part of it does not form a question.

Dr. R. NAGAN GOWDA.—I do not believe that we get double the grant. Possibly he means that if Davangere and Harihar taluks had been selected, they would have got two blocks instead of one each. That probably he is mistaking for a double grant.

Sri A. BHEEMAPPA NAIK.—While selecting the National Extension Service scheme to several taluks last year, is there a place which was selected because that forms the constituency of an important Minister ? Was that one of the considerations ?

Dr. R. NAGAN GOWDA.—That is not the consideration, Sir.

ಶ್ರೀ ಜಿ. ಶಿವಪ್ಪ.—ಹೋದ ವರ್ಷ ಕೊಟ್ಟಿರತಕ್ಕಂಥ ಹರಿಹರ ತಾಲ್ಲೂಕು ಮತ್ತು ಈ ವರ್ಷ ಕೊಟ್ಟಿರತಕ್ಕ ಹೊಳಲ್ಕೆರೆ ತಾಲ್ಲೂಕು ಒಂದೇ ಡಿವಿಜನ್‌ನಲ್ಲಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—Yes.

ಶ್ರೀ ಜಿ. ಶಿವಪ್ಪ.—ಈ ಎರಡರ ಅಡ್ಮಿನಿಸ್ಟ್ರೇಷನ್ ನೋಡತಕ್ಕವರು ಒಬ್ಬರೇ ಸಬ್ ಡಿವಿಜನ್ ಆಫೀಸರು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಇದೂ ಅಲ್ಲದೆ ಪ್ಲಾನಿಂಗ್ ಕಮಿಷನ್ ವರದಿ ಪ್ರಕಾರ, will it be possible to select areas always after consulting all the persons residing in the taluk ?

Dr. R. NAGAN GOWDA.—All relevant considerations will be kept in view.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಶಿಡ್ಲಘಟ್ಟದಿಂದ ಚಿಂತಾಮಣಿ ತಾಲ್ಲೂಕನ್ನು ಹಾರಿಸಿ ಶ್ರೀನಿವಾಸಪುರಕ್ಕೆ ಹೋಗಿದ್ದಾರೆ. ಏಕೆ, ಸ್ವಾಮಿ ?

ಉಪಾಧ್ಯಕ್ಷರು.—ಇದು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಮಾತ್ರ ಅನ್ವಯಿಸುತ್ತದೆ. ಚಿಂತಾಮಣಿಗೆ ಅನ್ವಯಿಸುವುದಿಲ್ಲ.

ಶ್ರೀ ಎ. ವಿ. ನರಸಿಂಹ ರೆಡ್ಡಿ.—ಪಂಚವಾರ್ಷಿಕ ಯೋಜನೆ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಈ ವರ್ಷ ಎಷ್ಟು ಈ ರಾಷ್ಟ್ರೀಯ ವಿಸ್ತರಣ ಯೋಜನಾ ಕೇಂದ್ರಗಳು ಬರುತ್ತವೆ, ಸ್ವಾಮಿ ?

ಉಪಾಧ್ಯಕ್ಷರು.—ಅದು ಜನರಲ್ ಆಯಿತು. ಹರಿಹರ, ದಾವಣಗೆರೆ, ಹೊಳಲ್ಕೆರೆ ವಿಚಾರದಲ್ಲಿ ಕೇಳುವುದು ಇದ್ದರೆ ಕೇಳಿ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದು ರಾಷ್ಟ್ರೀಯ ವಿಸ್ತರಣ ಯೋಜನೆಗೆ ಸಂಬಂಧಪಟ್ಟದ್ದು ; ಆದ್ದರಿಂದ ಸಂಸ್ಥಾನಕ್ಕೆ ಒಟ್ಟು ಎಷ್ಟು ಕೇಂದ್ರಗಳನ್ನು ಕೊಟ್ಟಿದ್ದಾರೆ ಎಂದು ಕೇಳುತ್ತಿದ್ದೇನೆ.

Mr. DEPUTY SPEAKER.—The question has already been answered.

ಶ್ರೀ ಜಿ. ಬಸಪ್ಪ.—ಈ ಯೋಜನೆಯ ಉದ್ದೇಶ ಹಿಂದುಳಿದ ಪ್ರದೇಶಗಳು ಯಾವಯಾವುವು ಇವೆಯೋ ಅವನ್ನು ಅಭಿವೃದ್ಧಿ ಪಡಿಸುವುದೇ ಉದ್ದೇಶ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಜನರಲ್ ಆಗಿ ಯಾವಯಾವ ಪ್ರದೇಶ ಡೆವಲಪ್‌ಮೆಂಟ್ ಆಗುವುದು ಅಗತ್ಯ ಎಂದು ಕಂಡು ಬಂದಿದೆಯೋ ಅದನ್ನು ತೆಗೆದುಕೊಂಡಿದೆ. ಕೆಲವು ಕಡೆಗಳಲ್ಲಿ ಹೆಚ್ಚು ಅಭಿವೃದ್ಧಿ ಆಗದೆ ತರೀ ಭೂಮಿ ಇರುವುದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಜಿ. ಬಸಪ್ಪ.—ಹಿಂದುಳಿದ ಪ್ರದೇಶಗಳನ್ನು ತೆಗೆದುಕೊಂಡು ಅವಕ್ಕೆ ಫಸ್ಟ್ ಪ್ರಯಾರಿಟಿ ಕೊಡುವುದು ಒಳ್ಳೆಯದಲ್ಲವೇ ?

ಡಾ॥ ಆರ್. ನಾಗನಗೌಡ.—ಸಾಧಾರಣವಾಗಿ ಟೌನ್‌ಗಳಲ್ಲಿ ಅಷ್ಟು ಅಗತ್ಯ ಕಂಡುಬರುವುದಿಲ್ಲ, ತಾಲ್ಲೂಕುಗಳನ್ನು ತೆಗೆದುಕೊಳ್ಳುತ್ತೇವೆ.

Sri V. M. MASCARENHAS.—Now that National Extension Service Schemes have been in vogue for the last 18 months, will the Government consider the question of appointing a committee to assess the work done so far ?

Dr. R. NAGAN GOWDA.—Sir, there is a committee as a matter of fact, which goes into the working of these Community Projects and the National

Extension Services Schemes, which consists of the departmental officers and the Deputy Commissioner and the Secretary concerned with the Development Department. I do not know exactly if it is necessary to have another committee to go into the working of these services. So far as these National Extension Service Blocks are concerned, they are working only for the past 12 months and the work of the community projects is looked into very closely. There is also an advisory committee which will consider periodical reports about the work done from time to time. There is also a committee for watching the progress about Community Projects constituted by the Government of India.

Sri V. M. MASCARENHAS.—Would it be possible for the Hon'ble Members of this House to know what exactly the committee has done ?

Dr. R. NAGAN GOWDA.—If it is required, I shall give a summary of the work that has been done by the Community Projects for the last 18 months and also the work that has been done by the N.E.S. blocks. I think that will serve the purpose the Hon'ble Member has in view.

Sri V. M. MASCARENHAS.—I shall be glad if I can get it.

Dr. R. NAGAN GOWDA.—I have got a very detailed report maintained about the progress attained by these Community Projects and N.E.S. blocks and I shall be glad to allow the Hon'ble Member to look into it.

ಶ್ರೀ ಕೆ. ಪ್ರಭಾಕರ್.—ನೆಲಮಂಗಲ ತಾಲ್ಲೂಕನ್ನು ಈ ಯೋಜನೆಯೊಳಗೆ ಸೇರಿಸುತ್ತೇವೆ ಎಂದು ಇದೇ ಸಭೆಯಲ್ಲಿ ಹಿಂದೆ ಹೇಳಿಲ್ಲವೇ, ಸ್ವಾಮಿ ?

Mr. DEPUTY SPEAKER.—That is not quite relevant to this question.

ಅಂದರೆ, ಅವರಿಗೆ permissible limitಗಿಂತ ಕಡಮೆ ಜಮೀನು ಇದ್ದರೆ ಮಾತ್ರ ಅದು ಸಾಧ್ಯ. ಈ ರಕ್ಷಣೆ ಹೊಂದಿದ ಗೇಣಿದಾರರು ವಂಶಪಾರಂಪರ್ಯವಾಗಿ ಜಮೀನು ಅನುಭವಿಸತಕ್ಕ ಹಕ್ಕನ್ನು ಪಡೆಯುತ್ತಾರೆ. ಆದರೆ ಕೆಲವು ಷರತ್ತುಗಳಿಗೆ ಒಳಪಟ್ಟು ಈ ಹಕ್ಕುಗಳು ಅವನಿಗೆ ದೊರೆಯುತ್ತವೆ. ತನ್ನ ಗೇಣಿ ಹಕ್ಕನ್ನು ಪರಭಾರೆ ಮಾಡುವುದಕ್ಕೆ ಅವಕಾಶವಿಲ್ಲ ಮತ್ತು ಜಮೀನು ನಾದುರಸ್ತು ಮಾಡತಕ್ಕ ಅವಕಾಶವಿಲ್ಲ. ನಾದುರಸ್ತು ಮಾಡಿದರೆ, ಪರಭಾರೆ ಮಾಡಿದರೆ, ಗೇಣಿ ಸಲೀಸಾಗಿ ಕೊಡದೇ ಇದ್ದರೆ, ಯಾವ ಜಮೀನ್ದಾರನಿಗಾದರೂ ತನ್ನ ಜಮೀನನ್ನು ಬಿಡಿಸಿಕೊಳ್ಳತಕ್ಕ ಹಕ್ಕುಬರುತ್ತದೆ. ಕೆಲವರು ನನ್ನೊಡನೆ ವೈಯಕ್ತಿಕವಾಗಿ ಮಾತನಾಡುವಾಗ ಗೇಣಿದಾರರಿಗೆ ಈ ಮಸೂದೆಯಲ್ಲಿ ಯಾವುದೋ ಒಂದು ಬುದ್ಧಿವಂತಿಕೆಯ ಹಂಚಿಕೆಯಿಂದ ಪರಮಾವಧಿಯನ್ನು ಕೂಡ ಗೊತ್ತುಮಾಡಿದೆಯೆಂದು ಹೇಳಿದರು. ಇದರಲ್ಲಿ ಯಾವ ವೈಯಕ್ತಿಕ ಪ್ರತಿಭೆಯಾಗಲಿ ಬುದ್ಧಿವಂತಿಕೆಯಾಗಲಿ ಇಲ್ಲ. ಉಳಿದ ಸಂಸ್ಥಾನಗಳಲ್ಲಿಯೂ ಇಂಥ ಗೇಣಿ ಶಾಸನ ಜಾರಿಯಲ್ಲಿದೆ. ಬೊಂಬಾಯಿಯಲ್ಲಿ ಗೇಣಿದಾರರ ಕಾನೂನು ಜಾರಿಯಲ್ಲಿದೆ. ಅಲ್ಲಿ ಆರು ವರ್ಷಗಳಕಾಲ ನಾಲಾ ಸಾಗುವಳಿ ಮಾಡಿದವರನ್ನು protected tenants ಎಂದು ಕರೆಯುತ್ತಾರೆ. ಇಲ್ಲಿ ಒಂಭತ್ತು ವರ್ಷಗಳೆಂದು ನಾವು ನಿಗದಿ ಮಾಡಿದ್ದೇವೆ. ಬೊಂಬಾಯಿಯಲ್ಲಿ ಮಾಲೀಕರಿಗೆ ಪರಮಾವಧಿ ಐವತ್ತು ಎಕರೆ ಇದೆ. ಅದಕ್ಕಿಂತ ಹೆಚ್ಚು ಜಮೀನು ಮಾಲೀಕರಿಗಿದ್ದರೆ ಅದನ್ನು ಕೊಂಡುಕೊಳ್ಳುವ ಅಧಿಕಾರವನ್ನು ಅಲ್ಲಿ ರೈತರಿಗೆ ಕೊಟ್ಟಿರುತ್ತಾರೆ. ಹೈದರಾಬಾದಿನಲ್ಲಿ family holdings ಎಂದು ಮಾಡಿರುತ್ತಾರೆ. ಅಲ್ಲಿಯೂ protected tenants ಎಂಬವವರನ್ನು ನಿರ್ಮಾಣ ಮಾಡಿರುತ್ತಾರೆ. ಆರು ವರ್ಷಗಳಕಾಲ ಅವಿಚ್ಛಿನ್ನವಾಗಿ ಸಾಗುವಳಿ ಮಾಡಿದ ರೈತರು, ರಕ್ಷಣೆ ಹೊಂದಿದ ರೈತರು ಎಂದು ಪರಿಗಣಿಸಲ್ಪಡುತ್ತಾರೆ. ಆ ರೀತಿ ರಕ್ಷಣೆ ಹೊಂದಿದ ರೈತರು ಜಮೀನು ಕೊಂಡುಕೊಳ್ಳುವುದಕ್ಕೆ ಅಧಿಕಾರ ಹೈದರಾಬಾದಿನಲ್ಲಿಯೂ ಕಾನೂನು ಪ್ರಕಾರ ಕೊಟ್ಟಿದೆ. ಆಗಲೇ ಹೇಳಿದ ಹಾಗೆ, ಹೈದರಾ

(SRI KADIDAL MANJAPPA.)

ಬಾದಿನಲ್ಲಿ family holdings ಎಂದು ಮಾಡಿರುತ್ತಾರೆ. ಅದರ ಪರಮಾವಧಿ ಹೀಗಿದೆ.

The family holdings in Hyderabad are as follows.—

Wet land single crop each year	... 6 acres
All others	... 9 ,,
Dry land first class soil	... 24 ,,
All other cases	... 36 ,,

ಇತರ ಪ್ರಾಂತ್ಯಗಳಲ್ಲಿ ಕೂಡ ಹಿಡುವಳಿ ಪರಮಾವಧಿಯನ್ನು ನಿಗದಿ ಮಾಡಿರುತ್ತಾರೆ. ಟ್ರಾವಂಕೂರ್-ಕೊಚಿನ್‌ನಲ್ಲಿ ಗೇಣಿದಾರರಿಗೆ ಸಂಬಂಧಪಟ್ಟಂತೆ ಪರಮಾವಧಿಯನ್ನು ಇನ್ನೂ ಗೊತ್ತುಮಾಡಿಲ್ಲ ಅಲ್ಲಿ ಮಾಲೀಕರಿಗೆ ಪರಮಾವಧಿ ಗೊತ್ತುಮಾಡುವ ಬಗ್ಗೆ ಒಂದು ಬಿಲ್ಲು ತಯಾರುಮಾಡಿರುತ್ತಾರೆ. ಅದರಲ್ಲಿಯ ಕೆಲವು clauseಗಳನ್ನು ಓದುವುದು ಸೂಕ್ತವೆಂದು ಭಾವಿಸಿದ್ದೇನೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಬಿಲ್ಲನ್ನು ಯಾಕೆ ಓದುತ್ತೀರಿ ? ಅಲ್ಲಿಯ legislature ಒಪ್ಪಿ ಅದನ್ನು ಅಂಗೀಕರಿಸಿ ಕಾನೂನು ಕಡತಕ್ಕೇರಿಸಿದ್ದರೆ ಆಗ ತಾವು ತಿಳಿಸುವುದು ಸೂಕ್ತ. ಹಾಗಿಲ್ಲದೆ ಆ ಬಿಲ್ಲನ್ನು ಓದುವುದು ಸೂಕ್ತವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿಯೂ ಈ ಉದ್ದೇಶ ಹೊಂದಿದ್ದಾರೆಂಬುದನ್ನು ತಮಗೆ ತಿಳಿಸುವುದಕ್ಕಾಗಿ ಓದುತ್ತೇನೆ.

(Several members rose.)

Mr. SPEAKER.—Order, order.

Sri M. CHIKKALINGIAH (Malavalli—Scheduled Castes).—There is nothing wrong in giving certain piece of information though it may not be an Act passed.

Sri B. HUTCHE GOWDA (Turuvekere).—It is not the Government's intention, is it not ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ಅಲ್ಲಿ ಈ ರೀತಿ ನಿಯಮ ಮಾಡಬೇಕೆಂದು ಇದ್ದಾರೆ:

> "No person either by himself or through any member of his family...shall possess as owner or tenant lands in the State of Travancore-Cochin exceeding in the aggregate the following limits, namely,

Double crop land	... 15 acres
Single crop land	... 22½ ,,
Cocoanut garden	... 15 ,,
Peramboka	... 32 ,,

Sri J. MOHAMED IMAM (Jagalur).—Is it what the Socialist Government did or the Congress Government ?

Sri Kadidal MANJAPPA.—It is still in the stage of a Bill.

ಶ್ರೀ ಟಿ. ಸಿ. ಬಸಪ್ಪ (Tarikere).—ಅದಕ್ಕಿಂತ ಹೆಚ್ಚಿಗೆ ಇರುವ ಜಮೀನನ್ನು ಏನು ಮಾಡುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚಿಗೆ ಇರುವುದನ್ನು ರೈತರಿಗೆ ಕೊಡಬೇಕೆಂದು ಮಾಡುತ್ತಾರೆ.

Sri T. MARIAPPA (Mysore City—North).—May I request the Hon'ble the Minister for Revenue, that when he quotes from a similar measure in Travancore-Cochin, he may kindly place all the circumstances obtaining in that State for the consideration of the House, because Travancore-Cochin is a peculiar State where the density of population is the highest. I had an opportunity of examining all these measures very recently. There are 3 regions where the density of population varies very widely. The pressure on land is the greatest and distribution also is highly limited, especially in the coastal belt that pertains to a strip between the Western Ghats and the sea; the entire portion is scattered on that strip and the pressure on land is so great there that it bears no comparison to conditions prevailing here. True, there are other difficulties also, such as the system of inheritance prevailing there which is entirely different from that here.

Mr. SPEAKER.—You cannot go on arguing about that now.

Sri T. MARIAPPA.—I want him to give us facts so that the House can compare similar measures.

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಮರಿಯಪ್ಪನವರು ಸಂಕ್ಷೇಪವಾಗಿ ಟ್ರಾವಂಕೂರ್—ಕೊಚಿನ್ ಪರಿಸ್ಥಿತಿ ವಿವರಿಸುವುದಕ್ಕೆ ಪ್ರಯತ್ನಪಟ್ಟರು. ಅವರು ಹೇಳಿದ್ದರಲ್ಲಿ ಅರ್ಥವಿದೆ. ಅಲ್ಲಿಯ ಜಮೀನು ಮೇಲೆ ಒತ್ತಡ—ಜನಸಂಖ್ಯೆ ಜಾಸ್ತಿ ಇದೆ. ಅದಕ್ಕಾಗಿಯೇ ಅಲ್ಲಿಯದನ್ನು ಮಾದರಿಯಾಗಿಟ್ಟುಕೊಂಡು ಹೇಳುತ್ತಿಲ್ಲ. ಬಾಕಿ ಕಡೆ ಸಹ ಜಮೀನ್ದಾರರ ವಿಚಾರದಲ್ಲ ಸರ್ಕಾರದವರು ಕಾರ್ಯಕ್ರಮ ಕೈಗೊಂಡಿದ್ದಾರೆಂದು ಮಾನ್ಯ ಸದಸ್ಯರ ಗಮನಕ್ಕೆ ತಂದೆ, ಅಷ್ಟೇ. ಬೊಂಬಾಯಿಯಲ್ಲಿ ಬಹಳ ವರ್ಷಗಳಿಂದ ಟೆನೆನ್ಸಿ ಕಾನೂನು ಇದೆ. ನಾವು permissible holdings ಏನು ನಿಗದಿಮಾಡಬೇಕೆಂದಿದ್ದೇವೆಯೋ ಅದು ಅಲ್ಲಿ 1948 ರಿಂದ ಜಾರಿಯಲ್ಲಿದೆ. ಅಲ್ಲಿ 50 ಎಕರೆಗಳಿಗೆ ಮೇಲ್ಪಟ್ಟು ಜಮೀನು ಮಾಲೀಕರಿಗೆ ಇದ್ದರೆ, ಹೆಚ್ಚಿಗೆ ಜಮೀನನ್ನು ಕೊಂಡುಕೊಳ್ಳುವುದಕ್ಕೆ ರೈತರಿಗೆ ಅವಕಾಶವಿದೆ. ಇಲ್ಲಿ ನಾವು ಸಾರ್ವಜನಿಕರ ಒತ್ತಾಯವನ್ನು ಗಣನೆಗೆ ತೆಗೆದುಕೊಂಡು, ಕೂಲಂಕಷವಾಗಿ ವಿಮರ್ಶೆಮಾಡಿ ಇಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಒಂದು ಕುಟುಂಬಕ್ಕೆ 100 ಎಕರೆಗಳಷ್ಟು ಜಮೀನು ಇದ್ದರೆ ಸಾಕು ಎಂದು ನಿಗದಿ ಮಾಡಿದ್ದೇವೆ. ಕೆಲವರು ನನ್ನ ಬಳಿಗೆ ಬಂದು standard acre ನಿಗದಿಮಾಡಿ ಎಂದು ಹೇಳಿದರು. ಆ ರೀತಿ ನಿಗದಿಮಾಡಲು ಬೇಕಾದ ಅಂಕಿ ಅಂಶಗಳು

ಸರ್ಕಾರದಲ್ಲಿಲ್ಲ; ಆದುದರಿಂದ ಮಾಡಿಲ್ಲವೆಂದು ಅವರಿಗೆ ಹೇಳಿದೆ. ಆದರೂ ಈ ವಿಚಾರದಲ್ಲಿ ತಾವೆಲ್ಲರೂ ಯಾವರೀತಿ ತೀರ್ಮಾನಕ್ಕೆ ಬಂದರೆ ಆ ರೀತಿ ಮಾಡೋಣ. ವಿಸ್ತೀರ್ಣದ ವಿಚಾರದಲ್ಲಿ ಸಭೆಯ ಅಭಿಪ್ರಾಯ ಹೇಗೋ ಹಾಗೆ ಮಾರ್ಪಡಿಸುವುದರಲ್ಲಿ ನನ್ನ ಆಕ್ಷೇಪಣೆಯೇನೂ ಇಲ್ಲ. ಭೂ ಮಾಲೀಕರು ಸಾಗುವಳಿ ಮಾಡಲು ಚೈತನ್ಯವಿರುವಷ್ಟು ಜಮೀನು ಇಟ್ಟುಕೊಂಡು ಅವರಿಗೆ ಸಾಗುವಳಿ ಮಾಡಲು ಶಕ್ತಿ ಇರಬೇಕೆಂಬುದು ಮಸೂದೆಯ ಉದ್ದೇಶ. Permissible holdings ನಿಗದಿಯಾದಮೇಲೆ ಅದು ಎಷ್ಟಿದೆಯೋ ಅದನ್ನು ಮಾಲೀಕರು ಸಾಗುವಳಿ ಮಾಡುವುದು ಅಗತ್ಯ. ಆದರೆ protected tenants ವಿಚಾರದಲ್ಲಿ ಒಂದು ರಕ್ಷಣೆ ಬೇಕು. ಅಲ್ಲದೆ ಜಮೀನ್ದಾರರಿಗೆ permissible holdings ಪೈಕಿ ಕಾಲು ಭಾಗದ ಜಮೀನಿಗೆ ಕಡಮೆ ಇದ್ದಾಗ ಮಾತ್ರ protected tenants ಗಳಿಂದ ಜಮೀನು ಬಿಡಿಸಿಕೊಳ್ಳುವುದಕ್ಕೆ ಅವಕಾಶವಿರಬೇಕೆಂದು ಇದರಲ್ಲಿ ಸೂಚಿಸಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ. (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ತಾವು ಗೇಣಿದಾರರೋ ಅಥವಾ ಮಾಲೀಕರೋ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳುತ್ತೇನೆ.

Mr. SPEAKER.—Please let him go on. Allow him to continue his arguments. After he finishes, you can ask him.

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೂ ಜವಾಬು ಹೇಳುತ್ತೇನೆ. ನನಗೆ ಸದ್ಯಕ್ಕೆ ಜಮೀನು ಯಾವುವೂ ಇಲ್ಲ. ನಮ್ಮ family ಯಲ್ಲಿ ಸ್ವಲ್ಪ ಜಮೀನಿದೆ. ಒಂದುವೇಳೆ ನಾನು ಗೇಣಿದಾರನೇ ಆಗಲಿ, ಜಮೀನ್ದಾರನೇ ಆಗಲಿ, ಸರ್ಕಾರದ ನೀತಿ ಪ್ರತಿನಿಧಿಸುವುದರಲ್ಲಿ ಯಾವ ತಡ್ಡಿ ಆತಂಕವೂ ಇಲ್ಲ. ಇಬ್ಬರ ಕಷ್ಟವನ್ನೂ ನಾನು ಅರಿತುಕೊಂಡಿದ್ದೇನೆ. ಈ ವಿಧವಾದ ಕಾನೂನು ಬಾಕಿ ಕಡೆ ಇದೆ. ಇದರಲ್ಲಿ ಪರಮಾವಧಿ ಹಿಡುವಳಿ ನಿಗದಿಮಾಡುವುದು ಪ್ರಾಮುಖ್ಯವಾದುದಲ್ಲ. ಮಾಲೀಕರಿಗೂ ಮತ್ತು ಗೇಣಿದಾರರಿಗೂ ಇರತಕ್ಕ ಹಕ್ಕುಬಾಧ್ಯತೆಯನ್ನು ನಿರ್ಧರಿಸತಕ್ಕ ವಿಧಾನ ಇದರಲ್ಲಿ ನಮೂದಿತವಾಗಿದೆ, ಇದು ಅಗತ್ಯ ಎಂದು ನಾನು ಮನವಿಮಾಡಿಕೊಳ್ಳುತ್ತೇನೆ. ಈ ರೀತಿ ಇರತಕ್ಕಂಥಾದ್ದು ರಾಜ್ಯಾಂಗಕ್ಕಾಗಲಿ ಕಾನೂನಿಗಾಗಲಿ ವಿರುದ್ಧವಲ್ಲ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟಿನ ತೀರ್ಮಾನ ಬಂದಿದೆ. ಈ ಬಗ್ಗೆ ಆಕ್ಷೇಪಣೆಯೇನಾದರೂ ಬಂದರೆ ಆಗ ಆ ತೀರ್ಪನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಕೆಲವರು ಇನಾಂ ಬಿಲ್ಲು ತಂದಾಗ ಎಲ್ಲಾ ಭೂ ಮಾಲೀಕರಿಗೂ ಅನ್ವಯಿಸುವಂತೆ ಬಿಲ್ಲು ತನ್ನಿ ಎಂದು ಹೇಳಿದರು. Personal Inam Bill ತಂದಾಗ, Religious Inams ಏಕೆ ಕೈಬಿಟ್ಟಿರಿ ಎಂದು ಹೇಳಿದರು. ಇದನ್ನು ನೋಡಿದರೆ ಒಂದು Comprehensive Land Reforms ಇಲ್ಲ ಎಂಬುದು ವೇದ್ಯವಾಗುತ್ತದೆ. ಆದುದರಿಂದ ಎಲ್ಲವನ್ನೂ ಪರಿಶೀಲಿಸಿ ಇದು ಸರ್ವಸಮ್ಮತವಾಗಿರುವಂತೆ ಇದನ್ನು ತಂದಿದೆ.

4 P.M.

Mr. SPEAKER.—I request Hon'ble Members to allow the Hon'ble Minister to go on with the Bill. Everybody will have an opportunity to express his views before the House. If necessary, it will be before them for weeks.

ಶ್ರೀ ಕಡಿದಾಳ್ ಮಂಜಪ್ಪ.—ಆದ್ದರಿಂಧ ಈ ಸುಧಾರಣೆಗಳನ್ನು ಒಂದೇ ಸಾರಿ ಎಲ್ಲಾ ವಿಧವಾದ ಆಸ್ತಿಪಾಸ್ತಿಗಳಿಗೂ ಅನ್ವಯಿಸುವಂತೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಅದೂ ಅಲ್ಲದೆ ಈ ಭೂ ಸುಧಾರಣೆಯನ್ನು ಜಾರಿಗೆ ತರಬೇಕಾದರೆ ಬಹಳ ಎಚ್ಚರಿಕೆಯಿಂದ, ಕ್ರಮೇಣ, ತರಬೇಕೇ ಹೊರತು ಒಂದೇ ಸಾರಿ ಎಲ್ಲಾ ಸುಧಾರಣೆಗಳನ್ನೂ ಜಾರಿಗೆ ತರುತ್ತೇವೆ ಎಂದು ಹೇಳುವ ನೀತಿ ಸರಿಯಾದದ್ದಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಬಹಳ ಸಾಧುವಾದ ಒಂದು ಮಸೂದೆ. ಇದರಲ್ಲಿ ಬೊಂಬಾಯಿನ ಹಾಗೆ 50 ಎಕರೆ ಇಲ್ಲ. ಅಥವಾ ತಿರುವಾಂಕೂರು ಕೊಚ್ಚಿನ್‌ನಂತೆ 15 ಎಕರೆ ಇಲ್ಲ. ಹೈದರಾಬಾದಿನಲ್ಲಿ 25 ಎಕರೆ ಇರುವಂತೆ 25 ಎಕರೆ ಇಲ್ಲ. ಇಷ್ಟಾಗಿ ಎಂಟು ಪಲ್ಲಾ ರಾಗಿ ಅಥವಾ ಎಂಟು ಪಲ್ಲಾ ಭತ್ತ ಬೆಳೆಯತಕ್ಕ ಪ್ರದೇಶವನ್ನು ಸ್ಟ್ಯಾಂಡರ್ಡ್ ಎಕರ್ ಎಂದು ನಿರ್ಧರಿಸಿದ್ದೇವೆ. ಮಾನ್ಯ ಸದಸ್ಯರನೇಕರಿಗೆ ಗೊತ್ತಿರುವಂತೆ ಒಂದು ಎಕರೆ ಖುಷ್ಕಿ ಜಮೀನಿನಲ್ಲಿ ಹೆಚ್ಚು ಎಂದು ಹೇಳಿದರೆ ಮೂರು ಪಲ್ಲ ರಾಗಿ ಬೆಳೆಯಬಹುದು. ಒಂದು ಸ್ಟ್ಯಾಂಡರ್ಡ್ ಎಕರ್ ಎಂದರೆ 100 ಎಕರೆ ಖುಷ್ಕಿ ಜಮೀನು ಆಗುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಟೆನೆಂಟ್ಸ್‌ಗೆ ಬಹಳ ಪ್ರಯೋಜನ ತಾನೆ?

ಶ್ರೀ ಕಡಿದಾಳ್ ಮಂಜಪ್ಪ.—ಟೆನೆಟ್ಸ್‌ಗೆ ಸಹಾಯ ಮಾಡುತ್ತೇವೆ ಎಂದು ಮಾತನಾಡುವುದು ಒಂದು ವಿಧವಾದ ವಾದಸರಣಿ; ಅದನ್ನು ತಿಳಿದುಕೊಂಡಿದ್ದೇನೆ. ಈಗ ಭತ್ತ ಬೆಳೆಯುತಕ್ಕ ಪ್ರದೇಶದಲ್ಲಿ ತೊಂದರೆ ಇದೆ ಎಂದು ಕೆಲವರು ಹೇಳಿದ್ದಾರೆ. ಎಂಟು ಪಲ್ಲಾ ಬೆಳೆಯತಕ್ಕ ಪ್ರದೇಶಕ್ಕೆ ಸ್ಟ್ಯಾಂಡರ್ಡ್ ಎಕರ್ ಎಂದು ಅನ್ವಯಮಾಡಬೇಕೆಂದು ಮಾಡಿದ್ದೇವೆ. ಬಹುಶಃ ಚಾನಲ್ ಏರಿಯಾದಲ್ಲಿ ಒಂದು ಎಕರೆಗೆ ಎರಡು ಸ್ಟ್ಯಾಂಡರ್ಡ್ ಎಕರ್ ಆಗಬಹುದು ; 2½ ಸ್ಟ್ಯಾಂಡರ್ಡ್ ಎಕರ್ ಆಗಬಹುದು. ಅವರಿಗೆ ತೊಂದರೆಯಾದರೆ ಸರಿಪಡಿಸೋಣ. ಹೆಚ್ಚು ಕಮ್ಮಿ ಮಾಡತಕ್ಕದ್ದು ಇದ್ದರೆ ಮಾಡೋಣ. ಹೆಚ್ಚು ಕಮ್ಮಿ ಮಾಡಬೇಕಾದ ವಿಷಯದಲ್ಲಿ ಆಕ್ಷೇಪಣೆ ಇಲ್ಲ. ಕೆಲವರು ಮಹನೀಯರು ಇದು ಬಹಳ ಜಾಸ್ತಿಯಾಯಿತು ಎಂದು ಹೇಳುತ್ತಾರೆ. 100 ಸ್ಟ್ಯಾಂಡರ್ಡ್ ಎಕರ್ ಒಬ್ಬ ಜಮೀನ್ದಾರನಿಗೆ ಕೊಟ್ಟರೆ ಎಷ್ಟು ಜಮೀನು ಸಿಕ್ಕುತ್ತದೆ ಎಂದು ವಾದ ಮಾಡುತ್ತಾರೆ. 100 ಎಕರೆಗಿಂತ ಜಾಸ್ತಿ ಇರತಕ್ಕ ಜಮೀನ್ದಾರರು ಸಂಸ್ಥಾನದಲ್ಲಿ ಎಷ್ಟು ಜನ ಇದ್ದಾರೆ ಎಂದು ಲೆಕ್ಕ ಹಾಕಿದರೆ ಒಟ್ಟು 5-6 ಸಾವಿರ ಜನ ನೂರು ಎಕರೆಗಿಂತ ಜಾಸ್ತಿ ಹಿಡುವಳಿ ಇರತಕ್ಕವರು ಇರಬಹುದು. ಮನುಷ್ಯ ತನಗೆ ಇಲ್ಲ ಎಂದು ಹೇಳಿ ವ್ಯಥೆಪಡುವುದಕ್ಕಿಂತ—ಶ್ರೀ ಮಾನ್ ಶ್ರೀನಿವಾಸ ಐಯ್ಯಂಗಾರ್ಯರಿಗೆ ಇದೆ, ನನ್ನಲ್ಲಿ ಇಲ್ಲ ಎಂದು ವ್ಯಥೆಪಡುವವರೇ ಜಾಸ್ತಿ—ಇದ್ದದ್ದರಲ್ಲಿ ತೃಪ್ತಿಪಟ್ಟುಕೊಳ್ಳುವುದು ಒಳ್ಳೆಯದು. ಆದರೆ ಹಾಗೆ ಆಗುವುದಿಲ್ಲ. ಅದು ಮಾನವ ಸ್ವಭಾವ, ಇನ್ನೊಬ್ಬರಿಗೆ ಇದೆ, ನನ್ನಲ್ಲಿಲ್ಲ ಎಂದು ದುಃಖ ಪಡುವವರೇ ಜಾಸ್ತಿ. ಆ ಮಾನಸಿಕ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೂ ಕೂಡ ಇಂಥ ಒಂದು ಮಸೂದೆ ಅಗತ್ಯ. ಈಗ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳು ಹೆಚ್ಚಾಗಿ ಇಲ್ಲದೇ ಇರಬಹುದು.

(ಶ್ರೀ ಕಡಿದಾಳ್ ಮಂಜಪ್ಪ.)

ಅವರ ಸಂಬಳಗಳನ್ನೆಲ್ಲಾ ಕಡಮೆಮಾಡಿ ದುಡ್ಡು ಉಳಿಸಿದರೂ ಕೂಡ ಕೇವಲ ಕೆಲವು ಲಕ್ಷ ರೂಪಾಯಿಗಳು ಮಿಗಬಹುದು. ಆದರೆ ಯಾವ ಒಂದು psychological atmosphere ಉಂಟಾಗುತ್ತದೆಯೋ ಅದು ಬಹಳ ಪ್ರಾಮುಖ್ಯವಾದದ್ದು. ಆ psychological atmosphere ಈ ದೇಶದಲ್ಲಿ ನಿರ್ಮಾಣ ಮಾಡುವುದು ಬಹಳ ಅಗತ್ಯ ಎಂದು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ. ಸ್ವಾತಂತ್ರ್ಯ ಬಂದನಂತರ ಸಾಮಾನ್ಯ ಜನರ ಗಮನ ಸ್ವಾಭಾವಿಕವಾಗಿ ಸರಿಸಮಾನತೆಯನ್ನು ಕಲ್ಪಿಸುವ ವಿಚಾರದಲ್ಲಿ ಬಿದ್ದಿದೆ. ಸಾಧ್ಯಇರುವಮಟ್ಟಿಗೂ ಕೂಡ ಸರಿಸಮಾನತೆಯ ವಾತಾವರಣವನ್ನು ಕಲ್ಪಿಸುವುದು ಸರ್ಕಾರದ ಕರ್ತವ್ಯ. ಆದರೆ ಈ ಸರಿಸಮಾನತೆಯನ್ನು ಕಲ್ಪಿಸುವ ನೆಪದಲ್ಲಿ ಬಹಳ ಎಡರು ತೊಡರು ಉಂಟಾಗುವುದಕ್ಕೆ ಅವಕಾಶ ಕೊಡಬಾರದು. ಕೆಲವರು 'ಏಕೆ ಸ್ವಾಮಿ, ಒಬ್ಬರಿಗೆ 190 ಸ್ಟ್ಯಾಂಡರ್ಡ್ ಎಕರ್ ಎಂದು ತೋರಿಸಲಾಗಿದೆ' ಎಂದು ಕೇಳುತ್ತಾರೆ. ನಾನು ಇಷ್ಟು ಹೇಳುತ್ತೇನೆ. ಸ್ವಾಮಿ, ಪಟ್ಟಣಗಳಲ್ಲಿರತಕ್ಕ ಮಿಲ್ ಮಾಲೀಕರೂ ಬ್ಯಾಂಕರುಗಳೂ ಅಥವಾ ಮನೆಗಳ ಮಾಲೀಕರೂ ತಿಂಗಳಿಗೆ ಸಾವಿರಾರು ರೂಪಾಯಿಗಳನ್ನು ಲಾಭದ ರೂಪದಲ್ಲಿ ಹೊಂದತಕ್ಕ ಅವಕಾಶವಿದೆ. ಅದೇ ರೀತಿ ವ್ಯವಸಾಯದಲ್ಲಿ ನಿರತರಾಗಿರತಕ್ಕ, ಭೂಮಾಲೀಕರಿಗೂ ಕೂಡ ಅವರಿಗಿರತಕ್ಕ ಜಮೀನಿನಿಂದ ಇದ್ದದ್ದರಲ್ಲಿ ಸುಖವಾಗಿ ಜೀವನ ನಡೆಸುವುದಕ್ಕೆ ಅವಕಾಶವಿರಬೇಕು. ಈ ಎರಡು ಅಭಿಪ್ರಾಯಗಳನ್ನೂ ಕೂಡ ನಮ್ಮ ಮುಂದೆ ಇಟ್ಟುಕೊಂಡು ಈ ಮಸೂದೆಯನ್ನು ಪರಿಶೀಲನೆ ಮಾಡಬೇಕು. ಇನ್ನು ಕೆಲವರು ಅಣ್ಣನಿಗೆ 75 ಎಕರೆ ಕೊಟ್ಟಮೇಲೆ, ತಮ್ಮನಿಗೆ ಏಕೆ ಕೊಡಬೇಕು, ತಂದೆಗೆ ಏಕೆ ಕೊಡಬೇಕು, ಮಗನಿಗೆ ಏಕೆ ಕೊಡಬೇಕು ಎಂದು ಕೇಳುತ್ತಾರೆ. ಆದರೆ ನಾನು ಅವರನ್ನು ಕೇಳುತ್ತೇನೆ : ಅಣ್ಣ ಸರ್ಕಾರಿ ಕೆಲಸದಲ್ಲಿ ಇರಬಹುದು, ತಮ್ಮನೂ ಇರಬಹುದು ; ಅದೇ ರೀತಿ ಅಣ್ಣನೂ ವ್ಯಾಪಾರ ಮಾಡಬಹುದು,ಮಗನೂ ವ್ಯಾಪಾರ ಮಾಡಬಹುದು ತಂದೆಯೂ ವ್ಯಾಪಾರ ಮಾಡಬಹುದು, ಆದ್ದರಿಂದ ಬಾಕಿ ಕ್ಷೇತ್ರಗಳಲ್ಲಿ ಎಲ್ಲಿಯವರೆಗೆ ಪ್ರತಿಬಂಧಕ ಅಥವಾ restriction ಇರುವುದಿಲ್ಲವೋ ಅಲ್ಲಿಯವರೆಗೂ ಈ ಭೂಮಿಯನ್ನು ಹಂಚುವ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಹೋಗಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಈ ಎರಡು ದೃಷ್ಟಿಗಳನ್ನೂ ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ತಯಾರು ಮಾಡಿದ್ದೇವೆ. ಈ ಮಸೂದೆ ಸರ್ವಸಮರ್ಪಕವಾಗಿದೆ ಎಂದು ನಾನು ಹೇಳುವುದಿಲ್ಲ. ಕೆಲವು ನ್ಯೂನತೆಗಳಿರಬಹುದು. ಈ ಸಭೆಯ ಮಾನ್ಯ ಸದಸ್ಯರ ಅಭಿಪ್ರಾಯ ಯಾವ ರೀತಿ ವ್ಯಕ್ತಪಡುತ್ತದೆಯೋ ಆ ಅಭಿಪ್ರಾಯದಂತೆ ಸರ್ಕಾರದವರು ನಡೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ. ಕೆಲವರು ಮಾನ್ಯ ಸದಸ್ಯರು 'ಇದುವರೆಗೂ ಏನೂ ತೊಂದರೆ ಇಲ್ಲದೆ ವ್ಯವಸಾಯಗಾರರ ಜೀವನ ಸಾಗುತ್ತಾ ಇದೆ ; ವ್ಯವಸಾಯಗಾರರಿಗೂ ಭೂಮಾಲೀಕರಿಗೂ ಯಾವ ಘರ್ಷಣೆಯೂ ಇಲ್ಲದೆ ನಡೆದುಕೊಂಡು ಬರುತ್ತಾ ಇದೆ; ಯಾವ ತೊಂದರೆ ಇದೆ ಎಂದು ಹೇಳಿ ಈ ಮಸೂದೆಯನ್ನು ತಂದಿದ್ದೀರಿ ?' ಎಂದು ಹೇಳಬಹುದು. ಅವರಿಗೆ ನನ್ನ ಉತ್ತರ ಇಷ್ಟೆ.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಹೇಳಬಹುದು ಎಂದು ಹೇಳಿದರು. ಹೇಳುತ್ತೇವೆಯೋ ಇಲ್ಲವೋ ಅದು ಬೇರೆ ಮಾತು. ಆಮೇಲೆ ಅವರು ಉತ್ತರ ಕೊಡಬಹುದು. ಈಗಲೇ ಹೇಳಬಹುದು ಎಂದು ಅವರೇ ಪ್ರಶ್ನೆಹಾಕಿ ಅವರೇ ಉತ್ತರ ಕೊಟ್ಟರೆ ಸರಿಹೋಗುವುದಿಲ್ಲ. Statement of facts ನಮ್ಮ ಮುಂದೆ ಇಟ್ಟರೆ ಸಾಕು.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಭಾವಿಕವಾಗಿ ಆಕ್ಷೇಪಣೆಗಳು ಬಂದೇ ಬರುತ್ತವೆ, ಬರುವುದಿಲ್ಲ ಎಂದು ಹೇಳುವುದಿಲ್ಲ. ಯಾರೂ ಇದ್ದ ಜಮೀನನ್ನು ಸುಲಭವಾಗಿ ಬಿಟ್ಟುಕೊಡಲಿಕ್ಕೆ ಒಪ್ಪುವುದಿಲ್ಲ. ಆದರೆ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ನಾವು ಹಿಂಸೆ ಇಲ್ಲದೆ, ಅಹಿಂಸೆಯಿಂದ ರಾಜಕೀಯ ಕ್ರಾಂತಿಯನ್ನು ಮಾಡಿದ್ದೇವೆ. ಅಹಿಂಸೆಯಿಂದಲೇ ಆರ್ಥಿಕದ ಕ್ಷೇತ್ರದಲ್ಲೂ ಕೂಡ ಕ್ರಾಂತಿಯನ್ನು ಮಾಡಬೇಕಾದದ್ದು ಅಗತ್ಯ ಎಂದು ತಿಳಿದುಕೊಂಡಿದ್ದೇವೆ. ಆ ರೀತಿ ಮಾಡದೇ ಇದ್ದರೆ ನಾನಾ ವಿಧವಾದ ತೊಂದರೆ, ಆಂದೋಳನ ಇವುಗಳನ್ನು ಅನುಭವಿಸಬೇಕಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ತಪ್ಪಿರಬಹುದು. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ತರಲಾಗಿದೆ. ಇದು ಬಹಳ ಪ್ರಾಮುಖ್ಯವಾದ ಮಸೂದೆ. ಆದ್ದರಿಂದ ಇದನ್ನು ಸ್ವಾಭಾವಿಕವಾಗಿ ಸೆಲೆಕ್ಟ್ ಸಮಿತಿಗೆ ಒಪ್ಪಿಸಬೇಕಾದದ್ದು ಅಗತ್ಯ. ಅದನ್ನು ನಾನು ಈಗಲೇ ಹೇಳುತ್ತೇನೆ. ಈ ಎಲ್ಲಾ ಕಾರಣಗಳಿಂದ ಈ ಮಸೂದೆ ಕಾನೂನಾಗಬೇಕಾದದ್ದು ಬಹಳ ಅಗತ್ಯ ಎಂದು ವಿನಯಪೂರ್ವಕವಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಮಸೂದೆಗೆ ಎಲ್ಲರೂ ಬೆಂಬಲ ನೀಡಬೇಕೆಂದು ಹೇಳಿ ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ದೇಶದ ಹಿತದೃಷ್ಟಿಯಿಂದ ಇಂಥ ಮಸೂದೆ ಬಹಳ ಅಗತ್ಯ ಎಂದು ಕೊನೆಯಲ್ಲಿ ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಭಾಷಣ ಪ್ರಾರಂಭಮಾಡುವುದಕ್ಕಿಂತ ಮುಂಚೆ ಶ್ರೀ ಮಂಜಪ್ಪನವರು ಕೆಲವು ಸಮಾಚಾರಗಳನ್ನು ಈ ಸಭೆಗೆ ತಿಳಿಸುತ್ತಾರೆ ಎಂದು ತಿಳಿದುಕೊಂಡಿದ್ದೆವು; ಆದರೆ ತಿಳಿಸಲಿಲ್ಲ. ಈಗಲೂ ಕೂಡ ಅವರು ವಿಷಯಗಳನ್ನು ತಿಳಿಸಿದ್ದರೆ ಇದನ್ನು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತಾ ಇತ್ತು. ಮೈಸೂರು ದೇಶದಲ್ಲಿ ಒಟ್ಟು ಎಷ್ಟು ಹೋಲ್ಡಿಂಗ್‌ಗಳು ಇವೆ; ಟೆನೆಂಟುಗಳು ಎಷ್ಟು ಜನ ಇದ್ದಾರೆ; ಎಷ್ಟು ಜನ ಜಮೀನ್ದಾರರು ಇದ್ದಾರೆ; ಅವರ ಪೈಕಿ ಬೇರೆಯವರಿಗೆ ಜಮೀನು ಕೊಟ್ಟು ಕೆಲವು ಭಾಗವನ್ನು ತಾವೇ ಮಾಡಿಕೊಂಡಿರುವವರು ಎಷ್ಟು ಜನ; Absentee Landlords ಎಷ್ಟು ಜನ ಇದ್ದಾರೆ ಎಂಬುದನ್ನು ತಿಳಿಸಬೇಕು. ಇದು ಬಹಳ ಮುಖ್ಯವಾದ ವಿಷಯ, ಇವು ಏನನ್ನೂ ಹೇಳದೆ 100 ಎಕರೆ ಸ್ಟ್ಯಾಂಡರ್ಡ್ ಎಕರ್ ಎಂದು ಹೇಳಿದರೆ ಹೇಗೆ? ಸಿಂಗಲ್ ಆಗಿದ್ದು 25 ಎಕರೆ ಇರುವವರು ಎಷ್ಟು ಜನ, ಯಾವ ಯಾವ ಡಿಸ್ಟ್ರಿಕ್ಟ್‌ನಲ್ಲಿ ಇದ್ದಾರೆ, ಯಾರಾರಿಗೆ ಇದು affect ಆಗುತ್ತದೆ ಎಂಬುದನ್ನು ಹೇಳಲಿಲ್ಲ. ಅಥವಾ ಈಗ ತಂದಿರತಕ್ಕ ಮಸೂದೆ ಗೇಣಿದಾರರ ಮಸೂದೆಯೋ ? ಭೂಸುಧಾರಣಾ ಮಸೂದೆಯೋ ಎಂಬುದನ್ನೂ ಅವರು ಹೇಳಲಿಲ್ಲ. ಇದುವರೆಗೂ ನಾವು ಕೇಳಿದ ಭಾಷಣದಲ್ಲಿ ಭೂಸುಧಾರಣೆಗಳನ್ನು ಮಾಡತಕ್ಕದ್ದು ಹೇಗೆ ಅನ್ನುವ ವಿಷಯಗಳನ್ನು ಹೇಳುತ್ತಾ ಬಂದಿದ್ದಾರೆ. ಇದು ತಿದ್ದುಪಡಿ ಮಸೂದೆ ಎಂದು ಇದರಲ್ಲಿ ಬರೆದಿದ್ದಾರೆ. ಗೇಣಿದಾರರ ಕಾನೂನು 1952ನೇ ಇಸವಿಯಲ್ಲಿ ಮೊದಲು ಒಂದೆರಡು ತಾಲ್ಲೂಕುಗಳಲ್ಲಿ ಜಾರಿಗೆ ಬಂತು.

ಅದೇ ಇಲ್ಲಿ ಏನು ಹೇಳಿದ್ದಾರೆ ಎಂದರೆ :

> “Certain difficulties experienced by landlords and tenants in the working of the Mysore Tenancy Act, 1952, have been brought to notice and it is found necessary to amend the Act. . . .”

ಏನು difficulties ಬಂದವು, ಯಾವಯಾವುದನ್ನು ನಿಮ್ಮ ನೋಟೀಸಿಗೆ ಯಾರುತಂದರು, ಅಂಥಾದ್ದನ್ನು ಪರಿಹಾರಮಾಡುವುದಕ್ಕೆ ಇಲ್ಲಿ ಯಾವ ತಿದ್ದುಪಡಿಯನ್ನು ತಂದಿದ್ದೀರಿ? ಈಗ ಇರುವಹಿಂದಿನ ಆಕ್ಟ್‌ನಲ್ಲಿ ಬಂದ difficulties ಏನು ಎಂಬುದನ್ನು ಕೊಟ್ಟಿಲ್ಲ. ಮಸೂದೆಯನ್ನು ತಂದಿದ್ದೀರಿ, ಆ ಡಿಫಿಕಲ್ಟೀಸ್ ಯಾವ ಯಾವುವು ಎಂಬುದು ನಮಗೆ ಹೇಗೆ ಗೊತ್ತಾಗಬೇಕು? ಈ ಹಿಂದೆ ಕೇಳಿದಂತೆ ಎಷ್ಟು ಜನ ಟೆನೆಂಟುಗಳಿದ್ದಾರೆ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜನ ಇದ್ದಾರೆ, ಯಾವ ಯಾವ ಜಿಲ್ಲೆಯಲ್ಲಿ ತಾವಾಗಿ ಕಲ್ಟಿವೇಟ್ ಮಾಡತಕ್ಕ ಜನ ಎಷ್ಟು ಜನ ಇದ್ದಾರೆ, ಜಮೀನ್‌ದಾರರಿಗೂ ಮತ್ತು ಟೆನೆಂಟುಗಳಿಗೂ ಇರತಕ್ಕ ಸಂಬಂಧಕ್ಕೆ ಅನ್ವಯವಾಗುವಂತೆ ತಂದಿದ್ದೀರಾ ಅಥವಾ ತಾನಾಗಿಯೇ ಸಾವಿರಾರು ಎಕರೆಗಳನ್ನು ಹೈರ್ಡ್‌ಲೇಬರ್ ಇಟ್ಟುಕೊಂಡು ಕಲ್ಟಿವೇಟ್ ಮಾಡುತ್ತಾ ಇರುತ್ತಾನೊ ಅಂತಹವನಿಗೆ ಅನ್ವಯವಾಗುತ್ತದೆಯೋ ಎಂಬುದನ್ನು ತಿಳಿಸಬೇಕು. ಏಕೆಂದರೆ ಇದರಲ್ಲಿ ownership ಎಂದು 100 ಎಕರೆ ಹೋಲ್ಡಿಂಗ್ ನಿಗದಿಮಾಡಿದ್ದೀರಿ. 500 ಎಕರೆಗಳನ್ನು ಸ್ವಂತವಾಗಿ ಒಬ್ಬ ರೈತ ಮಾಡುತ್ತಾನೆ; ಯಾರೂ ಗೇಣಿದಾರರು ಇರುವುದಿಲ್ಲ. ಆ ಸಂದರ್ಭದಲ್ಲಿ ಇದು ಅನ್ವಯವಾಗುತ್ತದೆಯೋ ಎಂಬ ಈ ಸಮಾಚಾರ ಅತ್ಯಗತ್ಯ. ಇದರ ಆಧಾರದಮೇಲೆ ಭಾಷಣ ಮಾಡಬೇಕೆಂದು ಇದ್ದೇನೆ. ದಯವಿಟ್ಟು ಈ ಸಮಾಚಾರವನ್ನು ಈ ಸಭೆಗೆ ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ತಿರುವಾಂಕೂರು—ಕೊಚ್ಚಿನ್, ಮದರಾಸು ಮತ್ತು ಹೈದರಾಬಾದು ಅಲ್ಲೆಲ್ಲಾ ಜನಸಂಖ್ಯೆ ಎಷ್ಟು, ಹಿಡುವಳಿ ಜಮೀನು ಎಷ್ಟು, tenancy problem ಯಾವ ರೀತಿ ಇದೆ ಎಂಬುದನ್ನು ಈ ಸಂದರ್ಭದಲ್ಲಿ ಕೊಟ್ಟರೆ ಅವರು ಹೇಳಿದಂಥ ಅಂಕಿಅಂಶಗಳಿಗೆ ಮಾನ್ಯತೆ ದೊರೆಯುತ್ತದೆಯೇ ವಿನಾ ಇಲ್ಲದೇ ಇದ್ದರೆ ದೊರೆಯುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಸಂಸ್ಥಾನದಲ್ಲಿ ಎಷ್ಟು ತರಹವಾದ ಹೋಲ್ಡಿಂಗ್ಸ್ ಇವೆ? ಐದು ಅಥವಾ ಹತ್ತು ಎಕರೆ ಇರುವ ಹೋಲ್ಡಿಂಗ್ಸ್ ಎಷ್ಟು? ಐವತ್ತು ಎಕರೆಯವರೆಗೆ, ಇಪ್ಪತ್ತೈದು ಎಕರೆ ವರೆಗೆ, ನೂರು ಎಕರೆ ಮತ್ತು 300 ಎಕರೆ ಮೇಲ್ಪಟ್ಟು ಇರುವ ಹೋಲ್ಡಿಂಗ್ಸ್ ಎಷ್ಟಿವೆ? ಟೆನೆನ್ಸಿ ಆಕ್ಟ್ ಅನ್ವಯಿಸಿದನಂತರ ಎಷ್ಟು ಹೆಚ್ಚಿಗೆ ಜಮೀನು ರಿಲೀಸ್ ಆಗಿದೆ? ಪರ್ಮಿಸಿಬಲ್ ಹೋಲ್ಡಿಂಗ್ಸ್ ಎಷ್ಟು ಮಾಡಬಹುದು? ಮದರಾಸಿನಲ್ಲಿರುವ ಹಾಗೆ ಜಮೀಂದಾರಿಯಂಥ ದೊಡ್ಡ ಎಸ್ಟೇಟ್ ಏನಾದರೂ ಇದೆಯೆ, ಇದ್ದರೆ ಎಷ್ಟು ನಮ್ಮಲ್ಲಿದೆ? How many families can be settled ? The percentage of tenants that have been cultivating permissive holding—ಎಂಬುದನ್ನೆಲ್ಲ ತಿಳಿಸಬೇಕು. ಪರ್ಸನಲ್ಲಾಗಿ ವ್ಯವಸಾಯಮಾಡಿದರೆ ಎಷ್ಟು ಎಕರೆ ಸಾಗುವಳಿ ಮಾಡಬಹುದು? Another most important question is about joint family. ಹಿಂದೂ, ಲಾ ಪ್ರಕಾರ ಜಾಯಿಂಟ್ ಫ್ಯಾಮಿಲಿಯಿಲ್ಲದೆ ಪರ್ಸನಲ್ಲಾಗಿ ಸಾಗುವಳಿ ಮಾಡುವವರಿಗೆ ಯಾವ ರೀತಿ ಅನ್ವಯಿಸುತ್ತದೆ? I am governed by Mohamedan law and Sri Mascarenhas is governed by Christian law. ಇಂಥ ಸಂದರ್ಭಗಳಲ್ಲಿ ಜಾಯಿಂಟ್ ಫ್ಯಾಮಿಲಿ ಪದ್ಧತಿಯಿಲ್ಲದಿರುವುದರಿಂದ ಯಾವ ರೀತಿ ಈ ಕಾನೂನು ಅನ್ವಯಿಸಲ್ಪಡುತ್ತದೆ? ಇಷ್ಟು ಸಮಾಚಾರ ತಿಳಿಸಿದರೆ ಒಳ್ಳೆಯದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಅಡಕೆ, ತೆಂಗು ಇರುವ ತೋಟಗಳಿದ್ದರೆ, ಹುರುಳಿ ಹಾಕುತ್ತಿದ್ದರೆ, ಸರ್ವೆಗಿಡ ಬೆಳೆಸಿದ್ದರೆ ಅಂಥ ಸಂದರ್ಭಗಳಲ್ಲಿ ಏನಾದರೂ ಇದರಿಂದ ಧಕ್ಕೆ ಬರುತ್ತದೆಯೇ?

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಶ್ರೀ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿಯವರು ತಮ್ಮ ವರದಿಯಲ್ಲಿ ಕೆಲವು ಅಂಕಿ ಅಂಶ ಕೊಟ್ಟಿದ್ದಾರೆ. ಅದು ಸುಮಾರು ಆರು ವರ್ಷಗಳ ಹಿಂದೆ ಒದಗಿಸಿದ್ದು. ಈಚೆಗೆ ಎಷ್ಟೋ ಬದಲಾವಣೆಯಾಗಿದೆ. ಆದ್ದರಿಂದ ಆ ಅಂಕಿ ಅಂಶ ಹೇಳುವುದಕ್ಕೆ ಈ ದಿವಸದವರೆಗೆ ಇರುವ ಅಂಕಿ ಅಂಶಗಳನ್ನು ಒದಗಿಸಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಪ್ರಶ್ನೆಗಳ ಸುರಿಮಳೆಯೇ ಬಂದಿದೆ. ಸಂಸ್ಥಾನದಲ್ಲಿರತಕ್ಕ ಗೇಣಿದಾರರ ಸಂಖ್ಯೆಯೆಷ್ಟು, ಶೇಕಡಾವಾರು ಎಷ್ಟು ಎಂಬುದನ್ನು ನಾಳೆ ಹೇಳುತ್ತೇನೆ. ಪ್ರೆಷರ್ ಆಫ್ ಪಾಪ್ಯುಲೇಷನ್ ವಿಚಾರದಲ್ಲಿ ಬೊಂಬಾಯಿ ಪರಿಸ್ಥಿತಿಗೂ ಇಲ್ಲಿನ ಪರಿಸ್ಥಿತಿಗೂ ಹೆಚ್ಚು ವ್ಯತ್ಯಾಸವಿಲ್ಲವೆಂಬುದು ನನ್ನ ಅಭಿಪ್ರಾಯ. ಬೊಂಬಾಯಿನ ಅಂಕಿ ಅಂಶ ನಾವೀಗ ಶೇಖರಿಸಬೇಕು. ಸಾಧ್ಯವಾದರೆ ಒದಗಿಸುವುದಕ್ಕೆ ಪ್ರಯತ್ನಪಡುತ್ತೇನೆ. ಹೋಲ್ಡಿಂಗ್ಸ್ ವಿಚಾರದಲ್ಲಿ ಸಾಧ್ಯವಾದರೆ ಸೆನ್ಸಸ್ ವರದಿಯ ಅಂಕಿ ಅಂಶ ಕೊಡುತ್ತೇನೆ. ಆಮೇಲೆ ಈ ಮಸೂದೆ ಭೂಸುಧಾರಣೆ ಮಸೂದೆಯೇ ಅಥವಾ ಗೇಣಿದಾರರ ಕಾನೂನೇ ಎಂದು ಕೇಳಿದರು. ಭೂಸುಧಾರಣೆಯಾಗಬೇಕೆಂಬ ಅಭಿಲಾಷೆಯಿರುವಾಗ ಯಾವ ರೀತಿಯಲ್ಲಿ, ಯಾವ ರೂಪದಲ್ಲಿ ಮಸೂದೆ ಬಂದರೆ ಏನು? ಕಾನೂನಿಗನುಸಾರವಾಗಿದ್ದರೆ ಸರಿ, ರಾಜ್ಯಾಂಗಕ್ಕನುಸಾರವಾಗಿದ್ದರೆ ಸರಿ. ಈ ಮಸೂದೆ ಕಾನೂನಿಗನುಸಾರವಾಗಿಯೂ ಮತ್ತು ರಾಜ್ಯಾಂಗಕ್ಕನುಸಾರವಾಗಿಯೂ ಇದೆ. ಜೊತೆಗೆ ಬಾಕಿ ಪ್ರಾಂತಗಳಲ್ಲೂ ಇಂತಹ ಕಾನೂನುಗಳು ಈಗ ಜಾರಿಯಲ್ಲಿವೆ. ಬೊಂಬಾಯಿಯಲ್ಲಿ ಕೂಡ ತಿದ್ದುಪಡಿ ಮಸೂದೆ ಮಾಡಿದ್ದಾರೆ. ಸುಧಾರಣೆಯಾಗಬೇಕೆಂದು ಒಪ್ಪುವುದಾದರೆ ಈ ಪ್ರಶ್ನೆಯೇಕೆ? ಎಷ್ಟೋ ಜನ ರೈತರಿಗೆ ಇದರಿಂದ ಸಹಾಯವಾಗುತ್ತದೆಂದು ಕೇಳಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಸುಮಾರು 25 ಅಥವಾ 30 ಸಾವಿರ ಜನರಿಗೆ ಸಹಾಯವಾಗಬಹುದು.

ಶ್ರೀ ಎ. ಭೀಮಪ್ಪನಾಯಕ್.—ಶ್ರೀ ಗುಂಡಪ್ಪಗೌಡರ ವರದಿಯ ಪ್ರಕಾರ 12 ಲಕ್ಷ ಲ್ಯಾಂಡ್ ಹೋಲ್ಡಿಂಗ್ಸ್ ಇವೆ ಮತ್ತು 15 ಸಾವಿರ ಜನ ಟೆನೆಂಟ್ಸಿದ್ದಾರೆ. ಹಾಗಿರುವಾಗ 25 ಸಾವಿರ ಎಲ್ಲಿಂದ ಬಂತು? ಈಗ ಆರು ವರ್ಷಗಳ ಮೇಲೆ ಏನಾಗಿದೆಯೆಂಬುದು ಗೊತ್ತಿಲ್ಲ. ಜಮೀನು ಯಾರಾರಲ್ಲಿ ಎಷ್ಟೆಷ್ಟಿದೆಯೆಂಬುದೂ ತಿಳಿಯದು.

ಶ್ರೀ ಕಡಿದಾಳ್ ಮಂಜಪ್ಪ.—ಅಂತೂ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಅಂಕಿಯ ಮೇಲೆ ಚರ್ಚೆ ಬೇಡ; ಸಾಧ್ಯವಾದರೆ ಸರಿಯಾದ ಅಂಶ ತಿಳಿಸಲು ಪ್ರಯತ್ನಪಡುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—10 ಸಾವಿರ ಜನ ಕೂಡ ಗುವುದಿಲ್ಲ. ಆ ಪರ್ಮಿಸಿಬಲ್ ಹೋಲ್ಡಿಂಗ್ ಮೇಲೆ ಇರುವವರಿಗೆ ಮಾತ್ರ ಅಪೇಕ್ಷ್ಯಾಗುವುದು. ಅಂಥ ರೈತರೆಷ್ಟಿದ್ದಾರೆಂದು ಸಂಗ್ರಹಿಸಿ ಹೇಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಗೇಣಿದಾರರು ಸಂಸ್ಥಾನದಲ್ಲಿ ಸಾಕಾದಷ್ಟು ಸಂಖ್ಯೆಯಲ್ಲಿದ್ದಾರೆ ಮತ್ತು ಸಂಸ್ಥಾನದಾದ್ಯಂತ ಗೇಣಿ ಕಾನೂನು ಜಾರಿಯಲ್ಲದೆ, ಗೇಣಿವಿವಾದ ಬರುತ್ತಿದೆ. ಯಾವ ಕಾನೂನು ಮಾಡಬೇಕಾದರೂ ಆ ಕಾನೂನಿನಿಂದ ಪ್ರತಿಫಲ ಹೊಂದುವವರನ್ನು ಅಥವಾ ಆ ಕಾನೂನಿನಿಂದ ತೊಂದರೆಪಡುವವರನ್ನು ಲೆಕ್ಕಮಾಡಿ ಕಾನೂನು ಮಾಡುವುದಕ್ಕಾಗುವುದಿಲ್ಲ. ಹೌಸ್ ರೆಂಟ್ ಕಂಟ್ರೋಲ್ ಆಕ್ಟ್ ಮಾಡಿದಾಗ ಎಷ್ಟು ಮನೆಗಳಿವೆ, ಎಷ್ಟು ಜನ ಬಾಡಿಗೆ ಮನೆಗಳಲ್ಲಿ ವಾಸವಾಗಿದ್ದಾರೆ ಎಂಬ ಅಂಕಿ ಅಂಶಗಳನ್ನು ಶೇಖರಿಸಿ ನಂತರ ಬಿಲ್ಲನ್ನು ಶಾಸನ ಸಭೆಯ ಮುಂದಿಡಲಿಲ್ಲ. ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಈಗ ಹೇಳಿದ ಹಾಗೆ, ಉಳುವವನಿಗೆ ಇದರಿಂದ ಸಹಾಯವಾಗುತ್ತದೆ. ಉಳುವವನು ಸಾಧ್ಯವಾದಮಟ್ಟಿಗೆ ಮಾಲೀಕನಾಗಿರಬೇಕೆಂಬುದನ್ನು ತಾವೆಲ್ಲರೂ ಒಪ್ಪುತ್ತೀರಿ. ಆ ನೀತಿ ಅನುಸರಿಸಿ ಈ ಸಭೆಯ ಮುಂದೆ ಈ ಮಸೂದೆಯನ್ನಿಡಲಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಕಂದಾಯದ ಖಾತೆಯ ಮಂತ್ರಿಗಳು ಈ ಸಭೆಯ ಮುಂದೆ ಈ ತಿದ್ದುಪಡಿ ಮಸೂದೆಯನ್ನಿಟ್ಟಿದ್ದಾರೆ. ಸ್ವಲ್ಪ ಕಾಲದ ಹಿಂದೆ ಅವರು ಹೊಸದಾಗಿ ಮಂತ್ರಿಗಳಾದಾಗ ಗೇಣೀದಾರರ ಕಾನೂನಿಗೆ ಮೊದಲನೆಯ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಿದರು. ಆಗ ಒಂದೆರಡು ತಾಲ್ಲೂಕುಗಳಿಗೆ ಮೊದಲು ಅನ್ವಯಿಸುತ್ತೇವೆಂದು ಹೇಳಿದರು. ಈಗ ಈ ತಿದ್ದುಪಡಿ ಕಾನೂನಿಗೆ ಅಂಕಿ ಅಂಶ ಕೇಳಿದೆ. ಸಾಧ್ಯವಾದಷ್ಟು ಒದಗಿಸುವುದಾಗಿ ಹೇಳಿದರು. ಈ ಕಾನೂನು ವಿಷಯ ಮೊದಲು ಪ್ರಾರಂಭ ಮಾಡಿದಾಗ ತಮ್ಮ ಹತ್ತಿರ ಸುಪ್ರೀಂ ಕೋರ್ಟಿನಲ್ಲಿ ಡಿಸಿಷನ್ ಆಗಿರುವುದಿದೆ, ಇದು ಯಾವ ಫಂಡಮೆಂಟಲ್ ರೈಟ್ಸ್‌ಗೂ ತೊಂದರೆಮಾಡುವುದಿಲ್ಲ, ಆದ್ದರಿಂದ ತಂದಿದ್ದೇವೆ ಎಂದು ಅಪ್ಪಣೆಕೊಟ್ಟರು. ಇದರಲ್ಲಿ ಮೂರು ನಾಲ್ಕು ತರಹ ಹಕ್ಕುಗಳನ್ನು ಒಂದರಲ್ಲೇ ಸೇರಿಸಿ ಒಂದು ಕಾನೂನು ತಂದಿದ್ದಾರೆಂಬುದು ನನ್ನ ಅಭಿಪ್ರಾಯ. ಗೇಣೀದಾರರ ಕಾನೂನಿಗೆ ತಿದ್ದುಪಡಿ ತರುವುದರ ಮೂಲಕ ಭೂಸುಧಾರಣೆಯನ್ನು ನಾವು ಜಾರಿಗೆ ತರುತ್ತೇವೆಂದು ನಾನಂತೂ ಇದುವರೆಗೂ ಹೇಳಿದ್ದನ್ನು ಕೇಳಿರಲಿಲ್ಲ. ಒಂದು ವೇಳೆ ಅವರು ಹೆಚ್ಚಾದ ಹಕ್ಕು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ಹೇಳಬಹುದು. ಬೊಂಬಾಯಿ ಮತ್ತು ಹೈದರಾಬಾದು ಈ ಎರಡು ಕಡೆಗಳಲ್ಲಿ ಮಾತ್ರ ಈ ರೀತಿಯಿದೆ, ತಿರುವಾಂಕೂರು-ಕೊಚಿನ್‌ನಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಬಹುದು. ಇಂಡಿಯಾದಲ್ಲಿ ಇನ್ನೆಲ್ಲೂ ಇಲ್ಲ. ಇನ್ನೂ ಅನೇಕ ಸಂಸ್ಥಾನಗಳಿವೆ, ಕೇಂದ್ರ ಸರ್ಕಾರವಿದೆ. ಅಲ್ಲಿ ಇನ್ನೂ ಅವರು ಪ್ರಾರಂಭ ಮಾಡಿಲ್ಲ. ತಿರುವಾಂಕೂರಿನಲ್ಲಿ ಈಗ ಸಭೆಯ ಮುಂದಿಟ್ಟಿರುವುದು ಡ್ರಾಫ್ಟ್ ಬಿಲ್ಲು.

ಈಗ "ಉದ್ದೇಶಗಳು ಮತ್ತು ಕಾರಣಗಳ ವಿವರ" ಎಂಬುದರಲ್ಲಿ ಏನು ಹೇಳಿದ್ದಾರೋ ಅಲ್ಲಿಂದ ಪ್ರಾರಂಭ ಮಾಡಬೇಕೆಂದಿದ್ದೇನೆ. ಅದರಲ್ಲಿ ಆಕ್ಟನ್ನು ಜಾರಿಗೆ ತಂದು ಅದರ ಪ್ರಕಾರ ಕೆಲಸಕಾರ್ಯಗಳನ್ನು ನಡೆಯಿಸುವ ಸಂಬಂಧದಲ್ಲಿ ಕೆಲವು ನ್ಯೂನತೆಗಳು ಕಂಡು ಬಂದಿವೆ. ಅವನ್ನು ಸರಿಪಡಿಸಲು ಈ ತಿದ್ದುಪಡಿ ಮಸೂದೆಯನ್ನು ತಂದಿದೆ ಎಂದು ಹೇಳಿದ್ದಾರೆ.

4-30 P.M.

ಒಬ್ಬ tenant ಗೆ tenancy period ಕಾನೂನು ಪ್ರಕಾರ ಐದು ವರ್ಷಗಳೆಂದು ನಿಗದಿ ಮಾಡಿದ ಮೇಲೆ ಆ ಅವಧಿ ಮುಗಿಯುವವರೆಗೂ ಸುಮ್ಮನಿದ್ದು ಅದರಿಂದೇನಾದರೂ ತೊಂದರೆ ಇದೆಯೇ ಎಂಬುದನ್ನು ನೋಡಿಕೊಂಡು ಅನಂತರ ಬದಲಾವಣೆ ಮಾಡಿದರೆ ಅದರಲ್ಲಿ ಅರ್ಥವಿದೆ. ಅದು ಬಿಟ್ಟು ಒಂದೆರಡು ವರ್ಷದ ಅವಧಿ ಸಹ ಮುಗಿಯದೆ ಇರುವ ಸಂದರ್ಭದಲ್ಲಿ, ಐದು ವರ್ಷದ ಅವಧಿ ತುಂಬುವುದಕ್ಕೆ ಮುಂಚೆಯೇ ಇದನ್ನು ಹತ್ತು ವರ್ಷಕ್ಕೆ ಬದಲಾಯಿಸುವುದರಲ್ಲಿ ಅರ್ಥವಿಲ್ಲ. ಈಗಿರುವ ಅವಧಿ ನಿಗದಿ ಮಾಡಿರುವುದರಿಂದ ತೊಂದರೆಯಾಗಿದೆಯೆಂಬ ವಿಚಾರದಲ್ಲಿ ಒಂದು ವಾಕ್ಯದ ವಿವರಣೆಯೂ ಸಹ ಈ ತಿದ್ದುಪಡಿ ಮಸೂದೆಯಲ್ಲಿ ಅಡಕವಾಗಿಲ್ಲ. ಏಕೆಂದರೆ ಮೊದಲೇ protected tenants ಎಂಬುದಕ್ಕೆ definition ಆಗಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಹಕ್ಕು ಬಾಧ್ಯತೆಗಳೇನು, permissible holding ಏನು ಎಂಬುದೆಲ್ಲಾ ನಿಗದಿಯಾಗಿದೆ. ಈಗ working of the Tenancy Act ನಿಂದ ತೊಂದರೆಯಾಗಿದೆಯೇ ಎಂಬುದನ್ನು Statements of Objects and Reasonsನಲ್ಲಿ ವ್ಯಕ್ತಪಡಿಸಿಲ್ಲ. ಹೋಗಲಿ, ಈ ವಿಚಾರವಾಗಿ ಪ್ಲಾನಿಂಗ್ ಕಮಿಷನ್‌ನಿಂದ ಏನಾದರೂ ಸಲಹೆ ಬಂದಿತ್ತೆ ಎಂದರೆ ಅದೂ ಕಂಡುಬರುವುದಿಲ್ಲ. ಹೋಗಲಿ, ಇದರಿಂದೇನಾದರೂ ದೇಶದಲ್ಲಿರುವ ಐಶ್ವರ್ಯವನ್ನು ಸಮನಾಗಿ ಹಂಚಬೇಕೆಂದು ವ್ಯವಸ್ಥೆಮಾಡಿದ್ದೀರಾ ಎಂದು ನೋಡಿದರೆ ಅದೂ ಕಂಡು ಬರುವುದಿಲ್ಲ. ಇದರಲ್ಲೇನಾದರೂ ತತ್ವವಡಗಿದೆಯೇ ಎಂದರೆ ಅದೂ ತೋರಿಬರುವುದಿಲ್ಲ. ಇದು ಒಂದು half-hearted measure, half-digested measure ಆಗಿ ಮಾತ್ರ ಕಂಡು ಬರುತ್ತಿದೆ. ಇದನ್ನು ಭೂ ಸುಧಾರಣೆ ಮತ್ತು ಟೆನೆನ್ಸಿ ಆಕ್ಟ್ ಇವೆರಡರ ಕಲಸುಮೇಲೋಗರದ ಮೂರ್ತಿ ಎಂದು ನಾನು ಕರೆಯುತ್ತೇನೆ. ಇದರಲ್ಲಿ ನಿರ್ದಿಷ್ಟವಾದ ಯಾವ ಒಂದು ತತ್ವವೂ ಅಡಗಿಲ್ಲ, ಇದನ್ನು ಯಾವ ವಿಧವಾದ ಜವಾಬ್ದಾರಿಯಿಂದಲೂ ತಂದಿಲ್ಲ ಎಂಬುದನ್ನು, ನಾನು ತೋರಿಸುತ್ತೇನೆ. ಪ್ರತಿಯೊಂದು ಸೆಕ್ಷನ್ ಅನುಸಹ ಓದಿ ಪ್ರತಿಯೊಂದು ವಿಷಯದ ಮೇಲೆಯೂ ಮಾತನಾಡಬೇಕೆಂಬ ಆಶೆ ಇದೆ. ಇದು ಒಂದು ಕಲಸುಮೇಲೋಗರದ ಭಟ್ಟಿಯಾಗಿ ಪರಿಣಮಿಸಿದೆಯೇ ಹೊರತು ಇದರಿಂದ ಯಾರಿಗೂ ಏನೂ ಪ್ರಯೋಜನವಾಗುವುದಿಲ್ಲ. ಹೀಗೆ ನಾವು ಯಾರಾದರೂ ಮಾತನಾಡಿದರೆ, 'ನೀವು capitalist, ನೀವು landlord' ಎಂದು ಮುಂತಾಗಿ ಹೇಳುತ್ತಾರೆ. ಈ ಸಮಯದಲ್ಲಿ ನನ್ನ ಸ್ವಂತ ವಿಚಾರ ಸಹ ಹೇಳಲು ಇಷ್ಟಪಡುತ್ತೇನೆ. ನಾನು ಜಮೀನ್ದಾರನೇ ಆದರೂ ನಾನು ಯಾರಿಗೂ ಗುತ್ತಿಗೆಗೆ ಕೊಟ್ಟಿಲ್ಲ. ಇದರಿಂದ ಅವರಿಗೆ ಹೇಗೆ ಬಾಧಕವಾಗುವುದಿಲ್ಲವೋ ನನಗೂ ಹಾಗೆಯೇ ಬಾಧಕವಾಗುವುದಿಲ್ಲ. ಆದರೂ ಇದರ ಸಾಧಕ ಬಾಧಕಗಳನ್ನು ಯೋಚನೆಮಾಡುವು

ದಾದರೆ ಇದೊಂದು discriminatory legislation ಎಂದು ಹೇಳುತ್ತೇನೆ.

ಇದರಲ್ಲಿ standard acre ಎಂಬುದನ್ನು ನಿಗದಿ ಮಾಡುವ ಅಧಿಕಾರ ಸರ್ಕಾರದವರೇ ಇಟ್ಟುಕೊಂಡು, permissible holding ಎಂಬುದನ್ನು ಒಬ್ಬ ಮನುಷ್ಯನಿಗೆ 25 standard acres ಎಂದು ಬೇಗನೆ ಗೊತ್ತುಮಾಡಿದ್ದಾರೆ. ಅದರ ಮೇಲೆ, ಅದಕ್ಕಿಂತ ಹೆಚ್ಚಾಗಿರುವ ಭೂಮಿಯನ್ನು ಆತನು tenant ಗೆ ಕೊಡಬೇಕು, ಹಾಗಿಲ್ಲದಿದ್ದರೆ ಮತ್ತಾರಿಗಾದರೂ ಕೊಡಬೇಕು—ಸರ್ಕಾರಕ್ಕೇ ಕೊಡಬೇಕು. ಅಂಥ ಸಂದರ್ಭದಲ್ಲಿ ಸರ್ಕಾರದವರು ಕೊಂಡುಕೊಳ್ಳುವುದಕ್ಕೆ ತಯಾರಾಗಿರುತ್ತಾರೆಯೇ ? ಮತ್ತೊಂದು ವಿಚಿತ್ರವೆಂದರೆ, ಸ್ವಂತ ಜಮೀನು ವ್ಯವಸಾಯ ಮಾಡತಕ್ಕವನಾದರೆ ಅವನು ಎಷ್ಟು ಎಕರೆ ಜಮೀನು ಬೇಕಾದರೂ ಇಟ್ಟುಕೊಳ್ಳಬಹುದು. ಅಂದ ಮೇಲೆ ಇದರಲ್ಲಿ ಏನೊಂದು ತತ್ತ್ವವೂ ಅಡಗಿಲ್ಲ; landlordಗೆ ಇದರಿಂದ ಏನೂ affect ಆಗುವುದಿಲ್ಲ ಎಂದು ಒಂದು ಬಾರಿ ನನಗೆ ಸಂಬಂಧಪಟ್ಟ ಮಂತ್ರಿಗಳೇ ಹೇಳಿದರು.

Sri Kadidal MANJAPPA.—I never said this to him.

ಶ್ರೀ ಎ. ಭೀಮಪ್ಪನಾಯಕ್.—An agriculturist cultivates the land for himself, ಅವನಿಗೂ 25 ಎಕರೆಗಳಿಗಿಂತ ಜಾಸ್ತಿ ಇರಬಾರದು, ಅವನು ಅದಕಿಂತಲೂ ಜಾಸ್ತಿ ಇಟ್ಟುಕೊಳ್ಳಬಾರದು ಎಂದು ಏಕೆ ನಿರ್ಧಾರ ಮಾಡಿಲ್ಲ ? ಆ ರೀತಿ ಮಾಡದೆ ಇದ್ದರೆ ಈ ತಿದ್ದುಪಡಿ ಮಸೂದೆಯ ಉದ್ದೇಶ ಸಾರ್ಥಕವಾಗುವುದಿಲ್ಲ. ಹಾಗೆ ಮಾಡದೆ ಇದ್ದರೆ ಈ ಕೋರಿದಾರರಿಗೆ, ಗೇಣೀದಾರರಿಗೆ—land to the tiller ಎಂದು ಹೇಳುವ ಬದಲು land to the middleman ಎಂದು ಹೇಳುವ ಹಾಗೆ ಆಗಿ ತಮ್ಮ ಈ ಟೆನೆನ್ಸಿ ಆಕ್ಟ್ ಎಂಬುದು ಒಂದು ಕರಡುಪ್ರತಿಯಾಗಿ ನಿಂತಿರಬೇಕೇ ಹೊರತು ಮತ್ತೇನೂ ಪ್ರಯೋಜನವಿಲ್ಲ. ಹೈದರಾಬಾದಿನಲ್ಲಿರುವವನೊಬ್ಬನಿಗೆ ಶ್ರೀರಂಗಪಟ್ಟಣದ ಕಡೆ 200 ಎಕರೆ ಜಮೀನು ಇದ್ದು, ಅವನು ಅದನ್ನು ಗುತ್ತಿಗೆಯಮೇಲೆ ಕೊಟ್ಟಿದ್ದರೆ, ಆತನಿಗೆ ಒಂದು ಎಕರೆಗೆ ಹತ್ತು ಪಲ್ಲದಂತೆ ದವಸ ಆಗಿ 2000 ಪಲ್ಲ ಆದರೆ ಅಂಥವನು ಏನು ಮಾಡಬೇಕು ?

Sri Kadidal MANJAPPA.—On a point of clarification, Sir. He told something which is not in the Bill. A tenant is a person who has cultivated the land personally.

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೇ ನಾನು ಕೇಳುವುದು, ಈ personal cultivation ಎಂಬುದನ್ನು ಯಾವ ರೀತಿ ನಿರ್ಧರ ಮಾಡುತ್ತೀರಿ ಎಂದು. Hired labour ಇಟ್ಟುಕೊಂಡು ಒಂದು ಜೊತೆ ಎತ್ತು, ಇಬ್ಬರು ಆಳುಗಳನ್ನಿಟ್ಟುಕೊಂಡು ವ್ಯವಸಾಯ ಮಾಡಿಸುವವನನ್ನು ಈ categoryಗೆ ಸೇರಿಸುತ್ತೀರಾ ? ಸಂಪೂರ್ಣವಾಗಿ ಉಳತಕ್ಕವನಿಗೇ ಜಮೀನು ಹಂಚತಕ್ಕ ವ್ಯವಸ್ಥೆಯನ್ನು ಹೇಗೆ ಮಾಡುತ್ತೀರಿ ? 12 ಲಕ್ಷದ ಮೇಲ್ಪಟ್ಟು and owners ಐದು ಎಕರೆಗಳಿಂದ ಸಾವಿರ ಎಕರೆಗಳವರೆಗೆ ಇರುವವರಿದ್ದಾರೆಂದು ತಾವೇ ತಿಳಿಸಿದ್ದೀರಿ.

ಶ್ರೀ ಬಿ. ಹುಚ್ಚೇಗೌಡ.—ಐದು ಎಕರೆ ಒಳಗೆ ಇರುವವರೇ 7 ಲಕ್ಷದ ಮೇಲ್ಪಟ್ಟು ಇದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಇನ್ನು ಈ standard acre ಎಂಬುದನ್ನು ನಿಗದಿ ಮಾಡುವ ವಿಚಾರದಲ್ಲಿ dry land ವಿಚಾರದಲ್ಲಿ annual productive capacity of eight pallas of ragi ಮತ್ತು wet land ವಿಚಾರದಲ್ಲಿ annual productive capacity of eight pallas of paddy ಎಂದು ಬೇರೆ ನಿಗದಿ ಮಾಡಿದ್ದೀರಿ. ಅಂದ ಮೇಲೆ ಈ ವಿಧವಾದ ಕಾನೂನು ಮಾಡುವುದಕ್ಕೆ ಹೊರಟು ದೊಡ್ಡ ದೊಡ್ಡ landlordಗಳನ್ನು ಪಟೇಲ್ ಶ್ಯಾನುಭೋಗರ ಕೈವಾಡಕ್ಕೆ ಸಿಲುಕಿ ಬೀಳುವಂತೆ ಮಾಡುತ್ತೀರಿ. ಏಕೆಂದರೆ, ಆತನು ಒದಗಿಸುವ ಪಹಣಿ ಲೆಕ್ಕದ ಆಧಾರದಮೇಲೆ ತಾವು ಇದನ್ನು ಗೊತ್ತು ಪಡಿಸುತ್ತೀರಿ. ತಾವು ಗೊತ್ತುಮಾಡುವ standard acre ಎಂಬುದು ಮೈಸೂರು ದೇಶಕ್ಕೆ ಮಾತ್ರವೇ ಅಲ್ಲ ಇಡೀ ಇಂಡಿಯಾ ದೇಶದ ಯಾವ ಪ್ರಾಂತ್ಯಕ್ಕಾಗಲಿ ಹೇಗೆ ಅನ್ವಯಿಸುತ್ತೀರಿ ? ಇಲ್ಲೇನೋ ಸಂಬಂಧಪಟ್ಟ ಮಂತ್ರಿಗಳು ಒಂದು ಸರ್ಕ್ಯುಲರ್ ಹೊರಡಿಸಿದರೆ ಪಟೇಲ್ ಶ್ಯಾನುಭೋಗರ ಪಹಣಿ ಲೆಕ್ಕದ ಆಧಾರದಮೇಲೆ ಒಂದು ಕುರುಡು ಅಂಕಿ ಅಂಶ ದೊರಕಬಹುದು. ಆದರೆ ಇದರ ಬಗ್ಗೆ ಕನ್ಯಾಕುಮಾರಿಯಿಂದಾಗಲಿ, ಬಂಗಾಳದಿಂದಾಗಲಿ, ಹಿಮಾಚಲ ಪ್ರದೇಶದಿಂದಾಗಲಿ ಲೆಕ್ಕ ತರಿಸಿಕೊಳ್ಳುವ ಸಂದರ್ಭ ಒದಗಿದರೆ ಹೇಗೆ ಮಾಡುತ್ತೀರಿ ?

ಇನ್ನೊಂದು ವಿಚಾರ. ಇದುವರೆಗೂ Grow More Food Campaign ಆಯಿತು. ಈಗ grow less food campaign ಪ್ರಾರಂಭಿಸಿರುತ್ತಾರೆ. ಇದರ ಪ್ರಕಾರ ತಮಗೆ ನಿಖರವಾದ ಅಂಕಿ ಅಂಶಗಳೇ ದೊರಕುವುದಿಲ್ಲವಲ್ಲಾ ; ಆಗ ಏನು ಮಾಡುತ್ತೀರಿ ?

ಬೆಳೆಯುವವರು ತಮಗಿರುವ ಜಮೀನಿನ ಲೆಕ್ಕ ಹಾಕಿ 8 ಪಲ್ಲದಂತೆ ಬೆಳೆದರೆ ಸಾಕು ಹೆಚ್ಚಿಗೆ ಬೆಳೆಯುವುದನ್ನೇ ಬಿಟ್ಟುಬಿಡೋಣ, ಸುಖವಾಗಿ ಇರುತ್ತೇವೆಯಲ್ಲಾ ಎಂದು ಅಂದುಕೊಳ್ಳುವುದಕ್ಕೆ ಇದರಿಂದ ಪ್ರೇರೇಪಣೆ ಮಾಡುತ್ತಿದ್ದೀರಿ. ಸ್ವಾಮಿ, ಇಲ್ಲಿ ಹೇಳುತ್ತೀರಿ, ಇಲ್ಲಿ 25 ಎಕರೆ ಇದೆ, ಅಲ್ಲಿ 12 ಎಕರೆ ಇದೆ, ಅಷ್ಟೇ ಅಲ್ಲದೆ ಒಂದು ಸಂಸಾರಕ್ಕೆ 100 ಎಕರೆ ಬಿಟ್ಟಿದ್ದೇವೆ ಎಂದು. ಇಲ್ಲಿ ಪರಿಸ್ಥಿತಿ ಏನು ? ಇಲ್ಲಿನ ಪರಿಸ್ಥಿತಿ ನಮಗಿಂತ ನಿಮಗೆ ಚೆನ್ನಾಗಿ ಗೊತ್ತು ಎಂದು ಹೇಳುತ್ತೀರಿ, ನಿಜ. ಆದರೆ ನಾನು ಹೇಳಬೇಕಾದರೆ ನಾವು ಬೆಳೆಯುವವರ ಜೊತೆಗೆ ಇರುವವರು. ನೀವು ಈಗಾಗಲೇ 3 ವರ್ಷಗಳಿಂದ ಅವರ ಸಂಪರ್ಕವನ್ನು ಕಳೆದುಕೊಂಡಿದ್ದೀರಿ. ಅಲ್ಲಿಗೆ ಬಂದಾಗ ಟಿ. ಬಿ.ಯಲ್ಲಿ ಇರುತ್ತೀರಿ, ಗೊತ್ತು. ನಾನು ಹೇಳುವುದು ತೆಗೆದುಕೊಳ್ಳಿ. ಮೈಸೂರು ದೇಶದಲ್ಲಿ ಒಂದು ಜಮೀನು ಮಾಡಿಸಬೇಕಾದರೆ ಕಳೆ ಕೀಳಬೇಕು, ಗೊಬ್ಬರ ಹಾಕಬೇಕು ; ಕಾಳು, ಕಟ್ಟಣೆ, ಪೈರು ಒಂದೊಂದನ್ನೂ ಕಿತ್ತು ಆಮೇಲೆ ಶೇಕಡ 50 ತೆಗೆದುಕೊಳ್ಳುತ್ತಾನೆ. ಅಂದ ಮೇಲೆ ಇದು ಹೇಗಿದೆ, ಜಮೀನು ಎಲ್ಲಿದೆ ಎಂದು ನೋಡದೇ ಇರತಕ್ಕ ಜಮೀನುದಾರರು ಏನು ಕೊಡುತ್ತಾರೆ ಎಂಬುದನ್ನು ಲೆಕ್ಕ ಹಾಕಿಕೊಂಡು ಅದಕ್ಕೂ ಇದಕ್ಕೂ ಹೋಲಿಕೆ ಮಾಡಿದರೆ ಅದು ಅನುಭವ ಎಂದಾಯಿತೇ ? ತಿರುವಾಂಕೂರು ಸ್ಟೇಟ್ ಎಲ್ಲಾ ಸೇರಿಸಿದರೆ 10 ಸಾವಿರ ಚದರ ಮೈಲಿಗಳು. ಅಲ್ಲಿ 98 ಲಕ್ಷ ಜನಸಂಖ್ಯೆ ಇದೆ. ಇದು 129 ಚದರ ಮೈಲಿ ಇರತಕ್ಕ ಪ್ರದೇಶ. ಇಲ್ಲಿ 95 ಲಕ್ಷ ಜನ ಇದ್ದಾರೆ. ಅದರ ಜೊತೆಗೆ ಅಲ್ಲಿ ಬ್ಯಾಕ್ ವಾಟರ್ಸ್ ಬಂದು ಅರ್ಧ ತಿರುವಾಂಕೂರು-ಕೊಚ್ಚಿನನ್ನೇ ನುಂಗಿಹಾಕಿದೆ ಅಲ್ಲಿ. ಅವರು ಬೆಳೆಯುವುದು ಮೀನು ಒಂದೇ. ಅದು

(ಶ್ರೀ ಎ. ಭೀಮಪ್ಪನಾಯಕ್.)

ಹೊರತು ಇನ್ನಾವ ಬೆಳೆಯೂ ಆಗುವುದಿಲ್ಲ. ಮೀನು ಮತ್ತು ಟಾಪಿಯೋಕಾ ಇವೆರಡೂ ಯಥೇಚ್ಛವಾಗಿ ಎಲ್ಲೆಲ್ಲೂ ಕಂಡುಬರುತ್ತವೆ. 50-100 ಮೈಲ ಎಲ್ಲೆಲ್ಲಿ ಹೋದರೂ ಕೂಡ ರಸ್ತೆಯ ಪಕ್ಕದಲ್ಲಿ ಒಂದೊಂದು ಊರು, 150 ಮನೆ ಇರುತ್ತದೆ; ಬ್ಯಾಕ್ ವಾಟರ್ಸ್ ಹರಿಯುತ್ತಿರುತ್ತದೆ, ಅದರ ಹಿಂಬದಿಗೆ ಗುಡಿಸಲು ಹಾಕಿಕೊಂಡು ಸ್ವಲ್ಪ ಟಾಪಿಯೋಕಾ, ಸ್ವಲ್ಪ ತೆಂಗಿನ ಗಿಡ, ಇನ್ನು ಕೈಲಾದದ್ದರಲ್ಲಿ ಸಾಧ್ಯವಾದರೆ ಬತ್ತ ಹಾಕುತ್ತಾರೆ. ಅವನಿಗೆ ಮುಖ್ಯವಾಗಿ ಇರುವುದು ಮೀನು, ಟಾಪಿಯೋಕಾ. ಅದಕ್ಕೆ ಅವನಿಗಿರುವ 10 ಎಕರೆಗೋ ಜಾಸ್ತಿಯಾಗಿರುವಾಗ ಅಲ್ಲಿ 8 ಎಕರೆ ಸಾಕು ಎಂದು ಹೇಳಬೇಕಾದದ್ದು ನ್ಯಾಯ. ತಿರುವಾಂಕೂರು-ಕೊಚ್ಚಿನ್‌ನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಷದಲ್ಲಿ 12 ತಿಂಗಳು ಎಲ್ಲಿ ತಿರುಗಿದರೂ ಕೂಡ ಹಸಿರು ಇಲ್ಲದೇ ಇರತಕ್ಕ ದಿವಸವೇ ಇಲ್ಲ. ಪಶ್ಚಿಮ ಘಟ್ಟಗಳು ಇವೆ, ಬಂದ ಮಳೆಯನ್ನು ಅಲ್ಲೇ ಹಿಡಿದುಹಾಕುತ್ತವೆ. ಅಲ್ಲಿ 150 ಇಂಚು ಮಳೆ ಆಗುತ್ತದೆ. ಅದನ್ನು ಇಲ್ಲಿಗೆ ಹೋಲಿಸಿ ನೋಡಿ, ಅದು ಹಾಗಿದೆ ನೋಡಿ, ಇಲ್ಲೂ ಹಾಗೆ ಮಾಡಿ ಎಂದರೆ ಹೇಗೆ ? ಸರ್ಕಾರದವರಿಗೆ ಅಧಿಕಾರ ಇದೆ. ತಾವು ಏನಾದರೂ ಮಾಡಿ ಪಶ್ಚಿಮ ಘಟ್ಟದಮೇಲೆ ಬಾಂಬ್ ಹಾಕಿ ಅವುಗಳ ಎತ್ತರ ಕಡಿಮೆಮಾಡಿ ಅಲ್ಲಿ ಆಗತಕ್ಕ ಮಳೆಯನ್ನು ಲಿಮಿಟ್ ಮಾಡಿಸಿದರೆ......(ಸಭೆಯಲ್ಲಿ ನಗು) ಈ ಕಡೆ ಚೆನ್ನಾಗಿ ಮಳೆ ಬರುತ್ತದೆ. ಆಗ 50 ಅಲ್ಲ 100 ಎಕರೆ ಕೊಡದೇ ಇದ್ದರೂ ಪರವಾಗಿಲ್ಲ. 'ಯಾವ ಮನುಷ್ಯನಿಗೂ ಕೂಡ ಮಳೆ-ಬೆಳೆ ಚೆನ್ನಾಗಿ ಆಗತಕ್ಕ ಕಾಲದಲ್ಲಿ, ಸ್ಥಳದಲ್ಲಿ 150—200 ಎಕರೆ ಬೇಕಾಗಿಲ್ಲ. ಆ ರೀತಿ ಬೇಕು ಎಂದು ಅವನಿಗೆ ಅನ್ನಿಸುವುದೂ ಇಲ್ಲ. ಸರ್ಕಾರದವರಿಗೆ ಹೆಚ್ಚು ಕಂದಾಯ ಕೊಟ್ಟು ಅದರಿಂದ ಅವನಿಗೆ ಪ್ರಯೋಜನವೂ ಕೂಡ ಅಷ್ಟಾಗಿ ಆಗುವುದಿಲ್ಲ. ಈಗ ಗಣಿಗಳ ಮಾಲೀಕರು 26-28 ಮೈಲ ಬೇಕು ಎಂದು ಮೈನ್ ಲೀಸ್ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತಾರೆ. ಎಕರೆಗೆ ಹತ್ತು ರೂಪಾಯಿಗಳಂತೆ 28 ಚದರ ಮೈಲಿಗಳಿಗೆ ಎಷ್ಟೋ ಹಣ ಕೊಡಬೇಕಾಗುತ್ತದೆ. ಆದ್ದರಿಂದ ಅವನಾಗಿ ಅವನೇ ಕೈಬಿಡುತ್ತಾನೆ ಎಂದು ಹೇಳುತ್ತಾರೆ. ಹೀಗೆ ಮೈಸೂರು ದೇಶದಲ್ಲಿ ಅನುಕೂಲತೆ ಬೇಕಾದಹಾಗೆ ಇದ್ದ ಪಕ್ಷದಲ್ಲಿ 100 ಎಕರೆ ಇಟ್ಟುಕೊಂಡು ಕಂದಾಯ ಕೊಡುವುದಕ್ಕೆ ಯಾರೂ ಹೋಗುವುದಿಲ್ಲ. ಚಳ್ಳಕೆರೆ, ಜಗಳೂರು ಮುಂತಾದ ಕಡೆಗಳಲ್ಲಿ ವಿದ್ಯುಚ್ಛಕ್ತಿ ಬಂದಿದೆ. ಅಲ್ಲಿ ಇವೊತ್ತು 12 ಇಂಚು ಮಳೆ ಬರುತ್ತಾ ಇಲ್ಲ. 10 ಇಂಚು ಸಹಾ ಬರುತ್ತಿಲ್ಲ. ಸಾಧಾರಣವಾಗಿ 10 ವರ್ಷಕ್ಕೆ ಒಂದುಸಾರಿ ಸಂಪೂರ್ಣವಾಗಿ, ಪುಷ್ಟಿಯಾಗಿ ಬೆಳೆ ಬಂದಿದೆಯೋ ಇಲ್ಲವೋ. ಅಂಥ ಕಡೆಗಳಲ್ಲಿ ಒಂದು ಬಾವಿ ಹಾಕಿಕೊಂಡು 3-4 ಎಕರೆ ಇಟ್ಟುಕೊಂಡು ಬಾಕಿಯದನ್ನು ಯಾರಿಗೆ ಬೇಕಾದರೂ ಕೊಡುವುದಕ್ಕೆ—ಅದರಲ್ಲೂ ವಿದ್ಯುಚ್ಛಕ್ತಿ ಕೊಟ್ಟರೆ—ತಯಾರಾಗಿದ್ದೇವೆ. ಅದೂ ಅಲ್ಲದೆ ನಿಮಗೆ permissible acres ಎಷ್ಟು ಇರಬಹುದು ಎಂಬ ಅಂದಾಜು ತಿಳಿಯದೇ ಈ ರೀತಿ ಮಾಡಿದರೆ ಆಮೇಲೆ ಅದರಿಂದ ದೇಶಕ್ಕೆ ಆಗಬಾರದ ಅಪಘಾತ ಆಗುತ್ತದೆ. ಆ ರೀತಿ ಆಗುವುದಕ್ಕಿಂತ ಇವುಗಳನ್ನೆಲ್ಲಾ ಆಲೋಚನೆ ಮಾಡಬೇಕು. ಒಂದೊಂದನ್ನೂ ಆಲೋಚಿಸುವಾಗ ದಯವಿಟ್ಟು ಬೊಂಬಾಯಿ ಆಗಲಿ, ಹೈದರಾಬಾದು ಆಗಲಿ—ಅಲ್ಲಿ ತೆಲಂಗಾಣ ಇದೆ —ಮೈಸೂರಿಗೆ ಹೋಲಿಸಬೇಡಿ. "ಕಮ್ಯುನಿಸ್ಟರು ತಲೆ ಒಡೆಯುತ್ತಾರೆ! ಏನಾದರೂ ಮೈಸೂರು ದೇಶದಲ್ಲಿ ಅನುಕೂಲ ಮಾಡಿಕೊಳ್ಳೋಣ ಎಂದರೆ ಮೈಸೂರು ದೇಶಕ್ಕೂ ಕಮ್ಯುನಿಸ್ಟರು ಬರುತ್ತಾರೆ, ಹುಷಾರು ! ಅದಕ್ಕೆ ಈಗಲೇ ಮಾಡಿಕೊಂಡುಬಿಡಿ ಎಂದು ಕೆಲವರು ಹೇಳಬಹುದು. ಗೋಪಾಲಗೌಡರು ಏನೂ ಅದನ್ನು ಹೇಳುವುದಿಲ್ಲ ಅವರು ಸೋಷಿಯಲ್ ಲೆಜಿಸ್ಲೇಷನ್ ಹೇಳುತ್ತಾರೆಯೇ ಹೊರತು ಈ ರೀತಿ ಪೀಸ್‌ಮೀಲ್ ಆಗಿ, ಬಿಟ್ ಬೈಬಿಟನ್ನು ಅಂತೂ ಅಲ್ಲ. ರಷ್ಯದಲ್ಲಿ ಮಾಡಿದ್ದಾರೆ. ಇವೊತ್ತು ನೋಡಿ ನಮ್ಮ ಸರ್ ಮಿರ್ಜಾ ಇಸ್ಮೇಲ್‌ರವರಿಗೆ ಮನೆ ಬಾಡಿಗೆ ಎಷ್ಟು ಬರುತ್ತಾ ಇದೆ, ಲೆಕ್ಕಹಾಕಿ. ಅವರಿಗೆ ಇರುವುದನ್ನು ತಪ್ಪಿಸಬೇಕೆಂದಲ್ಲ, ಹಾಗೆಯೇ ಇರಲಿ, ಇನ್ನೂ ಸ್ವಲ್ಪ ದಿವಸ. ಯಾವುದು ಮೊದಲು ಹೋಗಬೇಕೋ ಅದರ ತಂಟೆಗೆ ಹೋಗುವುದಿಲ್ಲ. ಯಾರಿಗೂ ಏನೂ ಆಗಬಾರದು ; ಬಡವರಿಗೆ—ಅವರ ಕುತ್ತಿಗೆ ಕುಯ್ಯುವುದನ್ನು ಮೊದಲು ಮಾಡುತ್ತೇವೆ. ರೈತರಿಗೆ ಭೂಮಿ ಹಂಚುತ್ತೇವೆ ಎಂದು. ಇದನ್ನು ಇಲ್ಲಿ ನೀವೇನಾದರೂ ಮಾಡುವುದಾದರೆ ಕೇಂದ್ರ ಸರ್ಕಾರದವರಿಗೆ ಅಧಿಕಾರ ಇದೆ ; ನಾವು ಸ್ವತಂತ್ರರಾಗಿದ್ದೇವೆ. ಇಂಡಿಯಾ ದೇಶದಲ್ಲಿ ಪ್ರತಿಯೊಬ್ಬನೂ ಸುಖವಾಗಿ ಜೀವನ ಮಾಡಬೇಕೆಂದರೆ ಸ್ವಲ್ಪ ಕಷ್ಟವಾಗಬಹುದು. ಈಗ ನಮ್ಮಲ್ಲಿ ಇಂಡಸ್ಟ್ರಿಯಲ್ ಎಂಟರ್‌ಪ್ರೈಸಸ್ ಇವೆ. ತಾವು ಉದಾತ್ತವಾದ ಭಾವನೆ ತೋರಿಸುವಾಗ ಭದ್ರಾವತಿ ಕಾರ್ಖಾನೆಯಲ್ಲಿ ಎಷ್ಟು ಜನ ಕೆಲಸಗಾರರಿದ್ದಾರೆ, ಅವರಿಗಿರತಕ್ಕ ಅನುಕೂಲಗಳೇನು ಎಂಬ ಸ್ಟೇಟ್‌ಮೆಂಟ್ ಕೊಡಿ ಸ್ವಾಮಿ, ನೋಡೋಣ ! ಅದೇಕಾಗಬಾರದು ? ಯಾವ ಕೆಲಸಗಾರರು ಕೆಲಸಮಾಡುತ್ತಾರೋ ಅವರಿಗೆ ಸುಖವಾಗಿ ಜೀವನ ಮಾಡಲು ತಕಷ್ಟು ಸೌಲಭ್ಯ, ಕಲ್ಪಿಸಿ ಕೊಡಿ, ಮ್ಯಾನೇಜ್‌ಮೆಂಟ್ ನೋಡಿಕೊಳ್ಳಲಿಕ್ಕೆ ಎಷ್ಟು ಬೇಕೋ ಅಷ್ಟು ಹಣ ಇಟ್ಟುಕೊಳ್ಳಿ, ಬಂದ ಲಾಭ ಕೆಲಸಗಾರರಿಗೆ ಹಂಚಿ. ಅವರು ಸುಖವಾಗಿ ತೃಪ್ತಿಯಿಂದ ಕೆಲಸ ಮಾಡುತ್ತಾರೆಯೋ, ಇಲ್ಲವೇ ನೋಡೋಣ, ಅದನ್ನು ಏಕೆ ಮಾಡುವುದಿಲ್ಲ ! ಇದು ರೈತನದು, ಹೋಗಲಿ ಅದಕೆ, ಸರ್ಕಾರದವರೇ ನಿಂತು ಟ್ರಸ್ಟಿ ಆಗಿ, ಮೈನರ್ಸ್ ಗಾರ್ಡಿಯನ್ ಆಗಿದ್ದೀರಿ ; ಬೇಕಾದ ಸುಖ ಕಲ್ಪಿಸಿ ಕೊಡಬಹುದಲ್ಲಾ ! ಪಾಪ ಅವರೆಲ್ಲರೂ ಮೈನರ್ಸ್; ಗಲಾಟೆ ಮಾಡುವುದಿಲ್ಲ ಅಲ್ಲವೇ ! ಒಟ್ಟಿನಲ್ಲಿ ಇದು ತರಬಾರದಾಗಿತ್ತು, ಇದು ಸರಿಯಾದ ಕಾಲವಲ್ಲ. ಭೂ ಸುಧಾರಣೆ ಎಂದು ತನ್ನಿ, ಭೂ ಸುಧಾರಣೆ ಮಾಡಿ. ಅದನ್ನೇ ಎಲ್ಲರಿಗೂ ಅನ್ವಯಿಸುವ ರೀತಿಯಲ್ಲಿ ಮಾಡಿ. ಅವರು ಹೇಳುತ್ತಾರೆ, ಇವರು ಹೇಳುತ್ತಾರೆ ಎಂದು ನಾನು ಹೇಳುತ್ತಿಲ್ಲ. ನಾನು ಹೇಳುವುದು ಫಂಡಮೆಂಟಲ್ ರೈಟ್ಸ್‌ನ್ನೇ ತೆಗೆದುಹಾಕಿ ಅದನ್ನು ತಿದ್ದುಪಡಿ ಮೂಲಕ ಕೊಡುತ್ತಿದ್ದೀರಿ. The fundamental right cannot be disposed of by an ammendment. ಇಂಥ ಒಂದು ತಿದ್ದುಪಡಿಯನ್ನು ಜನತೆಯ ಮುಂದೆ ಇಟ್ಟಿದ್ದೀರಿ. 15 ಲಕ್ಷ ಜನರಿಗೆ ಅನ್ವಯವಾಗತಕ್ಕ ಈ ಕಾನೂನಿನಿಂದ ಯಾರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೀರಿ ! ಈಗ ಎಷ್ಟೋ ಜನಗಳಿಗೆ ಸ್ವಂತ ಭೂಮಿ ಇಲ್ಲದೆ ಇನ್ನೊಬ್ಬರ ಜಮೀನನ್ನು ಮಾಡುತ್ತಾ ಇದ್ದಾರೆ. ಡಿಪ್ರೆಸ್ಡ್ ಕ್ಲಾಸ್‌ಗೆ ಸೇರಿದವರು, ನಾಯಕರು, ಕುರುಬರು ನಮ್ಮಂಥ ಹಿಂದುಳಿದ ಜನಾಂಗದವರಿಗೆ ಖಂಡಿತವಾಗಿಯೂ ಭೂಮಿ ಸಿಕ್ಕುವುದಿಲ್ಲ. ಅವರಲ್ಲಿ ಎತ್ತಿಲ್ಲ, ಕರು ಇಲ್ಲ. ಅವರಿಗೆ ಅನುಕೂಲತೆ ಮಾಡಿಕೊಡುವವರಿಲ್ಲ. ಹೀಗಾಗಿ ಇವರನ್ನು ಕೇಳುವವರೇ ಇಲ್ಲದಂತಾಗಿದೆ. ಅವರಿಗೆ ನಿಮ್ಮ ದೇಶದಲ್ಲಿರುವ ಜಮೀನು ಹಂಚಿ ಮತ್ತು all lands belong to the State

ಎಂದು ಮಾಡಿ ಯಾರುಯಾರಿಗೆ ಪರಿಹಾರ ಕೊಡಬೇಕಾಗುತ್ತದೆಯೋ ಅವರಿಗೆ ಕೊಟ್ಟುಬಿಡಿ: ಉಳಿದದ್ದರಲ್ಲಿ 98 ಲಕ್ಷ ಜನರಲ್ಲಿ ವ್ಯವಸಾಯ ಯಾರು ಮಾಡುತ್ತಾರೋ ಅವರಿಗೆ ಹಂಚಿಬಿಡಿ. ಆಗ equitable distribution ಆಗುತ್ತದೆ; ಒಂದು ನ್ಯಾಯ ಇರುತ್ತದೆ; ಒಂದು ಧರ್ಮ ಬರುತ್ತದೆ. ಮೈಸೂರು ಆಗ ಮಾದರಿ ಎಂದು ಹೇಳಿದರಲ್ಲ ಆ ಮಾದರಿ ಆಗುತ್ತದೆ, ಸ್ವಾಮಿ. ಅವೊತ್ತು ಶ್ರೀಮಾನ್ ಅನಂತರಾಮನ್ ಅವರು "ನೋಡಿ ನನ್ನ ಸೆಕ್ರೆಟರಿಷಿಪ್‌ನಲ್ಲಿ ಈ ಒಂದು ಕೆಲಸ ಮಾಡಿಸಿದೆ" ಎಂದು ಹೇಳಬಹುದು.

(ಸಭೆಯಲ್ಲಿ ನಗು)

ಮಾಡಲ್ ಎಂದು ಮಾಡುವಾಗ ಕಾನೂನುಗಳೂ ಸಹ ಮಾದರಿಯಾಗಿರಬೇಕು, ಅರ್ಧಂಬರ್ಧ ಮನಸ್ಸಿನಿಂದ ತಂದವುಗಳಾಗಿರಬಾರದು.

ಈ ದೃಷ್ಟಿಯಿಂದ ನಾನು ಮೊದಲು ಪ್ರಿಲಿಮಿನರಿಯಾಗಿ ಈ ವಿಷಯ ಹೇಳಿದೆ. ಈಗ ಆಕ್ಟಿನ ವಿಚಾರ ತೆಗೆದುಕೊಳ್ಳುತ್ತೇನೆ. ಈ ಬಿಲ್ಲಿನ ಬುಕ್ಕನ್ನು ತೆಗೆದುಕೊಂಡರೆ ಅದರಲ್ಲಿ ಮೈಸೂರು ದೇಶದಲ್ಲಿ ಪ್ರಿಂಟ್ ಆಗಿಲ್ಲದೆ ಔಟ್ ಆಫ್ ಪ್ರಿಂಟ್ ಆಗಿರುವುದನ್ನು ಇದರಲ್ಲಿ ನಮೂದು ಮಾಡಿದ್ದೀರಿ. ಈ ಆಕ್ಟಿನಲ್ಲಿ ಒರಿಜಿನಲ್ ಸೆಕ್ಷನ್ ಏನಿದೆಯೆಂಬುದೇ ಗೊತ್ತಾಗುವುದಿಲ್ಲ. ಈ ಬಿಲ್ಲಿನಲ್ಲಿ sections so and so be omitted and this has to be substituted ಎಂದು ಒಂದು ಕಡೆ ಹೇಳುತ್ತಾರೆ. ಹಾಗೆ ಹೇಳದೆ original section reads thus: when amended, it reads thus ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು. Clause 3 shall be omitted ಎಂದು ಹೇಳಿದರೆ ಅದೇನಿತ್ತೆಂದು ಹುಡುಕಬೇಕು. ಎರಡು ಸಭೆಗಳಿಂದ ನಾವು ಸುಮಾರು 140 ಜನ ಇರುವುದು. ಒರಿಜಿನಲ್ ಆಕ್ಟ್ ತೆಗೆದುಕೊಂಡು ನೋಡಲು ಕೇಳಿದರೆ ಯಾರೋ ತೆಗೆದುಕೊಂಡು ಹೋಗಿದ್ದಾರೆಂದು ಹೇಳುತ್ತಾರೆ. ಒಂದೆರಡು ಪುಸ್ತಕಗಳಿರುವುದರಿಂದ ಎಲ್ಲರಿಗೂ ಬೇಕಾದಾಗ ಬೇಗ ಸಿಕುವುದಿಲ್ಲ. ಆದ್ದರಿಂದ ಓದಿ ತಿಳಿದುಕೊಳ್ಳಲು ಅನುಕೂಲವಿಲ್ಲ. ಆದ್ದರಿಂದ ನಾವು ಹೇಳುವಾಗ ಏನಾದರೂ ತಪ್ಪಿದ್ದರೆ ಅದು ನಮ್ಮ ತಪ್ಪಲ್ಲ, ಒರಿಜಿನಲ್ ಆಕ್ಟನ್ನು ಒದಗಿಸದಿದ್ದುದು ಅವರ ತಪ್ಪು.

ಆಮೇಲೆ "Permissible holding means permissible holding specified in section 2-C" ಎಂದು ಹೇಳುತ್ತಾರೆ. ಗಂಡಸು ಎಂದರೆ ಗಂಡಸು, ಮುಂದೆ ಹೇಳುತ್ತೇವೆ ಎಂದು ಹೇಳಿದ ಹಾಗಿದೆ ಇದು.

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಗಂಡಸಿನ ವಿಚಾರವೂ ಇಲ್ಲ, ಹೆಂಗಸಿನ ವಿಚಾರವೂ ಇಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಮುಖ್ಯವಾಗಿ ಇದು ಬರೆಯುವ ರೀತಿಯೇ ಅಲ್ಲ. ಇದರಿಂದ ವಿಶದವಾಗಿ ವಿಷಯ ತಿಳಿಯುವುದಕ್ಕೆ ಕಷ್ಟವಾಗುತ್ತದೆ. ಆ ಮೇಲೆ:

> "A tenant shall be deemed to be a protected tenant in respect of any land if he has held such land continuously for a period of not less than nine years immediately preceding the first day of April 1951."

ಎಂದು ಹೇಳುತ್ತಾರೆ. Retrospective ಅಂದರೆ ಇವೊತ್ತಿನದಲ್ಲ, ಲಾ ಮಾಡಿದ ದಿನದಿಂದ ಅಲ್ಲ. 1952ರಲ್ಲಿ ಲಾ ಮಾಡಿರುವುದು. ಈಗ ಹೇಳುವುದು 1951ನೆಯ ಇಸವಿಯ ಹಿಂದೆ 9 ವರ್ಷಗಳಿಂದ ಯಾರಾದರೂ ಜಮೀನು ಪಡೆದಿದ್ದರೆ ಅವರು ಪರ್ಮನೆಂಟ್ ಟೆನೆಂಟ್ಸ್ ಎಂದು. ಇದು ಹೇಗೆ ಸರಿಯಾಗಿರುತ್ತದೆ? ನಮ್ಮಪ್ಪ, ನಮ್ಮಜ್ಜ ಹುಟ್ಟಿದಲಾಗಾಯ್ತು ನಮ್ಮದೇ ಎಂದು ಹೇಳಿದ ಹಾಗಿದೆ. This is really something which I cannot understand. ಹತ್ತು ವರ್ಷಗಳಿಂದ ರೆಟ್ರಾಸ್ಪೆಕ್ಟಿವ್, ಹಿಂದೆ 1946ನೆಯ ಇಸವಿಯಿಂದ ಈಚೆಗೆ ಯಾರಿಗೆ ಜಮೀನಿದೆಯೋ ಅವರನ್ನು ಒಂದು ತರಹ ಟೆನೆಂಟೆಂದು ಮಾಡಿದ್ದೇವೆ ಎಂದು ಹೇಳುತ್ತಾರೆ. ಜಮೀನನ್ನು ಎಷ್ಟು ವರ್ಷ ಬೇಕಾದರೂ ಮಾಡಲಿ ಎಂದಿತ್ತು. ಈಗ ಪ್ರೊಟೆಕ್ಟೆಡ್ ಟೆನೆಂಟ್ ಎಂದು ಮಾಡಿ ಆದಾದ ಮಾರನೆಯ ದಿವಸ ಅವನಿಗೆ ಅಧಿಕಾರ ಕೊಟ್ಟಿರುವುದನ್ನು ಮುಂದೆ ಹೇಳುತ್ತೇನೆ.

ಆಮೇಲೆ ಎರಡನೆ ಸೆಕ್ಷನ್ನಿನ ಎರಡನೆಯ explanation ಅಲ್ಲಿ ಈ ರೀತಿ ಹೇಳಿದ್ದಾರೆ:

> "If the person who held such land on the first day of April 1951, held as a tenant at any time within nine years before the said date from the same landlord in the same village any other land which he cultivated personally, the period during which he held such other land shall be included in calculating the period of nine years under this clause."

ಒಂದು ಊರಿನಲ್ಲಿ ಇಮಾಂ ಸಾಹೇಬರ ಹತ್ತಿರ ಒಬ್ಬ 1942ನೆಯ ಇಸವಿಯಿಂದ 1944ನೆಯ ಇಸವಿಯವರೆಗೆ ಜಮೀನು ಮಾಡಿ ಅದು ಚೆನ್ನಾಗಿಲ್ಲ, ಅನುಕೂಲವಿಲ್ಲ ಎಂದು ಇನ್ನೊಂದು ಜಮೀನಿಗೆ ಹೋದರೆ ಹಕ್ಕನ್ನು ಕೊಡುತ್ತಿರಲಿಲ್ಲ. ಈಗ ಒಂದು ಜಮೀನನ್ನು 4 ವರ್ಷ ಮಾಡಿ ಅದನ್ನು ಬಿಟ್ಟು 2 ವರ್ಷ ಬೇರೆ ಜಮೀನನ್ನು ಮಾಡಿ, ಅನಂತರ 3 ವರ್ಷ ಇನ್ನೊಂದು ಜಮೀನನ್ನು ಮಾಡಿದರೂ ಆ ಮೂರೂ ಸೇರಿ 9 ವರ್ಷ ಒಟ್ಟಿನಲ್ಲಿ ಆದರೆ ಆ ರೀತಿ ಮಾಡಿದವನನ್ನು ಪ್ರೊಟೆಕ್ಟೆಡ್ ಟೆನೆಂಟ್ ಎಂದು ಹೇಳುತ್ತಾರೆ. ಇದರಿಂದ ಅವನಿಗೆ ಆ ಜಮೀನಿನ ಮೇಲೆ ಹಕ್ಕು ಬಂತು. ಆದರೆ ಯಾವ ಜಮೀನಿಗೆ ಹಕ್ಕು ಬರುತ್ತದೆ ಎಂಬುದನ್ನು ಈ ಬಿಲ್ಲಿನಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಅವನು ಜಮೀನು ಬಿಟ್ಟ ಮೇಲೆ ಇನ್ನಾರಿಗೋ ಕೊಡುತ್ತಾರೆ. ಯಾವ ಜಮೀನಿನಮೇಲೆ ಪ್ರೊಟೆಕ್ಷನ್ ಬಂತು ಎಂಬುದು ಗೊತ್ತಾಗುವುದಿಲ್ಲ.

Sri Kadidal MANJAPPA.—Sir, the Hon'ble Member is certainly misinterpreting it.

Sri A. BHEEMAPPA NAIK.—Sir, if the Minister interprets correctly, I will be very happy. But, there is no other interpretation for this than that I am giving; let him answer; let him say on which land the raiyat will get the right.

Sri H. K. VEERANNA GOWDH (Maddur).—Sir, the Hon'ble Minister

(**Sri H. K. Veeranna Gowdh.**)
would do well to explain this, so that it may facilitate members to make their observations.

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀಮಾನ್ ಭೀಮಪ್ಪ ನಾಯಕರು ಮಾತನಾಡುವಾಗ ಪ್ರೊಟೆಕ್ಟೆಡ್ ಟೆನೆಂಟ್ ಎಂಬ ವಿಚಾರದಲ್ಲಿ, ಅದರ ಅರ್ಥ ವಿವರಣೆ ಬಹಳ ವಿಚಿತ್ರವಾಗಿದೆ ಎಂದು ಹೇಳಿದರು. ಪ್ರೊಟೆಕ್ಟೆಡ್ ಟೆನೆಂಟ್ ಎಂದರೆ ಯಾರು ಎಂಬುದು 31 (*c*) ನಲ್ಲಿ ನಮೂದಾಗಿದೆ, ವಿಚಿತ್ರವೇನೂ ಇಲ್ಲ. ಆಮೇಲೆ ಎಕ್ಸ್‌ಪ್ಲನೇಷನ್‌ನಲ್ಲಿ ಒಬ್ಬ ಗೇಣೀದಾರ ಒಬ್ಬ ಜಮೀನ್‌ದಾರರ ಜಮೀನನ್ನು 9 ವರ್ಷಗಳ ಕಾಲ ಸಾಗುವಳಿ ಮಾಡಿದ್ದರೆ ಯಾವುದೇ ಜಮೀನು ಮಾಡಿರಲಿ ಅವನು ಪ್ರೊಟೆಕ್ಟೆಡ್ ಟೆನೆಂಟ್ ಆಗುತ್ತಾನೆ ಎಂದು ಹೇಳಿದೆ. In counting the period, the time during which he cultivated the land continuously will be taken into account. It does not mean that he should be deemed as a protected tenant of the land which he previously cultivated.

Mr. SPEAKER.—So far as I have understood it, it is like this. If a tenant is continuously a tenant' for nine years under a landlord, whichever land he may be cultivating, he will have a claim on the land he will be cultivating on the relevant date.

5 P. M.

ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಇದರ ಅರ್ಥ ವಿವರಣೆ ಸರಿಯಾಗಿರಬೇಕು. ನಾನು ರಾಯರಾಗಿ ಕೋರ್ಟಿಗೆ ಈ ಸಂಬಂಧದ ವ್ಯವಹಾರ ತೀರ್ಮಾನಕ್ಕೆ ಬಂದಾಗ ಪಾರ್ಟಿಯ ಪರವಾಗಿ ವಾದ ಮಾಡುವಾಗ ಇದರ ಅರ್ಥವನ್ನು ಸ್ಪಷ್ಟವಾಗಿ ಮಾಡುವ ರೀತಿಯಲ್ಲಿ ಈ ವಿವರಣೆ ಕಾನೂನಿನಲ್ಲಿರಬೇಕು. ಒಬ್ಬ tenantನ್ನು protected tenant ಎಂದು ಕರೆಯಲು ತಾವು ಗೊತ್ತುಪಡಿಸಿರುವ 9 ವರ್ಷದ ಕಾಲಾವಧಿ ಯಾವ ವಿಧದಲ್ಲಿಯೂ interpret ಮಾಡಲು ಅವಕಾಶವಿಲ್ಲದ ರೀತಿಯಲ್ಲಿ ನಿಖರವಾಗಿ ನಮೂದಾಗಿರಬೇಕು.

Sri T. MARIAPPA.—Supposing there is an interruption in tenancy. A person has cultivated only for two years and gives up and subsequently after a lapse of one year he takes it upon himself to cultivate the land. According to this explanation, even the period of break can be included.

Sri Kadidal MANJAPPA.—Even if there is break a it can be included, provided he had cultivated the land for a period of five years.

Sri B. HUTCHE GOWDA.—It is five of the clock.

Mr. SPEAKER.—I think the Hon'ble Member requires some more time.

Sri A. BHEEMAPPA NAIK.—I have not yet commenced, Sir.

Mr. SPEAKER.—You have commenced and are almost finishing!

Sri Kadidal MANJAPPA.—I made a mistake. If he has held the land continuously for not less than five years, it must be understood like that. There is the word 'continuously.'

Sri T. MARIAPPA.—In the explanation there is no such word as 'continuously.'

Sri Kadidal MANJAPPA.—I would like also to bring to the notice of Hon'ble Members clause 31 (B).

Mr. SPEAKER.—The House will now rise for the day and meet tomorrow at Twelve of the Clock.

The House adjourned at Two Minutes past Five of the Clock to meet again at Twelve of the Clock on Friday the 15th October 1954.

MYSORE LEGISLATIVE ASSEMBLY

FIFTH DAY

Friday, 15th October 1954

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

States Re-organisation Commission.

Q.—111. **Sri S. SRINIVASA IYENGAR** (T.-Narsipur).—

Will the Government be pleased to state :—

(*a*) whether the States Re-organisation Commission of which Sri Fazl Ali is the Chairman, visited the State ;

(*b*) if so, whether the Government placed their views before the Commission ;

(*c*) if the answer is in the affirmative, whether a copy of the report would be furnished ?

A.—**Sri A. G. RAMACHANDRA RAO** (Minister for Law and Education) [On behalf of SRI K. HANUMANTHAIYA (Chief Minister)].—

(*a*) to (*c*) Please see Question No. 79 answered on 11th October 1954.

Mr. SPEAKER.—So far as this question is concerned, I think sufficient number of supplementaries have been put and answered on an earlier occasion. You can ask one or two questions.

Sri S. SRINIVASA IYENGAR.—I want to know from the Speaker whether answers could be furnished in this way asking us to look for answers given on some other day when the proceedings are not supplied to us. On the printed answers a number of supplementaries have been put and answers have been furnished by Government and if we could have those answers before us, we could have used that knowledge to put further questions.

Mr. SPEAKER.—I request the Hon'ble Minister to give proper answers from next time in some other form. But this time, the Hon'ble Member should go on with what he could get.

Sri S. SRINIVASA IYENGAR.—Will the Government be pleased to state how many times the Fazl Ali Commission visit the State ?

Sri A. G. RAMACHANDRA RAO.—I remember twice.

Sri S. SRINIVASA IYENGAR.—At the second time, may I know what transpired between the Fazl Ali Commission and the Government, Sir ?

Sri A. G. RAMACHANDRA RAO.—I do not think there was any meeting between the Government and the Fazl Ali Commission at that stage, when they visited the State for a second time.

Sri S. SRINIVASA IYENGAR.—Had the Government met the Fazl Ali Commission in connection with anything, Sir ?

Sri A. G. RAMACHANDRA RAO.—No, Sir.

Sri S. SRINIVASA IYENGAR.—Did the Hon'ble Minister interview the Members of the Fazl Ali Commission for the second time ?

Sri A. G. RAMACHANDRA RAO.—It has already been answered in the negative by the Hon'ble Chief Minister.

Sri S. SRINIVASA IYENGAR.—I wanted to know whether any of the Ministers met any Member of that Commission in connection with the Thungabhadra Project or something like that.

Sri A. G. RAMACHANDRA RAO.—No, not when they came to Bangalore.

Sri S. SRINIVASA IYENGAR.—When they visited Bellary for a second time, did any of the Ministers of the Government interview the Members of the Commission in connection with the Thungabhadra Project ?

Sri Kadidal MANJAPPA.—On a point of order, Sir. I beg leave to draw the attention of the Chair to item (n) of sub-rule 2 of Rule 26:

> "It shall not repeat in substance questions which have been disallowed or in respect of which answers have been furnished at the preceding Session."

Mr. SPEAKER.—I have therefore asked him to put fresh questions.

Sri S. SRINIVASA IYENGAR.—This question was not disallowed, Sir. It might have been answered, but the proceedings are not before us. Purely by memory we have to say whether the questions have been answered or not. I am working under a disadvantage.

Mr. SPEAKER.—The Chair knows it.

Sri M. PALANIYAPPAN.—Sir, questions are given sufficiently in advance some 15 days in advance. There are similar questions with similar answers. It would greatly facilitate if all similar questions dealing with the same subject matter are collected together and answers furnished, Sir, on the same day.

Mr. SPEAKER.—We shall do that next time.

Q.—354. **Sri K. S. VASAN** (Kolar Gold Fields).—

Will the Government be pleased to state :—

(*a*) if they made any representation to the States Re-organisation Commission ;

(*b*) if they would make a copy of such representation available to the members of this House ?

A.—**Sri A. G. RAMACHANDRA RAO** (Minister for Law and Education) [On behalf of SRI K. HANUMANTHAIYA (Chief Minister)].—

(*a*) No.

(*b*) Does not arise.

Sri K. S. VASAN.—Did the Government make any representation to this Commission ?

Sri A. G. RAMACHANDRA RAO.—That has been answered. We have not taken that stand at all.

Investment of Government Share Capital on Central Factories.

Q.—187. **Sri G. SIVAPPA** (Holalkere).—

Will the Government be pleased to state :—

(*a*) the amount of share capital they have invested on the Machine Tools Factory, Bangalore ; Hindustan Aircraft, Ltd., Bangalore ; and Indian Telephone Factory, Bangalore ;

(*b*) how the interest of Government is safeguarded in these factories ?

A.—**Sri A. G. RAMACHANDRA RAO** (Minister for Law and Education) [On behalf of Sri K. HANUMANTHAIYA (Chief Minister)].—

(*a*) The Machine Tool Factory ...	Nil
The Hindustan Aircraft, Ltd....	Rs. 60,08,300.
The Indian Telephone Industries, Ltd.	Rs. 31,25,000.

(*b*) There is a Government Director on the Board of Directorate of each of the above Companies, *viz.*, the Hindustan Aircraft, Ltd., and the Indian Telephone Industries, Ltd.

Sri G. SIVAPPA.—What is the dividend you are getting from these two factories, Sir ? What is it that you got last year ?

Sri A. G. RAMACHANDRA RAO.—No dividend was got last year.

Sri G. SIVAPPA.—Are you not getting any profit for the amount that you have invested, Sir ?

Sri A. G. RAMACHANDRA RAO.—I may state that once, a few years ago, we got 12 lakhs of rupees and then subsequently bonus shares to the value of 1½ lakhs. Since then no dividend has been received.

Sri G. SIVAPPA.—Shall I understand that the companies are not earning any profit and that they are working under loss ?

Sri A. G. RAMACHANDRA RAO.—That inference is not correct. They have been earning profits, but the dividend has not been declared.

Sri G. SIVAPPA.—May I know who is managing these concerns, whether it is the Central Government or the State Government ?

Sri A. G. RAMACHANDRA RAO.—There is a Committee of Management in which Mysore Government is represented.

Sri G. SIVAPPA.—Whether the supervisory control is vested in the Central Government or the State Government ?

Sri A. G. RAMACHANDRA RAO.—It is under the control of the Central Government and the Managing Committee manages the whole thing.

Sri G. SIVAPPA.—How do you communicate the views of Mysore to the Management ?

Sri A. G. RAMACHANDRA RAO.—The views of the Government of Mysore will be conveyed through the representative who is there.

Sri G. SIVAPPA.—What are the facilities that the State Government has extended to the company in our State, Sir ?

Mr. SPEAKER.—That question does not arise out of this question.

Sri G. SIVAPPA.—By whom are appointments made in these companies ?

Sri A. G. RAMACHANDRA RAO.—It is the Managements who manage the whole thing including recruitment of necessary staff, labour, etc.

Sri G. SIVAPPA.—What is the percentage of Mysorean representation in these factories ?

Sri A. G. RAMACHANDRA RAO.—I do not think they are making any territorial classification in these appointments ?

Sri G. SIVAPPA.—Is it not desirable for the Mysore Government to insist upon these Managements to see that proper representation is given in view of the fact that you have extended a number of facilities to these factories in Mysore ?

Sri A. G. RAMACHANDRA RAO.—That would be a matter of opinion.

Sri V. M. MASCARENHAS.—Is there a proposal to take over these shares and relieve Mysore Government of all responsibility ?

Sri A. G. RAMACHANDRA RAO.—That would be the easiest thing. But the fact is whether, in a national industry, the State should not have a proper place.

ಶ್ರೀ ಬಿ. ಹುಚ್ಚೇಗೌಡ.—ಕೇಂದ್ರ ಸರ್ಕಾರದವರಿಗೆ ಮುಖ್ಯವಾಗಿ ಇದರಲ್ಲಿ interest ಇದೆ ಎಂದು ಹೇಳಲಾಯಿತು. ಟೆಲಿಫೋನ್ ಇಂಡಸ್ಟ್ರೀ ಮತ್ತು ಏರೋಪ್ಲೇನ್ ಫ್ಯಾಕ್ಟರಿ ಡಿಫೆನ್ಸ್ ಸರ್ವಿಸಸ್‌ಗಾಗಿ ಪ್ರಾರಂಭವಾದವು. ಆದ್ದರಿಂದ ಇದರಲ್ಲಿ ಹಾಕಿರುವ ದುಡ್ಡನ್ನು ಸರ್ಕಾರದವರು ತೆಗೆದು ಬೇರೆ ಕೆಲಸಕ್ಕೆ ಉಪಯೋಗಿಸುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಜವಾಬು ಹೇಳಿದ್ದೇನೆ. ವಾಪಸು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುವುದಿಲ್ಲ.. ಇದು National Concern. ಇದು ನಮ್ಮ ಸಂಸ್ಥಾನದಲ್ಲಿ ಇರುವಾಗ ನಮಗೆ ಇದರಲ್ಲಿ ಒಂದು ಸ್ಥಾನ ಇರಬೇಕೇ ಬೇಡವೇ ಎಂಬ ಒಂದು ಪ್ರಶ್ನೆ ಇದೆ. ಅದನ್ನು ಯೋಚನೆ ಮಾಡೋಣ.

ಶ್ರೀ ಬಿ. ಹುಚ್ಚೇಗೌಡ.—ನಮ್ಮ ಸಂಸ್ಥಾನವೂ ಇಂಡಿಯಾ ದೇಶದಲ್ಲೇ ಇರುವುದರಿಂದ ಅದರಲ್ಲಿ ನಮ್ಮ ಭಾಗವೂ ಇದ್ದೇ ಇರುತ್ತದೆ, ಅಲ್ಲವೇ ?

Sri A. G. RAMACHANDRA RAO.—That is a matter of opinion.

Non-Gazetted Officers in the Secretariat (Delay in Confirmation).

Q.—239. **Sri D. VENKATESH** (Gandhinagar).—

Will the Government be pleased to state :—

(*a*) whether it has come to their notice that confirmation of Non-Gazetted Officers is not being made regularly in the Mysore Government Secretariat ;

(*b*) the strength of the Non-Gazetted staff (permanent and temporary to be given separately) in the Secretariat ;

(*c*) the number of vacancies available for confirmation of officials in each cadre and the dates of occurrence of such vacancies, particulars in respect of each post in all the grades to be given in the Secretariat ;

(SRI D. VENKATESH.)

(*d*) whether the officials would be confirmed in the available vacancies at least now in the Secretariat;

(*e*) if so, what the time within which confirmation of the officials of the Secretariat can be expected to be completed;

(*f*) whether the delay in making timely confirmations in the Secretariat would not lead to passing over the claims of qualified candidates on the date of occurrence of vacancies and give time to non-qualified candidates to get themselves qualified and thereby get confirmed earlier than the qualified candidates on the date of occurrence of vacancies ?

A.—**Sri A. G. RAMACHANDRA RAO** (Minister for Law and Education) [On behalf of SRI K. HANUMANTHAIYA (Chief Minister)].—

(*a*) No.

(*b*)

	Kind of Post.		*Number*		
			Permanent.	*Temporary.*	*Total.*
1.	Superintendents	...	20	3	23
2.	I Division Clerks	...	150	68	218
3.	II Division Clerks	...	75	57	132
4.	I Grade Stenographers	...	38	25	63
5.	II Grade Typists	...	19	22	41
6.	Drivers ...	...	19	3	22
7.	Doctor ...	...	1	Nil.	1
8.	Compounder ...	...	1	...	1
9.	Watch and Ward Supervisor	...	1	...	1
10.	Typewriter Mechanic	...	1	...	1
11.	Clock Mechanic	...	1	...	1
12.	Cash Clerk ...	...	1	...	1
13.	Multigraph Setters	...	2	...	2
14.	Mutchis and Book-binders inclusive of Attenders.		41	3	44
	Total	...	370	181	551

(*c*)

Kind of appointment.		*No of vacancies available for confirmation.*	*From date*
Superintendents	...	2	24th May 1954
I Division Clerks	...	102	17th August 1954
II Division Clerks	...	75	Do
I Grade Stenographers	...	31	11th May 1954
II Grade Typists	...	16	Do
Mutchis and Book-binders	...	2	June 1954

(*d*) Yes; it is being done.

(*e*) Very early.

(*f*) No.

Mr. SPEAKER.—The next question No. 265 may also be taken up along with this question.

Q.—265. **Sri M. LINGANNA** (Nanjangud).—

Will the Government be pleased to state :—

(*a*) the number of sanctioned posts of permanent First and Second Division Clerks in the Secretariat on 1st September 1954;

(*b*) the number of qualified officials remaining unconfirmed in the above two cadres and the length of their service in each division ?

A.—**Sri A. G. RAMACHANDRA RAO.**— (Minister for Law and Education) [On behalf of Sri K. HANUMANTHAIYA (Chief Minister).—

	Kind of Post	*Total sanctioned permanent strength*	*No. of posts admitting of confirmations*
(a)	First Division Clerks	150	102
	Second Division Clerks	75	75
(b)	Number of qualified First Division Clerks awaiting confirmation		184
	Number of qualified Second Division Clerks awaiting confirmation		91
	Length of Service in the Secretariat		From 6 years to 1 year.

Note.—The question of confirmation is under active consideration of Government.

Sri D. VENKATESH.—Are there any instances where the seniormost, qualified, meritorious, efficient officials have been overlooked and only juniormost officials have been confirmed, Sir ?

Sri A. G. RAMACHANDRA RAO.—Confirmation and promotion are generally done according to rules and no supersessions of the kind suggested have taken place.

Sri D. VENKATESH.—If such instances are brought to notice, would the Government rectify the same, Sir ?

Sri A. G. RAMACHANDRA RAO.—Certainly.

Sri M. LINGANNA.—May I know the reasons why qualified First Division Clerks were not confirmed till now ?

Sri A. G. RAMACHANDRA RAO.—There were two difficulties. One is the re-organisation in 1946 when a number of people were upgraded and their places required consideration. Apart from upgrading, there were people who were coming from other Departments. Their places in the seniority list are continuing. These two things are under the consideration of the Government and I hope it will be settled shortly.

Sri M. LINGANNA.—Have Government sought the permission of the Public Service Commission so far as the confirmation of these clerks are concerned ?

Sri A. G. RAMACHANDRA RAO.—Their opinion has also been taken.

Sri M. LINGANNA.—Since how many months back the opinion of the Public Service Commission was taken ?

Sri A. G. RAMACHANDRA RAO.—Notice.

Sri M. LINGANNA.—In the last sentence it is said :

> 'Length of service in the Secretariat is from 6 years to 1 year '

Does it refer to First Division Clerks or Second Division Clerks ?

Sri A. G. RAMACHANDRA RAO.—Sir, I must make one point clear regarding confirmation of these officials. Many of them are pooled in the supernumerary cadre in the First Division, and they must be confirmed. That question is awaiting settlement and I am sure that will be settled very early.

ಶ್ರೀ ಜಿ. ಪುಟ್ಟಸ್ವಾಮಿ.—ರಾಜ್ಯಾಂಗದ ನಿಯಮವನ್ನು ಪ್ರತಿಯೊಂದು ಸರ್ಕಾರವೂ ಪಾಲಿಸಬೇಕಾದುದು ಆದ್ಯಕರ್ತವ್ಯ. ಹಾಗೆಯೇ ಹರಿಜನರ ಆರ್ಥಿಕಸ್ಥಿತಿಯ ಬಗ್ಗೆ ಮೊದಲೇ ಹೇಳಿದಂತೆ ಒಂದು ಯೋಜನೆಹಾಕಿಕೊಂಡು ಅವರ ಅರ್ಥಿಕಸ್ಥಿತಿಯನ್ನು ನಿಖರವಾಗಿ ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡದೇಇದ್ದರೆ, ಈ ವಿಚಾರವಲ್ಲಿ ಸರ್ಕಾರ ಇದುವರೆಗೆ ಏನು ಸಾಧಿಸಿದೆಯೋ ಅದು ಪ್ರಚಾರಕ್ಕೆ ಬರದೆ, ಮುಂದೆ ಅದರಿಂದ ಏನೂ ಪ್ರಯೋಜನವಾಗದೇ ಬಹಳ ಅನಾನುಕೂಲವಾಗುತ್ತದೆ. ಈಗಾಗಲೇ ಹರಿಜನರ ಅರ್ಥಿಕ ಸ್ಥಿತಿಯನ್ನು ಉತ್ತಮ ಗೊಳಿಸಲು ಸರ್ಕಾರದವರು ಅವರಿಗೆ ಮುಫತ್ತಾಗಿ ಐದು ಎಕರೆ ಜಮೀನು—ಮೂರು ಎಕರೆ ಖುಷ್ಕಿ, ಎರಡು ಎಕಗೆ ತರೀ—ಕೊಡುತ್ತಿರುವುದು ಗೊತ್ತೇ ಇದೆ. ಅದರಂತೆ ಜಮೀನು ಆಬಾದು ಮಾಡುವುದಕ್ಕೆ ಅವರಿಗೆ ಬೇಕಾದ ಸಾಧನ ಸಾಮಗ್ರಿಗಳನ್ನೂ ಒದಗಿಸದಿದ್ದರೆ ಇನ್ನು ಹತ್ತು ವರ್ಷಗಳಾದರೂ ಅವರು ಮುಂದುವರಿಯುವುದಕ್ಕೆ ಅವಕಾಶವಿಲ್ಲವೆಂದು ಹೇಳದೇ ವಿಧಿಯಿಲ್ಲ. ಇದು ಬಹು ಮುಖ್ಯ ಪ್ರಶ್ನೆಯೆಂದೂ, ಇದನ್ನು ತೀವ್ರವಾಗಿ ಆಲೋಚನೆಮಾಡಬೇಕೆಂದು ಬಹಳ ಕಾಲದಿಂದಲೂ ಸಹ ಶಾಸನ ಸಭೆಗಳಲ್ಲಿ ಹರಿಜನ ಸದಸ್ಯರು ಈ ಬಗ್ಗೆ ಆಗಿಂದಾಗ್ಗೆ ಮನವಿಗಳನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗೆ ಮನವಿಗಳನ್ನು ಸಲ್ಲಿಸಿರುವುದು ಸಹ cut motions ಮೂಲಕ, ಬಡ್ಜೆಟ್ ಭಾಷಣಗಳ ಮೂಲಕ ಮತ್ತು ಇತರ ಸಮಯಗಳಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ. ಆಗ ಪ್ರತಿನಿಧಿ ಸದಸ್ಯರು ಅಮೋಘ ಸಲಹೆಗಳನ್ನು ಸಹ ಕೊಟ್ಟಿರುತ್ತಾರೆ. ಅದೇ ರೀತಿ ಪಾಲಿಸಿ ಸಮಿತಿಗಳ ಮೂಲಕವೂ ಸಹ ನಿಮ್ಮ ವರ್ಗದವರ ಬೇಡಿಕೆಗಳೇನು ಎಂಬುದುರ ಸರ್ಕಾರದ ಗಮನಕ್ಕೆ ಬಂದಿದೆ ಇಷ್ಟಾದರೂ ಈ ವಿಚಾರದಲ್ಲಿ ಸರ್ಕಾರದವರು ದೃಢಮನಸ್ಸಿನಿಂದ ನಿಮ್ಮ ವರ್ಗದವರ ಏಳಿಗೆಯ ವಿಚಾರದಲ್ಲಿ ಮುಂದುವರಿದಿಲ್ಲವಲ್ಲ ಎಂದು ವಿಷಾದ ಪಡಬೇಕಾಗಿದೆ. ಈಗಲಾದರೂ ಸರ್ಕಾರದವರು ಆ ಅಮೂಲ್ಯ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು, ಸಹಾನುಭೂತಿಯಿಂದ ಪರಿಶೀಲಿಸಿ, ರಾಜ್ಯಾಂಗದ ಗುರಿ ಏನಿದೆಯೋ, ನಿಯಮವೇನಿದೆಯೊ ಅದನ್ನು ನಿಮ್ಮ ವರ್ಗದ ಅಭಿವೃದ್ಧಿ ವಿಚಾರದಲ್ಲಿ ಮುಂದುವರಿಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂದು ವಿನಂತಿ.

Mr. SPEAKER.—The Hon'ble Member must be brief.

ಶ್ರೀ ಜಿ. ಪುಟ್ಟಸ್ವಾಮಿ.—ಅವರು ವ್ಯವಸಾಯಾಭಿವೃದ್ಧಿಯಲ್ಲಿ ಮುಂದುವರಿಯಲು ಜಮೀನು ಆಬಾದು ಮಾಡುವುದಕ್ಕೆ ಪ್ರತಿಯೊಬ್ಬ ಹರಿಜನನಿಗೂ ಒಂದು ಜೊತೆ ಎತ್ತು ಮತ್ತು ಜಮೀನು ಆಬಾದಿಗೆ ಬೇಕಾದ ಇತರ ಸಲಕರಣೆಗಳು-ಇವುಗಳನ್ನೊದಗಿಸಲು ಬಡ್ಜೆಟ್‌ನಲ್ಲಿ ಹಣವನ್ನೊದಗಿಸಬೇಕೆಂದು ಕೋರುತ್ತೇನೆ.

Depressed Class Amelioration Grants (how spent).

*ಶ್ರೀ ಎಂ. ಮಾದಯ್ಯ (ನಂಜನಗೂಡು-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆ ಸಂಸ್ಥಾನದ ಬಡ್ಜೆಟ್ಟನ್ನೂ ಮತ್ತು ಅದರ ಹಂಚಿಕೆಯನ್ನೂ ಅಂಗೀಕರಿಸಿದನಂತರ ಸರ್ಕಾರದವರು ಆ ಹಣದ ವಿನಿಯೋಗದ ಕಡೆಗೆ ಸರಿಯಾದ ನಿಗಾ ಕೊಡಬೇಕಾದುದು ಅತ್ಯಗತ್ಯವೆಂದು ಭಾವಿಸುತ್ತೇನೆ. ಪ್ರತಿ ವರ್ಷವೂ ಸಂಸ್ಥಾನದ ನಾನಾ ಬಾಬಿಗೆ ಬಡ್ಜೆಟ್ ಮಂಜೂರಾಗುತ್ತಲೇ ಇದೆ. ಆದರೆ ಅದು ಸರಿಯಾಗಿ ವಿನಿಯೋಗವಾಗತ್ತಿಲ್ಲ. ಒಂದು ವ್ಯವಸ್ಥಿತ ರೀತಿಯಲ್ಲಿ ಆ ಹಣವನ್ನು ಸರ್ಕಾರ ಖರ್ಚು ಮಾಡುತ್ತಿಲ್ಲ.

ಸರ್ಕಾರದವರು Depressed Class Amelioration ಗಾಗಿ ಸುಮಾರು ಎಂಟು ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಒದಗಿಸಿಕೊಂಡಿದ್ದಾರೆ. ಈ ಬಾಬಿಗಾಗಿ ಇಂಡಿಯಾ ಸರ್ಕಾರದವರು ಸಹ ಹಣವನ್ನೊದಗಿಸುತ್ತಾರೆ. ಆದರೆ ಒದಗಿಸಿದ ಹಣ ಸರಿಯಾಗಿ ಖರ್ಚಾಗುತ್ತಿಲ್ಲ. ಬಹು ಭಾಗದ ಹಣ lapse ಆಗಿದೆ. ಪ್ರಾರಂಭದಲ್ಲಿ ಉತ್ಸಾಹದ ಮೇಲೆ ಹಣವನ್ನೇನೋ ಬಡ್ಜೆಟ್‌ನಲ್ಲಿ ಒದಗಿಸುವುವು ವಾಡಿಕೆಯಾಗಿಹೋಗಿಬಿಟ್ಟಿದೆ. ಆದರೆ ಖರ್ಚು ಮಾತ್ರ ಸರಿಯಾಗಿ ಆಗುತ್ತಿಲ್ಲ. ಉದಾಹರಣೆಗೆ, ಡಿಪ್ರೆಸ್ಡ್ ಕ್ಲಾಸ್ ಹಾಸ್ಟೆಲ್‌ಗಳಿಗಾಗಿ ಸುಮಾರು ಐದು ಲಕ್ಷ ಚಿಲ್ಲರೆ ಹಣ ಮಂಜೂರಾಗಿದೆ. ಹಾಸ್ಟೆಲಿಗಾಗಿ ಹಣ ಒದಗಿಸಿದ್ದರೂ ಅದು ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಉದಾಹರಣೆಗೆ, ತುಮಕೂರು, ಮೈಸೂರು ಮತ್ತು ನಂಜನಗೂಡು—ಈ ಪ್ರದೇಶಗಳಲ್ಲಿ ಹಾಸ್ಟೆಲಿಗಾಗಿ ಹಣ ಮಂಜೂರಾಗಿ estimate ಸಹ ಆಗಿದೆ. ಆದರೂ ಕೂಡ, ಈ ಕೆಲಸವನ್ನು ಕೂಡಲೇ ಕೈಗೊಳ್ಳಲು ಏನು ಅನಾನುಕೂಲವೋ ಗೊತ್ತಿಲ್ಲ. ಅಂತೂ ಆ ಕೆಲಸವನ್ನು ಇನ್ನೂ ಕೈಗೊಂಡಿಲ್ಲ. ಸರ್ಕಾರ, ಅಂದರೆ ಅಧಿಕಾರಿವರ್ಗ, ಈ ವಿಚಾರದಲ್ಲಿ ಏನು ತೊಂದರೆ ಎಂಬುದನ್ನೂ ತಿಳಿಸಿಲ್ಲ. ಈ ಬಗ್ಗೆ ಮಾರ್ಚಿ ಕೊನೆಯಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿರುತ್ತಾರೆ. ಕೋಲಾರದಲ್ಲಿ ಸಹ ಒಂದು ಹಾಸ್ಟೆಲ್ ಪ್ರಾರಂಭಿಸುವ ಬಗ್ಗೆ ಮೊದಲು 60 ಸಾವಿರಕ್ಕೆ ಒಂದು ಎಸ್ಟಿಮೇಟ್ ತಯಾರಾಗಿ, ಅದು 80 ಸಾವಿರದವರೆಗೆ ಏರಿ ಕೊನೆಗೆ 2 ಲಕ್ಷ 36 ಸಾವಿರ ರೂಪಾಯಿಗಳಿಗೆ ಬಂದಿದೆ. ಆದರೂ ಎಸ್ಟಿಮೇಟ್ ಮಂಜೂರಾಗಿಲ್ಲ. ಈ ಬಾಬಿಗಾಗಿ ಒಂದಿಷ್ಟು ಹಣವನ್ನೇನೋ, ಒಂದು ಲಕ್ಷ 20 ಸಾವಿರದವರೆಗೆ ಖರ್ಚು ಮಾಡಿರುತ್ತಾರೆ. ಹೀಗಾಗಿ ಹಣ lapse ಆಗುವ ಪರಿಸ್ಥಿತಿಯೇ ಹೆಚ್ಚಾಗಿದೆ. ಈ ಮಧ್ಯೆ ಇನ್ನೊಂದು ಗೌರ್ನಮೆಂಟ್ ಆರ್ಡರ್ ಆಗಿ ತುಮಕೂರು, ನಂಜನಗೂಡಿಗೆ ಕೊಟ್ಟಿರತಕ್ಕ ಹಣದಿಂದ 33 ಸಾವಿರ ರೂಪಾಯಿ ತೆಗೆದು ಕೋಲಾರದ ಹಾಸ್ಟಲಿಗೆ ಕೊಟ್ಟಿರುತ್ತಾರೆ. ಇದನ್ನು ನೋಡಿದರೆ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಚ್ಚುವಂತೆ ಆಗುತ್ತದೆ.

Money is already spent without estimates being sanctioned by Government. With regard to other hostels, though administrative and technical sanctions have been accorded by Government, neither the officers nor the Government have taken any further action. Will you admit such a situation? This work is declared to be important work. Can you tolerate such things? I do not know how things are going on. Public money is being spent without proper estimates.

(ಶ್ರೀ ಎಂ ಮಾದಯ್ಯ.)

2-30 P.M.

That is not the way and it is so in case of many other items. This is not the way in which moneys should be allowed to be expended.

ಆದ್ದರಿಂದ ಸರ್ಕಾರದವರು ಈ ಅವ್ಯವಸ್ಥೆಯಿಂದ ಕೂಡಿದ ಮಾರ್ಗವನ್ನು ಅನುಸರಿಸುವುದಕ್ಕೆ ಅವಕಾಶ ಕೊಡಬಾರದು. ಜಂಟಿ ಜವಾಬ್ದಾರಿ ಇರುವುದರಿಂದ ಯಾರಿಗೇ ಆಗಲಿ ಒಂದು ಹೆಚ್ಚಿನ ಮುತುವರ್ಜಿಯನ್ನು ವಹಿಸದೇ ನ್ಯಾಯವಾದ ರೀತಿಯಲ್ಲಿ ಹೋಗಬೇಕು. ಇವೊತ್ತಿನ ದಿವಸ ಒಬ್ಬ ಅಧಿಕಾರಿ, ಚೀಫ್ ಇಂಜಿನಿಯರು ತಮ್ಮ ಹೆಸರಿನಲ್ಲೇ ಇಸ್ಟಿಮೇಷನ್ ಪ್ರಿಂಟ್ ಮಾಡಿಸಿ, ಚೀಫ್ ಮಿನಿಸ್ಟರವರನ್ನು ಕರೆಸಿ ಒಂದು ಲಕ್ಷ 20 ಸಾವಿರ ರೂಪಾಯಿಗಳ ಕೆಲಸ ಮಾಡಿಸಿದ್ದಾರೆ. ಆ ಎಸ್ಟಿಮೇಟು ಮಂಜೂರಾಗಿಲ್ಲವೇ? ಕೇಳಿ.

Mr. SPEAKER.—You are taking more time. Please close your remarks. You are emphasising it more than is needed.

ಶ್ರೀ ಎಂ. ಮಾದಯ್ಯ.—ದಯವಿಟ್ಟು ಪಕ್ಷಪಾತ ಮನೋಭಾವ ಬಿಡಿ. ಅಲ್ಲಿಗೆ ಹಾಸ್ಟೆಲ್ ಅಗತ್ಯವಾಗಿರಬಹುದು. ಸ್ಪೀಡೀ ವರ್ಕ್ ಆಗಿರಬಹುದು. ಅದು ಅಲ್ಲ, ಎಲ್ಲರನ್ನೂ ಒಂದೇ ಸಮನಾಗಿ ಪರಿಗಣಿಸದೆ ಇರುವುದು ಧರ್ಮವಲ್ಲ, ನ್ಯಾಯವಲ್ಲ. ಆ ರೀತಿ ಮಾಡಿದರೆ ಅಧಿಕಾರದಲ್ಲಿರುವವರು ತಮಗೆ ಇರುವ ಅಧಿಕಾರವನ್ನು mis-use ಮಾಡಿಕೊಂಡ ಹಾಗಾಗುತ್ತದೆಯೇ ಹೊರತು ಮತ್ತೆ ಬೇರೆ ಅಲ್ಲ.

With these observations, I place this cut motion before the Hon'ble House.

*ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಮಾನ್ಯ ಶ್ರೀಮಾನ್ ಮಾದಯ್ಯನವರು ತಂದಿರತಕ್ಕ ಈ ಖೋತಾ ನಿರ್ಣಯದ ಮೇಲೆ ಮಾತನಾಡುತ್ತಾ ನಿಮ್ನ ತರಗತಿಯವರಿಗೆ ಹಾಸ್ಟಲುಗಳಿಗಾಗಿ ಸರ್ಕಾರದವರು 1954-55ನೇ ಸಾಲಿನ ಬಡ್ಜೆಟ್‌ನಲ್ಲಿ ಒದಗಿಸಿರತಕ್ಕ ಹಣ ಸೆಂಟ್ರಲ್ ಪಾಲಿಸಿ ಕಮಿಟಿಯಲ್ಲಿರತಕ್ಕ ಸದಸ್ಯರುಗಳ ಒಂದು ಸಲಹೆ ಮೇರೆಗೆ, ಅದರ ಪ್ರಕಾರ 5 ಲಕ್ಷ ರೂಪಾಯಿಗಳನ್ನು ಹಾಸ್ಟಲುಗಳ ಕಟ್ಟಡಕ್ಕೆ ಮಂಜೂರು ಮಾಡಲಾಗಿತ್ತು, ಮುಖ್ಯವಾಗಿ ಇದರಲ್ಲಿ ಕೆಲವು ಹಾಸ್ಟೆಲುಗಳಿಗೆ ಪಕ್ಷಪಾತ ತೋರಿಸಿದ್ದಾರೆ ಎಂದು ಹೇಳಿ ಈಗಾಗಲೇ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಮೈಸೂರು ಹಾಸ್ಟಲಿನ ವಿಷಯ ತಿಳಿಸಬೇಕಾಗಿದೆ. ಈ ಮೈಸೂರಿನ ಹಾಸ್ಟೆಲಿಗೆ ಒಂದು ಸೈಟನ್ನು ಸರ್ಕಾರದವರು ಎಂದರೆ ಸಂಬಂಧಪಟ್ಟ ಮಂತ್ರಿಗಳು ಮಂಜೂರು ಮಾಡಿದ್ದಾಗ್ಯೂ ಕೂಡ ಅಲ್ಲಿನ ಟ್ರಸ್ಟ್ ಬೋರ್ಡಿನವರು ಅದರಲ್ಲಿ ಸ್ವಲ್ಪ ಭಾಗ ಮಾತ್ರ ತೆಗೆದುಕೊಳ್ಳಿ ಎಂದು ಹೇಳಿ—ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಆಗಿ 8 ತಿಂಗಳಾದರೂ ಕೂಡ-ಆ ವಿಷಯದಲ್ಲಿ ಇನ್ನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಏನು ಒಂದು ಉದಾಸೀನ ಮನೋಭಾವ ತೋರಿಸಿದೆ ಎಂಬುದಕ್ಕೆ ಇದೂ ಒಂದು ಉದಾಹರಣೆ ಎಂದು ಹೇಳಬೇಕಾಗಿದೆ. ಎರಡನೆಯದಾಗಿ ಚಾಮರಾಜನಗರ ತಾಲ್ಲೂಕು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ ತಾಲ್ಲೂಕು ಇಲ್ಲೆಲ್ಲಾ ಕಾಲೊನಿ ಏರ್ಪಾಡು ಮಾಡುವಾಗ ಸರ್ಕಾರದವರು ಎಷ್ಟು ದುಡ್ಡು ಮಂಜೂರು ಮಾಡಿದ್ದರೋ ಅದಕ್ಕಿಂತಲೂ ಹೆಚ್ಚಾಗಿ ಖರ್ಚು ಮಾಡಿ, ಎಂದರೆ—, ಒಂದು ಮನೆಗೆ 2,000 ರೂಪಾಯಿ ಖರ್ಚು ಮಾಡಬೇಕಾಗಿತ್ತು, ಆದರೆ 2,800 ರೂಪಾಯಿ ಖರ್ಚು ಮಾಡಿ—ಅಲ್ಲಿ ವಾಸಕ್ಕೆ ಬರತಕ್ಕ ಜನರಿಂದ ಹೆಚ್ಚಿಗೆ ಖರ್ಚಾದ ಆ 800 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳಬೇಕೆಂದು ಆರ್ಡರ್ ಮಾಡಿದ್ದಾರೆ. ಹಿಲ್‌ಟ್ರೈಬ್ಸ್ ಜನರು ಬಂದು ಅಲ್ಲಿ ವಾಸಕ್ಕೆ ಇರಬೇಕಾಗಿದೆ. ಈ ರೀತಿ 800 ರೂಪಾಯಿ ಮತ್ತೆ ವಸೂಲು ಮಾಡಬೇಕೆಂಬ ಕಂಡೀಷನ್ ಹಾಕಿರುವುದರಿಂದ ಅಲ್ಲಿ ಕಟ್ಟಿರತಕ್ಕ ಮನೆಗಳನ್ನು ಯಾವ ಉದ್ದೇಶಕ್ಕೆ ಕಟ್ಟಿದರೋ ಅದು ಸಫಲವಾಗುತ್ತಾ ಇಲ್ಲ. ಮತ್ತು ಮೈಸೂರು, ಬೆಂಗಳೂರು, ಕೋಲಾರ, ತುಮಕೂರು ಆ ಕಡೆಗಳಲ್ಲಿ ಹಾಸ್ಟಲುಗಳಿಗಾಗಿ ಎಷ್ಟು ಉತ್ಸಾಹವನ್ನು ತೋರುತ್ತೀರೋ ಅಷ್ಟೇ ಉತ್ಸಾಹವನ್ನು ಇದಕ್ಕೂ ತೋರಿಸಬೇಕೆಂದು ಹೇಳುತ್ತೇನೆ.

***Sri R. ANANTARAMAN** (Chamarajpet).—I just want to support the cause of Harijans living in the City, Sir; their condition is woeful.

Mr. SPEAKER.—This is only rural development grant. Under this grant you cannot speak about Harijans living in the City.

Sri R. ANANTARAMAN.—I only wish to state that all the money spent over Harijans is spent in the rural parts and Harijans living in the cities are neglected. Their condition is rather very pitiable and Government has not bestowed any attention to this aspect.

Mr. SPEAKER.—You can take another opportunity to ventilate your grievance. The Hon'ble Minister will now reply.

***Sri P. R. RAMAIYA** (Basavangudi).—Sir, Scheduled tribes are all centred in Mysore District and Government has not been paying adequate attention to their improvement. There are no hostels, no houses for them to live and they have no educational facilities. Therefore I request Government to pay special attention to these tribes. After all, they are a small population of about 15,000.

Sri T. CHANNIAH (Minister for Public Health and Local Self-Government).—Mr. Speaker, Sir, the Hon'ble Member Sri G. Puttaswamy wanted that the Government should enunciate their policy in regard to amelioration of the Depressed Classes. In parti-

cular he wanted that each Harijan raiyat, especially in the Malnad districts of Shimoga, Chikmagalur and Hassan, should be provided with a pair of bullocks for cultivation of his land. On the recommendation of the Members of the Policy Committee for the Depressed Classes, Sir, a sum of Rs. 4,00,000 was earmarked for granting loans for purchase of bullocks and sheep, for starting cottage industries and for grant of scholarships. These concessions were discontinued this year as it was considered that the money set apart for these purposes may better be utilised for construction of hostels. Therefore this year, on the advice of the Policy Committee Members, Government have reserved this amount for the construction of hostels. This has been decided after careful consideration. I am not sure whether it would be possible to provide a pair of bullocks to each and every Harijan raiyat living in the Malnad. It will involve considerable amount and it may not be possible to say whether the suggestion to provide bullocks to Harijan families is feasible or not.

Sri Madiah, I must say, has raised a specific issue that the budget allotment is not properly spent. I must say at the outset that on the recommendation of the Policy Committee, major allotments are made and those allotments are spent for specific purposes. I think as much as 19 lakhs of rupees have been spent for Harijan housing and for acquisition of lands for providing building sites for them. The rest of the allotment has been spent for construction of hostels and for providing other facilities. A portion of. this amount has also been spent in connection with the ameliorative measure of the Scheduled Tribes. The Central Government also have given financial aid in all these matters. Government are convinced that the allotted moneys are being spent for which they are intended and not otherwise.

Regarding another point raised by my Hon'ble friend, I should say, it is an allegation which I must refute at the outset.

Sri M. MADIAH.—Sir, I take a challenge; if what I have said is not correct, I withdraw.

Mr. SPEAKER.—You can take another opportunity to make a challenge.

Sri J. MOHAMED IMAM.—On a point of information Sir. Are challenges allowed in this House?

Mr. SPEAKER.—No.

Sri T. CHANNIAH.—It is true, Sir, that the Government have set apart a sum of Rs. 5,34,000 for the construction of hostels during this year and my friend has referred to the construction of depressed class hostel at Kolar. It is not actually so. In this regard I must mention that in places like Tumkur, Mysore, Nanjangud perhaps there has been some delay due to the sites for the construction of the hostels not being settled.

Sri M. MADIAH.—Absolutely incorrect, Sir.

Sri T. CHANNIAH.—I am quite sure that the selection of the site in Tumkur has not yet been finalised. There is therefore the delay. Unless the question of site is settled, we cannot proceed further.

Mr. SPEAKER.—Do you hold the Hon'ble Member responsible for the dealy in the selection of the site?

Sri T. CHANNIAH.—No, Sir, there is no responsibility on him. Because in the locality . . . .

Mr. SPEAKER.—You mean, he ought to have helped?

Sri T. CHANNIAH.—I fully agree with the Hon'ble Speaker. Sir, My Hon'ble friend Sri Madiah thinks that it is so easy to get sites for the construction of depressed class hostels. In certain places there will be some difficulty or other in the selection of sites. Due to this, there has been some delay.

ಶ್ರೀ ಬಿ. ರಾಚಯ್ಯ.—ಈ ಬೋರ್ಡಿನಲ್ಲಿ ಹರಿಜನ ಸದಸ್ಯರು ಇಲ್ಲದೇ ಇರುವುದರಿಂದ ಅಲ್ಲವೇ ಸ್ವಾಮಿ ಇಷ್ಟು ಗಲಾಟೆಗೆಲ್ಲಾ ಅವಕಾಶವಾಗುತ್ತಾ, ಇರುವುದು?

Mr. SPEAKER.—He is only giving reasons for the delay. This is not the time to request that Harijans should be included in the Trust Board.

Sri T. CHANNIAH.—Sir, the delay in construction of hostels, particularly

(SRI T. CHANNIAH.)

in Tumkur and Mysore, was mainly due to no-selection of sites.

That was the reason why the hostels could not be started early. The Public Works Department take prompt action in executing the work of constructing the hostel in Kolar. Nobody was in the way of the Hon'ble member to get a sanction for site for a hostel in Mysore and Nanjangud. Government sanctioned the amount. The local members could have taken special interest. Sir, Government always looks forward to see that the execution of the work of all the hostels are carried out very promptly.

Reasons for non-Receipt of entire Grant due from Government of India for 1953-54.

Sri S. SRINIVASA IYENGAR (T.-Narasipur).—Mr. Speaker, from the Explanatory Note it is seen that a sum of Rs. 6,54,688 was due from Government of India as grant for 1953-54; and, Government have received only Rs. 3,45,300. I want to know why the Government did not receive the balance of the grant before the close of the year. Further, I wish to know whether the grants of the Government of India of a particular year do not lapse at the end of the year or do they continue in the coming year.

The other point is, from the Explanatory Note it is seen that the schemes will have to be approved by the Government of India. When the Government of Mysore knew definitely well that they were submitting schemes to the tune of nearly Rs. 19 lakhs and had not received those schemes approved in time for inclusion in the Budget, how did they arrive at the figure of Rs. 6,50,000 to include in the Budget? The point is, they had prepared a scheme to cost 20·5 lakhs and that scheme had been submitted to the Government of India for approval. The approval had not been received in time so as to enable the Government to provide the entire amount for the schemes in the Budget. Then, how did they pitch upon that figure 6·5 lakhs in the Budget of 1954-55? That is the point that needs a little clarification. Suppose, the Government of India did not give the lapsed grant for 1953-54, does it come to the point that we have to meet the Bill? This needs a little clarification.

Further, Sir, the rural development works for which money is sought, they are not undertaken in all the districts in a definite system. There are some taluks where there are absolutely no rural development works. Therefore, I want to know the nature of the scheme for which they are seeking our sanction.

Sri T. CHANNIAH.—Mr. Speaker, Sir, regarding the points raised by Mr. Srinivasa Iyengar whether the grant allotted by Government of India would lapse at the end of the year, it was only during the last year that such a thing happened; during the current year, I do not think, it will lapse. When these schemes were sent to Government of India, for arranging for the finances in this behalf, they took some time. Therefore, on account of the shortage of time, the Commissioner for the Depressed Classes and the Deputy Commissioners were unable to use the grant.

Sri S. SRINIVASA IYENGAR.—On a point of order. I am raising the issue on the first item—rural development works. I am not touching the second item. The Hon'ble Minister is answering the second item.

Sri T. CHANNIAH.—About the point raised by the Member, I will let him know after knowing the details.

DEMAND NO. 26—INDUSTRIES AND SUPPLIES.

43—Industries and Supplies (excluding sericulture)

Need for a Mobile Van.

Sri S. SRINIVASA IYENGAR (T.-Narasipur).—Mr. Speaker, under Demand No. 26 from the Supplementary Estimates, it is seen that the Government require Rs. 27,000 for the purchase of Mobile Van and Rs. 45,000 for establishing show-rooms in Mercara

Hubli and Mangalore and Rs. 45,000 for the expansion of Research and Designing Centre. Sir, the Government had purchased a number of vans in connection with the rural development work at the time of the working of the Committees. They have abolished these committees and those vehicles have been released. Government could have as well used one of these vehicles. I want to know the purpose for purchasing a new Van.

Policy in establishing show rooms.

Secondly, I congratulate the idea of Government for establishing show rooms. But, I would like to know the policy that they would adopt in establishing such centres. Show rooms have to be opened in every State in India. We have seen such show rooms opened by Kashmir Government everywhere. I certainly congratulate that Government. But, I want to know whether they would do it on commercial basis, whether they would sell all the goods produced by the industries run by Government and whether they would have a latitude of a commercial concern in selling these goods. With a view to ascertain the scheme that the Government have in their view, I have moved this cut motion.

Working of the designing section.

Further, Sir, about the designing section, I learn, there is already a desining section for the handloom industry. I am afraid, that office is not doing much work ; anyway, I am not fully informed about that. I would like to know what progress is made, and what research is made in designing so as to manufacturing articles suitable to the present market. Have the industries managed by Government adjusted themselves to such changes as are accomplisted by the neighbouring provinces to Mysore State. If all that is done is efficient, I am one of those to support the expenditure; otherwise, I would like to point out that something is wrong and it may be worked properly. I wanted to know the working of the designing section.

Sri H. SIDDAVEERPPA (Minister for Home and Industries).—Regarding the Van, Government proposed to purchase a mobile van for the simple reason that no van is available for that purpose. All the vans referred to by the Hon'ble Member have been fully utilised and no van is lying idle.

Regarding the show rooms a relevant point has been raised. Government want to utilise the show room not only for the purpose of selling all our goods but also for the purpose of exhibition so that anybody who wants to purchase those goods may place order and purchase through our departments. Government desire to have as many show rooms as possible. In some places, instead of having a show room, they propose to exhibit our goods in show rooms started by Central Government or other State Governments. For instance, in Bombay there is a show room for All India-Khadi and Cottage Industries.

Regarding the design section, I am sure that the Hon'ble Member has paid a visit to the Exhibition in Mysore. The designs that are now made are quite satisfactory. I am quite satisfied that the section is doing good work. The trouble with this design section is, as soon as any design is made, we cannot have a Trade Mark for it. The moment we have a particular design and think of pushing it in the market, there will be already the same designs in the market and at lower cost. I do not know how to solve this problem. I have been consulting my technicians and I am rtying to solve that problem ; we have not yet come to any conclusion. Apart from that, the designing section has been doing good work and I am thinking of strengthening that section because it is much better that we design quickly. I hope I have satisfied my friend.

Mr. SPEAKER.—Now, we shall rise for lunch and meet at 3-30.

The House adjourned for Lunch at Three of the Clock and reassembled at 3-30 P.M.

[MR. SPEAKER in the Chair]

DEMAND NO. 27.—SERICULTURE.

43. Industries and Supplies—Sericulture.

Supply of Refrigerators to Aided Graineurs.

Sri S. SRINIVASA IYENGAR (T-Narsipur).—In items 3 and 4 of the Demand, Government have stated that they require a sum of Rs. 80,000 for the purpose of meeting expenditure in connection with the scheme of supplying refrigerators to aided graineurs. I know that this comes under the Seed Control Act. But I want to know the details about the scheme; how do they propose to supply these refrigerators, and do they give them to aided graineurs free of cost or on loan. Does the scheme contemplate the supply of such refrigerators to unaided graineurs? I am deliberately putting these questions because out of the graineurs working now in the State, a very small percentage are aided graineurs and therefore the problem of unaided graineurs needs study. Disease free layings have to be supplied by them too. Therefore will the Government also consider the question of supplying refrigerators to those graineurs other than aided? Under the Seed Control Act, there is no classification like aided graineurs or unaided graineurs. So, since that difference of aided graineurs and unaided graineurs has vanished immediately after the passing of the Seed Control Act, I want to know whether it is the policy of the Government to supply the refrigerators to all the graineurs and if so, what is the total number that is required and how do they propose to meet the expenditure. If they supply, what is the condition on which they supply? Is it on loan basis or is it an outright grant? These things have to be known by this House before they assent to the proposed expenditure and I request the Government to enlighten me on these issues.

Sri H. SIDDAVEERAPPA (Minister for Home and Industries).—At the moment the scheme is only to supply refrigerators to aided graineurs. I have not thought of giving them to unaided graineurs. I understand that in the new scheme they have got only licence. But at the moment we have got about 120 registered aided graineurs in the State, out of which 30 are already supplied with refrigerators. The idea is to supply them to the other 90 graineurs also. And as a first step I propose giving 50 new refrigerators so that the total strength may be 80. Hitherto, we were paying Rs. 400 to each aided graineur by way of subvention. Now the proposal is to supply refrigerators themselves at a cost of Rs. 2,000 each.

All this money has been financed by the Central Government. Fifty per cent of this will be given as outright subsidy to aided graineurs and the other 50 per cent is given as loan to be recovered from them in five equal annual instalments.

This is the scheme at the moment that has been sponsored by the Government of India Central Silk Board.

Grainage at Thyamagondlu.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರ ದೇಶದ ರೇಷ್ಮೆ ಪ್ರಪಂಚದಲ್ಲಿಯೇ ಹೆಸರುವಾಸಿಯಾಗಿದೆ. ಮೈಸೂರು ರೇಷ್ಮೆ ಬಹಳ ಪೂರ್ವ ಕಾಲದಿಂದಲೂ ತ್ಯಾಮಗೊಂಡ್ಲು, ದೊಡ್ಡಬಳ್ಳಾಪುರ ಮತ್ತು ತುಮಕೂರು ಜಿಲ್ಲೆಯ ಗೂಳೂರಿನಲ್ಲಿ ಪ್ರಸಿದ್ಧಿಯಾಗಿ ಬೆಳೆಯುತ್ತಿದೆ. ಈ ಪ್ರದೇಶದ ರೇಷ್ಮೆ ಹೊಳೆಯುವ ಹೊಂಬಣ್ಣದ ರೇಷ್ಮೆ. ಬಹಳ ಕಾಲದಿಂದಲೂ ತ್ಯಾಮಗೊಂಡಲಿನ ಬೀಜಗಳನ್ನೂ, ದೊಡ್ಡಬಳ್ಳಾಪುರದ ಬೀಜಗಳನ್ನೂ ಮತ್ತು ಗೂಳೂರಿನ ಬೀಜಗಳನ್ನೂ ಮೈಸೂರು ದೇಶದ ಇತರ ಭಾಗಗಳಿಗೆ ಕೊಂಡು ಕೊಳ್ಳುತ್ತಿದ್ದಾರೆ. ತ್ಯಾಮಗೊಂಡ್ಲು ಫಲವತ್ತಾದ ಭೂಮಿಯನ್ನೊಳಗೊಂಡು ಸೊಗಸಾದ ಹಿಪ್ಪನೇರಳೆ ವ್ಯವಸಾಯಕ್ಕೆ ತುಂಬ ಅನುಕೂಲವಾಗಿದೆ. ಅಲ್ಲಿನ ವಾಯುಗುಣ ರೇಷ್ಮೆ ಬೆಳೆಗೆ ಒಪ್ಪತಕ್ಕದ್ದಾಗಿದೆಯೆಂಬುದು ಆ ಗಿಡಗಳು ಸೊಂಪಾಗಿ ಬೆಳೆದಿರುವುದರಿಂದಲೇ ಗೊತ್ತಾಗುತ್ತದೆ. ಈ ಕಾರಣದಿಂದ ಅಲ್ಲಿ ಸರ್ಕಾರದವರು ಒಂದು ಬಿತ್ತನೆ ಕೋಠಿಯನ್ನು ಪ್ರಾರಂಭಿಸುವುದರಿಂದ ಈಗ ಅಲ್ಲಿ ಯಾವ ರೀತಿ ಒರಟು ರೀತಿಯಲ್ಲಿ ರೇಷ್ಮೆ ತಯಾರಾಗುತ್ತಿದೆಯೋ ಅದುತಪ್ಪಿ, ಶಾಸ್ತ್ರೀಯವಾಗಿ ಇದನ್ನು ತಯಾರು ಮಾಡಲು ಅನುಕೂಲವನ್ನು ಕಲ್ಪಿಸಿ, ಈ ಗೃಹಕ್ಕೈಗಾರಿಕೆಗೆ ಪ್ರೋತ್ಸಾಹಕೊಡುತ್ತಾರೆಂದು ನಂಬುತ್ತೇನೆ. ಇಂಡಿಯಾ ಸರ್ಕಾರದವರು ಸಹ ಈ ರೇಷ್ಮೆ ವ್ಯವಸಾಯದ ಬೆಳವಣಿಗೆಗೆ ಬಹಳ ಉತ್ತೇಜನಕೊಡುತ್ತಿದ್ದಾರೆ.

ಮೈಸೂರು ಸಂಸ್ಥಾನದಲ್ಲಿಯೂ ಸಹ ಅನೇಕ ಕಡೆ ಇದರ ಉತ್ತೇಜನಕ್ಕಾಗಿ ಬಿತ್ತನೆ ಕೋಠಿಗಳನ್ನು ಪ್ರಾರಂಭಿಸಿರುತ್ತಾರೆ. ಇನ್ನೂ ಎಷ್ಟೋ ಕಡೆಗಳಲ್ಲಿ ಈ ಗ್ರೈನೇಜ್ ಸ್ಥಾಪನೆ ಆಗಬೇಕಾಗಿದೆ. ಇದರ ಸ್ಥಾಪನೆಯಿಂದ ಶುದ್ಧವಾದ ರೇಷ್ಮೆ ತಯಾರಿಕೆಗೆ ಮಹತ್ವವಾದ ಸೌಕರ್ಯವಿದೆ. ಆದುದರಿಂದ ತ್ಯಾಮಗೊಂಡ್ಲುವಿನಲ್ಲಿ ಒಂದು ಗ್ರೈನೇಜ್ ಸ್ಥಾಪಿಸಲು ಸರ್ಕಾರದವರು ಪ್ರೋತ್ಸಾಹ ಕೊಡಬೇಕೆಂದು ಸೂಚಿಸಿ ಈ ಸಲಹೆಯನ್ನು ಸರ್ಕಾರದ ಮುಂದಿಡುತ್ತೇನೆ.

Sri H. SIDDAVEERAPPA.—Sir, it is admitted that Thyamagondlu area is also one of the most important areas for Mysore seed campaign purposes. It is in this area the Mysore seed cocoons are reared. Equally in Dodballapur also the Mysore seed cocoons are reared. At present the Dodballopur area is supplying all the needs of Thyamagondlu area. 45 lakhs of disease-free layings per annum are produced in Dodballapur area. The production in Thyamagondlu is only 30 lakhs and the need of this area is only 24 thousand disease-free layings. Hence since Dodballapur has been able to meet the demands of Thyamagondlu it is found not possible to start one grainage at Thyamagondlu urgently. Government will certainly consider when the question arises and will examine it when the matter comes up for consideration.

— ——

Need for starting experimental Sericultural Farms in Malnad.

***ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).**—ಅಧ್ಯಕ್ಷರೆ, ಮಲೆನಾಡು ಪ್ರಾಂತ್ಯದಲ್ಲಿ ಮುಖ್ಯವಾಗಿ ಕಾಫಿ ತೋಟಗಳು, ಏಲಕ್ಕಿ ತೋಟಗಳು, ಬತ್ತ ಬೆಳೆಯತಕ್ಕ ಗದ್ದೆಗಳು ಮತ್ತು ಅಡಿಕೆ ವ್ಯವಸಾಯ—ಇವುಗಳನ್ನು ಬಿಟ್ಟರೆ ಮತ್ತಾವ ವ್ಯವಸಾಯವೂ ಆ ಪ್ರಾಂತ್ಯದಲ್ಲಿ ಇಲ್ಲವಾಗಿದೆ. ಈ ವ್ಯವಸಾಯ ಸಹ ಕೇವಲ ಕೆಲವು ಭಾಗಗಳಲ್ಲಿದ್ದು ಇನ್ನುಳಿದ ಭಾಗ ಯಾವ ಉಪಯೋಗವನ್ನೂ ಪಡೆಯದೇ ಹಾಗೆಯೇ ಉಳಿದಿದೆ. ಒಮ್ಮೆ ನಾನು ಮಲೆನಾಡು ಪ್ರಾಂತ್ಯದಲ್ಲಿ ಪ್ರವಾಸಮಾಡಿದಾಗ ಸಕಲೇಶಪುರ ತಾಲ್ಲೂಕು ಬಾಳೆಗುಪ್ಪ ಗ್ರಾಮದಲ್ಲಿ ರೇಷ್ಮೆ ಬಿತ್ತನೆಯನ್ನು ಒಂದು ಮನೆಯ ಹಿತ್ತಲಲ್ಲಿ ಹಾಕಿದ್ದರು. ಅದು ಹುಲುಸಾಗಿ ಬೆಳೆದು, ಕೋಲಾರ, ತುಮಕೂರು ಮತ್ತು ಚನ್ನಪಟ್ಟಣದಲ್ಲಿ ಬೆಳೆದಿರುವುದಕ್ಕಿಂತ ಚೆನ್ನಾಗಿ ಆಗಿತ್ತು. ಅಲ್ಲಿ ಹೆಚ್ಚಾಗಿ ಮಳೆ ಆಗುತ್ತಿರುವುದು ಕಾರಣವಾಗಿರಬಹುದು ಮತ್ತು ಅದಕ್ಕೆ ಬೇಕಾದ ಭೂಗುಣ ಚೆನ್ನಾಗಿರಬಹುದು. ಇದನ್ನು ನೋಡಿ ರೇಷ್ಮೆ ವ್ಯವಸಾಯದ ಬಗ್ಗೆ ಮಲೆನಾಡಿನಲ್ಲಿ ಏಕೆ ಪ್ರಯೋಗಮಾಡಿ ನೋಡಬಾರದು ಎಂದೆನ್ನಿಸಿತು. ಇದಕ್ಕೆ ತಕ್ಕ ಸೌಕರ್ಯ ಮತ್ತು ಭೂಗುಣ ಮಲೆನಾಡಿನಲ್ಲಿರಬಹುದು ಎಂದು ನನ್ನ ಭಾವನೆ, ಈ ಪ್ರಯೋಗ ಕೈಗೊಂಡರೆ ಆ ಪ್ರಾಂತ್ಯದಲ್ಲಿಯೂ ಸಹ ಈ ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಅವಕಾಶವಾಗಬಹುದು ಎಂದೆನ್ನಿಸುತ್ತದೆ. ಈ ವಿಚಾರದಲ್ಲಿ ಅಲ್ಲಿ ಶಾಸ್ತ್ರೀಯವಾಗಿ ಪ್ರಯೋಗವಾಗಿಲ್ಲ. ಸಂಬಂಧಪಟ್ಟ ಇಲಾಖೆಯವರು ಶಾಸ್ತ್ರೀಯವಾಗಿ ಅಲ್ಲಿ ಗಿಡಗಳನ್ನು ಬೆಳೆಸುವುದಕ್ಕೆ ಮತ್ತು ಹುಳುಗಳನ್ನು ಸಾಕುವುದಕ್ಕೆ ಅನುಕೂಲವಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಬೇಕಾಗಿದೆ. ನನ್ನ ಮಿತ್ರರಾದ ಶ್ರೀ ಪಾಪಣ್ಣನವರೇನೋ ಅಲ್ಲಿ ಗಿಡಗಳು ಚೆನ್ನಾಗಿ ಬೆಳೆದರೂ, ಹುಳುಗಳು ಚೆನ್ನಾಗಿ ಅಭಿವೃದ್ಧಿಗೊಳ್ಳುತ್ತವೆಯೋ ಅಥವಾ ಇಲ್ಲವೋ ಎಂಬ ವಿಚಾರದಲ್ಲಿ ಅನುಮಾನವನ್ನು ವ್ಯಕ್ತಪಡಿಸಿದರು. ಆದರೂ ಈ ವಿಚಾರದಲ್ಲಿ ಅಲ್ಲಿ ಪ್ರಯೋಗ ನಡೆಸಬೇಕಾದುದು ಯುಕ್ತವೆಂದು ಹೇಳುತ್ತೇನೆ. ರೇಷ್ಮೆ ಕೈಗಾರಿಕೆಯು ಗೃಹಕೈಗಾರಿಕೆ. ಆದುದರಿಂದ ಈ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಬೇಕಾದುದು ಅವಶ್ಯಕ. ಒಂದು ಪಕ್ಷ ಹುಳುಗಳು ಅಲ್ಲಿ ಬದುಕುವುದಿಲ್ಲವೆಂದು ಗೊತ್ತಾದರೂ ಮಲೆನಾಡಿಗೆ ಸೇರಿದ ಹಾಗೆ 10-15 ಮೈಲಿ ದೂರದಲ್ಲಿರುವ ಮೈದಾನ ಪ್ರದೇಶದಲ್ಲಿ ಈ ಬಗ್ಗೆ ಅನುಕೂಲತೆಯನ್ನು ಕಲ್ಪಿಸುವುದು ಒಳ್ಳೆಯದು. ಇದರಿಂದ ಅನೇಕ ರೈತರಿಗೆ ಅನುಕೂಲವಾಗಬಹುದು. ಈ ದೃಷ್ಟಿಯಿಂದ ಮಲೆನಾಡಿನಲ್ಲಿ ಪ್ರಯೋಗ ಕ್ಷೇತ್ರ ಒಂದನ್ನು ಪ್ರಾರಂಭಿಸಿ ಪರೀಕ್ಷೆ ನಡೆಸಲು ವ್ಯವಸ್ಥೆ ಮಾಡಬೇಕೆಂದು ಅರಿಕೆ ಮಾಡುತ್ತೇನೆ.

***ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).**—ಶ್ರೀ ಕೆ. ಲಕ್ಕಪ್ಪನವರ ಸಲಹೆಯು ಅಷ್ಟು ಉಚಿತವಾದುದಲ್ಲವೆಂದು ನನ್ನ ಅಭಿಪ್ರಾಯ. ಬೈಲು ಸೀಮೆಯಲ್ಲಿ ರೇಷ್ಮೆ ವ್ಯವಸಾಯ ಚೆನ್ನಾಗಿ ಆಗುತ್ತದೆ ಎಂಬುದು ನಿರ್ಧರವಾಗಿ ಗೊತ್ತಾಗಿರತಕ್ಕ ಅಂಶ. ಈ ವ್ಯವಸಾಯ ಮಲೆನಾಡಿನ ಪ್ರದೇಶಕ್ಕೆ ಒಗ್ಗುವುದಿಲ್ಲ. ಅಲ್ಲಿಯ ಹವಾಗುಣ, ಭೂಗುಣ ಈ ವ್ಯವಸಾಯಕ್ಕೆ ವಿರುದ್ಧವಾದುದು. ಆದುದರಿಂದ ಈ ಬಗ್ಗೆ ಏನು ಪ್ರಯೋಗ ಕೈಗೊಂಡರೂ ನಷ್ಟವಾಗುತ್ತದೆ. ಇದಕ್ಕೆ ಬದಲು ಬಯಲುಸೀಮೆಯಲ್ಲಿಯೇ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ಭಾಗಗಳಲ್ಲಿ ಈ ಪ್ರಯೋಗ ಕ್ಷೇತ್ರಗಳನ್ನು ಹೆಚ್ಚಿಸಿ, ಹೆಚ್ಚು ಪ್ರಚಾರ ಮಾಡುವುದರಿಂದ ಅಲ್ಲಿಯ ಜನರಿಗೆ ಉದ್ಯೋಗ ದೊರಕುವುದಲ್ಲದೆ ಈ ವ್ಯವಸಾಯವನ್ನು ಸಹ ಪ್ರೋತ್ಸಾಹಿಸಿದಂತಾಗುತ್ತದೆ. ಈ ಕಾರಣದಿಂದ ಮಲೆನಾಡಿನಲ್ಲಿ ಇದನ್ನು ಮಾಡುವುದರಿಂದ ಉಪಯೋಗವಿಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯ.

Mr. SPEAKER.—You have got to speak on the motion. There is no time.

ಶ್ರೀ ಜಿ. ಪಾಪಣ್ಣ.—ಈ ಡಿಮ್ಯಾಂಡಿನ ಮೇಲೆ ಇನ್ನೊಂದೆರಡು ಮಾತುಗಳನ್ನ ಹೇಳುತ್ತೇನೆ. C. Development schemes—sericulture ಎಂದು ಹೇಳಿ 1 ಲಕ್ಷ 72 ಸಾವಿರ ರೂಪಾಯಿಗಳನ್ನು ಕೇಳಿದ್ದೀರಿ. ಇದನ್ನು ಈ ಡಿಮ್ಯಾಂಡಿನಲ್ಲಿ ಏಕೆ ಕೇಳಿದ್ದೀರೋ ನನಗಂತೂ ಆಶ್ಚರ್ಯವಾಗುತ್ತಿದೆ. ಈ 1 ಲಕ್ಷ 72 ಸಾವಿರ ರೂಪಾಯಿಗಳನ್ನು ಏತಕ್ಕಾಗಿ ಉಪಯೋಗಿಸುತ್ತೀರಿ ಎಂದರೆ 1942ನೇ ಇಸವಿಯಲ್ಲಿ ಪ್ಯಾರಾಚೂಟ್‌ಗಾಗಿ ಕೊಂಡುಕೊಂಡ ರೇಷ್ಮೆ condemn ಆಗಿತ್ತು. ಅದಕ್ಕೆ ಕೇಂದ್ರ ಸರ್ಕಾರದವರು ಕೊಡಬೇಕಾಗಿದ್ದ ಹಣ ಕೊಡುವುದಕ್ಕೆ ತಿರಸ್ಕರಿಸಿದ್ದರಿಂದ ಈಗ ಕೇಳುತ್ತಾ ಇದ್ದೀರಿ. ಇದು ಸರಿಯೇ? ಮೈಸೂರು ಸರ್ಕಾರದವರಾದರೂ ಇದು ಹೇಗೆ ಸರಿ ಎಂದು ಒಪ್ಪಿಕೊಳ್ಳುತ್ತೀರಿ ಎಂದು ಪ್ರಶ್ನಿಸುತ್ತೇನೆ. ಈ ಹಳೆಯ ಬಾಕಿಗೆ 12 ವರ್ಷ ಲಿಮಿಟೇಷನ್ ಕೂಡ

(ಶ್ರೀ ಜಿ. ಪಾಪಣ್ಣ.)

ಮೀರಿ ಹೋಗಿದೆ. 12 ವರ್ಷಗಳಿಂದ ಬಾಕಿ ನಿಲ್ಲಿಸಿಕೊಂಡು ಬಂದು ಈಗ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಏಕೆ ಇಡಬೇಕಾಗಿತ್ತೋ ನನಗಂತೂ ಅರ್ಥವಾಗುವುದಿಲ್ಲ. ಈ ದುಡ್ಡನ್ನು ಯಾವುದರಿಂದ ಕೊಡುತ್ತೀರಿ ಎಂಬುದನ್ನು ನೋಡಿದ್ದೀ ಆದರೆ, ಸಿಲ್ಕ್ ಇಂಡಸ್ಟ್ರೀ ಫಂಡ್‌ನಿಂದ ಕೊಡುತ್ತೀರಿ. ಈ ಸಿಲ್ಕ್ ಇಂಡಸ್ಟ್ರೀ ಫಂಡು ಎಲ್ಲಿಂದ, ಯಾರಿಂದ ಬಂತು, ಈ ರೀತಿ ಕೊಡುವುದು ನ್ಯಾಯವೇ ಎಂಬುದನ್ನು ಖಂಡಿತವಾಗಿಯೂ ಕೂಡ ತೀವ್ರವಾಗಿ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ಮತ್ತು ಇದು ಕೇಂದ್ರ ಸರ್ಕಾರದವರೇ ಕೊಡಬೇಕಾದದ್ದು, ಸಂಸ್ಥಾನ ಸರ್ಕಾರದವರು ಕೊಡಬೇಕಾದ್ದಿಲ್ಲವಾದುದರಿಂದ ನಮ್ಮ ಸರ್ಕಾರದ ಫಂಡ್‌ನಿಂದ ಕೊಡುವುದಕ್ಕಾಗುವುದಿಲ್ಲ ಎಂಬುದನ್ನು ಕೇಂದ್ರ ಸರ್ಕಾರದವರಿಗೆ ಒತ್ತಾಯವಾಗಿ ತಿಳಿಸಿ ಅವರೇ ಇದನ್ನು ವಹಿಸಿಕೊಳ್ಳುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಶ್ರೀಮಾನ್ ಪಾಪಣ್ಣನವರು ಹೇಳಿದ ಪ್ರಕಾರ ಈ 1 ಲಕ್ಷ 72 ಸಾವಿರ ರೂಪಾಯಿಗಳನ್ನು ಕೊಡಬೇಕಾದದ್ದು book adjustment. ಅವರು ತಿಳಿಸಿದ ಹಾಗೆ ಇದು 1942 ರಿಂದ ಲೆಕ್ಕದಲ್ಲಿ ಉಳಿದುಕೊಂಡು ಬಂದಿರತಕ್ಕ ಮೊಬಲಗು. ಆಗ ಕಕೂನ್ ಕಂಟ್ರೋಲ್ ಸ್ಕೀಂ ಎಂದು ಹೇಳಿ ಒಂದು ಸ್ಕೀಂಮಾಡಿ ಪ್ಯಾರಾಚ್ಯೂಟ್ ಸಿಲ್ಕ್ ಮಾಡಲಿಕ್ಕೂ ಮತ್ತು ಸಿಲ್ಕ್ ಇಂಡಸ್ಟ್ರೀ ಡೆವಲಪ್ ಮಾಡಲಿಕ್ಕೂ ಇಂಡಿಯಾ ಸರ್ಕಾರದವರು ಮೈಸೂರು ಸರ್ಕಾರದವರಿಗೆ ಒಂದು ಸ್ಕೀಂ ಕೊಟ್ಟರು. ಅದಕ್ಕೆ 1 ಲಕ್ಷ 72 ಸಾವಿರ ರೂಪಾಯಿಗಳಾದವು. ಅದನ್ನು 1945-46ನೇ ಇಸವಿಯಲ್ಲಿ ಅವರನ್ನು ಕೇಳಿದೆವು, ನಿಮಗಾಗಿಯೇ ಮಾಡಿದ್ದು, ನೀವೇ ಕೊಡಬೇಕು ಎಂದು. ಅದಕ್ಕೆ ಅವರು long range and short range advantages ಮೈಸೂರು ಸರ್ಕಾರದವರಿಗೆ ಬಹಳವಾಗಿ ಲಭಿಸಿದೆ, ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಸಿಲ್ಕ್ ಇಂಡಸ್ಟ್ರೀ ಮೈಸೂರು ದೇಶದಲ್ಲಿ ಸತತವಾಗಿ ಅಭಿವೃದ್ಧಿ ಹೊಂದಲು ಅನುಕೂಲವಾಗುವಂತಾಗಿದೆ ಆದ್ದರಿಂದ ನೀವೇ ಹೊರಬೇಕು ಎಂದು ಹೇಳಿದರು. ಆ ಪತ್ರ ವ್ಯವಹಾರ ಅನೇಕ ದಿವಸ ನಡೆದು ಫೈನಲ್ ಆಗಿ ಇಂಡಿಯಾ ಸರ್ಕಾರದವರು ನೀವೇ ಕೊಡಬೇಕು ಎಂದು ಹೇಳಿದ್ದರಿಂದ ಈ ಒಂದು ಸಣ್ಣ ಮೊಬಲಗಿಗಾಗಿ ಜಿಜ್ಞಾಸೆ ಮಾಡುವುದು ಸರಿಯಲ್ಲ ಎಂದು ಹೇಳಿ ಫೈನಲ್ ಆಗಿ ಅಕೌಂಟ್ ಕ್ಲೋಸ್ ಮಾಡಿದೆವು. 1947ರಲ್ಲಿ ಪಾರ್ಟಿಷನ್ ಆದ ಕಾಲದಲ್ಲಿ ಈ ರೀತಿ ತೀರ್ಮಾನವಾಗಿದೆ ಎಂದು ಹೇಳಿದಮೇಲೆ ನಾವು ಇದನ್ನು ಕೊಡಲಿಕ್ಕೆ ಒಪ್ಪಿಕೊಳ್ಳಬೇಕಾಯಿತು. ಶ್ರೀಮಾನ್ ಪಾಪಣ್ಣನವರು ಹೇಳಿದಹಾಗೆ, ಸಿಲ್ಕ್ ಫಂಡ್‌ನಿಂದ ಈ ಹಣವನ್ನು ಅಕೌಂಟೆಂಟ್ ಜನರಲ್‌ರವರು ಅಡ್ಜಸ್ಟ್ ಮಾಡಿದ್ದಾರೆ. ಈ ಸಭೆಯ ಅನುಮತಿಯಿಂದ ಈ ಲೆಕ್ಕವನ್ನು ಕ್ಲೋಸ್ ಮಾಡಲೇಬೇಕಾಗಿರುವುದರಿಂದ ಇದನ್ನು ಸಭೆಯ ಮುಂದೆ ತರಲಾಗಿದೆ. ಇದು ಬಹಳ ಹಳೆಯ ಲೆಕ್ಕವಾಗಿರುವುದರಿಂದ ಮಾನ್ಯ ಸಭೆಯವರು ಇದಕ್ಕೆ ಮನ್ನಣೆ ಕೊಟ್ಟು ಅನುಮತಿ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನೊಂದು ಅಂಶವನ್ನು ಶ್ರೀಮಾನ್ ಲಕ್ಕಪ್ಪನವರು ಹೇಳಿದ್ದಾರೆ. ಮಲೆನಾಡಿನಲ್ಲಿ ಈ ಸಿಲ್ಕ್ ಇಂಡಸ್ಟ್ರೀಗೆ ಪ್ರೋತ್ಸಾಹ ಕೊಡುವುದಕ್ಕಾಗಿ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ಹೇಳಿದರು. 1945ರಲ್ಲಿ ಮಲೆನಾಡಿನ ಕೆಲವು ಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಇದನ್ನು ಮಾಡಲಾಯಿತು. ಆದರೆ ಅದು ಜಯಪ್ರದವಾಗಿ ನಡೆಯಲಿಲ್ಲ. ಎರಡನೆಯದು ಹವಾಗುಣದ ದೆಸೆಯಿಂದ ಈ ಹುಳು ಸರಿಯಾಗಿ ಬೆಳೆಯದೆ ಎಷ್ಟು ಬರಬೇಕೋ ಅಷ್ಟು ಬರದೇಹೋಯಿತು. ಅದೇ ಕಾಲದಲ್ಲಿ ಅರೆ ಮಲೆನಾಡಾದ ಹೊನ್ನಾಳಿ ಕ್ಷೇತ್ರದಲ್ಲಿ ಪ್ರಯೋಗವಾಯಿತು. ಈಗಲೂ ಸಹ ರಿಸರ್ಚ್ ಎಕ್ಸ್‌ಪರ್ಟಿಗೆ ಅಲ್ಲಿ ಪುನಃ ಪ್ರಯತ್ನಮಾಡಿ ನೋಡಿ ಎಂದು ಬೇಕಾದರೆ ಹೇಳುತ್ತೇನೆ. ಆದರೆ ಇದುವರೆಗೂ ಆಗಿರತಕ್ಕ ಪ್ರಯೋಗದಿಂದ ನಮಗೆ ಅಷ್ಟು ಚೆನ್ನಾಗಿ ಆಗುತ್ತದೆ ಎಂದು ಕಂಡು ಬಂದಿಲ್ಲ ಎಂಬ ವಿಷಯವನ್ನು ಸಭೆಯ ಮುಂದೆ ಇಡುತ್ತೇನೆ.

Mr. SPEAKER.—Next Demand.

DEMAND No. 40—IRRIGATION

68 Construction of I.N.E. and D. Works outside the Revenue Account.

Necessity to give employment to local people and contractors in Bhadra Project and Channels works.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಭದ್ರಾಜಲಾಶಯದಲ್ಲಿ ಭದ್ರಾ ಅಣೆಕಟ್ಟು ಕಟ್ಟುತ್ತಾ ಇರುವುದು ತಮಗೆ ತಿಳಿದೇ ಇದೆ. ಇಲ್ಲಿ ನಮ್ಮ ಮೈಸೂರು ಸಂಸ್ಥಾನದ ಅನೇಕ ಕಂಟ್ರಾಕ್ಟರುಗಳು ಕೆಲಸದಲ್ಲಿ ನಿರತರಾಗಿದ್ದಾರೆ. ಈಗ ನೋಡಿದ್ದರಲ್ಲಿ ಡಿಪಾರ್ಟ್‌ಮೆಂಟಿನವರು ಯಾವ ಕಂಟ್ರಾಕ್ಟರುಗಳಿಗೆ ಬರವಣಿಗೆ ಬರುವುದಿಲ್ಲವೋ, ಒದಲಿಕ್ಕೆ ತಿಳಿಯುವುದಿಲ್ಲವೋ ಅಂತಹ ಕಂಟ್ರಾಕ್ಟರುಗಳಿಗೆ—ಹೆಬ್ಬೆಟ್ಟಿನ ಗುರುತು ಹಾಕತಕ್ಕ ಕಂಟ್ರಾಕ್ಟರುಗಳಿಗೆ ಹೆಚ್ಚು ಪುರಸ್ಕಾರ ಕೊಡುತ್ತಾ ಇದ್ದಾರೆ. ಅವರಿಗೆ ಉದ್ಯೋಗ ಸಿಕ್ಕುತ್ತಾ ಇದೆ, ಅದನ್ನು ತಪ್ಪಿಸಬೇಕು ಎಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಕೆಲವು ಕೆಲಸಗಾರರು ತಮ್ಮ ಅನುಕೂಲತೆಗೆ, ತಾವೇ ಎಷ್ಟು ಕೆಲಸಮಾಡಿದರೆ ಎಷ್ಟಾಗುತ್ತದೆ, ಎಷ್ಟು ಕೆಲಸ ಮಾಡಿದರೆ ಅನುಕೂಲ ಎಂಬ ಯಾವ ತಿಳಿವಳಿಕೆಯೂ ಇಲ್ಲದೇ ಇರತಕ್ಕ ಅವನಿಂದ ಸುಮ್ಮನೆ ಇಷ್ಟು ಉದ್ದ ಅಗಿ, ಇದನ್ನು ಮಾಡು ಎಂದು ಹೇಳಿ ಕೆಲಸ ಮಾಡಿಸಿಕೊಂಡು ಬಿಲ್ಲನ್ನು ತಾವೇ ಮಾಡಿ ಅದನ್ನು ಮಂಜೂರು ಮಾಡಿಸಿಕೊಂಡು ಅವನಿಗೆ ಹಣ ಕೊಡತಕ್ಕ ಸಂದರ್ಭದಲ್ಲಿ ಯಾವುದೋ ಒಂದು ಲೆಕ್ಕ ಹಾಗಿದೆ, ಹೀಗಿದೆ ಎಂದು ತಕರಾರು ಮಾಡಿ ಹಣಕೊಡುತ್ತಾರೆ. ಅನೇಕ ವೇಳೆ ಈ ಕಂಟ್ರಾಕ್ಟರುಗಳಿಗೆ ಆ ಪ್ರದೇಶದಲ್ಲಿ ಮನೆ ಮಠ ಏನೂ ಇರುವುದಿಲ್ಲ, ಆಡಳಿತ ಖರ್ಚು ಇರುವುದಿಲ್ಲ. ಎಲ್ಲಿಂದಲೋ ಬರುತ್ತಾರೆ, ಯಾವುದೋ ಜನಗಳನ್ನು, ಕೂಲಿಯವರನ್ನು ಇಟ್ಟುಕೊಂಡು ಅಲ್ಲಿ ಕೆಲಸ ಪ್ರಾರಂಭ ಮಾಡುತ್ತಾರೆ. ಹೀಗೆ ಮೈಸೂರು ದೇಶದಲ್ಲಿ ಕಂಟ್ರಾಕ್ಟರಗಳಾಗಿ ಬಂದು ಈ ರೀತಿ ಅವರು ಜೀವನ ನಡೆಸುತ್ತಾ ಇದ್ದಾರೆ. ಎಲ್ಲಿಂದಲೋ ಬಂದಿರತಕ್ಕ ಈ ಜನರಿಂದ ಪ್ರತಿನಿತ್ಯದ ಖರ್ಚು ಹೆಚ್ಚಾಗಿರುವಾಗಲೂ ಸಹ ಕಡಮೆ ದರದ ಮೇಲೆ ಎಸ್ಟಿಮೇಟು ಅಪ್ರೂವ್ ಮಾಡಿಸಿ ಕೆಲಸ ಪ್ರಾರಂಭವಾದನಂತರ ಅಥವಾ ಕೆಲಸ ಮುಗಿದ ಮೇಲೆ ಇದು ಹಾಗೆ ಆಯಿತು, ಹೀಗೆ ಆಯಿತು, ರಿವೈಸ್ಡ್ ಎಸ್ಟಿಮೇಟು ಆಗಬೇಕು, ಹಳೇ ಎಸ್ಟಿಮೇಟು ಬದಲಾವಣೆ

ಮಾಡಬೇಕು ಎಂದು ಹೇಳಿ ಬದಲಾವಣೆಮಾಡಿಸಿ ಹಣ ಖರ್ಚು ಮಾಡುತ್ತಾ ಇದ್ದಾರೆ ಎಂದು ಅನೇಕರಿಂದ ನನಗೆ ತಿಳಿದು ಬಂದಿದೆ. ವಾಸ್ತವವಾಗಿಯೂ ನಮ್ಮ ಮೈಸೂರಿನಲ್ಲಿರತಕ್ಕವರು ಹಳ್ಳಿನಾಡಿನ ಜನರು ತಮಗೆ ಕೆಲಸ ಇಲ್ಲದೇ ಇರತಕ್ಕ ಸಮಯದಲ್ಲಿ ಅಲ್ಲಿ ಕೆಲಸ ಕೊಡಿ ಎಂದು ಅನೇಕ ಸಂದರ್ಭಗಳಲ್ಲಿ ಕೇಳಿದಾಗ್ಯೂ ಅಲ್ಲಿ ಕೆಲಸ ದೊರೆಯುವುದಿಲ್ಲ. ಅದೇ ಹೊರಗಡೆಯಿಂದ ಅನೇಕ ಜನರು ಇಲ್ಲಿಗೆ ಬಂದು ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು ಇರತಕ್ಕಂಥ ಜನರಿಗೆ ಕಂಟ್ರಾಕ್ಟುಗಳನ್ನು ಕೊಟ್ಟು ಹಳ್ಳಿ ಜನರಿಗೆ ಕೆಲಸ ದೊರೆಯದಂತೆ ಮಾಡಿರತಕ್ಕ ಅನೇಕ ಸಂದರ್ಭಗಳು ಇವೆ. ಹೊನ್ನಾಳಿ ತಾಲ್ಲೂಕಿನಲ್ಲಿ 2,000 ಜನರು ಹೊರಗಡೆಯಿಂದ ಬಂದು ಕೆಲಸ ಮಾಡುತ್ತಾ ಇದ್ದಾರೆ. ಈ ಸಣ್ಣ ಪುಟ್ಟ ಕಂಟ್ರಾಕ್ಟುಗಳಿಗೆ ನಮ್ಮಲ್ಲಿರತಕ್ಕ ಜನರು ಹೋಗಿ, ಸ್ವಾಮಿ ಅಲ್ಲಿ ಚಾನಲ್ ತೆಗೆಯುವ ಕೆಲಸ ಇದೆ, ಇಲ್ಲಿ ಇನ್ನೊಂದು ಕೆಲಸ ಇದೆ, ಆ ಕೆಲಸ ನಮಗೆ ಕೊಡಿ ಎಂದರೆ ಅದನ್ನು ಗಣನೆಗೆ ತೆಗೆದುಕೊಳ್ಳದೆ ಹೊರಗಡೆಯಿಂದ ಬಂದಿರತಕ್ಕ ಯಾವನೋ ಒಬ್ಬನಿಗೆ ಕಂಟ್ರಾಕ್ಟ್ ಕೊಟ್ಟಿರತಕ್ಕ ಸಂದರ್ಭಗಳು ಅನೇಕವಿವೆ. ಈಗ ಭದ್ರಾ ಚಾನಲ್ಲಿನಲ್ಲಿ ಎಡಗಡೆ ಚಾನಲ್ಲಿನ ಕೆಲಸ ನಡೆಯುತ್ತಾ ಇದೆ. ಅಲ್ಲೂ ಕೂಡ ಈ ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೆ ಹಳ್ಳಿಗಾಡಿನ ಜನರು ಬಂದು ಕೆಲಸ ಕೇಳುತ್ತಾರೆ. ಅಂಥ ಸಂದರ್ಭದಲ್ಲಿ ಬೇರೆಯವರಿಗೇ ಕೆಲಸ ಕೊಟ್ಟ ಹಾಗಾಯಿತು, ಹೀಗಾಯಿತು ಎಂದು ಹೇಳುವುದು ಮತ್ತು ಅಳತೆ ಕೆಲಸ ಮಾಡಿರತಕ್ಕದ್ದು ಎಷ್ಟು ಆಗಿದೆಯೋ ಅಷ್ಟು ಹಣ ಕೊಡಿಸಿ ಎಂದರೆ ತಕರಾರು ಮಾಡಿ 10-15 ದಿವಸ ಒಂದು ತಿಂಗಳು ಸತಾಯಿಸಿ ಅವರಲ್ಲಿರುವ ಹಣ ಎಲ್ಲಾ ಖರ್ಚಾಗಿ ಅವರಿಗೆ ನಷ್ಟವಾಗುವಂತೆ ಮಾಡಿ ತೊಂದರೆ ಕೊಟ್ಟಿದ್ದಾರೆ. ಇದೂ ಅಲ್ಲದೆ ಸಣ್ಣ ಪುಟ್ಟ ಕಂಟ್ರಾಕ್ಟರುಗಳು ತಮ್ಮ ಕೈಗಳಗೆ 15-20 ಜನ ಕೂಲಿಗಾರರನ್ನು ಇಟ್ಟುಕೊಂಡು ಕೆಲಸ ಮಾಡತಕ್ಕ ಸಂದರ್ಭದಲ್ಲಿ ಹೊರಗಡೆಯಿಂದ ಬಂದಿರುವ ಕಂಟ್ರಾಕ್ಟರುಗಳು ಒಗ್ಗಟ್ಟಾಗಿ ಈ ಸಣ್ಣ ಕಂಟ್ರಾಕ್ಟರ ಹತ್ತಿರ ಕೆಲಸ ಮಾಡುತ್ತಿರುವ ಕೂಲಿಯವರನ್ನು ತಪ್ಪಿಸಿ ಅವರಿಗೆ ನಷ್ಟವಾಗುವಂತೆ ಮಾಡುತ್ತಾ ಇದ್ದಾರೆ ಮತ್ತು ಅವರು ಮುಂದೆ ಕಂಟ್ರ್ಯಾಕ್ಟು ಮಾಡದೇ ಇರುವುದಕ್ಕೆ ಎಷ್ಟು ಬೇಕೋ ಅಷ್ಟು ಮಾಡುತ್ತಾ ಇದ್ದಾರೆ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದನ್ನೆಲ್ಲಾ ತಪ್ಪಿಸುವುದಕ್ಕೆ ಸರ್ಕಾರದವರು ತಾವಾಗಿಯೇ ಈ ಕಂಟ್ರ್ಯಾಕ್ಟರುಗಳ ವ್ಯವಸ್ಥೆಯನ್ನು ಮಾಡಿ, ಅವರ ಕೈಕೆಳಗೆ ಎಷ್ಟು ಜನ ಇದ್ದಾರೆ ಎಂಬುದಕ್ಕೆ ರಿಜಿಸ್ಟರ್ ಇಟ್ಟು, ಒಬ್ಬರ ಕೂಲಿಕಾರರನ್ನು ಮತ್ತೊಬ್ಬರು ಕರೆದುಕೊಳ್ಳದಂತೆ ನಿರ್ದಿಷ್ಟವಾಗಿ ತೀರ್ಮಾನವನ್ನು ಮಾಡಬೇಕು ಮತ್ತು ಕಂಟ್ರಾಕ್ಟರುಗಳನ್ನು ಒಂದನೇ ಗ್ರೇಡು, ಎರಡನೇ ಗ್ರೇಡು, ಮೂರನೇ ಗ್ರೇಡು ಎಂದು ವಿಂಗಡಿಸಿ ರಿಜಿಸ್ಟರ್ ಮಾಡಿ ಅದರಂತೆ ಕೆಲಸ ನಿರ್ದಿಷ್ಟವಾಗಿ ಹಂಚಬೇಕು. ಈ ಚಾನಲ್ ಎಲ್ಲೆಲ್ಲಿ ಹೋಗಿದೆಯೋ ಅಲ್ಲೆಲ್ಲಾ ಆಯಾ ಗ್ರಾಮಸ್ತರೇ ಕೆಲಸ ಮಾಡಿಸಬೇಕು ಎಂದು ಹೇಳಿದರೆ ಅವರಿಗೆ ಕೆಲಸ ಒದಗುತ್ತದೆ. ಹಾಗೆ ಮಾಡಬೇಕು. ಮದರಾಸು ಪ್ರಾಂತದಿಂದ ಬಂದಿರತಕ್ಕ ಆ ಜನರ ಸಂಪಾದನೆ ಏನು, ಎಷ್ಟರ ಮಟ್ಟಿಗೆ ದುಡ್ಡು ಮಾಡುತ್ತಾ ಇದ್ದಾರೆ ಎಂಬುದನ್ನು ನೋಡಿದರೆ ಲಕ್ಷಾಂತರ ರೂಪಾಯಿಗಳನ್ನು ಅವರು ತಮ್ಮ ಸಂಸಾರಕ್ಕೆ ಕಳುಹಿಸುತ್ತಾ ಇದ್ದಾರೆ ಎಂಬುದು ಪೋಸ್ಟಾಫೀಸಿನ ಮುಖೇನ ಗೊತ್ತಾಗುತ್ತದೆ. ಅದೇ ಇಲ್ಲಿರತಕ್ಕ ನಮ್ಮ ಹಳ್ಳಿಯ ಜನರು ಕೆಲಸ ಇಲ್ಲದೆ ಅಲ್ಲಿ ಇಲ್ಲಿ ಅಲೆಯುತ್ತಾ ಇದ್ದಾರೆ. ಇದನ್ನು ಈ ಹಿಂದೆ ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇನೆ. ಆದ್ದರಿಂದ ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕಂಟ್ರಾಕ್ಟ್ ಕೊಡುವಾಗ ಸಾಧ್ಯವಾದ ಮಟ್ಟಿಗೂ ಆಯಾ ಸ್ಥಳದ ಜನಗಳಿಗೇ ಹೆಚ್ಚು ಅವಕಾಶ ಮಾಡಿಕೊಡಬೇಕೆಂದು ಹೇಳಿ ಸಂಬಂಧಪಟ್ಟ ಇಲಾಖೆಯವರಿಕೆ ತಿಳಿವಳಿಕೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಭದ್ರಾ ಅಣೆಕಟ್ಟಿನ ಬಲ ಭಾಗದ ಚಾನಲ್‌ನಲ್ಲಿ ಈಗ ಯಾವ ತರಹ ಕೆಲಸ ನಡೆಯುತ್ತಾ ಇದೆ ಎಂಬ ಬಗ್ಗೆ ನನ್ನ ಕೆಲವು ಅನುಭವಗಳನ್ನು ಸರ್ಕಾರದ ಮುಂದೆ ಇಡಬೇಕೆಂದು ಬಯಸುತ್ತೇನೆ. ಈ ಭದ್ರಾ ಚಾನಲ್‌ನಲ್ಲಿ ಈಗಾಗಲೇ ಅನೇಕ ಕಂಟ್ರಾಕ್ಟರುಗಳು ಅನೇಕ ಗ್ರೇಡುಗಳ ಕೆಲಸ ಮಾಡುವ ಕಂಟ್ರಾಕ್ಟುಗಳನ್ನು ಹೊಂದಿದ್ದಾರೆ. ಕೆಲವು ಕಂಟ್ರಾಕ್ಟರುಗಳು ಅಧಿಕಾರಿಗಳ ಸಹಕಾರದಿಂದಲೋ ಅಥವಾ ಬೇರೆ ರೂಪಗಳ ಮೂಲಕವೋ ಹೆಚ್ಚು ಗ್ರೇಡುಗಳ ಕಂಟ್ರಾಕ್ಟನ್ನು ಅವನ ಕೈ ಕೆಳಗೆ ಇರತಕ್ಕ ಹೆಬ್ಬೆಟ್ಟು ಒತ್ತತಕ್ಕ ಕೂಲಿಗಾರರ ಹೆಸರಿನಲ್ಲಿ ½ ಗ್ರೇಡು, ¼ ಗ್ರೇಡು ಹೀಗೆಲ್ಲಾ ಮಂಜೂರುಮಾಡಿಸಿಕೊಂಡು ಆ ಮೇಲೆ ಸ್ಥಳೀಯ ಜನರು ಯಾರಾದರೂ ಬಂದರೆ, ನಫೆ ತೆಗೆದುಕೊಂಡು ಅವರಿಗೆ ಸಬ್ ಕಂಟ್ರಾಕ್ಟ್ ಕೊಡಲಿಕ್ಕೆ ಪ್ರಾರಂಭಿಸಿದ್ದಾರೆ. ಇದರಿಂದ ಆಗಿರುವ ದುಷ್ಪರಿಣಾಮವೇನೆಂದರೆ, ಹೆಚ್ಚು ಕಮ್ಮಿ ಸ್ಥಳೀಯವಾಗಿ ಕೆಲಸಮಾಡತಕ್ಕ ಕಂಟ್ರಾಕ್ಟರುಗಳಿಗೂ ಮತ್ತು ಅನುಭವಸ್ಥರಾದ ಅಥವಾ ವಿದ್ಯಾವಂತರಾದ ಕಂಟ್ರಾಕ್ಟರುಗಳಿಗೂ ಕೆಲಸ ಸಿಕ್ಕದೆ ಸರಿಯಾದ ಕಡೆ ಅಥವಾ ಸಾಕಾದಷ್ಟು ಕೆಲಸ ಸಿಕ್ಕದೆಹೋಗಿದೆ. ಇದೂ ಅಲ್ಲದೆ ನನ್ನನ್ನು ಭಾಧಿಸುವ ಇನ್ನೊಂದು ಅನುಮಾನವೇನೆಂದರೆ, ಈ ರೀತಿ ಮಾಡುವುದರಿಂದ ಸರಿಯಾಗಿ ಕೆಲಸ ಮತ್ತು ಅದಕ್ಕೆ ಸರಿಯಾದ ಬಿಲ್ ಆಗುತ್ತಿವೆಯೋ, ಇಲ್ಲವೇ ಎಂಬ ಅನುಮಾನವೂ ಸಹ ಭಾಧಿಸುತ್ತಾ ಇದೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇವೆ. ಅತಿ ಜಾಗ್ರತೆಯಾಗಿ, ಅತಿ ಜರೂರಾಗಿ ಏನಾದರೂ ಮಾಡಿ ಇದಕ್ಕೆ ನಿವಾರಣೆ ಕಂಡುಹಿಡಿಯಬೇಕು. ಈಗಾಗಲೇ ಶ್ರೀ ನಾಗಪ್ಪಶೆಟ್ಟಿಯವರು ಸೂಚನೆ ಮಾಡಿದ್ದಾರೆ. ಈ ಕಂಟ್ರಾಕ್ಟರುಗಳ ಒಂದು ಪಟ್ಟಿಯನ್ನು ತಯಾರು ಮಾಡಿ ಅವರ ಕೈ ಕೆಳಗೆ ಎಷ್ಟು ಜನ ಕೂಲಿಗಾರರು ಇದ್ದಾರೆ ಎಂಬುದನ್ನು ನೋಡಿಕೊಂಡು ಎಕ್ಸಿಕ್ಯುಟಿವ್ ಇಂಜನಿಯರುಗಳು ಅವುಗಳನ್ನು ಹಂಚಿಕೊಟ್ಟಪಕ್ಷದಲ್ಲಿ ನಿಜವಾಗಿಯೂ ಈ ರೀತಿ ಆಗುತ್ತಾ ಇರುವುದು ತಪ್ಪುತ್ತದೆ ಎಂದು ಭಾವಿಸುತ್ತೇನೆ.

4 P.M.

ಶ್ರೀ ಎಸ್. ಸಿದ್ದಪ್ಪ (ಮಾಗಡಿ)—ಶ್ರೀ ಬಸಪ್ಪನವರು ಹೇಳಿದ್ದನ್ನು ಕೇಳಿದ್ದೇನೆ. ಕಂಟ್ರಾಕ್ಟನ್ನು ವಿದ್ಯಾವಂತರಿಗೆ ಮಾತ್ರ ಕೊಡಬೇಕು, ಅವಿದ್ಯಾವಂತರಿಗೆ ಕೊಡಕೂಡದು ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ವಿದ್ಯಾವಂತರಿಗೆ ಕಂಟ್ರಾಕ್ಟ್ ಕೊಡುವುದು ಸ್ವಾಭಾವಿಕವಾದರೂ ಬೇಲೂರು ಮತ್ತು ಹಳೇಬೀಡುಗಳಲ್ಲಿರುವ ಕಟ್ಟಡಗಳನ್ನು ಕಟ್ಟಿದವರು ಮತ್ತು ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿದವರು ಅವಿದ್ಯಾವಂತರೇ ಹೊರತು ವಿದ್ಯಾವಂತರಲ್ಲ. ವಿದ್ಯಾವಂತರಿಗೇ ಹೆಚ್ಚು ಮಾನ್ಯತೆ ಕೊಟ್ಟರೆ ಬಡವರು, ಕೂಲಿ ಮಾಡುವವರು ಮುಂತಾದವರ ಗತಿಯೇನು? ದೇಶದಲ್ಲಿ

(ಶ್ರೀ ಎಸ್ ಸಿದ್ದಪ್ಪ)

ಬಡವರ ಸಂಖ್ಯೆ ಜಾಸ್ತಿಯಾಗಿದೆ. ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಒಗ್ಗಟ್ಟಾಗಿ ಹೆಚ್ಚು ದರ ಪಡೆಯಲು ಪ್ರಯತ್ನಮಾಡುತ್ತಾರೆ. ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ, ಬಡವರಿಗೆ ಕಂಟ್ರಾಕ್ಟು ಕೊಡುವುದು ಪ್ರಜಾಪ್ರಭುತ್ವ ಬಂದಮೇಲೆ ಹೆಚ್ಚಾಗಿದೆ. ಶ್ರೀ ಮರಿಯಪ್ಪನವರು ಸರ್ಕಾರದಲ್ಲಿದ್ದಾಗ ಬಡವರಿಗೆ ಮತ್ತು ಕೆಲಸ ನಡೆಯುವ ಊರುಗಳಲ್ಲಿರುವ ಕೆಲಸಗಾರರಿಗೆ ಅಲ್ಲಿನ ಕೆಲಸಗಳನ್ನು ಕೊಡುತ್ತಿದ್ದರು. ಅದರಿಂದ ಅವರು ಕೆರೆಕಟ್ಟೆಗಳನ್ನು ಚೆನ್ನಾಗಿ ಕಟ್ಟಿದ್ದಾರೆ. ಅದೇ ರೀತಿಯಲ್ಲಿ ಈ ಸರ್ಕಾರದವರೂ ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಬಡವರ ಮೇಲೆ ಕರುಣೆಯಿಟ್ಟು ಅವರಿಗೆ ಕಂಟ್ರಾಕ್ಟುಗಳು ದೊರೆಯಲು ಹೆಚ್ಚಿನ ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಪಡಿಸಿ ಮಾನ್ಯ ಅಧ್ಯಕ್ಷರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಭಾಷಣ ಮುಕ್ತಾಯಗೊಳಿಸುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮಾನ್ಯ ಮಿತ್ರರಾದ ಶ್ರೀ ನಾಗಪ್ಪಶೆಟ್ಟರು ಹೇಳಿರುವುದು ಬಹಳ ಸಾಧುವಾಗಿದೆ. ನಮ್ಮ ಜಿಲ್ಲೆಯ ಸುತ್ತುಮುತ್ತ ಕಂಟ್ರಾಕ್ಟುಮಾಡುವವರು ಯಾರೂ ಇಲ್ಲವೆ ಎಂಬುದನ್ನು ಯೋಚನೆಮಾಡಬೇಕು. ಅಲ್ಲಿ ಬೇಕಾದ ಕೆಲಸಗಾರರಿರುವಾಗ ಇತರ ಜಿಲ್ಲೆಗಳವರಿಗೆ ಮತ್ತು ಹೊರ ದೇಶದವರಿಗೆ ಕಂಟ್ರಾಕ್ಟನ್ನು ವಹಿಸುವುದು ಉಚಿತವಲ್ಲ. ನಮ್ಮ ಜಿಲ್ಲೆಯಲ್ಲಿ ದಕ್ಷರಿದ್ದಾರೆ, ಒಳ್ಳೆಯ ಕಂಟ್ರಾಕ್ಟರುಗಳಿದ್ದಾರೆ. ಆದರೆ ಅವರನ್ನು ಬಿಟ್ಟು ಯಾರಿಗೋ ಹೆಚ್ಚು ಪ್ರತಿಫಲ ಕೊಡಲು ಕೆಲಸಗಳನ್ನು ಬೇರೆಕಡೆಯವರಿಗೆ ವಹಿಸಿದ್ದಾರೆ. ಇದು ಸರಿಯಲ್ಲ. ನಮ್ಮ ಕಡೆ ಬಂಡವಾಳಗಾರರೂ ಜಾಸ್ತಿಯಿದ್ದಾರೆ, ಅನೇಕ ತಾಲ್ಲೂಕುಗಳಲ್ಲಿ ಮಳೆ ಬೆಳೆ ಇಲ್ಲ. ಸರ್ಕಾರದ ದರ ಕೊಟ್ಟರೆ ಸಾಕು, ಕೆಲಸಮಾಡುತ್ತಾರೆ. ಮಂತ್ರಿಗಳು ಈ ವಿಚಾರವನ್ನು ಪರಿಶೀಲಿಸಬೇಕು.

*ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ, ಅಧ್ಯಕ್ಷರೆ, ಕೆಲಸವನ್ನು ಮೈಸೂರು ದೇಶದ ಕಂಟ್ರಾಕ್ಟರುಗಳಿಗೆ ಮತ್ತು ಮೈಸೂರು ದೇಶದ ಕೂಲಿಗಾರರಿಗೆ ಕೊಡುವ ತತ್ವವನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಭದ್ರಾ ಜಲಾಶಯದಲ್ಲಿ ಕನ್‌ಸ್ಟ್ರಕ್ಷನ್ ಕೆಲಸವನ್ನು ಇಲಾಖೆಯವರು ಅಮಾನಿಯಾಗಿ ಮಾಡಿಸುತ್ತಾರೆ. ಉಳಿದ ಎಲ್ಲಾ ಕೆಲಸಗಳನ್ನೂ ಕೂಡ ಪೀಸ್ ವರ್ಕ್ ಸಿಸ್ಟಂ ಪ್ರಕಾರ ಕಂಟ್ರಾಕ್ಟರುಗಳಿಂದ ಮಾಡಿಸುತ್ತಿದ್ದೇವೆ. ಸ್ಥಳೀಯ ಕೆಲಸಗಾರರೆಷ್ಟು ಜನ ಬರುತ್ತಾರೆ, ಅವರು ಖಾಯಮಾಗಿ ಕೆಲಸಮಾಡುತ್ತಾರೆಯೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಮಾನ್ಯ ಅಧ್ಯಕ್ಷರಿಗೆ ಗೊತ್ತಿರುವಂತೆ ಅವರ ತಾಲ್ಲೂಕಿನಲ್ಲಿ ಹೋದ ವರ್ಷ ತುಂಗಾ ಅಣೆಕಟ್ಟಿನ ಕೆಲಸ ಪ್ರಾರಂಭಮಾಡಲಾಯಿತು. ಕೆಲವು ತಿಂಗಳ ಕಾಲ ಅಲ್ಲಿನವರು ಕೆಲಸಕ್ಕೆ ಬರುವುದಕ್ಕೆ ಷುರುಮಾಡಿದರು. ಯಾವಾಗ ಫಸಲು ಕಟಾವು ಕಾಲ ಬಂತೋ ಆಗ ಅವರು ಕೆಲಸಮಾಡುವುದನ್ನು ನಿಲ್ಲಿಸಿ ಹೊಲಕ್ಕೆ ಹೋದರು. ಇಂಥ ಪ್ರಾಜೆಕ್ಟುಗಳಲ್ಲಿ ಖಾಯಮಾಗಿ ಕೆಲಸಮಾಡುವ ಜನರು ಬೇಕು. ನಮ್ಮ ಮೈಸೂರಿನವರು ಅನ್ಯಥಾ ಭಾವಿಸಬಾರದು. ಮೈಸೂರು ಜನರು ಅಂಥ ಕಡೆ ಕೆಲಸಮಾಡುವುದು ಅಪರೂಪ. ಮನಸ್ಸುಮಾಡಿದರೆ ವರ್ಷದಲ್ಲಿ 3-4 ತಿಂಗಳು ಕೆಲಸ ಮಾಡಿ ಆಮೇಲೆ ಗದ್ದೆ ಅಥವಾ ಹೊಲದ ಕಡೆ ಹೋಗುತ್ತಾರೆ. ಅದು ತಪ್ಪು ಎಂದು ಹೇಳುವುದಿಲ್ಲ. ಸಾಧಾರಣವಾಗಿ ಜಲಾಶಯಗಳಲ್ಲಿ ಕೆಲಸಮಾಡುವವರು ಹೊರಗಿನವರು. ಇತ್ತೀಚೆಗೆ ಮದ್ರಾಸಿನಿಂದ ಕೂಡ ಬಂದಿದ್ದಾರೆ.

ಶ್ರೀ ನಾಗಪ್ಪಶೆಟ್ಟರು ಮಾತನಾಡುವಾಗ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡಬೇಕೆಂದು ಹೇಳಿದರು. ಆ ವಿಚಾರ ಎರಡುಮೂರು ವರ್ಷಗಳಿಂದ ಸರ್ಕಾರದ ಪರಿಶೀಲನೆಯಲ್ಲಿದೆ. ರಿಜಿಸ್ಟ್ರೇಷನ್ ಮಾಡಿದರೆ ಸಾಧಕ ಬಾಧಕ ಎರಡೂ ಇವೆ. ರಿಜಿಸ್ಟ್ರೇಷನ್ ಮಾಡಿದರೆ ಅವರೆಲ್ಲಾ ಒಗ್ಗಟ್ಟಾಗುವುದಕ್ಕೆ ಅವಕಾಶ ಕೊಟ್ಟಂತಾಗುವುದರಿಂದ ದೇಶಕ್ಕೆ ಅಪಾಯವೆಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ ರಿಜಿಸ್ಟ್ರೇಷನ್ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಪರಿಶೀಲಿಸುತ್ತಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರಿಜಿಸ್ಟರ್ಡ್ ಕಂಟ್ರಾಕ್ಟರುಗಳ ಪಟ್ಟಿಮಾಡಿ ಎಂದು ನಾನು ಹೇಳುವುದು.

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಆ ಮೇಲೆ ಮೈಸೂರು ದೇಶದ ಕಂಟ್ರಾಕ್ಟರುಗಳಿಗೆ ಕೊಡುವುದಿಲ್ಲ, ಇತರರು ಪೈಪೋಟಿಯಿಂದ ಮೈಸೂರು ದೇಶದ ಕಂಟ್ರಾಕ್ಟರುಗಳ ಹತ್ತಿರ ಕೆಲಸಮಾಡುವ ಕೂಲಿಗಾರರನ್ನು ಚದರಿಸುತ್ತಿದ್ದಾರೆ ಎಂದು ಹೇಳಿದರು. ಇದಕ್ಕೆ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಅವರಿಗೆ ತಾಕತ್ತಿದ್ದರೆ ಕೂಲಿಗಳನ್ನು ಶೇಖರಿಸಿ ಕೆಲಸಮಾಡುತ್ತಾರೆ. ಆ ಶಕ್ತಿಯಿಲ್ಲದಿದ್ದರೆ ಸರ್ಕಾರದವರೇನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಅಧಿಕಾರಿಗಳಿಗೆ ಸೂಕ್ತವಾಗಿ ಹೇಳಿದ್ದೇನೆ; ಸಾಮಾನ್ಯವಾಗಿ ಸ್ಥಳದ ಕೆಲಸಗಾರರಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, ಪ್ರೋತ್ಸಾಹ ಕೊಡಬೇಕು ಎಂದು. ಅದು ಅಗತ್ಯವೆಂದು ಹೇಳಿದೆ. ಅಲ್ಲಲ್ಲಿ ಸಣ್ಣಪುಟ್ಟ ಕೂಲಿಯವರನ್ನು ಷರೀಕುಮಾಡಿಕೊಂಡು ಸಣ್ಣಪುಟ್ಟ ಅಧಿಕಾರಿಗಳು ಅಲ್ಪಸ್ವಲ್ಪ ಸರ್ಕಾರಕ್ಕೆ ದ್ರೋಹಮಾಡುತ್ತಾರೆಂದು ಕೆಲವು ಕಡೆ ನನ್ನ ಗಮನಕ್ಕೆ ಬಂದಿದೆ. ನಾನು ಅವರಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಮಾನ್ಯ ಸದಸ್ಯರು ಸ್ವಲ್ಪ ನಮಗೆ ಸಹಾಯಮಾಡಿದರೆ ಎಷ್ಟು ಉಗ್ರ ಕ್ರಮ ಬೇಕೋ ಅಷ್ಟನ್ನು ತೆಗೆದುಕೊಳ್ಳಲು ಸಿದ್ಧವಾಗಿದ್ದೇನೆ. ರುಜುವಾತಿಲ್ಲದೆ ಯಾರಮೇಲೂ ಉಗ್ರಶಿಕ್ಷೆ ವಿಧಿಸುವುದಕ್ಕಾಗುವುದಿಲ್ಲ. ಶ್ರೀ ನಾಗಯ್ಯರೆಡ್ಡಿಯವರಿಗೆ ಇದು ಚೆನ್ನಾಗಿ ಗೊತ್ತಿರಬೇಕು. ಸುಮ್ಮನೆ ಲೋಕಾಭಿರಾಮವಾಗಿ ಹೇಳಿದರೆ ಸ್ವಲ್ಪವೂ ಪ್ರಯೋಜನವಾಗುವುದಿಲ್ಲ. ಇಂಥಕಡೆ ಅಚಾತುರ್ಯ ನಡೆಯುತ್ತಿದೆಯೆಂದು ಸ್ವಲ್ಪಮಟ್ಟಿಗಾದರೂ ರುಜುವಾತು ಒದಗಿಸುವುದಕ್ಕೆ ಪ್ರಯತ್ನಮಾಡಿದರೆ ನಮ್ಮ ಭಾಗದ ಕೆಲಸಮಾಡುವುದಕ್ಕೆ ನಾವು ಸದಾ ಸಿದ್ಧರಾಗಿದ್ದೇವೆ. ಇನ್ನು ಮುಂದೆಯೂ ಕೂಡ ಸ್ಥಳೀಯ ಕಂಟ್ರಾಕ್ಟರುಗಳಿಗೆ ಮತ್ತು ಸ್ಥಳದ ಕೂಲಿಗಾರರಿಗೆ ಸಾಕಾದಷ್ಟು ಪ್ರೋತ್ಸಾಹ ಕೊಡುವಂತೆ ಪುನಃ ತಿಳಿಸುತ್ತೇವೆಂದು ಭರವಸೆಕೊಡುತ್ತೇನೆ.

Nugu Gates.

Sri S. SRINIVASA IYENGAR (T.-Narasipur).—Mr. Speaker, I believe that the constructing of a reservior across Nugu was estimated twelve years ago to cost about 80 lakhs. To-day, according to the revised estimate, it comes to 2·2 crores. Sir,

it is very necessary that we must provide funds immediately to see that the work is executed ; there is no difference of opinion about that. But, I should like to know why the work was delayed. Sir, as far as I know, the delay is about the gates. In the Explanatory Note I see an observation that as they would be receiving the gates in the month of December 1954, they want some funds to meet the Bill. Well, Sir, about a few years ago the department thought of changing the design. Prior to that they had already called for tenders for the gates as per old design. That tender was for about 3 lakhs. If they had only got them in those days, they could have got them within 3 or 4 lakhs and the work would have been completed by now. There was a hitch and Government was not able to decide over that issue for a number of years and now they have changed the design and called for tenders. It is a separate design ; there is a change in the design. Perhaps, now, it will be costing more than what it used to be before. As I was talking to the Hon'ble Minister a few minutes ago, I learnt that it may cost a little less because of the change in the design. At Nugu, I have seen, walls of the dam constructed leaving huge place for the introduction of the gates. Further, I want to know why there has been so much of delay for the finalisation of the design, and the completion of the project. I also want to know the reason for the inflation of the estimate from 80 lakhs to 2·2 crores and the time that Government would take to complete the project.

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಈ ನುಗು ಪ್ರಾಜೆಕ್ಟಿಗೆ ಸಂಬಂಧಪಟ್ಟಂತೆ ನಂಜನಗೂಡು ಕಸಬದಲ್ಲಿರತಕ್ಕಂಥ ಅರಸಿನಕೆರೆಯವರೆಗೆ ಕಾಲುವೆ ತೆಗೆಯುತ್ತಿದ್ದಾರೆ. ಇನ್ನು ಸ್ವಲ್ಪ ದಿವಸಕ್ಕೆ ನಾಲೆ ತೆಗೆಯುವುದು ಅರಸಿನಕೆರೆ ಮುಟ್ಟಬಹುದು. ಈ ಕಾಲುವೆ ತೆಗೆಯುವಾಗ ಅದರ ಜೊತೆಯಲ್ಲೇ ನಾಲೆಯ ದಕ್ಷಿಣ ಭಾಗದಲ್ಲಿರುವ ಜಮೀನುಗಳವರು ಮತ್ತು ಪಕ್ಕದಲ್ಲಿರುವ ಹಳ್ಳಿಗಳವರು ತಿರುಗಾಡುವುದಕ್ಕೆ ಮತ್ತು ಅವರ ವಾಹನ ಸೌಕರ್ಯಕ್ಕೆ ಕೆಲವು ಕಡೆ ಅಂದರೆ ನುಗುವಿನಿಂದ ಅರಸಿನಕೆರೆಯವರೆಗೆ ಸೇತುವೆ ಕಟ್ಟುತ್ತಿದ್ದಾರೆ. ಈಗ ಆ ಬಗ್ಗೆ ಎಸ್ಟಿಮೇಟಾಗಿ ಕೆಲಸ ನಡೆಯುತ್ತಿದೆ. ನನಗೆ ಗೊತ್ತಿರುವ ಹಾಗೆ ಈಗ ಪ್ರಪೋಸ್ ಮಾಡಿರುವುದು, ಈಗಿನ ಎಸ್ಟಿಮೇಟಿನ ಪ್ರಕಾರ ಸೇತುವೆ ಕಟ್ಟುವುದು ಸಾಲದು. ಇದನ್ನು ಆಗಲೇ ಮಾನ್ಯ ಮಂತ್ರಿಗಳಿಗೆ ಕೂಡ ತಿಳಿಸಿದ್ದೇನೆ. ಈಗಿರುವ ಎಸ್ಟಿಮೇಟನ್ನು ರಿವೈಜ್ ಮಾಡಿ ಅವಶ್ಯಕವಾಗಿರುವ ಇತರ ಕಡೆಗಳಲ್ಲೂ ಸೇತುವೆ ಕಟ್ಟಬೇಕಾದ್ದು ಅವಶ್ಯಕ. ಒಂದು ಸ್ಥಳದಲ್ಲಿ ಸೇತುವೆ ಹಾಕಲು ಹುಕುಂ ಸಾದರಾಗಿದೆ. ಮೂರು ನಾಲ್ಕು ಗ್ರಾಮಗಳವರಿಗೆ ಅನುಕೂಲವಾಗುತ್ತದೆ. ಅವರ ಮನೆಗಳು ನಾಲೆಯಿಂದ ಬರುವ ಜೌಗು ನೀರಿನ ಪ್ರದೇಶದಲ್ಲಿರುವುದರಿಂದ ಸೇತುವೆ ಕಟ್ಟಿದ್ದರೆ ಮೇಲೆ ಹೋಗಿ ವಸತಿ ಗೃಹಗಳನ್ನು ಬದಲಾಯಿಸಿ ಅಲ್ಲಿ ವಾಸಮಾಡಬಹುದು. ಈ ಸಂದರ್ಭದಲ್ಲಿ ಸರ್ಕಾರದವರು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಮೀಟಿಂಗ್ ಮಾಡಿದಾಗಲೂ ಈ ವಿಚಾರ ಹೇಳಿದೆ. ಜನ ಜಾನುವಾರುಗಳು ತಿರುಗಾಡಲು ಸೇತುವೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದರ ಬದಲು ಗಾಡಿ ತಿರುಗಾಡಲು ಸೇತುವೆ ಆಗಬೇಕು. ಕಡಜೆಟ್ಟಿ, ಎಲೆಹಳ್ಳಿ ಇಂಥ ಸ್ಥಳಗಳಲ್ಲಿ ಸೇತುವೆ ಅವಶ್ಯಕ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ಸೇತುವೆಗೆ ಸಂಬಂಧಪಟ್ಟ ಅಂದಾಜನ್ನು ತಿದ್ದುಪಡಿ ಮಾಡಿ ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿಗೆ ಸೇತುವೆಗಳನ್ನು ಮಂಜೂರು ಮಾಡಬೇಕು.

ಇನ್ನೊಂದು ವಿಷಯ. ನುಗು ಪ್ರಾಜೆಕ್ಟ್ ಸಂಬಂಧದಲ್ಲಿ ಅಲ್ಲಿ ಕೆಲಸ ಮಾಡುವ ಇಂಜಿನಿಯರಿಂಗ್ ಇಲಾಖೆಯವರಿಗೆ ಮತ್ತು ಇತರರಿಗೆ ಸುಮಾರು 60 ವಸತಿ ಗೃಹಗಳನ್ನು ನಿರ್ಮಿಸಿದ್ದಾರೆ. ಸೇತುವೆ ಕೆಲಸ ಮುಗಿದಮೇಲೆ ಅಷ್ಟು ಜನರು ಅಲ್ಲಿರುವುದಿಲ್ಲ. ಸೇತುವೆ ಪೂರೈಸಿ ನೀರು ಬಿಟ್ಟಮೇಲೆ ಅಲ್ಲಿ 5 ಮನೆ ಬೇಕಾಗಬಹುದು, ಉಳಿದ ಮನೆಗಳು ನಿರರ್ಥಕವಾಗುತ್ತವೆ. ಆದ್ದರಿಂದ ಅವನ್ನು ಯಾವ ರೀತಿ ಸರ್ಕಾರದವರು ಉಪಯೋಗಿಸುತ್ತಾರೆಂಬುದನ್ನು ತಿಳಿಯಬೇಕೆಂಬ ಆಸೆಯಿದೆ.

Sri Kadidal MANJAPPA.—Mr. Speaker, I am very glad to inform my friend Sri Srinivasa Iyengar that the design of the gates has been finalised and we are likely to get the gates by the end of December or the middle of January. No doubt there was some delay in bringing out the design. That was because there was difference of opinion between the engineers.

Sri S. SRINIVASA IYENGAR.—Persisting for five years ?

Sri Kadidal MANJAPPA.—No, only for six months. I had to go and tell the members of the standing technical advisory committee and the design was finalised.

A MEMBER.—Was it not finalised in 1953 at the annual meeting ?

Sri Kadidal MANJAPPA.—Yes, my friend was present at the time. It was finalised and immediately thereafter enquiry was instituted by the Stores Purchase Committee. There was delay in securing import permit. After some correspondence in the matter the permit was secured and subsequently arrangements have been made to secure the gates.

(SRI KADIDAL MANJAPPA.)

Sri Srinivasa Iyengar said that on account of the change in the design we are likely to lose some money. But I have to inform him that it is the other way. According to the old design, there was provision for three under sluices. And the estimated cost was Rs. 10 lakhs for the three gates. According to the modified design, the proposal is to instal one deep sluice gate and two curb gates. On account of this design the cost goes down to Rs. 4·6 lakhs. Therefore on account of the change in the design we have saved Rs. 5·4 lakhs.

My friend referred to the change in the revised estimate. It is quite natural. Prices went up and therefore naturally the estimate had to be revised.

My friend, (Sri Linganna,) brought to my notice that there is need for constructing some additional bridges to channels. His suggestion will be taken note of and the needful will be done.

(Sri G. Papanna rose.)

Mr. SPEAKER.—Now I bring to the notice of Hon'ble Members that on account of the limited time at our disposal and as we have to close the debate on all the Demands at Five of the Clock, I will strictly adhere to the time limit.

DEMAND No. 42—ELECTRICITY SCHEMES.

81-A.—Capital Account of Electricity Schemes Outside the Revenue Account.

Inadequate provision of electric power for Irrigation in Kolar District.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಸ್ವಾಮಿ, ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ವಿದ್ಯುಚ್ಛಕ್ತಿ ಒದಗಿಸಲು ಸುಮಾರು ಐವತ್ತು ಲಕ್ಷ ರೂಪಾಯಿಗಳಷ್ಟು ಸಾಲ ದೊರೆಯುತ್ತಾ ಇದ್ದರೂ, ಅದು ಕೋಲಾರ ಜಿಲ್ಲೆಗೆ ಎಷ್ಟುಮಟ್ಟಿಗೆ ಉಪಯೋಗವಾಗುತ್ತಿದೆಯೆಂಬುದನ್ನು ನೋಡಿದರೆ ಅದು ಬಹಳ ನಿರಾಶಾಜನಕವಾಗಿದೆ. ಅಲ್ಲಿ ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದರಲ್ಲಿ ಪೂರ್ತಿ ಒಂದು ಪಂಪ್ setಗೆ ಸಹ ವಿದ್ಯುಚ್ಛಕ್ತಿ ಒದಗಿಸಿಲ್ಲ. ಕೇವಲ ನೂರು-ಇನ್ನೂರು ರೂಪಾಯಿ ಬಂಡವಾಳ ಹಾಕಿದ್ದರೂ ಒಂದು H. P. ವಿದ್ಯುಚ್ಛಕ್ತಿಯನ್ನು ಕೊಡಬೇಕು. ಹೀಗಿರುವಲ್ಲಿ ಸಾವಿರ ರೂಪಾಯಿ ಖರ್ಚುಮಾಡಿರುವಕಡೆ ಸಹ ಒಂದು H. P. ವಿದ್ಯುಚ್ಛಕ್ತಿಯನ್ನೂ ಒದಗಿಸದೇ ಇರುವುದು ಶೋಚನೀಯವಾದುದು. ಕೋಲಾರ ಜಿಲ್ಲೆಯಲ್ಲಿ ಎಷ್ಟುಮಟ್ಟಿಗೆ return ಬರುತ್ತಿದೆಯೆಂಬುದನ್ನು ಸರ್ಕಾರದವರು ಮನಗಂಡು, ಆ ಬಗ್ಗೆ ಪೂರ್ಣ ಅಂಕಿ ಅಂಶಗಳನ್ನು ಶೇಖರಿಸಿದರೆ ತಮಗೇ ಈ ಜಿಲ್ಲೆಯಿಂದ ಒಂದು ಲಕ್ಷ ರೂಪಾಯಿ return ಬರುತ್ತಿದೆಯೆಂಬುದು ಗೊತ್ತಾಗುತ್ತದೆ. ಹಾಗಿದ್ದರೂ ಸಹ ಸರ್ಕಾರದವರು ಇದನ್ನು ಗಮನಿಸದೆ ಈ ವಿಚಾರದಲ್ಲಿ ಪೂರ್ತಿ ಒಂದು pump setಗೆ ಸಹ ವಿದ್ಯುಚ್ಛಕ್ತಿ ಕೊಡದೇ ಇರುವುದರಿಂದ ರೈತರಿಗೆ ತೊಂದರೆಯಾಗಿದೆ. ಈ ಬಗ್ಗೆ ತಕ್ಕ ಪರಿಹಾರವನ್ನು ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡೆ).—ಸ್ವಾಮಿ, ಈ ವಿದ್ಯುಚ್ಛಕ್ತಿ ಸರಬರಾಜಿನ ವಿಚಾರದಲ್ಲಿ ಎಷ್ಟೋ ಸಾರಿ ಮಂತ್ರಿಗಳು ಭರವಸೆಗಳನ್ನು ನೀಡಿರುತ್ತಾರೆ. ಆದರೂ ಸಹ ಒಂದು ಭರವಸೆಯನ್ನೂ ಸಹ ಅವರು ಉಳಿಸಿಕೊಂಡಿಲ್ಲ. ಯಾವಾಗಲೂ 25 ಸೈಕಲ್‌ನ್ನು 50 ಸೈಕಲ್‌ಗೆ convert ಮಾಡುತ್ತೇವೆಂದು ಸಬೂಬು ಹೇಳಿಕೊಂಡು ಆ ನೆಪದಮೇಲೆ ವಿದ್ಯುಚ್ಛಕ್ತಿಯನ್ನೊದಗಿಸುವುದನ್ನು ಮುಂದುವರಿಸಿಕೊಂಡೇ ಬಂದಿರುತ್ತಾರೆಯೇ ಹೊರತು ಅವರು ಇತ್ತ ಭರವಸೆಯನ್ನೇನೂ ಈಡೇರಿಸಿಲ್ಲ. ಸೆಂಟ್ರಲ್ ಗವರ್ನ್‌ಮೆಂಟ್ ವಿದ್ಯುಚ್ಛಕ್ತಿ ಸರಬರಾಯಿಗಾಗಿ ಗ್ರಾಂಟು ಬರುತ್ತಿದ್ದರೂ ಸಹ, ಕೆ. ಜಿ. ಎಫ್., ಜೋಗ್ installation ಇವುಗಳಿಗೆ ವಿನಿಯೋಗಿಸುತ್ತಿದ್ದಾರೆಯೇ ಹೊರತು ಅಭಾವದ ಡಿಸ್ಟ್ರಿಕ್ಟ್‌ಗಳಿಗೆ ಖಂಡಿತವಾಗಿಯೂ ಉಪಯೋಗಿಸುತ್ತಿಲ್ಲ. ಇದನ್ನು ನಾನು ಅಂಕಿ ಅಂಶಗಳನ್ನರಿತು ಹೇಳುತ್ತಿದ್ದೇನೆ. ಸಾಮಾನ್ಯವಾಗಿ ನನಗೆ ತಿಳಿದಮಟ್ಟಿಗೆ ಒಂದು ಸಾವಿರ ರೂಪಾಯಿಗೆ ಒಳಪಟ್ಟ pump setಗೆಲ್ಲಾ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕೆಂದು ನಿಯಮವಿದ್ದರೂ, ಕೇವಲ ನಾನೂರು, ಐನೂರು ರೂಪಾಯಿಗಳ pump setಗಳಿಗೂ ವಿದ್ಯುಚ್ಛಕ್ತಿ ಒದಗಿಸಿಲ್ಲ. ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ನೀರಾವರಿಗಾಗಿ ವಿದ್ಯುಚ್ಛಕ್ತಿಯನ್ನು ಎಷ್ಟುಬಾರಿ ಕೇಳಿದರೂ ಒದಗಿಸದೆ ಸರ್ಕಾರದವರು ನಿಧಾನ ಮಾಡುತ್ತಿರುವುದು ನೋಡಿದರೆ, ಆ ಡಿಸ್ಟ್ರಿಕ್ಟ್‌ನಲ್ಲಿ non-Congress ಹೆಚ್ಚಾಗಿರುವುದರಿಂದ ಈ ರೀತಿ ಅನ್ಯಾಯಮಾಡುತ್ತಿದ್ದಾರೋ ಏನೋ ಎಂದು ಭಾವಿಸಬೇಕಾಗಿದೆ. ಜನತೆಗೆಮಾತ್ರ ಅನ್ಯಾಯಮಾಡದೆ ಈ ವಿಚಾರದಲ್ಲಿ ಸರ್ಕಾರದವರು ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು-ಉತ್ತರ).—ಸ್ವಾಮಿ, ಯಾವ ಯಾವ ಬಾಬಿಗೆ ತುರ್ತಾಗಿ ವಿದ್ಯುಚ್ಛಕ್ತಿ ಬೇಕೆಂಬುದನ್ನು ಮನಗಂಡು ಅದನ್ನು ಅಗತ್ಯವಾಗಿ ಒದಗಿಸಿಕೊಡುವ ಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ಸೇರಿದುದು ಎಂದು ನನ್ನ ಖಚಿತ ಅಭಿಪ್ರಾಯ. ವಿದ್ಯುಚ್ಛಕ್ತಿ ಸಾಲದು ಎಂಬ ಕಾರಣವು ಅಷ್ಟಾಗಿ ಸರಿದೋರುವಂತೆ ನನಗೆ ಕಾಣುವುದಿಲ್ಲ. ಅವಶ್ಯಕವಾಗಿ ನಮಗೇ ಬೇಕಾಗಿರುವ ವಿದ್ಯುಚ್ಛಕ್ತಿಯನ್ನು ಮೊದಲ ಒದಗಿಸಿಕೊಂಡು ಅನಂತರ ಇತರರಿಗೆ ಒದಗಿಸಿಕೊಡುವ ವ್ಯವಸ್ಥೆ ಮಾಡಿಕೊಳ್ಳುವುದು ಈ ಇಲಾಖೆಯ ಮೇಲಿನ ಪೂರ್ಣ ಜವಾಬ್ದಾರಿಯಾಗಿದೆ. ತತ್ರಾಪಿ ಈ ದಿನ ತಾಲ್ಲೂಕುಗಳಲ್ಲಿ ಜನರು ವಿದ್ಯುಚ್ಛಕ್ತಿ ಅಭಾವದಿಂದ ಒದ್ದಾಡುತ್ತಿರುವುದನ್ನು ನೋಡಿದರೆ ನಮಗೆ ಭಯವಾಗುತ್ತದೆ. ವಿದ್ಯುಚ್ಛಕ್ತಿ ಅಭಾವದ ಪ್ರದೇಶಗಳಿಗೆ ಅತಿ ತ್ವರಿತವಾಗಿ ವಿದ್ಯುಚ್ಛಕ್ತಿಯನ್ನು

ಒದಗಿಸುವ ಪೂರ್ಣ ಜವಾಬ್ದಾರಿ ನಮ್ಮ ಸರ್ಕಾರದ್ದು, ಅವರು ಈ ಕೆಲಸವನ್ನು ಅತ್ಯಗತ್ಯವಾಗಿ ಅತಿ ಜರೂರಾಗಿ ಮಾಡಬೇಕೆಂದು ಕೋರುತ್ತೇನೆ.

Necessity to supply power to Irrigation pump-sets in Kodihalli Hobli, Kanakapura Taluk.

ಶ್ರೀ ಎಸ್. ಕರಿಯಪ್ಪ (ವಿರೂಪಾಕ್ಷಪುರ).—ಸ್ವಾಮಿ, ನನ್ನ ಖೋತಾ ಸೂಚನೆ ಹೀಗಿದೆ :

Sri S. SRINIVASA IYENGAR.—On a point of order, sir. Cut motions are not being moved. But the Hon'ble Member is reading out the cut motion.

Mr. SPEAKER.—He is only reading and not moving; he will only speak on the subject matter of the cut motion.

ಶ್ರೀ ಎಸ್. ಕರಿಯಪ್ಪ—ಸ್ವಾಮಿ, ಕಾರ್ಕಾನಹಳ್ಳಿ ಆಹಾರ ಧಾನ್ಯಗಳ ವಿಚಾರದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ನ ಕಣಜ; ಇಲ್ಲಿಂದ ರಾಗಿ, ಈರುಳ್ಳಿ, ಕಡಲೇಕಾಯಿ ಇವುಗಳೆಲ್ಲಾ ವಿಶೇಷವಾಗಿ ಬೆಂಗಳೂ ಗೆ ಬರುತ್ತಿವೆ. ಇಂಥ ತಾಲ್ಲೂಕಿನ ವಿಚಾರದಲ್ಲಿ ಸರ್ಕಾರದವರೇನಾದರೂ ನಿರ್ಲಕ್ಷ್ಯ ಮಾಡಿದರೆ, ಇದು ಬೆಂಗಾಡಾಗಿ ಪರಿಣಮಿಸಿ, ನಿರ್ನಾಮವಾಗುತ್ತದೆ. ಬೆಳೆ ಆಗುವಾಗ ಈ ತಾಲ್ಲೂಕಿನಲ್ಲಿ ವಿಪರೀತ ಮಳೆ ಆಯಿತು. ಈಗ ಮಳೆ ಇಲ್ಲದೆ ಬೆಳೆ ಹೋಗುತ್ತಿದೆ. ಜನರು ತಮ್ಮ ಜೀವನವನ್ನು ಸುಖವಾಗಿ ಯಾವ ಅಡ್ಡಿ ಆತಂಕವೂ ಇಲ್ಲದೆ ಜರುಗಿಸಿಕೊಂಡು ಹೋಗಲು ಮಾರ್ಗ ಕಾಣದೆ, ಗಾಬರಿಗೊಂಡಿದ್ದಾರೆ. ಈ ತಾಲ್ಲೂಕು ಬೆಂಗಾಡಾಗುವ ಪರಿಸ್ಥಿತಿಯನ್ನು ತಪ್ಪಿಸಿಕೊಳ್ಳಲೋಸುಗ 1932 ರಿಂದಲೂ ಒಂದೇ ಸಮನಾಗಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಕೇಳುತ್ತಿದ್ದಾರೆ. ಇದುವರೆಗೂ ಜನರ ಆ ಪ್ರಾರ್ಥನೆ ಇನ್ನೂ ಕೈಗೂಡಿಲ್ಲ. ಕಾನಕಾನಹಳ್ಳಿ ತಾಲ್ಲೂಕಿನಲ್ಲಿ ಯಾವ ನೀರಾವರಿ ಯೋಜನೆಯೂ ಇಲ್ಲ, ವಿದ್ಯುಚ್ಛಕ್ತಿ ಸರಬರಾಯಿ ಇಲ್ಲ. ಆದುದರಿಂದ ಅದು ಬಹಳ ಹಿಂದುಳಿದಿದೆ. ಅಧಿಕಾರಿಗಳಿಗೆ, ಮಂತ್ರಿಗಳಿಗೆ ಈ ತಾಲ್ಲೂಕು ಹಲವಾರು ಬಾರಿ ಕಣ್ಣಿಗೆ ಬೀಳತಕ್ಕ ತಾಲ್ಲೂಕು ಆಗಿದ್ದರೂ ಸಹ, ಮೂಲೆ ಪ್ರದೇಶಗಳ ಭಾಗ್ಯ ಇದುವರೆಗೂ ಇದಕ್ಕೆ ಲಭಿಸಿಲ್ಲವೆಂದೇ ಹೇಳಬೇಕಾಗಿದೆ.

ಈ ತಾಲ್ಲೂಕಿನ ಒಂದು ಲಕ್ಷ ಎಪ್ಪತ್ತು ಸಾವಿರ ಎಕರೆ ಜಮೀನಿನ ಪೈಕಿ ಕೇವಲ ಐದು ಸಾವಿರ ಎಕರೆಯಷ್ಟು ಮಾತ್ರ ತರೀ ಜಮೀನಾಗಿದೆ. ಇದನ್ನು ನೋಡಿದರೆ ಈ ತಾಲ್ಲೂಕನ್ನು ಸರ್ಕಾರ ಇದುವರೆಗೆ ಉದಾಸೀನದಿಂದ ಕಂಡಿರಬೇಕೆಂಬುದು ವೇದ್ಯವಾಗುತ್ತದೆ: ಈಗಲಾದರೂ ಈ ತಾಲ್ಲೂಕಿನ ಕಡೆಗೆ ಸರ್ಕಾರ ಹೆಚ್ಚಿನ ನಿಗಾ ಕೊಡಬೇಕಾದುದು ಅಗತ್ಯವೆಂದು ಕಂಡುಬರುತ್ತದೆ. ಈಗಂತೂ ಸರ್ಕಾರಕ್ಕೆ ಸುಸಮಯವಾಗಿದೆ. 50 cycles ಇರತಕ್ಕ ಕಡೆಗಳಲ್ಲಿ ಈಗ ಸರಾಗವಾಗಿ ವಿದ್ಯುಚ್ಛಕ್ತಿ ದೊರೆಯುತ್ತಿಲ್ಲ. ಆದರೆ ಕಾನಕಾನಹಳ್ಳಿ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು ಮತ್ತು ಮಾಗಡಿ ತಾಲ್ಲೂಕು—ಈ ಮೂರು ತಾಲ್ಲೂಕುಗಳಿಗೆ ಮಾತ್ರ ಈಗ ಸುದೈವವೆಂದೇ ಹೇಳಬೇಕಾಗಿದೆ. ಅಲ್ಲಿ 25 cycles line ಇದೆ. ಬಾಕಿ ಕಡೆ—50 cycles line ಇರುವ ಕಡೆ- ಈಗ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಅಡಚಣೆಯಾಗಿದೆ. . . .

ಶ್ರೀ ಬಿ. ವಿ. ನಾರಾಯಣರೆಡ್ಡಿ.—25 cycles ಇರುವ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಬೇಕಾದಷ್ಟು ಇದೆಯೇ ?

ಶ್ರೀ ಎಸ್. ಕರಿಯಪ್ಪ.—ಇದೆ; 1932 ರಿಂದ ಒಂದೇ ಸಮನಾಗಿ ಪ್ರಾರ್ಥನೆ ಮಾಡಿರತಕ್ಕ ಮತ್ತು ಅತ್ಯವಶ್ಯಕವಾಗಿ ಬೇಕಾಗಿರತಕ್ಕ ಈ ಪ್ರದೇಶದ ಪಂಪುಗಳಿಗೆ, ಅದರಲ್ಲಿಯೂ ಕೋಡಿಹಳ್ಳಿ I. P. setsಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕೆಂದು ಕೋರುತ್ತೇನೆ.

4-30 P.M.

Rural Electrification.

*ಶ್ರೀ ಎಂ.ಸಿ. ಆಂಜನೇಯ ರೆಡ್ಡಿ (ಚಿಂತಾಮಣಿ).—ಸ್ವಾಮಿ, ಈ ವಿದ್ಯುಚ್ಛಕ್ತಿ ವಿಚಾರದಲ್ಲಿ ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ನಮ್ಮದು ಪ್ರತಿ ವರ್ಷವೂ ಕ್ಷಾಮದಿಂದ ನರಳುತ್ತಾ ಇರತಕ್ಕ ಡಿಸ್ಟ್ರಿಕ್ಟ್; ಅದರಲ್ಲೂ ಚಿಂತಾಮಣಿ ತಾಲ್ಲೂಕಿನ 2 ಹೋಬಳಿಗಳಲ್ಲಂತೂ ವಿಪರೀತ ತೊಂದರೆ ಇದೆ. ಈ ಪ್ರದೇಶದಲ್ಲಿ ಸುಮಾರು 2,000ಕ್ಕೂ ಮೇಲ್ಪಟ್ಟು ಬಾವಿಗಳಿದ್ದಾಗ್ಯೂ ಸಹ ಅವು 70-80 ಅಡಿ ಆಳಕ್ಕೆ ಇಳಿದಿವೆ. ಆದ್ದರಿಂದ ಅವು ಗಳಿಂದ ಕಪಿಲೆ ಹೊಡೆದು ನೀರು ತೆಗೆಯುವುದಕ್ಕೆ ಬಹಳ ಕಷ್ಟ ಎಂಬುದು ಸದಸ್ಯರನೇಕರಿಗೆ ಗೊತ್ತಿದೆ. ಅದರಲ್ಲೂ ಸಹ ಆಹಾರಪದಾರ್ಥಗಳನ್ನು ಬೆಳೆಯುವವರಿಗೆ ಮಳೆಗಾಲದಲ್ಲೂಕೂಡ ಸರಿಯಾದ ಫಸಲು ಬರುವುದಿಲ್ಲ ಎಂದಮೇಲೆ ಬೇಸಿಗೆಯಲ್ಲಿ ಯಾವರೀತಿಯಾಗುತ್ತದೆ ಎಂಬುದನ್ನು ಹೇಳಬೇಕಾಗಿಲ್ಲ. ಅಂತಹವರಿಗೆ ಪ್ರೋತ್ಸಾಹಕೊಡುವುದಕ್ಕಾಗಿ ತಾವು ಸ್ವಲ್ಪಮಟ್ಟಿಗಾದರೂ ಈ ಕಾರ್ಯಕ್ರಮವನ್ನು ಇದುವರೆಗೂ ಕಾರ್ಯರೂಪಕ್ಕೆ ತರದೆ ಇರುವುದನ್ನು ನೋಡಿದರೆ ಬಹಳ ವಿಷಾದ ಪಡಬೇಕಾಗಿದೆ. ಇದನ್ನು ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಂಡಿದ್ದೇವೆ. ಅವರೂ ಸಹ ಆ ಬಾವಿಗಳನ್ನು ನೋಡಿದ್ದಾರೆ. ಅಷ್ಟಾಗಿಯೂ ಕೂಡ ನಮಗೆ ಸಹಾಯ ಮಾಡದೇಇರುವುದನ್ನು ನೋಡಿದರೆ ಬಹು ಮಟ್ಟಿಗೆ ವ್ಯಥೆಯಾಗುತ್ತದೆ. ಆದ್ದರಿಂದ ಈಗ ಲಾದರೂ ಈ ಚಿಂತಾಮಣಿ ತಾಲ್ಲೂಕಿನಲ್ಲಿರತಕ್ಕ ಎಲ್ಲಾ ವ್ಯವಸಾಯದ ಬಾವಿಗಳಿಗೂ ಕೂಡ ಪಂಪುಗಳನ್ನು ಹಾಕಿಕೊಂಡು ವ್ಯವಸಾಯ ಮಾಡಲು ವಿದ್ಯುಚ್ಛಕ್ತಿ ಒದಗಿಸಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಅನೇಕ ಸದಸ್ಯರು ಈ ವ್ಯವಸಾಯಕ್ಕಾಗಿ ವಿದ್ಯುಚ್ಛಕ್ತಿ ಒದಗಿಸಬೇಕೆಂಬ ವಿಚಾರದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ದೊಡ್ಡದೊಡ್ಡ ಅಣೆಕಟ್ಟುಗಳು ಮತ್ತು ನಾಲೆಗಳ ಆಶ್ರಯ ಇಲ್ಲದೇಇರತಕ್ಕ ಪ್ರದೇಶಗಳಲ್ಲೂ ಸಹ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಅನೇಕ ಕಡೆಗಳವರು ಮನವಿಮಾಡಿಕೊಂಡಿದ್ದಾರೆ ಮತ್ತು ಬಾವಿಗಳನ್ನು ಸಹ ತೆಗೆದು ಅದರಿಂದ ನೀರಾವರಿ ಮಾಡಿಕೊಳ್ಳಲು ವಿದ್ಯುಚ್ಛಕ್ತಿ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ನಾನು ಈಗ ಮನವಿಮಾಡಿಕೊಳ್ಳುವುದೇನೆಂದರೆ, ತಿಪಟೂರು ತಾಲ್ಲೂಕು ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಿಗೆ ವ್ಯವಸಾಯಕ್ಕಾಗಿ ವಿದ್ಯುಚ್ಛಕ್ತಿ ಒದಗಿಸಿ ಕೊಡಬೇಕಾಗಿ ಮನವಿ ಮಾಡಿಕೊಳ್ಳ

(ಶ್ರೀ ಟಿ. ಜಿ. ತಿಮ್ಮೇಗೌಡ.)

ಲದ್ದೇನೆ. ಅಲ್ಲಿ ಸಾಧಾರಣವಾಗಿ ಖುಷ್ಕಿ ಜಮೀನೆ ಬಹಳ ಜಾಸ್ತಿಯಾಗಿ ಇದ್ದು ತರಿ ಜಮೀನು ತುಂಬ ಕಡಮೆಯಿರುವುದರಿಂದ ಬಾವಿಗಳಿಗೆ ಪಂಪುಗಳನ್ನು ಹಾಕಿಕೊಂಡು ಅದರ ಮುಖೇನ ವ್ಯವಸಾಯ ಮಾಡಬೇಕಾಗಿದೆ. ಇಲ್ಲಿ ಬತ್ತ ವಗೈರೆ ಬೆಳೆಯಲು ಸಾಧ್ಯವಾಗದೆ ಬಹಳ ಅಭಾವ ಪ್ರದೇಶವಾಗಿದೆ, ಪ್ರತಿ ವರ್ಷವೂ ಆ ರೈತಾಪಿ ಜನರು ಅಕ್ಕಿ ವಗೈರೆ ಕೊಂಡುಕೊಂಡೇ ಜೀವನ ಮಾಡಬೇಕಾಗಿದೆ. ಆದ್ದರಿಂದ ಸರ್ಕಾರದವರು ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿ ಆಹಾರ ಬೆಳೆಯಲು ಹೆಚ್ಚಿನ ಸೌಲಭ್ಯವನ್ನೊದಗಿಸಿಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

Sri S. SRINIVASA IYENGAR (T. Narasipur).—Sir, I am glad to note that the Government have realised all at once that Periyapatna is the only Taluk headquarter of the State that has not been supplied with electricity so far. Sir, electrification of Periyapatna and the surrounding villages was being pressed for the last three years and still Government had not thought of providing funds for that item. Now they have at once realised that it is a place worth supplying electric power and they have asked us to vote a token grant. Sir, whenever this question was broached previously the Government used to say that they have a scheme of supplying power to Mercara in Coorg and that this question of electrification of Periyapatna would be taken up along with that. I want to know whether that scheme has been finalised and if so what it costs and is it in connection with that scheme that they are undertaking the electrification of these villages.

I request you, Sir, kindly to enlighten me on that issue.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಬೆಂಗಳೂರು ದಕ್ಷಿಣ ತಾಲ್ಲೂಕು ಸೋಮನಹಳ್ಳಿ ಸರ್ಕಲ್‌ನಲ್ಲಿ 1936ನೇ ಇಸವಿಯಿಂದಲೂ ಈ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಮತ್ತು ಪಂಪುಗಳನ್ನು ಹಾಕಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಸರ್ಕಾರದ ಮುಂದೆ ಹೇಳುತ್ತಲೆ ಇದ್ದಾರೆ. ಪ್ರತಿಯೊಂದು ಅಧಿವೇಶನದಲ್ಲೂ ಪ್ರಶ್ನೆಗಳು ಮತ್ತು ಖೋತಾನಿರ್ಣಯಗಳನ್ನು ಹಾಕುತ್ತಲೇ ಇದ್ದೇವೆ. ಆದಾಗ್ಯೂ ಇನ್ನೂ ಅದಕ್ಕೆ ಗಮನಕೊಟ್ಟಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಈ ವಿಚಾರಕ್ಕೆ ಸರ್ಕಾರದವರು ಗಮನ ಕೊಟ್ಟು ಇದನ್ನು ಖಂಡಿತವಾಗಿಯೂ ಮಾಡಿ ಕೊಡಬೇಕೆಂದು ಹೇಳಿ ಈ ಸಮಯದಲ್ಲಿ ಒತ್ತಾಯ ಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾ ಪಟ್ಟಣ).—ಈ ಖೋತಾನಿರ್ಣಯದಲ್ಲಿ ಪೆರಿಯಾ ಪಟ್ಟಣಕ್ಕೆ

. . . . .

Mr. SPEAKER.—On your behalf, Sri Sreenivasa Iyengar has already brought this matter to the notice of the House.

Sri H. M. CHANNABASAPPA.—I am exceedingly thankful to him, Sir.

ಪೆರಿಯಾ ಪಟ್ಟಣಕ್ಕೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದಕ್ಕಾಗಿ ಈ ಟೋಕನ್ ಗ್ರಾಂಟ್, ಕೊಡಬೇಕೆಂದು ಮಾತ್ರ ಹೇಳುತ್ತಾ ಇದ್ದೇನೆ. ಪೆರಿಯಾ ಪಟ್ಟಣಕ್ಕೆ ಇದುವರೆಗೂ ವಿದ್ಯುಚ್ಛಕ್ತಿ ಸರಬರಾಯಿ ಮಾಡದೆ ಇರುವುದಕ್ಕೆ ಕಾರಣವನ್ನು ಈಗಾಗಲೇ ಸೂಚನೆ ಮಾಡಿದ್ದಾರೆ. ಆದ್ದರಿಂದ ಸರ್ಕಾರದವರಿಗೆ ಆಶಯವಿರಲಿಲ್ಲವೆಂಬುದು ತಪ್ಪು. ಪೆರಿಯಾ ಪಟ್ಟಣ ಮತ್ತು ಇನ್ನಿತರ 3-4 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು 8 ಲಕ್ಷ ರೂಪಾಯಿಗಳ ಒಂದು ಅಂದಾಜು ಸರ್ಕಾರದವರ ಮುಂದೆ ಇದೆ. ಅದನ್ನು ಮಂಜೂರು ಮಾಡಿ ಇದುವರೆಗೂ ನಿಧಾನ ಮಾಡಿದ ತಪ್ಪಿಗೆ ತಾಲ್ಲೂಕಿನ ಎಲ್ಲಾ ಮುಖ್ಯ ಗ್ರಾಮಗಳಿಗೂ ಕೂಡ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ಕಾರ್ಯಕ್ರಮವನ್ನು ಈ ವರ್ಷವೇ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಲು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತೇನೆ.

*ಶ್ರೀ ಎನ್. ಸಿ. ನಾಗಯ್ಯರೆಡ್ಡಿ (ಗೋರಿಬಿದನೂರು).—ಸ್ವಾಮಿ, ಈಚೆಗೆ ಸರ್ಕಾರದವರು ಒಂದು ಪಂಪೂ ಕೊಡಕೂಡದೆಂದು ಆಜ್ಞೆ ಹೊರಡಿಸಿದ್ದಾರೆ. ಅದಕ್ಕೆ ಕಾರಣ ಏನೆಂದರೆ, ಕರೆಂಟ್ ಸಪ್ಲೈ ಇಲ್ಲ ಎಂಬುದೇ ಆಗಿದೆ. ನಮ್ಮಲ್ಲಿ ಎಷ್ಟೇ ವಿದ್ಯುಚ್ಛಕ್ತಿ ತಯಾರಾದರೂ ಸಹ ಅದನ್ನು ಬೇರೆಯವರಿಗೆ ಕೊಡುತ್ತಾ ಇದ್ದಾರೆ, ಇದಕ್ಕೆ ಸಂಬಂಧಪಟ್ಟ ಮಿನಿಸ್ಟರ್ ಇದ್ದಬದ್ದದ್ದನ್ನೆಲ್ಲಾ ಬಳ್ಳಾರಿಗೆ ಸಾಗಿಸುತ್ತಾ ಇದ್ದಾರೆ ಎಂದು ದೇಶದಲ್ಲಿ ಜನ ಹೇಳುತ್ತಾ ಇದ್ದಾರೆ.

ಅಧ್ಯಕ್ಷರು.—ಅದು ತಪ್ಪು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಇನ್ನೊಂದು ವಿಷಯವೇನೆಂದರೆ, ಕೆಲವು ಸ್ಥಳಗಳಿಗೆ 10-15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಎರಡು ಮೂರು ಪಂಪುಸೆಟ್ಟು ಹಾಕಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದೇ ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ನೋಡಿದರೆ ಆ ರೀತಿ ಕೊಟ್ಟಿರುವುದು ಬಹಳ ಕಡಿಮೆ. ಪಂಪುಸೆಟ್ಟು ಹಾಕಿಕೊಳ್ಳುತ್ತೇವೆ, ಅವಕಾಶಕೊಡಿ, ಎಂದು ಯಾರು ಕೇಳುತ್ತಾರೋ ಅವರಿಗೆ ಅವಕಾಶಕೊಡಿ. ಆ ರೀತಿ ಏಕೆ ಕೊಡುವುದಿಲ್ಲವೋ ನನಗಂತೂ ಅರ್ಥವಾಗುವುದಿಲ್ಲ. ಬೊಂಬಾಯಿನವರಿಗೆ ಕೊಡಬೇಕಾದದ್ದು ನ್ಯಾಯವಾಗಿದೆ. ಅವರು ದೊಡ್ಡ ಮನುಷ್ಯರು. ಆಂಧ್ರದೇಶಕ್ಕೇಕೆ ಕೊಡಬೇಕು? ಸ್ವಲ್ಪ ವಿವೇಕ ಬೇಡವೆ? ಕರ್ನೂಲಿಗೆ ವಿದ್ಯುಚ್ಛಕ್ತಿದೀಪ, ಪೆರಿಯಾ ಪಟ್ಟಣಕ್ಕಿಲ್ಲ! ನಮ್ಮ ದೇಶದ ಜನರಿಗಿಲ್ಲದಿರುವಾಗ ಅಲ್ಲಿಗೇಕೆ ಕೊಡಬೇಕು? ಇಲ್ಲಿ ಈಗ ವಿದ್ಯುಚ್ಛಕ್ತಿ ಇಲಾಖೆ ಮಂತ್ರಿಗಳಿಲ್ಲ. ಅವರ ತಲೆಗೆ ಇದು ಹತ್ತುವುದು ಬಹಳ ಕಷ್ಟವೆಂದು ಕಾಣುತ್ತದೆ. ನಾನೇನೂ ಉತ್ಪ್ರೇಕ್ಷೆಮಾಡಿ ಹೇಳುತ್ತಿಲ್ಲ. ಇರುವ ವಿಷಯ ಹೇಳಿದೆ. ಅವರಿಗೆ ಸ್ವಲ್ಪ ಕಷ್ಟ. ಯಾವ ಎಸ್ಟಿಮೇಟ್

ಹೋದರೂ ಅದು ಮಂಜೂರಾಗುವುದಿಲ್ಲ. ಇದು ನಿಜ. ಆದ್ದರಿಂದ ಸರ್ಕಾರದವರು ಸ್ವಲ್ಪ ನೋಡಿ ಜಾಗ್ರತೆ ಬೇಕಾದ ಕಡೆಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕು. ನಮ್ಮ ಗೋರಿಬಿದನೂರು ತಾಲ್ಲೂಕನ್ನು ಮರೆಯದೆ ಅಲ್ಲಿ ಮಳೆಯೇ ಇಲ್ಲದಿರುವುದರಿಂದ ವಿದ್ಯುಚ್ಛಕ್ತಿಯನ್ನು ಅಲ್ಲಿಗೆ ಸಾಕಾದಷ್ಟು ಬೇಗ ಒದಗಿಸಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಮಾಗಡಿ ತಾಲ್ಲೂಕಿನಲ್ಲಿ ನೂರು ಪಂಪುಗಳಿಗಾಗಿ ಹಣಕೊಟ್ಟು ಸುಮಾರು ಒಂದು ವರ್ಷದ ಮೇಲಾಯಿತು. 74 ಸಾವಿರ ರೂಪಾಯಿಗಳಿಗೊಂದು ಅಂದಾಜು, 1¼ ಲಕ್ಷ ರೂಪಾಯಿಗಳಿಗೊಂದು ಅಂದಾಜು ಹೀಗೆ ಎರಡು ಅಂದಾಜುಗಳು ಸರ್ಕಾರಕ್ಕೆ ಹೋಗಿ ಸುಮಾರು ಒಂದು ವರ್ಷವಾಯಿತು. ಮಾಗಡಿ ತಾಲ್ಲೂಕೆಲ್ಲಾ ಬೆಟ್ಟದ ಪ್ರದೇಶ. ಜನರಿಗೆ ಅಲ್ಲಿ ಆಹಾರ ಒದಗಿಸುವುದಕ್ಕೆ ಬಹಳ ಕಷ್ಟವಾಗಿದೆ. ಆದ್ದರಿಂದ ದಯವಿಟ್ಟು ಹಣಕಟ್ಟಿರುವ ರೈತರಿಗೆಲ್ಲಾ ಪಂಪುಗಳನ್ನೊದಗಿಸಬೇಕು. ಹಿಂದೆ ಕೆಲವು ಸ್ಥಳಗಳಲ್ಲಿ ಹತ್ತು ಲಕ್ಷ ಪಂಪುಗಳಿಗಾಗಿ ಖರ್ಚು ಮಾಡಿದ್ದೂ ಅನ್ಯಾಯವಾಗಿದೆಯೆಂದು ಕೇಳಿದ್ದೇನೆ. ಅದಕ್ಕೆ ಅವಕಾಶ ಕೊಡದೆ ಪ್ರಜೆಗಳು ಎಲ್ಲಿ ಹೆಚ್ಚಾಗಿ ಕೇಳುತ್ತಾರೋ, ಎಲ್ಲಿ ಅವಶ್ಯಕತೆಯಿದೆಯೋ, ಎಲ್ಲಿ ಬಾವಿ ತೆಗೆದು ಹಣಕಟ್ಟಿ ಕಾದಿದ್ದಾರೋ ಅಂಥ ಕಡೆಗಳಿಗೆ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನೊದಗಿಸಬೇಕು. ಮತ್ತು ಮೈಸೂರು ಸಂಸ್ಥಾನದಲ್ಲಿ ಹುಟ್ಟಿ ಬೆಳೆದಿರುವ ಕರೆಂಟಾದ್ದರಿಂದ ಮೊದಲು ನಮ್ಮ ದೇಶದವರಿಗೆ ಅವಕಾಶಕೊಟ್ಟು ಅನಂತರ ಇತರರಿಗೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕಡ್ಡಾಯವಾಗಿ ವಿನಂತಿಮಾಡಬೇಕಾಗಿದೆ. ಏಕೆಂದರೆ, ಮೈಸೂರು ಸಂಸ್ಥಾನದಲ್ಲಿ ಅನೇಕ ರೈತರುಗಳಿಂದ ವಸೂಲಾದ ಮೊಬಲಗಿನಿಂದ ಉತ್ಪತ್ತಿಯಾಗಿರುವ ವಿದ್ಯುಚ್ಛಕ್ತಿಯನ್ನು ದೇಶಾದ್ಯಂತ ನಮ್ಮ ಜನರಿಗೆ ಮೊದಲು ಒದಗಿಸಿ ಆಮೇಲೆ ಹೊರದೇಶಗಳಿಗೆ ಕೊಡಬೇಕೇ ವಿನಾ ನಮ್ಮ ದೇಶಧ ಬೇಡಿಕೆಯನ್ನು ಮನ್ನಿಸದೆ ಕೊಡಬಾರದು. ಹಾಗೆ ಮಾಡದಿದ್ದರೆ ನಮ್ಮ ಜನರಿಗೆ ಅನಾನುಕೂಲವಾಗುತ್ತದೆ. ಇದನ್ನು ಸರ್ಕಾರದವರು ಕಡ್ಡಾಯವಾಗಿ ಗಮನಿಸಿ ಮಾಗಡಿ ತಾಲ್ಲೂಕಿನ ರೈತರಿಗೆ ಹೆಚ್ಚಿನ ಸೌಕರ್ಯ ಕಲ್ಪಿಸಿಕೊಡಬೇಕು. ಹಣಕಟ್ಟಿರುವವರ ಬೇಡಿಕೆಯನ್ನು ಜಾಗ್ರತೆಯಾಗಿ ಪೂರೈಸಬೇಕು ಎಂದು ಈ ಮೂಲಕ ಪ್ರಾರ್ಥನೆಮಾಡುತ್ತೇನೆ.

Power Supply to Villages in Chitaldrug District

*Sri Mulka GOVINDA REDDY (Chitaldrug).—Mr. Speaker, Sir, as you are aware, electricity plays a very important part in the production of wealth of any country, which in turn changes the very mode of life. Hence, it is necessary that utmost priority is given to the generation of electricity and its utilisation. As is the case in other advanced countries, electricity has proved to be a very good asset and has proved to be a boon to the people. Sir, Sri S. V. Rama Murthy while delivering the Convocation Address at Mysore, said that even to have a stable democracy electrical energy should be generated and be made use of. When such is the case, I really cannot understand the way in which the Government of Mysore is going ahead with this problem. They are not evincing as much interest as they ought to in trying to see that more generation stations are established and electrical energy is supplied for the production of foodgrains and for industrial purposes.

Sir, in Chitaldrug District there are more than 7,000 wells. I am sorry to say that not more than 500 wells have been supplied with pump-sets. As all are aware, Sir, Chitaldrug distrist is a famine stricken area and top priority must be given to that district. While preparing estimates, some discrimintion is being made from man to man and village to village. In certain cases, unnecessary and unavoidable delay is being caused. Such a thing should not be allowed to happen. In cases where power has been sanctioned, drawing up lines is unnecessarily delayed. I do not know why Government have not cared to enquire into this state of affairs. The names of the villages are as follows: Dodagatta in Chitaldrug Taluk, Chanaganalli, Devareddihalli, Chitranaikanalli, Nerlagunte, Doddanmarthi, Ramjogihalli in Challakere Taluk; Nagasandra in Molakalmuru Taluk and Maradihalli, Gollalli, Basappanamalige in Hiriyur Taluk. These villages have applied for supply of power. I would urge upon Government to immediately sanction the estimates and see that power is supplied to these villages.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಹರಿಹರ ಮತ್ತು ಹೊನ್ನಾಳಿ ತಾಲ್ಲೂಕುಗಳ ವಿಚಾರದಲ್ಲಿ ಬಂದ ಪ್ರಸ್ತಾಪದ ವಿಚಾರದಲ್ಲಿ ಒಂದೆರಡು ಮಾತು ಹೇಳಬೇಕಾಗಿದೆ. ಹರಿಹರ ಮತ್ತು ಹೊನ್ನಾಳಿ ತಾಲ್ಲೂಕು ನೀರಾವರಿ ಕಾಂಗಾರಿಗೆ ವಿದ್ಯುಚ್ಛಕ್ತಿಯನ್ನು ಸಾಕಾದಷ್ಟು ಈ ಸರ್ಕಾರದವರು ಮಂಜೂರು ಮಾಡಿದ್ದಾರೆ. ಇವಕ್ಕೆ ಮೊದಲೇ ಹೆಚ್ಚು ಆಹಾರ ಬೆಳೆಯಿರಿ ಎಂಬ ಯೋಜನೆ ಮೈಸೂರು ದೇಶಕ್ಕೆ ಮಾತ್ರವಲ್ಲದೆ ಇಡೀ ಹಿಂದೂಸ್ಥಾನಕ್ಕೇ ತಯಾರಾಗಿ ಇಂಡಿಯಾ ಸರ್ಕಾರದವರಿಗೆ ಹೋಗಿ ಅವರೂ ಸಹ ಕೂಲಂಕಷವಾಗಿ ಪರಿಶೀಲಿಸಿ ಅದು ಬಹಳ ಅತ್ಯುತ್ತಮವಾದ ಯೋಜನೆ,

(ಶ್ರೀ ಎಚ್. ಸಿದ್ಧವೀರಪ್ಪ.)

ಅದನ್ನು ಜಾರಿಗೆ ತಂದರೆ ನೀರಿಗೆ ತೊಂದರೆ ಇರುವುದಿಲ್ಲ ಎಂದು ಹೇಳಿ ಮಂಜೂರು ಮಾಡಿದ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಸುಮಾರು 3—3½ ಲಕ್ಷ ರೂಪಾಯಿಗಳು ಖರ್ಚಾಗಿವೆ. ಇತ್ತೀಚೆಗೆ ಸ್ವಲ್ಪ ಜಾಸ್ತಿಯಾಗಿದೆ. ಹೊನ್ನಾಳಿಯಲ್ಲಿ ಸುಮಾರು 40—50 ಜನರಿಗೆ ಅನುಕೂಲ ಒದಗಿಸಿದೆ, ಹರಿಹರದ ಅಂಕಿ ಅಂಶ ನನ್ನಲ್ಲಲ್ಲ. ಆದರೆ ಗೋರಿಬಿದನೂರು ತಾಲ್ಲೂಕಿನಲ್ಲಿ 1924ನೆಯ ಇಸವಿಯಿಂದಲೂ ವಿದ್ಯುಚ್ಛಕ್ತಿಯ ಸಹಾಯವನ್ನು ಜನರು ಕಂಡಿರುವುದರಿಂದ ಅದು ಚೆನ್ನಾಗಿ ಅವರ ಮನಸ್ಸಿಗೆ ಹಿಡಿದಿರುವುದರಿಂದ ಅವರು ಅದನ್ನು ಚೆನ್ನಾಗಿ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಉಪಯೋಗಿಸುವವರಿಗೇನೂ ತೊಂದರೆಯಿಲ್ಲ. ಇದೂ ಅಲ್ಲದೆ ಬಳ್ಳಾರಿ ಜಿಲ್ಲೆಗೆ ಮುಂದಕ್ಕೆ ಲೈನು ಹಾಕಬೇಕು. ಆದ್ದರಿಂದ ಹಣ ದುರ್ವಿನಿಯೋಗ ಯಾವುದೂ ಆಗಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

*ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ವಿದ್ಯುಚ್ಛಕ್ತಿ ಅವಶ್ಯಕತೆಯ ವಿಚಾರದಲ್ಲಿ ಈ ಸಭೆಯಲ್ಲಿ ಬಹಳ ಮಟ್ಟಿನ ಒತ್ತಾಯ ಬಂದಿರುವುದು ಈಗ ಸರ್ಕಾರದವರಿಗೆ ಮನವರಿಕೆಯಾಗಿದೆ. ಈ ವಿಚಾರದಲ್ಲಿ ಸರ್ಕಾರದ ನೀತಿ ಸ್ಪಷ್ಟವಾಗಿರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಪ್ರಜಾಸರ್ಕಾರ ಸ್ಥಾಪಿತವಾದಮೇಲೆ, ಬರಬರುತ್ತಾ ಪ್ರಜೆಗಳ ಆಶೋತ್ತರಗಳು ಈಡೇರಲು ಸರ್ಕಾರ ಸತತ ಪ್ರಯತ್ನ ಮಾಡಬೇಕಾದುದು ಅದರ ಆದ್ಯಕರ್ತವ್ಯ. ಈ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಹಿಂದಿನ ಸರ್ಕಾರದವರು ಸಾಕಾದಷ್ಟು ಸಾಮಾನುಗಳಿಲ್ಲ, ತಾಮ್ರದ ಕಂಬಗಳ ಅಭಾವ ಎಂದು ಮುಂತಾದ ನೆಪಗಳನ್ನು ವಿದ್ಯುಚ್ಛಕ್ತಿಯ ಅಭಾವಕ್ಕೆ ಕಾರಣವಾಗಿ ಪ್ರತಿನಿಧಿಗಳ ಮುಂದೆ ಹೇಳುತ್ತಿದ್ದರು. ಈಗಿನ ಸರ್ಕಾರ, 25 cyclesನ್ನು 50 cyclesಗೆ convert ಮಾಡುವುದನ್ನೇ ಒಂದು ನೆಪವಾಗಿ ಹೇಳಿಕೊಂಡು, ಇದೇ ವಿದ್ಯುಚ್ಛಕ್ತಿ ಅಭಾವಕ್ಕೆ ಕಾರಣವಾಗಿದೆಯೆಂದು ಹೇಳುತ್ತಿದ್ದಾರೆ. ಸರ್ಕಾರದ ಈ ಧೋರಣೆ ಪ್ರತಿನಿಧಿಗಳಿಗೆ ಅಷ್ಟಾಗಿ ಸಮರ್ಪಕವಾಗಿ ತೋರುವುದಿಲ್ಲ. ಇದಕ್ಕಾಗಿ ಇಂಡಿಯಾ ಸರ್ಕಾರದಿಂದ ಸಹ ಯಥೇಚ್ಛವಾಗಿ ಸಹಾಯ ದೊರಕುತ್ತಿರುವಾಗ, ನಮ್ಮ ದೇಶದ ಬೆಳವಣಿಗೆಗೆ ಮುಖ್ಯ ಆಧಾರಭೂತವಾದ ನೀರಾವರಿ ಕಾಮಗಾರಿಗಳಿಗೆ ಅತ್ಯವಶ್ಯಕವಾಗಿ ಬೇಕಾದ ವಿದ್ಯುಚ್ಛಕ್ತಿಯನ್ನು ಸರ್ಕಾರ ಒದಗಿಸಲು ಸರ್ವ ಪ್ರಯತ್ನ ಮಾಡಿ, ಜನರ ತೊಂದರೆಯನ್ನು ನೀಗಿಸಿ, ದೇಶಕಲ್ಯಾಣಕ್ಕೆ ನೆರವಾಗಬೇಕು. ಇದೇ ಅವರ ನೀತಿ ಆಗಿರಬೇಕು. ಒಟ್ಟಿನಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಸರ್ಕಾರದ ನೀತಿ ಸ್ಪಷ್ಟವಾಗಿರಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

***Sri Kadidal MANJAPPA** (Minister for Revenue and Public Works).—Sir, of all the districts, Kolar has no reason to complain or to grumble.

Sri S. SRINIVASA IYENGAR.—It has taken away a lion's share.

Sri Kadidal MANJAPPA.—In all the districts put together, there are 6,111 pump-sets. In Kolar District only there are 2,102 pump-sets. Government know that Kolar is liable to be affected by distress conditions. Therefore priority has been given to Kolar District.

In the year 1953-54, 261 pump-sets were serviced at a cost of Rs. 6·44 lakhs. Hon'ble Members may try to draw their own conclusion that the Government have given due importance to the demands of Kolar District.

(Interruption)

Other Hon'ble Members have stressed the need for supply of power to their own areas. Government are anxious to supply power, subject to the availability of funds, subject to the condition that the scheme is not prohibitive and also subject further to the condition that the power also is available.

Reference was made to the proposal for converting 25 cycles into 50 cycles. Action is being taken to prepare estimates. Hon'ble Members are perhaps aware of the fact that the proposal involves a considerable sum of money. And added to this, within one or two years we will realise that we will not be in a position to supply power either for lighting purposes or for other purposes unless new projects are taken up and additional energy is generated.

My friend, Sri Nagaiah Reddy objected to the supply of power to Andhra. Sir, there is an understanding, an agreement between the composite Madras State and the Mysore State for the supply of power to the Ceded Districts. According to that agreement power is taken to the Andhra State. I wish my friend had not made reference to...(*A Voice*:—'Inter-State allegations') No, not on the ability of my good friend Sri Nagan Gowda. I do not want to say anything more on that.

Mr. SPEAKER.—I do not think there is any personal allegation.

Sri Kadidal MANJAPPA.—Sir, coming to Tumkur District, I think that in 1952-53 Government had sanctioned nearly Rs. 9 lakhs for the supply of power for irrigation purposes. I am told that 40 or 50 pump-sets are in service now.

Hon'ble Members referred to Honnali Taluk. We are aware of the fact that Honnali Taluk is equally entitled to these sets. In the year 1952-53 we have sanctioned Rs. 12 or Rs. 11 lakhs to Chitaldrug District. My friend Sri Mulka Govinda Reddy referred to some discrimination and delay. If concrete instances are brought to the notice of the Government, they will take serious view of the matter and appropriate action.

Sri Mudlagiri Gowda who spoke last said that the Government of India are giving us any amount of money. That is a wrong impression. The Government of India no doubt are giving us money ; but not any amount of money that we require. We have got a special officer of the status of Superintendent. He has got the necessary staff. It may be that before the creation of that post the staff was not adequate. But it is not so now. But there is difficulty in securing materials like copper wire and iron hooks. These difficulties will be there. I can only say now that the Government are as anxious to help the raiyats to have the benefit of electricity for agricultural purposes as Hon'ble Members themselves.

Sri S. SRINIVASA IYENGAR.—What has happened to the Kellog line ?

Sri Kadidal MANJAPPA.—As regards Bagepalli, the remarks that I have made already in the case of Kolar District apply equally well for that taluk.

Sri B. V. NARAYANA REDDY.—He said that Kolar District was given a large amount but you have given only for Bowringpet.

Sri Kadidal MANJAPPA.—Sir, I know that Bagepalli is the worst affected area in the Kolar District. I know that. And Government are sympathetic towards Bagepalli.

Sri B. V. NARAYANA REDDY.—Only lip sympathy.

Sri Kadidal MANJAPPA.—As far as Periapatna is concerned, that is the only taluk headquarter which is not supplied with power. There is an estimate ready . . . .

5 P.M.

Mr. SPEAKER.—The time is over. The question is :

> " That further sums not exceeding the sums specified in the motions for additional and supplementary demands for grants for the year 1954-55 and included in the list distributed to members be granted to the Government to defray the charges which will come in course of payment during year ending 31st day of March 1955 in respect of demands Nos. 2, 11, 14, 17, 23, 26, 27, 40, 42 and 45."

The motion was adopted.

(As directed by Mr. Speaker the motions for demands for Additional and Supplementary Grants which were adopted by the House are reproduced below.)

DEMAND NO. 2—STATE EXCISE.

8. STATE EXCISE DUTIES.

> " That a further sum not exceeding Rs. 1,64,000 be granted to the Government to defray the charges which will come in course of payment during the year ending 31st day of March 1955, in respect of ' State Excise.' "

DEMAND NO. 11—GENERAL ADMINISTRATION.

25. GENERAL ADMINISTRATION (EXCEPT THE SUB-MAJOR HEADS B, C AND F).

> " That a further sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1955, in respect of ' General Administration (Except sub-major heads B, C and F).' "

(MR. SPEAKER.)

DEMAND NO. 14—ADMINISTRATION OF JUSTICE.

27. ADMINISTRATION OF JUSTICE.

"That a further sum not exceeding Rs. 20,000 be granted to the Government to defray the charges which will come in course of payment during the year ending 31st day of March 1955 in respect of 'Administration of Justice.'"

DEMAND NO. 17.—SCIENTIFIC DEPARTMENTS.

36. SCIENTIFIC DEPARTMENTS.

"That a further sum not exceeding Rs. 24,200 be granted to the Government to defray the charges which will come in course of payment during the year ending 31st day of March 1955, in respect of 'Scientific Departments.'"

DEMAND NO. 23.—RURAL DEVELOPMENT.

40-A. RURAL DEVELOPMENT.

"That a further sum not exceeding Rs. 13,82,500 be granted to the Government to defray the charges which will come in course of payment during the year ending 31st day of March 1955, in respect of 'Rural Development.'"

DEMAND NO. 26.—INDUSTRIES AND SUPPLIES.

43. INDUSTRIES AND SUPPLIES (EXCEPT SERICULTURE).

"That a further sum not exceeding Rs. 10,35,700 be granted to the Government to defray the charges which will come in course of payment during the year ending 31st day of March 1955, in respect of 'Industries and Supplies (Except Sericulture).'"

DEMAND NO. 27.—SERICULTURE.

43. INDUSTRIES AND SUPPLIES—SERICULTURE.

"That a further sum not exceeding Rs. 2,52,000 be granted to the Government to defray the charges which will come in course of payment during the year ending 31st day of March 1955, in respect of 'Sericulture.'"

DEMAND NO. 40.—IRRIGATION.

68. CONSTRUCTION OF IRRIGATION, NAVIGATION, EMBANKMENT AND DRAINAGE WORKS OUTSIDE THE REVENUE ACCOUNT.

"That a further sum not exceeding Rs. 50,00,000 be granted to the Government to defray the charges which will come in course of payment during the year ending 31st day of March 1955, in respect of 'Construction of Irrigation, Navigation, Embankment and Drainage Works outside the Revenue Account.'"

DEMAND No. 42—ELECTRICITY SCHEMES.

81-A. CAPITAL OUTLAY ON ELECTRICITY SCHEMES.

"That a further sum not exceeding Rs. 25,00,400 be granted to the Government to defray the charges which will come in course of payment during the year ending 31st day of March 1955, in respect of 'Capital Outlay on Electricity Schemes.'"

DEMAND No. 45—ADVANCES AND LOANS.

R. LOANS AND ADVANCES BY THE STATE GOVERNMENT.

" That a further sum not exceeding Rs. 7,38,000 be granted to the Government to defray the charges which will come in course of payment during the year ending 31st day of March 1955, in respect of 'Loans and Advances by the State Government.' "

Mr. SPEAKER.—The House will now rise for the day and meet to-morrow at 8-30 in the morning.

The House adjourned for the day at Two Minutes past Five of the Clock to meet again at Thirty Minutes past Eight of the Clock on Saturday, the 16th October 1954.

V-, 31 N 54
N 57 - 11
(B) 4714

MYSORE LEGISLATIVE ASSEMBLY

SIXTH DAY.

Saturday, 16th October 1954.

The House met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.A., LL.B.), in the Chair.

QUESTIONS AND ANSWERS

Second Five-Year Plan

(Draft Proposals)

Q.—10. **Sri K. LAKKAPPA** (Chennarayapatna).—

Will the Government be pleased to state :—

(*a*) what are all the important draft proposals in the field of irrigation, industry and communication relating to Mysore State included in the Second Five-Year Plan ;

(*b*) the amount involved for effecting these proposals ?

A.—**Sri Kadidal MANJAPPA** (Minister for Rvenue and Public Works.) [on behalf of SRI K. HANUMANTHAIYA (Chief Minister)]. —

(*a*) and (*b*) Statement appended below :—

Statement showing important draft proposals in the field of Irrigation, Industry and Communication proposed by the Heads of Departments for inclusion in the Second Five-Year Plan.

Name of Project			*Amount involved* (Rs. in lakhs)
Irrigation Projects.—			
I. Schemes of the First Five-Year Plan to be continued :—			
(*i*) Bhadra Reservoir Project	...	...	1147·00
(*ii*) Tunga Anicut	...	...	46·00
(*iii*) Nugu Reservoir Project	...	...	4·60
(*iv*) Ambligola Reservoir	...	...	51·00
II. New Projects.—			
(*i*) Kapini Reservoir Project	...	...	250·00
(*ii*) Taraka Reservoir Project	...	...	99·50
(*iii*) Chikhole Reservoir Project	...	...	21·90
(*iv*) Hebbahalla Reservoir Project	...	...	15·20
(*v*) Hemavati Reservoir (total cost Rs. 900 lakhs)		...	500·00
(*vi*) Dondavati Reservoir Project	...	...	60·00
(*vii*) Jambadahalla Reservoir Project	...	...	45·00
	Total	...	2240·20
(*a*) Schemes already included in the First Five-Year Plan and which will be in execution during the Second Five-Year Plan.—			
1 Anicut across Vedavati	...	...	10·00
2 New tank at Kariyala	...	...	10·00
	Total	...	20·00

(SRI KADIDAL MANJAPPA.)

(*b*) New Schemes (Proposed to be taken up)—

1	Sagre Doddakere in Heggaddevanakote Taluk	18·00
2	Yennehole Project in Nanjangud Taluk	10·00
3	Bhima Reservoir in Mandya District	12·00
4	Extending S.D. Dam North Channel from the Hemavathi River.	20·00
5	Sonnaikanahalli New Tank	10·00
6	Saravathihalla Tank, Harihar Taluk	12·00
7	Devarabilikere Tank Project in Harihar Taluk	45·00
8	Mavinakere Tank in Channagiri Taluk	10·00
9	Anicut across Shimsha near Ajjihalli and Left Bank Channel.	40·00
10	Reservoir across Arkavathi	40·00
11	Reservoir across Chikkahagari at Malavi	50·00
	Total	267·00

III.	Minor Irrigation tanks, etc.	500·00

Industries.—

1.	A plant for the manufacture of Rayon or Cellulose may be established either at Marikanive or at Nanjangud.	Estimates are yet to be prepared.
2.	An Aluminium Industry may be established either near Honnali or Harihar.	
3.	A Ferro-Manganese Plant may be established either at Sandur or Bhadravati.	
4.	New Sugar Factories may be established in Bellary District, Malavalli and in Kabbini reservoir area.	
5.	A Paper Mill in Kabbini Reservoir area	50·00
6.	Forest Industries do	25·00
7.	Fertiliser Factory in Shimoga	300·00

Communications.—

1.	Formation of new roads	50·00
2.	Cement-concreting	150·00
3.	Asphalting of roads	80·00
4.	Special Repairs to roads	150·00
5.	Construction of new bridges	60·00
6.	Acquisition of tools and plants	40·00
7.	Rural communications	45·00
8.	Malnad road development	45·00
	Total	620·00

ಶ್ರೀ ಕೆ ಲಕ್ಕಪ್ಪ.—ಈ ಡ್ರಾಫ್ಟ್ ಪ್ರಪೋಸಲ್ಸ್ ಯಾವಾಗ ಫೈನಲೈಸ್ ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಶಃ ಇನ್ನು ಒಂದು-ಒಂದೂವರೆ ವರ್ಷಗಳೊಳಗೆ ಆಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈ ಪ್ರಪೋಸಲ್‌ಗಳನ್ನು ಇಷ್ಟೇ ದಿವಸಗಳಲ್ಲಿ ಕಳುಹಿಸಬೇಕೆಂದು ಕೇಂದ್ರ ಸರ್ಕಾರದಿಂದ ನಿರ್ದೇಶ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಕಳಿಸಬೇಕೆಂದು ಬಂದಿದೆ.

ಶ್ರೀ ಕೆ. ಲಕ್ಕಪ್ಪ.—ಈ ಪ್ರಪೋಸಲ್‌ಗಳನ್ನು ಫೈನಲೈಸ್ ಮಾಡುವಾಗ ಒಂದು ಪ್ಲಾನಿಂಗ್ ಬೋರ್ಡ್ ಸಂಸ್ಥಾನಕ್ಕೆ ಯಾವುದಾದರೂ ಇದ್ದರೆ ಅದರ ಮುಂದಿಟ್ಟು ನಿರ್ಧಾರಕ್ಕೆ ಬರುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ಧಾರವಿನ್ನೂ ಮಾಡಿಲ್ಲ, ಇಟ್ಟರೂ ಇಡಬಹುದು.

ಶ್ರೀ ಕೆ. ಲಕ್ಕಪ್ಪ.—ಈ ಪ್ರಪೋಸಲ್‌ನಲ್ಲಿ ಕಪಿನಿ ರಿಸರ್ವಾಯರ್ ಪ್ರಾಜೆಕ್ಟ್ ಸೇರಿಸಿದೆ. ಅದು ನೀರಾವರಿಗಾಗಿ ಮಾಡಿದೆಯೆ ಅಥವಾ ವಿದ್ಯುಚ್ಛಕ್ತಿಗಾಗಿ ಮಾಡಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನೀರಾವರಿ ಮತ್ತು ವಿದ್ಯುಚ್ಛಕ್ತಿ ಎರಡಕ್ಕೂ; ಮುಖ್ಯವಾಗಿ ವಿದ್ಯುಚ್ಛಕ್ತಿ ಉತ್ಪತ್ತಿಗಾಗಿ.

ಶ್ರೀ ಕೆ ಲಕ್ಕಪ್ಪ.—ರೇಯಾನ್ ಇಂಡಸ್ಟ್ರಿ ಮತ್ತು ಅಲ್ಯೂಮಿನಿಯಂ ಕೈಗಾರಿಕೆ ಪ್ರಾರಂಭಿಸಬಹುದೆಂಬ ಸೂಚನೆಯಿದೆ. ಅದಕ್ಕೆ ಅಂದಾಜು ಮಾಡಿಲ್ಲ. ಅದನ್ನು ಖಚಿತವಾಗಿ ತೆಗೆದುಕೊಳ್ಳುವ ಸಂದರ್ಭವಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಪ್ರಪೋಸಲ್ಸ್ ಎಲ್ಲಾ ಪರಿಶೀಲನೆ ಮಾಡುತ್ತಿದ್ದೇವೆ. ಅಂದಾಜ ಯಾವುದೂ ಆಗಿಲ್ಲ. ಹಂಗಾಮಿಯಾಗಿ ಇಂಥಿಂಥ ಕೈಗಾರಿಕೆ ಪ್ರಾರಂಭಿಸಲು ಅವಕಾಶವಿದೆಯೆಂದು ಸೂಚನೆ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ಪರಿಶಿಷ್ಟದಲ್ಲಿ ನಮೂದಿಸಿರುವ ಮೊದಲನೆಯ ನಾಲ್ಕು ಕೈಗಾರಿಕೆಗಳಲ್ಲಿ ಯಾವುದನ್ನಾದರೂ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವಿದೆಯೆ ? ಹಾಗಿದ್ದಲ್ಲಿ ಸುಮಾರು ಅದಕ್ಕೆ ಎಷ್ಟು ಅಂದಾಜಿರಬಹುದು ?

ಶ್ರೀ ಎಚ್. ಸಿದ್ಧವೀರಪ್ಪ.—ತೆಗೆದುಕೊಳ್ಳಬೇಕೆಂಬ ಅಭಿಪ್ರಾಯದಿಂದಲೇ ಈ ಸೂಚನೆ ತಮ್ಮ ಮುಂದಿಟ್ಟಿದೆ. ಮುಖ್ಯವಾಗಿ ಫೆರ್ರೋ ಮ್ಯಾಂಗನೀಸ್ ಯಂತ್ರವನ್ನು ಸ್ಥಾಪಿಸುವುದು ಮತ್ತು ಅಲ್ಯೂಮಿನಿಯಂ ಕೈಗಾರಿಕೆ ಸ್ಥಾಪಿಸುವುದು ಇವೆರಡನ್ನೂ ಆದಷ್ಟು ತೀವ್ರತೆಯಿಂದ ತನಿಖೆಮಾಡಿ ತೆಗೆದುಕೊಳ್ಳಬೇಕೆಂದು ಸರ್ಕಾರದ ಇರಾದೆಯಿದೆ.

ಶ್ರೀ ಕೆ. ಲಕ್ಕಪ್ಪ.—ಹೊಳೆ ನರಸೀಪುರದಲ್ಲಿ ಬೇಕಾದಷ್ಟು ಕಲ್ನಾರು ಸಿಕ್ಕುವುದರಿಂದ ಅಲ್ಲಿ ಅಸ್‌ಬೆಸ್ಟೋಸ್ ಫ್ಯಾಕ್ಟರಿ ಷುರು ಮಾಡುವುದಕ್ಕೆ ಅನುಕೂಲವಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ, ಅಲ್ಲಿ ಮೊದಲು ಒಂದು ಫ್ಲಾಂಟ್ ಹಾಕುತ್ತೇವೆ. ಅಪ್ಪರ್ ಡೆಪ್ತ್‌ನಲ್ಲಿ ಸಿಕ್ಕಬೇಕು. ಅಲ್ಲಿ ಹೇಗೆ ಸಿಕ್ಕುತ್ತದೆಂಬುದನ್ನು ಪರಿಶೀಲಿಸಿ ಸೂಕ್ತ ಕಂಡರೆ ಆ ಕೈಗಾರಿಕೆಯನ್ನು ಕೈಗೊಳ್ಳಬೇಕೆಂಬ ಅಭಿಪ್ರಾಯವಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎರಡನೆಯ ಪಾಂಚವಾರ್ಷಿಕ ಯೋಜನೆಯ ಸಂಬಂಧದಲ್ಲಿ ಮಾನ್ಯ ರೆವೆನ್ಯೂ ಸಚಿವರು ಈ ಸಭೆಯ ಸದಸ್ಯರನ್ನೂ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನೂ ಕೆಲವು ಜಿಲ್ಲೆಗಳಲ್ಲಿ ಸಭೆ ಸೇರಿಸಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದು ನಿಜವೆ ?

ಶ್ರೀ ಕಡಿದಾಳ್ ಮಂಜಪ್ಪ.—ಎರಡನೆ ಪಾಂಚವಾರ್ಷಿಕ ಯೋಜನೆಯ ಸಂಬಂಧದಲ್ಲಿ ಮಾಡಲಿಲ್ಲ. ಒಟ್ಟಿನಲ್ಲಿ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ವಿಚಾರ ಚರ್ಚೆ ಮಾಡುವುದಕ್ಕೆ ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಸಭೆ ಕೂಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಅಭಿಪ್ರಾಯ ಶೇಖರಣೆ ಏಕೆ ಮಾಡಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಪಾಂಚವಾರ್ಷಿಕ ಯೋಚನೆ ಸಂಬಂಧದಲ್ಲಿ ಮೀಟಿಂಗ್ ಮಾಡಲಿಲ್ಲವೆಂದು ಹೇಳಿದ್ದೆ. ಅದಕ್ಕೆ ಇನ್ನೂ ಕಾಲವಿದೆ, ಸೇರಿಸದಿರುವುದೇನಾದರೂ ಇದ್ದರೆ ಅದರಲ್ಲಿ ಸೇರಿಸುವುದಕ್ಕೆ ಅವಕಾಶವಿದೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಎಂದಿದೆ. ಅಲ್ಲಿ ಚರ್ಚೆಯಾಗಿ ಫೈನಲೈಸ್ ಆಗಬೇಕು. ಆಗಲೇ ಒಳಾಡಳಿತ ಸಚಿವರು ತಿಳಿಸಿದ ಹಾಗೆ ಹಂಗಾಮಿಯಾಗಿ rough idea ಇಲ್ಲ ಕೊಟ್ಟಿರುವುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಪೋಸಲ್ಸ್ ಎಲ್ಲಾ ಈ ಸಭೆಯ ಮುಂದಿಡುವುದಕ್ಕೆ ಸಾಧ್ಯವೆ ? ಏನೇನು ಈಗ ಸರ್ಕಾರದವರು ಕಳುಹಿಸಿದ್ದೀರೋ ಅದನ್ನು ಈ ಸಭೆಯ ಗಮನಕ್ಕೆ ಪೂರ್ಣ ವಿವರಗಳೊಡನೆ ತರಲು ಸಾಧ್ಯವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ rough ಆಗಿ ಇಟ್ಟುಕೊಂಡಿದೆ, ಆಖೈರು ಪಟ್ಟಿ ಫೈನಲೈಸ್ ಆಗಿಲ್ಲ.

ಶ್ರೀ ಜಿ. ಶಿವಪ್ಪ.—ಪರಿಶಿಷ್ಟದಲ್ಲಿ ಕೊಟ್ಟಿರುವ IIIನೇ ಐಟಂನ ಮೈನರ್ ಇರಿಗೇಷನ್ ಕೆಲಸಗಳೆಂದರೆ ಎಷ್ಟು ಲಕ್ಷ ರೂಪಾಯಿಗಳೊಳಗಿರಬೇಕೆಂದು ನಿಗದಿ ಮಾಡಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಶಃ ಒಂದು ಲಕ್ಷಕ್ಕಿಂತ ಕಡಮೆಯೆಂದು ಕಾಣುತ್ತದೆ, ನಿರ್ಧರವಾಗಿ ಹೇಳಲಾರೆ.

ಶ್ರೀ ಜಿ. ಶಿವಪ್ಪ.—ಮೈನರ್ ಇರಿಗೇಷನ್ ಕೆಲಸ ಮಾಡುವಾಗ ಪ್ರತಿ ಜಿಲ್ಲೆಗೂ ಅನುಕೂಲವಾಗುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿಯ ಸೂಚನೆ ಚೀಫ್ ಇಂಜಿನಿಯರಿಗೆ ಕೊಟ್ಟಿದೆ.

Sri G. SIVAPPA.—Can you kindly give the names of these works ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥಿಂಥ ಕೆಲಸವೆಂದು ಇನ್ನೂ ನಿರ್ಧರಿಸಿಲ್ಲ.

Sri G. SIVAPPA.—May I bring to your notice that in some cases, in spite of a number of representations, no irrigation work has been included in this 'Parishista'?

ಶ್ರೀ ಕಡಿದಾಳ್ ಮಂಜಪ್ಪ.—ಈ ಮೈನರ್ ಇರಿಗೇಷನ್ ಕೆಲಸಗಳಲ್ಲಿ ಯಾವ ಕೆಲಸ ಬೇಕಾದರೂ ತೆಗೆದು ಕೊಳ್ಳಬಹುದು. ಅದರ ಪಟ್ಟಿ ಇನ್ನೂ ತಯಾರಾಗಿಲ್ಲ.

ಶ್ರೀ ಜಿ. ದುಗ್ಗಪ್ಪ.—ಎರಡನೆಯ ಪಾಂಚವಾರ್ಷಿಕ ಯೋಜನೆಯ ಆಖೈರು ಪಟ್ಟಿ ಮಾಡುವಾಗ ವಿಷಯ ಸಂಗ್ರಹ.ಮಾಡುವುದಕ್ಕೆ ಎಲ್ಲಾ ಡಿಸ್ಟ್ರಿಕ್ಟ್‌ಗಳಿಂದಲೂ ಅಂಕಿ ಅಂಶಗಳನ್ನು ಸರ್ಕಾರದವರು ತರಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತರಿಸಿದೆ.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ಜಿಲ್ಲೆಯಿಂದ ಇದಕ್ಕೆ ಸಂಬಂಧಪಟ್ಟಹಾಗೆ ಯಾವಯಾವ ಅಂಕಿ ಅಂಶ ತರಿಸಿದ್ದೀರಿ ?

Mr. SPEAKER.—It requires a lengthy answer; I do not think it could be answered.

ಶ್ರೀ ಜಿ. ದುಗ್ಗಪ್ಪ.—ಎಲ್ಲಾ ಜಿಲ್ಲೆಗಳಿಂದಲೂ ಅಂಕಿಅಂಶ ತರಿಸಿದೆಯೆಂದು ಹೇಳಿದೆ. ಹಾಗಾದರೆ ಚಿತ್ರದುರ್ಗ ಜಿಲ್ಲೆ ಇರಿಗೇಷನ್ ವರ್ಕ್ಸ್ ವಿಚಾರದಲ್ಲಿ ಮೈನರ್ ಕೆರೆಗಳ ವಿಚಾರದಲ್ಲಿ ಏನು ಅಂಕಿಅಂಶ ತರಿಸಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಚೀಫ್ ಇಂಜಿನಿಯರಿಗೆ ತಿಳಿಸಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಅದು ಯಾವುದೆಂಬುದನ್ನು ಹೇಳತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮೈನರ್ ಇರಿಗೇಷನ್ ಕೆಲಸ ಯಾವಯಾವುದನ್ನು ಸೇರಿಸಬೇಕೆಂದು ಪಟ್ಟಿ ಮಾಡಿಲ್ಲ, ದೊಡ್ಡ ಪ್ರಾಜೆಕ್ಟುಗಳ ವಿಚಾರ ಇಲ್ಲಿ ಹೇಳಿದೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ಈ ಪಾಂಚವಾರ್ಷಿಕ ಯೋಜನೆಯಲ್ಲಿ ಕೆರೆಗಳ ಜೀರ್ಣೋದ್ಧಾರ, ಸಿಲ್ಟ್ ತೆಗೆಯುವುದು ಮುಂತಾದ ಮೈನರ್ ಇರಿಗೇಷನ್ ಕೆಲಸಗಳಿಗೆ ಹಣ ಕೊಟ್ಟಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶಿಷ್ಟದ IIIನೆಯ ಐಟಂನಲ್ಲೇ ಹೇಳಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹಾಸನ ಜಿಲ್ಲೆ ಕೊರಳನೂರು ಕೆಲಸ ಸೇರಿಸಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

Sri M. LINGANNA.—May I know the last date by which Government will have to send all the proposals?

Sri Kadidal MANJAPPA.—Perhaps one year.

Sri M. LINGANNA.—Is it not possible for the Government to hold meetings at the district level as suggested by Sri Huchmasty Gowda to secure fuller data so far as projects and other works are concerned?

Sri Kadidal MANJAPPA.—It is quite possible. But, I invite the Hon'ble Members to give suggestions in this behalf instead of convening meetings in every district.

Sri M. LINGANNA.—May I know whether the Government are aware that the Nanjangud Sub-Division have requested for establishing a soap factory?

Sri H. SIDDAVEERAPPA.—Sir, the Government of India have a policy regarding expansion of soap factories. Their view is that the production of soap in the country is more than the demand. Even for the expansion of the Soap Factory we had to exert so much.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪರಿಶಿಷ್ಟದಲ್ಲಿ ಹೇಮಾವತಿ ಜಲಾಶಯಕ್ಕೆ ಒಟ್ಟು ವೆಚ್ಚ 9 ಕೋಟಿ ರೂಪಾಯಿಗಳೆಂದು ಹೇಳಿದೆ. ಅದರ ತಪಶೀಲು, ಮುಳುಗಡೆಯಾಗುವ ವಿಸ್ತೀರ್ಣ ಮುಂತಾದವನ್ನು ಹೇಳಲು ಸಾಧ್ಯವಾದರೆ ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯ. ಬೇಕಾದರೆ ಆಮೇಲೆ ಹೇಳಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಿಂದೆ ಈ ಜಲಾಶಯದ ವಿಚಾರದಲ್ಲಿ ಪರಿಶೀಲನೆ ಆಗಿರಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—1932-33ರಲ್ಲೇ rough estimate ತಯಾರಾಗಿತ್ತು. ಈಗ ಸುಮಾರು 9ಕೋಟಿ ರೂಪಾಯಿಗಳು ಖರ್ಚಾಗುತ್ತವೆಂದು ನಿರೀಕ್ಷಿಸಲಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Second Five-Year Planಗೆ ತಾವು ಕೈಕೊಳ್ಳಬೇಕೆಂದಿರುವ ಕೆಲಸಗಳು ಲಾಭದಾಯಕವಾಗಿರುತ್ತವೆಯೋ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಿ ಅನಂತರ ಅವುಗಳನ್ನು ಸೇರಿಸುತ್ತೀರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ; ಹಾಗೆಯೇ ಮಾಡುವುದು.

ಶ್ರೀ ಬಿ. ವಿ. ನಾರಾಯಣ ರೆಡ್ಡಿ.—ಬಾಗೇಪಲ್ಲಿ ತಾಲ್ಲೂಕನ್ನು ತಮ್ಮ ಈ Second Five-Year Planನಲ್ಲಿ ಏಕೆ ಕೈಬಿಟ್ಟಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಕೈ ಬಿಟ್ಟಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಾದರೆ Second Five-Year Planನಲ್ಲಿ ಸೇರಿಸಿಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ತೊಂದರೆಗಳು ಬಂದಿರುವುದರಿಂದ ತಡವಾಗಿದೆ.

ಶ್ರೀ ಬಿ. ವಿ. ನಾರಾಯಣ ರೆಡ್ಡಿ.—ಆ ತೊಂದರೆಗಳೇನು?

ಶ್ರೀ ಕಡಿದಾಳ್ ಮಂಜಪ್ಪ.—ಅಗ್ರಿಮೆಂಟ್ ಸರಿಯಾಗಿ ಆಗಿಲ್ಲ. ಅಗ್ರಿಮೆಂಟ್ ಜಾರಿಯಲ್ಲಿರುವವರೆಗೆ ಅದನ್ನು ಪಾಲಿಸಲೇಬೇಕು.

Mr. SPEAKER.—As this question relates to inter-State relations, may I request the Hon'ble Member to leave it there and allow the Government to deal with it?

ಶ್ರೀ ಆರ್. ಅನಂತರಾಮನ್.—ಮಂಗಳ ರಿಜರ್ವಾಯರ್ ಸ್ಕೀಮನ್ನು First Five-Year Planನಲ್ಲಿ ಸೇರಿಸಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿಸಿತ್ತು.

ಶ್ರೀ ಆರ್. ಅನಂತರಾಮನ್.—ಹಾಗಿದ್ದರೆ ಏಕೆ ಅದನ್ನು Second Five-Year Planನಲ್ಲಿ ಸೇರಿಸಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ನೀರು ಶೇಖರಣೆಯಾಗಿರುವುದು ಅಷ್ಟು ಆಶಾದಾಯಕವಾಗಿಲ್ಲ. ಅದಕ್ಕಾಗಿ ಹಾಗೆಯೇ ಬಿಟ್ಟಿದೆ.

ಶ್ರೀ ಆರ್. ಅನಂತರಾಮನ್.—ಹಿಂದೆ ಒಂದು ಬಾರಿ ಇದನ್ನು Second Five-Year Planನಲ್ಲಿ ಸೇರಿಸುವುದಾಗಿ ಹೇಳಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳಿದ್ದೆವು.

ಶ್ರೀ ಆರ್. ಅನಂತರಾಮನ್.—ಈಗಲಾದರೂ ಇದನ್ನು ಮತ್ತೆ ವಿಮರ್ಶಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ವಿಮರ್ಶೆ ಮಾಡುತ್ತೇವೆ.

ಶ್ರೀ ಆರ್. ಅನಂತರಾಮನ್.—New Projects ತಾವು ಕೈಗೊಂಡರೆ ಯಾವಯಾವ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟೆಷ್ಟು ಎಕರೆ ನೀರಾವರಿಯಾಗುತ್ತದೆ ಎಂಬುದನ್ನು ತಿಳಿಸಲು ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ನನ್ನಲ್ಲಿಲ್ಲ ; ಆದರೂ ಈ ಪ್ರಶ್ನೆಗೆ ಉತ್ತರವಾಗಿ ಒದಗಿಸಿರುವ ಪರಿಶಿಷ್ಟದಿಂದ ಈ ವಿಚಾರ ಸ್ಥೂಲವಾಗಿ ಗೊತ್ತಾಗುತ್ತದೆ.

ಶ್ರೀ ಕೊಟ್ರಬಸವನಗೌಡ.—Second Five-Year Planಗೆ ಬಳ್ಳಾರಿ ಜಿಲ್ಲೆಯ ಕೆಲವು ಯೋಜನೆಗಳನ್ನೂ ಸೇರಿಸಿಕೊಳ್ಳಲು ಪ್ರಯತ್ನಪಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ವಿವರಗಳನ್ನು ತರಿಸಿಕೊಳ್ಳುತ್ತೇವೆ.

Sri S. SRINIVASA IYENGAR.—Is it not a fact that there have been representations for the establishment of Iron and Steel plant at Hospet?

Sri H. SIDDAVEERAPPA.—Yes, there was a proposal in regard to that and it was examined and found not feasible.

Sri S. SRINIVASA IYENGAR.—Is it not a fact that rich iron ore is available in large quantities?

Sri H. SIDDAVEERAPPA.—But there are other various difficulties. The raw material is there but the cost of production is high to have it as an economic unit.

Sri S. SRINIVASA IYENGAR.—Is it not a fact that in view of the establishment of Iron plant at Bombay it would be much easier to establish a plant at Hospet ?

Sri H. SIDDAVEERAPPA.—But the only difficulty there is to have cheap power in order to maintain it as an economic unit. As soon as that is solved, possibly there is no difficulty in having one.

Sri S. SRINIVASA IYENGAR.—Is it not advisable at least to include it in the second Five-Year Plan subject to verification later ?

Sri H. SIDDAVEERAPPA.—I am awaiting the result of your committee's deliberations.

Sri V. MASIYAPPA.—Are the Government aware that iron is available in rich quantities in Ingal ?

Sri H. SIDDAVEERAPPA.—As the Hon'ble Member knows, a pilotscheme is already working there.

Sri V. MASIYAPPA.—Will the Government be pleased to state whether they are going to include in the second-Five-Year Plan the proposal to start sulphur manufacturing industry at Ingal ?

Sri H. SIDDAVEERAPPA.—It all depends upon the result of the experiments we are now carrying on. If it is found as a result of the experiments that we can start it as an economic unit, then it may be examined.

Sri V. MASIYAPPA.—Has it not been reported already that the availability of iron-sulphide is sufficient to establish the manufactory there ?

Sri H. SIDDAVEERAPPA.—Some more pilot schemes are necessary to find out what materials will be available for us to start an industry.

Sri V. MASIYAPPA.—Will it be possible to ascertain and get the report before the drafting of the second Five-Year Plan is completed ?

Sri H. SIDDAVEERAPPA.—I will examine it.

Sri Sydney A THOMAS.—Now that a new gold reef has been discovered in the Kolar Gold Field, will the Government consider granting financial assistance for its future development ?

Sri H. SIDDAVEERAPPA.—The whole matter will have to be examined after the committee concludes its deliberations.

Sri Sydney A THOMAS.—Are you referring to the Probing Committee ?

Sri H. SIDDAVEERAPPA.—That committee has in view all the matters relating to the K. G. F. mining industry.

Sri P. R. RAMAIYA.—Under Industries you have includel glass manufacture. Was there not a proposal to have glass manufacturing factory near about Talkad ?

Sri H. SIDDAVEERAPPA.—We have not thought over it. Anyhow, since the Hon'ble Member has brought it to my notice, I will have the proposal examined.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪರಿಶಿಷ್ಟದಲ್ಲಿ Communications ಬಗ್ಗೆ ಐದನೆಯ ಐಟಂನಲ್ಲಿ ಹೊಸ ಅಣೆಕಟ್ಟುಗಳನ್ನು ಕಟ್ಟಿಕೊಳ್ಳಲು ಹಣವನ್ನು ಅಂದಾಜು ಮಾಡಲಾಗಿದೆ. ಅದರಲ್ಲಿ ನಮ್ಮ ಜಿಲ್ಲೆಯ ಅಣೆಕಟ್ಟು ಸೇರಿರುವುದು ಯಾವುದು ?

ಶ್ರೀ ಕಡಿದಾಳ್ ಮಂಜಪ್ಪ.—ಚಿತ್ರದುರ್ಗ ಜಿಲ್ಲೆಯ ನಾರಾಯಣಪುರ ಮತ್ತು ಚಿಡ್ಡಯ್ಯನಪಟ್ಟ ಅಣೆಕಟ್ಟುಗಳು ಸೇರಿವೆ.

ಶ್ರಿ ಜಿ. ಬಸಪ್ಪ.—ಹೊಸದುರ್ಗ ತಾಲ್ಲೂಕಿನಲ್ಲಿ ಸಿಮೆಂಟ್ ಪ್ರಾಜೆಕ್ಟ್ ಒಂದನ್ನು ಸ್ಥಾಪನೆ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿರತಕ್ಕ ಕಷ್ಟ ಇದಕ್ಕೆ ಬೇಕಾದ power ಇಲ್ಲ. More than anything else transport facilities are not available. ಇಷ್ಟೇ ಅಲ್ಲದೆ, ಇದರ cost of production ವಿಚಾರ ಬೇರೆ ಇದೆ. ಈಗಾಗಲೇ ಭದ್ರಾವತಿಯಲ್ಲಿನ ಸಿಮೆಂಟ್ ಫ್ಯಾಕ್ಟರಿಯಲ್ಲಿ full production ಆಗುತ್ತಿರುವುದರಿಂದ, ಮತ್ತೊಂದು ಸಿಮೆಂಟ್ ಪ್ಲಾಂಟನ್ನು ಇಲ್ಲಿ ಸ್ಥಾಪನೆಮಾಡುವುದರ ಅವಶ್ಯಕತೆ, ಅನಾವಶ್ಯಕತೆ—ಇವೆಲ್ಲವನ್ನೂ ಇನ್ನೂ ತೀವ್ರವಾಗಿ ಯೋಚಿಸ ಬೇಕಾಗಿದೆ.

ಶ್ರೀ ಜಿ. ಬಸಪ್ಪ.—ಹಾಗಾದರೆ ಭದ್ರಾವತಿಯಲ್ಲಿ ಈಗ ಉತ್ಪತ್ತಿಯಾಗುತ್ತಿರುವ ಸಿಮೆಂಟ್ ಸಂಸ್ಥಾನವೆ ಅವಶ್ಯಕತೆಗೇ ಸಾಕಾಗುತ್ತದೆಯೇ ?

Sri H. SIDDAVEERAPPA.—We are now in the all-India cement pool.

ಶ್ರೀ ಜಿ. ಬಸಪ್ಪ.—ಹೋಗಲಿ, ಅಲ್ಲಿ ಅವಶ್ಯಕವಾಗಿ ಬೇಕಾಗಿರುವ Coir Industry ಯನ್ನಾದರೂ ಸ್ಥಾಪಿಸಲು ಅವಕಾಶ ಕಲ್ಪಿಸುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ವಿಚಾರಮಾಡಿ ಒಂದು ಪೈಲಟ್‌ಪ್ಲಾಂಟ್ ಹಾಕಲು ಕಾರ್ಯಕ್ರಮ ಕೈಗೊಳ್ಳುವ ಬಗ್ಗೆ ಯೋಚಿಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—Cellulose ಅಥವಾ Rayon ತಯಾರಿಕೆಗಾಗಿ ಒಂದು ಪ್ಲಾಂಟನ್ನು

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಮಾರೀಕಣಿವೆ ಅಥವಾ ನಂಜನಗೂಡಿನಲ್ಲಿ ಸ್ಥಾಪನೆ ಮಾಡುವ ಯೋಜನೆಯೊಂದನ್ನು ಇಟ್ಟುಕೊಂಡಿದ್ದೀರಿ. ಇದರಿಂದ Silk Industryಗೆ ಧಕ್ಕೆ ಬರುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಇನ್ನೂ ಪರಿಶೀಲನೆ ಮಾಡಬೇಕಾಗಿದೆ. Rayon ಹೊರಗಿನಿಂದ ತರಿಸಿಕೊಳ್ಳುವುದು ಸರಿಯೇ, ಇದರಿಂದೇನಾದರೂ Silk Industry ಗೆ ಅಪ್ರತ್ಯಕ್ಷವಾಗಿ ತೊಂದರೆಯಾಗುವ ಸಂಭವವಿದೆಯೇ ಎಂಬುದನ್ನು ಸಂಪೂರ್ಣವಾಗಿ ತನಿಖೆಮಾಡಿ, ನಿರ್ಧಾರಮಾಡಿ, ಅನಂತರ ಪ್ಲಾನಿನಲ್ಲಿ ಸೇರಿಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಬಗ್ಗೆ ಹೊಸ ಫ್ಯಾಕ್ಟರಿ ಸ್ಥಾಪನೆಮಾಡಲು ಈಗಿರತಕ್ಕ ವಿದ್ಯುಚ್ಛಕ್ತಿ ಸಾಕಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೊನ್ನೇಮರಡು ಪ್ರಾಜೆಕ್ಟ್ ಆಗುವವರೆಗೆ ಸಾಕಾದಷ್ಟು ವಿದ್ಯುಚ್ಛಕ್ತಿ ಸರಬರಾಜಿಗೆ ಮಾರ್ಗವಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೊನ್ನೇಮರಡು ಪ್ರಾಜೆಕ್ಟ್ ವಿಚಾರದಲ್ಲಿ ಎಷ್ಟುದೂರ ಸಾಗಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ನಿರೀಕ್ಷೆಗೆ ತಕ್ಕಹಾಗೆ ಮಾಡುತ್ತಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಮಲನಾಡು ಪ್ರಶ್ನೆಯನ್ನೇ ಒಂದು ಅಂಗವಾಗಿ ತೆಗೆದುಕೊಂಡು ಅಲ್ಲಿ project ಗಳನ್ನು ಕೈಗೊಳ್ಳುವ ಬಗ್ಗೆ ಏಕೆ ಯೇಜನೆಯೊಂದನ್ನು ಇದರಲ್ಲಿ ಸೇರಿಸಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧಾರಣವಾಗಿ ಈಗ ಒಂದು ಯೋಜನೆ ಸರ್ಕಾರದ ಮುಂದೆ ಇದೆ. ಇಂಥಿಂಥ ಕೆಲಸಗಳನ್ನೇ ಕೈಗೊಳ್ಳಬೇಕೆಂದು ಪಟ್ಟಿಯನ್ನೇನೂ ತಯಾರುಮಾಡಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ಆ ರೀತಿ ಒಂದು exhaustive list ತಯಾರು ಮಾಡಿಕೊಂಡು. ಅದನ್ನು ಕೈಗೊಳ್ಳಲು ಒಂದು ನಿರ್ದಿಷ್ಟಕಾಲವನ್ನು ಸಹ ನಿಗದಿಮಾಡಿಕೊಳ್ಳುವುದು ಒಳ್ಳೆಯದಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸೂಕ್ತ, ನ್ಯಾಯ. ಈ ಬಗ್ಗೆ ಸದಸ್ಯರೊಡನೆ ಸಮಾಲೋಚನೆ ನಡೆಸಿ ಕನಿಷ್ಟ ಪಕ್ಷದ ಯೋಜನೆ ಏನು ಎಂಬುದನ್ನು ನಿರ್ಧರಿಸಿ ಒಂದು ಯೋಜನೆ ಮಾಡೋಣ.

ಶ್ರೀ ಟಿ. ಸಿ. ಬಸಪ್ಪ.—ಮಲೆನಾಡಿಗಾಗಿ project ಕೈಗೊಳ್ಳುವ ಬಗ್ಗೆ ಪರಿಶಿಷ್ಟದಲ್ಲಿ ಏಕೆ ನಮೂದಾಗಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಾಜೆಕ್ಟಿನಲ್ಲಿ ಮಲೆನಾಡು ಸಹ ಸೇರುತ್ತದೆ.

ಶ್ರೀ ಟಿ. ಸಿ. ಬಸಪ್ಪ.—ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕಾಟೇಜ್ ಇಂಡಸ್ಟ್ರೀಗೆ ಏನೂ ಪ್ರೊವಿಷನ್‌ಮಾಡಿಲ್ಲ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕಾಟೇಜ್ ಇಂಡಸ್ಟ್ರೀ ಇದರಲ್ಲಿ ಬರುವುದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ಅದಕ್ಕೆ ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಪ್ರೊವೈಡ್ ಮಾಡುವುದು ನ್ಯಾಯವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಬೇರೆ ಒಂದು ಫಂಡ್‌ನಿಂದ ಆ ಕೆಲಸನಡೆಯುತ್ತಾ ಇರುವುದರಿಂದ ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಸೇರಿಸುವ ಅವಶ್ಯಕತೆ ಕಂಡು ಬಂದಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ನಂಜನಗೂಡು ಸಬ್ ಡಿವಿಜನ್‌ನಲ್ಲಿ ರೇಷ್ಮೆ ವ್ಯವಸಾಯ ಗೃಹ ಕೈಗಾರಿಕೆಯಾಗಿರುವುದರಿಂದ ಅಲ್ಲಿ ರೇಯಾನ್ ಕಾರ್ಖಾನೆ ಸ್ಥಾಪಿಸಿದಲ್ಲಿ ರೇಷ್ಮೆ ಕೈಗಾರಿಕೆಗೆ ಏಟು ಬೀಳುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಇನ್ನು ಸಲಹಾರೂಪದಲ್ಲಿದೆ, ಪೂರ್ವಾಪರ ಯೋಚನೆಮಾಡದೆ ನಿರ್ಧಾರ ಕೈಕೊಳ್ಳುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಇದರಲ್ಲಿ ಅನಂತರ ತೆಗೆದುಕೊಳ್ಳಲಾಗುತ್ತದೆ ಎಂದು ಸೇರಿಸಿರುವುದರಲ್ಲಿ, ಕೇಂದ್ರ ಸರ್ಕಾರದಿಂದ ಸಹಾಯ ಬರುತ್ತದೆ ಎಂಬ ನಿರೀಕ್ಷಣೆಯಮೇಲೆ ತಾನೆ ಅದನ್ನು ಸೇರಿಸಿರುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಫೈನಾನ್ಷಿಯಲ್ ರಿಸೋರ್ಸ್ ನೋಡಿಕೊಂಡು ಮಾಡಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಅವುಗಳಲ್ಲಿ ಎಷ್ಟು ಪೂರ್ಣಮಾಡುವುದಕ್ಕೆ ಅವಕಾಶವಿದೆ ಎಂಬುದನ್ನು ಅಂದಾಜುಮಾಡಿ ತಾನೆ ಸೇರಿಸುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಈಗಾಗಲೇ ತೆಗೆದುಕೊಂಡಿರತಕ್ಕ ಐಟಂಗಳಿಗೆ ಕೇಂದ್ರ ಸರ್ಕಾರದಿಂದ ಫೈನಾನ್ಷಿಯಲ್ ರಿಸೋರ್ಸ್ ಸಿಕ್ಕುತ್ತದೆ ಎಂದು ಭರವಸೆ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ನಿರೀಕ್ಷಣೆ ಮಾಡಿಯೇ ಸೇರಿಸಲಾಗಿದೆ.

ಶ್ರೀ ಯು. ಎಂ. ಮಾದಪ್ಪ.—ಇವುಗಳಲ್ಲದೆ ಇನ್ನೂ ಹೆಚ್ಚು ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೇ ?

Sri H. SIDDAVEERAPPA.—As my Hon'ble friend has already put it, it is partly still in the initial stage.

ಈಗ ಸೇರಿಸಿರತಕ್ಕ ಯೂನಿಟ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಬೇರೆ ಹೊಸದನ್ನು ಸೇರಿಸಲೂ ಬಹುದು.

Sri T. MARIAPPA.—What I want to know is whether the Government of Mysore have thought of establishing a fertiliser factory in Shimoga. There was an old proposal which had been abandoned almost. Is it the same old proposal that they have included in the second Five-Year Plan ?

Sri H. SIDDAVEERAPPA.—In view of the fact that the Central Government have been feeling the need to start some more Fertiliser Factories in this country, we thought that Mysore also could easily take in one. It is with that assumption that we have put it down in the Five-Year Plan.

Sri T. MARIAPPA.—Have you stated to the Government of India that there is need for a fertiliser factory in Mysore State ?

Sri H. SIDDAVEERAPPA.—We have already communicated the proposal. The only difficulty is lack of adequate power.

Sri T. MARIAPPA.—Are the Government aware that the Central

Government are prepared to establish two fertiliser factories, one in the north and one in the south ?

Sri H. SIDDAVEERAPPA.—That is what I have already said.

Sri T. MARIAPPA.—Are the Government aware that the Government of India are very keen on locating a fertiliser factory in the south and they are searching for a proper location where adequate power is available ?

Sri H. SIDDAVEERAPPA.—Yes.

Sri T. MARIAPPA.—May I know what is the quantum of power that is needed for the fertiliser factory of this magnitude ?

Sri H. SIDDAVEERAPPA.—I believe somewhere about 25,000 to 30,000 K.W.

Sri T. MARIAPPA.—If this is so, was it not possible to spare that much power because the matter is urgent and the Government of India are very earnest; they are already sounding the State Governments; if the Government of Mysore can only spare and make available about 20,000 to 25,000 K.W., is it not possible for this factory to be located here, Sir ?

Sri H. SIDDAVEERAPPA.—I understand from my colleague that it is not possible to spare that much of power at present.

Sri T. MARIAPPA.—Are the Government aware, Sir, that all the preliminaries connected with the establishment of the fertiliser factory had been worked up and plans are ready ?

Sri H. SIDDAVEERAPPA.—Yes, Sir.

ಶ್ರೀ ಬಿ. ರಾಚಯ್ಯ.—ಯಳಂದೂರು ತಾಲ್ಲೂಕಿಗೆ ಸಂಬಂಧಪಟ್ಟ ನೀರಾವರಿಗಾಗಿ ಒಂದು ಯೋಜನೆ ಏನಾದರೂ ತಯಾರು ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಗಳ ಜೀರ್ಣೋದ್ಧಾರಕ್ಕಾಗಿ ಒಂದು ಯೋಜನೆ ತಯಾರು ಮಾಡಿದೆ.

ಶ್ರೀ ಬಿ. ರಾಚಯ್ಯ.—ಎಷ್ಟು ಲಕ್ಷ ರೂಪಾಯಿಗಳ ಯೋಜನೆ, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—3 ಲಕ್ಷದಿಂದ 6 ಲಕ್ಷ ರೂಪಾಯಿಗಳು.

ಶ್ರೀ ಬಿ. ರಾಚಯ್ಯ.—ಈ ಪಾಂಚವಾರ್ಷಿಕ ಯೋಜನೆಯಲ್ಲಿ ಅದು ಸೇರಿತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಮೈನರ್ ಇರಿಗೇಷನ್ ವರ್ಕ್ಸ್‌ಗೆ ಸಂಬಂಧಪಟ್ಟಂತೆ ಕೆಲಸ ನಡೆದಿದೆ.

ಶ್ರೀ ಬಿ. ರಾಚಯ್ಯ.—ಕೆಲಸ ಆಗದೆ ಈ ಹಣ ಬಹಳವಾಗಿ ನಿಂತುಹೋಗಿದೆ ಎಂಬುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿಂತುಹೋಗಿಲ್ಲ.

ಶ್ರೀ ಬಿ. ರಾಚಯ್ಯ.—ತಲಕಾಡಿನಲ್ಲಿ ಗಾಜು ತಯಾರಿಸಲು ಅಗತ್ಯವಾದ ಕಚ್ಚಾ ಪದಾರ್ಥವಿರುವ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬೇಕಾದಷ್ಟು ಮರಳಿದೆ.

ಶ್ರೀ ಬಿ. ರಾಚಯ್ಯ.—ಹಾಗಿದ್ದರೆ ಗಾಜು ತಯಾರಿಸಲು ಸರ್ಕಾರದವರು ಏಕೆ ಮನಸ್ಸು ಮಾಡಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಯೋಚನೆ ಮಾಡಿರಲಿಲ್ಲ. ಈಗ ಸರ್ಕಾರದವರ ಗಮನಕ್ಕೆ ತಂದಿದ್ದೀರಿ, ಯೋಚನೆ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ದ್ವಿತೀಯ ಪಾಂಚವಾರ್ಷಿಕ ಯೋಜನೆ ಬಗ್ಗೆ ಸಲಹೆ ಕೊಡಲು ಒಂದು ಸಮಿತಿ ಮಾಡಿದ್ದೀರಲ್ಲಾ ಆ ಸಮಿತಿಯ ಸಲಹೆ ಕೇಳಿ ಈ ಪಟ್ಟಿ ತಯಾರು ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಟಿ. ಹನುಮಯ್ಯ.—ಮತ್ತೆ ಯಾರ ಸಲಹೆ ಕೇಳಿ ಈ ಪಟ್ಟಿ ತಯಾರು ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಅಧಿಕಾರಿಗಳ ಸಲಹೆಯ ಮೇಲೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ, ಅಧಿಕಾರಿಗಳು ಸಲಹೆಯ ಮೇಲೆ ಮಾಡಿದ್ದರೆ, ಸಲಹೆ ಕೇಳಲಕ್ಕೆ ಕಮಿಟಿ ಏಕೆ ರಚನೆ ಮಾಡಿದಿರಿ, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಸಮಿತಿ ಮಾಡಿರುವ ಉದ್ದೇಶ ಈಗ ನಡೆಯುತಕ್ಕ ಕಾಂಗಾರಿಗಳ ವಿಚಾರದಲ್ಲಿ ರಿವ್ಯೂ ಮಾಡುವುದು ಮತ್ತು ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಸಲಹೆ ಮಾಡುವುದಕ್ಕಾಗಿ ಮಾಡಿದೆ.

ಶ್ರೀ ಟಿ. ಹನುಮಯ್ಯ.—ಈ ಪಟ್ಟಿಯಲ್ಲಿರುವುದೆಲ್ಲಾ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿದೆ ತಾನೆ ?

ಶ್ರೀ ಕಡಿದಾಳ್ ಮಂಜಪ್ಪ.—ದ್ವಿತೀಯ ಪಾಂಚವಾರ್ಷಿಕ ಯೋಚನೆಯಲ್ಲಿ ಇನ್ನೂ ಸೇರಿಲ್ಲ. ಅದು ಆಖೈರು ತೀರ್ಮಾನವಾಗುವುದಕ್ಕೆ 1-1½ ವರ್ಷಬೇಕು ಅಂತ ಆಗಲೇ ಹೇಳಿದೆ.

ಶ್ರೀ ಟಿ. ಹನುಮಯ್ಯ.—ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಹರಿಜನಾಭ್ಯುದಯಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಯೋಜನೆಗಳನ್ನು ಸೇರಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಆಖೈರು ಪಟ್ಟಿ ಅಲ್ಲ. ಇದನ್ನು ಟೆಂಟೆಟೀವ್ ಆಗಿ ಇಟ್ಟುಕೊಂಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ಇದು ಆಖೈರು ಪಟ್ಟಿ ಅಲ್ಲದೆ ಇರುವುದರಿಂದ ಪುನಃ ಇದನ್ನು ಸಮಿತಿಯವರ ಮುಂದೆ ಇಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಡುತ್ತೇವೆ.

Mr. SPEAKER.—We have already spent half-an-hour over this question. We will take up the next question.

Sri A. BHEEMAPPA NAIK.—This is a very important question. It is very necessary that some more information should be elicited and more questions should be put, Sir.

Mr. SPEAKER.—For that very reason, I have given half-an-hour to this question. All the grievances cannot be ventilated by every member during question-hour.

Sri A. BHEEMAPPA NAIK.—It is not ventilating grievances, Sir. We have to collect information. Unless we have information, we will be unable to furnish our own ideas to the House. I would request the Hon'ble Speaker to kindly allow us to put some more questions.

Mr. SPEAKER.—I agree the question is very important and it pains me to find that there is not sufficient time. But you must take some other opportunity to discuss this matter as provided in the Rules of Procedure. I have no objection even if a day is allotted for this purpose. Merely by putting a few more questions, I do not think any good purpose will be served. No justice can be done to the Five-Year Plan in the course of a few questions. During question-hour we must cover sufficient number of questions.

Measures for Eradication of Untouchability.

9 A.M.

Q.—326. **Sri P. M. SWAMIDURAI** (Kolar Gold Fields-Scheduled Castes):—

Will the Government be pleased to state :—

(*a*) the steps they have taken for the eradication of untouchability ;

(*b*) whether there are committees constituted to propagate and work for the eradication of untouchability ?

A.—**Sri Kadidal MANJAPPA** (Minister for Revenue and Public Works) [On behalf of SRI K. HANUMANTHAIYA (Chief Minister)].—

(*a*) The Government have passed two Acts removing the civil disabilities of Harijans in 1943 and 1948. It is also necessary to improve the economic condition of these people and for this purpose Government have undertaken various measures. Among them are the free grant of lands, giving house sites free, assisting them with subventions to build houses and helping them to start cottage industries, dairy farming, poultry, etc., by grant of suitable loans. Harijan students are provided with scholarships and free board and lodging. Qualified members of the community are also absorbed in Government service, 16 2/3 per cent of the posts being reserved for them.

(*b*) Committees are constituted to advise on all aspects of Harijan uplift work in the Districts and Taluks including the eradication of untouchability.

Sri P. M. SWAMIDURAI.—In your reply you have given that about 16 2/3 per cent of the posts will be reserved for them. Is it followed in recruitment ?

Sri Kadidal MANJAPPA.—Yes ; in the case of direct recruitment it is followed.

Sri P. M. SWAMIDURAI.—What about in the case of promotional posts ?

Sri Kadidal MANJAPPA.—It is not followed there because it is purely on the basis of seniority and merit.

Sri P. M. SWAMIDURAI.—So, so far no Scheduled Castes man proved himself to be efficient and has not put in more number of service ; is it so ?

Sri Kadidal MANJAPPA.—If he is senior and if he has got the required qualification, he is bound to have a chance.

Sri P. M. SWAMIDURAI.—It means, there is no such man in the service.

Sri Kadidal MANJAPPA.—I did not say that there is no such man ; promotions are based on seniority and merit.

Sri P. M. SWAMIDURAI.—Sir, has it come to the notice of Government that due to inadequate allotment of scholarships, many students have discontinued their studies ?

Mr. SPEAKER.—That question was asked and answered yesterday.

Sri P. M. SWAMIDURAI.—Is it not a fact that considerable delay is caused in granting lands and sites for building houses to Schedules Castes people ?

Sri Kadidal MANJAPPA.—There is no intentional delay only in the case of Scheduled Castes people. Generally, some delay in some cases will be caused due to several reasons.

Sri M. MADIAH.—On a point of order, Sir. In the question the subject matter is regarding the steps taken by

Government towards the removal of untouchability. But, all sorts of supplementary questions are put and answers furnished which do not arise out of the question.

Mr. SPEAKER.—I have read the question and answer. The supplementaries are regarding the steps undertaken by Government to improve the economic conditions of the Scheduled Castes people. Therefore, indirectly it will help the removal of untouchability if you improve their economic position. It is correct.

Sri P. M. SWAMIDURAI.—At least now, would Government take speedy steps to grant lands and house sites to the Scheduled Castes people ?

Sri Kadidal MANJAPPA.—Government is anxious to grant land to all people irrespective of the community as early as possible and to the extent lands are available.

Sri P. M. SWAMIDURAI.—Will the Government take steps to start more hostels for Scheduled Castes ?

Sri Kadidal MANJAPPA.—We shall consider the suggestion of the Hon'ble Member subject to the availability of funds.

Sri K. S. VASAN.—Will the Government be pleased to make a comprehensive report to this House on the results so far achieved and the measures taken to eradicate untouchability in the State ?

Sri Kadidal MANJAPPA.—We will consider the suggestion.

Depressed Class Families in Bangalore South Taluk (Amelioration)

Q.—488. **Sri A. V. NARASIMHA REDDY** (Bangalore South).—

Will the Government be pleased to state :—

(*a*) the number of Depressed Class families living in Bangalore South Taluk ;

(*b*) the total population of them in this taluk according to 1951 Census ;

(*c*) the types of Government help extended to their amelioration from 1952 to 1954 (yearwise figures of help in value of money may kindly be stated) ?

A.—**Sri Kadidal MANJAPPA** (Minister for Revenue and Public Works) [On behalf of SRI K. HANUMANTHAIYA (Chief Minister)].—

(*a*) 6,233.

(*b*) 36,007.

(*c*) *Construction of houses.*—

		Rs.	a.	p.
1951-52	...	19,063	13	3
1952-53	...	14,923	11	3
1953-54	...	14,150	0	0

1953-54.—

		Rs.
(1) Publicity and Propaganda	...	305
(2) Loans—Agriculture	...	900
(3) Loans—Animal Husbandry	...	500
(4) Loans to Cottage Industries	...	550

Eradication of untouchability 1954.—

Harijan Day	...	100

ಶ್ರೀ ಎ. ವಿ. ನರಸಿಂಹರೆಡ್ಡಿ.—(*c*) ಪ್ರಶ್ನೆಗೆ ಉತ್ತರವಾಗಿ ಹಣ ಖರ್ಚು ಮಾಡಿರುವ ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ವರ್ಷೇ ವರ್ಷೇ ನಮ್ಮ ತಾಲ್ಲೂಕಿಗೆ ಗ್ರಾಂಟು ಕಡಮೆ ಮಾಡುತ್ತಾ ಬರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಸಂಸ್ಥಾನಾಮಳೆ ಎಲ್ಲಾ ಪ್ರದೇಶಗಳಿಗೂ ಕೊಟ್ಟಿರುವ ಗ್ರಾಂಟು. ಇದನ್ನು ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಹಂಚುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ಹೆಚ್ಚಿನ ಜನಸಂಖ್ಯೆಯಿರುವ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಇತರ ತಾಲ್ಲೂಕುಗಳಿಗಿಂತ ಕಡಮೆ ಗ್ರಾಂಟು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್. ಯಾವ ಯಾವ ಡಿಸ್ಟ್ರಿಕ್ಟಿಗೆ ಎಷ್ಟೆಷ್ಟು ಕೊಟ್ಟಿದ್ದಾರೆಂಬ ಅಂಕಿ ಅಂಶ ನನ್ನಲ್ಲಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹೀಗೆ ನಮ್ಮ ಬೆಂಗಳೂರು ಜಿಲ್ಲೆಗೆ ತಾರತಮ್ಯ ಮಾಡಿ ಹರಿಜನರು ಹೆಚ್ಚಾಗಿರುವ ಕಡೆಗೆ ಕಡಮೆ ಕೊಟ್ಟಿರುವುದರಿಂದ ಸಾಕಾದಷ್ಟು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾರತಮ್ಯ ಮಾಡಿಲ್ಲ. ಇಡೀ ಜಿಲ್ಲೆಯ ಜನಸಂಖ್ಯೆಗನುಸಾರವಾಗಿ ಈ ಮೊಬಲಗನ್ನು ಹಂಚಲಾಗಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಜನಸಂಖ್ಯೆ ಇತರ ತಾಲ್ಲೂಕುಗಳಿಗಿಂತ ನಮ್ಮ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಹೆಚ್ಚಾಗಿರುವಾಗ ಅದಕ್ಕೆ ಸರಿಯಾಗಿ ಹಣ ಒದಗಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಶಃ ಪಟ್ಟಣ ಪ್ರದೇಶದಲ್ಲಿ ಹೆಚ್ಚಾಗಿರಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಹೆಚ್ಚು ಜನರಿದ್ದಾರೆ. ಅವರಿಗೆ ತಾರತಮ್ಯ ಮಾಡಿರುವುದನ್ನು ಸರಿಪಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದರೆ ಸರಿಪಡಿಸಬಹುದು, ಮಾಡಿದ್ದೇವೆಂದು ಒಪ್ಪಿಕೊಂಡಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ರಾಮನಗರ ತಾಲ್ಲೂಕಿಗೆ ಬೆಂಗಳೂರು ದಕ್ಷಿಣ ತಾಲ್ಲೂಕಿಗಿಂತ ಹೆಚ್ಚಾಗಿ ಕೊಟ್ಟಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗೆ ಹೆಚ್ಚಾಗಿ ಕೊಟ್ಟಿದ್ದರೆ ದಕ್ಷಿಣ ತಾಲ್ಲೂಕಿಗೆ ಹೆಚ್ಚಾಗಿ ಕೊಡುತ್ತೀರಾ ?

Sri Kadidal MANJAPPA.—It is a hypothetical question, Sir.

Ayurvedic College, Mysore (up-grading)

Q.—272. **Sri M. RAJASEKHARA MURTHY** (Yelandur).—

Will the Government be pleased to state :—

(*a*) the date of starting the Ayurvedic College in Mysore ;

(*b*) the strength of the students in that College from 1940 up till now ; (yearwise figures to be furnished) ;

(*c*) whether the Principal of the College has made any representation regarding the needs of the College in respect of accommodation, staff and other facilities ;

(*d*) if so, what that representation is ;

ಶ್ರೀ ಕಡಿದಾಳ್ ಮಂಜಪ್ಪ.—ಟೆನೆಂಟ್ಸ್ ಆಗಿ ಆ ಕಸಬಿನಿಂದ ಜೀವನಮಾಡುವವರೆಲ್ಲರೂ ಸೇರುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುನ್ನೂರು ಎಕರೆಗಿಂತ ಮೇಲ್ಪಟ್ಟು holdings ಇಟ್ಟುಕೊಂಡಿರುವವರೆಷ್ಟು ಮಂದಿ ಇದ್ದಾರೆ?

Sri Kadidal MANJAPPA.—I will read the following figures.

Holdings not exceeding one acre in extent ...	2,80,088
Holdings exceeding one acre in extent but not exceeding 5 acres ...	6,17,964
Holdings exceeding 5 acres but not exceeding 10 acres	2,84,853
Holdings exceeding 10 acres but not exceeding 50 acres ...	1,46,554
Holdings exceeding 50 acres but not exceeding 100 acres ...	12,077
Holdings of above 100 acres and not exceeding 500 acres	2,480
Holdings of above 500 acres	94

Sri B. RACHAIAH (Yelandur-Scheduled Castes).—How many have no lands ?

ಶ್ರೀ ಕಡಿದಾಳ್ ಮಂಜಪ್ಪ.—ಸೆನ್ಸಸ್ ಅಂಕಿಗಳಿಂದ ಅದು ಗೊತ್ತಾಗುತ್ತೆ.

ಶ್ರೀ ಬಿ. ರಾಚಯ್ಯ.—ಸ್ವಂತ ಜಮೀನಿಲ್ಲದೆ ಕೂಲಿಯಲ್ಲಿ ನಿರತರಾಗಿ ಜೀವನಮಾಡುತ್ತಿರುವವರ ಸಂಖ್ಯೆ ಎಷ್ಟು?

Sri Kadidal MANJAPPA.—6,15,850.

Sri V. MASIYAPPA (Hiriyur).—Do they include figures relating to inam villages ?

Sri Kadidal MANJAPPA.—It includes all.

Sri K. LAKKAPPA (Channarayapatna).—Do they include coffee and cardamom figures ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲವೂ ಸೇರಿವೆ.

Sri H. M. CHANNABASAPPA.—Is it possible to give figures with regard to tenants and landholders in inam and Government villages separately ?

Sri Kadidal MANJAPPA.—I will try. In the case of inam villages it is possible to give a rough figure. I will try to find out.

Sri H. M. CHANNABASAPPA.—Even approximate figures will be sufficient.

Sri Kadidal MANJAPPA.—Yes, very good.

Mr. SPEAKER.—Now discussion will continue.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಸ್ವಾಮಿ, ಸ್ಟಾಂಡರ್ಡ್ ಎಕರೆಯನ್ನು ನಿರ್ಧರಿಸುವ ಬಗ್ಗೆ ಸರ್ಕಾರದವರು ಗೊತ್ತುಪಡಿಸಿರುವ ನಿಯಮ ವಿಮರ್ಶೆ ಮಾಡಬೇಕಾಗಿದೆ. . . .

Sri B. V. NARAYANA REDDY (Bagepally-Gudibande).—We will now rise for lunch and meet after.

Mr. SPEAKER.—Yes. The House will adjourn for lunch and meet again at 10-30.

The House adjourned for Lunch at Fifty-five Minutes past Nine of the Clock and met again at Thirty Minutes past Ten of the Clock.

MYSORE TENANCY (SECOND AMENDMENT) BILL.

Motion to consider (Continued).

Mr. SPEAKER.—Discussion on the Mysore Tenancy (Second Amendment) Bill will continue.

***ಶ್ರೀ ಎ. ಭೀಮಪ್ಪನಾಯಕ್.**—ಸ್ವಾಮಿ, ಮೊನ್ನೆ ದಿವಸ ಮಾತನಾಡುತ್ತಾ ಈ ಟೆನೆನ್ಸಿ ತಿದ್ದುಪಡಿ ಮಸೂದಾ ಕಾನೂನಿನಲ್ಲಿರತಕ್ಕ Protected tenants ಎಂಬ ಅರ್ಥ ವಿವರಣೆಯ ಎಕ್ಸ್‌ಪ್ಲನೇಷನ್

---

* Indicates that the speech has not been revised by the Member concerned.

(2) ಎನ್ನುವುದನ್ನು ಹೇಳುತ್ತಾ ಇದ್ದೆ. ಈಗ ಎಕ್ಸ್‌ಪ್ಲನೇಷನ್ (1) ಎನ್ನುವುದನ್ನು ತೆಗೆದುಕೊಂಡು ಒಂದೆರಡು ಮಾತನ್ನು ಮಾತ್ರ ಹೇಳುತ್ತೇನೆ. ಯಾರಾದರೂ ಒಬ್ಬರು ಹಿಂದೆ ಆತನಿಗೆ ಸಂಬಂಧೀಕನಾಗಲಿ, ಆತನಿಗಿಂತ ಹಿಂದೆ ಇದ್ದವನಾಗಲಿ, ಅವನು ಅಜ್ಜನಾಗಿರಬಹುದು, ಮುತ್ತಜ್ಜನಾಗಿರಬಹುದು, ಚಿಕ್ಕಪ್ಪನ ಮಗನಾಗಿರಬಹುದು, ಮೊಮ್ಮಗನಾಗಿರಬಹುದು.—ಅಂತಹವರು ಯಾರಾದರೂ ಒಂದು ಜಮೀನನ್ನು ಆಲೂರಿನಲ್ಲಿ ಹಿಂದೆ ಮಾಡುತ್ತಾ ಇದ್ದರೆ, ಆತ ಅವರ ಸಂಬಂಧೀಕನಾಗುತ್ತಾನೆ ಎಂಬ ಲೆಕ್ಕ ತೆಗೆದುಕೊಂಡು ಆತನಿಗೆ ಪ್ರೊಟೆಕ್ಟ್‌ಡ್ ಟೆನೆಂಟು ಎಂದು ಮಾಡಿರುವ ಹಾಗೆ ಅಥವಾ ಆ ರೀತಿ ಅರ್ಥ ಬರುವ ಹಾಗೆ ಇದೆ. ಇದರಲ್ಲಿ "came to hold the same by inheritance" ಎಂದರೆ ಒಂದೊಂದು ಸಂದರ್ಭದಲ್ಲಿ ಏನಾಗುತ್ತದೆ? ಅಣ್ಣತಮ್ಮಂದಿರು ಒಟ್ಟಿಗೇ ಇದ್ದು ಅಣ್ಣನ ಅಥವಾ ತಮ್ಮನ ಹೆಸರಿನಲ್ಲಿ ಜಮೀನು ಇರುತ್ತದೆ, ಅಥವಾ ಮಾರಾಟವಾಗಿದ್ದ ಪಕ್ಷದಲ್ಲಿ ಇನ್ನಾರ ಹೆಸರಿಗೋ ಹೋಗಿರುತ್ತದೆ. ಮತ್ತು heir ಅಂದಾಗ ಆತನೇ ಜಮೀನುಮಾಡಿಕೊಂಡಿದ್ದವನಾಗಿರಬೇಕೇ, ಬರೀ heir ಆಗಿದ್ದರೆ ಸಾಕೇ? ಈ ಜಮೀನು ಪ್ರಾರಂಭಮಾಡಿದಾಗ ಹಿಂದೆ ಇದ್ದ ಮನುಷ್ಯ ಯಾವುದೋ ಊರಿನಲ್ಲಿ ಬೇರೆ ಜಮೀನಿಗೆ ಸಂಬಂಧಪಟ್ಟದ್ದನ್ನು ಮಾಡಿದ್ದರೂ ಕೂಡ ಆತನಿಗೆ ಈ ಹಕ್ಕು ಬರುತ್ತದೆಯೇ? ಅಥವಾ ಆತನ ಮಗನಾಗಿದ್ದು ಜಾಯಿಂಟ್ ಫ್ಯಾಮಿಲಿಯಲ್ಲಿರತಕ್ಕವನಾಗಿರಬೇಕೇ ಎಂಬುದು ಏನೂ ಇದರಲ್ಲಿ ನಿರ್ದಿಷ್ಟವಾಗಿ ಲಿಖಿತವಾಗಿಲ್ಲ. ಇದನ್ನು ಏನಾದರೂ ಹೀಗೆಯೇ ಬಿಟ್ಟರೆ 100 ಎಕರೆ ಮೇಲೆ ಇದ್ದವರು ಈಗ 2,000 ಚಿಲ್ಲರೆ absentee landlords ಇದ್ದರೆ 4 ಸಾವಿರ ಅಥವಾ 40 ಸಾವಿರ ಚಿಲ್ಲರೆ ವ್ಯಾಜ್ಯಗಳು ಶುರು ಆಗುತ್ತವೆ. ಯಾವ ಸಕ್ಸೆಷನ್ ಪ್ರಕಾರ, ಹೇಗೆ ಬಂತು ಎನ್ನುವುದಕ್ಕೆ ಕೋರ್ಟಿನಲ್ಲಿ ಇದರ ಹತ್ತರಷ್ಟು ಎಂದರೆ 2,000 ಜನಕ್ಕೆ ಉಪಯೋಗವಾಗುವುದಿದ್ದರೆ 20 ಸಾವಿರ ಜನಗಳು ವ್ಯಾಜ್ಯ ತೆಗೆಯುವುದಕ್ಕೆ ಈ explanation one ಎನ್ನುವುದರಿಂದ ಅವಕಾಶವಾಗುತ್ತದೆ ಎಂದು ನಾನು ರವೆನ್ಯೂ ಮಿನಿಸ್ಟರ್‌ರವರಿಗೆ ಅತಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಆಮೇಲೆ, 'Substitution of "Assistant Commissioner" for "Amildar" ಎಂದು ತಂದಿದ್ದೀರಿ. ಇದರ ಅರ್ಥ ಇತ್ತೀಚೆಗೆ ಅಮಲ್ದಾರರಿಗೆ ಶಕ್ತಿ ಇಲ್ಲ ಅಂತಲೋ, ದಕ್ಷತೆ ಇಲ್ಲ ಅಂತಲೋ ಅಥವಾ ನ್ಯಾಯಪರಿಶೀಲನೆ ಮಾಡುವುದಕ್ಕೆ, ನ್ಯಾಯಸ್ಥಾನಕ್ಕೆ ಸಾಕಾದಷ್ಟು ಅವರಲ್ಲಿ ಸತ್ಯಸಂಧತೆ ಇಲ್ಲ ಅಂತಲೋ? ಈ ಎರಡು ವರ್ಷಗಳ ಹಿಂದೆ ಇದ್ದ ಶಕ್ತಿ, ಸಾಮರ್ಥ್ಯ ಇವೊತ್ತು ಹೊರಟುಹೋಗಿದೆ ಅಂತ ಎಲ್ಲೆಲ್ಲಿ 'ಅಮಲ್ದಾರ್' ಎಂದು ಇದೆಯೋ ಅದನ್ನು 'ಅಸಿಸ್ಟೆಂಟ್ ಕಮೀಷನರ್' ಎಂದು ಹಾಕಿ ಎಂದು ಮಾಡಿದ್ದೀರಾ? ಎರಡು ವರ್ಷಗಳ ಹಿಂದೆ ಅಮಲ್ದಾರ್ ಆಗಿದ್ದವನಿಗೆ ನಿನ್ನೆ, ಮೊನ್ನೆ ಅಸಿಸ್ಟೆಂಟ್ ಕಮೀಷನರ್ ಆದಕೂಡಲೇ ಆ ದಕ್ಷತೆ, ಶಕ್ತಿ ಬಂದುಬಿಡುತ್ತದೆಯೇ? ಇದು ಒಂದನೆಯದು. ಎರಡನೆಯದು ಈ ಕೆಲಸವನ್ನು ಊರಿನ ಹತ್ತಿರ ಇದ್ದು ಆ ತಾಲ್ಲೂಕಿನಲ್ಲೇ ಇರುವ ಅಮಲ್ದಾರರು ನಿರ್ವಹಿಸುವುದಕ್ಕೆ ಸಾಧ್ಯವೇ ಹೊರತು ಅದನ್ನು ಅಸಿಸ್ಟೆಂಟ್ ಕಮೀಷನರು ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಆತನಿಗೆ ಒಂದು ತಾಲ್ಲೂಕಿನ ವ್ಯಾಜ್ಯ ಅಲ್ಲ ನಾಲ್ಕು ತಾಲ್ಲೂಕಿನ ವ್ಯಾಜ್ಯಗಳು ಬಂದು, ಕಲೆಕ್ಷನ್ ಸೂಪರ್‌ವಿಜನ್ ಮಾಡಿದಹಾಗೆ, ಕೋರ್ಟ್ ಆಗಿ ಸಂಭವಿಸುವ ಪ್ರಸಂಗ ಬರುತ್ತದೆ. ಅದಕ್ಕೆ ಅವರು ಹೇಳಬಹುದು, ನಾಳೆ ಜಮೀನಿನ ಬೆಲೆ ಕಟ್ಟುವ ವಿಷಯ ಬರುತ್ತದೆ, ಅದಕ್ಕೆ ಆತನನ್ನು ಹಾಕಿದ್ದೇವೆ ಎಂದು. ಅಂಥ ಒಂದು ಅಧಿಕಾರ ಈಗಾಗಲೇ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಅಸಿಸ್ಟೆಂಟ್ ಕಮೀಷನರಿಗೆ ಕೊಟ್ಟಿದ್ದೀರಿ. ಆತ ವ್ಯಾಲ್ಯೂ ಮಾಡಿದರೂ ಅದಕ್ಕೆ ಒಪ್ಪದೇ ಇದ್ದರೆ ಮಾಲೀಕ ಡಿಸ್ಟ್ರಿಕ್ಟ್ ಕೋರ್ಟಿಗೆ ಹೋಗುತ್ತಾನೆ. ಅಲ್ಲಿಂದ ಮುಂದೆ ಹೈಕೋರ್ಟಿಗೆ ಬಂದು ವ್ಯಾಲ್ಯು ನಿರ್ಧಾರ ಮಾಡಿಸಿಕೊಳ್ಳುವ ಹಾಗಿಲ್ಲ, ಆ ಅವಕಾಶವಿಲ್ಲ. ಅಸಿಸ್ಟೆಂಟ್ ಕಮೀಷನರು ಮಾಡಿದ ತೀರ್ಮಾನದ ಮೇಲೆ ಅಂತ್ಯ ತೀರ್ಮಾನ ಡಿಸ್ಟ್ರಿಕ್ಟ್ ಜಡ್ಜ್‌ರವರ ತೀರ್ಮಾನವಾಗುತ್ತದೆ. The decision of the District Judge on such appeal shall be final. ಇದು ಏನು ಡಿಸ್ಕ್ರಿಮಿನೇಷನ್ನು, ಸ್ವಾಮಿ! ಒಂದು ಜಮೀನು ಸಾರ್ವಜನಿಕರಿಂದ ಅಕ್ವೈರ್‌ಮಾಡಿದಾಗ ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನಲ್ಲಿ ನನ್ನ ಆಸ್ತಿಗನು ಸಾರವಾಗಿ ಬೆಲೆ ಪಡೆಯುವುದಕ್ಕೆ ಕೊನೆಯವರೆಗೂ ಅಧಿಕಾರವಿರುವಾಗ ಇಲ್ಲಿ ಏಕೆ ಅದನ್ನು ಮೊಟಕು ಮಾಡುತ್ತೀರಿ? ಏನು ಉದ್ದೇಶ ನಿಮ್ಮದು? ಎಂದು ಕೇಳುವುದು ಒಂದನೆಯದು. ಎರಡನೆಯದು, ಲಿಟಿಗೇಷನ್ ಒಂದು ಕಡೆ ಜಾಸ್ತಿಯಾಗಿ jurisdiction of the court limit ಮಾಡಿದರೆ ಸರಿಯೇ? ಇನ್ನೂ ಹೆಚ್ಚು ಹೆಚ್ಚು ಅನುಕೂಲಗಳು ಇರಬೇಕು, ನ್ಯಾಯ ಸಿಕ್ಕಬೇಕು, ಅದು ಆತನಿಗೆ ಹತ್ತಿರದಲ್ಲೇ ಇರಬೇಕು ಎಂದು ಒಂದು ಕಡೆ ಹೇಳುತ್ತೀರಿ. ಇತ್ತಕಡೆ ಅಸಿಸ್ಟೆಂಟ್ ಕಮೀಷನರಿಗೆ ಅಧಿಕಾರ ಕೊಟ್ಟು, ಅಮಲ್ದಾರರಿಗೆ ಯಾವ ಅಧಿಕಾರವೂ ಇಲ್ಲದಂತೆ ಮಾಡುತ್ತಿದ್ದೀರಿ. 'For the word "Amildar" wherever it occurs, the words "Assistant Commissioner" shall be substituted throughout the principal Act' ಅಂತ ಅಂದಿದ್ದೀರಿ. ಈಗ ಏನಾಯಿತು? ಆರ್ಡಿನರಿ ಟೆನೆನ್ಸಿ ರೂಲ್ಸ್ ಪ್ರಕಾರ ಏನೇನು ಕೆಲಸ ಮಾಡುತ್ತಾ ಇದ್ದರೋ ಅದೆಲ್ಲವನ್ನೂ ಅಮಲ್ದಾರರಿಂದ ಕಿತ್ತುಕೊಂಡ ಹಾಗಾಯಿತು. ಆ ದಿವಸ Principal Act ಮಾಡುವಾಗ ಸತ್ಯಸಂಧನಾಗಿದ್ದ ಅಮಲ್ದಾರ ಇವೊತ್ತು ಎಲ್ಲಿ ಹೋದ? ಏಕೆ ಹೋದ?

ಶ್ರೀ ಕಡಿದಾಳ್ ಮಂಜಪ್ಪ.—ಅಸತ್ಯವಂತರು ಎಂದು ಎಲ್ಲೂ ಹೇಳಿಲ್ಲ.

Mr. SPEAKER.—I do not think there can be much force in that. By experience we have to effect certain changes for the better administration of the legislative measures.

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೇ ನಾನು ಹೇಳುವುದು ಆ experience ಯಾವುದೋ ಏನೋ ನನಗೆ ಗೊತ್ತಾಗಲಿಲ್ಲ ಎಂದು. ಏಕೆಂದರೆ ಆ ದಿವಸ ಇದ್ದ ಆತನ ಅಧಿಕಾರವನ್ನು ಇವೊತ್ತು ಕಿತ್ತುಹಾಕುವುದಕ್ಕೆ, ಯಾವ ಎಕ್ಸ್‌ಪೀರಿಯನ್ಸ್‌ನಿಂದ ಮಾಡಿದ್ದು ಎಂಬುದನ್ನು explanation ನಲ್ಲಿ ತಿಳಿಸಿಲ್ಲ. ಮೊನ್ನೆ ದಿವಸ ಈ ಆಕ್ಟ್ ಇಟ್ಟಾಗ ಒಬ್ಬರ ಅಧಿಕಾರವನ್ನು ತೆಗೆದು ಇನ್ನೊಬ್ಬರಿಗೆ ಕೊಟ್ಟು ಇನ್ನಾವುದರಲ್ಲೋ ಇರತಕ್ಕ ಅಧಿಕಾರವನ್ನು ಮೊಟಕು ಮಾಡಿ ಬೇರೆ ಇನ್ನೊಬ್ಬರಿಗೆ ಕೊಡುವ ಕಾರಣ ನಮೂದಿಸದೇ ಇದ್ದದ್ದರಿಂದ ಈ ಮಾತನ್ನು ಹೇಳಬೇಕಾಗಿದೆ.

(ಶ್ರೀ ಎ. ಭೀಮಪ್ಪನಾಯಕ್.)

ಇನ್ನು Chapter I-(a) permissible holdings ವಿಚಾರ. Permissible standard acre ಎಂದರೆ ಏನು ? ನಿನ್ನೆ ದಿನ ಇಂಟರ್‌ಪ್ರಿಟೇಷನ್ ಮೇಲೆ Question Hour decide ಮಾಡುವಾಗ ಹೇಗೆ ಮಾಡುವುದು ಎಂದೂ ಹೇಳಿದರು; ಅದು ನೆನಪಿಗೆ ಬಂತು. ಸ್ಟ್ಯಾಂಡರ್ಡ್ ಏಕರ್ ಎಂದರೆ 8 ಪಲ್ಲಾ ಬೆಳೆಯುವುದು ಎಂತಲೂ, ಅದೇ ರೀತಿ Question Hour ಎಂದರೆ ಪ್ರಶ್ನೆಗಳೆಲ್ಲಾ ಪೂರೈಸುವುದು ಎಂತಲೂ ಹೇಳಿದರೆ ಆ ಸಮಸ್ಯೆ ಪರಿಹಾರವಾಯಿತಲ್ಲ ! ಹಾಗಲ್ಲ. Question Hour ಅಂದಾಗ ಅದಕ್ಕೆ ಒಂದು adjective ಇದೆ. ಅದೇರೀತಿ ಇದಕ್ಕೂ ಒಂದು adjective ಇದೆ. 90 minutes is a question hour ಎಂದು ಯಾವ ರೀತಿ ಇದೆಯೋ ಅದೇರೀತಿ ಇದಕ್ಕೂ ಮಾಡಿಬಿಡಿ. ಅದು ಏನೇ ಇರಲಿ, you say 'standard acre of land, in the case of :

(*a*) dry land is that extent of land which has an annual productive capacity of eight pallas of ragi, etc.'

ಇಂಡಿಯಾ ದೇಶದಲ್ಲಿ ಎಲ್ಲಿ ಇದ್ದರೂ ಸರಿಯೇ ಅದು ಯಾವ ಸ್ಟ್ಯಾಂಡರ್ಡ್ ಏಕರ್ ಎಂಬುದನ್ನು ನಿರ್ಧರ ಮಾಡಿಬಿಡಿ. ಹೀಗೇನೋ ತಿರುವಾಂಕೂರು—ಕೊಚ್ಚಿನ್‌ನಲ್ಲಿ 23 ಸ್ಟ್ಯಾಂಡರ್ಡ್ ಏಕರ್ ಇದೆ, ಅದರ ಜೊತೆಗೆ 3 ಸ್ಟ್ಯಾಂಡರ್ಡ್ ಎಕರ್ ಸೇರಿಸಿದರೆ 26 ಸ್ಟ್ಯಾಂಡರ್ಡ್ ಏಕರ್ ಆಗುತ್ತದೆ. ಆದ್ದರಿಂದ ಒಂದು ಏಕರ್ ಬಿಟ್ಟು ಕೊಡಬೇಕು ಅನ್ನುತ್ತೀರಾ ? ತಿರುವಾಂಕೂರು—ಕೊಚ್ಚಿನ್‌ನಲ್ಲಿ ಯಾವ ಲೆಕ್ಕದಮೇಲೆ ಸ್ಟ್ಯಾಂಡರ್ಡ್ ಏಕರ್ ಇಟ್ಟುಕೊಂಡಿದ್ದಾರೆ ಎಂಬುದನ್ನು ನಿಮ್ಮ ಆಫೀಸರುಗಳನ್ನು ಕಳುಹಿಸಿ, ಅವರ ತಾಲ್ಲೂಕುಗಳಲ್ಲೆಲ್ಲಾ ತನಿಖೆಮಾಡಿಸಿ average ತರಿಸಿದ್ದೀರಾ ? ಈ ಶಬ್ದಗಳನ್ನು ಉಪಯೋಗಿಸುವಾಗ ಸ್ವಲ್ಪ ಹುಷಾರಾಗಿರಬೇಕು. ಅದು ಬಿಡಿ. ಈಗ standard money, manufacture, ಇವೆ. ಆ ರೀತಿ ಯಾವುದಾದರೂ ಒಂದು ಸ್ಟ್ಯಾಂಡರ್ಡ್ ಇದ್ದಲ್ಲಿ ಯಾವ ಜಮೀನಿಗೆ 8 ಆಣೆ ಕಂದಾಯ ಇದೆಯೋ ಅದನ್ನು ಸ್ಟ್ಯಾಂಡರ್ಡ್ ಏಕರ್ ಎಂದು ಅನ್ನೋಣವೇ ಅಥವಾ ಯಾವ ಜಮೀನಿಗೆ average ಕಂದಾಯ ಇದೆಯೋ ಅದನ್ನು ಸ್ಟ್ಯಾಂಡರ್ಡ್ ಏಕರ್ ಅನ್ನೋಣವೇ ? ಅದು ಅಲ್ಲ. ಯಾವ ಜಮೀನಿನಲ್ಲಿ 8 ಪಲ್ಲಾ ರಾಗಿ ಬೆಳೆಯುತ್ತದೆಯೋ ಅದನ್ನು ಒಂದು ಸ್ಟ್ಯಾಂಡರ್ಡ್ ಏಕರ್ ಎಂದು ಹೇಳುತ್ತೀರಿ. ಮೈಸೂರು ದೇಶದಲ್ಲಿ ಬೆಳೆಯುವುದು ರಾಗಿ, ಬತ್ತ ಎರಡನ್ನೇ ? ಯಾವುದಾದರೂ ಒಂದು ಜಮೀನಿನಲ್ಲಿ ಆಲೂಗೆಡ್ಡೆ ಹಾಕಿದ್ದರೆ ಅದನ್ನು ಹೇಗೆ ಸ್ಟ್ಯಾಂಡರ್ಡ್ ಏಕರ್ ಅನ್ನುತ್ತೀರಿ ?

ಅಧ್ಯಕ್ಷರು.—ಆಲೂಗೆಡ್ಡೆ ಹಾಕಿದ್ದರೂ, ರಾಗಿ ಬೆಳೆದೇ ಬೆಳೆಯುತ್ತಾರಲ್ಲಾ ?

ಶ್ರೀ ಎ. ಭೀಮಪ್ಪನಾಯಕ್.—ಇನ್ನೊಂದು ಉದಾಹರಣೆ ಕೊಡುತ್ತೇನೆ. ಬೆಂಗಳೂರಿನ ಹತ್ತಿರ ಕೆಂಗೇರಿಯಲ್ಲಿ ಜೋಸೆಫೀನ್ ಎಂಬೊಬ್ಬರು ಒಂದು ಸಾರಿ 12 ಎಕರೆಯಲ್ಲಿ ದ್ರಾಕ್ಷಿ ಹಾಕಿದ್ದರು. 6 ತಿಂಗಳಿಗೆ 26 ಸಾವಿರ ರೂಪಾಯಿಗಳು ಬಂದವು ಎಂದು ಅವರು ಹೇಳಿದರು. ಅಷ್ಟೇ ಅಲ್ಲದೆ ಅವರು ಒಂದು ಮಾತು ಹೇಳಿದರು. ಈ ವರ್ಷ 1 ಲಕ್ಷದ 854 ಗಿಡ ಹಾಕಿದ್ದೇನೆ. ಒಳ್ಳೆಯ ದ್ರಾಕ್ಷಿ ಬೆಳೆ ಆದರೆ 1 ಲಕ್ಷದ 85 ಸಾವಿರ ರೂಪಾಯಿ ಸಂಪಾದನೆ ಮಾಡುತ್ತೇನೆ ಎಂದು ಹೇಳಿದರು. ಅಂಥಾದಕ್ಕೆ ಸ್ಟ್ಯಾಂಡರ್ಡ್ ಏಕರ್ ಹೇಗೆ ಗೊತ್ತುಮಾಡುತ್ತೀರಿ ? ಇದು ಏಕೆ ಹೇಳುತ್ತೇನೆ ಎಂದರೆ, ಈ ಸ್ಟ್ಯಾಂಡರ್ಡ್ ಏಕರ್ ಲೆಕ್ಕಹಾಕುವಾಗ ಹಳ್ಳಿ ಹಳ್ಳಿಗೆ ಒಂದು ಸ್ಟ್ಯಾಂಡರ್ಡ್, ಊರು ಊರಿಗೆ ಒಂದು ಸ್ಟ್ಯಾಂಡರ್ಡ್, ತಾಲ್ಲೂಕು ತಾಲ್ಲೂಕಿಗೆ ಒಂದು ಸ್ಟ್ಯಾಂಡರ್ಡ್ ತೆಗೆದುಕೊಂಡರೆ ಆಗ ಲಿಟಿಗೇಷನ್ ಎಷ್ಟಾಗುತ್ತದೆ, ಜನಗಳಿಗೆ ಎಷ್ಟು ತೊಂದರೆ ? 8 ಪಲ್ಲಾ ಬೆಳೆದರೆ ಅದು ಒಂದು ಸ್ಟ್ಯಾಂಡರ್ಡ್ ಏಕರ್ ಎಂದು ಹೇಳುತ್ತೀರಿ. ನೂರಾರು ಎಕರೆ ಇರತಕ್ಕವನಿಗೆ ಎಷ್ಟಾಗುತ್ತದೆ ? ಒಬ್ಬನಿಗೆ 25 ಎಕರೆ ಎಂದು ಹೇಳುತ್ತೀರಿ. ಅದೇ ಜಾಯಿಂಟ್ ಫ್ಯಾಮಿಲಿ ಆದರೆ ಅದಕ್ಕೆ ನಾಕರಷ್ಟು ಎಂದರೆ ನೂರು ಎಕರೆ ಆಯಿತು. ಅವರು ಕಟ್ಟಿರುವ ಈ ಲೆಕ್ಕದ ಪ್ರಕಾರ ಇಷ್ಟು ಸ್ವಲ್ಪ ಜಮೀನು ಉಳಿಸಿಕೊಳ್ಳುವ ಅನುಕೂಲ ಮಾಡಿಕೊಡುವುದಕ್ಕೆ ಈ ಭೂತಪ್ಪನನ್ನು ಇಲ್ಲಿ ಬಿಡಬೇಕು ಎಂದು ಅವರ ಮನಸ್ಸಿಗೆ ಬಂದಿದೆ ಎಂದು ನನ್ನ ಅಭಿಪ್ರಾಯ.

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಆ ರೀತಿ ಬಂದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಅಂತೂ ಆ ರೀತಿ ಬರುವಹಾಗೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ನಗು !)

ಸ್ವಾಮಿ, ಅವರು ಹೇಳುತ್ತಾ, ಇರುವುದು ನೂರು ಎಕರೆಗಳಿಗಿಂತ ಮೇಲ್ಪಟ್ಟು ಇರತಕ್ಕ 2,574 ಜನ ಇದರಿಂದ ಪ್ರಯೋಜನ ಹೊಂದುತ್ತಾರೆ. ಒಬ್ಬರೇ ಇರತಕ್ಕವರು, ಬ್ರಹ್ಮಚಾರಿಗಳಾಗಿರತಕ್ಕವರು, ಸಂಸಾರ ಇಲ್ಲದೇ ಇರತಕ್ಕವರು ಇವರೆಲ್ಲರೂ ಆ 2,574 ಜನರಲ್ಲಿ ಬರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟು ಜನ ಅಲ್ಲ, number of holders ಅಷ್ಟು.

ಶ್ರೀ ಎ. ಭೀಮಪ್ಪನಾಯಕ್.—ಈ 2,500 ಮಂದಿ 300 ಎಕರೆಯ ಮೇಲೆ ಪಡೆದಿರುವವರೆ ? ಎಕರೆಗೆ ಒಂದು ಪಲ್ಲ ಬೆಳೆಯುತ್ತಾರೆಂದು ಹೇಳಿದರೆ 25ನ್ನು 8ರಿಂದ ಗುಣಿಸಿ ಅನಂತರ ಅದನ್ನು ನಾಲ್ಕರಿಂದ ಗುಣಾಕಾರ ಮಾಡಿದರೆ ಅಷ್ಟಿರುತ್ತದೆಯೆ ? ಕಾಫಿ ಪ್ಲಾಂಟರುಗಳೂ ಸೇರಿ 500 ಎಕರೆ ಇರುವವರು 94 ಜನ. ಅವರಿಗೆ ಈ ಮಹದುಪಕಾರ ಮಾಡುವುದಕ್ಕೆ ಹೊರಟಿದ್ದೇವೆಂದು ಹೇಳುತ್ತೀರಾ ?

Sri Kadidal MANJAPPA.—I do not know why the Hon'ble Member is giving incorrect figures. Sir, I have already made it clear that there are 2,480 khatedars holding more than 100 acres and less than 500 acres.

ಶ್ರೀ ಎ. ಭೀಮಪ್ಪನಾಯಕ್.—ನನ್ನ ವಾದವೂ ಅದೇ ಸ್ವಾಮಿ. 500 ಎಕರೆಗಳಿಗಿಂತ ಜಾಸ್ತಿ ಎಂಬುದು ಸ್ಟ್ಯಾಂಡರ್ಡ್ ಎಕರೆಯಲ್ಲ. ಚಳ್ಳಕೆರೆ ತಾಲ್ಲೂಕಿನಲ್ಲಿ 500 ಎಕರೆಗೆ ಎರಡಾಣೆ ಕಂದಾಯ ಕೊಡುವವರು, 100 ಎಕರೆಗೆ ಎರಡಾಣೆ ಕಂದಾಯ ಕೊಡುವವರು ಎಷ್ಟಿದ್ದಾರೆಂದು ಲೆಕ್ಕಹಾಕಿ. ಇದರಿಂದ ಪ್ರಯೋಜನವಿಲ್ಲ. ಪಲ್ಲ ಬೆಳೆಯುವ ಸ್ಟ್ಯಾಂಡರ್ಡ್ ಎಕರೆ ಲೆಕ್ಕ ಹಾಕುವಾಗ ಇದು ಸಾಧಾರಣವಾಗಿ ಇಲ್ಲಿ ಎಲ್ಲರಿಗೂ ಗೊತ್ತು. ನಿಮ್ಮ ತಾಲ್ಲೂಕು ಆಫೀಸಿನ ಆವರೇಜ್ ಲೆಕ್ಕ ಈ ದಿವಸ ತೆಗೆದುಕೊಳ್ಳಿ. ತಾವು ಹೇಳಿರುವ ಹಾಗೆ ಈ ತತ್ವ ತೆಗೆದುಕೊಂಡರೆ ಬಹಳ ಸಂತೋಷ. ಏಕೆಂದರೆ ಗುಣಾಕಾರ, ಭಾಗಾಕಾರ ಮಾಡುವುದಕ್ಕೆ ಸರಿಹೋಗುತ್ತದೆ. According to your own admission I am going to take three acres to be sufficient for growing 8 pallas of ragi.

ಈಗ 8 ಪಲ್ಲ ರಾಗಿ ಬೆಳೆಯುವ ಜಮೀನನ್ನು ತಲೆಯೊಂದಕ್ಕೆ 25 ಎಕರೆಗಳಂತೆ ಹಂಚುವ ಪ್ರಕಾರ ಒಂದು ಜಾಯಿಂಟ್ ಫ್ಯಾಮಿಲಿಗೆ 300 ಎಕರೆ ಬರಬಹುದು. ಈಗ 300 ಮತ್ತು 500 ಎಕರೆಗಳ ಮೇಲೆ ಪಡೆದಿರುವವರೆಷ್ಟು ಜನರಿದ್ದಾರೆಂದು ಹೇಳಿಲ್ಲ. ಅದನ್ನು ಅರ್ಥ ಎಂದು ನಾನು ತೆಗೆದುಕೊಳ್ಳುತ್ತೇನೆ. ಇದರಿಂದ 700—800 ಜನರಿಗೆ ಅನುಕೂಲವಾಗುತ್ತದೆಂದು ಹೇಳಬಹುದು.

ಶ್ರೀ ಕಡಿದಾಳ್ ಮಂಜಪ್ಪ —ಸ್ಟ್ಯಾಂಡರ್ಡ್ ಎಕರೆಯೆಂಬುದನ್ನು ಕಡಮೆ ಮಾಡಬೇಕೆಂದು ಹೇಳಿದರೆ ನಾನು ಒಪ್ಪುತ್ತೇನೆ, ಮಾಡೋಣ.

ಶ್ರೀ ಎ. ಭೀಮಪ್ಪನಾಯಕ್.—ನನ್ನ ಮಾತಿಗೆ ಬೆಲೆ ಕೊಡುವುದಾದರೆ 50 ಲಕ್ಷ ಜನ ಹೋಲ್ಡರ್ಸ್ ಇದ್ದಾರೆ, 10 ಲಕ್ಷ ಜನ ಕಲ್ಟಿವೇಟಿಂಗ್ ಓನರ್ಸ್ ಇದ್ದಾರೆ, ಅವರಿಗೆ ಲಿಮಿಟ್ ಮಾಡಿ ಸುಧಾರಣೆಯ ಆಕ್ಟ್ ತಂದು ಅನುಕೂಲ ಮಾಡಿ ಎಂದು ಮೊದಲೇ ಅರಿಕೆ ಮಾಡಿದ್ದೇನೆ. ಕಡಮೆ ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಎಲ್ಲರಿಗೂ ಸರಿಸಮನಾಗಿ ಹಂಚಿಕೆಯಾಗಬೇಕು. ರಷ್ಯಾದಲ್ಲಿರುವ ಕಮ್ಯೂನಿಸ್ಟ್ಸ್ ಮಾಡಿರುವ ರೀತಿ ಆಗಬೇಕು. Half baked ideas of socialism ನನಗಿದೆ. ಅವರಿಗಿದೆಯೋ ಇಲ್ಲವೋ ಗೊತ್ತಿಲ್ಲ. ರಷ್ಯಾದಲ್ಲಿ ಮೊದಲು ಪ್ರತಿಭಟನೆ ಬಂತು. ಆಮೇಲೆ ಸರಿಹೋಯಿತು. ಈಗ 50 ಲಕ್ಷ ಜನರ ಮೇಲೆ ಈ ಗದಾಪ್ರಹಾರ ಪ್ರಾರಂಭಿಸುವುದಕ್ಕೆ ಹೋಗಿ 2,574 ಜನರಿಗೆ ಇದರಿಂದ ಅನುಕೂಲವಾಗುತ್ತದೆ ಎಂದು ತಾವು ತಿಳಿದಿದ್ದರೆ ಇದು ಖಂಡಿತ ಇಲ್ಲದೇಯಿದ್ದು. . . .

ಶ್ರೀ ಕಡಿದಾಳ್ ಮಂಜಪ್ಪ.—ನಾನು ಎರಡು ಸಾವಿರ ಚಿಲ್ಲರೆ ಜನರಿಗೆ ಅನುಕೂಲವಾಗುತ್ತದೆಂದು ಹೇಳಲಿಲ್ಲ, ನಾಲ್ಕು ಲಕ್ಷ ಚಿಲ್ಲರೆ ಟೆನೆಂಟುಗಳಿದ್ದಾರೆಂದು ಹೇಳಿದೆ.

ಶ್ರೀ ಎ. ಭೀಮಪ್ಪನಾಯಕ್.—ನಾಲ್ಕು ಲಕ್ಷ ಚಿಲ್ಲರೆ ಟೆನೆಂಟುಗಳಿಗೆ ಅನುಕೂಲ ಮಾಡಿ ಎಂದು ನಾನು ಹೇಳುವುದು. ಎರಡು ಸಾವಿರ ಚಿಲ್ಲರೆ ಇರುವವರಿಗೆ ಅನುಕೂಲ ಮಾಡುವುದಕ್ಕೆ ಹೋಗಬೇಡಿ. ನಾಲ್ಕು ಲಕ್ಷ ಜನರಿಗೆ ಅನುಕೂಲವಾಗುವ ರೀತಿಯಲ್ಲಿ 25 ಎಕರೆಗಳಿಗೆ ಜಾಸ್ತಿಯಾಗಿರುವುದನ್ನೆಲ್ಲಾ ತೆಗೆದುಕೊಳ್ಳಿ, ಅದಕ್ಕೆ ಭೂ ಸುಧಾರಣೆ ತನ್ನಿ. ಅವರಿಗೆ ನನ್ನ ಅಭಿಪ್ರಾಯದಲ್ಲಿ ಅನುಮಾನವಿದ್ದರೆ ಭರವಸೆ ಕೊಡುತ್ತೇನೆ. ಅಂಥ ಸುಧಾರಣಾ ಕಾನೂನನ್ನು ತರುವುದಕ್ಕೆ ಪ್ರಯತ್ನ ಮಾಡಿದರೆ ನಮ್ಮ ಸರ್ಕಾರ hero ಎಂದು ಹೇಳಬಹುದು. ಅದಿಲ್ಲದೆ ಏನೇ ಮಾಡಿದರೂ ಸೂಕ್ತವಲ್ಲ.

ಇದಾದ ಮೇಲೆ ಇದರಲ್ಲಿ ಖುಷ್ಕಿ ಜಮೀನು, ತರಿ ಜಮೀನು ಇದೆ. ತರಿ ಜಮೀನು ಎಂದರೆ ಬಾಗಾಯ್ತು ಜಮೀನು ಸಹ ಸೇರುತ್ತದೆಂದು ಹೇಳಬಹುದು. ಈಗ ಶ್ರೀಮಾನ್ ಶಿವಪ್ಪನವರಿಗೆ ಬಾಗಾಯ್ತು ಜಮೀನಿದೆ. ಈ ದಿವಸ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೂ ಅದನ್ನು ಕೊಡುವುದಿಲ್ಲ. ಅದನ್ನು ರಾಗಿಗೆ ಲೆಕ್ಕ ಹಾಕಿ ಒಂದು ಎಕರೆ ಸಾಕು ಎಂದು ಹೇಳಬಹುದು. ಅದು ಸರಿಯಲ್ಲ.

Sri Kadidal MANJAPPA.—Sir, the member is giving an incorrect picture; at every stage a dismal picture of the Bill is being given. There is nothing in the Bill which says that the value of the land or the price of the land should be calculated on the basis of the standard acre.

***Sri J. MOHAMED IMAM** (Jagalur).—I would like to seek an information. My friend quoted the land of Sri G. Sivappa; he gets per acre an income of thousand rupees. As I understand, 8 pallas of ragi fetch about 150 rupees. So 1/4 or 1/8 of that garden would be a standard acre. So, only four guntas of garden land would be equal to one standard acre.

ಶ್ರೀ ಎ. ಭೀಮಪ್ಪನಾಯಕ್.—ಬೆಳೆ ನೋಡಿ ಒಂದು ಎಕರೆಗೆ ಹತ್ತು ಸಾವಿರ ರೂಪಾಯಿ ಕೊಡುವಾಗ price is not the criterion.

Sri Kadidal MANJAPPA.—With your permission, Sir, I want to intervene for one minute. The determination of the price is done according to section 31-B. It is on the basis of the market value of the land, not on the basis of the standard acre or how much can be grown on the land either ragi or paddy.

ಶ್ರೀ ಎ. ಭೀಮಪ್ಪನಾಯಕ್.—ಎಲ್ಲಾ ವಿಚಾರವನ್ನೂ ತಿಳಿದುಕೊಂಡು ಕೊನೆಯಲ್ಲಿ ಒಂದು ನಿರ್ಧಾರಕ್ಕೆ ಬಂದರೆ ಅನುಕೂಲ. ಸ್ಟ್ಯಾಂಡರ್ಡ್ ಎಕರೆ ನಿಗದಿ ಮಾಡುವಾಗ ಹತ್ತು ಸಾವಿರ ರೂಪಾಯಿ ಒಂದು ಎಕರೆಗೆ ಬೆಲೆ ಇದ್ದರೆ ಅದರಲ್ಲಿರುವ ಬೆಳೆ, ಜಮೀನು ಉತ್ಕೃಷ್ಟತೆ ಹೇಗಿದೆ ಎಂಬುದನ್ನು ನೋಡಿ ಲೆಕ್ಕ ಹಾಕಿ ನಿಗದಿ ಮಾಡಬೇಕೆಂದು ನಾನು ಹೇಳುವುದು. ಜಮೀನಿನಲ್ಲಿ ರಾಗಿ ಅಥವಾ ಬತ್ತ ಎಷ್ಟಾಗುತ್ತದೆ, ತೆಂಗು, ಅಡಿಕೆ ಮುಂತಾದ ಮುಖ್ಯವಾದ ಬೆಳೆಯಿದೆಯೆ ಎಂಬುದನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಬ್ಯಾಟೆ ರಂಗಪ್ಪ ಎಂಬವರು ನೆಲಮಂಗಲದಲ್ಲಿದ್ದಾರೆ, ಎಕರೆಗೆ 1,800 ಮಣ ಆಲೂಗೆಡ್ಡೆ ಬೆಳೆದು ಮಣಕ್ಕೆ 8 ರೂಪಾಯಿಗಳಂತೆ ಮಾರಿದೆನೆಂದು ಅವರು ಹೇಳಿದರು. ಮಣಕ್ಕೆ 4 ರೂಪಾಯಿ ಎಂದು ಇಟ್ಟುಕೊಂಡರೂ ಉತ್ಪತ್ತಿ ನೋಡಿ, ಒಂದು ವರ್ಷದ ಆದಾಯನೋಡಿ, ಲೆಕ್ಕಹಾಕಿ ಒಂದು ಎಕರೆ ಕೊಟ್ಟರೆ ಸಾಕೆಂದು ಹೇಳುತ್ತೀರಾ?

Mr. SPEAKER.—I want to make one suggestion. During the consideration stage, only the principles of the Bill can be discussed. With regard to any variation regarding the standard acre, you can improve on the present provisions in the Select Committee. Therefore, our main object at the consideration stage should be, whether we agree to the principles of the Bill or not. The Bill may undergoes changes in the Select Committee and even afterwards, amendments could be brought to each clause.

ಶ್ರೀ ಎ. ಭೀಮಪ್ಪನಾಯಕ್.—ಇದರಲ್ಲಿರುವ ತತ್ವವೇನೆಂದರೆ, ದುಡ್ಡಿನ ರೂಪದಲ್ಲಿ ಲೆಕ್ಕ ಹಾಕಬೇಕೆ

(ಶ್ರೀ. ಎ. ಭೀಮಪ್ಪನಾಯಕ್.)

ಅಥವಾ ಕಾಳಿನ ರೂಪದಲ್ಲಿ ಲೆಕ್ಕ ಹಾಕಬೇಕೆ ಎಂಬುದು. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದಕ್ಕೆ ಅರ್ಹವಾಗಿದೆಯೆಂದು ನಾನಂತೂ ತಿಳಿದುಕೊಂಡಿಲ್ಲ. ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳಬೇಕೆಂಬುದೇ ನನ್ನ ವಾದ, ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಲು ಒಪ್ಪುವುದಾದರೆ ಇಷ್ಟೇಕೆ ನಾನು ಟೀಕೆ ಮಾಡಬೇಕಾಗಿತ್ತು ? ಹಾಗೆ ಒಪ್ಪಿದ್ದರೆ ಆ ಸಮಿತಿಯಲ್ಲಿ ನನಗೂ ಜಾಗ ಕೊಡಿ ಎಂದು ಹೇಳುತ್ತಿದ್ದೆ. ಇದು ಸಮಿತಿಗೆ ಹೋಗಲು ಅರ್ಹತೆ ಪಡೆದಿಲ್ಲ. ಎರಡನೆಯದು ಒಟ್ಟಿನಲ್ಲಿ ಇದು ಇಡೀ ದೇಶದ ಮೇಲೆ ಪರಿಣಾಮವನ್ನುಂಟುಮಾಡತಕ್ಕದ್ದು, ದೇಶದಲ್ಲಿ 50 ಲಕ್ಷ ಜನರ ಮೇಲೆ, ಜಮೀನು ಮಾಲೀಕರ ಮೇಲೆ ಮಹತ್ಪರಿಣಾಮವನ್ನುಂಟು ಮಾಡತಕ್ಕದ್ದು. ಇನಾಂ ಬಿಲ್ಲಿನಲ್ಲಿ ಈ ತರಹ ಏನಾದರೂ ಮಾಡಿದ್ದರೆ ಅದರ ಮಾತೇ ಬೇರೆ ಇರುತ್ತಿತ್ತು. ಟೆನೆನ್ಸಿ ಆಕ್ಟನ್ನು ಗೇಣಿ ಮಾಡುವವನಿಗೆ ಹೆಚ್ಚು ಅನುಕೂಲ ಮಾಡೋಣ ಎಂದು ಮಾಡಿದೆಯೆಂದು ಹೇಳಬಹುದು. ಆದರೆ ಇದು ಹಾಗಿಲ್ಲ, ಜಮೀನಿನ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಈ ದಿವಸ ಅವಕಾಶವಿದೆ. ಆದ್ದರಿಂದ ಈ ಬಿಲ್ಲನ್ನು ಸಾರ್ವಜನಿಕರ ಅಭಿಪ್ರಾಯ ಪಡೆಯಲು ಪ್ರಕಟಪಡಿಸಿದರೆ ಸಾಕು. ನನ್ನ ಅಭಿಪ್ರಾಯದಲ್ಲಿ ಇದು ಸಾರ್ವಜನಿಕ ಅಭಿಪ್ರಾಯಪಡೆಯತಕ್ಕಂಥ ಬಿಲ್ಲಾಗಿದೆ.

***Sri J. MOHAMED IMAM.**—I have got a representation. It is better that the other Ministers and the Chief Minister are also here when such an important measure is being discussed on the floor of this House, instead of leaving the Revenue Minister alone. Of course, we cannot compel them to be present here ; this is only a suggestion. This Bill is of a revolutionary character. Decisions should be taken not by the Revenue Minister alone but by the Cabinet. So, when such important points are raised on a matter like this, and when there is so much of strong opposition, it is better that majority of the Ministers including the Chief Minister be present in the House. I am sure, this is not a Bill of Sri Kadidal Manjappa ; it is a Bill of the Government and it is the Government that introduce the Bill. This is an appeal I make to the Chair. If they make this a formal affair, it shows that they are ignoring the opinions of the members.

Mr. SPEAKER.—Though I agree, because both the Houses are sitting, the Ministers have to adjust themselves to the work of both Houses. The Chief Minister is indisposed.

Sri J. MOHAMED IMAM.—Shall I take it that all the other five Ministers are in the other House ? This is a very important Bill which affects the destinies of ten millions of people. Though not to-day, at least during the days on which such important Bills are taken up, I request that they may be present here.

11 A.M.

Sri Kadidal MANJAPPA.—No doubt it is an important measure. But I humbly submit that the Minister in charge of the Bill can effectively represent the Government and whatever the opinion of the majority of members here, Government are bound to act in accordance with the opinion of that majority of members. The suggestion made is not practicable . . . .

ಶ್ರೀ ಎ. ಭೀಮಪ್ಪನಾಯಕ್.—ಈ standard acre ಎಂಬುದನ್ನು define ಮಾಡುವಾಗ defined standards ಏನೆಂಬುದನ್ನು ನಿರ್ಧರಿಸಿ ಮೊದಲು ಅವುಗಳನ್ನು ಗೊತ್ತು ಮಾಡಬೇಕು. ಇನ್ನೂ ರಾಗಿ, ಜೋಳದ ವಿಚಾರವಾಗಿ ಈಗಾಗಲೇ ತಾಲ್ಲೂಕು average ಏನೆಂಬುದು ಗೊತ್ತಾಗಿದೆಯೆಂದು ಅವರೇ ತಿಳಿಸಿದರು. ಈ ತಾಲ್ಲೂಕು average ಗೊತ್ತುಮಾಡಿ ವಸೂಲಿ ಮಾಡುತ್ತಾ ಇದ್ದ ಕಾಲದಲ್ಲಿ ನಮ್ಮ ಜಮೀನುಗಳೆಲ್ಲಾ ಹಾಳಾಗಿ ಹೋಯಿತು, . ಪಟೇಲ್ ಶ್ಯಾನುಭೋಗರ ಕೈಗೆ ಪಹಣಿ ಲೆಕ್ಕವನ್ನು ಕೊಡಬೇಡಿ ಎಂಬ ಕೂಗು ದೇಶದಲ್ಲೆಲ್ಲಾ ಆಗ ಎದ್ದಿತ್ತು. ಈಗ ಈ ಪಹಣಿ ಲೆಕ್ಕದ ಆಧಾರದ ಮೇಲೆ average growth ನಿಗದಿಯಾದರೆ ಅನುಕೂಲಸ್ಥನಾದವನು ಪಟೇಲ್, ಶ್ಯಾನುಭೋಗರ ಕೈಹಿಡಿದು ಕೈವಾಡ ನಡೆಸಲು ತಾವೇ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ನಮ್ಮ ತಾಲ್ಲೂಕು average ವಿಚಾರವನ್ನೇ ಪ್ರಸ್ತಾಪಿಸಿದರೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಏಳು ಲಕ್ಷ ಪ್ರಜಾಸಂಖ್ಯೆ ಇದೆ. ಆ ಸಂಖ್ಯೆಗೆ ಅನುಗುಣವಾಗಿ ಅಲ್ಲಿ average growth ನಿರ್ಧರಿಸಬೇಕು. ಹಾಗೆ ನಿರ್ಧರಿಸುವುದರಲ್ಲಿ ಒಬ್ಬನಿಗೆ ದಿವಸಕ್ಕೆ ಒಂದು ಪಾವು ಅಕ್ಕಿ ಕೊಟ್ಟು ಊಟಮಾಡು ಎಂದರೆ, ಅಂಥ ಸಂದರ್ಭದಲ್ಲಿ ನನ್ನಂಥವನ ಗತಿ ಏನಾಗಬೇಕು ! ಈ average growth ನಿರ್ಧರಿಸಿ ಇವರಿಂದ ಜನರನ್ನು ಉದ್ಧಾರ ಮಾಡುತ್ತೇವೆಂದು ಹೇಳುವುದು ಬರೀ ಭ್ರಾಂತಿಯ ವಿಚಾರ. ಅದು ಬಹಳ ಕಷ್ಟವಾಗುತ್ತದೆ. ಒಬ್ಬನು ಜಮೀನ್ದಾರನು ತನ್ನ ಭೂಮಿಯ fertility of the soil ಗೊತ್ತುಮಾಡಿಕೊಂಡು, ಆ ಜಮೀನಿನ ಶಕ್ತಿಯನ್ನು ನಿರ್ಧರಮಾಡಿಕೊಂಡು, ವ್ಯವಸಾಯ ಇಲಾಖೆಯ ಸಹಾಯ ಪಡೆದು, ಸರ್ಕಾರಿ ಗೊಬ್ಬರ ಹಾಕಿ ಹುಲುಸಾಗಿ ಬೆಳೆ ತೆಗೆದಿರುತ್ತಾನೆ. ಮತ್ತೊಬ್ಬನು,—influence ಇಲ್ಲದವನು, ತನ್ನ ಸ್ವಶಕ್ತಿಯಿಂದ ಸಾಧ್ಯವಾದಷ್ಟು ದುಡಿದು ಕಡಮೆ ಬೆಳೆ ತೆಗೆದಿರುತ್ತಾನೆ. ಇವೆರಡನ್ನೂ ಸೇರಿಸಿ ತಾವು average growth ನಿಗದಿ ಮಾಡಿದರೆ, ಚೆನ್ನಾಗಿ ಬೆಳೆದವನ ಗತಿ ಏನಾಗಬೇಕು ?

Sri A. V. NARASIMHA REDDY (Bangalore South).—A point of information, Sir. Standard Acre of Land ವಿಚಾರದಲ್ಲಿ clause 2(A) sub-section 2(a) ನಲ್ಲಿ ಹೀಗಿದೆ:

> "For purposes of clause (1) the annual productive capacity per acre of any land in any taluk, halls be deemed to be the average annual gross yield per acre of such class of land in such taluk during a period of five years prior to the revenue year 1953-54".

ಅಂದ ಮೇಲೆ ಈ ಲೆಕ್ಕ ಈಗಾಗಲೇ ಸರ್ಕಾರದವರಲ್ಲಿ ಸಿದ್ಧವಾಗಿದೆ.

Mr. SPEAKER.—If you want to make a statement or a speech you can take another opportunity.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರ interpretation ತಪ್ಪು. ಈಗಾಗಲೇ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಅಂಕಿ ಅಂಶಗಳು ಸರ್ಕಾರದವರಲ್ಲಿ ಸಿದ್ಧವಾಗಿವೆ. ಹೀಗಿರುವಲ್ಲಿ ಪಟೇಲ್ ಶ್ಯಾನುಭೋಗರ ಕೈವಾಡಕ್ಕೆ ಜಮೀನ್ದಾರರು ಸಿಲುಕಬೇಕೆಂದು ಅವರು ಹೇಳುವುದರಲ್ಲಿ ಅರ್ಥವಿಲ್ಲ.

Sri A. BHEEMAPPA NAIK.—Is that a point of order ?

Mr. SPEAKER—He never said that it was a point of order.

Sri A. BHEEMAPPA NAIK.—Oh! I thought it was a point of order that he was raising and therefore I sat down,

Sri K. PRABHAKAR.—Sir, on a point of information, Sir.

Sri A. BHEEMAPPA NAIK.—I am not yielding, Sir. ಸ್ವಾಮಿ, ಇವರು ಹೇಳಿದಂತೆ 1953-54ನೆಯ ವರ್ಷಕ್ಕೆ ಹಿಂದೆ ಈ ಲೆಕ್ಕ ಹಾಕಿದರೆ, protected tenant ವಿಚಾರಕ್ಕೆ ಸಂಬಂಧಿಸಿದ ಹಾಗೆ ಅದಕ್ಕೆ 9 ವರ್ಷ ಹಿಂದಕ್ಕೆ ಹೋಗಬೇಕಾಗುತ್ತದೆ. Protected tenantಗೆ ಅನ್ವಯಿಸುವ ಹಾಗಿರುವ drafting ಬಹಳ ಸ್ವಾರಸ್ಯವಾಗಿದೆ. ಇಲ್ಲಿರುವ protected tenant ಎಂದರೆ ಯಾರಿಗಾದರೂ ಏನರ್ಥವಾಗುತ್ತದೆ ಎಂಬುದು ತಿಳಿಯಲು ಅದನ್ನು ಇಲ್ಲಿ ಓದುವುದು ಅಗತ್ಯ :

> "A tenant shall be deemed to be a protected tenant in respect of any land if (*a*) he has held such land continuously for a period of not less than nine years immediately preceding the first day of April 1951".

ಹೀಗೆ ಹೇಳಿದ ಮೇಲೆ ಅಲ್ಲಿಂದ ಮುಂದೆ ಅವನು ಏನಾಗುತ್ತಾನೆಂಬುದು ಇದರಲ್ಲಿಲ್ಲ. ಅಷ್ಟೇ ಅಲ್ಲದೆ ಈ procected tenants ಬಗ್ಗೆ definition ಕೊಟ್ಟು ಅದರ ಕೆಳಗೆ 2-3 ವಿವರಣೆಗಳನ್ನು ಬೇರೆ ಕೊಟ್ಟಿರುವುದನ್ನು ನೋಡಿದರೆ, ಇದೇನು ಸೊಗಸಾದ drafting ಎಂಬುದು ತಿಳಿಯುತ್ತದೆ. ಈ drafting ಬುದ್ಧಿವಂತಿಕೆಯು ಯಾರದೋ ಗೊತ್ತಿಲ್ಲ.

Mr. SPEAKER.—That can be improved in the Select Committe.

Sri A. BHEEMAPPA NAIK.—I am not sure; that is why I am making the suggestion. ತಮ್ಮ ಈ ವಿವರಣೆ ಸರ್ವಸಮರ್ಪಕ ರೀತಿಯಲ್ಲಿಲ್ಲವೆಂದು ಹೇಳದೇ ವಿಧಿಯಿಲ್ಲ. ಒಬ್ಬ ಜಮೀನ್ದಾರನಿಗೆ ಒಂದು ಹಳ್ಳಿಯಲ್ಲಿ ಜಮೀನು ಇದ್ದು ಆತನಿಗೆ ಮಗ್ಗುಲ ಹಳ್ಳಿಯಲ್ಲಿಯೂ ಜಮೀನಿದ್ದರೆ ಅಂಥ ಸಂದರ್ಭದಲ್ಲಿ ತಾವು ಇದನ್ನು ಯಾವ ರೀತಿ ಅನ್ವಯಿಸುತ್ತೀರಿ? ಈ drafting ನಿಂದ ಇಲ್ಲದ complications ಗೂ ಮತ್ತು litigationsಗೂ ಅವಕಾಶ ಕೊಡುವದರ ಬದಲು, ನಾವೆಲ್ಲ ಸೇರಿಕೊಂಡು ಕೇಂದ್ರ ಸರ್ಕಾರದವರಿಗೆ ಒಂದು ಮನವಿ ಸಲ್ಲಿಸಿ ಇಂಡಿಯಾದಲ್ಲಿ socialism introduce ಮಾಡುವುದು ಅಗತ್ಯವೆಂದು ಮಾಡಿ ಎಲ್ಲರಿಗೂ limited holdings ಗೊತ್ತುಪಡಿಸೋಣ. Nobody shall be allowed more than 25 acres, ಎಂದು ಮಾಡೋಣ. ಮಾದರೀ ಸಂಸ್ಥಾನವೆಂದು ಹೆಸರುಗಳಿಸಿರುವ ಈ ಮೈಸೂರು ಸಂಸ್ಥಾನದಲ್ಲಿ ಈ ರೀತಿ ಒಂದು social legislation ತಂದು ಇಡೀ ಮೈಸೂರು ದೇಶಕ್ಕೇ ಇಂಥ ಮಂತ್ರಿಮಂಡಲದ ಕಾಲದಲ್ಲಿ ದೊಡ್ಡ benefit ಆಯಿತೆಂಬ ಹೆಸರು ತೆಗೆದುಕೊಳ್ಳೋಣ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇಕೆ, ಇಂಥ ಸದಸ್ಯರ ಕಾಲದಲ್ಲಿ ಇಂಥ benefit ಆಯಿತೆಂದು ಹೇಳೋಣ.

Mr. SPEAKER.—Is it your opinion or your expectation ?

Sri A. BHEEMAPPA NAIK.—My expectation. But this is discriminatory legislation. ಈ ರೀತಿಯ discriminatory legislation ತರುವುದು ಒಳ್ಳೆಯದಲ್ಲ. 'ಒಬ್ಬರ ಕಣ್ಣಿಗೆ ಸುಣ್ಣ ಇನ್ನೊಬ್ಬರ ಕಣ್ಣಿಗ ಬೆಣ್ಣೆ' ಎಂಬ ನೀತಿ ಎಂದಿಗೂ ಸಾಧುವಾದುದಲ್ಲ. ಕೇವಲ ಒಂದೆರಡು ಸಾವಿರ ಜನರಿಗೆ ಅನುಕೂಲ ಮಾಡುವ ಉದ್ದೇಶದಿಂದ ಇದನ್ನು ಜಾರಿಗೆ ತರುವುದಾದರೆ ಇಡೀ ದೇಶದಲ್ಲಿಯೇ ಅಸಮಾಧಾನ ಹೆಚ್ಚಾಗಿ ದೇಶದಲ್ಲಿ ಇಲ್ಲದ ದಾಂಧಲೆಗ ತಾವೇ ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಕೇವಲ 2,000 ಚಿಲ್ಲರೆ ಜನರಿಗೆ ಅನುಕೂಲಕ್ಕಾಗಿ ಇಂಥ ಒಂದು ಮಸೂದೆಯನ್ನು ತರುವುದಾದರೆ. . .

Sri Kadidal MANJAPPA.—An incorrect statement. I have never said that this would benefit only about two thousand and odd people in the State.

Mr. SPEAKER.—We do not know how many people will be benefited.

Sri A. BHEEMAPPA NAIK.—All right Sir. Let it be that an indefinite number will be benefited. ಈಗ agricultural labourers ಆಗಿ ಕೂಲಿ ಮಾಡಿಕೊಂಡು ಜೀವನ ಮಾಡಿಕೊಂಡು ಇರುವವರನೇಕರಿರುತ್ತಾರೆ. ಈ ರೀತಿ ಮಧ್ಯವರ್ತಿ ಜನರನ್ನು ತಾವು tenant ಎಂದು ಪರಿಗಣಿಸುತ್ತೀರಾ? "Tenant is one who actually cultivates" ಎಂದು ನೀವು ಹೇಳುವುದಾದರೆ ಈ ಮಧ್ಯವರ್ತಿ ಜನರ ಗತಿ ಏನಾಗಬೇಕು? ಇತ್ತೀಚೆಗೆ ಒಂದು ಕೋರ್ಟಿನಲ್ಲಿ ಒಬ್ಬ ಮನುಷ್ಯ ಕೈಯಿಲ್ಲದವನು, ತಾನು actual cultivator ಎಂದು ಬಂದು ಹೇಳಿಕೊಂಡಾಗ ಅದಕ್ಕೆ ಸಂಬಂಧಪಟ್ಟ ಹಾಗೆ decision ಬೇರೆ ಆಗಿದೆ.

Mr. SPEAKER.—But that is only an exception.

Sri A. BHEEMAPPA NAIK.—But exception disproves the rule. ಈ ರೀತಿ legal turn ತೆಗೆದುಕೊಳ್ಳುವಾಗ ಯಾವ ರೀತಿ ಇತ್ಯರ್ಥವಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಆದ ಕಾರಣವೇ ತಮ್ಮ ಈ ಮಸೂದೆಯಲ್ಲಿ ನಿರ್ದಿಷ್ಟವಾದ ಗುರಿ, ಸಾಧನೆ ಇರಬೇಕು. ನಿಜವಾದ benefit ಯಾರಿಗೆ ಆಗಬೇಕೋ ಅವರಿಗೆ ಆಗಲಿ ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ.

ಯಾವ ಲೆಕ್ಕ ತೆಗೆದುಕೊಂಡರೂ ಟೆನೆಂಟ್ಸ್‌ಗಿಂತ ಅಗ್ರಿಕಲ್ಚರಲ್ ಲೇಬರರ್ಸ್ ಜಾಸ್ತಿ ಎಂಬುದನ್ನು ಒಪ್ಪಿಕೊಳ್ಳುತ್ತೀರಿ. 4 ಲಕ್ಷ ಚಿಲ್ಲರೆ ಒಂದು ಸಂಖ್ಯೆ ಇದೆ. 6 ಲಕ್ಷ ಚಿಲ್ಲರೆ ಒಂದು ಸಂಖ್ಯೆ ಇದೆ. ಆದ್ದರಿಂದ ಅಗ್ರಿಕಲ್‌ಚರಲ್ ಲೇಬರ್‌ನಿಂದ ಎಂದರೆ ವ್ಯವಸಾಯದಲ್ಲಿ ಕೂಲಿ ಮಾಡಿಕೊಂಡು ಅದರಿಂದ ಜೀವನ ನಡೆಸುವವರ ಸಂಖ್ಯೆ ಜಾಸ್ತಿ ಇದೆ ಎನ್ನುವುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಮೊದಲು haves and have-nots ಎಷ್ಟು ಎಂಬ ಲೆಕ್ಕ ತೆಗೆದುಕೊಂಡು, have ನಿಂದ ತೆಗೆದುಕೊಂಡು have-nots ಕೊಡುವಾಗ ರೈತ ಅನ್ನಿಸಿಕೊಳ್ಳುವವನು ಯಾವನು ಏನೂ ಇಲ್ಲದೇ ಇದ್ದಾಗ ಅವನಿಗೆ ಕೊಡಬೇಕು. ಸಾಮಾನ್ಯವಾಗಿ ಉದ್ದೇಶ ಆ ರೀತಿ ಇದ್ದರೂ ಕಾರ್ಯತಃ ಹಾಗೆ ನಡೆಯುತ್ತಿಲ್ಲ. ನನ್ನಲ್ಲಿ ಇಷ್ಟಾದರೂ ಇದೆ, ಅವನಲ್ಲಿ ಏನೂ ಇಲ್ಲವಲ್ಲ, ಕೂಲಿ ಮಾಡಿ ಜೀವನ ಮಾಡಬೇಕು, ಒಂದು ಹೊತ್ತಿಗೆ ಇದ್ದರೆ ಇನ್ನೊಂದು ಹೊತ್ತಿಗೆ ಇಲ್ಲದೇ ಇದ್ದಾನೆ, ಅಂತಹವನಿಗೆ ಕೊಡೋಣ, ಎಂದು ತಾವು ಏನಾದರೂ ಇದ್ದರೆ ಹೇಳಿ, ಒಪ್ಪಿಯಾದರೂ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ 6 ಲಕ್ಷ ಚಿಲ್ಲರೆ ಎನ್ನುವುದನ್ನು ಎಲ್ಲಿಂದ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಕಡಿದಾಳ್ ಮಂಜಪ್ಪ.—ಆದ ಸೆನ್ಸಸ್ ರಿಪೋರ್ಟಿನಲ್ಲಿ ಇದೆ.

ಶ್ರೀ ಎ. ಭೀಮಪ್ಪನಾಯಕ್.—ಈಗ ಅವರು ಕೊಟ್ಟಿರುವ ಅಂಕಿ ಅಂಶ ನ್ಯಾಯವಾದದ್ದು ಎಂದು ಇಟ್ಟುಕೊಂಡು ನಾನು ಹೇಳುತ್ತೇನೆ. ಹೀಗೆ ಲೆಕ್ಕ ಇಟ್ಟುಕೊಂಡರೂ ಕೂಡ 1 : 1½ will be the proportion between the tenant and agricultural labour. ಈ 1½ ಯಷ್ಟು ಜನರಿಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಎರಡನೆಯದು ಟೆನೆಂಟ್ಸ್‌ನಲ್ಲೂ ಕೂಡ ಕೆಲವು ಸಂಖ್ಯೆ absentee landlords, 100 ಎಕರೆ ಮೇಲೆ permissible acre ಎಂದು ಹೇಳಿಬಿಟ್ಟು, ಉಳಿದವರು ಎಂದರೆ ಅದಕ್ಕಿಂತ ಜಾಸ್ತಿ ಇರುವವರ ಸಂಖ್ಯೆಯನ್ನು ಸರ್ಕಾರದವರಿಗೆ ಕಂಡುಹಿಡಿಯಲು ಸಾಧ್ಯವಾಗದೇ ಇದ್ದರೆ ಈ ಬಿಲ್ಲಿನ ಅವಶ್ಯಕತೆ ಆದರೂ ಏನಿತ್ತು, ಅದನ್ನು ನೋಡಿಯೇ ಇಲ್ಲವಲ್ಲಾ ಎಂದು ಹೇಳಬಹುದಾಗಿತ್ತು. ಅದು ಅಲ್ಲ. ಎಲ್ಲ ಕೂಗು ಹೆಚ್ಚಾಗಿ ಕೇಳಿಬಂತೋ ಅದನ್ನು ಸಮಾಧಾನ ಪಡಿಸುವುದಕ್ಕೆ ಮಾತ್ರ ಇದನ್ನು ತಂದಿರುತ್ತೀರಿ ಎಂದು ಜನರು ಅನ್ನುವುದಿಲ್ಲವೇ? 1951 ರಿಂದ 9 ವರ್ಷಗಳಿಗೆ ಮೇಲ್ಪಟ್ಟು ಪರ್ಮನೆಂಟಾಗಿ ಜಮೀನು ಮಾಡಿಕೊಂಡಿರುವವರು ಎಷ್ಟು ಜನ ಇದ್ದಾರೆ ಅವರಿಗೆ ಇದರಿಂದ ಬೆನಿಫಿಟ್ ಆಗುತ್ತದೆ ಮತ್ತು permissible ಎಕರೆಗೆ ಮೇಲ್ಪಟ್ಟು ಎಂದರೆ 100 ಎಕರೆಗೆ ಮೇಲ್ಪಟ್ಟು ಇರತಕ್ಕವರು ಎಷ್ಟು ಜನ ಇದ್ದಾರೆ ಅವರಿಗೆ ಬೆನಿಫಿಟ್ ಆಗುತ್ತದೆ ಎಂದು ಹೇಳಿ ಲೆಕ್ಕ ಹೇಳಿದ್ದರೆ ಇಷ್ಟು argument ಗೆ ಅವಕಾಶವಿತ್ತೇ ಎಂದು ಕೇಳುತ್ತೇನೆ. ಇರತಕ್ಕ ಕೆಲಸ ಎಲ್ಲಾ ಬಿಟ್ಟು ಇಷ್ಟೊಂದು argument ಮಾಡಬೇಕಾಗಿತ್ತೇ, ಸ್ವಾಮಿ?

Mr. SPEAKER.—That argument has been already advanced yesterday. Please do not repeat it.

Sri Kadidal MANJAPPA.—According to rules, he cannot repeat his arguments.

Sri A. BHEEMAPPA NAIK.—I cannot convince one who refuses to be convinced.

Mr. SPEAKER.—He has already made a statement. If all of you are convinced, he is also convinced. There is no trouble.

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೇ ಹೇಳುತ್ತಾ ಇರುವುದು. ನಾಲ್ಕು ಲಕ್ಷ ಜನ ಟೆನೆಂಟ್ಸ್ ಮೇಲೆ ಪ್ರೇಮ, ವಿಶ್ವಾಸ, ಕರುಣೆ ಇಟ್ಟುಕೊಂಡು ಇದನ್ನು ಯಾವ ರೀತಿ ಮಾಡಿದ್ದೀರಿ, ಅದೇ ರೀತಿ ಈ ಕಡೆ ಅಗ್ರಿಕಲ್‌ಚರಲ್ ಲೇಬರರ್ಸ್‌ಗೂ ಆ ಕಡೆ ಲ್ಯಾಂಡ್‌ಲಾರ್ಡ್ಸ್‌ಗೂ ದಯವಿಟ್ಟು ಆ ಪ್ರೇಮ, ವಿಶ್ವಾಸ, ಕರುಣೆ ತೋರಿಸಿ, ಸ್ವಾಮಿ. ಅದನ್ನೂ ಒಪ್ಪಿಕೊಳ್ಳೋಣ, ಯಾರು ಬೇಡ ಅನ್ನುತ್ತಾರೆ! ನಿಮ್ಮಲ್ಲಿ 30 ಲಕ್ಷ ಎಕರೆ arable lands, waste lands, ಆಕಾರ ಕಂಡ ಬಂಜರು ಇದೆ. ನೀವೂ ಕೊಡಿ, ನಾವೂ ಕೊಡುತ್ತೇವೆ ಎಂದು ಎಲ್ಲ ಜಮೀನನ್ನೂ ಹಂಚಿಕೆಮಾಡಿ ಒಂದು ಪಟ್ಟಿ ತಂದರೆ ಅದಾದರೂ ಒಂದು ಅನುಕೂಲ.

Mr. SPEAKER.—May I bring it to the notice of the Hon'ble Member provisions of Rule 53 (3)—

> "(3) On the day on which any motion that the Bill be taken into consideration by the Assembly either at once or at some future day is moved, the principle of the Bill and its general provisions may be discussed, but the details of the Bill shall not be discussed further than is necessary to explain its principles."

Sri A. BHEEMAPPA NAIK.—I submit I have experience of twenty years in the Legislature and I am thankful to the Speaker for bringing that to my notice and warning me that I should not go beyond my province. I have not taken any word here and there. ಇದು ಏಕೆ ಹೇಳಬೇಕಾಗಿ ಬಂತು ಅಂದರೆ, ಈ 4 ಲಕ್ಷ ಸಂಖ್ಯೆ ಲೆಕ್ಕ ತೆಗೆದುಕೊಂಡು ಅದರಮೇಲೆ 70-80 ಸಾವಿರ ಸಂಸಾರಗಳು ಆಗುತ್ತವೆ ಎಂದು ತೋರಿಸಿ, 10 ಎಕರೆ ಪ್ರಕಾರ ಕೊಟ್ಟರೂ 7 ಲಕ್ಷ ಎಕರೆ ಜಮೀನು ಆಗುತ್ತದೆ. 30 ಲಕ್ಷ ಎಕರೆ ಬಂಜರು ಜಮೀನು

ಇರುವಾಗ ಅದನ್ನು ಕೊಡುವುದಕ್ಕೆ ಇದೇ ಸಂದರ್ಭದಲ್ಲಿ ಪ್ರಯತ್ನ ಮಾಡಿದರೆ ಉಪಕಾರವಾಗುತ್ತದೆ.

Mr. SPEAKER.—It is not necessary' Sri Bheemappa Naik. Any defect in any of the clauses can be improved. We only want an agreement on the principle.

Sri A. BHEEMAPPA NAIK.—Yes Sir. ಇಷ್ಟು repeat ಮಾಡಬೇಡಿ ಎಂದರೆ ಹೇಗೆ? ಹೋಗಲಿ ಈ ಹಿಂದೆ ಮಾತನಾಡಿದ್ದನ್ನು ಮಾತನಾಡುವುದಿಲ್ಲ ಎಂದು ತಾವಾದರೂ ಒಂದು ಭರವಸೆ ಕೊಟ್ಟುಬಿಡಿ, ಸ್ವಾಮಿ, ಸಂದರ್ಭ ಬಂದಾಗ ವಿಷಯಗಳನ್ನು substantiate ಮಾಡುವಾಗ ಹಿಂದೆ ಹೇಳಿದ ವಿಷಯ ಸೇರಿಸಿಕೊಳ್ಳದೇ ಇದ್ದರೆ ಸಾಧ್ಯವಾಗುವುದಿಲ್ಲ. ಬಾಕಿ ಮೆಂಬರುಗಳಿಗೆ ಅರ್ಥವಾಗಬೇಕು, ಬಾಕಿ ಮೆಂಬರುಗಳ ಅಭಿಪ್ರಾಯ ಪಡೆಯುವುದಕ್ಕೆ, ಅವರಿಗೆ convince ಮಾಡುವುದಕ್ಕೆ ಹೇಳುತ್ತೇನೆ. ಇಲ್ಲಿಗೆ ಪ್ರೊಟೆಕ್ಟೆಡ್ ಟೆನೆಂಟ್ಸ್‌ನಲ್ಲಿ ಎಷ್ಟು ಅರ್ಥ ವಿವರಣೆ ಆಗಿದೆ ಎಂಬುದನ್ನು ಹೇಳಿದ್ದಾಯಿತು. ಆಮೇಲೆ ಪ್ರೊಟೆಕ್ಟೆಡ್ ಟೆನೆಂಟು ಎನ್ನುವುದಲ್ಲಿ 1951ರ ಹಿಂದೆ 9 ವರ್ಷದೊಳಗೆ ಯಾವಾಗಲಾದರೂ ಜಮೀನು ಮಾಡಿಕೊಂಡು ಬರುತ್ತಾ ಇದ್ದರೆ ಅದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿದ್ದೀರಿ, ಒಂದು ವೇಳೆ 1951ರಿಂದ ಹಿಂದೆ 8 ವರ್ಷ ಮಾಡಿದ್ದು 1954ರವರೆಗೂ ಮಾಡಿಕೊಂಡು ಬಂದಿದ್ದರೆ 8+3=11 ವರ್ಷಗಳಾದವು ಅವನೂ ಪ್ರೊಟೆಕ್ಟೆಟ್ ಟೆನೆಂಟ್‌ನಲ್ಲಿ ಬರುತ್ತಾನೆಯೇ? ಇಲ್ಲವೇ 1951ರ ಹಿಂದೆ 9 ವರ್ಷಗಳಲ್ಲಿ ಯಾರು ಇದ್ದರೋ ಅವರಿಗೆ ಮಾತ್ರ ಅನ್ವಯವಾಗುತ್ತದೆಯೇ? ಆ ರೀತಿ ಆಗುತ್ತದೆ ಎಂದರೆ ಅದರಲ್ಲಿ ಅರ್ಥವಿದೆಯೇ? ಸ್ವಾಮಿ, ಈ ಲಾ ಬರೆಯುವವರು ಇದ್ದಾರೆಯಲ್ಲಾ ಅವರು ಇನ್ನೂ ಸ್ವಲ್ಪ ಚೆನ್ನಾಗಿ ಬರೆದಿದ್ದರೆ ಒಳ್ಳೆಯದಾಗಿತ್ತೋ ಏನೋ. ಅವರೇ ಓದಿ ಹೇಳಲಿ, ಸ್ವಾಮಿ, ಪ್ರೊಟೆಕ್ಟೆಡ್ ಟೆನೆನ್ಸಿ 1951ರ ಹಿಂದಿನವರೆಗೆ ಕೊಟ್ಟಿದ್ದಾರೆಯೋ ಹೊರತು 1954ರವರೆಗೆ ಮಾಡಿಕೊಂಡಿರುವವರಿಗೆ ಕೊಟ್ಟಿಲ್ಲ. 1951ರಿಂದ ಇಟ್ಟುಕೊಂಡು ಅದಕ್ಕೆ 9 ವರ್ಷ ಎಂದು ಏಕೆ ಸೇರಿಸಿದರು ಎಂಬುದನ್ನು ಹೇಳಬೇಕು, ಸ್ವಾಮಿ. ಇಲ್ಲಿಗೆ ಬಿಟ್ಟುಬಿಡುತ್ತೇನೆ, ಇನ್ನಾವ ತಂಟೆಗೂ ಹೋಗುವುದಿಲ್ಲ. ಇನ್ನು Permissible holdings ಎಂದು ಇದೆ, ಅಲ್ಲಿಗೆ ಬರುತ್ತೇನೆ. ಸ್ವಾಮಿ, ಈ Permissible holding 2-C ನಲ್ಲಿ

> " 2-C Permissible holding.—The permissible holding in respect of any one person shall be an extent of arable land equal to twenty-five standard acres :
>
> Provided that where land is held by a person on behalf of himself and the other members of his family who are legally entitled to such land, the permissible holding shall be the extent of arable land determined on the basis of twenty-five standard acres per each member of the family subject to the condition that the total extent shall not in any case exceed one hundred standard acres "

ಎಂದು ಇದೆ. ನಾಲ್ಕು ಜನ ಅಣ್ಣತಮ್ಮಂದಿರು ಇದ್ದಾರೆ, ಒಬ್ಬೊಬ್ಬರಿಗೆ ನಾಲ್ಕು ನಾಲ್ಕು ಜನ ಮಕ್ಕಳಿದ್ದಾರೆ ಎಂದು ಇಟ್ಟುಕೊಳ್ಳೋಣ. ಸಾಧಾರಣವಾಗಿ ಮೈಸೂರಿನ ಎಲ್ಲಾ ಸಂಸಾರಗಳಲ್ಲೂ ಒಟ್ಟು ಕುಟುಂಬ ಒಟ್ಟಾಗಿರಬೇಕೆಂಬ ಒಂದು ಪದ್ಧತಿ ಇದೆ. ಇದನ್ನು ತಂದು ತಾವು ಏನು ಮಾಡುತ್ತೀರಿ? ಜಾಗ್ರತೆ ಜಾಗ್ರತೆ ಈಗಲೇ ಅಣ್ಣತಮ್ಮಂದಿರು ಹೊಡೆದಾಡಿ ವಿಭಾಗ ಮಾಡಿಕೊಳ್ಳಲಿ ಎಂದೇ, ಸ್ವಾಮಿ? ಈಗ ತಾವು ಒಂದು ಕುಟುಂಬಕ್ಕೆ 100 ಎಕರೆ ಅಂತ ಲಿಮಿಟ್ ಮಾಡಿದ್ದೀರಿ. ನಾವ್ ಇರುವವರು 25 ಜನ ಮುಂದೆ 25 ಭಾಗ ಮಾಡಿಕೊಂಡರೆ ಒಬ್ಬೊಬ್ಬರಿಗೆ 4-4 ಎಕರೆಯೂ ಸಹ ಬರುವುದಿಲ್ಲ. ಆದ್ದರಿಂದ ಈಗಲೇ ಭಾಗ ಆಗೋಣವೇ ಅಂತರೇ?

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಯಾವ ಭೂಸುಧಾರಣೆ ತಂದರೆ ಈ ರೀತಿ ಭಯಕ್ಕೆ ಅವಕಾಶವಿಲ್ಲ ಎಂಬುದನ್ನು ಅವರು ಹೇಳಿದರೆ ಅನುಕೂಲವಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಹೇಳುತ್ತಿರುವುದನ್ನು ಕೇಳುವುದಕ್ಕೆ ಅವಸರಪಟ್ಟರೆ ನಾವೇನು ಮಾಡೋಣ. ತಮಗೂ ಅನುಕೂಲವಾಗುವ ಹಾಗೆ ಮಾಡಿ ಎಂದು ನಾನು ಹೇಳುವುದು. ಯಾವ ಭಯಕ್ಕೂ ಅವಕಾಶವಿಲ್ಲ. Actually ನ್ಯಾಯವಲ್ಲವೇ ಎಂಬುದನ್ನು ತೋರಿಸುವುದಕ್ಕೆ ಮತ್ತು ಇದು ನ್ಯಾಯಕ್ಕೆ ವಿರುದ್ಧವಾದದ್ದು, ಧರ್ಮಕ್ಕೆ ವಿರುದ್ಧವಾದದ್ದು ಎಂಬುದನ್ನು ತೋರಿಸುವುದಕ್ಕೆ ಹೇಳುತ್ತಿದ್ದೇನೆ. 25 ಜನ ಇದ್ದರೆ 100 ಎಕರೆ ಆಯಿತು ಆದ್ದರಿಂದ ಮೊದಲೇ ಜಗಳ ತೆಗೆದು ವಿಭಾಗ ಮಾಡಿಕೊಂಡುಬಿಟ್ಟರೆ 25 ಎಕರೆ ಆದರೆ ಒಬ್ಬೊಬ್ಬನಿಗೆ ಸಿಕ್ಕುತ್ತದೆ ಎಂದು ಆ ರೀತಿ ಮಾಡಿಕೊಳ್ಳಲಿ ಎಂದೇ?............

ಒಬ್ಬ ಸದಸ್ಯರು.—ಭೂದಾನದ ವಿಚಾರ ಏನೂ ಇಲ್ಲವೋ?

ಶ್ರೀ ಎ. ಭೀಮಪ್ಪನಾಯಕ್.—ಭೂದಾನ ವಿಚಾರ, ಒಳ್ಳೆಯ ನೆನಪು ತಂದಿರಿ. ಏಕೆಂದರೆ ಈ ಭೂದಾನ ಯಜ್ಞ ಎನ್ನುವುದನ್ನು ಅಲ್ಲಿ ವಿನೋಬಾ ಭಾವೆಯವರು ತಂದಿದ್ದಾರೆ. ಅದೇ ರೀತಿ ಇಲ್ಲ ಒಬ್ಬ ವಿನೋಬಾ ಭಾವೆಯವರು ಇದ್ದಾರೆ. ಏಕೆಂದರೆ ಅವರೂ ಭೂದಾನ ಮಾಡುತ್ತಾರೆ. ಇವರೂ ಭೂದಾನ ಮಾಡುವುದಕ್ಕೆ ಹೊರಟಿದ್ದಾರೆ. ಆ ದಾನ ಮಾಡುವುದನ್ನು ಮುಂದೆ ಹೇಳುತ್ತೇನೆ. ಆದ್ದರಿಂದ ಈ 100 ಎಕರೆ ಎಂಬ ಒಂದು ಲಿಮಿಟೇಷನ್ ಏನು ಇದೆಯೋ ಈ ಲಿಮಿಟೇಷನ್‌ನಿಂದ ಆಗಬಾರದ ಅನಾಹುತ ಆಗುತ್ತದೆ. ಈ 100 ಎಕರೆ ಲಿಮಿಟೇಷನ್‌ನಿಂದ ಸುಖವಾಗಿ ಜೀವನ ಮಾಡುತ್ತಿರುವವರನ್ನು ಬಡತನಕ್ಕೆ ಗುರಿ ಮಾಡುತ್ತೀರಿ ಎಂದು ಹೇಳುತ್ತೇನೆ. ಇದು ನ್ಯಾಯವಲ್ಲ. ಈ ರೀತಿ ಏಕೆ ಲಿಮಿಟ್ ಮಾಡುತ್ತೀರಿ? ಆದರೆ ಇಲ್ಲಿ ಇನಾಂ ಜಮೀನಿನಲ್ಲಿ ಈ ರೀತಿ ಮಾಡಿದ್ದೇವೆ ಎಂದು ಹೇಳುತ್ತೀರಿ, ನಿಜ. ಅವನು ತನ್ನ ಹಣೆಮೇಲಿನ ಬೆವರು ಸುರಿಸಿ ಸಂಪಾದನೆ ಮಾಡಿ ಕೊಂಡು ಕೊಂಡಿರುವ ಜಮೀನು ಸ್ವಾಮಿ ಅದು! ಯಾರೂ ನಶ್ಯದ ಪುಡಿಗೆ ಕೊಟ್ಟ ಜಮೀನಲ್ಲ.

Mr. SPEAKER.—This statement is contrary to your previous statement.

ಶ್ರೀ ಎ. ಭೀಮಪ್ಪನಾಯಕ್.—ವ್ಯವಸಾಯದಲ್ಲಿ ಕೆಲಸ ಮಾಡುವವರಿಗೆ ಎಲ್ಲರಿಗೂ ಒಂದೇ ಅನುಕೂಲ

(ಎ. ಭೀಮಪ್ಪನಾಯಕ್.)

ಇರಬೇಕು. ಒಬ್ಬನಿಗೆ ಆದರೆ 25 ಸ್ಟ್ಯಾಂಡರ್ಡ್ ಎಕರೆ, ಒಂದು ಸಂಸಾರಕ್ಕೆ ಆದರೆ 100 ಸ್ಟ್ಯಾಂಡರ್ಡ್ ಎಕರೆ ಎಂದು ಮಾಡಿದರೆ 25 ಜನ ಅಣ್ಣತಮ್ಮಂದಿರು ಒಟ್ಟಿಗೆ ಇದ್ದಾಗ ಒಬ್ಬೊಬ್ಬರಿಗೆ 4-4 ಎಕರೆ ಬಂದ ಪಕ್ಷದಲ್ಲಿ ಅವರಿಗೆ ಹೊಟ್ಟೆ ಉರಿ ಬರುವುದಿಲ್ಲವೇ ? ಇದೆಲ್ಲಾ ಡಿಸ್ಕ್ರಿಮಿನೇಷನ್ ಏಕೆ, ಸ್ವಾಮಿ ! ಡಿಸ್ಕ್ರಿಮಿನೇಷನ್‌ಗೂ ಲಿಮಿಟ್ ಇಲ್ಲವೇ ? In order to dub this as discriminatory law, I am repeating these things. That is all.

11-30 A.M.

ಇದರಲ್ಲಿರುವ ಮತ್ತೊಂದು ವಿಷಯ ಪ್ರೊಟೆಕ್ಟೆಡ್ ಹೋಲ್ಡಿಂಗ್, ಪರ್ಮಿಸಿಬಲ್ ಹೋಲ್ಡಿಂಗ್ ಎಂಬುದನ್ನು ತೆಗೆದುಕೊಂಡು ಎರಡು ಅಧ್ಯಾಯ ಬರೆದಿದ್ದೀರಿ. ಇರುವ ಟೆನೆನ್ಸಿ ಆಕ್ಟನ್ನು ಉತ್ತಮಗೊಳಿಸುವುದಕ್ಕಾಗಿ ಈ ಮಸೂದೆ ತಂದಿದೆಯೆಂದು ಉದ್ದೇಶಗಳು ಮತ್ತು ಕಾರಣಗಳ ವಿವರದಲ್ಲಿ ಹೇಳಲಾಗಿದೆ. ಬದಲಾವಣೆ ಮಾಡಿರುವುದು 5 ವರ್ಷ ಎಂದಿದ್ದುದನ್ನು 10 ವರ್ಷ ಎಂದು ಹೇಳಿರುವುದು ಒಂದು, ಅಮಲ್ದಾರರನ್ನು ತೆಗೆದು ಅಸಿಸ್ಟೆಂಟ್ ಕಮಿಷನರರನ್ನು ಹಾಕಿದ್ದೇವೆಂದು ಹೇಳುವುದು ಇನ್ನೊಂದು. ಹೋಲ್ಡಿಂಗ್ ನಿರ್ಧಾರ ಮಾಡಿರುವುದಕ್ಕೆ ಸರಿಯಾದ ಆಧಾರವೇನೆಂಬುದನ್ನು ಹೇಳಿಲ್ಲ, ಅದಕ್ಕೆ ತಕ್ಕ ಸಮಜಾಯಿಷಿ ಕೊಟ್ಟಿಲ್ಲ. ನೂರು ಎಕರೆ ಏಕೆ ನಿಗದಿ ಮಾಡಬೇಕಾಗಿತ್ತು ? 50 ಏಕೆ ಆಗಬಾರದಾಗಿತ್ತು ? ಇದರ ತತ್ವನೇನು ?

Mr. SPEAKER.—That can be gone into at the further stages.

ಶ್ರೀ ಎ. ಭೀಮಪ್ಪನಾಯಕ್.—ಇದನ್ನು ನಿಗದಿ ಮಾಡಿರುವುದು, ಈ ಲಿಮಿಟ್ ನಿರ್ಧರಿಸಿರುವುದು ನ್ಯಾಯವಾಗಿಲ್ಲ. ಇದರಿಂದ ಸಮಾಜ ಘಾತುಕವಾದ ಪರಿಣಾಮ ಉಂಟಾಗುತ್ತದೆ. ಈ ಆಕ್ಟ್ ಜಾರಿಗೆ ಬರುವುದಕ್ಕೆ ಮುಂಚೆಯೇ ಭಾಗವಾಗುವುದಕ್ಕೂ, ಭಾಗವಾಗದಿದ್ದರೂ ಸುಮ್ಮನೆ ಭಾಗವಾಗಿದ್ದೇವೆಂದು ಹೇಳಿ ಅನುಕೂಲ ಪಡೆಯಲು ರಿಜಿಸ್ಟರು ಮಾಡಿಸಲು ಪ್ರಯತ್ನಮಾಡುವುದಕ್ಕೂ ಇದರಿಂದ ಅವಕಾಶವಾಗುತ್ತದೆ. ಹತ್ತಾರು ಮಕ್ಕಳಿದ್ದರೆ ಈ ದಿವಸ ಪಾರೀಕತ್ತು ಮಾಡಿ ಸಬ್ ರಿಜಿಸ್ಟ್ರಾರ್ ಆಫೀಸಿಗೆ ಇನ್ನೂ ಹೆಚ್ಚು ಹಣ ಕೊಡುವುದಕ್ಕೆ ಅವಕಾಶವಾಗುತ್ತದೆಯೇ ವಿನಾ ಇನ್ನೇನೂ ಇಲ್ಲ. ಇದು ಸೆಲೆಕ್ಟ್ ಕಮಿಟಿಗೆ ಹೋಗಿ ಬಂದು ಜಾರಿಗೆ ಬರುವುದರೊಳಗೆ ಎಲ್ಲಾ ವಿಭಾಗ ಮಾಡಿರುತ್ತಾರೆ. ಈ ತರಹ ಸಾಮಾನ್ಯವಾಗಿ 100 ಎಕರೆ ಎಂದು ಲಿಮಿಟ್ ಮಾಡುವುದು ಸರಿಯಲ್ಲ. ಸ್ಟ್ಯಾಂಡರ್ಡ್ ಎಕರೆ 10 ಎಕರೆ ಎಂದು ಮಾಡಿ, ಆದಕ್ಕೆ ಆಕ್ಷೇಪಣೆಯಿಲ್ಲ. ಆದರೆ ಯಾವ ರೀತಿ ಮಾಡಿದರೆ ಉಪಯೋಗವಾಗುತ್ತದೆ, ವಿಭಾಗವಾದರೂ ಕೂಡ ಟೆನೆಂಟಿಗೆ ಬರುವಷ್ಟಾದರೂ ಬರುವಷ್ಟಿದೆಯೆ ಎಂದು ನೋಡಿ ಅವಕಾಶ ಮಾಡಬೇಕು.

Mr. SPEAKER.—You have exhausted your points ?

Sri A. BHEEMAPPA NAIK.—No Sir, there is Chapter II-A ; I have not even touched "Special privileges of protected tenants and certain non protected tenants." ಇದರಲ್ಲಿ ಅನುಕೂಲತೆ ಹೇಗೆ ಒದಗಿಸಿದ್ದಾರೆ, ಯೂನಿಲ್ಯಾಟರಲ್ ಬೆನಿಫಿಟ್ ಕೊಡುವುದಕ್ಕೆ ಏನು ಪ್ರಯತ್ನಮಾಡಿದ್ದಾರೆ ಎಂದು ತಿಳಿಸಬೇಕೆಂದಿದ್ದೇನೆ. "Right of protected tenant and non-protected tenant to purchase land" ; here comes the offence against the fundamental right of the ownership of property which is provided in the Constitution of India. It cannot be abrogated or curtailed. ಸುಪ್ರೀಂ ಕೋರ್ಟಿನ ತೀರ್ಮಾನವನ್ನು ತೋರಿಸುತ್ತಾರೆ. I do not know whether the Supreme Court's decision can stand for all these 2,000 and odd cases. ಇದೇನಾದರೂ ಇರಲಿ. ಸ್ಪೆಷಲ್ ಪ್ರಿವಿಲೆಜಸ್ ಒದಗಿಸುವಾಗ ಹೇಗೆ ಮಾಡುವುದು ? ಯಾವನಾದರೂ ಒಬ್ಬ ಜಮೀನು ಮಾಡುವಾಗ ಮನಸ್ಸು ಬಂದಾಗ ಒಂದು ದಿವಸ ಅದನ್ನು ನಾನು ಕೊಂಡುಕೊಳ್ಳುತ್ತೇನೆ ಎಂದು ಬರೆದುಕೊಡಬಹುದು. ಮೊನ್ನೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಯಾವನೋ ಒಬ್ಬ 75 ಎಕರೆಗಳನ್ನು 35 ಸಾವಿರ ರೂಪಾಯಿಗಳಿಗೆ ಮಾರಿದ. ಆ ಕ್ರಯಪತ್ರ ರಿಜಿಸ್ಟರಾಗುವುದರೊಳಗಾಗಿ ಒಬ್ಬ ನೋಟೀಸು ಕೊಟ್ಟನಂತೆ, ನನಗೆ ನೀನು ಲ್ಯಾಂಡ್ ಲಾರ್ಡ್, ನಾನು ಟೆನೆಂಟಾಗಿದ್ದೆ, ಮಾರುವಾಗ ನನ್ನನ್ನು ಕೇಳಲಿಲ್ಲ, ಆದ್ದರಿಂದ transaction ಊರ್ಜಿತವಾಗುವುದಕ್ಕೆ ಅವಕಾಶವಿಲ್ಲ, ಅದು ತಪ್ಪು ಎಂದು ನೋಟೀಸ್ ಕೊಟ್ಟ. ಕೋರು ಮಾಡಿದವನಿಗೆ 5 ಎಕರೆ ಕೊಳ್ಳುವುದಕ್ಕೆ ಸಹ ಶಕ್ತಿಯಿಲ್ಲ. ಆದರೆ ಲಾಪ್ರಕಾರ ನೋಟೀಸ್ ಕೊಟ್ಟು ಹಾಗೆ ಮಾಡಿದ ತಪ್ಪಿಗೆ ಏನಾದರೂ ಕೊಟ್ಟರೆ ಸರಿ ಇಲ್ಲದಿದ್ದರೆ ಕ್ರಮ ಜರುಗಿಸಬೇಕಾಗುತ್ತದೆಂದು ಹೇಳಿದನಂತೆ. ಹೀಗಾಗುವುದಕ್ಕೆ ಈ ಬಿಲ್ಲಿನಿಂದ ಅವಕಾಶವಾಗುತ್ತದೆ, ಕೊಳ್ಳುವುದಕ್ಕೆ ಶಕ್ತಿಯಿಲ್ಲದಿದ್ದರೂ ಕೊಳ್ಳಲಿ ಎಂದು ಹೇಳಿದ್ದಾರೆ. ಈ ದಿವಸವಲ್ಲದಿದ್ದರೆ ಹತ್ತು ವರ್ಷಗಳ ಮೇಲೆ ನೋಟೀಸ್ ಕೊಡಬಹುದು. ಅದೇ ಇದರ ಪರಿಣಾಮ. ನೋಟೀಸ್ ಕೊಟ್ಟು ಅಸಿಸ್ಟೆಂಟ್ ಕಮಿಷನರ ಹತ್ತಿರ ಹೋಗಿ ಬೆಲೆ ನಿರ್ಧರಿಸಿ ಹತ್ತು ವರ್ಷಗಳವರೆಗೆ ಕಂತು ಪ್ರಕಾರ ಕಟ್ಟಬಹುದು. ಈ ದಿವಸ 100 ರೂಪಾಯಿ ಎಕರೆಗೆ ಬೆಲೆಯಿದ್ದರೆ ಮುಂದೆ ಆ ಬೆಲೆ 1,000 ರೂಪಾಯಿಗಳಾಗಬಹದು, 1,000 ಇರುವುದು 100 ರೂಪಾಯಾಗಬಹುದು. ಬೆಲೆ ಇಳಿದಾಗ ನನ್ನ ಹಣ ವಾಪಸು ಕೊಡಿ ಎಂದು ಗೇಣಿದಾರ ಹೇಳಿದರೆ ಹೇಗೆ ?

Is this the way how a sale is held ?

Mr. SPEAKER.—What is your suggestion regarding this provision ?

ಶ್ರೀ ಎ. ಭೀಮಪ್ಪನಾಯಕ್.—ಈ ವಿಚಾರದಲ್ಲಿ ಸರ್ಕಾರಕ್ಕೆ ಅಷ್ಟು ಆಸಕ್ತಿಯಿದ್ದರೆ ಅವರು ಹಣ ಕೊಟ್ಟು ಕೊಂಡುಕೊಳ್ಳಲಿ. ಈಗ ಇನಾಂ ಜಮೀನು ಕೊಳ್ಳುತ್ತಿಲ್ಲವೆ ? ಹಾಗೆ ಮಾಡಲಿ. ಅವರಿಗೆ ಶಕ್ತಿಯಿದ್ದರೆ ಬೆಲೆ ಕೊಟ್ಟು ಜಮೀನನ್ನು ಮಾಲೀಕನಿಂದ ತೆಗೆದುಕೊಂಡು ಟೆನೆಂಟುಗಳಿಗೆ ಅನುಕೂಲ ಮಾಡಿಕೊಡಲಿ. ಅದು ಬಿಟ್ಟು ಆಚಂದ್ರಾರ್ಕವಾಗಿ ದುಡಿದು ತೀರಿಸಬಹುದು, ಕಂತು ಪ್ರಕಾರ ಕೊಡಬಹುದು ಎಂಬುದಾಗಿ ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಒಂದು ಸಾರಿ ವ್ಯವಹಾರ ನಡೆದಮೇಲೆ, ಕೊಂಡುಕೊಳ್ಳುತ್ತೇನೆಂದು ಹೇಳಿ ಹಣ ಸ್ವಲ್ಪ ಕೊಟ್ಟ ಮೇಲೆ, ಪುನಃ ಹಣ ವಾಪಸು ಕೊಡು, ಜಮೀನು ನನಗೆ ಬೇಡ ಎಂದುದಾಗಿ ಹೇಳುವುದು ಯಾವ ಲೆಕ್ಕಾಚಾರ? ಇದಕ್ಕೆ ಪೆನಾಲ್ಟಿ ಇದೆಯೆ ಎಂದರೆ ಇಲ್ಲ. ಮಾಲೀಕ ಜಮೀನು ಮಾರುವ ಹಾಗಿಲ್ಲ. ಟೆನೆಂಟ್ ಕೊಂಡುಕೊಂಡಿರುವುದು ಖಾಯಂ ಅಲ್ಲ. ಅನುಕೂಲವಿಲ್ಲದಿರುವ ಗೇಣಿ

ದಾರ ಹಣ ಕೊಟ್ಟುಕೊಳ್ಳಲು ಸಾಧ್ಯವೆ? ವ್ಯವಸಾಯಕ್ಕೆ ಸ್ವಂತ ಜಮೀನಿಲ್ಲದೆ ಕಂಡವರ ಜಮೀನನ್ನು ಕೋರಿಗೆ ಮಾಡುವವನು ಕುಂಟ ಎತ್ತು, ಕುರುಡ ಕತ್ತೆ ಕಟ್ಟಿಕೊಂಡು ಬೇಸಾಯ ಮಾಡುವವನು, ಜಮೀನು ಹೇಗೆ ತಾನೆ ಖರೀದಿಗೆ ಪಡೆಯಲು ಸಾಧ್ಯ? ಜಮೀಂದಾರನಿಗೆ 3 ಕಾಸೂ ಕೊಡದಿದ್ದರೆ ಅವನ ಗತಿಯೇನು? ಜಮೀಂದಾರ ಸರಿಯಾಗಿ ನೋಡಿಕೊಳ್ಳದಿದ್ದರೆ ಜಮೀನು ಹಾಳಾಗುತ್ತದೆ. ನಮ್ಮಲ್ಲಿ ಎರೆ ಭೂಮಿ ಎಂದು ಹೇಳುವುದು ಬಹಳ ಉತ್ಕೃಷ್ಟವಾದದ್ದು. ಅದನ್ನು ಸರಿಯಾಗಿ ನೋಡಿಕೊಳ್ಳದೆ ಎರಡು ವರ್ಷ ಕೋರುದಾರ ಉಪೇಕ್ಷೆ ಮಾಡಿದರೆ ಗರಿಕೆ ಎಂಬುದು ಬೆಳೆದು ಜಮೀನಿನ ಬೆಲೆ ಬಹಳವಾಗಿ ಕಡಮೆಯಾಗುತ್ತದೆ. ಆಗ ಮಾಲೀಕನ ಗತಿ ಏನು? 100 ರೂಪಾಯಿಗೆ ತೆಗೆದುಕೊಳ್ಳುವುದಾಗಿ ಪ್ರಾಮಿಸರಿ ಬರೆದುಕೊಟ್ಟು 9-10 ವರ್ಷಗಳಾದ ಮೇಲೆ ಬೇಡವೆಂದರೆ ಬಡ್ಡಿ ಸಮೇತ ಎಲ್ಲಾ ಹೋಗುತ್ತದೆ. ಇದರಿಂದ ಖಾಯಮ್ಮಾದ ಅನುಕೂಲತೆ ದೊರೆತಂತಾಗುವುದಿಲ್ಲ. ಕೋರುದಾರನಿಗೆ ಸಾಮಾನ್ಯವಾಗಿ ಕೊಂಡುಕೊಳ್ಳುವ ಶಕ್ತಿಯಿರುವುದಿಲ್ಲ. ಆಮೇಲೆ ಯೂನಿಲೇಟರಲ್ ಬೆನಿಫಿಟ್ ಇರುವುದರಿಂದ ಖರೀದಿ ನಿಷ್ಕರ್ಷೆಯಾದ ಮೇಲೆ ಯಾವತ್ತು ಬೇಕಾದರೂ ಕಟ್ಟಬಹುದು. ಅದಕ್ಕೆ 10 ವರ್ಷ ಅವಧಿಯಿದೆ. ಆಮೇಲೆ ಕಟ್ಟುವುದಕ್ಕಾಗದಿದ್ದರೆ ಕೊಟ್ಟಿರುವ ಹಣ ವಾಪಸು ಕೊಡು ಎಂದು ಹೇಳುತ್ತಾರೆ. ಮತ್ತೆ ಗೇಣೀದಾರ ಮತ್ತು ಮಾಲೀಕರ ಸಂಬಂಧವಿದ್ದೇ ಇರುತ್ತದೆ, ಇದು ಸರಿಯಲ್ಲ.

Protected tenants and certain non-protected tenants ನ special privileges ವಿಚಾರದಲ್ಲಿ lands purchase ಮಾಡುವ ಸಂದರ್ಭದಲ್ಲಿ ಅವರಿಗೆ ಕೊಟ್ಟಿರುವ ಅಧಿಕಾರ ವಿಚಿತ್ರ ರೀತಿಯದಾಗಿದೆ. ಅದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ: 38 ನೆಯ ಪುಟದಲ್ಲಿ—

> "The protected tenant or the non-protected tenants, as the case may be shall thereupon deposit the amount of market value so determined with the Assistant Commissioner within such time not exceeding three months as the Assistant Commissioner directs. Such amount shall be deposited with the Assistant Commissioner,
>
> (a) either in a lumpsum; or
>
> (b) in such instalments not exceeding six and at such intervals during a period not exceeding ten years and on or before each dates as may be fixed by the Assistant Commissioner in each case."

ಈ ಆರು ತಿಂಗಳುಗಳ ಕಂತು ಮತ್ತು ಹತ್ತು ವರ್ಷಗಳ ಅವಧಿಯನ್ನು ಯಾವ ಆಧಾರದ ಮೇಲೆ ಹಾಕಿದ್ದೀರಿ? ಇದರಲ್ಲೇನಾದರೂ ಅರ್ಥವಿದೆಯೇ?

Mr. SPEAKER.—It is only an enabling clause just to make provision where there is failure of crops so that ryots may pay out of cultivation profits.

ಶ್ರೀ ಎ. ಭೀಮಪ್ಪನಾಯಕ್.—ತಾವೂ ವ್ಯವಸಾಯಗಾರರ ಮಕ್ಕಳು, ತಮಗೂ ಅನುಭವವಿದೆ. ರೈತನು ತಾನು ಬೆಳೆದ ಜಮೀನು ಅಭಿವೃದ್ಧಿಯಾಗಲಿ ಎಂದು ಅವನಿಗೆ incentive ಇರಬೇಕಾದರೆ ಅವನು ಬೆಳೆದದ್ದನ್ನು (he must plough back) ಪುನಃ ಅದಕ್ಕೆ ಹಾಕಿ ಇನ್ನೂ ಅಭಿವೃದ್ಧಿಗೊಳಿಸುತ್ತಾನೆ; it is a term in industry ಇದು ರೂಢಿಯಲ್ಲಿರತಕ್ಕದ್ದು. ಹೀಗಿರುವಲ್ಲಿ ಈ ಮಸೂದೆಯಲ್ಲಿ ತಾವು ಸೂಚಿಸಿರುವುದು practical impossibility. ಇದೇನಿದ್ದರೂ theory ಹೊರತು ಕಾರ್ಯತಃ ಇದರಿಂದ ಉಪಯೋಗವಾಗುವುದಿಲ್ಲ. ಮಾತೆತ್ತಿದರೆ, ಬೊಂಬಾಯಿಯ ಉದಾಹರಣೆಯನ್ನು ತರುತ್ತೀರಿ. ಇತ್ತೀಚೆಗೆ ಅಲ್ಲಿನ ಪರಿಸ್ಥಿತಿ ವಿಷಯದಲ್ಲಿ ಇದಕ್ಕೆ ಸಂಬಂಧಿಸಿದ ಹಾಗೆ ಶ್ರೀ ಮಹಮ್ಮದ್ ಇಮಾಂರವರಿಗೆ ಅಲ್ಲಿಂದ ಅವರ ಅಳಿಯಂದಿರು ಒಂದು ಕಾಗದ ಬರೆದಿದ್ದಾರೆ. ಅವರ ಹಳ್ಳಿಯಲ್ಲಿ ಈ ಸಂಬಂಧದಲ್ಲಿ 30 litigations ಇವೆಯಂತೆ!

ಶ್ರೀ ಜೆ. ಮಹಮ್ಮದ್ ಇಮಾಂ.—ನಾನು ಪಿ. ಎಸ್. ಪಿ., ನನ್ನ ಅಳಿಯ ಕಾಂಗ್ರೆಸ್.

ಶ್ರೀ ಎ. ಭೀಮಪ್ಪನಾಯಕ್.—ಇಂಥ ಸಂದರ್ಭಗಳಲ್ಲಿ ಬೊಂಬಾಯಿನಲ್ಲಿ ಹೀಗಿದೆ, ಹೈದರಾಬಾದಿನಲ್ಲಿ ಹಾಗಿದೆ ಎಂದು ಉದಾಹರಣೆ ಕೊಡುವುದು ಅಷ್ಟು ಉಚಿತವಲ್ಲ. ಏಕೆಂದರೆ, ಅಲ್ಲಿನ ಪರಿಸ್ಥಿತಿಯೇ ಬೇರೆ, ಇಲ್ಲಿನ ಪರಿಸ್ಥಿತಿಯೇ ಬೇರೆ. ಅಲ್ಲಿನ ವಿದ್ಯಮಾನಗಳಿಗೂ ಮತ್ತು ಪರಿಸ್ಥಿತಿಗೂ ಇಲ್ಲಿನ ವಿದ್ಯಮಾನಗಳಿಗೂ ಮತ್ತು ಪರಿಸ್ಥಿತಿಗಳಿಗೂ ಹೊಂದಾಣಿಕೆಯೇ ಇಲ್ಲ. ಟ್ರಾವಂಕೂರಿನ ಜನಜೀವನದ ಪರಿಸ್ಥಿತಿಯನ್ನೇ ತೆಗೆದು ಕೊಳ್ಳಿ. ಅಲ್ಲಿ ಒಂದು ಮೈಲಿಯಷ್ಟು ವಿಸ್ತೀರ್ಣದ ಪ್ರದೇಶದಲ್ಲಿರತಕ್ಕ ಜನ ಸಂಖ್ಯೆಯು ಒತ್ತಡಕ್ಕೂ ಇಲ್ಲಿ ಒಂದು ಮೈಲಿಯಷ್ಟು ವಿಸ್ತೀರ್ಣದ ಪ್ರದೇಶದಲ್ಲಿರತಕ್ಕ ಜನ ಸಂಖ್ಯೆಯ ಒತ್ತಡಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಆದುದರಿಂದ ಅಲ್ಲಿ ಮಾಡಿರುವಂತೆ ಇಲ್ಲಿಯೂ ಮಾಡಬೇಕೆಂದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಇಲ್ಲಿನ ವಿದ್ಯಮಾನಗಳಿಗೆ ಸರಿಹೋಗುವಂತೆ ವ್ಯವಸ್ಥೆಮಾಡಿಕೊಳ್ಳುವುದರಲ್ಲಿ ಅರ್ಥವಿದೆ.

ಒಬ್ಬ ಜಮೀನ್ದಾರನು ತನ್ನ ಭೂಮಿಯನ್ನು ಟೆನೆಂಟಿಗೆ ಮಾರಾಟ ಮಾಡಿ ಅವನಿಂದ ಹಣ ಪಡೆಯಲು ತಾವು ಇದರಲ್ಲಿ ಆರು ಕಂತುಗಳ ಮತ್ತು 10 ವರ್ಷಗಳ ಅವಧಿ ಗೊತ್ತುಮಾಡಿರುವುದರಲ್ಲಿ ಏನೂ ಅರ್ಥವಿಲ್ಲ. ಇದರಿಂದ 'ಅಕ್ಕ ಕನ್ನಡಿಯಲ್ಲಿ ಮುಖ ನೋಡಿಕೊಂಡ' ಹಾಗಾಗುತ್ತದೆ. ಅಂದರೆ, ಕನ್ನಡಿಯೊಳಗಿನ ಗಂಟನ್ನು ಜಮೀನ್ದಾರನಿಗೆ ತೋರಿಸಿದ ಹಾಗಾಗುತ್ತದೆ. ಜಮೀನ್ದಾರನಿಗೆ ಸಮಯಕ್ಕೆ ಹಣಬೇಕಾದರೆ ದೊರೆಕುವ ಹಾಗಿಲ್ಲ. ನಗದು ಹಣ ತಕ್ಷಣ ಕೊಡತಕ್ಕ ಶಕ್ತಿ ಟೆನೆಂಟಿಗೆ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ತುರುತಾಗಿ ಜಮೀನ್ದಾರನಿಗೆ ಹಣ ಬೇಕಾದರೆ ಏನು ಮಾಡುವುದು? ಒಂದು ವೇಳೆ ಮಗನ ವಿದ್ಯಾಭ್ಯಾಸಕ್ಕೆ ತುರುತಾಗಿ ಜಮೀನ್ದಾರನಿಗೆ ಹಣ ಬೇಕಾದರೆ ಏನು ಮಾಡಬೇಕು?

Sri A. V. NARASIMHA REDDY.—This is a tenants' Act which seeks to help tenants and not landlords.

Sri A. BHEEMAPPA NAIK.—Yes. It is tenants' Act for the whole State and kills all the landlords.

Mr. SPEAKER.—It will not kill but it will simply take away . . . .

ಶ್ರೀ ಎ. ಭೀಮಪ್ಪನಾಯಕ್.—ಈ ಟೆನೆನ್ಸಿ ಆಕ್ಟನ್ನು ಜಾರಿಗೆ ತರುವುದರಿಂದ ಯಾವ ಜಮೀನ್ದಾರನಿಗೂ ತೊಂದರೆ ಆಗಬಾರದು. ಅದರಲ್ಲಿಯೂ ನ್ಯಾಯ ವಿರುದ್ಧವಾಗಿ ತೊಂದರೆ ಆಗಬಾರದು. ಈ ರೀತಿ ಅವಕಾಶವನ್ನು ಇದರಲ್ಲಿ ಕಲ್ಪಿಸಬೇಕಾಗಿತ್ತು. ಜಮೀನ್ದಾರನಾದವನು ಒಂದೊಂದು ಸಂದರ್ಭದಲ್ಲಿ ತನ್ನ ಜಮೀನನ್ನು ಮತ್ತೊಬ್ಬರಿಗೆ ಪರಭಾರೆ (mortgage) ಮಾಡಿ ಹಣ ಪಡೆದಿರುತ್ತಾನೆ; ಆ ಹಣವನ್ನು ಆತನು ಪುನಃ ಹಿಂದಕ್ಕೆ ಕೊಡಲು ಹತ್ತಾರು ವರ್ಷಗಳಾಗುತ್ತವೆ. ಅಂಥ ಸಂದರ್ಭದಲ್ಲಿ ಆತನು ಏನು ಮಾಡಬೇಕು ಎಂಬುದಕ್ಕೆ ಇದರಲ್ಲಿ provision ಇಲ್ಲ. ಅಲ್ಲದೆ ಹತ್ತು ವರ್ಷಕಾಲದ ಮೇಲೆ ಆ ಹಣವನ್ನು ವಾಪಸ್ಸು ಅವನು ಕೊಡುವ ಹೊತ್ತಿಗೆ ಅದಕ್ಕೆ ಕೊಡಬೇಕಾದ ಬಡ್ಡಿ, ಅಸಲು ಎಲ್ಲಾ ಸೇರಿ ಡಿಪಾಜಿಟ್ ಹಣದಷ್ಟು ಆಗಿ ಆತನು ಜಮೀನನ್ನೇ ಕಳೆದುಕೊಳ್ಳುವ ಪರಿಸ್ಥಿತಿ ಬಂದರೆ ಏನು ಮಾಡುವುದು ? 500 ರೂಪಾಯಿಗಳಿಗೆ ಒಬ್ಬನು ತನ್ನ ಭೂಮಿಯನ್ನು mortgage ಮಾಡಿದ್ದರೆ 10 ವರ್ಷಗಳ ಮೇಲೆ ಅದು ಎರಡರಷ್ಟಾಗಿರುತ್ತದೆ. ಅಂಥವನ ಗತಿ ಏನು ? ಇದಕ್ಕೆಲ್ಲಾ ತಾವು ಇದರಲ್ಲಿ ತಕ್ಕ ಅನುಕೂಲವನ್ನು ಅವನಿಗೆ ಕಲ್ಪಿಸಿಕೊಟ್ಟಿದ್ದೀರಾ?

ಮತ್ತೊಂದು ವಿಷಯ. ಈ ಡಿಪಾಜಿಟ್ ಮೊಬಲಗನ್ನು protected tenants ಎನ್ನಿಸಿಕೊಂಡವನೂ ಪಾವತಿ ಮಾಡಿದಮೇಲೆ procedure ಬಹಳ ಸ್ವಾರಸ್ಯವಾಗಿದೆ. ಅದು ಈ ರೀತಿ ಇದೆ:

> "On the deposit of the entire amount of the price, the Assistant Commissioner shall issue a certificate in the prescribed form to the protected tenant or the non-protected tenant, as the case may be, declaring him to be the purchaser of the land. Such certificate shall, on registration, be conclusive evidence of the sale as against the landlord and all persons interested therein. The Assistant Commissioner shall also direct that the entire amount of the price deposited shall be paid to the landlord. If the protected tenant or the non-protected tenant, as the case may be, fails to pay the entire amount of the price within the period fixed under sub-section (4), the purchase shall not be effective and the amount deposited by the protected tenant or the non-protected tenant, as the case may be, shall be refunded to him."

ಈ ರೀತಿ ಖರೀದಿ ಆದ ಮೇಲೆ ಬೇಕಾದ ಹಾಗೆ ಹಾಲು ಕರೆಯುತ್ತಿದ್ದ ಎಮ್ಮೆ, ಬರಡು ಎಮ್ಮೆಯಾಗಿ ಪರಿಣಮಿಸಿದರೆ ಏನು ಮಾಡುವುದು ? ಇದು ಟೆನೆಂಟ್ ವಿಚಾರದಲ್ಲಿ ಎಷ್ಟು ಸೊಗಸಾದ provision !

Mr. SPEAKER.—That can be improved.

ಶ್ರೀ ಎ. ಭೀಮಪ್ಪನಾಯಕ್.—ಇದು ಒಂದೇ ಅಲ್ಲ ಆರೀತಿ improve ಮಾಡಬೇಕಾದುದು ಇದರಲ್ಲಿ ಹಲವಾರು ಇವೆ. ಹಲವಾರು provisions ಬಹಳ ಬದಲಾವಣೆ ಆಗಬೇಕಾಗಿವೆ. ಮೊದಲು ಇದನ್ನು ಗೆಜೆಟ್‌ನಲ್ಲಿ ಫಾಯಿಷ್‌ಮಾಡಿ ಜನಾಭಿಪ್ರಾಯವನ್ನು ಸರ್ಕಾರದವರು ಈ ವಿಚಾರದಲ್ಲಿ ತೆಗೆದುಕೊಳ್ಳಲಿ. ಆಗ ನೋಡಿಕೊಳ್ಳೋಣ, ಈ ಸರ್ಕಾರ ಆಡಳಿತವನ್ನು ಸುಲಲಿತವಾಗಿ ನಡೆಸುವ ಹಾಗೆ ಆಗುತ್ತದೆಯೋ ಎಂಬುದನ್ನು ನೋಡಿಕೊಳ್ಳೋಣ.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಹಾಗೇನೂ ಸರ್ಕಾರವನ್ನು ಹೆದರಿಸಬೇಕಾಗಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ತಾವು ಇದನ್ನು ಗೆಜೆಟ್‌ನಲ್ಲಿ publish ಮಾಡಿದಾಗ ನೋಡೋಣ.

> "31B—(5): **Provided that until the deposit of the entire amount is made in a lumpsum or until the deposit of the last of the instalments is made, the liability of the protected tenant or the non-protected tenant, as the case may be, to pay the rent due in respect of the land shall continue and shall not be affected "

ಎಂದು ಹೇಳುತ್ತಾರೆ. ಅವನು ದುಡ್ಡು ಕೊಡುತ್ತಾ ಇರಬೇಕು, ಅಷ್ಟರಲ್ಲೇ ಜೀವನ ಮಾಡಬೇಕು. ಆ ಜಮಿಾನು ಇಂಪ್ರೂವ್ ಮಾಡಬೇಕು ಎಂದರೆ ಹೇಗೆ ಸಾಧ್ಯ ? ಜಮಿಾನು ವ್ಯಾಪಾರ ಅಂದರೂ ಮುಂದೆ ಪೂರ್ತಿ ಹಣ ಕೊಡುತ್ತಾನೆ. ಅಲ್ಲಿಯವರೆಗೂ ನನಗೆ ಕೊಡುವ ಗುತ್ತಿಗೆ ಕಟ್ಟಿಕೊಂಡು ಹೋಗು, ಅದಲ್ಲದೆ ಜಮಿಾನಿನ ರೆಂಟೂ ಸಹ ಕೊಡು ಎಂದು ಹೇಳುವುದರಲ್ಲಿ ಯಾವ ನ್ಯಾಯವಿದೆ ? ಅವನಿಗೆ ಅದರಲ್ಲಿ ಇಂಟರೆಸ್ಟೂ ಇಲ್ಲ, ಅನುಕೂಲವೂ ಇಲ್ಲ. ಏಕೆಂದರೆ ಜಮೀನು ಹೇಗೆ ಮಾಡಿದ್ದನೋ ಹಾಗೆಯೇ ಬಿಟ್ಟು ಹೋಗಬೇಕೆಂದು ಅವನಿಗೆ ಹೇಳುವುದಕ್ಕಾಗುವುದಿಲ್ಲ. ಜಮೀನು ಇಂಪ್ರೂವ್ ಮಾಡಿ ಹಣ ಪೂರ್ತಿ ಕಟ್ಟಲು ಶಕ್ತಿ ಇಲ್ಲದೇ ಇರುವಾಗ ಈ ರೀತಿ ಎಲ್ಲಾ ಮಾಡಿದರೆ ನನ್ನ ಗತಿ ಏನು ? ಒಂದುವೇಳೆ ಬಾವಿ ತೆಗೆಸಿದ್ದ, ಎಲೆಕ್ಟ್ರಿಕ್ ಪಂಪ್ ಹಾಕಿಸಿದ್ದ ಎಂದಿಟ್ಟುಕೊಳ್ಳೋಣ; ಅದರ ಹಣವನ್ನು ವಾಪಸು ಕೊಡಬೇಕು ಎಂದು ಏನಾದರೂ ಇದೆಯೇ ? ಏನೂ ಇಲ್ಲ. ಇಷ್ಟೆಲ್ಲಾ ಇಂಪ್ರೂವ್ ಮಾಡಿದ್ದನ್ನು ಅವನು ಬಲಾತ್ಕಾರವಾಗಿ ಬಿಟ್ಟುಕೊಡಬೇಕೇ ? ಒಬ್ಬ ವಿಧವೆ ಇರುತ್ತಾಳೆ. ಮಗನನ್ನು ಬೇರೆ ಊರಿಗೆ ಕಳುಹಿಸಿ ಓದಿಸುತ್ತಾ ಇರುತ್ತಾಳೆ. ಅವಳು 2,000 ರೂಪಾಯಿ ಖರ್ಚು ಮಾಡಿ ಬಾವಿ ತೆಗೆಸಿರುತ್ತಾಳೆ. ಇದೇ ರೀತಿ ಇನ್ನೂ ಏನೇನು ಇಂಪ್ರೂವ್‌ಮೆಂಟ್ ಮಾಡಿದ್ದಾರೆ ಎಂಬುದು ಯಾರಿಗೆ ಗೊತ್ತಾಗಬೇಕು ? ಅಪ್ಪೊತ್ತು ಹಣ ಕೊಡುವಾಗ ಏಳು ಸಾವಿರ ರೂಪಾಯಿ ಖರ್ಚು ಮಾಡಿ ಬಾವಿ ತೆಗೆಸಿದ್ದೇನೆ, ಎಲೆಕ್ಟ್ರಿಕ್ ಪಂಪ್ ಹಾಕಿಸಿದ್ದೇನೆ ಅದನ್ನೆಲ್ಲಾ ಕೊಡಿಸಿಕೊಡಿ ಎಂದರೆ ಆಗ್ಗೆ ಕೊಟ್ಟು ತೆಗೆದುಕೊಳ್ಳಬೇಕೇ, ಕೊಡದೇ ತೆಗೆದುಕೊಳ್ಳಬೇಕೇ ? ಇದರ ಪರಿಸ್ಥಿತಿ ಏನು ? Sale in abeyance for ten years is not just, it cannot be thought of, and please do not repeat Bombay as an instance. ಏಕೆಂದರೆ ಅಲ್ಲೂ ಸಂಪೂರ್ಣವಾಗಿ settled law ಇಲ್ಲ. ಆದ್ದರಿಂದ ಬೊಂಬಾಯಿನಲ್ಲಿ ಇಲ್ಲವೇ ಎಂದು ಹೇಳಿದರೆ ನಾವೇನೂ ಜವಾಬು ಹೇಳುವುದಕ್ಕಾಗುವುದಿಲ್ಲ. ಇವೊತ್ತು ಇದು ಸೆಟೆಲ್ಡ್ ಲಾ ಆಗಿ ನಮ್ಮಲ್ಲಿ ಬರುವುದಕ್ಕೆ ಯಾವುದಾದರೂ ಒಂದು experimental period ಗೊತ್ತು ಮಾಡಿದ್ದೂ ಸಹ ಇನ್ನೂ ಮೂರುವರ್ಷ ಕೂಡ ಆಗಿಲ್ಲ; ಆಗಲೇ ಇನ್ನೊಂದು ಬದಲಾವಣೆ ಮಾಡಿ ಎಂದು ತರುವುದಕ್ಕಿಂತ ಐದು ವರ್ಷ ಏಕೆ ಕಾಯಬಾರದಾಗಿತ್ತು? ಐದು ವರ್ಷ ಕಾದು ಆಮೇಲೆ ಇದರ ರಿಪರ್‌ಕಷನ್ ಏನು ಎಂಬುದನ್ನು ಏಕೆ ನೋಡಬಾರದು? ಅಲ್ಲಿಯವರೆಗೂ ಪರಭಾರೆ ಮಾಡಕೂಡದು ಎಂದು ಮಾಡಿ.

ಇನ್ನು ಸ್ವಂತ ಕಲ್ಟಿವೇಷನ್‌ಗೆ ಬೇಕಾದರೆ ಜಮೀನು ಬಿಡಿಸಿಕೊಳ್ಳಬಹುದು ಎಂದು ಇದೆ. 31 (*C*) ನಲ್ಲಿ

> " Landlord's right to determine protected tenancy.—(1) Notwithstanding anything contained in section 15, a landlord may terminate the tenancy of a protected tenant by giving him one year's notice in writing, stating therein the reasons for such termination, if the landlord *bona fide* requires the land for any of the following purposes, namely :—
>
> (*a*) for cultivating personally, or
>
> (*b*) for any non-agricultural use for his own purpose

ಎಂದು ಇದೆ. 'For his own purpose' ಅಂದಾಗ ಒಂದು ವೇಳೆ ಅವನು ಇನ್ನೂ ಕೆಲವರನ್ನು ಸೇರಿಸಿಕೊಂಡು ಒಂದು ಜಾಯಿಂಟ್ ಸ್ಟಾಕ್ ಕಂಪೆನಿ ಮಾಡಿ ಅಲ್ಲಿ ಒಂದು ಫ್ಯಾಕ್ಟರಿ ಹಾಕಬೇಕೆಂದರೆ ಜಗಳ ತರುವುದಕ್ಕೇ ಸ್ವಾಮಿ ಇದನ್ನು ಹಾಕಿರುವುದು? 'For his own purpose' ಎಂದಿದೆ. This is not for his own purpose, Sir, ಎಂದು ಅನ್ನುವುದಕ್ಕೇ?

This is for a joint purpose. It is not for his own purpose. It means that and nothing other than that.

ಆಮೇಲೆ ಇನ್ನೊಂದು ಏನೆಂದರೆ ಸ್ವಂತವಾಗಿ ಕಲ್ಟಿವೇಟ್ ಮಾಡುತ್ತೇನೆ ಅಂತಲೋ ಅಥವಾ ನಾನ್ ಅಗ್ರಿಕಲ್ಚರಲ್ ಪರ್ಪಸಸ್‌ಗೆ ಅಂತಲೋ ಜಮೀನು ಬಿಡಿಸಿಕೊಂಡು ಫ್ಯಾಕ್ಟರಿ ಕಟ್ಟುವುದಕ್ಕೋ ಅಥವಾ ಇನ್ನಾವ ಉಪಯೋಗಕ್ಕೋ ಒಂದು ಫೌಂಡೇಷನ್ ಹಾಕಿರುತ್ತಾನೆ. ಕಾರಣಾಂತರದಿಂದ ಕೆಲಸ ಪೂರೈಸುವುದಿಲ್ಲ. ಆಗ, ಒಂದು ವರ್ಷದಲ್ಲಿ ಪೂರೈಸಿಲ್ಲ, ಆದ್ದರಿಂದ ವಾಪಸು ಕೊಡಿ, ಇಲ್ಲಿ ಆ ಅರ್ಥ ಇದೆ ಎಂದು ಷುರುಮಾಡಿದರೆ ಹೇಗೆ? ಸ್ವಂತ ಉಪಯೋಗಕ್ಕೆ ಬೇಕು ಎಂದು ಹೇಳಿ ನಾಲ್ಕು ಕಲ್ಲು, ಮಣ್ಣು ತಂದುಹಾಕಿ ಅಲ್ಪಸ್ವಲ್ಪ ಫೌಂಡೇಷನ್ ಹಾಕಿ ಕೈ ಬಿಟ್ಟರೆ, is the purpose completed? ಆಗ ಇದರ ಪರಿಸ್ಥಿತಿ ಏನು? ಇದು ಏಕೆ ಹೇಳುತ್ತೇನೆ ಎಂದರೆ:

This is an imperfect kind of writing where far-reaching changes are to be effected. They have not thought of all aspects of this question. They have not considered these things seriously.

ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋದ ಮಾತ್ರಕ್ಕೇ ಇಂಪ್ರೂವ್ ಆಗುತ್ತದೆ ಎಂದು ಅಲ್ಲ. ಫಂಡಮೆಂಟಲ್ ರೈಟ್ಸ್‌ಗೆ affect ಆಗುತ್ತಾ ಇರುವಾಗ, are you going to allow this to be passed? Are you going to allow the fundamental rights to be altered by putting a word here or a word there. What I am attacking is the principle and the policy. ಇವೊತ್ತು ನನ್ನದೇನೂ ಅಭ್ಯಂತರ ಇಲ್ಲ; ಸೋಷಿಯಲ್ ಲೆಜಿಸ್ಲೇಷನ್ ಆಗಬೇಕು. Ultimately social legislation is going to take place in India.

ಶ್ರೀ ಪಟ್ಟಾಭಿರಾಮನ್‌ರವರು ಹೇಳುತ್ತಾರೆ, ರೆವಲ್ಯೂಷನರಿ ಚೇಂಜ್ ಆಗಬೇಕು ಎಂದು. ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡೋಣ. ಅಂಥದನ್ನು ತರುವುದಕ್ಕೆ ಒತ್ತಾಯ ಮಾಡೋಣ. ಅದಕ್ಕೂ ಹೆಚ್ಚು ಮಿತಿಮೀರಿ ಹೋಗುವುದಾದರೆ ಅದು ಕ್ರಾಂತಿ ಆಗುವುದಿಲ್ಲ. ಇದರಲ್ಲಿ ಯಾರನ್ನು hired labour ಎಂದು ಹೇಳುತ್ತೀರೋ, ಅಗ್ರಿಕಲ್ಚರಲ್ ಲೇಬರ್ ಎಂದು ಹೇಳುತ್ತೀರೋ ಅವರು ಬಹಳ ಜನ ಇದ್ದಾರೆ. ಅವರು ಎಲ್ಲರೂ ಟೆನೆಂಟುಗಳ ಕೈಕೆಳಗೆ ಇದ್ದಾರೆ. ಅವರು middlemen ಆಗಿದ್ದಾರೆ. ಅವರನ್ನು avoid ಮಾಡಬೇಕಾಗಿದ್ದರೆ, ಇವೊತ್ತು ಅಂಥವರು ಎಷ್ಟು ಜನ ಇದ್ದಾರೆ, ಎಷ್ಟು ಜನಕ್ಕೆ affect ಆಗುತ್ತದೆ ಎಂಬ ಯಾವುದಾದರೂ ಲೆಕ್ಕ ತೆಗೆದು ಕೊಂಡಿದ್ದೀರಾ? ಇಲ್ಲ.

> " 10 (3) 1 (A) : (*a*) ***Provided that where the tenancy is for a specified period agreed upon between the landlord and the tenant under a lease deed, the landlord shall not be entitled to terminate the tenancy under this sub-section before the expiry of such period ; "

ಇದರಲ್ಲಿ ಏನಾಗುತ್ತದೆ ಎಂದರೆ, ಒಂದು ಪೀರಿಯಡ್ ಫಿಕ್ಸ್ ಮಾಡಿ ಅದರೊಳಗೆ ಬಿಡಿಸುವುದಕ್ಕೆ ಅವಕಾಶವಿಲ್ಲ ಎಂದು ನಾವೇನಾದರೂ ಹೇಳಿದರೆ, ಬೋನಾಫೈಡಿ ಪರ್ಪಸ್‌ಗೆ ಬೇಕಾಗಿದ್ದಲ್ಲಿ ಆ ಅವಧಿ ಮುಗಿದ ಮೇಲೆ ಬಿಡಿಸಿಕೊಳ್ಳಬಹುದು, ಬೋನಾಫೈಡಿ ಅಂದರೆ ಒಬ್ಬ ಮೈನರ್ ಮೆಜಾರಿಟಿಗೆ ಬಂದರೆ ಅಂಥ ಸಂದರ್ಭದಲ್ಲಿ ವಾಪಸು ತೆಗೆದುಕೊಳ್ಳುವ ಹಕ್ಕು ಕೊಟ್ಟಿದ್ದೇವೆ ಎಂದು ಹೇಳತ್ತೀರಿ. ಆದರೆ ಇಲ್ಲಿ ಏನಾಗಿದೆ?

12 NOON

Sri Kadidal MANJAPPA.—Shall I ask my learned friend to give this

(Sri KADIDAL MANJAPPA.)

information ? Is, under the ordinary law, the land-lord who leases the land for a definite period, able to evict the tenant ?

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೇ ನಾನು ಹೇಳುವುದು. ನೀವು ಅನುಕೂಲ ಮಾಡಿದ್ದೇವೆಂದು ಹೇಳಿದಿರಿ, ಸಾಮಾನ್ಯವಾಗಿರುವ ಲಾ ಪ್ರಕಾರ ಹಕ್ಕು ಕೊಡುವುದಕ್ಕೆ ಅವಕಾಶವಿಲ್ಲದಿರುವಾಗ ಮಹಾ ಉಪಕಾರ ನೀವು ಮಾಡಿರುವುದೇನು ? ಆರ್ಡಿನೆರಿ ಲಾ ಪ್ರಕಾರ, ಕಾಂಟ್ರಾಕ್ ಆಕ್ಟ್‌ನಂತೆ ಏನು ಹಕ್ಕಿದೆಯೋ ಅದನ್ನು, ದತ್ತವಾದ ಹಕ್ಕನ್ನು ಕಿತ್ತು ಕತ್ತರಿ ಪ್ರಯೋಗಮಾಡಿ ಹೊಸ ಹಕ್ಕನ್ನು ಕೊಟ್ಟಿದ್ದೇವೆಂದು ಏಕೆ ಹೇಳುವುದು ? ಇದು ಬೆನಿಫಿಟ್ ಅಲ್ಲ. ಯಾವ ವಿಧದಲ್ಲೂ ಅನುಕೂಲವಾಗುವುದಿಲ್ಲ.

Mr. SPEAKER.—May I bring to the notice of the Hon'ble Member that he has taken two days ?

Sri A. BHEEMAPPA NAIK.—No, Sir; I took only three-fourths of an hour the other day and even to-day it was about 10-30 when I was asked to speak. I am seriously feeling that there are so many other things which I will have to point out before closing my speech.

Mr. SPEAKER.—Please be brief.

(1) in sub-section (1), for the words, brackets and figure " shall be given in the manner provided in sub-section (2) the first option of purchasing the site at a value determined ", the words " shall be given the first option of purchasing the site at the price agreed upon in writing between him and the landlord or in the absence of any such agreement at such price as may be determined " shall be substituted ;

(2) in sub-section (2), for the words " notice in writing to the tenant requiring him to state within three months ", the words " notice in writing to the tenant specifying the price at which he is willing to sell the site and requiring the tenant to state within one month " shall be substituted, and after the worde " purchase the site " the words " at such price " shall be added ;

(3) for sub-section (3), the following sub-section shall be substituted, namely :—

" (3) If within the period of one month so specified ;

(*a*) the tenant intimates in writing that he is willing to purchase the site at such price, the landlord shall transfer the site on payment of the said price ;

(*b*) the tenant intimates in writing that he is willing to purchase the site but is not willing to pay the price demanded by the landlord for such site, then unless the tenant and landlord agree upon any other price, the tenant may, within fifteen days after the said period of one month, make an application to the Assistant Commissioner for determination of the market value of the site. On receipt of such application the Assistant Commissioner shall, after giving the partice an opportunity of being heard, determine the market value of the site. The Assistant Commissioner may, by an order in writing, require the tenant to doposit the market value of such site within three months from the date of such order. On the deposit of such amount, the site shall be deemed to have been transferred to the tenant and the amount deposited shall be paid to the landlord. The Assistant Commissioner shall, on payment of the prescribed fee, grant a certificate in the prescribed form to such tenant specifying therein, the site so transferred and the name of such tenant and such certificate on registration shall be conclusive evidence of such transfer."

ಸ್ವಾಮಿ ಒಬ್ಬ ಮನುಷ್ಯ ಕೊಳ್ಳುವುದಕ್ಕೆ ಅಧಿಕಾರ ಕೊಟ್ಟಮೇಲೆ ಕೊಳ್ಳುವವನೂ, ಕೊಡುವವನೂ ಪರಸ್ಪರ ಒಪ್ಪಿಕೊಳ್ಳಬೇಕು. ಕೊಳ್ಳುವವರು ಕಡಮೆ ಬೆಲೆಗೆ ಕೇಳುವುದೂ ಮಾರುವವರು ಜಾಸ್ತಿಬೆಲೆ ಹೇಳುವುದೂ ಸಾಮಾನ್ಯವಾಗಿ ವಾಡಿಕೆ. ಆಗ ಅಸಿಸ್ಟೆಂಟ್ ಕಮಿಷನರು ಬೆಲೆ ನಿಗದಿಮಾಡಬೇಕಾಗುತ್ತದೆ. ಅವರು ನಿರ್ಧರ ಮಾಡುವುದರೊಳಗೆ 2-3 ವರ್ಷಗಳು ಕಳೆದು ಹೋಗುತ್ತವೆ. ಅಕ್ವಿಜಿಷನ್ ಆಕ್ಟ್ ಪ್ರಕಾರ 17 (a) ಸೆಕ್ಷನ್ನಂತೆ ಬೆಲೆ ನಿಗದಿಮಾಡಿ ಎಂದು ಹೇಳಿದಾಗಲೇ ವರ್ಷಗಟ್ಟಲೆಯಾಗುವುದು ಕಂಡು ಬರುತ್ತಿದೆ. ಈ ದಿವಸ ಆ ಅಧಿಕಾರಿಗಳಿಗಿರುವ ಕೆಲಸದ ಜೊತೆಗೆ ಈ ಕೆಲಸವನ್ನೂ ಕೊಟ್ಟರೆ ಹೇಗೆ ತಾನೆ ಜಾಗ್ರತೆ

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು 1950-51ನೇ ಇಸವಿಯ ವರದಿಯನ್ನು ಪರಿಶೀಲನೆ ಮಾಡಿದ್ದಾರೆ. ಹೀಗೆಯೇ ಇವರು 1950-51, 1951-52, 1952-53, 1953-54 ಈ ನಾಲ್ಕು ವರ್ಷಗಳ ಅಕೌಂಟುಗಳನ್ನೂ ಕೂಡ ನೋಡಿ ಅವರ ವರದಿಯನ್ನು ಒಪ್ಪಿಸಬೇಕಾಗಿತ್ತು. ಈ ನಾಲ್ಕು ವರ್ಷಗಳ ಅಥವಾ ಐದು ವರ್ಷಗಳ ಕೆಳಗೆ ಆಗಿರತಕ್ಕ ನಡವಳಿಕೆಗಳನ್ನೆಲ್ಲಾ ತೆಗೆದುಕೊಂಡು ಅವರು ಈಗ ಒಂದು ವರ್ಷದ ವರದಿಯನ್ನು ಮಾತ್ರ ನೋಡಿ ನಮ್ಮ ಮುಂದಿಟ್ಟಿದ್ದಾರೆ. ಇದಾದ ನಂತರ ಪುನಃ ಇನ್ನೊಂದು ಸಮಿತಿ ರಚನೆ ಆಗಿ ಅವರು 1951-52ನೇ ಸಾಲಿನ ಲೆಕ್ಕಗಳನ್ನು ನೋಡಿ ಅವರ ವರದಿಯನ್ನು ಕೊಡುವ ಹೊತ್ತಿಗೆ 1956ನೇ ಇಸವಿ ಬರುತ್ತದೆ. ಅಲ್ಲಿಗೆ ಏನಾದಹಾಗಾಯಿತು ಎಂದರೆ ಹಿಂದಿನ ಮಂತ್ರಿಮಂಡಲದ ಕಾಲದಲ್ಲಿ ನಡೆದ ನಡವಳಿಕೆಗಳನ್ನು ಎರಡು ವರ್ಷಗಳದನ್ನು ಮಾತ್ರ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕುಳಿತುಕೊಂಡು ಒಂದೊಂದು ವರ್ಷದ ಲೆಕ್ಕ ವರದಿ ಮಾಡುವುದಕ್ಕೆ ಸಾಧ್ಯವಾದಂತಾಯಿತು. 1951 ರಿಂದ ಹಿಡಿದು 1957ರ ವರೆಗೂ ಆಗತಕ್ಕ ಲೆಕ್ಕಗಳನ್ನು ಮುಂದಿನ ಮಂತ್ರಿಮಂಡಲದವರು ಒಂದು ಪಬ್ಲಿಕ್ ಅಕೌಂಟ್ಸ್ ಕಮಿಟಿ ನೇಮಕಮಾಡಿ ಆ ಲೆಕ್ಕಗಳನ್ನೆಲ್ಲಾ ಪರಿಶೀಲನೆ ಮಾಡಬೇಕಾಗಿ ಬರುತ್ತದೆ ಎಂದು ಕಾಣುತ್ತದೆ. ಆದ್ದರಿಂದ ಮುಂದೆ ರಚನೆಯಾಗತಕ್ಕ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ನಾಲ್ಕು ವರ್ಷಗಳ ಅಕೌಂಟ್ಸ್ ವಿಚಾರದಲ್ಲಿ ಮುಂದಿನ ವರ್ಷವಾದರೂ ಆ ಲೆಕ್ಕಗಳನ್ನೆಲ್ಲಾ ಪರಿಶೀಲನೆಮಾಡಿ ತಮ್ಮ ವರದಿಯನ್ನು ಈ ಅಸೆಂಬ್ಲಿಯ ಮುಂದೆ ಇಟ್ಟರೆ ಈ ಮಂತ್ರಿಮಂಡಲ ಸಮರ್ಪಕವಾಗಿ ಕೆಲಸ ಮಾಡುತ್ತಾ ಇದೆಯೇ ಇಲ್ಲವೇ ಎಂಬ ವಿಚಾರವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ ಯಾರಾರು ಅಧಿಕಾರಿಗಳಿದ್ದರೋ ಅವರು ರಿಟೈರ್ ಆಗಿರುತ್ತಾರೆ. ಅವರನ್ನು ಈ ದಿನ ವಿಚಾರಣೆ ಮಾಡುವ ಹಾಗಿಲ್ಲ, ಯಾರು ಜವಾಬ್ದಾರರು ಎಂಬುದನ್ನು ಕಂಡುಹಿಡಿಯುವ ಹಾಗಿಲ್ಲ. ಹೀಗೆ ಹಿಂದೆ ಅನೇಕರು ಏನೇನು ತಪ್ಪು ಮಾಡಿದ್ದರೋ ಅದನ್ನು ಆಗಲೇ ಕಂಡುಹಿಡಿ

ದಿದ್ದ ಪಕ್ಷದಲ್ಲಿ ಅವರನ್ನು ಶಿಕ್ಷೆಗೆ ಗುರಿಪಡಿಸಬಹುದಾಗಿತ್ತು. ಈ ವರದಿಯಲ್ಲಿ ಪಬ್ಲಿಕ್ ಆಕೌಂಟ್ಸ್ ಕಮಿಟಿಯವರು ಒಂದು ವರ್ಷದ ಅಕೌಂಟನ್ನು ಪರಿಶೀಲನೆ ಮಾಡಿ ವಿಷಯಗಳನ್ನು ಗಳಿಸಿರುತ್ತಾರೆ. ಇದರಂತೆ ಮುಂದೆ ಆಗತಕ್ಕ ನಡವಳಿಕೆಗಳಲ್ಲಿ ಏನೇನು ಬದಲಾವಣೆ ಮಾಡಬೇಕು ಎಂಬುದನ್ನು ಗಮನಕ್ಕೆ ಸರ್ಕಾರದವರು ತೆಗೆದುಕೊಳ್ಳಬೇಕೆಂಬುದೇ ಈ ವರದಿಯ ಮುಖ್ಯ ಅಭಿಪ್ರಾಯ.

ಈಗ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳೋಣ. ಒಬ್ಬ ಖಾಸಗೀ ಮನುಷ್ಯ, ಪ್ರೈವೇಟ್ ಇಂಡಸ್ಟ್ರೀ ನಡೆಸತಕ್ಕವನು ಅವನ ಬಂಡವಾಳ 10 ಲಕ್ಷ ರೂಪಾಯಿ ಆಗಿದ್ದರೆ ಅದೇ ಸರ್ಕಾರೀ ಇಂಡಸ್ಟ್ರಿನಲ್ಲಿ ಸುಮಾರು 80 ಲಕ್ಷ, 90 ಲಕ್ಷ ರೂಪಾಯಿ ಬಂಡವಾಳ ಇರುತ್ತದೆ. ಖಾಸಗೀ ವರ್ತಕ ತಾನು ಹಾಕಿದ ಬಂಡವಾಳದಲ್ಲಿ ಒಂದಕ್ಕೆ 3 ರಷ್ಟು 4 ರಷ್ಟು ಲಾಭ ಸಂಪಾದನೆ ಮಾಡುತ್ತಾನೆ. ಒಂದು ವರ್ಷದಲ್ಲಿ ಅವನ ವೆಚ್ಚವನ್ನೂ ಆದಾಯವನ್ನೂ ನೋಡಿದರೆ ಅವನ ಬಂಡವಾಳ 10 ಲಕ್ಷ ರೂಪಾಯಿಗಳಲ್ಲಿ 40 ಲಕ್ಷ ರೂಪಾಯಿಗಳಷ್ಟು ವ್ಯಾಪಾರ ನಡೆಸಿರುತ್ತಾನೆ. ನಾನು ನಾಲ್ಕೈದು ಡಿಪಾರ್ಟ್‌ಮೆಂಟ್‌ಗಳಲ್ಲಿ ವಿಚಾರಮಾಡಿ ತಿಳಿದುಕೊಂಡಿದ್ದೇನೆ. ಕಚ್ಚಾ ಸಾಮಾನು ತೆಗೆದುಕೊಂಡದ್ದು, ತಯಾರಾದ ವಸ್ತುವನ್ನು ಮಾರಾಟ ಮಾಡಿದ್ದು ಎಲ್ಲವನ್ನೂ ಸೇರಿಸಿ ಬಂಡವಾಳ ಇಷ್ಟಿರಬೇಕು ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿಯೂ ಈ ಕೈಗಾರಿಕಾ ಸಂಸ್ಥೆಗಳಲ್ಲಿ ಖಾಸಗೀ ಸಂಸ್ಥೆಯವರು ಯಾವ ರೀತಿ ವ್ಯಾಪಾರೋದ್ಯಮವನ್ನು ಇಟ್ಟುಕೊಂಡಿರುತ್ತಾರೋ ಅದೇರೀತಿ ಒಂದು ಬಂಡವಾಳವನ್ನು ನಿಗದಿಮಾಡಿ ಆ ಬಂಡವಾಳದಲ್ಲೇ ಅವರು ವ್ಯಾಪಾರ ನಡೆಸಿ ಪ್ರತಿ ವರ್ಷವೂ ಲಾಭ ಹಂಚಿಕೊಳ್ಳತಕ್ಕ ಮಾರ್ಗವನ್ನು ಈಗಲಾದರೂ ಕಂಡುಹಿಡಿದು ಕೆಲಸಮಾಡಿದಪಕ್ಷದಲ್ಲಿ ಈ ಕೈಗಾರಿಕಾ ಸಂಸ್ಥೆಗಳನ್ನು ಸರ್ಕಾರದವರ ಹತೋಟಿಯಲ್ಲಿ ಇಟ್ಟುಕೊಳ್ಳಬಹುದೇ ವಿನಾ ಇಲ್ಲದಿದ್ದರೆ ಖಂಡಿತವಾಗಿಯೂ ಅವರ ಹತೋಟಿಯಲ್ಲಿಟ್ಟುಕೊಳ್ಳತಕ್ಕದ್ದಲ್ಲ. ಆ ರೀತಿ ಪ್ರತಿಯೊಂದು ಕೈಗಾರಿಕಾ ಸಂಸ್ಥೆಯ ಬಂಡವಾಳವನ್ನೂ ಸಹ ನಿಗದಿಮಾಡಿ ಅಲ್ಲಿರತಕ್ಕ ಲೋಪದೋಷಗಳನ್ನು ತಪ್ಪಿಸಬಹುದೇ ವಿನಾ ಪ್ರತಿಯೊಂದು ವರ್ಷವೂ ಪಬ್ಲಿಕ್ ಅಕೌಂಟ್ಸ್ ಸಮಿತಿ ಕುಳಿತುಕೊಂಡು 5 ಅಥವಾ 6 ವರ್ಷದ ನಂತರ ಲೆಕ್ಕಗಳನ್ನು ತನಿಖೆಮಾಡಿ ವರದಿ ಕೊಡುವುದು ಖಂಡಿತ ಸರಿಯಾದ್ದಲ್ಲ. ಈಗ ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಯಾವ ಒಂದು ತೀರ್ಮಾನವನ್ನು ಮಾಡಿದ್ದಾರೋ ಅದನ್ನು ಜಾರಿಗೆ ತರಬೇಕಾದರೆ, ಆ ಲೋಪದೋಷಗಳನ್ನು ಸರಿಪಡಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ನಾನು ಈಗಾಗಲೇ ಕೊಟ್ಟ ಸಲಹೆಯನ್ನು ಪರಿಶೀಲನೆ ಮಾಡಿ ಈ ಲೋಪದೋಷಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಅದೂ ಅಲ್ಲದೆ ಹಿಂದೆ ಇದ್ದಂಥ ಅಧಿಕಾರಿಗಳು ಕೆಲವರು ಈಗಲೂ ಇದ್ದಾರೆ. ಅವರಾದರೂ ಕೂಡ ಮುಂದೆ ಏನೇನು ಬದಲಾವಣೆ ಆಗಬೇಕು ಎಂಬ ಬಗ್ಗೆ ಡೈರೆಕ್ಷನ್ ಕೊಟ್ಟು ಸರಿಪಡಿಸುವಂತೆ ಮಾಡಬಹುದು ಎಂದು ಹೇಳುತ್ತೇನೆ. ಹಿಂದೆ ನಡೆದಂಥ ಲೋಪದೋಷಗಳನ್ನು ತೆಗೆದುಕೊಂಡು ಈಗ ವಿನಾಕಾರಣ ಗೊತ್ತಿಲ್ಲದೇ ಇರುವುದನ್ನು ಹೇಳುವುದಕ್ಕಿಂತಲೂ ತತ್ಕಾಲದಲ್ಲಿ ನಡೆದಿರತಕ್ಕ ನಡವಳಿಕೆಗಳನ್ನೆಲ್ಲಾ ಪರಿಶೀಲನೆಮಾಡಿ, ಈ ಕಮಿಟಿಯವರು ತಮ್ಮ ವರದಿಯಲ್ಲಿ ಸೂಚನೆಮಾಡಿದ್ದೇ ಆದರೆ ಮಂತ್ರಿಮಂಡಲ ಯಾವ ರೀತಿ ಕೆಲಸಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಆ ದೃಷ್ಟಿಯಿಂದ ಈ ಸಮಿತಿಯವರಿಗೆ ಆದಷ್ಟು ಬೇಗ ಸರ್ಕಾರದವರು ಲೆಕ್ಕಗಳನ್ನು ಒದಗಿಸಲು ಅನುಕೂಲ ಮಾಡಿಕೊಟ್ಟರೆ ಒಳ್ಳೆಯದೆಂದು ಕಾಣುತ್ತದೆ.

Sri P. R. RAMAIYA (Basavanagudi).—Sir, I wish to make a few remarks in connection with the report of the Public Accounts Committee. At the outset I should thank the Members of the Committee for the careful scrutiny they have made of the Public Accounts. They have pointed out irregularities that are very grave. They have also made suggestions as to how these irregularities could be avoided. But Sir, the greatest sinner seems to be the Public Works Department and next comes Electrical Department. The Committee have pointed out several irregularities in these Departments. I do not know if these Departments would rectify these, because we have seen Sir, how on the floor of the Assembly and the Council the work of the Public Works Department has been criticised very often and with good reason. But we find no improvement at all in respect of the irregularities that have been pointed out in respect of the works that have been undertaken by this Department. Sir, on page 8 reference has been made to the irregularities in connection with some expenditure relating to the expansion of the Soap Factory and starting of a Fertiliser Factory. Sir, details have been given in this report about the extraordinary way in which amounts were spent with regard to the starting of Fertiliser Project. I do not want to take much of the time of the House in going into the details. But, Sir, it is very amazing how such a thing could take place without even considering the need. Even this expenditure could have been avoided if all aspects of the case had been fully examined. The Chairman of the Committee has observed that the scheme was thought of without making available the required funds and power supply, and that they ought not to have envisaged such a scheme without prior thought.

Sir, now I come to Tunga Project. The Committee says :

(SRI P. R. RAMAIYA.)

> "Ten years have elapsed since Tunga Project was started and no estimate has been submitted for sanction though the work is nearing completion."

THE ACCOUNTS OF COMMERCIAL CONCERNS.

Sir, this is a very important matter. The Committee has rendered very great service by pointing out the defects in this department. Supposing, these concerns were managed by Limited Companies, what would have been the fate of the Managing Directors? Sir, while Government has been managing the industries and commercial concerns, it should be working with a view to promoting the working of the industry on a profitable basis and set an example for private enterprises as to how to run these concerns in a profitable manner. The way in which they are proceeding is very astonishing. It is observed here:

> "The Committee examined the accounts of each concern as furnished in the Report. It has been specifically brought to the notice of the Committee that (1) the system of stock-taking is defective, (2) that there is no proper system of cost accounting and (3) that the terms of credit sales are not defined and that there are large outstandings."

Proceeding further the Committee observes:

> "There is at present no officer who is well qualified and specialised in cost accounting."

Sir, this is a very important matter; if these commercial concerns are to be managed properly, this cost accounting is very important.

Another point which the Committee has brought to the notice of this House is: "It should also be seen that the industrial concerns do not accumulate stock and that production is strictly limited to the demand." In the last paragraph of the summary the Committee says:

> "In the course of review of balances of debt heads, the Committee examined a few Departmental Heads and it was found that there were large differences between the Accountant General's books and departmental accounts. General explanations offered were not convincing and the Committee gained the impression that the position of the Departmental Accounts under Loans and Advances is thoroughly unsatisfactory and that an appreciable portion of the balances may become irrecoverable if timely action for reconciliation of balances is not taken. The employment of necessary staff for proper maintenance of accounts may be considered and the cost of such staff will more than compensate the losses that would otherwise occur by non-recovery of capital and interest."

Sir, without taking much time of the House, I may state that the members of this House have to carefully study the report with a view to suggest to Government that such irregularities are avoided in future. I wish the Government do implement all the recommendations made by the Committee with regard to each officer. With these few remarks, I welcome the Report of the Public Accounts Committee.

***Sri A. BHEEMAPPA NAIK** (Molakalmuru).—Sir, I want to say a few words with regard to a point raised by some Hon'ble Members. It was observed that some of these projects were taken up without preparing the estimates. There will be certain circumstances under which projects will have to be taken up without preparing final estimates. I refer to Tunga Anicut. The Government of Madras, without consulting the Government of Mysore, raised a loan for the Project. The conditions are that, if one Government were to take up a project and after that, another Government wanted to take up a project under the same river, the former Government will have to give its consent. Therefore, at that time it was felt necessary to agree to start this project immediately and estimates prepared later. I think, estimates must have been prepared later; I do not know what the latest position is. In all cases, if it is taken as a rule that a work should not be taken up without the preparation of the estimate, the projects like Tuppadahalli and Sangenahalli, where immediate action was necessary to prevent further loss, could not have been taken up. Under such circumstances, I believe, it should not be an inexorable rule to say that no work should be taken up before actually the estimate is prepared. Circumstances will have to be taken into consideration.

---

* Indicates that the speech has not been revised by the Member concerned.

Sri T. MARIAPPA (Mysore City-North).—May I add a few words to what my Hon'ble friend has already said in this behalf? It is true that in the case of public works, there are instances of irregularities. Unfortunately, we notice such irregularities not only in Mysore but in other parts of India as well. Hon'ble Members of this House must have read with interest, similar irregularities in respect of river projects. Essentially, if the reasons for execution of the projects and particularly, urgent projects are kept in mind, perhaps you will find some reason for not preparing detailed estimates. Sir, may I submit to this Hon'ble House that no work is started without an estimate? Rough estimates are always drawn up and administrative sanction is always taken. Therefore, let it not be said that no estimate was prepared; details might not have been prepared in certain cases. What has happened in the case of Thungabhadra and other projects is, that the Government of Mysore and Government of Madras did not come to an agreement readily. Hon'ble Member Sri L. Siddappa was in charge of the Public Works. Then, in Mysore there were two Chief Engineers. It was pressed that the claims of Mysore should not be lost by mere time default. When Government of Madras were taking steps to build Thungabhadra, when they had already taken up certain irrigation works like Krishna-Pennar, Vedavathi basin, Thungabhadra basin, it was up to Mysore Government also to take necessary steps, because we were also entitled to certain portion of water. We did not want the efflux of time to be in favour of Madras. Therefore, the Chief Engineers of Mysore and the Chief Engineer of Madras met and tentatively agreed for sharing of water both of Tunga and Bhadra as also the tributaries of Cauvery. We have not yet agreed for the sharing of water of Kapini. The Government of Madras have agreed not to put any anicut for irrigation; it is only for power. Therefore, these agreements have to be finalised. With a view to see that we also come up simultaneously with Madras, we had to take up this work. After a lapse of a year or two, detailed estimates have been drawn up.

2-30 P. M.

ಶ್ರೀ ಎಸ್. ಗೋಪಾಲಗೌಡ (ಸಾಗರ–ಹೊಸನಗರ).—ಸ್ವಾಮಿ, ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಿರತಕ್ಕಂಥ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯ ಮೇಲೆ ಈಗಾಗಲೆ ಮಾನ್ಯ ಶ್ರೀನಿವಾಸಯ್ಯಂಗಾರ್‌ರವರು ಮತ್ತು ಇತರರು ಮಾತನಾಡಿ ಈ ವರದಿಯಲ್ಲಿ ಎತ್ತಿ ತೋರಿಸಿರತಕ್ಕಂಥ ಮುಖ್ಯವಾದ ಲೋಪದೋಷಗಳನ್ನು ಇಲ್ಲಿ ಪುನಃ ಪ್ರಸ್ತಾಪಿಸಿ ಈ ಸಭೆಯ ಗಮನಕ್ಕೆ ತಂದಿದ್ದಾರೆ.

. ಈ ಲೆಕ್ಕದ ವರದಿಯಲ್ಲಿ 1950-51ನೆಯ ಸಾಲಿನ ಅಪ್ರೋಪ್ರಿಯೇಷನ್ ಅಕೌಂಟ್ಸ್, 1952ರ ಆಡಿಟ್ ವರದಿ, 1950-51ನೆಯ ಸಾಲಿನ Finance Accounts ಮತ್ತು 1951ರ ಆಡಿಟ್ ವರದಿ ನಮೂದಾಗಿದೆ. ಈಗಾಗಲೇ ಶ್ರೀ ಶ್ರೀನಿವಾಸಯ್ಯಂಗಾರ್‌ರು ಈ ವಿಚಾರದಲ್ಲಿ ಕೆಲವು ಮುಖ್ಯವಾದ ವಿಷಯಗಳನ್ನು ಎಂದರೆ Fertiliser Factory ಯೊಂದನ್ನು ಸ್ಥಾಪನೆ ಮಾಡುತ್ತೇವೆಂದು ಅದಕ್ಕಾಗಿ ಸರ್ಕಾರದವರು ವೃಥಾ 2.2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು ಎಂದೂ, ಹಾಗೆಯೇ ತೊಗರಿಬೇಳೆಯ ಒಂದು ಪ್ರಕರಣದಲ್ಲಿ ಇದರಿಂದ 2 ಲಕ್ಷ 36 ಸಾವಿರ ಚಿಲ್ಲರೆಯಷ್ಟು ರೂಪಾಯಿಗಳು ನಷ್ಟವಾಗಿದೆಯೆಂದೂ ತಿಳಿಸಿದ್ದಾರೆ. ಭದ್ರಾ ಪ್ರಾಜೆಕ್ಟ್ ಎಸ್ಟಿಮೇಟ್, silk industry ಬಗ್ಗೆ, ಭದ್ರಾವತಿಯಲ್ಲಿ finance ಬಗ್ಗೆ, ಈ ವರದಿಯಲ್ಲಿ ಸಮಿತಿಯವರು ಯಾವ ತೀರ್ಮಾನಗಳನ್ನೂ ಮತ್ತು ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿರುತ್ತಾರೋ ಅವೆಲ್ಲವೂ ಈಗ ಸಭೆಯ ಗಮನಕ್ಕೆ ಬಂದಿವೆ. ಸಮಿತಿಯವರು ಮೈಸೂರು ಸಂಸ್ಥಾನದ ಸರ್ಕಾರ ತನ್ನ ಹಣಕಾಸಿನ ವಿಚಾರದಲ್ಲಿ ಇಟ್ಟಿರತಕ್ಕಂಥ ಲೆಕ್ಕಪತ್ರಗಳನ್ನು ತನಿಖೆಮಾಡಿ, ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಷಿ ಕೇಳಿ, ಅನಂತರ ಈ ಸಭೆಯ ಗಮನಕ್ಕೆ ಈ ವರದಿಯನ್ನು ಪರಿಶೀಲನೆಗೆ ಇಟ್ಟಿರುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು ಮಾತನಾಡುತ್ತಾ, ಇದು ಹಳೆಯ ಲೆಕ್ಕ, ಇದರ ಮೇಲೆ ನಾವು ಚರ್ಚೆಮಾಡಿ ಪ್ರಯೋಜನವಾದರೂ ಏನಿದೆ, ಈಗ ಸದ್ಯಕ್ಕೆ ನಾವು ಖರ್ಚುಮಾಡುವ ಹಣದಮೇಲೆ ಸರಿಯಾದ accounting ಕ್ರಮ ಇಟ್ಟುಕೊಳ್ಳುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಹಾಗೆ ಸರ್ಕಾರಕ್ಕೆ ಸಲಹೆಮಾಡಬೇಕು, ವರದಿಯಲ್ಲಿ ತಿಳಿಸಿರುವ ರೀತಿ ಕಾರ್ಯಕ್ರಮವನ್ನು ತಕ್ಷಣ ಕೈಗೊಳ್ಳಭೇಕೆಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಚರ್ಚಿಸಿ ಪ್ರಯೋಜನವಿಲ್ಲವೆಂದು ನಾನು ಹೇಳಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಇದನ್ನು ಚರ್ಚೆ ಮಾಡಿ ಏನು ಪ್ರಯೋಜನವೆಂಬ ಅರ್ಥ ಬರುವ ರೀತಿಯಲ್ಲಿ ಅವರು ಮಾತನಾಡಿದರು.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಸರ್ಕಾರದವರು 3-4 ವರ್ಷಗಳಾದಮೇಲೆ ಈ ವರದಿಯನ್ನು ಸಭೆಯ ಮುಂದಿಟ್ಟರೆ ಏನು ಪ್ರಯೋಜನವೆಂದು ಅವರು ಹೇಳಿದರು.

ಶ್ರೀ ಎಸ್. ಗೋಪಾಲಗೌಡ.—ಅದು ಹೇಗಾದರೂ ಇರಲಿ; 3-4 ವರ್ಷಗಳ ಹಿಂದೆ ಖರ್ಚುಮಾಡಿದ ಹಣಕ್ಕೆ ಯಾರು ಜವಾಬ್ದಾರರು ಎಂಬ ವಾದವನ್ನು ಅವರು ಹೂಡಿದರು. ಆದರೆ ಸರ್ಕಾರ ಎನ್ನುವುದಕ್ಕೆ continuity ಇದೆ. ಇವೊತ್ತು ಐದು ವರ್ಷಗಳಿಗೊಂದು ಬಾರಿ ಮಂತ್ರಿಮಂಡಲ ಬದಲಾವಣೆಯಾದರೂ ಸಹ, ಸರ್ಕಾರ ಬಹಳ ಕಾಲದಿಂದ ನಡೆದುಕೊಂಡು ಬರತಕ್ಕ ಸಂಸ್ಥೆ. ಇದು ಸಂಸ್ಥಾನದಲ್ಲಿಯ ಜನತೆಗೆ ಖರ್ಚು ಮಾಡಿದ ಹಣದ ಪೂರ್ಣ ಜವಾಬ್ದಾರಿಯನ್ನು ತೋರಿಸಬೇಕು. ಇವೊತ್ತೂ ಸಹ ಆ ಹಣಕ್ಕೆ ಸರ್ಕಾರ ಪೂರ್ಣ ಜವಾಬ್ದಾರಿ ಹೊತ್ತಿದೆ ಮತ್ತು ಆ ಬಗ್ಗೆ ಲೆಕ್ಕ ಪತ್ರಗಳ ಪೂರ್ಣ ಜವಾಬ್ದಾರಿಯನ್ನು ಸಹ ಸರ್ಕಾರವೇ ಹೊರಬೇಕಾಗುತ್ತದೆ. ಮತ್ತೆ ಯಾರೂ ಇದನ್ನು ವಹಿಸಿಕೊಳ್ಳುವುದಕ್ಕಾಗುವುದಿಲ್ಲ. ಒಂದು ವೇಳೆ ಇದರ ಪೂರ್ಣ ಜವಾಬ್ದಾರಿ ಹೊತ್ತಿರುವ ವ್ಯಕ್ತಿಗಳು ತೀರಿಹೋಗಿದ್ದರೆ, ಅಂಥ ಸಂದರ್ಭಗಳಲ್ಲಿ ಮಾತ್ರ ಕಾರ್ಯಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಆಸ್ತಿ ಇದ್ದರೆ ಮುಟ್ಟುಗೋಲು ಹಾಕಿಕೊಳ್ಳಬಹುದು. ಇದರಲ್ಲಿ ಮುಖ್ಯವಾಗಿ, ಗ್ರಾಂಟು ಆಗಿರುವ ಹಣಕ್ಕಿಂತಲೂ ಅಧಿಕಪ್ರಮಾಣದಲ್ಲಿ ಇಲಾಖೆಯವರು ಖರ್ಚು ಮಾಡುತ್ತಿದ್ದಾರೆಂಬುದು ಒಂದು ಮುಖ್ಯ ವಿಷಯ ನಾವು ಇಂದು ಗಮನಿಸಬೇಕಾದುದು. ಇದು ಸರ್ವಥಾ ಸರಿಯಲ್ಲ. ಆಮೇಲೆ ಖರ್ಚುವೆಚ್ಚಗಳ ಲೆಕ್ಕದಲ್ಲಿ irregularities ಕಂಡುಬರುವ ಅಂಶಗಳನ್ನು ಈ ವರದಿಯಲ್ಲಿಯೂ ನಮೂದಿಸಿರುವುದಲ್ಲದೆ, ಮಾನ್ಯ ಸದಸ್ಯರೂ ಸಹ ಸಭೆಯ ಗಮನಕ್ಕೆ ತಂದಿದ್ದಾರೆ. ಇದು ತೀರ ಅಸಮರ್ಪಕವಾದುದು. ಸಪ್ಲಿಮೆಂಟರಿ ಗ್ರಾಂಟು ರೂಪದಲ್ಲಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಹಣವನ್ನು ಪಡೆಯುತ್ತಾರೆ; ಆದರೆ ವಸ್ತುತಃ ಅದಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಪೂರೈಸಿರುವುದಿಲ್ಲ. ಇಂಥ ಸಪ್ಲಿಮೆಂಟರಿ ಗ್ರಾಂಟುಗಳನ್ನು ಪಡೆಯುವ ಅವಶ್ಯಕತೆಯೇ ಇಲ್ಲ. ಇಂಥವು ಅನೇಕವು ಇಲ್ಲಿವೆ. ಕೆಲವು ದೃಷ್ಟಾಂತಗಳನ್ನು ಸಹ ತೋರಿಸುತ್ತಾರೆ.

ಆಮೇಲೆ ಸರ್ಕಾರದ ಕೆಲವು ಇಲಾಖೆಗಳಿಗೆ ಕೆಲಸಗಳಿಗಾಗಿ ಅನೇಕ ವರ್ಷಗಳವರೆಗೆ ಮಂಜೂರು ಕೇಳಿಕೊಂಡು ಅವುಗಳಿಗಾಗಿ ಒದಗಿಸಿರುವ ಹಣವನ್ನು ವಾಸ್ತವಿಕವಾಗಿ ಖರ್ಚುಮಾಡಿರುವುದಿಲ್ಲ. ಇದಕ್ಕೆ ಆ ಅಧಿಕಾರಿಗಳು ನಾನಾ ಕಾರಣಗಳನ್ನು—ಆ ಕಾರಣಗಳನ್ನು ಹೇಳಲು ಇಷ್ಟಪಡುವುದಿಲ್ಲ-ಹೇಳಿಬಿಡುತ್ತಾರೆ. ಹೀಗಾಗಿ ಹತ್ತಾರುವರ್ಷಗಳಿಂದ ಗ್ರಾಂಟಾದ ಮೊಬಲಗು ಖರ್ಚಾಗದೆ,ಕೆಲಸವಾಗದೆ ನಿಂತಿರುವುದೂ, ಆ ಅಧಿಕಾರಿ ವರ್ಗವಾಗಿ ಬೇರೆ ಅಧಿಕಾರಿ ಆ ಕೆಲಸ ನಿರ್ವಹಿಸಲು ಬಂದಿರುವುದೂ ಕಂಡುಬಂದಿದೆ. ಇಷ್ಟೇ ಅಲ್ಲ; ಈಗಿನ ಮಂತ್ರಿಮಂಡಲವನ್ನು, ಹಿಂದಿನ ಮಂತ್ರಿಮಂಡಲ ನಿರ್ವಹಿಸಿದ ಕೆಲಸದ ವಿಚಾರವನ್ನು ಕೇಳಿದರೂ ಸಹ, ಅದರ ಪೂರ್ಣ ಜವಾಬ್ದಾರಿಯನು ಹಿಂದಿನ ಸರ್ಕಾರದ ಮೇಲೆ ಹೊರಿಸಿ ಜಾರಿಕೊಳ್ಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗಲೂ ಹೇಳಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಅದಕ್ಕೆ ದೃಷ್ಟಾಂತಗಳನ್ನು ಹೇಳಿ.

ಶ್ರೀ ಎಸ್. ಗೋಪಾಲಗೌಡ.—ಹಲವಾರು ದೃಷ್ಟಾಂತಗಳನ್ನು ಹೇಳಬಹುದು. ಹಲವಾರು ಬಾಬುಗಳಲ್ಲಿ ಹೆಚ್ಚು ಹಣ ಖರ್ಚಾಗದೆ ಉಳಿದಿರುವುದನ್ನು ನಾವು ನೋಡಬಹುದು. ಏನೋ ಖರ್ಚಿನ ಬಾಬಿನಲ್ಲಿ ಶೇಕಡ 10-15ರಷ್ಟು ಗ್ರಾಂಟು ಮೊಬಲಗಿಗಿಂತ ಹೆಚ್ಚು ಆಗಿದ್ದರೆ ಅಷ್ಟೇನೂ ಆಕ್ಷೇಪಣೀಯವಾದುದಲ್ಲ. ಹಾಗಿಲ್ಲದೆ ಶೇಕಡ 50—70—100ರಷ್ಟು ಖರ್ಚು ಬಾಬು ಜಾಸ್ತಿಯಾಗಿದ್ದರೆ ಅಂಥ ಸಂದರ್ಭಗಳನ್ನು ಸುಮ್ಮನೆ ಬಿಡುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಆಗಿರುವುದಕ್ಕೆ ತಕ್ಕ ಕಾರಣಗಳನ್ನು ಕೇಳಲೇಬೇಕಾಗುತ್ತದೆ. ಈ ವಿಚಾರದಲ್ಲಿ ಬೇಜವಾಬ್ದಾರಿಯಿಂದ ವರ್ತಿಸಿ, ಆ ರೀತಿ ಖರ್ಚಾಗಿರುವುದಕ್ಕೆ ಸಕಾರಣಗಳನ್ನು ಕೊಡದಿದ್ದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾದುದು ಮುಖ್ಯಾಂಶ. ಈ ವಿಧಾನಸಭೆಗೆ ಇರತಕ್ಕಂಥ ಮುಖ್ಯವಾದ ಎರಡು ಅಧಿಕಾರ ಮತ್ತು ಜವಾಬ್ದಾರಿಗಳಲ್ಲಿ ಹಣಕಾಸು ಅತ್ಯಂತ ಮುಖ್ಯ ಜವಾಬ್ದಾರಿ. ನಮ್ಮಲ್ಲಿ ಇನ್ನೂ ಇದರ ಬಗ್ಗೆ, ಸಾಕಾದಷ್ಟು ಹಣವನ್ನು ಖರ್ಚು ಮಾಡುವುದರ ಬಗ್ಗೆ, ಯಾವ ರೀತಿ ಖರ್ಚಾಗುತ್ತದೆ ಎಂಬ ಬಗ್ಗೆ ಸಾಕಾದಷ್ಟು ಹಿಡಿತವಿಲ್ಲ. ಸುಮಾರು ಆರುಕೋಟಿ ರೂಪಾಯಿಗಳಷ್ಟು large industriesಗಾಗಿ ಸರ್ಕಾರ ಖರ್ಚುಮಾಡುತ್ತಿದೆ. ಇಷ್ಟು ಹಣ ಬಂಡವಾಳಗಾರರ ಕೈಲಿ ಇದ್ದಿದ್ದರೆ ಈ ಆರುಕೋಟಿ invest ಮಾಡಿ ಅದರಮೇಲೆ 4-6 ಕೋಟಿ ರೂಪಾಯಿಗಳಷ್ಟು ಲಾಬ ಸಂಪಾದನೆ ಮಾಡುತ್ತಿದ್ದರು. ನಮ್ಮಲ್ಲಾದರೋ ಖರ್ಚಿನ ಬಾಬೇ ವಿಪರೀತವಾಗಿರುವಾಗ ಇನ್ನು ಲಾಭವೆಲ್ಲಿ ಬಂದೀತು? ಇನ್ನೂ ಭದ್ರಾವತಿ ಕಾರ್ಖಾನೆಯನ್ನಾಗಲಿ ಅಥವಾ ಇನ್ನಾವುದಾದರೂ ಸಂಪೂರ್ಣ ಆಡಳಿತವಿರುವ ಕಾರ್ಖಾನೆಯನ್ನಾಗಲಿ—ಅಲ್ಲಿನ ಸ್ಥಿತಿಗತಿಯನ್ನು, ತಾತಾ, ಬಿರ್ಲಾ ಮುಂತಾದ ಖಾಸಗಿ ಬಂಡವಾಳಗಾರರ ಕಾರ್ಖಾನೆಗಳ ಸ್ಥಿತಿಗತಿಗಳಿಗೆ ಹೋಲಿಸಿದರೆ ಅಜಗಜಾಂತರ ವ್ಯತ್ಯಾಸವಿರುವುದು ಕಂಡುಬರುತ್ತದೆ. ಇಷ್ಟೇ ಅಲ್ಲದೆ ತಾತಾ, ಬಿರ್ಲಾ products ಖರ್ಚಾಗುವ ಹಾಗೆ ಮತ್ತು ಅವು ಬಾಳಿಕೆ ಬರುವಹಾಗೆ ನಮ್ಮ ಕಾರ್ಖಾನೆಗಳಲ್ಲಿ ತಯಾರಾದ products ಖರ್ಚಾಗುವುದಿಲ್ಲ ಮತ್ತು ಬಾಳಿಕೆಬರುವುದಿಲ್ಲವೆಂದು ಅನೇಕ ದೂರುಗಳು ಬಂದಿವೆ. ಮೈಸೂರು ಸಂಸ್ಥಾನ ಮಾದರೀ ಸಂಸ್ಥಾನವೆಂದು ಹೆಸರುಗಳಿಸಿದ್ದರೂ, ಹಿಂದೆ ಈ ಸಂಸ್ಥಾನದ ಆಡಳಿತವನ್ನು ಹೆಸರುವಾಸಿಯಾದ ದಿವಾನರುಗಳು ನಡೆಸಿದ್ದರೂ, ಇಂದಿಗೂ ಅವರು ಕೈಗಾರಿಕಾ ಪ್ರಪಂಚದಲ್ಲಿ ವಿಖ್ಯಾತಪುರುಷರೆಂದು ಹೆಸರುಗಳಿಸಿದ್ದರೂ, ನಮ್ಮ ಸಂಸ್ಥಾನದ ಕೈಗಾರಿಕಾ ಸಂಸ್ಥೆಗಳು ಪ್ರಗತಿಯನ್ನು ಸಾಧಿಸಿಲ್ಲ, ಜನತೆಗೆ ಅವಶ್ಯಕವಾಗಿ ಬೇಕಾದ ಉನ್ನತ ಮಟ್ಟದ ಪದಾರ್ಥಗಳನ್ನು ತಯಾರಿಸುತ್ತಿಲ್ಲ. ಖಾಸಗಿ ಸಂಸ್ಥೆಗಳೊಡನೆ ಈ ಸಂಸ್ಥೆಗಳನ್ನು ಹೋಲಿಸಿದರೆ ಪದಾರ್ಥಗಳ ಶ್ರೇಷ್ಠತೆಯ ವಿಚಾರದಲ್ಲಾಗಲಿ, ಆಡಳಿತ ದಕ್ಷತೆಯ ವಿಚಾರದಲ್ಲಾಗಲಿ, ಕೂಲಗಾರರ ಸೌಕರ್ಯದ ವಿಚಾರದಲ್ಲಾಗಲಿ ಬಹುಮಟ್ಟಿಗೆ ಹಿಂದೆ ಬಿದ್ದಿರುವುದು ಗೋಚರವಾಗುತ್ತದೆ. ಇದು ವಿಷಾದಕರವಾದ ಪ್ರಸಂಗ. ನಮ್ಮ ಸಂಸ್ಥಾನದ ಕೈಗಾರಿಕಾ ಸಂಸ್ಥೆಗಳು ಎಲ್ಲಿಯವರೆಗೆ ಆಡಳಿತ ದಕ್ಷತೆಯಲ್ಲಿ, ಕೆಲಸ

ಕಾರ್ಯಗಳನ್ನು ನಿರ್ವಹಿಸುವುದರಲ್ಲಿ, ಪದಾರ್ಥಗಳನ್ನು ತಯಾರುಮಾಡುವುದರಲ್ಲಿ ಇತರ ಖಾಸಗೀ ಕೈಗಾರಿಕಾ ಸಂಸ್ಥೆಗಳೊಡನೆ ಸರಿಸಮಾನವಾಗಿ ನಿಲ್ಲುವವರೆಗೂ ನಮ್ಮ ಸಂಸ್ಥಾನದ ಕೈಗಾರಿಕೆಗಳು ಅಭಿವೃದ್ಧಿಗೆ ಬರಲು ಸಾಧ್ಯವಾಗುವುದಿಲ್ಲ. ಈಗ ನಮ್ಮ ಹಾಸನ ಇಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ಹಲವಾರು designs ಉಳ್ಳ ಸಾಮಾನುಗಳು ತಯಾರಾಗುತ್ತವೆ. ಆದರೆ ಅವುಗಳನ್ನು ಕೊಂಡುಕೊಳ್ಳುವವರೇ ಇಲ್ಲ. ಹೀಗಾದ ಪಕ್ಷದಲ್ಲಿ ಕೈಗಾರಿಕೆಗಳಿಗೆ ತಾವು ಖರ್ಚುಮಾಡಿದ ಹಣ ಅದಕ್ಕಿಂತ ಲೆಕ್ಕದಲ್ಲಿ ತೋರಿಸಿದಹಾಗೆ ಆಗುತ್ತದೆಯೇ ಹೊರತು ಹೆಚ್ಚಿನ ಮಹತ್ವ ಸಾಧಿಸಿದಂತಾಗುವುದಿಲ್ಲ. ವೃಥಾ ಸಾರ್ವಜನಿಕ ಹಣ ಪೋಲುಮಾಡಿದ ಹಾಗಾಗುತ್ತದೆ. ಈಗ ನನಗೆ ತಿಳಿದುಬಂದಿರುವ ಪ್ರಕಾರ ಭದ್ರಾವತಿಯ ಕಾರ್ಖಾನೆಯಲ್ಲಿ ಒಂದು ಕೋಟಿ ರೂಪಾಯಿಗಳ ಮಾಲು stock ನಲ್ಲಿ ಹಾಗೆಯೇ ಇದೆ. ಅದಕ್ಕೆ ಸರಿಯಾದ ಮಾರ್ಕೆಟ್ ದೊರಕದೇ ಇರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಈ ರೀತಿ ಸರ್ಕಾರದ ಬಂಡವಾಳದ ನೆರವಿನಿಂದ ನಡೆಯುತ್ತಿರುವ ಕೈಗಾರಿಕೋದ್ಯಮಗಳ ಆಡಳಿತ ಯಾವರೀತಿ ಇದೆಯೆಂಬುದು ಈ ವರದಿಯನ್ನು ಪರಿಶೀಲಸಿದರೆ, ಖಂಡನೀಯವಾಗಿದೆ, ವಿಷಾದಕರವಾದ ರೀತಿಯಲ್ಲಿ ನಡೆಯುತ್ತಿದೆ ಯೆಂಬುದು ವ್ಯಕ್ತಪಡುತ್ತದೆ. ಅಲ್ಲದೆ ಹೆಚ್ಚು ಹಣ ಪೋಲಾಗುವುದಕ್ಕೆ ಅವಕಾಶವೂ ಆಗಿದೆ.

ಆಹಾರದ ಇಲಾಖೆಯ ವಿಚಾರ ತೆಗೆದುಕೊಂಡರೆ, ಅದರಲ್ಲಿ 90 ಕೋಟಿ ರೂಪಾಯಿಗಳವರೆಗೂ transaction ಆಗಿದೆ. ಇದರ ಬಗ್ಗೆ ಲೆಕ್ಕಪತ್ರಗಳ ಕೂಲಂಕಷ ಪರಿಶೀಲನೆ ಅವಶ್ಯಕವೆಂದು ಹೇಳುತ್ತೇನೆ. ಈಗಾಗಲೇ ಈ ಇಲಾಖೆಯಲ್ಲಿ ಸುಮಾರು ಎರಡು ಸಾವಿರ ಜನರ retrenchment ಆಗಿದೆ. ಇದರ ಲೇವಾದೇವಿಯಲ್ಲಿ ಸರ್ಕಾರಕ್ಕೆ ಬರಬೇಕಾದ ಬಾಕಿಗಳು ಎಷ್ಟೋ ಇವೆ. ಎಷ್ಟೇ ಮುತುವರ್ಜಿ ವಹಿಸಿ ಸರ್ಕಾರದವರು ಬಾಕಿ ವಸೂಲಿ ಮಾಡಿದರೂ, ಎಷ್ಟೇ margin ಬಿಟ್ಟರೂ 25 ಲಕ್ಷ ರೂಪಾಯಿಗಳವರೆಗೂ write off ಮಾಡಲೇಬೇಕು. ಈ 90 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ಕೇಂದ್ರ ಸರ್ಕಾರದ ಸಬ್ಸಿಡಿ ಸಹ ಸೇರಿದ್ದರೂ, ಉಳಿದ ಮೊಬಲಗಿನ ಬಗ್ಗೆ ಸರಿಯಾದ ಕರಾರುವಾಕ್ಕಾದ ಲೆಕ್ಕಪತ್ರಗಳು ಸಿಕ್ಕುವ ಹಾಗಿಲ್ಲ. ಇದನ್ನೇನಾದರೂ ಖಾಸಗಿಯವರ ಆಡಳಿತಕ್ಕೆ ಬಿಟ್ಟಿದ್ದರೆ 90 ಕೋಟಿ ರೂಪಾಯಿ ವ್ಯವಹಾರ ನಡೆಸಿ ಅದರಿಂದ ಕೋಟ್ಯಾಂತರ ರೂಪಾಯಿಗಳ ಲಾಭ ಸಹ ಸಂಪಾದಿಸುತ್ತಿದ್ದರು. ಈಗಿನ ಲೆಕ್ಕ ತನಿಖೆಮಾಡಿ ನೋಡಿದರೆ, ಎಲ್ಲಿ ಪ್ರಾರಂಭವಾಯಿತು, ಎಲ್ಲಿ ಕೊನೆಯಾಯಿತು, ಎಲ್ಲಿ stocks ಇದೆ ಎಂಬವುಗಳನ್ನು locate ಮಾಡುವುದಕ್ಕೇ ವ್ಯವಹಾರ ನಡೆಸಿದ ಅಧಿಕಾರಿಗಳಿಗೆ ಆಗುತ್ತಿಲ್ಲ. ಈ ವರದಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು—ಅವರು ಶ್ರೀ ಕೆ. ಪಿ. ರಾಮನಾಥಯ್ಯನವರೆಂದು ಕಾಣುತ್ತದೆ—ತಿಳಿಸಿರುವ ವಿವರಣೆ ನೋಡಿದರೆ ಯಾವುದಕ್ಕೂ ಸಮಜಾಯಿಷಿ ಸಿಕ್ಕುವುದಿಲ್ಲ. ಅಂದರೆ, ಯಾವ ವಿಷಯದಲ್ಲಿ ಸರ್ಕಾರ ಕೈಹಾಕಿ ಹಣ ಕಾಸಿನ ವ್ಯವಹಾರವನ್ನು ನಡೆಸಿದೆಯೋ ಅದರಲ್ಲಿ ಅದರ supervision ಸಾಲದು ; ಇದಕ್ಕಾಗಿ ಸರ್ಕಾರದವರು ನೇಮಿಸಿರುವ ಅಧಿಕಾರಿಗಳು ಅವರು ನಿರ್ವಹಿಸಿದ ಕೆಲಸವನ್ನು ಜವಾಬ್ದಾರಿಯಿಂದ, ಮುತುವರ್ಜಿಯಿಂದ ವಹಿಸಿಲ್ಲವೆಂಬುದು ಇದರಿಂದ ವ್ಯಕ್ತಪಡುತ್ತದೆ.

ಇನ್ನೂ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡರೆ ಶ್ರೀಮಾನ್ ಶ್ರೀನಿವಾಸಅಯ್ಯಂಗಾರ್‌ರವರು ಅನೇಕ ಉದಾಹರಣೆಗಳನ್ನು ಕೊಟ್ಟು ಹೇಳಿದ್ದಾರೆ ; ಭದ್ರಾ, ತುಂಗಾ, ನುಗು ಪ್ರಾಜೆಕ್ಟುಗಳ ಸರ್ವೇ ಮಾಡತಕ್ಕದ್ದು, ಈ ವಿಷಯಗಳನ್ನೆಲ್ಲಾ ಹೇಳಿದ್ದಾರೆ. ಸರ್ವೇ ಸಾಮಾನ್ಯವಾಗಿ ಕೆಲಸ ಬೇಕು, ದುಡಿಯಬೇಕು ಎಂದು ಅಪೇಕ್ಷೆಪಡುವವರಿಗೆ ಪ್ರಾಜೆಕ್ಟ್ ಇದ್ದಲ್ಲಿಗೆ ಹೋಗಿ ಎಂದು ಹೇಳುವುದು ಪದ್ಧತಿಯಾಗಿದೆ. ಸರ್ಕಾರ ಹೆಚ್ಚು ಹಣ ಖರ್ಚು ಮಾಡುತ್ತಾ ಇದೆ, ಇದರಿಂದ ಉಪಯೋಗ ಏನು ದೊರೆಯುತ್ತಾ ಇದೆ? ಕೆಲಸ ದೊರೆಯುತ್ತದೆ ಎಂದು ಹೇಳುವುದು ಮಾತ್ರವೇ ಅಲ್ಲದೆ profit margin 75 per cent ಇದೆ ಎಂದು ತಿಳಿದುಬಂದಿದೆ. 25 per cent actual workಗೆ ಹೋಗುತ್ತದೆ. ಶ್ರೀಮಾನ್ ನೆಹರೂ ಅವರೂ ಕೂಡ ಬೊಂಬಾಯಿನಲ್ಲಿ ಹೀರಾಕುಡ್ ಪ್ರಾಜೆಕ್ಟ್‌ನಿಂದ ಏನು ಉಪಯೋಗವಾಗುತ್ತದೆ ಎಂದು ಕೇಳಿದಾಗ, ಕೆಲವರಿಗೆ ಈಗೇನೋ ಕೆಲಸ ದೊರೆಯುತ್ತದೆ ಅಷ್ಟೇ ಹೊರತು ತಕ್ಷಣ ಯಾವ ಉಪಯೋಗವೂ ಆಗುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಪ್ರೊಡ್ಯೂಸ್ ಆಗುವುದು ಬಹಳ ಮುಂದೆ, ಈಗ ಸದ್ಯಕ್ಕೆ ಉದ್ಯೋಗವಿಲ್ಲ ಎಂದು ಹೇಳುತ್ತಾರಲ್ಲಾ ಅವರಿಗೆ ಉದ್ಯೋಗ ಕೊಡುವುದಕ್ಕೆ ಮಾತ್ರ ಇವು ಸಹಕಾರಿಯಾಗಿವೆ ಎಂದು ಹೇಳಿದ್ದಾರೆ. ಅದೇ ರೀತಿ ನಮ್ಮ ಮುಖ್ಯಮಂತ್ರಿಗಳೂ ಕೂಡ ವಿಧಾನಸೌಧ ಏಕೆ ಎಂದರೆ ಅನೇಕರಿಗೆ ಉದ್ಯೋಗ ಸಿಕ್ಕುವುದಕ್ಕೆ ಎಂದು ಹೇಳುತ್ತಿದ್ದರು. ಉದ್ಯೋಗ ಕೊಡುವುದಕ್ಕೋಸ್ಕರ ಒಂದೊಂದು ಪ್ರಾಜೆಕ್ಟು ಮಾಡುವುದಕ್ಕಾಗುತ್ತದೆಯೇ ಎನ್ನುವುದು ಮೂಲಭೂತವಾದ ವಿಷಯ. ಉದ್ಯೋಗ ಕೊಡುವುದಕ್ಕೆ ಈ ದೊಡ್ಡದೊಡ್ಡ ಪ್ರಾಜೆಕ್ಟುಗಳನ್ನು ಮಾಡುತ್ತಾ ಇದ್ದಾರೆ ಎನ್ನುವುದಾದರೆ ಆ ಜನರು ಎಷ್ಟು ದಿವಸ ಅದನ್ನೇ ನಂಬಿಕೊಂಡು ಇರುವುದಕ್ಕೆ ಸಾಧ್ಯ? ಅದು ಸಮಾಪ್ತಿ ಆಯಿತು ಎಂದರೆ ಅಲ್ಲಿಗೆ ಅವರ ಜೀವನ ಮುಗಿಯಿತು, ಪುನಃ ವಾಪಸು ಹೋಗಬೇಕು ಎಂತಲೇ? ಈಗ ಭದ್ರಾ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿದರೆ ಮಕ್ಕಳನ್ನು ಸಿಕ್ಕಿದ ಕಡೆಯಲ್ಲಿ ಬಿಸಾಡಿ, ಕೈಯಲ್ಲಿ ಶಕ್ತಿ ಇಲ್ಲದೇ ಕಲ್ಲು ಮಣ್ಣು ಹೊರುತ್ತಿರುವವರ ಪಾಡನ್ನು ನೋಡಬಹುದು. ಅನೇಕ ಜನ ಕಾಲರಾದಿಂದ ಸತ್ತು ಹೋಗುತ್ತಾ ಇದ್ದಾರೆ. ಅವರನ್ನು ನೋಡಿದರೆ ಪ್ರಾಯಶಃ ಅಲ್ಲೇ ಅವರು ಸಮಾಧಿಯಾಗುವವರೇ ಹೊರತು ಮುಂದಿನ ಭವಿಷ್ಯ ಅವರಿಗೆ ಏನೂ ಇದ್ದಂತೆ ಕಾಣುವುದಿಲ್ಲ. ಅವರಿಗೆ ಸಿಕ್ಕುವುದು 6 ಆಣೆ, 8 ಆಣೆ, 10 ಆಣೆಯಿಂದ 1½ ರೂಪಾಯಿಗಳ ಕೂಲಿ. ಸಾಧಾರಣವಾಗಿ ಇಂಥ ಪ್ರಾಜೆಕ್ಟುಗಳನ್ನು ಕಟ್ಟುವಾಗ ಅಮಾನಿ ಎಂದು ಹೇಳಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಒಂದು ದೊಡ್ಡ ಭಾಗ ಇದೆ. ಯಾವ ಕೆಲಸ ಕಂಟ್ರಾಕ್ಟುದಾರರಿಗೆ ಕೊಡುವುದರಿಂದ ಹೆಚ್ಚು ಕಾಲ ತೆಗಲುತ್ತದೆ ಅಥವಾ ಹಣ ದುರುಪಯೋಗವಾಗುತ್ತದೆ ಎಂದು ಕಂಡು ಬರುತ್ತದೆಯೋ ಅಂಥಾದ್ದನ್ನು ಡಿಪಾರ್ಟ್‌ಮೆಂಟ್ ಮೂಲಕ ತಾವೇ ನಿಂತು ಸೂಪರ್‌ಡಿರ್ಜ್ ಮಾಡಿ ಕೆಲಸ ಪೂರೈಸಬೇಕೆಂದು ಅಮಾನಿ ರೂಪದಲ್ಲಿ ಮಾಡುತ್ತಾರೆ. ಆ ರೀತಿ ಇವೊತ್ತು ಭದ್ರಾ ಪ್ರಾಜೆಕ್ಟಿನ ಬಲಭಾಗದ ಕೆಲಸವನ್ನು ಅಮಾನಿ ರೂಪದಲ್ಲಿ ಮಾಡುತ್ತಾ ಇದ್ದಾರೆ. ಅಲ್ಲಿರತಕ್ಕ ಇಂಜನಿಯರುಗಳು ಸೂಪರ್‌ವೈಜರ್‌ಗಳು ಇತ್ಯಾದಿ ಅಧಿಕಾರಿಗಳು—ಅಲ್ಲಿ 500-600 ಜನ ಕೆಲಸ ಮಾಡುತ್ತಾರೆ—ಆ ಕೆಲಸವನ್ನು ಪ್ರತಿ ದಿವಸ ಚೆಕ್ ಮಾಡಬೇಕಾದರೆ ಬಹಳ ನಿಸ್ಪೃಹತೆಬೇಕು, ಸಾತ್ವಿಕರಾಗಿರಬೇಕು. 500 ಜನ ಕೆಲಸಮಾಡಿ 600 ಜನ ಎಂದು ಬರೆಯುವುದಕ್ಕೆ ಅವಕಾಶ ಇದೆ. ಅದೇ ರೀತಿ ಸಿಮೆಂಟ್

(ಶ್ರೀ ಸಿ. ಎಸ್. ಗೋಪಾಲಗೌಡ.)

ಮಿಕ್ಸ್ ಮಾಡುವಾಗಲೂ ಸಹ ಸಿಮೆಂಟ್ ಚೀಲಗಳನ್ನು ಕೊಡುತ್ತಾರೆ. ದಿವಸಕ್ಕೆ 8 ಸಿಮೆಂಟ್ ಮೂಟೆಗಳಂತೆ 10 ದಿವಸ ಸಾಗಿಸಿದರೆ ಸಾಕು ಒಬ್ಬನ ಜೀವನ ಆಗುತ್ತದೆ. ಎಂದರೆ ಮುಂದೆ ಅವನ ಕಂಟ್ರಾಕ್ಟು ಹೋದರೂ ಪರವಾಗಿಲ್ಲ, ಅವನ ಜೀವನ ನಡೆಸಿಕೊಳ್ಳಬಹುದು. ಹೀಗೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಕೆಲಸ, ಅದರಲ್ಲೂ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಮೇಲೆ, ಹೆಚ್ಚುತ್ತಾ ಹೋಗಿ ಸುಮಾರು 4 ಕೋಟಿ ರೂಪಾಯಿಗಳವರೆಗೂ ಖರ್ಚಾಗುತ್ತಾ ಇದೆ. ಮೊದಲಿನಿಂದಲೂ ಇದ್ದ ಮೇನ್‌ಟೆನೆನ್ಸ್ ಕೆಲಸಗಳನ್ನು ಬಿಟ್ಟರೆ ದೊಡ್ಡದೊಡ್ಡ ಪ್ರಾಜೆಕ್ಟುಗಳ ಕೆಲಸ ಎಂದರೆ ಭದ್ರಾ ಪ್ರಾಜೆಕ್ಟು ಮುಂತಾದುವೂ ಸಹ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರ ಮೇಲ್ವಿಚಾರಣೆಯಲ್ಲೇ ನಡೆಯುತ್ತಿದೆ. ಹೀಗಿರುವಾಗ ಅಲ್ಲಿನ ನ್ಯೂನಾತಿರಿಕ್ತಗಳನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕೆಂದು ಹೇಳುತ್ತೇನೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಂತ್ರಿಗಳಾಗುವುದಕ್ಕೆ ಮುಂಚೆ ಈ ಇಲಾಖೆಯಲ್ಲಿ ಇರತಕ್ಕ ಲೋಪದೋಷಗಳನ್ನು 6 ತಿಂಗಳಿನಲ್ಲಿ ಸರಿಪಡಿಸಿ, ಲಂಚ ರುಷುವತ್ತನ್ನು ನಿಲ್ಲಿಸುತ್ತೇನೆ ಎಂದು ಒಂದು ಭಾಷಣದಲ್ಲಿ ಹೇಳಿದ್ದರು. ಅಂಥ 6 ತಿಂಗಳುಗಳು ಎಷ್ಟಾದುವು, ಎಷ್ಟುಮಟ್ಟಿಗೆ ನಿಲ್ಲಿಸಿದ್ದಾರೆ ಎಂಬುದನ್ನು ನಾನು ಅವರಲ್ಲಿ ಕೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ನೀವೇನಾದರೂ ಇದ್ದಿದ್ದರೆ ಮಾಡುತ್ತಿದ್ದಿರೋ ?

ಶ್ರೀ ಎಸ್. ಗೋಪಾಲಗೌಡ.—ಅದನ್ನು ಈಗ ನಾನು ಹೇಳುವುದಕ್ಕಾಗುವುದಿಲ್ಲ (ನಗು !) ಇವೊತ್ತಿನ ಒಂದು ಪರಿಸ್ಥಿತಿಯಲ್ಲಿ ಏನಾಗಿದೆ ಎಂದರೆ, ಮೊದಲು ಒಂದು ಎಸ್ಟಿಮೇಟು ಮಾಡಿ ಆಮೇಲೆ ಹೇಗೆ ಆ ಎಸ್ಟಿಮೇಟುಗಳನ್ನು ಬದಲಾಯಿಸುತ್ತಾರೆ ಎಂಬುದನ್ನು ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಹೇಳಿದ್ದಾರೆ. ಈ ವರದಿಯಲ್ಲಿ ಕಮಿಟಿಯವರೂ ಸಹ ಆ ವಿಚಾರದಲ್ಲಿ ಬಹಳ ತೀವ್ರವಾಗಿ ರಿಮಾರ್ಕ್ಸ್ ಮಾಡಿದ್ದಾರೆ. ಈ ತರಹ ಎಸ್ಟಿಮೇಟ್‌ಗಳನ್ನು ಮಾಡತಕ್ಕದ್ದು, ಎಸ್ಟಿಮೇಟುಗಳನ್ನು ಬದಲಾಯಿಸತಕ್ಕದ್ದು, approximate estimation ಇಲ್ಲದೆ, ಫೈನಲ್ ಆಗಿ ಎಷ್ಟು ಖರ್ಚಾಗುತ್ತದೆ ಎಂಬುದು ಗೊತ್ತಿಲ್ಲದೆ ಕೆಲಸ ಪ್ರಾರಂಭ ಮಾಡುವುದು, ಕೆಲಸ ಪ್ರಾರಂಭ ಮಾಡಿ ಅರ್ಧಕ್ಕೆ ಬಿಡುವುದು ಮತ್ತು ಅಷ್ಟೇ ಅಲ್ಲದೆ ಆ ಸ್ಕೆಟುಗಳನ್ನೇ ಬದಲಾಯಿಸುವುದು ಹೀಗೆಲ್ಲಾ ಮಾಡುವುದರಿಂದ ಅಂತಿಮದಲ್ಲಿ ಸರ್ಕಾರದ ತಲೆಯ ಮೇಲೆ ಜವಾಬ್ದಾರಿ ಬಿದ್ದರೂ ಕೂಡ ಇದು ಅಲ್ಲಿನ ಅಧಿಕಾರಿಗಳ ಜವಾಬ್ದಾರಿ ಆಗುತ್ತದೆ. ಅಧಿಕಾರಿಗಳು ಒಬ್ಬರ ಮೇಲೊಬ್ಬರು ಜವಾಬ್ದಾರಿಯನ್ನು ಬದಲಾಯಿಸಿಕೊಂಡು ಒಬ್ಬರು ಮಾಡಿದ ಎಸ್ಟಿಮೇಟನ್ನು ಅವರು ವರ್ಗವಾಗಿ ಹೋದರು ಎಂತಲೋ ಅಥವಾ ಅವರು ಮಾಡಿದ ಎಸ್ಟಿಮೇಟು ಸರಿಯಾಗಿಲ್ಲ ಎಂತಲೋ ಬದಲಾಯಿಸುತ್ತಾರೆ. ಅನೇಕ ತೊಂದರೆಗಳನ್ನು ಮುಂಚಿತವಾಗಿಯೇ ಕಂಡುಕೊಳ್ಳುವುದಕ್ಕೆ ಅಸಾಧ್ಯವಾಗುತ್ತದೆ. ಅಂಥಾದ್ದನ್ನು ಬಿಟ್ಟರೂ ಕೂಡ ನಿಸ್ಪೃಹತೆಯಿಂದ ಕೆಲಸ ಮಾಡಿದರೆ ಈ ರೀತಿ ಒಂದಕ್ಕೆ ಎರಡರಷ್ಟು ವೆಚ್ಚ ಅಥವಾ ಲುಕ್ಸಾನಾಗುವುದಕ್ಕೆ ಕಾರಣವೇ ಇಲ್ಲವೆಂದು ಕಾಣುತ್ತದೆ. ಇವೊತ್ತು ಇಂಥ ಅನೇಕ ಕಾರ್ಯಗಳು ಈ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯುತ್ತಾ ಇರುವುದನ್ನು ತಾವು ನೋಡಬಹುದು. ಡಿಸೈನ್ ಮಾಡತಕ್ಕವರು, ಎಸ್ಟಿಮೇಟ್ ಮಾಡತಕ್ಕವರು, ಸೂಪರ್‌ವೈಸ್ ಮಾಡತಕ್ಕವರು, ಇವೆಲ್ಲ ಕೆಲಸಗಳನ್ನು ಮಾಡತಕ್ಕವರು ಒಬ್ಬರೇ ಆಗಿದ್ದಾರೆ. ಪರ್ಟಿಕ್ಯುಲರ್ ಆಗಿ ಸೂಪರಿಂಟೆಂಡಿಂಗ್ ಎಂಜಿನಿಯರ್, ಎಕ್ಸಿಕ್ಯೂಟಿವ್ ಎಂಜಿನಿಯರ್, ಅಸಿಸ್ಟೆಂಟ್ ಎಂಜಿನಿಯರ್ ಎಂದು ಬೇರೆ ಬೇರೆಯಾಗಿದ್ದರೂ ಕೂಡ ಸೂಪರ್‌ವೈಸರ್ ಎಂದು ಯಾರು ಇದ್ದಾರೆಯೋ ಅವರ ಮುಖಾಂತರ ಬಹಳ ಕೆಲಸ ನಡೆಯುತ್ತದೆ. ಆ ಸೂಪರ್‌ವೈಸರ್ ಮಾಡಿಸಿರುವ ಕೆಲಸಕ್ಕೆ ಎಂಜಿನಿಯರು checked and found correct ಎಂದು ಹಾಕದಿದ್ದರೆ ಆ ಇಂಜಿನಿಯರಿಗೆ ಬಹಳ ಕಷ್ಟ ಕೊಡುವ ಸಂಭವವಿದೆ. ಹಿಂದೆ ಇದ್ದವರು ಈ ರೀತಿ ಮಾಡುತ್ತಾ ಇದ್ದರೇ ಎಂದು ಹೊಸದಾಗಿ ಬಂದ ಇಂಜಿನಿಯರು ಕೇಳುವುದಕ್ಕೆ ಸಾಧ್ಯವೇ ಇಲ್ಲ. ಅವರು ಹೇಳಿದ ಹಾಗೆ ಕೆಲಸ ಮಾಡದೇ ಇದ್ದರೆ ಆ ಊರಿನಲ್ಲಿ ಇರುವುದಕ್ಕೇ ಸಾಧ್ಯವಿಲ್ಲ. ಕಂಟ್ರಾಕ್ಟರು ಸೂಪರ್‌ವೈಸರ್ ಸೇರಿಕೊಂಡು ಇಷ್ಟು ಪರ್ಸೆಂಟ್ ಹೊಡೆಯಬೇಕೆಂದು ಮೊದಲೇ ತೀರ್ಮಾನ ಮಾಡುತ್ತಾರೆ. ಅವರು ಶೇಕಡ 18 ರಂತೆ ಸಾಲ ತರುತ್ತಾರೆ, ಕೆಲವು ವೇಳೆ 100ಕ್ಕೆ 300 ರೂಪಾಯಿ ಕೂಡ ಬಡ್ಡಿ ಕೊಡುವುದುಂಟು. ಅದರ ಜೊತೆಗೆ ಅವರಿಗೆ ಬರತಕ್ಕ ಲಾಭ ಈ ಎಲ್ಲವನ್ನೂ ಸೇರಿಸಿ ಎಷ್ಟು ಲಾಭ ಬರಬೇಕು ಎಂಬುದನ್ನು ಮೊದಲೇ ನಿರ್ಣಯಿಸಿ ಆ ಕೆಲಸದ ಅಂದಾಜು ಮಾಡುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆರೀತಿ ಇಲ್ಲ, ಬದಲಾಯಿಸಿದೆ.

ಶ್ರೀ ಎಸ್. ಗೋಪಾಲಗೌಡ.—ಈಗ ಸ್ವಲ್ಪ ಬದಲಾಯಿಸಿಕೊಂಡಿದ್ದೀರಿ. ಒಬ್ಬರು ಯಾವುದಾದರೂ ಒಂದು ಸೇತುವೆ ಕಟ್ಟಿಸಬೇಕೆಂದರೆ ಅದಕ್ಕೆ ಡಿಸೈನ್ ಒಬ್ಬರು ಕೊಡಬೇಕು. ಡಿಸೈನ್ ಕೊಟ್ಟರೆ ಅವರ ಕೆಲಸ ಅಲ್ಲಿಗೆ ಮುಗಿಯಿತು. ಅದೇ ರೀತಿ ಎಸ್ಟಿಮೇಟ್ ಮಾಡುವವರು ಎಸ್ಟಿಮೇಟ್ ಮಾಡಿಕೊಟ್ಟರೆ ಆಯಿತು ಅಲ್ಲಿಗೆ ಅವರ ಕೆಲಸ ಮುಗಿಯಿತು. ಸೂಪರ್‌ವೈಜರ್ ಕೆಲಸ ಬರೀ ಸೂಪರ್‌ವಿಷನ್ ಎಷ್ಟೋ ಅಷ್ಟೇ, ಎಸ್ಟಿಮೇಟ್ ರಿವೈಸ್ ಮಾಡುವ ಕೆಲಸ ಅವರದಲ್ಲ, ಹೇಳಿದಷ್ಟು ಕೆಲಸ ನೋಡಿಕೊಂಡಿರುವುದೆಷ್ಟೋ ಅಷ್ಟೇ. ಹೀಗೆ 3 ಭಾಗವಾಗಿ ಮಾಡಿ ಜವಾಬ್ದಾರಿ ಬೇರ್ಪಡಿಸುವುದರಿಂದ ಸ್ವಲ್ಪಮಟ್ಟಿಗೆ ಕರಪ್ಷನ್ ತಪ್ಪಿಸಬಹುದು. ಈಗಿರತಕ್ಕ ಸಖ್ಯ, ಸ್ನೇಹದಿಂದ, ಕಂಟ್ರಾಕ್ಟರೂ, ಸೂಪರ್‌ವೈಜರುಗಳೂ ಮತ್ತು ಇತರ ಸಂಬಂಧಪಟ್ಟ ಅಧಿಕಾರಿಗಳೂ ಸೇರಿ ಕೆಲಸ ಮಾಡುವುದರಿಂದ ಸುಮಾರು ಶೇಕಡ 75-80 ಲಾಭ ಹಂಚಿಕೊಳ್ಳುವುದಕ್ಕೆ ಅವಕಾಶವಾಗಿದೆ. ಉದಾಹರಣೆಗೆ, ಮಣ್ಣು ಕಡಿದು ಹಾಕುವುದು ಇರುತ್ತದೆ. 6 ಅಡಿ, 8 ಅಡಿ ಮಣ್ಣು ತೆಗೆದು ಹಾಕುವುದು ಎಂದು ಅದರಲ್ಲಿ ಏನಾಗುತ್ತದೆ ? ಹಿಂದೆ ಯಾವಾಗಲೋ ತೆಗೆಸಿಹಾಕಿರುತ್ತಾನೆ, ಅದನ್ನೇ ಈಗಲೂ ತೋರಿಸಿ ಮಣ್ಣು ತೆಗೆದುಹಾಕಿದ್ದೇವೆ ಎಂದು ಹೇಳುತ್ತಾನೆ. ಹೀಗೆಲ್ಲಾ ಆಗುತ್ತದೆ. ಅಂಥಾದ್ದಕ್ಕೆಲ್ಲಾ ಕಣ್ಣುಮುಚ್ಚಿಕೊಂಡು ಬಿಟ್ಟರೂ ಕೂಡ, ದೊಡ್ಡ, ದೊಡ್ಡದು, ಶಾಶ್ವತವಾದ ರಸ್ತೆಗಳನ್ನು ಮೈನ್‌ಟೈನ್ ಮಾಡುವುದು, ಶಾಶ್ವತವಾದ ಕಟ್ಟಡಗಳನ್ನು ಕಟ್ಟುವುದು, ಮತ್ತು ಶಾಶ್ವತವಾದ ಅಣೆಗಳನ್ನು ಕಟ್ಟುವುದು, ಸೇತುವೆಗಳನ್ನು ಕಟ್ಟಿಸುವುದು ಇಂತಹ ಯಾವ ಕೆಲಸದಮೇಲೆ ವಿಶೇಷವಾದ ಬಂಡವಾಳವನ್ನು ಹಾಕಿ ಶಾಶ್ವತವಾದ ಕೆಲಸ ಎಂದು ಕರೆಯುತ್ತೇವೋ ಅಂಥಾದ್ದರ ಬಗ್ಗೆ ಹೆಚ್ಚು ನಿಗಾ ಕೊಡದಿದ್ದರೆ ಅದಕ್ಕೆ ಖರ್ಚು ಮಾಡತಕ್ಕ ಹಣ ಬಹಳ ಅನ್ಯಾಯವಾಗುತ್ತದೆ. ಅದರಿಂದ ಸಾರ್ವಜನಿಕರಿಗೂ ಸರ್ಕಾರಕ್ಕೂ ಮತ್ತು ಸಂಸ್ಥಾನಕ್ಕೂ ಬಹಳ ನಷ್ಟ

ವಾಗುತ್ತದೆ. ಅದನ್ನು ಗಮನಿಸಿ P.W.D. ಮಂತ್ರಿಗಳು ಹೆಚ್ಚು ಶ್ರಮವಹಿಸಿ ಈಗ ಇರತಕ್ಕ ಲೋಪದೋಷಗಳನ್ನು ಪರಿಶೀಲನೆಮಾಡಿ ತಕ್ಷಣ ನಿಲ್ಲಿಸಬೇಕು. ಇಲ್ಲದೆ ಹೋದರೆ ಕೋಟಿ ಕೋಟಿ ರೂಪಾಯಿಗಳ ಹಣ ಮಣ್ಣುಪಾಲೋ, ಹೊಳೆಯ ಪಾಲೋ ಅಥವಾ ಇನ್ನಾವುದರ ಪಾಲೋ ಆಗುತ್ತದೆ. ಅದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಸಂಪೂರ್ಣ ಲಕ್ಷ್ಯ ಕೊಡಬೇಕೆಂದು ಹೇಳಿ ಈ ಸಮಯದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇದು ಪ್ರತಿಯೊಂದನ್ನೂ ಸಹ ಒಳಗೊಂಡು ಒಂದು condensed report ಆಗಿದೆ. ಸಾಧಾರಣವಾದ ವರದಿ ಅಲ್ಲ. ಜವಾಬ್ದಾರರಾಗಿರತಕ್ಕವರು, ಅಧ್ಯಕ್ಷರು ಮತ್ತು ವಿರೋಧ ಪಕ್ಷದ ನಾಯಕರು ಜವಾಬ್ದಾರಿಯನ್ನರಿತವರು ಕುಳಿತುಕೊಂಡು ವಿಷಯಗಳನ್ನು ಪರಿಶೀಲನೆಮಾಡಿ ಕೊಟ್ಟಿರುವ ವರದಿ ಇದು. ಇದರಲ್ಲಿ ಪ್ರತಿಯೊಂದು ವಾಕ್ಯವೂ ಕೂಡ ಬಹಳ ಅಮೂಲ್ಯವಾದದ್ದು. ದೇಶದ ಹಿತದೃಷ್ಟಿಯಿಂದ ಇದನ್ನು ನಾವೆಲ್ಲರೂ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ನಾನಿಲ್ಲಿ ಪೂರ್ಣವಾಗಿ ಎಲ್ಲವನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದೇ ಒಂದು ಉದಾಹರಣೆಯನ್ನು ಮಾತ್ರ ಕೊಟ್ಟು ನನ್ನ ಕರ್ತವ್ಯವನ್ನು ಮಾಡುವುದಕ್ಕೆ ಎದ್ದು ನಿಂತಿದ್ದೇನೆ. ಮಂತ್ರಿಗಳು ವಾಸವಾಗಿರತಕ್ಕ ಮನೆಗಳಿಗೆ ರಿಪೇರಿ ಮಾಡಿಸುವುದಕ್ಕೆ ಮತ್ತು ಅವುಗಳ ಬಗ್ಗೆ ಇಲ್ಲಿ ಒಂದು ಮಾತು ಇದೆ. ವಿಮಲಪ್ರಭಾ ಅಂತ ಒಂದು ಮನೆ. ಅದನ್ನು ರಿಪೇರಿ ಮಾಡಿಸಿದ್ದಾರೆ, ಅದಕ್ಕೆ 30 ಸಾವಿರ ರೂಪಾಯಿ ಖರ್ಚಾಗಿದೆ.

Page 98: "Sri H. S. Rudrappa emphasised the need for recovery of the amount spent over repairs, as the landlords were bound to effect necessary repairs to their buildings according to the provisions contained in the H.R.C. Act. If a landlord refuses to attend to the repairs, legal action could be taken against him."

"The Chairman remarked that the Government had been paying very heavy rents for the buildings occupied by Ministers and that Government ought not to have undertaken repairs for themselves. The amount that had been spent over the repairs of rented buildings should be recovered out of the rents payable to the landlords."

ಇದು ಬೇರೆಯವರಿಗೆ ಸಂಬಂಧಪಟ್ಟ ಕಟ್ಟಡವೇ ! ಹಾಗಿದ್ದ ಪಕ್ಷದಲ್ಲಿ ಸರ್ಕಾರದವರೇ ಅದಕ್ಕೆ ಬೇಕು ಬೇಕಾದ ರಿಪೇರಿ ಮಾಡಿಕೊಂಡರೆ ಆ ಕಟ್ಟಡದ ಮಾಲೀಕರು ಅದಕ್ಕೆ, ಅವರ ಅನುಮತಿ ಇಲ್ಲದೆ ಇದ್ದರೆ, ಒಪ್ಪದೇ ಹೋಗಬಹುದು. ಇಲ್ಲಿ ಇಂಥ ಅನುಕೂಲ ಆಗಬೇಕು, ನಲ್ಲಿ ಇತ್ಯಾದಿ ಹಾಕಿಸಿಕೊಡಿ ಎಂದು ಹೇಳಿ ಅವರ ಅನುಮತಿ ಪಡೆದು ಅವರಿಗೆ ಖರ್ಚು ಹಾಕಿಸುವುದು ಸರಿಯಾದ ಮಾರ್ಗ. ಹಾಗಲ್ಲದೆ ಮನೆಯನ್ನೇ ಪೂರ್ತಿ ಬದಲಾಯಿಸಿ, 10 ಸಾವಿರ ರೂಪಾಯಿಯ ಮನೆಯನ್ನು 50 ಸಾವಿರ ರೂಪಾಯಿಗಳ ಮನೆಯನ್ನಾಗಿ ಬದಲಾಯಿಸಿದ್ದೇವೆ, ಆದ್ದರಿಂದ ನಾವು ನಿಮಗೆ ಬಾಡಿಗೆ ಕೊಡುವುದಕ್ಕೆ ಬದಲು ನೀವೇ ನಮಗೆ ಹಣ ಕೊಡುತ್ತಾ ಹೋಗಿ ಎಂದರೆ ಯಾರು ಒಪ್ಪಿಕೊಳ್ಳುತ್ತಾರೆ ? ಹೀಗೆ 30 ಸಾವಿರ ರೂಪಾಯಿ ಖರ್ಚುಮಾಡಿದ್ದನ್ನು ಬಹುಶಃ ಅವರು ಕೊಡಲಿಲ್ಲವೋ ಏನೋ ?

Mr. SPEAKER.—May I know whether the Hon'ble Member is going to take more time ?

Sri S. GOPALA GOWDA.—Yes.

Mr. SPEAKER.—The House will rise now and meet at 3-30.

The House adjourned at Three of the Clock and reassembled at Thirty Minutes past Three of the Clock.

[MR. SPEAKER in the Chair.]

ಶ್ರೀ ಎಸ್. ಗೋಪಾಲಗೌಡ.—ನಾನು ಮಂತ್ರಿಗಳು ವಾಸವಾಗಿರತಕ್ಕಂಥ ಮನೆಗಳಿಗೆ ರಿಪೇರಿ ಮಾಡಿಸತಕ್ಕದ್ದು ಮತ್ತು ಇತರ ಖರ್ಚು ಮಾಡತಕ್ಕ ಬಗ್ಗೆ ಮಾತನಾಡುತ್ತಿದ್ದೆ. ಈ ಸಂದರ್ಭದಲ್ಲಿ ನಾನು 30 ಸಾವಿರ ರೂಪಾಯಿಗಳೆಂದು ಹೇಳಿದೆ. ಅದು 35 ಸಾವಿರ ರೂಪಾಯಿಗಳು. ಸಮಿತಿಯು ಈ ಸಂದರ್ಭದಲ್ಲಿ ಈ ರೀತಿಯಾಗಿ ಅಭಿಪ್ರಾಯಪಟ್ಟಿದೆ :—

> "The Committee observed that improvement works to hired buildings should not be undertaken unless the cost is recoverable from the owners and it was the duty of the landlord to attend to repairs of such buildings."

ಅದಕ್ಕೆ ಮುಂದುಗಡೆ 99ನೆಯ ಪುಟದಲ್ಲಿ ಮಂತ್ರಿಗಳ ಸಂಬಳ ಸಾರಿಗೆಗಳ ಬಗ್ಗೆ ಅಧ್ಯಕ್ಷರು ರಿಮಾರ್ಕ್ ಮಾಡಿರುವುದನ್ನು ಕೊಟ್ಟಿದ್ದಾರೆ.

> "Sri H. S. Rudrappa said that present Ministers' Salaries and Allowances Act, 1952 did not specify the scale of articles to be supplied to the Ministers. It was better that such a scale was fixed."
>
> "The Committee were of the view that the amount spent over the purchase of articles was heavy and extravagant, that suitable rules might be framed to see that they were given reasonable but not excessive comforts at a reasonable cost. So far as improvements to private buildings were concerned, the question of recovery of amount already spent

(ಶ್ರೀ ಎಸ್. ಗೋಪಾಲಗೌಡ)

may be examined and the Committee desires a fuller report regarding the authority responsible for incurring the expenditure and details of amounts spent. The Committee felt that it is objectionable to spend for improvement works over private buildings out of the public funds."

ಇದಕ್ಕೆ ವಸ್ತುಗಳನ್ನು ತರಿಸಿಕೊಳ್ಳುವಾಗ ಮತ್ತು ಖರ್ಚು ಮಾಡುವಾಗ ನಿಗದಿಯಾದ ಹಣವನ್ನು ಗೊತ್ತು ಮಾಡದೆ ಹೋದರೆ ಲೆಕ್ಕ ಮೀರಿ ಖರ್ಚು ಮಾಡುವ ಸಂದರ್ಭಗಳಿರುತ್ತವೆ. ಆ ಅಭಿಪ್ರಾಯವನ್ನು ಸಮಿತಿಯವರು ಈ ರೀತಿಯಾಗಿ ತಿಳಿಸಿದ್ದಾರೆ.

ಇನ್ನು ಸತ್ಯಾಗ್ರಹಗಳು ನಡೆದಕಾಲದಲ್ಲಿ ಪೋಲೀಸು ಇಲಾಖೆ, ಜೈಲು ಇಲಾಖೆ ಇತ್ಯಾದಿ ಇಲಾಖೆಗಳಲ್ಲಿ ಖರ್ಚು ಮಾಡುವುದುಂಟು. ಅಂಥ ಸಂದರ್ಭದಲ್ಲಿ ಅನೇಕ ಖರ್ಚುಗಳಿಗೆ ಯಾವ ವೌಚರೂ ಇಲ್ಲ, ಹಣವನ್ನು ಸರ್ಕಾರ ಕೊಡಬೇಕಾಗಿ ಬಂತು ಎಂದು ಬರೆದಿದ್ದಾರೆ. ಫೈನಾನ್ಷಿಯಲ್ ಸೆಕ್ರೆಟರಿಯವರು ಹೇಳಿರುವುದು ಈ ರೀತಿಯಿದೆ :—

"Financial Secretary.—Vouchers for the expenditure are not there. Either the vouchers should be there or money should be there.

"Chairman.—You purchase foodstuffs for your men in some hotel. Could you not have got the vouchers also?

"I. G. P. of Police.—That is not possible. On emergency duty, policemen will be placed on duty in different places. We give each of them something for their food. He takes his lunch or refreshment in a hotel. How can we get vouchers for that?"

ಆಮೇಲೆ ಸಮಿತಿಯು ಒಂದು ತೀರ್ಮಾನಕ್ಕೆ ಬರುತ್ತದೆ.

"The Committee, while agreeing with the observations of audit, recorded that in future vouchers should be produced for such expenditure and when it was not possible to obtain vouchers in certain cases details of expenditure as required by audit must be furnished."

ಈ ರೀತಿ ಅವರು ಸಲಹೆಯನ್ನು ಕೊಟ್ಟಿದ್ದಾರೆ. ಹೀಗೆ ಈ ವರದಿಯಲ್ಲಿ ಅನೇಕ ಕಡೆ ಇಂಥ ಲೋಪದೋಷಗಳ ಬಗ್ಗೆ ಸಮಿತಿ ಕೂಲಂಕಷವಾಗಿ ಪರಿಶೀಲಿಸಿ ತನ್ನ ಒಂದು ಅಭಿಪ್ರಾಯವನ್ನು ಕೊಟ್ಟಿದೆ. ಈ ಅಭಿಪ್ರಾಯಗಳಲ್ಲಿ ಸೂಚಿಸಿರತಕ್ಕಂಥ ಅನೇಕ ಸಲಹೆಗಳನ್ನು ಸರ್ಕಾರ ಇನ್ನೂ ಕಾರ್ಯಗತ ಮಾಡಿಲ್ಲ. ಈ ವರದಿ ಇಲ್ಲಿ ಪರ್ಯಾಲೋಚನೆಗೆ ಬಂದು ಇತ್ತೀಚೆಗೆ ಮುದ್ರಣವಾಗಿದೆಯೆಂದು ತಿಳಿದಿದ್ದೇನೆ. ಇದಾದ ಮೇಲಾದರೂ ಕೂಡ ಸಾಧ್ಯವಾದ ಮಟ್ಟಿಗೆ ಎಲ್ಲೆಲ್ಲಿ ಈ ಲೋಪದೋಷಗಳನ್ನು ಹೋಗಲಾಡಿಸಬಹುದೋ ಅದರ ಬಗ್ಗೆ ಸರ್ಕಾರದವರು ಸಂಪೂರ್ಣವಾದ ಗಮನವನ್ನು ಕೊಡಬೇಕು ಮತ್ತು ಈ ವರದಿಯಿಂದ ಇನ್ನುಮೇಲಾದರೂ ಈ ರೀತಿಯ ಲೋಪದೋಷಗಳು ಪುನಃ ನಡೆಯದಂತೆ ಸರ್ಕಾರ ಸಂಪೂರ್ಣ ಜವಾಬ್ದಾರಿಯಿಂದ ವರ್ತಿಸುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಪ್ರಾಮಿಸ್‌ಗಳನ್ನು ಸರ್ಕಾರದವರು ಮಾಡಿರುವುದನ್ನು ಕಾರ್ಯರೂಪಕ್ಕೆ ತಂದಿಲ್ಲದಿರುವುದಕ್ಕೆ ಉದಾಹರಣೆ ಕೊಡಿ ಎಂದು ಮಾನ್ಯ ಸಚಿವರು ಕೇಳಿದರು ; ಉದಾಹರಣೆಗಳಿವೆ. ಸಾಮಾನ್ಯವಾಗಿ ಮಂತ್ರಿಗಳು ಪ್ರವಾಸ ಹೋದಾಗ ಅಲ್ಲಿಯ ಪ್ರದೇಶದ ಜನರು ಒಂದು ಆಸ್ಪತ್ರೆ ಬಗ್ಗೆ, ಒಂದು ಸೇತುವೆ ಬಗ್ಗೆ, ಒಂದು ಕಾಸ್‌ವೇ ಬಗ್ಗೆ ಅಥವಾ ಒಂದು ಜಮೀನನ್ನು ಕೊಡುವ ಬಗ್ಗೆ ಕೇಳುವುದು ಸ್ವಾಭಾವಿಕ.. ಈ ರೀತಿ ಕೇಳಿದಾಗ ಅವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರಲಿ ಅಥವಾ ಒಳಪಡದಿರಲಿ, ಸರ್ಕಾರದ ಹಣಕಾಸಿನ ಪರಿಸ್ಥಿತಿ ಅದನ್ನು ಪೂರೈಸುವುದಕ್ಕೆ ತಕ್ಕಹಾಗಿರಲಿ ಅಥವಾ ಇಲ್ಲದಿರಲಿ, ಸಾಮಾನ್ಯವಾಗಿ ನೋಡೋಣ, ಮಾಡಿಸುತ್ತೇವೆ, ಕೊಡುತ್ತೇವೆ, ಆಗಲಿ ವಿಚಾರಿಸುತ್ತೇವೆ, ಇದನ್ನು ಇನ್ನೊಂದು ಸಲ ಬರುವಾಗ ಮಾಡಿಸಿಕೊಡುತ್ತೇನೆ ಎಂದು ಈ ರೀತಿಯಾಗಿ ಹೇಳಿರುವ ಅನೇಕ ದೃಷ್ಟಾಂತಗಳಿವೆ. ಈ ವಿಚಾರ ಈ ವರದಿಯಲ್ಲೂ ನೋಡಬಹುದು. 54 ನೆಯ ಪುಟದಲ್ಲಿ ಆಸ್ಪತ್ರೆ ವಿಷಯ ಹೇಳಿದೆ.

"Then the personnel to man the dispensaries may not be available. In 1950 plans were made to open 63 dispensaries. But till today we have been able to open only 39."

ಎಂದು ಹೇಳಿದೆ. 63 ಆಸ್ಪತ್ರೆಗಳನ್ನು ಪ್ರಾರಂಭಿಸಬೇಕೆಂದು 1950 ರಲ್ಲಿ ಒಂದು ಯೋಜನೆಯನ್ನು ಸರ್ಕಾರದವರು ತಯಾರಿಸಿದರು. ಆ ಯೋಜನೆಯನ್ನು ಇದುವರೆಗೂ ಪೂರ್ಣವಾಗಿ ಸರ್ಕಾರ ಕಾರ್ಯಗತ ಮಾಡಿಲ್ಲ. ಬರೀ 39 ಆಸ್ಪತ್ರೆಗಳನ್ನು ಮಾತ್ರ ಇದುವರೆಗೆ ತೆರೆಯಲಾಗಿದೆ. ಇದು ಹೀಗಾಗಬಾರದಾಗಿತ್ತು. ಈ ಯೋಜನೆಯನ್ನು ಪೂರ್ತಿಯಾಗಿ ಅವರು ಕಾರ್ಯಗತ ಮಾಡಬೇಕಾಗಿತ್ತು. ಇದರಲ್ಲಿ ಒಂದು ಸಮಾಧಾನ ಪಡೆಯಲಾಗಿದೆ.

"The Committee resolved that in future extra grants should not be asked for unless all preliminaries are completed and the Department is in a position to carry out the programme of opening dispensaries or purchase of new equipments."

ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

ಹೀಗೆ ಈ ವರದಿಯಲ್ಲಿ ಅತ್ಯಂತ ಸೂಕ್ಷ್ಮವಾದ ಸಲಹೆಗಳನ್ನು ಮಾಡಿದೆ. ಈ ಸಲಹೆಗಳನ್ನು ಗಮನದ

ಲ್ಲಿಟ್ಟುಕೊಂಡು ಸರ್ಕಾರ ತನ್ನ ಹಣಕಾಸಿನ ವ್ಯವಹಾರವನ್ನು ಸರಿಪಡಿಸಿಕೊಳ್ಳಬೇಕಾದದ್ದು ಸಂಸ್ಥಾನದ ಸಾರ್ವಜನಿಕರ ಹಿತದೃಷ್ಟಿಯಿಂದ ಅತ್ಯಗತ್ಯವಾಗಿದೆ. ಇದರಲ್ಲಿ ಜನರಲ್ ರಿಮಾರ್ಕ್‌ನಲ್ಲಿ 9 ನೆಯ ಪುಟದಲ್ಲಿ, "Disposal of Audit Notes" ಎಂದು ಒಂದು ಪ್ಯಾರ ಇದೆ. ಅದೂ ಕೂಡ ಬಹಳ ಮುಖ್ಯವಾದುದು. ಈ ಆಡಿಟ್ ಇಲ್ಲದಿದ್ದರೆ ಲೆಕ್ಕ ಸರಿಫಡದೆ ಪುನಃ ತೊಂದರೆ ಬರುತ್ತಿತ್ತು.

> "Disposal of Audit Notes.—It was brought to the notice of the Committee that there was considerable delay in dealing with audit notes by the Departments. The Finance Department explained that Government had taken action to issue suitable instructions and had even gone to the extent of stopping the pay of Departmental Officers who did not comply with the requirements of audit. The Committee observes that as belated disposal of audit notes in any form would conceal serious irregularities by lapse of time, the officers should be made aware of their responsibilities and any dilatoriness on the part of departmental officers should be dealt with suitably."

ಎಂದು ಕೂಡ ಅವರು ಅಭಿಪ್ರಾಯ ಪಟ್ಟಿದ್ದಾರೆ. ಈಗ ಒಂದು ಸ್ವತಂತ್ರವಾದ ಆಡಿಟ್ ಇಲಾಖೆಯಿರುವುದರಿಂದ ಆ ಇಲಾಖೆಯವರು ಹಣಕಾಸಿನ ಬಗ್ಗೆ ನಿಷ್ಠುರವಾದ ಕ್ವೆರಿಗಳನ್ನು ಹಾಕಿ ಪ್ರಶ್ನೆಮಾಡಿ ಸೂಕ್ತವಾದ ಸಮಜಾಯಿಷಿ ಬಂದ ಹೊರತು ಹಣ ಡ್ರಾ ಮಾಡುವುದಕ್ಕೆ ಅವಕಾಶವಿಲ್ಲದಿರುವ ಹಾಗೆ ಕಾನೂನು ಕಟ್ಟಳೆ ಇಟ್ಟುಕೊಂಡಿರುವುದರಿಂದ ಒಂದು ರೀತಿಯಲ್ಲಿ ಜನಗಳ ಹಣ ಸಾಕಾದಷ್ಟು ಹಿಡಿತದಿಂದ ಖರ್ಚಾಗುವುದಕ್ಕೆ ಅವಕಾಶವಾಗಿದೆಯೆಂದು ಹೇಳಬಹುದು. ಆದರೆ ಇದು ಇತ್ತೀಚೆಗೆ ಪ್ರಾರಂಭವಾದ ಸಂಸ್ಥೆಯಾಗಿದೆ. ಸಂಸ್ಥಾನದಲ್ಲಿ ಹಣಕಾಸಿನ ಲೆಕ್ಕಗಳು ಹಿಂದಿನಿಂದ ತನಿಖೆಯಾಗದೆ ಈಗ ವರದಿಯಲ್ಲಿರುವ ಹಾಗೆ 1942 ರಿಂದ ಲೆಕ್ಕವಿರುವ ಹಾಗೆಯೇ ಇದ್ದರೆ ಆಗ ಯಾರು ಜವಾಬ್ದಾರರಾಗಬೇಕು ! ಆ ಪರಿಸ್ಥಿತಿ ಬಾರದಿರುವ ಹಾಗೆ ಮಾಡದಿದ್ದರೆ, ಹಳೇ ಲೆಕ್ಕ ಪೆಂಡಿಂಗ್ ಆದರೆ, ಕೊನೆಗೆ ಬರಬೇಕಾದ್ದನ್ನು ಬ್ಯಾಡ್ ಡೆಟ್ಸ್ ಎಂದು ಹೇಳುವ ಅಥವಾ ರೈಟ್ ಆಫ್‌ಮಾಡುವ ಸಂದರ್ಭ ಸಾಧಾರಣವಾಗಿ ಬರುತ್ತದೆ. ಅದಕ್ಕೆ ಅವಕಾಶಕೊಡದ ಹಾಗೆ ಈಗಿನ ಹೊಸ ರಾಜ್ಯಾಂಗದ ಪ್ರಕಾರ ಹಣಕಾಸಿನ ಮೇಲೆ ಶಾಸನ ಸಭೆಗಳಿಗೆ ಸಂಪೂರ್ಣ ಹತೋಟಿಯಿರುವಾಗ ಸರ್ಕಾರದ ಮುಖ್ಯಾಧಿಕಾರಿಗಳ ಮೇಲೂ, ಬ್ಯಾಂಕಿನ ಮುಖಾಂತರ ಈಗ ನಡೆಸುವ ವ್ಯವಹಾರ ಮುಂತಾದುವುಗಳ ಮೇಲೂ ಪೂರ್ಣ ಹತೋಟಿಯಿಟ್ಟುಕೊಳ್ಳುವುದಕ್ಕೆ ಸರ್ಕಾರದವರು ತಕ್ಷಣ ಸೂಕ್ತಕ್ರಮ ಕೈಕೊಳ್ಳಬೇಕು. ಇಲ್ಲದಿದ್ದರೆ, ಈ ಲೆಕ್ಕ ಪತ್ರದ ವ್ಯವಸ್ಥೆ ಇದೇ ರೀತಿಯಲ್ಲಿ ಮುಂದುವರಿಯುವುದರಿಂದ ಹೆಚ್ಚಿನ ಅಪಾಯ ಸಂಸ್ಥಾನದ ಹಣಕಾಸಿಗುಂಟಾಗುತ್ತವೆ ಎಂದು ನಾವು ಭಾವಿಸಬಹುದಾಗಿದೆ.

ಸರ್ಕಾರಕ್ಕೆ ಬೇಕಾದ ಸಾಮಾನುಗಳನ್ನು ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ಕೊಳ್ಳುತ್ತಾರೆ. ಈ ಸಾಮಾನುಗಳು ಗೈರುವಿಲೆಯಾಗಿ ಇತ್ತೀಚೆಗೆ ಕೆಲವು ಕೇಸುಗಳನ್ನು ಕೂಡ ಹಾಕಿದ್ದಾರೆಂದು ಕಂಡು ಬಂದಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ವಾಚ್ ಅಂಡ್ ವಾರ್ಡ್ ಇರುತ್ತದೆ. ವರಾಂಡದಲ್ಲಿ ತಂತಿ ಸಾಮಾನು ಮುಂತಾದವನ್ನು ಹಾಕಿದ್ದೆವು, ಎಲ್ಲೋ ಹೋಗಿದೆ ಎಂದು ಹೇಳುತ್ತಾರೆ. ಹೀಗೆ ಹೇಳುವಾಗ ವಾಚ್ ಅಂಡ್ ವಾರ್ಡ್ ಇರಲಿಲ್ಲವೆ, ಅವರೇನಾದರೂ ಮನೆಯಲ್ಲಿದ್ದರೇ, ಏಕೆ ಹೋಯಿತು ಎಂದು ಸರ್ಕಾರ ಪರಿಶೀಲಿಸಬೇಕು. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ವಸ್ತುಗಳು ಸ್ಟೋರ್ ಕೀಪರ್ ವಶದಲ್ಲಿರುತ್ತವೆ. ಹೀಗೆ ವಿದ್ಯುಚ್ಛಕ್ತಿ ಇಲಾಖೆ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲೂ ಅನೇಕ ಬೆಲೆ ಬಾಳತಕ್ಕ ಪದಾರ್ಥಗಳು ಸ್ಟೋರಿನಲ್ಲಿರುತ್ತವೆ. ಅಂಥ ಸಂದರ್ಭಗಳಲ್ಲಿ ವರಾಂಡದಲ್ಲೋ, ವಾರ್ಡ್‌ನಲ್ಲೋ ಇಟ್ಟು, ತುಕ್ಕು ಹಿಡಿಯುವುದಕ್ಕೆ ಅವಕಾಶಮಾಡಿದರೆ, ದೇಶದ ಸಂಪತ್ತು ನಷ್ಟವಾಗುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ. ಅಂಥ ಏನಾದರೂ ಜವಾಬ್ದಾರಿ ಹೊರಿಸಿದಾಗ ಅಧಿಕಾರಿಗಳು ತಮ್ಮನ್ನು ಆಗಾಗ್ಗೆ ವರ್ಗಾಯಿಸುವುದನ್ನು ನೆಪಮಾಡಿಕೊಂಡು ತಾವು ಛಾರ್ಜು ತೆಗೆದುಕೊಂಡಾಗ ಅಷ್ಟು ಮಾತ್ರವಿತ್ತು ಎಂದೇನೋ ತಮ್ಮ ರಕ್ಷಣೆಗೆ ಬೇಕಾದ ಎವಿಡೆನ್ಸ್ ಕೊಡುತ್ತಾರೆ. ಅನಂತರ ಕಳವಾದ ಮಾಲಿಗೆ ಯಾರಮೇಲಾದರೂ ತಪ್ಪು ಹೊರಿಸಿ ಅದನ್ನು replace ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ.

ಇಂಥದಕ್ಕೆ ಅವಕಾಶ ಇರಬಾರದು. ಯಾವುದೇ ವಸ್ತು,—ಅದು ಸಾರ್ವಜನಿಕ ಸ್ವತ್ತೇ ಆಗಿರಲಿ ಅಥವಾ ಸರ್ಕಾರದ ಸ್ವತ್ತೇ ಆಗಿರಲಿ, ಅದರ ಬಗ್ಗೆ ಸರಿಯಾದ ಬಂದೋಬಸ್ತು ಇರಬೇಕು. ಯಾರಮೇಲೆ ಜವಾಬ್ದಾರಿ ಇರುತ್ತದೆಯೋ ಅವರನ್ನು personal ಜವಾಬ್ದಾರರನ್ನಾಗಿ ಮಾಡಬೇಕೆಂದು ಇದರಲ್ಲಿದೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸಾಮಾನುಗಳನ್ನು ಇಡುವುದಕ್ಕೆ ಸ್ಥಳವೇ ಇಲ್ಲದಿದ್ದರೆ ಏನು ಮಾಡುತ್ತಾರೆ ?

ಶ್ರೀ ಎಸ್. ಗೋಪಾಲಗೌಡ.—ಸ್ಥಳವಿಲ್ಲದೇ ಒಂದು ಸಾಮಾನು ಕೊಂಡುಕೊಳ್ಳುವುದೆಂದರೆ ಅದು ಅವಿವೇಕವಾಗುವುದಿಲ್ಲವೇ ? ಏನು ಮಾಡಬೇಕು, ಎಲ್ಲಿ ಇಡಬೇಕು, ಯಾಕೆ ಕೊಂಡುಕೊಳ್ಳಬೇಕು ಎಂಬ ಜವಾಬ್ದಾರಿ ಇಲ್ಲದಿದ್ದರೆ, ಆ ಪದಾರ್ಥಗಳನ್ನು ಕೊಂಡುಕೊಂಡು ಒಂದು ಕಡೆ ರಾಶಿ ಹಾಕಿದ್ದರೆ, ಅವುಗಳಿಗೆ ಕೊನೆಯಲ್ಲಿ ತುಕ್ಕು ಹಿಡಿದರೆ ಯಾರು ಜವಾಬ್ದಾರರಾಗುತ್ತಾರೆ ? ಎಷ್ಟು community set radio ಕೊಂಡುಕೊಂಡಿರಿ, ಎಷ್ಟು ಉಳಿದಿವೆ, ಎಲ್ಲಿವೆಯೆಂಬುದನ್ನು ಪತ್ತೆ ಹಚ್ಚುವುದು ಕಷ್ಟವಾಗಿದೆ. ಈ ಒಂದು ವ್ಯವಹಾರಕ್ಕೆ ಯಾರು ಕಾರಣರು ? ಇದರಿಂದ ಎಷ್ಟು ಸಾರ್ವಜನಿಕರ ಹಣ ಪೋಲಾಗಿದೆ ! ಹೀಗೆಲ್ಲಾ ಹಣ ಪೋಲಾಗುತ್ತಿರುವುದನ್ನು ಕೇಳುವವರೇ ಇಲ್ಲ. ಅದೇ ಸರ್ಕಾರದ ಬೆನ್ನು ಮೂಳೆಯೆನ್ನಿಸಿರುವ ನಾನ್‌ಗೆಜೆಟೆಡ್ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸಿ ಎಂಬ ಬೇಡಿಕೆ ಸರ್ಕಾರದ ಮುಂದೆ ಹಲವಾರುಬಾರಿ ಬಂದು ಯಾವಾಗ ಕೇಳಿದರೂ ಹೆಚ್ಚಿಸುವುದಕ್ಕಾಗುವುದಿಲ್ಲವೆಂಬ ಉತ್ತರವನ್ನು ಸಿದ್ಧವಾಗಿ ಸರ್ಕಾರದವರು ಹೇಳಿಬಿಡುತ್ತಾರೆ. ಕೊನೆಗೆ, ಆವರ

(ಶ್ರೀ ಎಸ್. ಗೋಪಾಲಗೌಡ.)

ಡಿಯರ್‌ನೆಸ್ ಅಲೋಯನ್ಸನ್ನಾದರೂ ಸಂಬಳದೊಡನೆ merge ಮಾಡಬೇಕೆಂಬ ವಿಚಾರವನ್ನು ಪ್ರಸ್ತಾಪಿಸಿದರೂ, ಅದಕ್ಕೆ ಈ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲ, ಇದಕ್ಕಾಗಿ 6½ ಲಕ್ಷ ರೂಪಾಯಿಗಳ ಖರ್ಚು ಹೊರಬೇಕಾಗುತ್ತದೆ ಎಂಬ ಸಬೂಬು ಹೇಳುತ್ತಾರೆ. ಈ ರೀತಿಯಲ್ಲಿ ಪ್ರತಿವರ್ಷ ಒಂದೊಂದು ಬಾಬಿನಲ್ಲಿಯೂ ಲೆಕ್ಕ ಸಿಕ್ಕದೆ ಇರುವುದನ್ನೂ, ಅಂದಾಜಿಗೆ ಮಿತಿಮೀರಿದ ವೆಚ್ಚವಾಗುವುದನ್ನೂ ಮುತುವರ್ಜಿಯಿಂದ ಉಳಿಸಲು ಪ್ರಯತ್ನಪಟ್ಟರೆ ಸರ್ಕಾರದವರು ವಾಸ್ತವವಾಗಿಯೂ ಈ ನಾನ್‌ಗೆಜೆಟೆಡ್ ನೌಕರರ ಬೇಡಿಕೆಗಳನ್ನು ಸಲ್ಲಿಸಲು ಸಾಧ್ಯವಾಗುತ್ತದೆ ಎಂದು ನಾನು ನಂಬುತ್ತೇನೆ. ಅಲ್ಲದೆ ಹೆಚ್ಚಾಗಿ ಕಾಮಗಾರಿ ಕೈಗೊಂಡು, ಹೆಚ್ಚಾಗಿ ಲಾಭದಾಯಕ ರೀತಿಯಲ್ಲಿ ತಯಾರಾದ ಮಾಲುಗಳ ಮಾರಾಟ ಮಾಡುವ ವ್ಯವಸ್ಥೆಯನ್ನು ನೋಡಿದರೆ ಅದರಿಂದಲೂ ಸಹ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದು. ಈ ದಿನ Consolidated Fund ನಿಂದ ಖರ್ಚು ವೆಚ್ಚಗಳಿಗಾಗಿ ಹಣದ ಹಂಚಿಕೆಯಾಗಿ ಆ ಬಗ್ಗೆ ಬಜೆಟ್ ಒಂದನ್ನು ಈ ಸಭೆಯ ಮುಂದೆ ಮಂಡಿಸಿ ಸಭೆಯ ಅಂಗೀಕಾರ ಪಡೆಯುವುದು ವಾಡಿಕೆಯಾಗಿದೆ. ಆದರೆ, ಇದೇ ಸಮಯದಲ್ಲಿ, ಈ ರೀತಿಯ ಏರ್ಪಾಡಿನಲ್ಲಿ ಲೋಪದೋಷಗಳೇನೆಂಬುದನ್ನು ಕಂಡುಹಿಡಿದು effective ಆಗಿ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಿದೆಯೇ ಎಂಬುದು ನಾವು ಪರಿಶೀಲಿಸಬೇಕಾದ ವಿಚಾರ. ಇದನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಸಚಿವರೇನೋ ಹೇಳಿಬಿಡುತ್ತಾರೆ. ಆದರೆ ಇದರಲ್ಲಿ ಸಾರ್ವಜನಿಕರ ಜವಾಬ್ದಾರಿ ಸಹ ಬಹಳವಾಗಿದೆ. ರಸ್ತೆಗಳ ಕಾಮಗಾರಿ ಕೆಲಸ, ಕೆರೆ ಕಟ್ಟೆಗಳನ್ನು ದುರಸ್ತುಮಾಡುವ ಕೆಲಸ, ಪ್ರಾಜೆಕ್ಟ್‌ಗಳ ಕೆಲಸ—ಹೀಗೆ ನಾನಾ ಕೆಲಸಗಳಿಗೆ ಸಾರ್ವಜನಿಕ ಹಣವನ್ನು ಸರ್ಕಾರ ಇಂದು ಖರ್ಚು ಮಾಡುತ್ತಿದೆ. ಇದರಲ್ಲಿ ಏನಾದರೂ ಹಣದ ದುರುಪಯೋಗವಾಗಿದ್ದರೆ, ಹಣ ಸರಿಯಾಗಿ ಖರ್ಚಾಗದೇ ಇದ್ದರೆ, ಯಾವ ಕಾರ್ಯಕ್ಕಾಗಿ ಹಣ ವಿನಿಯೋಗವಾಗಬೇಕೋ ಅದಕ್ಕೆ ಸಮರ್ಪಕವಾದ ರೀತಿಯಲ್ಲಿ ವಿನಿಯೋಗವಾಗದೇ ಇದ್ದರೆ, ಅಂಥ ಸಂದರ್ಭಗಳನ್ನು ಸಾರ್ವಜನಿಕರು ಸಹ ಅರಿತುಕೊಳ್ಳುವ ವಿಚಾರದಲ್ಲಿ vigilant ಆಗಿದ್ದು ಅವುಗಳನ್ನು ಸರಿಯಾದ ಸಮಯ ಸನ್ನಿವೇಶದಲ್ಲಿ ಸರ್ಕಾರದ ಗಮನಕ್ಕೆ ತರುವುದರಿಂದ ಬಹುಮಟ್ಟಿಗೆ ಸಾರ್ವಜನಿಕರ ಹಣ ಪೋಲಾಗುವುದನ್ನು, ತಡೆಗಟ್ಟಬಹುದು. ಅಂಥ ಸಂದರ್ಭಗಳಲ್ಲಿ ಸರ್ಕಾರದವರೂ ಸಹ ಪೂರ್ಣ ಗಮನವನ್ನು ಕೊಟ್ಟು ತಕ್ಕ ಬಂದೋಬಸ್ತು ಮಾಡುವುದು ಅವರ ಆದ್ಯ ಕರ್ತವ್ಯ. ಎಲ್ಲಿಯವರೆಗೆ ದೇಶದಲ್ಲಿ ಈ ರೀತಿ ಲಕ್ಷಗಟ್ಲೆ, ಕೋಟಿಗಟ್ಲೆ ಹಣ ಖರ್ಚಾಗುತ್ತಿರುವುದರ ಸಾರ್ಥಕತೆ ಆಗುವುದಿಲ್ಲವೋ ಅಲ್ಲಿಯವರೆಗೆ ದೇಶದಲ್ಲಿ ಬಹಳ ಬಡತನವಿರುತ್ತದೆ, ಸರ್ಕಾರದ ವ್ಯವಹಾರಗಳಲ್ಲಿ ಜನತೆಗೆ ನಂಬಿಕೆ ಹೋಗುತ್ತದೆ ಮತ್ತು ಅದರಿಂದ ದುಷ್ಪರಿಣಾಮವುಂಟಾಗಿ ಜನರ ನೈತಿಕಮಟ್ಟ ಸಹ ಬಹಳ ಕಡಿಮೆಯಾಗುತ್ತದೆ. ಇಂಥ ಸಂದರ್ಭಗಳಲ್ಲಿ ಯಾರನ್ನು ತಾನೇ ಜವಾಬ್ದಾರರನ್ನಾಗಿ ಮಾಡಲು ಸಾಧ್ಯ? ಇಂಥ ಕೆಲಸಗಳಿಗೆ ಮುಖಂಡರಾದ ಚೀಫ್ ಇಂಜಿನಿಯರ್ ಜವಾಬ್ದಾರರೆಂದು ಹೇಳೋಣವೇ, ಅಥವಾ ಹಣಕಾಸಿನ ಕಾರ್ಯದರ್ಶಿಯವರನ್ನು ಜವಾಬ್ದಾರರೆಂದು ಹೇಳೋಣವೇ ಅಥವಾ ಹಣಕಾಸಿನ ಮಂತ್ರಿಗಳಮೇಲೆ ಜವಾಬ್ದಾರಿ ಹೊರಿಸೋಣವೇ? ಈ ಜವಾಬ್ದಾರಿ ಹರಿದು ಹಂಚಿಹೋಗಿ ಕೊನೆಯಲ್ಲಿ ಯಾರೊಬ್ಬರಮೇಲೂ ಈ ಜವಾಬ್ದಾರಿ ಹೊರಿಸಲು ಸಾಧ್ಯವಿಲ್ಲದ ಪರಿಸ್ಥಿತಿ ಒದಗುತ್ತದೆ. ಆದಕಾರಣ ಸಾರ್ವಜನಿಕರ ಹಣ ಪೋಲಾಗುವುದನ್ನು ತಡೆಗಟ್ಟಲು ಸರ್ಕಾರದ ವ್ಯವಸ್ಥೆಯೊಡನೆ, ಸಾಮೂಹಿಕ ಸಾರ್ವಜನಿಕ ಜವಾಬ್ದಾರಿಯೂ ಇರಬೇಕು. ಸಾರ್ವಜನಿಕರು ಸಹ ಇದಕ್ಕೆ ನಿಗಾಕೊಟ್ಟು ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಮಂಜೂರಾಗಿದೆ, ಆ ಬಗ್ಗೆ ಎಷ್ಟು ಕೆಲಸ ನಡೆದಿದೆ, ಎಷ್ಟು ಹಣ ಖರ್ಚಾಗಿದೆ ಮತ್ತು ಎಷ್ಟು ಉಳಿದಿದೆಯೆಂಬ ಬಗ್ಗೆ ತೀವ್ರ ಗಮನ ಕೊಟ್ಟು vigilant ಆಗಿದ್ದು ಈ ವಿಚಾರದಲ್ಲಿ ಸರ್ಕಾರಕ್ಕೆ ಸಮಯಕ್ಕೆ ಸರಿಯಾಗಿ ಸಮಾಚಾರಕೊಟ್ಟು ಬಂದೋಬಸ್ತು ವ್ಯವಸ್ಥೆ ಮಾಡಿಸುವುದು ಉತ್ತಮವಾದ ಮಾರ್ಗ. ಸರ್ಕಾರದವರು ಸಹ ಸರಿಯಾದ ರೀತಿಯಲ್ಲಿ ಹಣಕಾಸಿನ ವ್ಯವಸ್ಥೆ ನಡೆಸುವುದಕ್ಕೆ ಸದಸ್ಯರು ಇತ್ತಿರುವ ಸಲಹೆಗಳನ್ನೂ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ ಈ ಬಗ್ಗೆ ಸೂಕ್ತ ಏರ್ಪಾಡು ಮಾಡಬೇಕು.

ಒಬ್ಬ ಸದಸ್ಯರು.—ಇದೇನು ಸಾರ್ವಜನಿಕ ಸಭೆಯೇ ?

ಶ್ರೀ ಎಸ್. ಗೋಪಾಲಗೌಡ.—ಸಾರ್ವಜನಿಕ ಪ್ರತಿನಿಧಿಗಳ ಸಭೆ, ಪ್ರತಿನಿಧಿಗಳೂ ಸರ್ಕಾರದವರೂ ಇಲ್ಲಿ ಸಮಾವೇಶಗೊಂಡು ಸಾರ್ವಜನಿಕರ ಕುಂದುಕೊರತೆಗಳನ್ನು ಪ್ರತಿನಿಧಿಗಳು ಸಭಾಧ್ಯಕ್ಷರ ಮೂಲಕ ಸರ್ಕಾರಕ್ಕೆ ನಿವೇದಿಸಿಕೊಂಡು ಸೂಕ್ತ ಪರಿಹಾರ ಪಡೆಯಲೋಸುಗ ಏರ್ಪಟ್ಟಿರುವ ಸಭೆ. ಸರ್ಕಾರದವರು ದೇಶದ ಅಭಿವೃದ್ಧಿಗಳ ಬಗ್ಗೆ ಖರ್ಚು ಮಾಡುವ ಹಣದ ವಿಚಾರದಲ್ಲಿ ಸಾರ್ವಜನಿಕರ ಜವಾಬ್ದಾರಿ ಸಹ ಬಹಳವಾಗಿದೆಯೆಂಬುದಕ್ಕಾಗಿ ನಾನು ಈ ವಿಚಾರವನ್ನು ಇಷ್ಟು ದೀರ್ಘವಾಗಿ ಪ್ರಸ್ತಾಪಿಸಬೇಕಾಯಿತು.

ಈಗತಾನೇ ಒಂದು ಸಂದರ್ಭದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳು ಬೆಳ್ಳಾರ ಚಿನ್ನದ ಗಣಿಗಾಗಿ 12 ಲಕ್ಷ ರೂಪಾಯಿಗಳು ಖರ್ಚಾದಮೇಲೆ, ಅದರಲ್ಲಿ ಬಂಗಾರವು ಬರುವುದಿಲ್ಲ, ಅದು ಅವಶ್ಯಕವಿಲ್ಲವಾದುದರಿಂದ ಆ ಉದ್ಯಮವನ್ನು ಇನ್ನು ಅಲ್ಲಿ ಕೈಬಿಟ್ಟಂತೆಯೇ ಎಂದು ತಿಳಿಸಿದರು. ಇಂಥ ಉದ್ಯಮಗಳನ್ನು ಕೈಗೊಂಡು ಈ ರೀತಿ ನಷ್ಟ ಹೊಂದುತ್ತಾ ಹೋದರೆ ನಮಗೆ ಎಷ್ಟೋ ನೆರವು ದೊರೆತರೂ, ಕೊನೆಗೆ ಅಮೇರಿಕಾ ಮತ್ತು ರಷ್ಯಾಗಳ ನೆರವು ದೊರೆತರೂ ದೇಶ ಊರ್ಜಿತವಾಗುವುದಿಲ್ಲ, ದೇಶವು ಮತ್ತಷ್ಟು ಬಡತನದಲ್ಲಿ ತೊಳಲಿ ಬಳಲಿ ಅಧೋಗತಿಗೆ ಇಳಿಯುತ್ತದೆ. ಅಲ್ಲದೆ, ಇಂಥ ಉದ್ಯಮದಲ್ಲಿ ಕೈಹಾಕಿ ಅಪಯಶಸ್ಸು ಗಳಿಸಿದ ಸರ್ಕಾರ ಸಹ ಅದರ ಕೆಲಸ ಕಾರ್ಯದಲ್ಲಿ ಅಸಮರ್ಥತೆಯನ್ನೂ ಮತ್ತು ಅಲಕ್ಷ್ಯತೆಯನ್ನೂ ತೋರಿಸಿದ ಹಾಗಾಗುತ್ತದೆ. ಈ ವರದಿಯನ್ನು ಪರಿಶೀಲಿಸಬೇಕಾದರೆ ಮುಖ್ಯವಾಗಿ ಈ ಸಭೆಗೆ ಇರತಕ್ಕ ಗುರುತರ ಜವಾಬ್ದಾರಿ, ಹಣಕಾಸನ್ನು ಯಾವ ರೀತಿ ಖರ್ಚು ಮಾಡಬೇಕು ಮತ್ತು ಯಾವ ಯಾವ ಬಾಬಿಗೆ ಮಂಜೂರು ಮಾಡಬೇಕು ಎಂಬುದು. ಹೀಗಿದ್ದರೂ ಸಹ ಇದುವರೆಗೂ ಈ ವಿಚಾರದಲ್ಲಿ ನಡೆದುಕೊಂಡುಬಂದಿರುವುದು ಬರೀ formality ಆಗಿದೆಯೇ ಹೊರತು ಪೂರ್ಣ ಜವಾಬ್ದಾರಿಯಿಂದ ಈ ಕೆಲಸವನ್ನು ನಿರ್ವಹಿಸಿಲ್ಲ. ನಾನು formality ಎಂದು ಹೇಳುವುದರ ಅರ್ಥವಿಷ್ಟೆ : ಮೊದಲೇ ಬಜೆಟ್ಟನ್ನು ತಯಾರಿಸಿ ಸಭೆಯ ಮುಂದೆ ಸರ್ಕಾರದವರು ಇಡುತ್ತಾರೆ. ಆಗ formal ಆಗಿ ಗ್ರಾಂಟು ಮಂಜೂರು ಮಾಡಬೇಕಾಗುತ್ತದೆ. Aye or Nay ಹೇಳುತ್ತೇವೆ.

Majority ಪಕ್ಷ ಅಧಿಕಾರದಲ್ಲಿರುತ್ತಾರೆ. They will carry. ಆದುದರಿಂದ ಸಾರ್ವಜನಿಕ ಪ್ರತಿನಿಧಿಗಳೆಂದೆನ್ನಿಸಿಕೊಂಡು ಈ ಸಭೆಗೆ ಚುನಾಯಿತರಾಗಿ ಬಂದಿರುವ ನಾವು ಸಾರ್ವಜನಿಕರೇ ಸರ್ಕಾರದ ಯಂತ್ರ ಎಂಬುದನ್ನು ಪೂರ್ಣವಾಗಿ ಅರಿತುಕೊಳ್ಳಬೇಕು. ಸಂಸ್ಥಾನದ ಅಭಿವೃದ್ಧಿಕಾರ್ಯಗಳಿಗೆ ಖರ್ಚುಮಾಡುವ ಹಣಕ್ಕೆ ಒಪ್ಪಿಗೆ ಕೊಡತಕ್ಕದ್ದು ಮುಖ್ಯವಾಗಿ ಈ ಸಭೆ, ಅಂದರೆ ಸಾರ್ವಜನಿಕ ಪ್ರತಿನಿಧಿಗಳಾದ ಈ ಸಭಾಸದಸ್ಯರು. ಇದಕ್ಕಾಗಿ ಸಾರ್ವಜನಿಕರ ಹಣ ಕೋಟಿಗಟ್ಲೆ ಖರ್ಚಾಗುತ್ತದೆ. ಆದರೆ ವಾಸ್ತವವಾಗಿ ನಡೆದಿರತಕ್ಕ ಅಭಿವೃದ್ಧಿ ಕಾರ್ಯಗಳಿಗೆ ಏನೇನು ಮತ್ತು ಇವುಗಳಿಗೆ ಖರ್ಚಾಗಿರುವ ಮೊಬಲಗೆಷ್ಟು ಎಂಬುದನ್ನು ನೋಡಿದರೆ ವಿಷಾದವಾಗುತ್ತದೆ. ಈ ಪರಿಸ್ಥಿತಿಗೆ ಮುಖ್ಯ ಕಾರಣ ಸಾಕಷ್ಟು vigilance ಇಲ್ಲದಿರುವುದು, ಉದ್ದೇಶ ಸಾರ್ಥಕತೆಯಿಂದ ಖರ್ಚಾಗದಿರುವುದು. ಆದುದರಿಂದ ಸರ್ಕಾರ ಈ ವಿಚಾರದಲ್ಲಿ ಪೂರ್ಣ ನಿಗಾ ಕೊಡತಕ್ಕದ್ದು ಅತ್ಯಗತ್ಯ.

ಇನ್ನೊಂದು ಅಂಶವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಭದ್ರಾವತಿಯಲ್ಲಿ Ferro Alloy Plant ಇದೆ. ಅದರ ಬಗ್ಗೆ ಅಲ್ಲಿಯ ಅಧಿಕಾರಿಗಳಲ್ಲಿ ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯ ಬಂತು . . .

Mr. SPEAKER.—That does not come within the purview of this report.

Sri K. HANUMANTHAIYA.—It will come in the next year's report.

ಶ್ರೀ ಎಸ್. ಗೋಪಾಲಗೌಡ.—ಇದನ್ನೂ ವರದಿಯಲ್ಲಿ ಸೇರಿಸಬೇಕಾಗಿತ್ತು. ಏತಕ್ಕಾಗಿ ಇದನ್ನು ಸೇರಿಸಿಲ್ಲವೋ ಗೊತ್ತಿಲ್ಲ.

Mr. SPEAKER.—This report refers to 1950-51. After all, you can just mention one example and come to the point. You cannot completely digress.

ಶ್ರೀ ಎಸ್. ಗೋಪಾಲಗೌಡ.—ನನಗೆ ತಿಳಿದ ಮಟ್ಟಿಗೆ ಭದ್ರಾವತಿ ಕಾರ್ಖಾನೆಯಲ್ಲಿ blast furnace ಬಗ್ಗೆ ಶ್ರೀ ಮುನಿನಂಜಪ್ಪವರು ಪಬ್ಲಿಕ್ ಅಕೌಂಟ್ಸ್ ಸಮಿತಿಯಲ್ಲಿ ವಿವರಣೆ ಕೊಟ್ಟಿದ್ದಾರೆ. ಆದರೆ Ferro Alloy Plant ಬಗ್ಗೆ ಒಂದು ಮಾತು ಸಹ ಪ್ರಸ್ತಾಪ ಮಾಡಿಲ್ಲ.

Mr. SPEAKER—The Hon'ble Member can take another opportunity to ventilate his grievances on that particular point.

SRI S. GOPALA GOWDA.—It is not my personal grievance.

ಈ ವರದಿಯ ಬಗ್ಗೆ ಮಾನ್ಯ ಸದಸ್ಯರುಗಳೆಲ್ಲ ಮಾಡಿರತಕ್ಕ ಅಮೂಲ್ಯ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅವುಗಳ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಪಬ್ಲಿಕ್ ಅಕೌಂಟ್ಸ್ ಸಮಿತಿಯವರ ವರದಿಯನ್ನು ಅನುಮೋದಿಸುತ್ತೇನೆ. ಸಮಿತಿಯವರು ಆಡಳಿತ ವ್ಯವಸ್ಥೆಯ ಬಗ್ಗೆ ಕೂಲಂಕಷವಾಗಿ ವಿಮರ್ಶಿಸಿ ಒಳ್ಳೆಯ ಸಲಹೆಗಳನ್ನು ನೀಡಿರುತ್ತಾರೆಂಬುದು ಈ ವರದಿಯಲ್ಲಿ ಕಾಣುತ್ತದೆ.

ಮೊದಲನೆಯದಾಗಿ, ನಮ್ಮ ದೇಶದಲ್ಲಿ ಹೆಚ್ಚು ಹಣ ಖರ್ಚು ಮಾಡತಕ್ಕದ್ದು ಪಬ್ಲಿಕ್ ವರ್ಕ್ಸ್ ಇಲಾಖೆ. ಪ್ರಾರಂಭದಲ್ಲಿ ಗೊತ್ತು ಗುರಿ ಇಲ್ಲದೆ ಅಂದಾಜು ತಯಾರಾಗುವುದು, ಅನಂತರ ಕೆಲಸ ಪ್ರಾರಂಭಿಸಿದ ಮೇಲೆ ಅದು ಬದಲಾವಣೆ ಹೊಂದಿ, ಕೊನೆಗೆ ಕೆಲಸ ಮುಗಿಯುವ ಕಾಲದಲ್ಲಿ ಮೇಲ್ಪಟ್ಟ ಅಧಿಕಾರಿಗಳ ಮೆಹನತ್ತಿನಿಂದ ಸರ್ಕಾರದಲ್ಲಿ ಮಿತಿಮೀರಿದ ಹಣಕ್ಕೆ ಮಂಜೂರಾತಿ ದೊರಕುವುದು—ಹೀಗೆ ಈ ಇಲಾಖೆಯಲ್ಲಿ ಮಾತ್ರ ಗೊತ್ತುಗುರಿ ಇಲ್ಲದೆ ಹಣ ವ್ಯಯವಾಗುವುದನ್ನು ಸರ್ಕಾರ ಗಮನಿಸಬೇಕಾಗಿದೆ. ಇದನ್ನು ತಪ್ಪಿಸಬೇಕಾದರೆ, ಮೊದಲೇ ಯೋಚನೆ ಮಾಡಿ plan and estimate ತಯಾರು ಮಾಡಬೇಕು. ಇದರಲ್ಲಿ ಮುಂದೆ. ಬದಲಾವಣೆಯೇನಾದರೂ ಆದರೆ plan and estimate ತಯಾರು ಮಾಡಿದವರ ಮೇಲೆ ಪೂರ್ಣ ಜವಾಬ್ದಾರಿ ಹೊರಿಸಿ ಬಹಳ ಎಚ್ಚರಿಕೆಯ ಕಾರ್ಯಕ್ರಮ ಕೈಗೊಂಡರೆ ಈ ಬಗ್ಗೆ ಹಣ ಪೋಲಾಗುವುದನ್ನು ಬಹುಮಟ್ಟಿಗೆ ಉಳಿಸಬಹುದು.

4 P. M.

ಅಲ್ಲದೆ ಈ ಸರ್ಕಾರಿ ಕಾರ್ಖಾನೆಗಳಲ್ಲಿ ಸ್ವಂತವಾಗಿ ಕೆಲಸಮಾಡಿದ್ದರೆ ಎಷ್ಟು ಲಾಭ ಬರುತ್ತಿತ್ತೋ ಅಷ್ಟು ಲಾಭ ಬರತಕ್ಕ ಸ್ಥಿತಿಯನ್ನು ಇಟ್ಟುಕೊಳ್ಳದೆ ಇಲ್ಲಿ ನಷ್ಟವನ್ನೇ ತೋರಿಸುತ್ತಾ ಇದ್ದಾರೆ. ಸಾಧಾರಣವಾಗಿ ಶ್ರೀಮಾನ್ ಬಿ. ಎಂ. ಶ್ರೀನಿವಾಸಯ್ಯನವರು 100—150 ರೂಪಾಯಿಗಳಲ್ಲಿ ಒಂದು ಸೋಪು ಕಾರ್ಖಾನೆಯನ್ನು ಪ್ರಾರಂಭಿಸಿ ದೊಡ್ಡ ದೊಡ್ಡ ಕಾಲೇಜುಗಳು, ಪಾಠಶಾಲೆಗಳನ್ನು ತೆಗೆಯಲು ಧನ ಸಹಾಯ ಮಾಡುವಷ್ಟು ಐಶ್ವರ್ಯವಂತರಾದರು. ಇದಕ್ಕೆ ಕಾರಣವೇನೆಂದರೆ ತಮ್ಮ ಕೈಗಾರಿಕೆ ಯಾವ ರೀತಿ ಅಭಿವೃದ್ಧಿ ಮಾಡಬೇಕು, ಯಾವರೀತಿ ಅದು ನಷ್ಟಕ್ಕೆ ಒಳಗಾಗದಂತೆ ಉಳಿಸಿಕೊಳ್ಳಬೇಕು ಎಂಬುದನ್ನು ತಮ್ಮ ಯೋಚನಾಶಕ್ತಿಯಿಂದ ಯಾವಾಗಲೂ ಗಮನದಲ್ಲಿಟ್ಟುಕೊಂಡು ಕೆಲಸಮಾಡುತ್ತಾ ಇದ್ದರು ಈಗ ಸರ್ಕಾರಿ ಕಾರ್ಖಾನೆಗಳಲ್ಲಿ ಏನಾಗಿದೆ ಎಂದರೆ, ಆ ಕಾರ್ಖಾನೆಗಳಲ್ಲಿರತಕ್ಕ ಅಧಿಕಾರಿಗಳಿಗೆ ತಿಂಗಳ ಕೊನೆ ಆಯಿತು ಎಂದರೆ ಸಂಬಳ ಬರುತ್ತದೆ,. ರೆವಿನ್ಯೂ ಇಲಾಖೆಯಲ್ಲಿ ಕಂದಾಯ ವಸೂಲು ಮಾಡಿದ್ದೋ, ಸೇಲ್ಸ್ ಟ್ಯಾಕ್ಸ್ ವಸೂಲು ಮಾಡಿದ್ದೋ, ವರಮಾನದ ತೆರಿಗೆಯಿಂದ ವಸೂಲು ಮಾಡಿದ್ದೋ ಇಂಥ ಹಣವನ್ನು ತಂದು ಅವರ ಸಂಬಳಕ್ಕೆ ಸುರಿಯುತ್ತಾರೆ. ಹೇಗೆ ಮಾಡಿಕೊಂಡು ಹೋದರೂ ಆಯಿತು, ಯೋಚನೆ ಮಾಡಬೇಕಾಗಿಲ್ಲ. ಚೇರ್ಮನ್ನೋ, ಸೂಪರಿಂಟೆಂಡೆಂಟೋ, ಮ್ಯಾನೇಜರೋ, ಡೈರೆಕ್ಟರೋ ಏನೋ ಎಂದು ಹೆಸರಿಟ್ಟುಕೊಂಡು ಅಲ್ಲಿ ಒಬ್ಬ ಅಧಿಕಾರಿ ಎಂದು ಕುಳಿತುಕೊಂಡು ಜಬರ್‌ದಸ್ತ್ ತೋರಿಸುತ್ತಾ ಇದ್ದರೆ ಸಾಕು. . . .

ಶ್ರೀ ಕೆ. ಹನುಮಂತಯ್ಯ.—ಮಾನ್ಯ ಸದಸ್ಯರು ಗವರ್ನಮೆಂಟ್ ಸೋಪ್ ಫ್ಯಾಕ್ಟರಿಯಿಂದ ಎಷ್ಟು ಲಾಭ ಬಂದಿದೆ ಎಂಬ ವಿಷಯವನ್ನು ತಿಳಿದುಕೊಂಡಿದ್ದಾರೆಯೋ ಎಂದು ಕೇಳುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅದರ ವಿಷಯ ನಾನು ಹೇಳುತ್ತ ಇಲ್ಲ. ಸಾಧಾರಣವಾಗಿ ಸರ್ಕಾರಿ ಕಾರ್ಖಾನೆಗಳಲ್ಲಿ ಇನ್ನೂ ಹೆಚ್ಚಿನ ಲಾಭ ಬರಬೇಕು ಎಂಬ ಉದ್ದೇಶದಿಂದ ಹೇಳುತ್ತಾ ಇದ್ದೇನೆ. ಸರ್ಕಾರಿ ಕಾರ್ಖಾನೆಗಳಲ್ಲಿ ಇತರ ಕಾರ್ಖಾನೆಗಳಿಗಿಂತ. ಹೇಗೆ

(ಶ್ರೀ ಆರ್. ಮುನಿಸ್ವಾಮಯ್ಯ.)

ನಷ್ಟ ಜಾಸ್ತಿಯಾಗುತ್ತಾ ಇದೆ ಎಂಬುದನ್ನು ಹೇಳುತ್ತಾ ಇದ್ದೆ.

ಶ್ರೀ ಕೆ. ಹನುಮಂತಯ್ಯ.—ಯಾವಯಾವುದರಲ್ಲಿ ನಷ್ಟವಾಗುತ್ತಾ ಇದೆ?

ಶ್ರೀ ಆರ್. ಮುನಿಸ್ವಾಮಯ್ಯ.—ಐರನ್ ವರ್ಕ್ಸ್‌ನಲ್ಲಿ.

ಶ್ರೀ. ಕೆ. ಹನುಮಂತಯ್ಯ.—ಐರನ್ ವರ್ಕ್ಸ್ ವಿಷಯ ಮೊದಲೇ ಬಡ್ಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇನೆ. ಶೇಕಡ 7 ಲಾಭ ಬಂದಿದೆ. ಹಾಕಿರುವ ಕ್ಯಾಪಿಟಲ್ 33 ಲಕ್ಷ 45 ಸಾವಿರ ರೂಪಾಯಿಗಳು.

ಶ್ರೀ ಆರ್ ಮುನಿಸ್ವಾಮಯ್ಯ.—ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಷುಗರ್ ಫ್ಯಾಕ್ಟರಿಯಲ್ಲಿ ನಷ್ಟವಾಗುತ್ತಾ ಇದೆ ಎಂದು ಕೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಷುಗರ್ ಫ್ಯಾಕ್ಟರಿಯಲ್ಲಿ ಶೇಕಡ 51 ಸರ್ಕಾರದ ಷೇರು ಇದೆ. ಅದರಲ್ಲಿ ಬರುವಷ್ಟು ಶೇಕಡ ಲಾಭ ಇನ್ನಾವುದರಲ್ಲೂ ಬರುತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಸಿಲ್ಕ್ ಫ್ಯಾಕ್ಟರಿಯಲ್ಲಿ ನಷ್ಟವಾಗುತ್ತಾ ಇದೆ.

ಶ್ರೀ ಕೆ. ಹನುಮಂತಯ್ಯ.—ಅದಕ್ಕೆ ಕಾರಣ ಹೇಳಿದ್ದೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಒಟ್ಟಿನಲ್ಲಿ ಅಧಿಕಾರಿಗಳು ಅದು ತಮ್ಮ ಸ್ವಂತ ಕಾರ್ಖಾನೆ ಆಗಿದ್ದರೆ ಎಷ್ಟು ಶ್ರದ್ಧೆ ವಹಿಸುತ್ತಿದ್ದರೋ ಅಷ್ಟು ಶ್ರದ್ಧೆ ವಹಿಸುತ್ತಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಇದ್ದೇನೆ. ಇದನ್ನು ಸಹ ಒಂದು ರೀತಿಯಲ್ಲಿ ಸರಿಪಡಿಸಬಹುದು ಎಂದು ಕಾಣುತ್ತದೆ. ಈಗ ಕಚ್ಚಾ ಸಾಮಾನುಗಳನ್ನು ತೆಗೆದುಕೊಳ್ಳಬೇಕಾದರೆ book adjustment ಎಂದು ಹೇಳುತ್ತಾರೆ. ಅದನ್ನು ತಪ್ಪಿಸಿ ಸರ್ಕಾರದವರು ನಗದಾಗಿ ಕೊಂಡುಕೊಳ್ಳತಕ್ಕ ಏರ್ಪಾಡು ಮಾಡಿದರೆ ಒಳ್ಳೆಯದು. ಆಯಾ ಇಲಾಖೆಯ ಅಧಿಕಾರಿಗಳಿಗೆ ಒಂದಷ್ಟು ಹಣ ಒದಗಿಸಿ ನಗದಾಗಿ ಸಾಮಾನುಗಳನ್ನು ಕೊಂಡುಕೊಳ್ಳತಕ್ಕ ಏರ್ಪಾಡು ಮಾಡಿದರೆ ಮುಂದೆ ಆಗತಕ್ಕ ನಷ್ಟವನ್ನು ತಪ್ಪಿಸಬಹುದು ಎಂದು ಹೇಳಿ ಸಲಹೆ ಮಾಡುತ್ತೇನೆ.

***Sri J. MOHAMED IMAM** (Jagalur).—Sir, I was a member of the Public Accounts Committee and as a member, I feel glad that the report has been received very well and there is practically unanimity of approval of the report. Sir, at this time, I cannot but recall the services rendered to the Committee by the late Accountant-General Sri Ghatak who passed away only two days ago. We deeply regret this incident and I must at this moment acknowledge the services rendered by him to the Committee and pay a tribute to the valuable help rendered by him. I must also state that but for his co-operation, the Committee would not have given so many suggestions and the Committee itself would not have had so much material before them. He was fearless in his criticism and without fear or favour he brought up before the Committee all the facts for consideration. It is a great pity that he is no longer with us and I pray that his soul may rest in peace. May I request you Sir, on behalf of this House to convey to the members of the bereaved family the sense of grief of this House?

Sri K. HANUMANTHAIYA.—That is my work.

Sri J. MOHAMED IMAM.—I am only making a suggestion. Sir, I will now touch on one or two observations that the Committee has made on the facts brought out by the Accountant-General that many works, important works and works of great magnitude were being carried on without proper estimate and without any sanctioned estimate. In this connection, Sir, I must bring to the notice of this House that estimates are of two kinds and there are two stages of sanction. First of all, there is what is called the administrative sanction, *i.e.*, the Government approves of a certain work being taken up and then further steps including the preparation of estimates and plans would be taken up. The Department is concerned with this stage and it has to prepare detailed estimates and plans and send them for the sanction of the competent authority, whether it be Government or the Chief Engineer or the Superintending Engineer or whoever it may be. But technical sanction must be obtained in time. I agree with Sri T. Mariappa that there are works which cannot await sanction of the competent authority and these works must be carried on.

Sri T. MARIAPPA.—Cannot afford to wait for technical sanction.

Sri J. MOHAMED IMAM.—Of course, Sir, that is only an exception. That cannot be the rule. I do agree with him that in important cases, it cannot await technical sanction, that works may have to be taken up for execution without administrative or technical sanction. But this cannot be the general rule. What is found in this report is that many works have not received technical sanction at all. Although a long period of eight or ten years has elapsed, the concerned Department has not taken the trouble

Regarding the inconvenience pointed out by my friend Sri Srinivasa Iyengár, I think this inconvenience will vanish when the Vidhana Soudha is completed.

Regarding the suggestion that the provisions in the parent Acts should be got printed along with the amendments, I do not know whether such a procedure is prevailing in other States or in the Centre.

Sri A. BHEEMAPPA NAIK.—The same practice is in vogue in the Centre even today. My Hon'ble friends Sri Thimmappa Gowda and others will bear me out.

Sri Kadidal MANJAPPA.—It is reasonable to expect to have the old Acts. We will try to supply the old Acts as far as possible. In the case of the Tenancy (Amendment) Bill, I have already instructed the officers to distribute the available copies among the Members.

Sri A. BHEEMAPPA NAIK.—The practice in the Centre is to print the existing provisions and also how it would read as amended.

Mr. SPEAKER.—I will find out and we shall try to make satisfactory arrangements. So far as providing copies of old Acts, we shall consider.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ನಾನೊಂದು Short-Notice question ಕಳುಹಿಸಿದೆ.

Mr. SPEAKER.—You will receive the communication. Now, Resolutions. The first Resolution stands in the name of Sri C. T. Hanumanthaiya.

NON-OFFICIAL RESOLUTIONS.

No. 1. Appointment of a Scheduled Caste Member to the Public Service Commission.

***ಶ್ರೀ ಸಿ. ಟಿ. ಹನುಮಂತಯ್ಯ** (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಾಗಿದೆ :—

> "ಹಿಂದುಳಿದ ಪಂಗಡದವರ ಸ್ಥಾನಗಳನ್ನು ಭದ್ರಪಡಿಸಲು ಗೆಜಟೆಡ್ ಮತ್ತು ನಾನ್ ಗೆಜಟೆಡ್ ಹುದ್ದೆಗಳಲ್ಲಿ ಸರಿಯಾದ ಪ್ರಾತಿನಿಧ್ಯಗಳು ದೊರಕುವಂತೆ ಮಾಡುವುದಕ್ಕೋಸ್ಕರ ಮೈಸೂರು ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ ಮಂಡಲಿಯಲ್ಲಿ ನಿಮ್ನವರ್ಗಕ್ಕೆ ಸೇರಿದ ಒಬ್ಬರು ಸದಸ್ಯರಿರುವಂತೆ ಏರ್ಪಾಡು ಮಾಡಿಸಿ ಕೊಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಈ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಕೆಲವಾರು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಸ್ವಾಮಿ, ಪಬ್ಲಿಕ್ ಸರ್ವಿಸ್ ಕಮಿಷನ್ ಪ್ರಾರಂಭವಾದಾಗ 19[ಲಕ್ಷ ಹಿಂದುಳಿದ ಜನರಿಗೆ ಒಂದು ಸ್ಥಾನ ಕೊಡುತ್ತಾರೆಂದು ನಾನು ನಂಬಿದ್ದೆ. ಪ್ರಜಾಪ್ರಭುತ್ವ ತತ್ವ ಜಾರಿಗೆ ಬಂದ ಕೂಡಲೇ ಸರ್ಕಾರದವರು ತಕ್ಷಣ ಆ ತತ್ವಕ್ಕನು ಸಾರವಾಗಿ ಹರಿಜನರಿಗೆ ಪ್ರಥಮತಃ ಉತ್ತೇಜನ ಕೊಡುತ್ತಾರೆಂಬದ್ದೆ. ಆದರೆ ಹಾಗೆ ಮಾಡದಿರುವುದರಿಂದ ನನಗೆ ಬಹಳ ಅಸಮಾಧಾನವುಂಟಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ನಿಮ್ನವರ್ಗದವರಿಗೆ ಒಂದು ಸ್ಥಾನ ದೊರೆಯು ಬೇಕಾಗಿತ್ತು, ಹಾಗೆ ದೊರಕಿಸಿಕೊಡದಿರುವುದು ನಮ್ಮ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಂದಿದೆ. ಸಭಾಸದಸ್ಯರೆಲ್ಲರೂ ಇದನ್ನು ಯೋಚನೆಮಾಡಿ ನಮಗೆ ಸ್ಥಾನ ದೊರೆಯದಿದ್ದರೂ ನಾವು ಸಂತೋಷದಂದಿರುವುದನ್ನು ಗಮನಿಸಿ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕು ಎಂದು ಸಲಹೆ ಮಾಡುತ್ತೇನೆ. ದೇಶದಲ್ಲಿ ದೊಡ್ಡ ಜನಾಂಗವೆಂದರೆ

ಒಕ್ಕಲಿಗರು, ಎರಡನೆಯವರು ಆದಿಕರ್ಣಾಟಕರು. ಎರಡನೆಯವರಾದ ನಿಮ್ನ ವರ್ಗದವರಿಗೆ ಸರಿಯಾದ ಸ್ಥಾನಮಾನ ದೊರೆಯದೆ ಅನೇಕ ತೊಂದರೆಗಳಾಗಿವೆ. ಇದನ್ನು ಅನುಭವಿಸುವುದು ಹೇಗೆ? ನಮ್ಮ ಕಷ್ಟ ನಮಗೇ ಗೊತ್ತು. ಈಗಲಾದರೂ ನಮ್ಮ ಕಷ್ಟ ವನ್ನರಿತು ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಒಂದು ಸ್ಥಾನ ನಮ್ಮ ಪಂಗಡದವರಿಗೆ ಮೀಸಲಾಗಿಡಬೇಕು. ಈ ವಿಚಾರವನ್ನು ಅನೇಕ ಸಂದರ್ಭಗಳಲ್ಲಿ ಈ ಸಭೆಯಲ್ಲಿ ಪ್ರಶ್ನೆಗಳ ಮೂಲಕ ಮತ್ತು ಇತರ ಸಂದರ್ಭಗಳಲ್ಲಿ ಸರ್ಕಾರದ ಅವಗಾಹನೆಗೆ ತಂದಿದ್ದರೂ ಇದುವರೆಗೂ ಈ ವಿಚಾರದಲ್ಲೇನೂ ಕ್ರಮ ಕೈಗೊಂಡಿಲ್ಲ. ಈಗಲಾದರೂ ಸರ್ಕಾರದವರು ನಮ್ಮ ಬೇಡಿಕೆಗೆ ಪೂರ್ಣ ಗಮನಕೊಟ್ಟು ಈ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ನಮಗೊಂದು ಸ್ಥಾನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Resolution moved:

> "This Assembly is of the opinion that a provision be made for the appointment of a Depressed Class Member in the Public Service Commission with a view to safeguard their position and also to see that their class is properly represented in both the gazetted and the non-gazetted ranks."

***Sri M. MADIAH** (Nanjangud-Scheduled Castes).—Sir, while supporting the resolution sponsored by the Hon'ble Member Sri C. T. Hanumanthaiya, I would like to offer some remarks on the subject. I am aware of the provision in the Constitution of India that when the Public Service Commission is constituted, the number should be fixed by a Notification by Rajpramukh. So far as Mysore is concerned, Government of Mysore have tendered advice to His Highness the Rajpramukh to fix the number of the Members of the Commission as three. Now the urge is, to have a Depressed Class Member on the Commission. Sir, on behalf of the Scheduled Castes this has been urged on the floor of the Legislature since several years. In spite of assurances given by the members of the Cabinet, who were then functioning as members of the Council, they were not implemented. It was assured at that time that when the Public Service Commission was constituted the claims of the Scheduled Castes would be favourably considered. I am sorry to state that this was not fulfilled when the present Commission was constituted. Whatever may be the reasons, I do not want to comment about the personnel of the present Commission. Members of the present Commission are all able, efficient and they deserve the place they hold, and the communities from which these Members are chosen also deserve this. But the grievance of the Scheduled Castes who form 1/5th of the population of the State remains as it was. Sir, this subject is coming before the Legislature frequently, and during the last Budget Session, if I remember correctly, to a question sponsored by Sri C. T. Hanumanthaiya, the Hon'ble Minister Sri H. Siddaveerappa replied and assured that the question of giving representation to Scheduled Castes in the Commission was under consideration of Government. Perhaps, unless the present Regulation is amended, this could not be done, that is, increasing the number of the members in the Commission. I was just looking into the Article 380 of the Constitution of India, wherein it is clearly stated that nearly half of the members of the Commission should be persons drawn from the officers who have put in a service of not less than ten years. I do not see an officer of the Depressed Class who has put in a service of not less than ten years by virtue of which he can come up to that post. Therefore, Sir, unless the Government make up their mind to amend the regulation, it may not be possible to increase the number. Though there are other methods, I do not want to suggest any other method by which the number of members of the Public Service Commission could be increased or a place given to a representative of the Scheduled Castes in the Commission. I only once again urge that the question should be considered by Government seriously and as early as possible and a member of the Scheduled Castes must be appointed to the Commission. I whole-heartedly support the Resolution, Sir.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಮಾನ್ಯ ಸ್ನೇಹಿತರು ತಂದಿರ ತಕ್ಕಂಥ ಈ ನಿರ್ಣಯ ನಿಮ್ನ ತರಗತಿಯ ಜನಗಳಿಗೆ ಸಂಬಂಧಪಟ್ಟಿದ್ದು. ಆದ್ದರಿಂದ ಇದು ಬಹುಶಃ ಬಹಳ ಪ್ರಾಮುಖ್ಯವಾದುದೆಂದು ನಾನು ಹೇಳಬೇಕಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ ರಚನೆಯಾಗಿ ಈಗಾಗಲೇ ಕೆಲವು ವರ್ಷಗಳಾಗಿವೆ. ಆದರ ವಾಯಿದೆಯು ಮುಗಿಯುವವರೆಗೆ ಈ ಮಧ್ಯೆ ಯಾವ ಅಡೀಷನಲ್

(ಶ್ರೀ ಬಿ. ರಾಚಯ್ಯ.)

ಮೆಂಬರನ್ನು ಕೂಡ ಸೇರಿಸುವುದಕ್ಕಾಗುವುದಿಲ್ಲ, ಈಗ ಸೇರಿಸುವುದು ರಾಜ್ಯಾಂಗಕ್ಕೆ ಬಹುಶಃ ವಿರುದ್ಧವಾಗಿದೆ ಎಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದರೂ ಕೂಡ ಈಗಿರತಕ್ಕಂಥ ಕಮಿಷನ್ನಿನಲ್ಲಿ ನಿಮ್ಮ ತರಗತಿಯವರಿಗೆಷ್ಟು ನ್ಯಾಯ ದೊರಕುತ್ತಿದೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ನಾನು ಒಂದೆರಡು ಉದಾಹರಣೆ ಮುಖಾಂತರ ತಿಳಿಸಬೇಕಾಗಿದೆ. ಸರ್ಕಾರದವರೇನೋ ನಿಮ್ಮ ವರ್ಗದ ಉಮೇದುವಾರರಿಗೆ ಶೇಕಡ 16⅔ ಭಾಗದ ಹುದ್ದೆಗಳನ್ನು ಮೀಸಲಾಗಿಟ್ಟಿರುವುದಾಗಿ ಒಂದು ಆಜ್ಞೆ ಹೊರಡಿಸಿರುತ್ತಾರೆ. ಆದರೆ ಇದು ಏನಿದ್ದರೂ direct recruitment ಗೆ ಮಾತ್ರ ಅನ್ವಯವಾಗುತ್ತದೆಂದೂ promotional appointments ಗೆ ಅನ್ವಯವಾಗುವುದಿಲ್ಲವೆಂದೂ ತಿಳಿದುಬಂದಿದೆ. Direct recruitment ಆಗಿರುವ ಸಂದರ್ಭಗಳಲ್ಲಿಯೇ ಈ ನೀತಿಯನ್ನು ಕೆಲವು ಇಲಾಖಾಧಿಕಾರಿಗಳು ಪರಿಪಾಲಿಸಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ. ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನಲ್ಲಿ ಹೊಸದಾಗಿ ಕೆಲವು appointments ಆಗಿವೆ. ಅದರಲ್ಲಿ ಅನುಸರಿಸಿರುವ ಕ್ರಮ ನೋಡಿದರೆ ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸಿಗೆ ಅನುಸಾರವಾಗಿಲ್ಲದೆ ಅವರ ಇಷ್ಟಬಂದ ಹಾಗೆ ನೇಮಕ ಮಾಡಿಕೊಂಡಿರುವ ಹಾಗಿದೆ. ಉದಾಹರಣೆಗೆ, ನಿಮ್ಮ ವರ್ಗದವರ ಪೈಕಿ ಒಬ್ಬರಿಗಾದರೂ ಡ್ರೈವರ್ ಕೆಲಸ ಆ ಇಲಾಖೆಯಲ್ಲಿ ಸಿಕ್ಕುತ್ತಿಲ್ಲ. ಆ ಕಂಪೆನಿಯಲ್ಲಿಯೇ ಕೆಲಸಮಾಡಿ ಇಲಾಖಾಧಿಕಾರಿಗಳ ಮೆಚ್ಚಿಕೆಗೆ ಪಾತ್ರರಾಗಿದ್ದರೂ ಸಹ ಈ ಕೆಲಸ ಅವರಿಗೆ ದೊರೆಕುತ್ತಿಲ್ಲ. ಇದೇ ರೀತಿ ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವಿಸ್‌ಗಾಗಿ ತಾಲ್ಲೂಕುಗಳಲ್ಲಿ ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರುಗಳನ್ನು ನೇಮಕಮಾಡಿಕೊಳ್ಳುವುದರಲ್ಲಿಯೂ ಸಹ ಹೀಗೆಯೇ ಮಾಡಿರುತ್ತಾರೆ. ಈ ಸಾರಿ ಏಳು ಮಂದಿ ನ್ಯಾಷನಲ್ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳನ್ನು ತೆಗೆದುಕೊಂಡಿರುತ್ತಾರೆ. ಆ ಪೈಕಿ ಒಬ್ಬರಾದರೂ ಡಿಪ್ರೆಸ್ಡ್ ಕ್ಲಾಸ್‌ನವರಿಲ್ಲ. ವಿಧಾನ ಸೌಧ ಕಟ್ಟಡಕ್ಕಾಗಿ ವರ್ಕ್ಸ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ 60 ಜನರನ್ನು ನೇಮಿಸಿಕೊಂಡಿರುತ್ತಾರೆ. ಈ ಕೆಲಸಕ್ಕೆ ಹೋದ ಡಿಪ್ರೆಸ್ಡ್ ಕ್ಲಾಸ್ ಉಮೇದುವಾರರನ್ನು 'ನೀವೇನು ಸರ್ಕಾರದ ಹಣ ಲೂಟಿ ಮಾಡುವುದಕ್ಕೆ ಬಂದಿರುತ್ತೀರಾ' ಎಂದು ಮುಂತಾಗಿ ಪ್ರಶ್ನೆ ಕೇಳಿರುತ್ತಾರೆ. ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ದಫೇದಾರ್, ಕಾನ್‌ಸ್ಟೇಬಲ್‌ಗಳ ಹುದ್ದೆಗಳು ಸಿಕ್ಕುವುದು ಸಹ ಈ ನಿಮ್ಮ ವರ್ಗದವರಿಗೆ ಬಹಳ ಕಷ್ಟವಾಗಿದೆ. ಈ ಬಗ್ಗೆ ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸ್ ಸ್ಪಷ್ಟವಾಗಿದ್ದರೂ ಸಹ ಎಷ್ಟುಮಟ್ಟಿಗೆ ಅದು ಕಾರ್ಯ ರೂಪಕ್ಕೆ ಬಂದಿದೆ ಎಂಬದಕ್ಕಾಗಿ ನಾನು ಈ ಕೆಲವು ದೃಷ್ಟಾಂತರಗಳನ್ನು ಕೊಡಬೇಕಾಯಿತು.

ಇದೇ ರೀತಿ ಮೆಡಿಕಲ್ ಪ್ರೊಬೇಷನರುಗಳನ್ನು ನೇಮಕ ಮಾಡಿಕೊಳ್ಳುವುದರಲ್ಲಿ ಸಹ ಡಿಪ್ರೆಸ್ಡ್ ಕ್ಲಾಸ್‌ಗೆ ಸಂಬಂಧಪಟ್ಟಿರುವ ಶ್ರೀ ಚಾಮರಾಜ್ ಎಂಬವರಿಗೆ 18 ನೆಯ ರ್‍ಯಾಂಕ್ ಆಗಿ ಲಿಸ್ಟ್‌ನಲ್ಲಿ ಹಾಕಿರುತ್ತಾರೆ. ಇವರನ್ನು general test ಗೆ ಒಳಪಡಿಸಿದರೆ ಇವೊತ್ತಿಗೂ ಯಾರಿಗಿಂತಲೂ ಕಡಿಮೆ ಬೀಳುವುದಿಲ್ಲ. ಮೊದಲಿನಿಂದಲೂ ಸಹ ಯಾರಿಗಿಂತಲೂ ಕಡಿಮೆಯಾಗಿರದೇ ಉತ್ತಮ ತರಗತಿಯಲ್ಲಿಯೇ ತೇರ್ಗಡೆಯಾಗಿರುತ್ತಾರೆ. ಹೀಗಿದ್ದರೂ ಸಹ ನಿಮ್ಮ ವರ್ಗದವರಿಗೆ ಸರ್ಕಾರಿ ಹುದ್ದೆಗಳಲ್ಲಿ ಅನ್ಯಾಯವಾಗುತ್ತಿರುವುದು ಕಂಡು ಬರುತ್ತಿದೆ. ಈ ದೃಷ್ಟಿಯಿಂದ ಈ ಬಗ್ಗೆ ಕಂಡು ಬಂದಿರುವ ಲೋಪದೋಷಗಳನ್ನು ತಡೆಗಟ್ಟಿ ತಕ್ಕ ಸೌಕರ್ಯವನ್ನು ಇವರಿಗೆ ಕಲ್ಪಿಸಲು ನಿಮ್ಮ ವರ್ಗದವರೊಬ್ಬರು ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿದ್ದರೆ ಒಳ್ಳೆಯದು. ಈ ಬಗ್ಗೆ ಸರ್ಕಾರದವರು ಬರೀ ಮಾತಿನ ಆಶ್ವಾಸನವನ್ನು ಮಾತ್ರ ಕೊಡದೆ ಕಾರ್ಯರೂಢರಾಗಿ ಈ ನಮ್ಮ ಆಶೆಯನ್ನು ನೆರವೇರಿಸಿ ಕೊಡಬೇಕೆಂದು ಕೋರುತ್ತೇನೆ.

*ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಮಾನ್ಯ ಮಿತ್ರರಾದ ಶ್ರೀ ಸಿ. ಟಿ. ಹನುಮಂತಯ್ಯನವರು ಮಂಡಿಸಿರತಕ್ಕ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಾಗಲೇ ಈ ಮಾನ್ಯ ಸಭೆಯ ಮತ್ತೊಬ್ಬ ಸದಸ್ಯರಾದ ಶ್ರೀ ಮಾದಯ್ಯನವರು ಹಿಂದುಳಿದ ಪಂಗಡದ ಪ್ರಜಾ ಸಂಖ್ಯೆಗೆ ಅನುಗುಣವಾಗಿ ಶೇಕಡ 16⅔ ಭಾಗದಷ್ಟು ಸರ್ಕಾರಿ ನೌಕರಿಗಳನ್ನು ಮೀಸಲಾಗಿಡುವುದು ಎಂದು ತಂದ ನಿರ್ಣಯವು ಈ ಸಭೆಯ ಅಂಗೀಕಾರ ಪಡೆದಿದೆ. ಅಲ್ಲಿಂದ ಇತ್ತೀಚಿಗೆ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಸಹ ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಂಡು ಹುದ್ದೆಗಳ ನೇಮಕದ ಬಗ್ಗೆ ಈ ನಿಯಮವನ್ನು ಅಳವಡಿಸಿಕೊಂಡು ಬಂದಿರುತ್ತಾರೆ. ಆದರೂ ಸಹ ಇದರಲ್ಲಿ ಹಲವು ಕುಂದು ಕೊರತೆಗಳಿವೆ. ಈಗಾಗಲೇ ಈ ವಿಚಾರದಲ್ಲಿ ಕೆಲವು ಉದಾಹರಣೆಗಳನ್ನು ಶ್ರೀ ಬಿ. ರಾಚಯ್ಯನವರು ಕೊಟ್ಟಿರುತ್ತಾರೆ. ಯೂನಿವರ್ಸಿಟಿಗೆ ಸಂಬಂಧಪಟ್ಟ ಹುದ್ದೆಗಳಲ್ಲಿ, ಲೆಕ್ಚರರ್ಸ್‌ಗಳನ್ನು ನೇಮಕ ಮಾಡುವಾಗ ಈ ಕಾನೂನು, ನಿಯಮವನ್ನು ಅನುಸರಿಸುತ್ತಿಲ್ಲ. ಹಿಂದುಳಿದ ಪಂಗಡದ ಹಿತರಕ್ಷಣೆ ಸರ್ವಸಮರ್ಪಕ ರೀತಿಯಲ್ಲಿ ಆಗಲಿ, ಅವರಿಗೆ ಸರ್ಕಾರಿ ಹುದ್ದೆಗಳಲ್ಲಿ ತಕ್ಕ ಸ್ಥಾನಮಾನ ದೊರಕಲಿ ಎಂಬ ಉದ್ದೇಶದಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ಹಿಂದುಳಿದ ಪಂಗಡದ ಪ್ರತಿನಿಧಿ ಇರುವುದು ಅತ್ಯಗತ್ಯವೆಂಬ ದೃಷ್ಟಿಯಿಂದ ನನ್ನ ಮಿತ್ರರು ಈ ನಿರ್ಣಯವನ್ನು ತಂದಿರುತ್ತಾರೆ. ಇದು ಸಾಧುವಾದ ಬೇಡಿಕೆ. ಇದಕ್ಕೆ ಪೂರ್ಣ ಪುರಸ್ಕಾರವನ್ನು ನೀಡಬೇಕೆಂದು ಸರ್ಕಾರದವರನ್ನು ತಮ್ಮ ಮೂಲಕ ಈ ಸಮಯದಲ್ಲಿ ಬೇಡುತ್ತೇನೆ. ಶ್ರೀ ಬಿ. ರಾಚಯ್ಯನವರು ಹೇಳಿದ ಹಾಗೆ, ಅನೇಕ ಇಲಾಖೆಗಳಲ್ಲಿ ಸರ್ಕಾರಿ ಹುದ್ದೆಗಳನ್ನು ಭರ್ತಿಮಾಡುವ ವಿಚಾರದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ರಚಿಸಿರುವ ನಿಯಮವನ್ನು ಪರಿಪಾಲಿಸಿಲ್ಲ. ಕೆಲವು ಪ್ರಾಂತಗಳಲ್ಲಿ—ರಾಜಾಸ್ಥಾನದಲ್ಲಿ—ಕೆಲವು ಹುದ್ದೆಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ಗೆಂದು ಮೀಸಲಾಗಿಟ್ಟಿರುತ್ತಾರೆ. ನಾವು ಸರ್ಕಾರವನ್ನು ಕೇಳಿಕೊಳ್ಳುವುದಾದರೂ, ಈ ನೇಮಕಗಳ ಬಗ್ಗೆ ರಚಿತವಾಗಿರುವ ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ನಮ್ಮ ಪರವಾಗಿ ಒಬ್ಬ ಪ್ರತಿನಿಧಿಗಳು ಇರಲಿ ಎಂದು. ಇದರಿಂದ ಹಿಂದುಳಿದ ಪಂಗಡದ ಹಿತರಕ್ಷಣೆ ಬಹುಮಟ್ಟಿಗೆ ಸಾಧಿಸಲು ಅನುಕೂಲವಿರುತ್ತದೆಯೆಂದು ನಮ್ಮ ಆಶಯ. ರಾಜ್ಯಾಂಗ ಸಂವಿಧಾನದಲ್ಲಿಯೂ ಹಿಂದುಳಿದ ರಕ್ಷಣೆಯ ಬಗ್ಗೆ ಸೂಕ್ತ ನಿಯಮಾವಳಿಗಳನ್ನು ಅಳಪಡಿಸಿದೆ. ಅದಕ್ಕನುಸಾರವಾಗಿ ಈ ನಮ್ಮ ಬೇಡಿಕೆಗೆ ಪೂರ್ಣ ಪುರಸ್ಕಾರವನ್ನು ಕೊಟ್ಟು ಹಿಂದುಳಿದ ಹಿತರಕ್ಷಣೆಯ ಸಲುವಾಗಿ ಆ ಕಮಿಷನ್ನಲ್ಲಿ ನಿಮ್ಮ ವರ್ಗದ ಪ್ರಾತಿನಿಧ್ಯಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು—ದಕ್ಷಿಣ ಅನುಸೂಚಿತ ಜಾತಿಗಳು).—ಸ್ವಾಮಿ, ಈ ಪ್ರಶ್ನೆ ಆಗಿಂದಾಗ್ಗೆ ಪ್ರತಿಸಲವೂ ಶಾಸನ ಸಭೆಯಲ್ಲಿ ಬರುತ್ತಲೇ ಇದೆ. ಇದು ಬಹಳ ಮುಖ್ಯವಾದ ವಿಚಾರ. ಈಗಾಗಲೇ ಕೆಲವು ಮಿತ್ರರು ಹೇಳಿದಂತೆ ಶೇಕಡಾ 16⅔ ರಷ್ಟು ಸರ್ಕಾರಿ ನೌಕರಿಗಳನ್ನು ನಿಮ್ಮ ವರ್ಗದವರಿಗೆ ಮೀಸಲಾಗಿಡಬೇಕೆಂದು ಸರ್ಕಾರಿ ಆಜ್ಞೆ ಸಹ ಆಗಿದೆ. ಆದರೆ ಇದು ಎಷ್ಟರಮಟ್ಟಿಗೆ ಕಾರ್ಯಗತ ಮಾಡಲ್ಪಟ್ಟಿದೆ ಎಂದು ಪ್ರಶ್ನಿಸಿದರೆ ಅದಕ್ಕೆ ಮಾತ್ರ ಸಮಂಜಸ ಉತ್ತರ ಬರುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ, ನಿಮ್ಮ ವರ್ಗದವರಿಗೆ ಶೇಕಡಾ 16⅔ ಭಾಗ ನೌಕರಿಗಳನ್ನು ಮೀಸಲಾಗಿಡಬೇಕೆಂಬ ನಿರ್ಣಯವು ಯಾವಾಗ ಈ ಸಭೆಯಲ್ಲಿ ಅಂಗೀಕೃತವಾಯಿತೋ ಅದು ಕಾರ್ಯಗತವಾಗಬೇಕಾದ ಕಾಲವೆಂದರೆ ಪಬ್ಲಿಕ್ ಸರ್ವಿಸ್ ಕಮಿಷನ್ ಯಾವತ್ತಿನ ದಿನ ಕೆಲಸ ಕಾರ್ಯ ನಿರ್ವಹಿಸಲು ಪ್ರಾರಂಭವಾಯಿತೋ ಆ ದಿನದಿಂದ ಈ ಆರ್ಡರನ್ನು ಅನುಷ್ಠಾನಕ್ಕೆ ತರಬೇಕಾದುದು ಸರ್ಕಾರದ ಜವಾಬ್ದಾರಿ. ಏಕೆಂದರೆ, promotional vacancies ಮತ್ತು ಇತರ ನೌಕರಿಗಳಲ್ಲಿ ಇದುವರೆಗೆ ನಿಮ್ಮ ವರ್ಗದವರಿಗೆ ಏನು ಕೊರತೆ ಯುಂಟಾಗಿದೆಯೋ ಅದನ್ನು ಸರಿಪಡಿಸಬೇಕಾದರೆ ಈ ನಿರ್ಣಯ ಕಾರ್ಯಗತವಾಗಬೇಕಾದುದು ಅತ್ಯಗತ್ಯ. ಈ ಬಗ್ಗೆ ಸಮರ್ಪಕವಾದ ರೀತಿಯಲ್ಲಿ ಕೆಲಸವಾಗುತ್ತಿಲ್ಲವೇ ಎಂಬುದನ್ನು ನೋಡಿಕೊಳ್ಳತಕ್ಕ ನಮ್ಮ ಪ್ರತಿನಿಧಿ ಒಬ್ಬರು ಈ ದಿನ ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ಇಲ್ಲದೇ ಇರುವುದೇ ಒಂದು ದೊಡ್ಡ ಕೊರತೆ ಎಂಬುದು ನಮ್ಮ ಮನಸ್ಸಿಗೆ ಮನದಟ್ಟಾಗಿದೆ. ಈ ನಿರ್ಣಯ ಒಂದಲ್ಲ ಒಂದು ರೂಪದಲ್ಲಿ ಈ ಮಾನ್ಯ ಸಭೆಯ ಮುಂದೆ ಬರುತ್ತಿದೆ. ಅದಕ್ಕೆ, ಕಾಲ ಸನ್ನಿವೇಶ ಅರಿತು ಸೂಕ್ತ ರೀತಿಯ ಕಾರ್ಯಕ್ರಮ ಕೈಗೊಳ್ಳುವ ಭರವಸೆ ಸಹ ಸರ್ಕಾರದಿಂದ ದೊರೆತಿದೆ. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿರುವ ಮೂರು ಮಂದಿ ಸದಸ್ಯರ ಪೈಕಿ ಒಬ್ಬರು ಸರ್ಕಾರಿ ನೌಕರರು ಸಹ ಇರುತ್ತಾರೆ. ರಾಜ್ಯಾಂಗದಲ್ಲಿ ನಮೂದಿತವಾಗಿರುವ ಪ್ರಕಾರ ನಿಮ್ಮ ವರ್ಗದ ಒಬ್ಬ ಪ್ರತಿನಿಧಿಯೂ ಆ ಕಮಿಷನ್ನಲ್ಲಿರುವುದರಿಂದ ಯಾವ ಕೊರತೆ ಈ ದಿನ ಕಂಡು ಬರುತ್ತದೋ ಅದನ್ನು ಪರಿಹರಿಸಿದ ಹಾಗಾಗುವುದಲ್ಲದೆ, ಸರ್ಕಾರಕ್ಕೂ ಈ ಬಗ್ಗೆ ಆಗಿಂದಾಗ್ಗೆ ನಿಮ್ಮ ವರ್ಗದವರಿಂದ ಬರುತ್ತಿರುವ ಒತ್ತಾಯ ಕಡಿಮೆಯಾಗಿ, ಹಿಂದುಳಿದ ಪಂಗಡದವರು ಮುನ್ನುಗ್ಗಲು ಒಂದು ಮಾರ್ಗ ಕಲ್ಪಿಸಿಕೊಟ್ಟ ಹಾಗಾಗುತ್ತದೆ. ಈಗಲಾದರೂ ಸರ್ಕಾರದವರು ಈ ಕಮಿಷನ್‌ಗೆ ಒಬ್ಬ ನಿಮ್ಮ ವರ್ಗದ ಪ್ರತಿನಿಧಿಗಳನ್ನು ನಾಮಕರಣ ಮಾಡಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಸ್ವಾಮಿ, ಇಂದು ನಮ್ಮ ಹರಿಜನ ಮಿತ್ರರು ಈ ಮೂಲಕ ಸರ್ಕಾರದ ಗಮನಕ್ಕೆ ನಿರ್ಣಯದ ರೂಪದಲ್ಲಿ ಸಲ್ಲಿಸಿರುವ ಮನವಿಯಲ್ಲಿ ಸಕಾರಣವಾದ ಕೊರತೆ ಇದೆ ಎಂದು ನನ್ನ ಅಭಿಪ್ರಾಯ. ಈಗ ಈ ವಿಚಾರದಲ್ಲಿ ಬರೀ ಹರಿಜನರಿಗೆ ಮಾತ್ರವೇ ಅಲ್ಲದೆ ಇತರ ಹಿಂದುಳಿದ ಅಲ್ಪ ಸಂಖ್ಯಾತರಿಗೂ ಸಹ ತೊಂದರೆಯಾಗುತ್ತಿದೆ. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ ಎಂಬುದು ಯಾವ ಉದ್ದೇಶದಿಂದ ನಿರ್ಮಾಣವಾಗಿದೆಯೋ ಆ ಉದ್ದೇಶ ಸಾಧನೆ ಸರ್ವಸಮರ್ಪಕ ರೀತಿಯಲ್ಲಿ ನೆರವೇರುವಂತೆ ತಕ್ಕ ರೀತಿಯಲ್ಲಿ ವರ್ತಿಸಬೇಕಾದುದು ಅತ್ಯಗತ್ಯ. ಈಗಾಗಲೇ ಕೆಲವು ಕಡೆಗಳಿಂದ ಆ ಕಛೇರಿಯವರು ನೌಕರಿಗಳಿಗೆ ಹೆಸರುಗಳನ್ನು enlist ಮಾಡುವುದರಲ್ಲಿ ನಾನಾತೆರದ influence ಗೆ ಒಳಗಾಗುತ್ತಾರೆಂಬ ಕೂಗು ಕೇಳಿ ಬರುತ್ತಿದೆ. ಆ ರೀತಿ influence ಗೆ ಅಲ್ಲಿ ಅವಕಾಶವೇ ಇರಬಾರದು. ಆ ರೀತಿ enlist ಮಾಡುವ ಸಂದರ್ಭದಲ್ಲಿ ಯಾರೊಬ್ಬರಶಿಫಾರ್ಸಿಗಾಗಲಿ ಅವಕಾಶ ಇರಬಾರದು. "Nobody should be allowed to bring recommendation. We should be as dictatorial as Stalin himself." ಅನ್ನುವ ಅರ್ಥ ಬರುವ ಹಾಗೆ ಬರೆದಿದ್ದರೆ ಅವರಿಗೆ ಯಾರೂ ಕಾಗದ ಬರೆಯುವ ಹಾಗಿಲ್ಲ. ತಪ್ಪು ಆಗಿದೆ ಎಂದು ಹೇಳುವ ಹಾಗಿಲ್ಲ. ಬೇರೆ ಕಮ್ಯೂನಿಟಿಯವರಿಗೂ ಪ್ರಾತಿನಿಧ್ಯವಿಲ್ಲ ಎನ್ನುವ. . . .

Mr. SPEAKER.—I think it is a well-known principle that personal references to officers working in the Departments of Government who are not in a position to defend themselves, should be avoided. I request Hon'ble Members to avoid all personal references. They are at liberty to make their own demands on the Government.

Sri A. BHEEMAPPA NAIK.—That is why I do not make any reference to any one Member. Because some of my friends wanted some illustration, I made some particular reference. But we do not know what the Public Service Commission is doing to-day. We are not in the know of things as to whether they are following rules or regulations. ಒಂದು ಕಟ್ಟುಪಾಡಿನಲ್ಲಿದ್ದಾರೆ ಅನ್ನುವ ಹಾಗಿಲ್ಲ. ಹರಿಜನರಿಗೆ ಈ ಹೊತ್ತು ಎಷ್ಟು ಅಸಮಾಧಾನವಾಗಿದೆ, ಅದರ ಹತ್ತರಷ್ಟು ಅಲ್ಪಸಂಖ್ಯಾತರಿಗೆ ಅಸಮಾಧಾನವಾಗಿದೆ ಎಂದು ಹೇಳುತ್ತೇನೆ. ಸ್ವಾಮಿ, ಏನೋ ಹಂಚಿಕೆಯಾಗುತ್ತ ಇದೆ ಎಂದು ಜನರು ಮಾತನಾಡುತ್ತಾ ಇದ್ದಾರೆ; ಕಾರಣವೇನೋ ಗೊತ್ತಿಲ್ಲ. ಒಟ್ಟಿನಲ್ಲಿ ಹರಿಜನರಿಗೆ ಈ ಹೊತ್ತು ಯಾವುದಾದರೂ provision ಮಾಡಿ, ಹರಿಜನರ ಪ್ರತಿನಿಧಿ ಅಲ್ಲಿದ್ದರೆ ಅಲ್ಪಸಂಖ್ಯಾತರ ಕಷ್ಟಸುಖ ನೋಡಿಕೊಂಡಾರು ಎನ್ನಿಸುತ್ತದೆ. ಹಾಗೆ ಮಾಡುವುದರಲ್ಲಿ ಅಭ್ಯಂತರವಿಲ್ಲ. ಆರೀತಿ ಪ್ರಾವಿಜನ್ ಮಾಡುವುದಕ್ಕೆ ತೊಂದರೆ ಇದೆ ಎಂದರೆ ಅದು ಹೇಗೆ ಸರಿಮಾಡಬೇಕು ಎಂಬುದನ್ನು ಪರಿಶೀಲನೆಮಾಡಿ. ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ನ್ಯಾಯ ದೊರಕುತ್ತ ಇಲ್ಲ ಎಂಬುದು ನಮ್ಮೆಲ್ಲರ ಗಮನಕ್ಕೂ ಬಂದಿದೆ. ಅದನ್ನು ಸರಿಮಾಡಬೇಕು. ಇಲ್ಲದೇ ಇದ್ದರೆ ಸರ್ಕಾರದವರೇ ಅಧಿಕಾರ ತೆಗೆದುಕೊಂಡು, ಇಂಡಿಯಾ ಸರ್ಕಾರದವರಿಗೆ ಬರೆದು, ತಿಂಗಳಿಗೆ ಒಬ್ಬೊಬ್ಬರಿಗೆ 1½ ಸಾವಿರ ರೂಪಾಯಿಗಳಂತೆ ಕೊಟ್ಟ ದ ರ'ವ್ಯಯವಾಗುತ್ತಿದೆ, ಇದನ್ನು ಮಾಡಿದ ಮಹಾಪಾಪಕ್ಕೆ ಕ್ಷಮೆಬೇಡುತ್ತೇವೆ, ಇದನ್ನು ವಜಾಮಾಡಿ ಎಂದು ಕೇಳಿಕೊಳ್ಳಿ. ಒಬ್ಬ ಪಬ್ಲಿಕ್ ಸರ್ವಿಸ್ ಕಮೀಷನರ್ ಇದ್ದಾಗ ಆಗುತ್ತಿದ್ದ ಕೆಲಸದ 10 ರಷ್ಟು ಭಾಗ ಕೆಲಸ ಕೂಡ ಈಗ ಆಗುತ್ತಿಲ್ಲ ಮತ್ತು ನ್ಯಾಯ ದೊರೆಯುತ್ತಿಲ್ಲ. ಆದ್ದರಿಂದ ದಯವಿಟ್ಟು ಹರಿಜನರಿಗೆ ಇದರಲ್ಲಿ ಅವಕಾಶ ಕೊಡಬೇಕೆಂದು ನನ್ನ ಪ್ರಾರ್ಥನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ನಿರ್ಣಯವನ್ನು ತಂದಿರತಕ್ಕಂಥ ನನ್ನ ಸ್ನೇಹಿತರುಗಳು ಕೂಲಂಕಷವಾಗಿ ವಿವರಣೆಗಳನ್ನು ಕೊಟ್ಟಿದ್ದಾರೆ. ಈ ಪ್ರಶ್ನೆ ಪದೇ ಪದೇ ಈ ಸಭೆಯ ಮುಂದೆ ಬರುತ್ತಾ ಇದೆ ಮತ್ತು ಸರ್ಕಾರದವರು ಅವರಿಗೆ ಸೂಕ್ತ ತೋರಿದ ರೀತಿಯಲ್ಲಿ ಉತ್ತರಕೊಡುತ್ತಾ ಬಂದಿದ್ದಾರೆ. ಹಿಂದಿನ ಬಡ್ಜೆಟ್ ಅಧಿವೇಶನದಲ್ಲಿ ಈ ಪ್ರಶ್ನೆ ಬಂದು ಕೂಲಂಕಷವಾಗಿ ಚರ್ಚೆಮಾಡಿದಾಗ ಒಂದು ಅಷ್ಯೂರೆನ್ಸ್ ಕೊಡುತ್ತೇವೆ ಎಂದು ಹೇಳಿದರೇ ಹೊರತು ಕಾನ್ಸ್ಟಿಟ್ಯೂಷನ್ ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಎಂಬ ನಿರ್ದಿಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಹರಿಜನರಿಗೆ ಈ ವಿಷಯದಲ್ಲಿ ಅನ್ಯಾಯ, ತೊಂದರೆ ಆಗುತ್ತಾ ಇದೆ. ಹೀಗಿರುವಾಗ ಸರ್ಕಾರದ ಅಭಿಪ್ರಾಯವಾದರೂ ಫಲಕಾರಿಯಾಗಿ ಪರಿಣಮಿಸುತ್ತದೆಯೇ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕಾದ ಸಂದರ್ಭ ಈಗ ಬಂದಿದೆ. ಇದನ್ನು ಏಕೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ ಎಂದರೆ ಈಗ ಪಬ್ಲಿಕ್ ಸರ್ವೀಸ್ ಕಮಿಷನ್ನವರು ಒಂದು ವರದಿ ಕೊಟ್ಟಿದ್ದಾರೆ. ನಮಗೆ ಕೊಟ್ಟಿರತಕ್ಕ ವರದಿಯ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಶೇಕಡ 18 ರಿಂದ 20 ರವರೆಗೂ ಎಲ್ಲಾ ಕೇಡರ್‌ನಲ್ಲೂ ಅಪಾಯಿಂಟ್‌ಮೆಂಟ್ ಆಗಬೇಕು ಎಂದು ಹೇಳಿ ಪಟ್ಟಿ ಕೊಟ್ಟಿದ್ದಾರೆ. ಗೆಜೆಟೆಡ್‌ರ್ಯಾಂಕು 1.0, ನಾನ್‌ಗೆಜೆಟೆಡ್‌ರ್ಯಾಂಕು 5.7 ಎಂದು ಪಟ್ಟಿಯಲ್ಲಿ ಇದೆ. ನಮಗೆ ಕಾನೂನು ಇದೆ. ನಿರ್ದಿಷ್ಟವಾದ ಕಾಲದಲ್ಲಿ ಹರಿಜನರ ಅಭಿವೃದ್ಧಿ ಆಗಬೇಕೆಂಬ ತತ್ವವನ್ನು ರಾಜ್ಯಾಂಗದಲ್ಲಿ ಒಪ್ಪಿಕೊಂಡಿದ್ದರೂ ಕೂಡ ಅದು ಯಾವರೀತಿ ಆಗಿದೆ? ಆ ನಿರ್ದಿಷ್ಟವಾದ ಕಾಲದಲ್ಲಿ ಅವರು ಇತರ ಜನಾಂಗದವರ ಮಟ್ಟಕ್ಕೆ ಬರಬೇಕಾದ ಪಕ್ಷದಲ್ಲಿ ಅವರಿಗೆ ಯಾವಯಾವ ರಿಯಾಯಿತಿಗಳನ್ನು, ಅನುಕೂಲಗಳನ್ನು ಕಲ್ಪಿಸಿಕೊಡಬೇಕೋ ಅವನ್ನು ಕಲ್ಪಿಸಿಕೊಡುವುದಕ್ಕೆ ಸರ್ಕಾರದವರು ಇವೊತ್ತಿನವರೆಗೂ ಯೋಚನೆಮಾಡಿದ್ದಾರೋ ಇಲ್ಲವೋ ಎಂದು ನನಗೆ ಶಂಕೆಯಾಗುತ್ತಾ ಇದೆ. ಶ್ರೀಮಾನ್ ಭೀಮಪ್ಪ ನಾಯಕರು ಹೇಳಿದ ಹಾಗೆ, ಈ ಪಬ್ಲಿಕ್ ಸರ್ವಿಸ್ ಕಮಿಷನ್ನಿಂದ ಸಾಕಾದಷ್ಟು ನ್ಯಾಯ ದೊರಕುತ್ತಿಲ್ಲ ಎಂಬ ವಿಷಯವನ್ನು ನಾನೂ ಕೂಡ ಒತ್ತಾಯಪೂರ್ವಕವಾಗಿ ಹೇಳುತ್ತಾ ಇದ್ದೇನೆ. ಸರ್ಕಾರದವರು ಕೆಲವು ಅಪಾಯಿಂಟ್‌ಮೆಂಟ್‌ಗಳನ್ನು ಟೋಕನ್ ಅಪಾಯಿಂಟ್‌ಮೆಂಟ್ ಎಂದು ಇಟ್ಟುಕೊಂಡಿದ್ದಾರೆ. ಅಲ್ಲೂ ಸಹ ಹರಿಜನರಿಗೆ ಸಾಕಾದಷ್ಟು ಸ್ಥಾನ ದೊರಕುತ್ತಿಲ್ಲ. ಶ್ರೀಮಾನ್ ರಾಚಯ್ಯನವರು ಹೇಳಿದ ಹಾಗೆ, 18 ಜನ ಮೆಡಿಕಲ್ ಪ್ರೊಬೇಷನರುಗಳನ್ನು ತೆಗೆದುಕೊಂಡಾಗಲೂ ಸಹ ಅವರ ಪೈಕಿ ಒಬ್ಬರೇ ಒಬ್ಬರು ಇದ್ದ ಹರಿಜನರನ್ನು 18ನೇ ರ್ಯಾಂಕ್‌ನಲ್ಲಿ ಫಿಕ್ಸ್‌ಮಾಡಿದ್ದಾರೆ. ಕೊಡುವುದಕ್ಕೆ ಇಷ್ಟವಿಲ್ಲದೆಯೋ ಏನೋ ಕೊನೆಗೆ ಸೇರಿಸಿದ್ದಾರೋ ಏನೋ ಎಂಬ ಭಾವನೆ ಬಂದೇ ಬರುತ್ತದೆ. 16 2/3% ಸಾಲದು, ಶೇಕಡ 18 ಪ್ರಜಾಸಂಖ್ಯೆಯಮೇಲೆ ನಿಷ್ಕರ್ಷೆಮಾಡಬೇಕು ಎಂದು ಬಹುಶಃ ಇಂಡಿಯಾ ಸರ್ಕಾರದಿಂದ ರೆಫರೆನ್ಸ್ ಬಂದಿರಬಹುದು ಎಂದು ತಿಳಿದು ಕೊಂಡಿದ್ದೇನೆ. ತಾವು ಯಾವುದಕ್ಕೂ ಗಮನಕೊಡದೆ, ನಾವು ಏನಾದರೂ ಕೇಳಿಕೊಂಡದ್ದೇ ಆದರೆ ಪದೇಪದೇ ಇವರ ಕೂಗು ಇದ್ದೇ ಇದೆ. ಎಂದು ತಾವು ಹೇಳುವುದಾದರೆ ನಾವು ಮಾಡುವುದೇನು! ಹರಿಜನರಿಗೆ ಉಂಟಾಗಿರತಕ್ಕ ಅನ್ಯಾಯ ಏನು ಎಂಬುದನ್ನು ನೋಡಿದ ಪಕ್ಷದಲ್ಲಿ ಅವರಿಗೆ ಇರತಕ್ಕ ಸಂಕಟ ತಮಗೆ ನಿಜವಾಗಿಯೂ ಗೊತ್ತಾಗುತ್ತದೆ. ವಿದ್ಯಾವಂತ ನಿರುದ್ಯೋಗಿಗಳು ಹರಿಜನರಲ್ಲಿ ಅನೇಕ ಜನ ಇದ್ದಾರೆ. ಅವರು ನೌಕರಿ ಸಿಕ್ಕದೆ ಬೇಸತ್ತು, ಜಮೀನೇನಾದರೂ ಸ್ವಲ್ಪ ಸಿಕ್ಕರೆ ಅದರಲ್ಲಾದರೂ ಜೀವನ ಮಾಡಿಕೊಳ್ಳೋಣ ಎಂದು ಅದಕ್ಕೆ ಪ್ರಯತ್ನ ಪಟ್ಟರೆ ಅದೂ ಕೂಡ ಸಿಕ್ಕುವುದು ಕಷ್ಟವಾಗಿದೆ.

Mr. SPEAKER.—The present statement is outside the scope of the resolution. You can only urge for the inclusion of a Harijan member in the Public Service Commission.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇನ್ನೊಂದು ವಿಷಯ. ಸರ್ಕಾರದವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಈ ಪರ್ಸೆಂಟೇಜ್ ಫಿಕ್ಸ್ ಮಾಡಿದಮೇಲೆ ಹರಿಜನರಿಗೆ ಅಧಿಕಾರಿಗಳಿಂದ ಸರಿಯಾದ ಟ್ರೀಟ್‌ಮೆಂಟ್ ಸಿಕ್ಕುತ್ತಿಲ್ಲ. ಮುನಿಯಪ್ಪ ಎಂಬ ಎಕ್ಸಿಕ್ಯೂಟೀವ್ ಇಂಜಿನಿಯರವರೊಬ್ಬರ ಹತ್ತಿರ ಹರಿಜನರೊಬ್ಬರು ಹೋಗಿ ಕೆಲಸ ಕೇಳಿದಾಗ. . . . . .

Sri K. HANUMANTHAIYA (Chief Minister).—Sir, as the Hon'ble Speaker rightly remarked, it is better not to refer to individual cases. You may represent one point of view regarding a particular case. There is another point of view. Therefore, whatever you speak will in most cases be one-sided version. Better to speak on general principles rather than quote individual cases.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು ಹರಿಜನರಿಗೆ ಯಾವ ರೀತಿ ಅನ್ಯಾಯವಾಗುತ್ತಿದೆ ಎಂಬುದಕ್ಕೆ ಹೇಳುತ್ತಾ ಇದ್ದೆ— ಆಗಲಿ ಕೆಲಸ ಕೊಡುತ್ತೇನೆ ಎಂದು ಹೇಳಿ, ಆತ ಅಷ್ಟು ದೂರ ಹೋದನಂತರ ವಾಪಸು ಕರೆಸಿ ನೀನು ಯಾವ ಜಾತಿಯವನು ಎಂದು ಕೇಳಿದರೆಂದೂ, ಆದಿಕರ್ಣಾಟಕ ಜಾತಿಯವನು ಎಂದು ಆತ ಹೇಳಿದಾಗ "ಓಹೋ! ಆದಿಕರ್ಣಾಟಕರವನೋ! ನೀವು ಸರ್ಕಾರವನ್ನು ಲೂಟಿ ಮಾಡುವುದಕ್ಕೆ ಬಂದಿದ್ದೀರೋ!" ಎಂದು ಹೇಳಿ ಒತ್ತಾಯಪೂರ್ವಕವಾಗಿ ವಾಪಸು ಕಳುಹಿಸಿದರಂತೆ. ಈ ರೀತಿ ಅನ್ಯಾಯವಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದನ್ನು ಏಕೆ ಹೇಳುತ್ತೇನೆ ಎಂದರೆ, ವಿದ್ಯಾವಂತರಾದರೂ ಅಧಿಕಾರಕ್ಕೆ ಬರಬೇಕಾದರೆ, ನೌಕರಿ ಪಡೆಯಬೇಕಾದರೆ ಎಷ್ಟು ಕಷ್ಟವಿದೆ ಎನ್ನುವುದಕ್ಕೆ, ಇದನ್ನು ಹೇಳದೇ ವಿಧಿಇಲ್ಲ. ತಾವು ಅದನ್ನು ಒಪ್ಪಿಕೊಳ್ಳಿ, ಬಿಡಿ; ಹೇಳುವುದನ್ನು ಹೇಳುತ್ತೇನೆ, ಒಪ್ಪಿಕೊಳ್ಳಲೇಬೇಕು ಎಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ಈ ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ನಮ್ಮ ಪ್ರತಿನಿಧಿ ಇದ್ದ ಪಕ್ಷದಲ್ಲಿ ನಮಗೆ ಅನ್ಯಾಯವಾಗುವುದಕ್ಕೆ ಅವಕಾಶವಿಲ್ಲ. ಅವರು ಸಂಪೂರ್ಣವಾಗಿ ನಮಗಿರತಕ್ಕ ಕಷ್ಟಸುಖಗಳನ್ನು ಎತ್ತಿ ಹಿಡಿಯುತ್ತಾರೆ ಎಂಬ ಭರವಸೆ ಇರುವುದರಿಂದಲೂ ಮತ್ತು ಕಾನ್ಸ್ಟಿಟ್ಯೂಷನ್ ಪ್ರಾವಿಜನ್‌ನಂತೆ ಇವರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂಬ ಕಡ್ಡಾಯವಿರುವುದರಿಂದಲೂ ಈ ವಿಷಯದಲ್ಲಿ ಸರ್ಕಾರದವರು ತೀವ್ರ ಗಮನ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಈಗ ನನ್ನ ಹಿಂದೆ ಮಾತ

ನಾಡಿದಂಥ ಮಾನ್ಯ ಸದಸ್ಯರೂ ಕೂಡ ಸ್ವಾರಸ್ಯವಾಗಿಯೂ ಮತ್ತು ವ್ಯಸನಕರವಾಗಿಯೂ ಭಾಷಣ ಮಾಡಿದ್ದಾರೆ. ತಾವು ಈ ಸಭೆಯಲ್ಲಿ ಧರ್ಮರಾಯರಂಥ ಅಧ್ಯಕ್ಷರಾಗಿದ್ದೀರಿ. ತಾವು ಅನುಮತಿ ಕೊಟ್ಟರೆ ಒಂದು ಗಾದೆ ಹೇಳಿ ಕುಳಿತುಕೊಳ್ಳಬೇಕೆಂದು ಇದ್ದೇನೆ. ಈಗ ತಾನೆ ಮಾತನಾಡಿದಂಥ ಮಾನ್ಯ ಸದಸ್ಯರು ಈ ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ಹರಿಜನರಿಗೆ ಒಂದು ಸ್ಥಾನ ಬೇಕು ಎಂದು ಹೇಳಿದರು. ಇದು ತುಂಬ ನ್ಯಾಯವಾಗಿದೆ. ಅದು ಹೇಗೆ ಎನ್ನುವುದಕ್ಕೆ ಒಂದು ಗಾದೆ ಹೇಳಬೇಕಾಗಿದೆ. ಕೈವಾರ ನಾರಾಯಣಪ್ಪನವರು ಬರೆದಿದ್ದು. ತಮ್ಮ ಮತ್ತು ಸಭೆಯ ಅನುಮತಿ ತೆಗೆದುಕೊಂಡು ಹೇಳಬೇಕೆಂದಿದ್ದೇನೆ.

ಅಧ್ಯಕ್ಷರು.—ಅದು ವಿಷಯಕ್ಕೆ ಸಂಬಂಧಪಟ್ಟಿದ್ದಾದರೆ ಹೇಳಿ. (ನಗು !)

ಶ್ರೀ ವಿ. ಆರ್. ನಾಯ್ಡು.—ತಾವು ಯಾರೂ ಕೋಪಿಸಿಕೊಳ್ಳಬಾರದು, ಕೈವಾರ ನಾರಾಯಣಪ್ಪನವರು "ಲಿಂಗಕ್ಕೆ ಬಂತು ಸಂಪತ್ತು, ನೇಗಿಲಿಗೆ ಬಂತು ದೌಲತ್ತು, ಇದನ್ನರಿಯದವರಿಗೆ ವಿಪತ್ತು, ಇದೇ ಮೈಸೂರು ಕಿಸ್ಮತ್ತು" ಎಂದು ಹೇಳಿದ್ದಾರೆ. ಯಾರೂ ತಪ್ಪು ತಿಳಿದುಕೊಳ್ಳಬಾರದು. ಹಿಂದೆ ವಿಜಯನಗರ ಸಾಮ್ರಾಜ್ಯ ಕಟ್ಟಲು ನಾಯ್ಡುಗಳೇ ಕಾರಣ ಎಂದು ಹೇಳುತ್ತೇನೆ. (ನಗು !) ಇದು ಒಂದು ಬಹಳ ಸಂತೋಷದ ವಿಷಯ. ಶ್ರೀ ಸಿ ಟಿ. ಹನುಮಂತಯ್ಯನವರು ಹೇಳುವಂತೆ, ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ಹರಿಜನರ ಪರವಾಗಿ ಒಬ್ಬಿಬ್ಬರು ಸದಸ್ಯರನ್ನು ನೇಮಕ ಮಾಡುವುದಾದರೆ ಅದರಿಂದ ನಮಗೂ ಸಹ ಸ್ವಲ್ಪ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕು ನಿಜ. ನಾವೆಲ್ಲರೂ ಸೇರಿ ಹಿಂದೆ ಸಾಮ್ರಾಜ್ಯ ಕಟ್ಟಿದವರು.

ಅಧ್ಯಕ್ಷರು.—ಅದು ಇದಕ್ಕೆ ಸಂಬಂಧಪಟ್ಟದ್ದಲ್ಲ, ಬೇರೆ ಸಂದರ್ಭದಲ್ಲಿ ಹೇಳಿ. (ನಗು !)

ಶ್ರೀ ವಿ. ಆರ್. ನಾಯ್ಡು.—ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ನಾಯ್ಡು ಜನಾಂಗಕ್ಕೂ ಕೂಡ ಅನ್ವಯವಾಗುವ ಬೇಕಾದಷ್ಟು ಅಂಶಗಳಿವೆ. ಆದ್ದರಿಂದ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಕೊಟ್ಟದ್ದೇ ಆದಲ್ಲಿ ನಮಗೂ ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಮಾನ್ಯ ಹಿರಿಯರಾದ ಶ್ರೀ ಭೀಮಪ್ಪನಾಯಕರು ಹೇಳಿದಂತೆ, ಪಬ್ಲಿಕ್ ಸರ್ವಿಸ್ ಕಮಿಷನ್ ಇರುವುದರಿಂದ ಎಷ್ಟು ಅನುಕೂಲವೋ ಇಲ್ಲದೇ ಇದ್ದರೂ ಅಷ್ಟೇ ಅನುಕೂಲ. ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

Mr. SPEAKER.—The question has been discussed sufficiently. There are other resolutions to be taken up. We have already taken one hour for this. Arguments are being repeated. Therefore, we shall request the Government to reply.

Sri Kadidal MANJAPPA (Minister for Revenue and Public Wroks).—Mr. Speaker, Sir, I am sure that the Hon'ble Members are convinced about the sincerity of the Government in trying to safeguard the interests of persons belonging to Scheduled Castes. Government is fully alive to the aspirations of the people belonging to the Scheduled Castes. So far as the Public Service Commission is concerned, the constitution of the Public Service Commission is governed by Chapter II and Part 14 of the Constitution. The appointment of the Chairman and the members is made for a definite period and they cannot be removed unless for definite reasons specified in article 317 of the Constitution. The article reads thus :

> "317 (1) Subject to provisions of clause (3), the Chairman or any other member of a Public Service Commission shall only be removed from his office by order of the President on the ground of misbehaviour after the Supreme Court, on reference being made to it by the President, has, on inquiry held in accordance with the procedure prescribed in that behalf under article 145 . . ."

Sri M. CHIKKALINGIAH.—On a point of clarification. ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಈಗಿರುವ ಮೆಂಬರುಗಳನ್ನಾಗಲಿ, ಛೇರ್ಮನ್ನರನ್ನಾಗಲಿ ತೆಗೆಯಿರಿ ಎಂದು ನಾವು ಹೇಳುತ್ತಿಲ್ಲ. ಈಗಿರುವವರ ಜೊತೆಗೆ ಕಮಿಷನ್ ಎಕ್ಸ್‌ಪ್ಯಾಂಡ್ ಮಾಡಿ ಒಬ್ಬ ಅಡಿಷನಲ್ ಮೆಂಬರನ್ನು ನಮ್ಮ ಪಂಗಡದಿಂದ ತೆಗೆದುಕೊಳ್ಳಿ, ಅದಕ್ಕೆ ರಾಜ್ಯಾಂಗದಲ್ಲಿ ಅವಕಾಶವಿದೆ ಎಂದು ನಾವು ಹೇಳಿದ್ದೇವೆ.

Sri Kadidal MANJAPPA.—The strength of the Commission has been prescribed in the Regulation known as Mysore Public Service Commission Regulation, 1950. Half the number should consst of those who have put in certain number of years of Government service. At present, the number is three—two non-official members and one officer. It is evident that they cannot be removed. The only other alternative is, to increase this strength by amending this Regulation. I would request the Hon'ble Members to consider the feasibility of having a Public Service Commission consisting of four members in a small State like Mysore. I would also request the Hon'ble Members to consider the expenditure that will have to be incurred.

Sri M. MADIAH.—The Regulation may be amended and two more

(SRI M. MADIAH.)

members may be included-one from the Scheduled Castes and the other from a minority community.

Sri Kadidal MANJAPPA.—Is it feasible to have a costly machinery as is envisaged by the Hon'ble Member?

Sri A. BHEEMAPPA NAIK.—Is this a costly machinery? Would it be very costly if one more is added?

Sri Kadidal MANJAPPA.—Sir, some of the Hon'ble Members pointed out that the work of the Public Service Commission was not satisfactory and people were not getting justice at the hands of the Commission. Series of accusations were made against the Public Service Commission, but the Commission is not in a position to defend themselves here. Sir, concrete instances must be brought before Government, before such accusations are made. Even now I appeal to Hon'ble Members to give concrete instances where the Commission has gone out of the way and acted against the rules.

Mr. SPEAKER.—An instance was given by Sri Rachaiah about Medical Probationers.

Sri Kadidal MANJAPPA.—He has not understood the position fully in connection with that case. Sir, the Public Service Commission, if I remember correctly, had sent a proposal for appointment of Public Health Probationers and Medical Probationers. One Harijan was included in the list of Health Probationers. Government, while appointing them, transferred them to the list of Medical Probationers. The Public Service Commission had fixed the rank of Medical Probationers. So, naturally, this Harijan became the last in the list. Government referred the matter to the Commission and they said that they were not in a position to fix the rank; this is subject to correction because I do not remember exactly. The matter stands there and it is under the consideration of the Government.

ಶ್ರೀ ಬಿ. ರಾಚಯ್ಯ.—ಇದರಲ್ಲಿ ರ್ಯಾಂಕ್ ನಿಗದಿ ಮಾಡಲು ಏನಾದರೂ ಟೆಸ್ಟ್ ಇಟ್ಟುಕೊಂಡಿದ್ದೀರಾ ಸ್ವಾಮಿ?

Mr. SPEAKER.—The reply is there.

Sri Kadidal MANJAPPA.—I think the usual tests were followed by the Public Service Commission when they sent up their recommendations for the appointment of Health Probationers and Medical Probationers.

ಶ್ರೀ ಬಿ. ರಾಚಯ್ಯ.—ಇನ್ನೊಂದು ಉದಾಹರಣೆ ಕೊಡುತ್ತೇನೆ. ನ್ಯಾಷನಲ್ ಎಕ್ಸ್‌ಟೆನ್ಷನ್ ಸರ್ವಿಸ್‌ಗೆ ಏಳು ಜನರನ್ನು ತೆಗೆದುಕೊಂಡ ಸಂದರ್ಭದಲ್ಲೂ ಸಹ ಅನ್ಯಾಯವಾಗಿದೆ.

Sri Kadidal MANJAPPA.—The Public Service Commission had nothing to do with the appointment of Development Officers for which there is a separate Committee.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಸಿಸ್ಟೆಂಟ್ ಇಂಜಿನಿಯರುಗಳನ್ನು ತೆಗೆದುಕೊಂಡಾಗ 9 ಮತ್ತು 24 ಎಂದು ನಿಗದಿಮಾಡಿರುವುದು ಯಾವ ಆಧಾರದಮೇಲೆ?

Mr. SPEAKER.—Individual cases cannot be referred to and the Hon'ble Minister cannot be expected to know each case and give a reply.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಮೈಸೂರು ಸಂಸ್ಥಾನದಲ್ಲಿ ಹರಿಜನರ ಪೈಕಿ ಎಷ್ಟು ಜನ ಅಸಿಸ್ಟೆಂಟ್ ಇಂಜಿನಿಯರು, ಎಗ್ಜಿಕ್ಯುಟಿವ್ ಇಂಜಿನಿಯರು, ಸೂಪರಿಂಟೆಂಡಿಂಗ್ ಇಂಜಿನಿಯರು ಮತ್ತು ಚೀಫ್ ಇಂಜಿನಿಯರು ಇದ್ದಾರೆ? ಸಿಂಗಲ್ ಗ್ರಾಜುಯೇಟ್ಸ್ ಹೋದಮೇಲೆ ಬಂದ ಡಬ್ಬಲ್ ಗ್ರಾಜುಯೇಟ್ಸ್‌ಗಳನ್ನು ಯಾವ ಆಧಾರದಮೇಲೆ ಚುನಾಯಿಸಿದಿರಿ?

Sri Kadidal MANJAPPA.—They have got certain tests. They interview the candidates, go through the confidential report of the candidates who are already in service. The merit, namely, the marks obtained in the examination, will also be taken into consideration. On the basis of all these tests, the rank is settled just as in the case of other appointments. I do not think that they have followed a different method in the case of a candidate belonging to Scheduled Castes.

Sir, reference was made to the delay in the appointment of four Probationary Assistant Engineers. In accordance with the decision of Government to give representation to the candidates belonging to Scheduled Castes, Government passed an order requesting the Public Service Commission to call for applications for four Probationary Assistant Engineers from amongst the candidates belonging to Scheduled Castes. I am told that the Commission has called for applications and they are going to interview the candidates shortly. There may be some delay, but it is not a ground to presume that there is injustice in the matter of appointment.

Sri M. MADIAH.—I want to know from the Hon'ble Minister as to what has happened to the resolution which was adopted by this House in the matter of appointment of communities which were not adequately represented in Government Service.

Sri Kadidal MANJAPPA.—The resolution referred to by the Hon'ble Member has been sent to the Public Service Commission for being implemented.

ಶ್ರೀ ಕೆ. ಪ್ರಭಾಕರ್.—ಇನ್ನೂ ಪರ್ಯಾಲೋಚನೆ ಮಾಡುತ್ತಿದ್ದೇವೆ, ಸದ್ಯಕ್ಕೆ ಅಡ್ವರ್ಟೈಸ್ ಮಾಡಿದ್ದ ಕಂಡೀಷನ್ಸ್ ವಾಪಸು ತೆಗೆದುಕೊಳ್ಳಿ ಎಂದು ಸರ್ಕಾರದವರು ಬರೆದಿರುವುದು ನಿಜವೆ ?

Mr. SPEAKER.—It is not possible for the Hon'ble Minister to note every case and give suitable replies. This question can be raised at some other time.

Sri K. PRABHAKAR.—I am not referring to any particular appointment. Recently, there were certain conditions attached to the appointment of Depressed Class Officers. Even these conditions are not followed. Then, Government referred the matter to the Public Service Commission. Now we learn that Government is considering the matter of appointing the officers and to withdraw the conditions. I want to know the reason for this from the Government.

Sri K. HANUMANTHAIYA (Chief Minister).—If I may satisfy my friend in this case, to be fair to the Public Service Commission, theirs is not the fault. It is, what is called, representation against representation that caused the delay in the disposal of the matter. We had to send fresh instructions to the Public Service Commission. Therefore, after they received these fresh instructions, they will have to recruit according to these instructions. It would be unjust to blame the Public Service Commission for our own difference of opinion in the matter.

***Sri Kadidal MANJAPPA.**—Sir, it was said that appointments are being shared by certain communities. Here is the annual return of the Public Service Commission for 1951-52. The figures relating to the appointments and the representation of each community is given. Hon'ble Members can satisfy themselves by going through the report.

Mr. SPEAKER.—I want to know whether there are any instances wherein members of the Depressed Classes have been omitted though there were proper applicants.

Sri Kadidal MANJAPPA.—I had occasion to speak to the Chairman of the Public Service Commission. He told me that whenever there was an applicant belonging to Depressed Class with the required qualification, they have not ignored his claim. Then, Sir, it was said that the Public Service Commission was not implementing the decision of the Government to give $16\frac{2}{3}$ per cent of the appointments to the members of the Scheduled Castes. I am told, Sir, that this is being implemented. I will enquire into the matter and satisfy myself. If need be, I have no objection to discuss this matter with the Chairman of the Commission in the presence of some of the Hon'ble Members belonging to Scheduled Castes, because very serious allegations are made.

It was said that in the case of appointments of Lecturers in the University, adequate representation is not being given to Scheduled Castes people though there are qualified candidates. Sir, definite qualifications are prescribed for the appointment of Lecturers, *i.e.*, one should have passed Honours in First or Second Class or one must be First Class graduate securing First or Second Rank. If there are such qualified persons among the candidates belonging to Scheduled Castes, Government will certainly do their best to see that they are appointed. My friend said that minor communities are being ignored. I may point out . . .

Mr. SPEAKER.—May I bring to the notice of the Minister that this particular point is outside the purview of this resolution ? Though the Hon'ble Member has made a statement on that point, I do not think you need reply on that point.

Sri Kadidal MANJAPPA.—I can only submit that some minority communities are more than adequately

(SRI KADIDAL MANJAPPA.)
represented. Without reference to the communities, the figures are there in the report. No doubt it is true that some minority communities are not adequately represented and that it is the duty of the Public Service Commission and of the Government to see that they are adequately represented. Some member said "ಸರ್ಕಾರದವರು ಸೂಕ್ತ ತೋರಿದ ರೀತಿಯಲ್ಲಿ ಭರವಸೆ ಕೊಟ್ಟಿರುತ್ತಾರೆ." The constitutional position is there and we cannot go against the provisions and give our own assurance. I can only submit that whatever has been said on the floor of the House to-day will be borne in mind when the Public Service Commission is next constituted.

ಶ್ರೀ ಸಿ. ಟಿ. ಹನುಮಂತಯ್ಯ.—ನನ್ನ ನಿರ್ಣಯಕ್ಕೆ ಬೆಂಬಲಕೊಟ್ಟಂಥ ಎಲ್ಲ ಮಹನೀಯರಿಗೂ ವಂದಿಸಿ, ಸರ್ಕಾರದವರು ಈ ವಿಚಾರದಲ್ಲಿ ಈ ಸಭೆಯ ಮಾನ್ಯ ಸದಸ್ಯರು ತಿಳಿಸಿದ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಈ ರೀತಿಯ ನಿರ್ಣಯ ಮತ್ತೊಂದು ಬಾರಿ ಈ ಸಭೆಯಲ್ಲಿ ಮಂಡಿಸಲು ಅವಕಾಶವಿಲ್ಲದಂತೆ ತಕ್ಕ ಕಾರ್ಯಕ್ರಮವನ್ನು ಜಾಗ್ರತೆ ಕೈಗೊಳ್ಳುತ್ತಾರೆಂಬ ನಂಬಿಕೆಯ ಮೇಲೆ ನಾನು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The Resolution was, by leave, withdrawn.

Sri R. ANANTARAMAN.—I make a suggestion. Resolution Nos. 2, 11, 23 are all of the same nature and may be taken up together.

Mr. SPEAKER.—Yes.

No. 2—Specification of fixed prices for important crops.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮೀ, ನನ್ನ ನಿರ್ಣಯ ಈ ರೀತಿ ಇದೆ.

> "This Assembly is of the opinion that a fixed rate be specified for important crops grown by the ryots so as to create an incentive in the mind of the agriculturists."

Sri S. SRINIVASA IYENGAR (T. Narasipur).—Sir, is that procedure agreed?

Mr. SPEAKER.—These resolutions cannot be taken up together.

Sri S. SRINIVASA IYENGAR.—Last year there was a ruling in this connection. The resolutions are generally put down according to the order of ballot. A resolution down below cannot therefore be put on the top. They must be taken up in the order of ballot, though some of them refer to the same subject matter. They cannot be clubbed like that.

Mr. SPEAKER.—Yes, members will speak in support of the earlier resolution. They will be given an opportunity to support this resolution.

Sri S. SRINIVASA IYENGAR.—That may be done.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸ್ವಾಮಿ, ರೈತರು ಬೆಳೆದ ಬೆಳೆಗೆ ನಿಗದಿಯಾದ ಬೆಲೆ ಗೊತ್ತುಮಾಡಬೇಕೆಂಬುದೇ ಈ ನಿರ್ಣಯದ ಉದ್ದೇಶ. ರೈತರಿಗೆ, ಮಾರ್ಕೆಟ್ಟಿನಲ್ಲಿ ಈ ದವಸಧಾನ್ಯಗಳ ಬೆಲೆಯು ಏರಿಳಿತ ಯಾವ ರೀತಿ ಆಗುತ್ತದೆ ಎಂಬುದು ಗೊತ್ತಿರುವುದಿಲ್ಲ. ಇಂಥ ಬೆಳೆ ಈ ವರ್ಷ ಹಾಕಿದರೆ ಅದಕ್ಕೆ ಒಳ್ಳೆಯ ಬೆಲೆ ಸಿಕ್ಕಬಹುದೆಂಬ ನಿರೀಕ್ಷಣೆಯ ಮೇಲೆ ರೈತರು ಆ ಬೆಳೆಯನ್ನು ಬೆಳೆಯುತ್ತಾರೆ. ಆದರೆ, ಹಾಗೆ ಬೆಳೆದ ಬೆಳೆ ಮಾರ್ಕೆಟ್ಟಿಗೆ ಬರುವ ವೇಳೆಗೆ ಅದರ ಬೆಲೆ ಇದಕ್ಕೆ ಇದ್ದಹಾಗೆಯೇ ಬದ್ದುಹೋಗುತ್ತದೆ. ಈ ರೀತಿಯಾಗಿ ಯಾವ ಸರ್ಕಾರ ಬಂದರೂ ಸಹ ರೈತರ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಾರೆಯೇ ಹೊರತು ಆ ಉದ್ಧಾರಕಾರ್ಯವನ್ನು ಕಾರ್ಯತಃ ತೋರಿಸುತ್ತಿಲ್ಲವೆಂದೇ ರೈತರಿಗೆ ತೋರುತ್ತಿದೆ. ಏಕೆಂದರೆ, ರೈತರು ಇಂದು ಆಶೆ ಇಟ್ಟುಕೊಂಡು ಬೆಳೆ ಬೆಳೆದು ಅದನ್ನು ಮಾರ್ಕೆಟ್ಟಿಗೆ ತಂದು ಬಲವಾದ ಪೆಟ್ಟು ತಿಂದಿರುವ ಸಂದರ್ಭಗಳು ಹಲವಾರು ಇವೆ. ಉದಾಹರಣೆಗಾಗಿ, commercial crop ಎಂದು ಪರಿಗಣಿಸಲ್ಪಟ್ಟಿರುವ ಹತ್ತಿಯನ್ನು ತೆಗೆದುಕೊಂಡರೆ, ಅದರಲ್ಲಿ ಹೆಚ್ಚು ಹಣ ಸಂಪಾದಿಸಬಹುದೆಂಬ ಆಶೆಯ ಮೇಲೆ ರೈತರು ಬೆಳೆದು ಅದನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋದರೆಂದರೆ, ಹಠಾತ್ತನೆ ಅದರ ದರ ಇಳಿದುಹೋದರೆ ಅದರ ಸಲುವಾಗಿ ನಷ್ಟಹೊಂದುವುದನ್ನು ರೈತರು ಸುಧಾರಿಸಿಕೊಳ್ಳಲು ವರ್ಷಗಟ್ಟಲೆಯಾದರೂ ಸಾಧ್ಯವಿಲ್ಲದೆ ಹೋಗುತ್ತದೆ. ಇದರಂತೆ ರಾಗಿ, ಜೋಳ, ಎಣ್ಣೆ, ಆಲೂಗಡ್ಡೆ, ಹುಣಸೇಹಣ್ಣು, ಇವುಗಳ ಬೆಲೆ ವಿಪರೀತವಾಗಿರುವ ವೇಳೆಯಲ್ಲಿ ರೈತರು ಏನೋ ಒಂದು ಆಶೆ ಇಟ್ಟುಕೊಂಡು ಅವುಗಳನ್ನು ಬೆಳೆದು ಮಾರ್ಕೆಟ್ಟಿಗೆ ತರುವ ವೇಳೆಗೆ ಬೆಲೆಗಳು ಹಠಾತ್ತನೆ ಇಳಿಮುಖವಾಗಿ ಬಿಡುತ್ತವೆ. ಹೀಗಾದರೆ ಅವುಗಳನ್ನು ಕಷ್ಟಪಟ್ಟು ಬೆಳೆದ ರೈತರ ಪಾಡೇನು? ಸರ್ಕಾರದವರು ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅತಿ ಮುಖ್ಯವಾದ ಬೆಳೆಗಳ ವಿಚಾರದಲ್ಲಾದರೂ ನಿರ್ದಿಷ್ಟವಾದ ಬೆಲೆಯನ್ನು ಗೊತ್ತುಪಡಿಸದೇ ಇದ್ದರೆ, ಈ ದಿನ ಸರ್ಕಾರದವರು ರೈತರ ಉದ್ಧಾರಕ್ಕಾಗಿ ಕೆಲಸಮಾಡಬೇಕೆಂಬ ಅವರ ಉದ್ದೇಶ ಸಾರ್ಥಕವಾಗುವುದಿಲ್ಲ. ಈ ಬಗ್ಗೆ ಸರ್ಕಾರದವರು ಒಂದು ಬೋರ್ಡ್ ರಚನೆಮಾಡಿ, ರೈತರು ಬೆಳೆಯುತಕ್ಕ ಮುಖ್ಯ ಬೆಳೆಗಳ ಬಗ್ಗೆ ಬೆಲೆ ನಿಗದಿ ಮಾಡಲು ಸಮಾಲೋಚನೆ ನಡೆಸಿ, ಅಗತ್ಯ ಕಂಡುಬಂದರೆ ಈ ವಿಚಾರದಲ್ಲಿ ಕೇಂದ್ರಸರ್ಕಾರದೊಡನೆ ಸಹ ವ್ಯವಹರಿಸಿ ರೈತಾಪಿಜನರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು-ದಕ್ಷಿಣ).—ಮಾನ್ಯ ಸಭಾಪತಿಯವರೇ, ನಾನು ಈ ನಿರ್ಣಯವನ್ನು ಅಂಗೀಕರಿಸುತ್ತಾ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಕಳೆದ ವರ್ಷ ಘನ ಸರ್ಕಾರದವರು ಬತ್ತದ ಖರೀದಿಯನ್ನು ಗೊತ್ತುಮಾಡಿ, ಹಾಗೆ ನಿಗದಿಯಾದ ಬೆಲೆಗೆ ಬತ್ತವನ್ನು ಕೊಂಡುಕೊಳ್ಳುವುದಾಗಿ ಅವರು ಆಶ್ವಾಸನವನ್ನು ಕೊಟ್ಟರೇ ಹೊರತು ಆ ಮಾತನ್ನು ಸ್ವಲ್ಪ ಕಾಲ ಕಳೆದಮೇಲೆ ಅವರು ನಡೆಸಿಕೊಂಡು ಬರಲಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಈ ದಿವಸ ನಮ್ಮ ದೇಶದಲ್ಲಿ ಹಾಗೂ ಭಾರತ ದೇಶದಲ್ಲಿ ವ್ಯವಸಾಯವೇ ಪ್ರಾಮುಖ್ಯವಾಗಿ ಕಂಡುಬಂದಿರುವಾಗ ವ್ಯವಸಾಯಗಾರರ ಹಿತರಕ್ಷಣೆಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ, ಕೊಡುತ್ತಿಲ್ಲ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಯಾವುದೇ ವಿಚಾರದಲ್ಲಿ ಸರ್ಕಾರದವರು ಕಾನೂನು ಮಾಡಿ ರಕ್ಷಣೆ ಒದಗಿಸಬೇಕಾದರೂ, ರೈತರ ರಕ್ಷಣೆಗೆ ಮೊಟ್ಟಮೊದಲನೆಯ ಗಮನಕೊಡಬೇಕಾದುದು ಅತ್ಯಾವಶ್ಯಕ. ಉದಾಹರಣೆಗೆ, ಕಾರ್ಮಿಕರಿಗೆ, ಕಾರ್ಖಾನೆಗಳ ಕೆಲಸಗಾರರಿಗೆ ರಕ್ಷಣೆಯನ್ನು ಒದಗಿಸಿಕೊಡುವ ವಿಚಾರದಲ್ಲಿ ಕೇಂದ್ರಸರ್ಕಾರದಿಂದ ಹಿಡಿದು ಪ್ರಾಂತ್ಯ ಸರ್ಕಾರದವರೆಗೆ ಈ ಬಗ್ಗೆ ಪೂರ್ಣ ಸಹಕಾರ ದೊರೆತಿದೆ. ಇದೇ ರೀತಿಯ ಸಹಕಾರ ರೈತಾಪಿಜನರ ವಿಚಾರದಲ್ಲಿ ನಡೆದಿಲ್ಲ, ಅಂದರೆ ಅಷ್ಟೇ ತೀವ್ರತೆಯಿಂದ ನಡೆದಿಲ್ಲ. ಈ ರೀತಿ ಕೇಂದ್ರಸರ್ಕಾರದಿಂದ ಹಿಡಿದು ಪ್ರಾಂತ್ಯ ಸರ್ಕಾರದವರೆಗೆ ಹಾಗೆಯೇ ಆಗಿದೆ. ಈ ಬಗ್ಗೆ ರೈತರು ಪಡುತ್ತಿರುವ ಕಷ್ಟವನ್ನು ಸ್ವಲ್ಪಮಟ್ಟಿಗೆ ವಿವರಿಸಬೇಕಾಗಿದೆ. ಕಂಟ್ರೋಲ್ ವ್ಯವಸ್ಥೆ ಇದ್ದ ಕಾಲದಲ್ಲಿ, ಯಥೇಚ್ಛವಾದ ಬೆಲೆ ಇರತಕ್ಕ ಕಾಲದಲ್ಲಿ ದವಸಧಾನ್ಯಗಳ ಮಾರಾಟದ ಬೆಲೆಯನ್ನು ಸರ್ಕಾರದವರು ನಿರ್ಧಾರಗೊಳಿಸಿದ್ದರು. ಅಷ್ಟೇ ಅಲ್ಲದೆ ಈ ಬಗ್ಗೆ ಕಾನೂನುಮಾಡಿ ಕಡ್ಡಾಯವಾಗಿ ಈ ಏರ್ಪಾಡು ನಡೆಯುತ್ತಿತ್ತು. ಹೀಗಿದ್ದೂ, ದವಸಧಾನ್ಯಗಳಿಗೆ ನಾಲ್ಕು ಕಾಸು ರೈತರಿಗೆ ಬರುತ್ತಿದ್ದ ಕಾಲದಲ್ಲಿ ಕಂಟ್ರೋಲ್ ವ್ಯವಸ್ಥೆಯನ್ನು ರದ್ದುಗೊಳಿಸಿದರು. ಈ ದಿವಸ ಈ ರೈತಾಪಿ ಜನರ ಕಷ್ಟನಷ್ಟವನ್ನು ಕೇಳುವವರೇ ಇಲ್ಲ; ಸರ್ಕಾರದವರು ಇವರ ಕೈಬಿಟ್ಟಿರುತ್ತಾರೆ. ಈ ರೀತಿ ಆದರೆ ದೇಶದಲ್ಲಿ ರೈತರ ಉದ್ಧಾರ ಕಾರ್ಯ ಹೇಗೆ ಸಾಧ್ಯ ಎಂದು ಪ್ರಶ್ನಿಸಬೇಕಾಗಿದೆ. ರೈತರು ದೇಶದ ಬೆನ್ನುಮೂಳೆ ಎಂಬುದನ್ನು ಮರೆಯದೆ, ದೇಶದಲ್ಲಿ ಇನ್ನುಮುಂದೆ ಕಳವಳ ಪರಿಸ್ಥಿತಿ ಉಂಟಾಗದೆ ಇರಲು, ಸರ್ಕಾರದವರು ಈ ರೈತರ ಪರಿಸ್ಥಿತಿ ಬಗ್ಗೆ ಅಸಡ್ಡೆ ಮನೋಭಾವ ತಾಳಬಾರದು ಎಂದು ಕೋರುತ್ತೇನೆ. ದವಸಧಾನ್ಯಗಳ ಮಾರಾಟದ ಬೆಲೆಯ ನಿರ್ಧಾರವನ್ನು ಮಾತ್ರ ವರ್ತಕರ ಮತ್ತು ಮಧ್ಯಸ್ಥಗಾರರ ಕೈವಾಡಕ್ಕೆ ಸಿಲುಕಿಸಬಾರದು. ಇದರಿಂದ ರೈತರು ಬಲವಾದ ಪೆಟ್ಟು ತಿನ್ನುತ್ತಾರೆ. ಈ ವಿಚಾರದಲ್ಲಿ ಒಂದು ಉದಾಹರಣೆಯನ್ನು ಕೊಡುವುದುಚಿತವೆಂದು ತೋರುತ್ತದೆ. ಬೆಲ್ಲ ಮಣ ಒಂದಕ್ಕೆ ಕಳೆದ ವರ್ಷ 10-12 ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದರು. ಅದು ಬರಬರುತ್ತಾ ಕಡಿಮೆಯಾಗಿ ಈಗ $2\frac{1}{2}$-3 ರೂಪಾಯಿಗೆ ಇಳಿದು ಬಿಟ್ಟಿದೆಯೆಂದರೆ ಆ ರೈತ ಬದುಕುವುದಾದರೂ ಹೇಗೆ? ಅವನಿಗೆ ರಕ್ಷಣೆಯೇ ಇಲ್ಲ. ವ್ಯವಸಾಯವೇ ಮುಖ್ಯವಾಗಿರತಕ್ಕ ನಮ್ಮ ದೇಶದಲ್ಲಿ ವ್ಯವಸಾಯಾಭಿವೃದ್ಧಿಯ ಬಗ್ಗೆ, ಇದಕ್ಕೆ ಮೂಲಕಾರಣಭೂತರಾದ ರೈತರ ಏಳಿಗೆಯ ಬಗ್ಗೆ ಪೂರ್ಣ ಗಮನವನ್ನು ಸರ್ಕಾರದವರು ಕೊಡಬೇಕಾದುದು ಅತ್ಯಗತ್ಯ. ಹಿಂದೆ ವ್ಯವಸಾಯಸಂಘದ ಒಂದು ಸಮ್ಮೇಳನವಾಗಿ ಅಲ್ಲಿ ಒಂದು ನಿರ್ಣಯ ಸಹ ಪರಿಶೀಲನೆಗೆ ಬಂದಿತ್ತು. ಆಗ ಮಾನ್ಯ ಆಹಾರ ಮಂತ್ರಿಗಳು ವ್ಯವಸಾಯಗಾರರು ಬೆಳೆಯುವ ಕನಿಷ್ಠ ಪರಿಮಿತಿಯನ್ನು ಸರ್ಕಾರದವರು ಗೊತ್ತುಮಾಡಬೇಕೆಂದು ಹೇಳಿದರ . ಈ ವಿಷಯ ಗಮನಾರ್ಹವಾದುದು, ಪ್ರಾಮುಖ್ಯವಾದುದು ಎಂದು ಶ್ರೀನಗರದಲ್ಲಿ ನಡೆದ ವ್ಯವಸಾಯ ಮಂತ್ರಿಗಳ ಸಮ್ಮೇಳನದಲ್ಲಿಯೂ ಸಹ ನಿರ್ಧರವಾಗಿದೆ.

2-30 P.M.

ಸ್ವಾಮಿ, ಇದೇ ರೀತಿಯಾದ ದರವನ್ನು ಇನ್ನು ಮುಂದೂ ಕೊಡುತ್ತಾ ಹೋದರೆ ರೈತ ತನ್ನ ವೃತ್ತಿಯನ್ನೇ ಬಿಡಬೇಕಾಗುತ್ತದೆ ಅಥವಾ ಇನ್ನಾವುದಾದರೂ ಖಾಯಂ ಆಗಿ ಬೆಲೆ ಬರತಕ್ಕ ನಾಲ್ಕು ಕಾಸು ಆಗತಕ್ಕ ಬೆಳೆಯನ್ನು ಹಾಕಬೇಕಾಗುತ್ತದೆ. ಆಗಿನ ಪರಿಸ್ಥಿತಿಯನ್ನು ಯೋಚನೆ ಮಾಡಬೇಕು. ಅವನಿಗೆ ಕನಿಷ್ಠ ಬೆಲೆ ಸಿಕ್ಕುತ್ತದೆ ಎಂಬ ಒಂದು ಭರವಸೆಯನ್ನು ಸರ್ಕಾರದವರು ಕೊಟ್ಟರೆ ಅವನಲ್ಲಿ ಬೆಳೆಯಬೇಕೆಂಬ ಆಸಕ್ತಿ ಇರುತ್ತದೆ ಎಂಬುದನ್ನು ಮೈಸೂರು ಸರ್ಕಾರದವರು ಯೋಚನೆ ಮಾಡಬೇಕು, ಅದಕ್ಕೆ ಒಂದು ಉಪಾಯವನ್ನು ಕಂಡುಹಿಡಿಯಬೇಕು. ನಾನು ಒಂದು ನಿರ್ಣಯವನ್ನು ಕಳುಹಿಸಿದ್ದೆ; ಅದು ಬ್ಯಾಲೆಟ್ ಪ್ರಕಾರ 23ನೆಯ ನಿರ್ಣಯ ಆಗಿದೆ. ಅದರಲ್ಲಿ ಒಂದು ಅಂಶ ಹೇಳಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಆಹಾರ ಧಾನ್ಯಗಳಿಗೆ ಕನಿಷ್ಟ ಬೆಲೆ ಎಷ್ಟಿರಬೇಕೆಂಬುದನ್ನು ಪರಿಶೀಲಿಸಲು ವ್ಯವಸಾಯದಲ್ಲಿ ಆಸಕ್ತಿ ಇರತಕ್ಕ ಖಾಸಗಿ ಜನರ ಒಂದು ಸಮಿತಿಯನ್ನು ಮಾಡಿ, ಅವರಿಂದ ವರದಿಯನ್ನು ತರಿಸಿಕೊಂಡು, ಅದರ ಮೇಲೆ ಸರ್ಕಾರದವರು ಸೂಕ್ತಕಾರ್ಯಕ್ರಮ ಕೈಕೊಂಡು ರೈತರಿಗೆ ಕೂಡಲೆ ಪರಿಹಾರವನ್ನೊದಗಿಸುವ ಏರ್ಪಾಡುಮಾಡಬೇಕೆಂದು ಸೂಚಿಸಿದ್ದೇನೆ. ಇದು ಕೇಂದ್ರಸರ್ಕಾರದ ಮಟ್ಟದಲ್ಲಿ ವಿಚಾರಮಾಡತಕ್ಕ ವಿಷಯವಾಗಿದೆ. ಆದರೂ ಕೂಡ ಸಲಹೆ ಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಮೈಸೂರು ಸರ್ಕಾರದವರು ಈ ವಿಷಯವನ್ನು ತೀವ್ರವಾಗಿ ಪರಿಶೀಲನೆ ಮಾಡಿ ಕೇಂದ್ರಸರ್ಕಾರದವರಿಗೆ ಸಲಹೆಮಾಡುವುದರ ಮೂಲಕ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಿರೀಕ್ಷಣೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಇಲ್ಲಿಯವರೆಗೂ ಮಾತನಾಡಿರತಕ್ಕವರು ದೇಶದಲ್ಲಿ ರೈತನ ಈಗಿನ ಸ್ಥಿತಿ ಮತ್ತು ಅವನ ಕಷ್ಟಗಳು ಆ ಬಗ್ಗೆ ಸರ್ಕಾರದವರು ಅವನ ಕಷ್ಟನಿವಾರಣೆಯ ಬಗ್ಗೆ ಏನ್ನು ಕಾರ್ಯಕ್ರಮ ಕೈಗೊಳ್ಳಬೇಕೆಂಬ ವಿಚಾರವನ್ನು ವಿಶದೀಕರಿಸಿದ್ದಾರೆ. ನಮ್ಮ ದೇಶದಲ್ಲಿ ವ್ಯವಸಾಯಗಾರರು ಸುಮಾರು ಶೇಕಡ ಎಪ್ಪತ್ತು ಮಂದಿ ಇದ್ದಾರೆ. ಈ ದೇಶದ ಜನಸಂಖ್ಯೆಯಲ್ಲಿ ಅವರೇ ಹೆಚ್ಚು ಜನ ಇರುವುದರಿಂದ ಅವರಿಗೆ ಸುಖ, ಸೌಲಭ್ಯಗಳನ್ನೊದಗಿಸಬೇಕಾದದ್ದು ಸರ್ಕಾರದ ಕರ್ತವ್ಯ ಎಂದು ಬೇರೆ ಹೇಳಬೇಕಾಗಿಲ್ಲ. ಬಾಕಿಯವರು ಮಾಡಿಕೊಂಡಿರತಕ್ಕ ಸಂಘ ಸಂಸ್ಥೆಗಳನ್ನು ನೋಡಿದ ಪಕ್ಷದಲ್ಲಿ, ಕೂಲಿಗಾರರು, ನಾನ್‌ಗೆಜೆಟೆಡ್ ನೌಕರರು, ವಿದ್ಯಾರ್ಥಿಗಳು ಮತ್ತು ಇತರ ಅನೇಕ ಸಂಘಗಳು ತಮ್ಮ ತಮ್ಮಲ್ಲೇ ಒಗ್ಗಟ್ಟಾಗಿ, ತಮ್ಮ ಕಷ್ಟನಿವಾರಣೆ ಬಗ್ಗೆ ಸಂಘಶಕ್ತಿ ಬೆಳೆಸಿಕೊಂಡು, ಕಷ್ಟನಿವಾರಣೆ ಆಗದಿದ್ದರೆ, ತಮಗೆ ಸೌಲಭ್ಯ ಕೊಡದಿದ್ದ ಪಕ್ಷದಲ್ಲಿ ಸರ್ಕಾರದಮೇಲೂ, ಸಮಾಜದಮೇಲೂ ಒತ್ತಾಯ

(ಶ್ರೀ ಟಿ. ಸಿ. ಬಸಪ್ಪ)

ಮಾಡಿ ತಮ್ಮ ಆಶಯಗಳನ್ನು ಈಡೇರಿಸಿಕೊಳ್ಳತಕ್ಕ ಒಂದು ಧೋರಣೆಯನ್ನು ನೋಡುತ್ತ ಬಂದಿದ್ದೇವೆ. ಅಂದಮೇಲೆ ದೇಶದಲ್ಲಿ ಸುಮಾರು ಶೇಕಡ ಎಪ್ಪತ್ತು ಮಂದಿ ಇರತಕ್ಕ ರೈತನ ಕಷ್ಟಗಳನ್ನು ನಿವಾರಣೆ ಮಾಡಿಕೊಳ್ಳತಕ್ಕ ಜವಾಬ್ದಾರಿಯನ್ನು ರೈತ ಇನ್ನೂ ಅರಿತುಕೊಂಡಿಲ್ಲ. ರೈತರು ಇನ್ನೂ ಒಗ್ಗಟ್ಟಾಗಿ ತಮ್ಮ ಕಷ್ಟನಿವಾರಣೆ ಮಾಡಿಕೊಳ್ಳಲಿಕ್ಕೆ ತಮ್ಮ ಸಂಘಗಳನ್ನು ಬೆಳೆಸಿಕೊಳ್ಳಬೇಕು, ಸಂಘಗಳನ್ನು ಬೆಳೆಸಿಕೊಂಡು ತಮ್ಮ ಕಷ್ಟನಿವಾರಣೆ ಮಾಡಿಕೊಳ್ಳಲಿಕ್ಕೆ ಒತ್ತಾಯ ಮಾಡಬೇಕು, ಹಾಗೆ ನಿವಾರಣೆ ಆಗದಿದ್ದರೆ ಸರ್ಕಾರದ ಮೇಲೂ, ಸಮಾಜದಮೇಲೂ ಒತ್ತಾಯ ಮಾಡಬೇಕೆಂಬ ತಿಳಿವಳಿಕೆ ಇನ್ನೂ ರೈತನಿಗೆ ಬಂದಿಲ್ಲ. ಇದು ನಮ್ಮ ದೇಶದ ದೌರ್ಭಾಗ್ಯ ಎಂದು ಹೇಳಬೇಕಾಗಿದೆ. ಎಂದಮೇಲೆ, ಮುಖ್ಯವಾಗಿ ರೈತನಿಗೆ ತಾನು ಬೆಳೆದ ಬೆಳೆಗೆ ಸರಿಯಾದ, ನ್ಯಾಯವಾದ ಒಂದು ಬೆಲೆ ಸಿಕ್ಕರೆ ಸಾಕು, ಇಷ್ಟು ಕೊಟ್ಟರೆ ಸಾಕು ಎಂದು ರೈತ ಎಣಿಸುತ್ತಾನೆ. ಸರ್ಕಾರಿ ನೌಕರರಿಗೆ ಸಂಬಳ ಕೊಡುತ್ತೇವೆ. ಕಷ್ಟಕಾಲದಲ್ಲಿ ತುಟ್ಟಿಭತ್ಯ ಮತ್ತು ಇನ್ನೂ ಅನೇಕ ಸೌಲಭ್ಯಗಳನ್ನು ಉಂಟು ಮಾಡಿಕೊಡುತ್ತೇವೆ. ಏಕೆಂದರೆ ಅವರನ್ನು ಸುಖವಾಗಿಟ್ಟಿರಬೇಕು, ದೇಶದ ಅತಿ ಮುಖ್ಯವಾದ ಆಡಳಿತಯಂತ್ರ ನಡೆಸಿಕೊಂಡು ಹೋಗುತ್ತಿರುವ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರಿಗೆ ನೆಮ್ಮದಿ, ತೃಪ್ತಿ ಇರುವಂತೆ ಕಷ್ಟಕಾಲದಲ್ಲಿ ಅವರಿಗೆ ಡಿ.ಎ. ವೈದ್ಯಕೀಯ ಸಹಾಯ ಮತ್ತು ಇನ್ನೂ ಅನೇಕ ಸೌಕರ್ಯಗಳನ್ನು ಒದಗಿಸುತ್ತಾ ಇದ್ದೇವೆ. ಕಾರಣ ಕಷ್ಟಕಾಲದಲ್ಲಿ ಅವರಿಗೆ ತೊಂದರೆ ಆಗಬಾರದು, ಸುಖವಾಗಿ ಜೀವನ ನಡಸಿಕೊಂಡು ದೇಶದ ಒಂದು ಯಂತ್ರ ಸುಗಮವಾಗಿ ನಡೆಸಿಕೊಂಡು ಹೋಗಲಿ ಎಂಬ ಆಶಯದಿಂದ ಈ ಸೌಲಭ್ಯಗಳನ್ನೆಲ್ಲಾ ಒದಗಿಸುತ್ತೇವೆ. ಎಂದಮೇಲೆ ದೇಶದಲ್ಲಿ ಅವರ ಸಂಖ್ಯೆ ಎಷ್ಟು? ಶೇಕಡ 3-4-5, ಇಷ್ಟು ಕೇವಲ ಕಡಿಮೆ ಸಂಖ್ಯೆ ಇರತಕ್ಕ ದೇಶದ ಅರ್ಥಾತ್ ಸಮಾಜದ ಒಂದು ಭಾಗಕ್ಕೆ ಎಲ್ಲಾ ಸೌಲಭ್ಯಗಳನ್ನೂ ಕೊಟ್ಟು ಶೇಕಡ ಎಪ್ಪತ್ತು ಇರತಕ್ಕ ರೈತನ ಕಷ್ಟನಿವಾರಣೆಗೆ ತಕ್ಕ ಏರ್ಪಾಡು ಮಾಡದಿದ್ದ ಪಕ್ಷದಲ್ಲಿ ನಮ್ಮ ಜವಾಬ್ದಾರಿ ಏನು ಎಂಬುದನ್ನು ನಾವು ಯೋಚನೆಮಾಡತಕ್ಕ ಒಂದು ಪರಿಸ್ಥಿತಿ, ಕಾಲ ಈಗ ಒದಗಿದೆ. ನಮಗೆ ಗೊತ್ತಿರುವ ಹಾಗೆ ದೇಶದಲ್ಲಿ ಕೆಲವು ವರ್ಷಗಳ ಹಿಂದೆ ಇದ್ದ ರೈತನ ದುಸ್ಥಿತಿಯನ್ನು ಒಬ್ಬ ಸ್ನೇಹಿತರು ಈಗಾಗಲೇ ವರ್ಣನೆ ಮಾಡಿದ್ದಾರೆ. ರೈತ ತಾನು ಬೆಳೆದ ಬೆಳೆಯನ್ನು ಕೇವಲ ಕನಿಷ್ಠಾಂಶದಲ್ಲಿ ಮಾರಿದ್ದಾನೆ. ರಾಗಿ ಆಗಲಿ, ಬೇರೆ ದವಸ ಧಾನ್ಯ ಆಗಲಿ ಒಂದು ಪಲ್ಲಾಕ್ಕೆ ಎರಡು ರೂಪಾಯಿ, ನಾಲ್ಕು ರೂಪಾಯಿನಂತೆ ಮಾರಿದ್ದಾನೆ. ಆಗ ಅವನು ಸಾಲ ಸೋಲ ಮಾಡಿಕೊಂಡು, ಮನೆ ಮಠ ಮಾರಿಕೊಂಡು, ತಾನು ಬೆಳೆ ಮಾಡತಕ್ಕ ಜಮೀನುಗಳನ್ನು ಸಹ ತನ್ನ ಕಷ್ಟನಿವಾರಣೆಯ ಬಗ್ಗೆ ಮಾರಿಕೊಂಡಿದ್ದಾನೆ. ಆಗ ಸಮಾಜವಾಗಲಿ, ಸರ್ಕಾರವಾಗಲಿ ಅವನ ನೆರವಿಗೆ ಬರಲಿಲ್ಲ. ಯುದ್ಧಕಾಲ ಬಂದಕೂಡಲೇ ಹೊರಗಡೆಯಿಂದ ದವಸಧಾನ್ಯ ಬರುವಹಾಗಿರಲಿಲ್ಲ. ದೇಶದಲ್ಲಿ ರೈತ ತಾನು ಬೆಳೆದ ಬೆಳೆಯನ್ನು ಬೇರೆಯವರಿಗೆ ಮಾರಿಬಿಟ್ಟನು. ಅವನೂ ಸಹ ಹೆಚ್ಚು ಬೆಳೆಯುತ್ತಾ ಇರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ದೇಶದಲ್ಲಿ ಬೆಳೆ ಕಡಿಮೆ ಆಯಿತು, ಆಹಾರಧಾನ್ಯ ಕಡಿಮೆ ಆಯಿತು. ಆಗ ಸರ್ಕಾರದವರು ಏನು ಮಾಡಿದರು? ಸರ್ಕಾರಿ ನೌಕರರು ಮತ್ತು ಕೂಲಿಗಾರರು ಇವರೆಲ್ಲರ ಉಪಯೋಗಕ್ಕೆ ರೈತನ ಕುತ್ತಿಗೆಗೆ ಕಂಟ್ರೋಲ್ ಹಾಕಿದರು. ಹಿಂದೆ ಅವನು ಕಷ್ಟದಲ್ಲಿದ್ದಾಗ ಆತನ ಸಹಾಯಕ್ಕೆ ಯಾವ ಸಮಾಜ, ಸರ್ಕಾರ ಬರಲಿಲ್ಲವೋ ಅದೇ ಸರ್ಕಾರ ಆತನಿಗೆ ನಾಲ್ಕು ಕಾಸು ಮಾಡಿಕೊಳ್ಳತಕ್ಕ ಸಮಯ ಬಂದಕೂಡಲೇ ದೇಶದ ಉದ್ಧಾರಕ್ಕೆ ಸಹಾಯ ಮಾಡುತ್ತೇವೆ ಎಂದು ಹೇಳಿ ಕಂಟ್ರೋಲ್ ಹಾಕಿದರಲ್ಲ ಆಗ ರೈತನ ಸಾಲ ಸೋಲಗಳನ್ನು ಪೂರೈಸಲಿಕ್ಕಾಗಲೀ ಕಷ್ಟನಿವಾರಣೆ ಮಾಡಲಿಕ್ಕಾಗಲಿ ಸರ್ಕಾರ ಯೋಚನೆ ಮಾಡಲಿಲ್ಲ ಎಂದಮೇಲೆ ಈಗ ಆ ಪರಿಸ್ಥಿತಿ ಬರುತ್ತಾ ಇದೆ. ರೈತನಿಗೆ ನಿಜವಾಗಿಯೂ ಒಂದು ಗ್ಯಾರಂಟಿಯಾದ ಬೆಲೆ ಕೊಡದಿದ್ದ ಪಕ್ಷದಲ್ಲಿ ಹಿಂದಿನ ಪರಿಸ್ಥಿತಿ ಬರುತ್ತದೆ ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ. ಏಕೆಂದರೆ ಇವೊತ್ತು ನಾವು ರೈತನು ಬೆಳೆದ ಬೆಳೆಗೆ ಸರಿಯಾದ, ನಿಗದಿಯಾದ, ನ್ಯಾಯವಾದ ಒಂದು ಬೆಲೆಯನ್ನು ಕೊಡದಿದ್ದ ಪಕ್ಷದಲ್ಲಿ ಜಮೀನು ಪುನಃ ಬಂಜರು ಬೀಳುತ್ತದೆ. ಮತ್ತು ರೈತ ತನ್ನ ಜಮೀನನ್ನು ಬಿಟ್ಟು ಸರ್ಕಾರಿ ನೌಕರಿಗೋ ಅಥವಾ ಕೈಗಾರಿಕೆಗಳಲ್ಲಿ ಕೂಲಿಗಾರನಾಗಿಯೋ ಸೇರಿಕೊಂಡು ಹೆಚ್ಚಿನ ಮಟ್ಟದಲ್ಲಿ ಸುಖವಾಗಿರುವ ದಾರಿ ಹುಡುಕಿಕೊಂಡು ಹೋಗುತ್ತಾನೆ. ಹೀಗಾಗಿ ಜಮೀನು ಬಂಜರು ಬೀಳುತ್ತದೆ. ಮುಂದೆ ಆಹಾರಧಾನ್ಯ ದೊರಕದೆ ಇರುವ, ತೊಂದರೆಯಾಗತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಮುಖ್ಯವಾಗಿ ಒಂದು ನಿಗದಿಯಾದ, ನ್ಯಾಯವಾದ ಬೆಲೆಯನ್ನು ಅವನಿಗೆ ದೊರಕುವಂತೆ ಮಾಡಬೇಕಾದದ್ದು ಸರ್ಕಾರದವರ ಕರ್ತವ್ಯ ಎಂದು ಹೇಳುತ್ತೇನೆ.

ಇಲ್ಲಿನ ಪರಿಸ್ಥಿತಿಯನ್ನು ನಾವು ಬೇರೆ ದೇಶಗಳಿಗೆ ಹೋಲಿಸಿಕೊಂಡರೆ ನಮಗೆ ಇಲ್ಲಿನ ಸ್ಥಿತಿ ಯಾವ ರೀತಿ ಇದೆ ಎಂಬುದು ಗೊತ್ತಾಗುತ್ತದೆ. ಅನೇಕರಿಗೆ ಗೊತ್ತಿರುವ ಹಾಗೆ, ಅಮೆರಿಕಾ ದೇಶದಲ್ಲಿ ಹತ್ತಿ ಮುಂತಾದ ಬೆಳೆಗಳಿಗೆ ಸರ್ಕಾರದವರು ಒಂದು ನಿಗದಿಯಾದ ಬೆಲೆಯನ್ನು ಗೊತ್ತುಮಾಡುತ್ತಾರೆ. ಅಕಸ್ಮಾತ್ತಾಗಿ ಆ ಬೆಲೆ ಬರದಿದ್ದರೆ ಸರ್ಕಾರದವರೇ ಅದನ್ನು ತೆಗೆದುಕೊಂಡು ಬೇರೆ ಹೊರಗಡೆ ಮಾರಾಟಕ್ಕೆ ಕಳುಹಿಸುತ್ತಾರೆ ಅಥವಾ ಅದು ಬೇಡವಾಗಿದ್ದರೆ ಬೆಂಕಿಗೂ ಸಹ ಹಾಕುತ್ತಾರೆ ಎಂದು ಕೇಳಿದ್ದೇವೆ. ಏಕೆಂದರೆ ರೈತನಿಗೆ ಯಾವಾಗಲೂ ನ್ಯಾಯವಾದ, ನಿಗದಿಯಾದ ಬೆಲೆ ಸಿಕ್ಕಬೇಕು ಎಂಬುದೇ ಸರ್ಕಾರದವರ ಆಶಯ: ಅದರಂತೆಯೇ ನಮ್ಮ ದೇಶದಲ್ಲೂ ಸಹ ಆಗಬೇಕು ಎಂಬ ಕೂಗು ಎಲ್ಲಾಕಡೆಯೂ ಕೇಳಿ ಬರುತ್ತಾ ಇದೆ. ಅದನ್ನು ಎಲ್ಲಾ ಸರ್ಕಾರಗಳವರೂ ಮಾಡಬೇಕಾದದ್ದು ಅವರ ಕರ್ತವ್ಯ ಎಂದು ಹೇಳಬೇಕಾಗಿದೆ. ಪಾರ್ಲಿಮೆಂಟ್‌ನಲ್ಲೂ ಸಹ ಈ ವಿಚಾರದಲ್ಲಿ ಒಂದು ವಿಷಯ ಚರ್ಚೆಗೆ ಬಂದಾಗ ಆಹಾರ ಮಂತ್ರಿಗಳು ಜವಾಬು ಕೊಡುತ್ತಾ ಹೀಗೆ ಹೇಳಿದ್ದಾರೆ:—

> "Replying to the debate Sri Rafi Ahmad Kidwai, Minister for Food and Agriculture, said that the House knew the Government had been trying to give some price support where necessary. Last year, the Food Minister recalled, when the prices of paddy went down in Bengal, the Central Government asked the Bengal Government to procure rice at a slightly lower price than the

previous procurement price. They had then succeeded in bringing the prices up. The same thing happened this year when the prices of wheat started falling in Unitted Provinces and the Punjab below Rs. 10. The Centre then asked these two Governments to purchase wheat at Rs. 10. This was an assurance that some sort of price support will be brought into effect if prices go down precipitately. But at the same time, prices ought to go down to the extent that an average Indian could afford to take his full meal within his income.''

ಎಂದರೆ ಇಂಡಿಯಾ ಸರ್ಕಾರದವರಿಗೂ ಸಹ ಇದರ ವಿಷಯ ಗೊತ್ತಿದೆ, ಇದು ಅವರ ಗಮನದಲ್ಲಿದೆ, ರೈತನಿಗೆ ತೊಂದರೆ ಆಗದಹಾಗೆ ನ್ಯಾಯವಾದ ಬೆಲೆ ಸಿಕ್ಕಬೇಕು, ಊಟಮಾಡತಕ್ಕವನಿಗೂ ಸಹ ದುಬಾರಿ ಆಗಬಾರದು, ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ಬೆಲೆಯನ್ನು ನಿಗದಿಮಾಡತಕ್ಕದ್ದು ಪ್ರಾಂತ್ಯ ಸರ್ಕಾರಗಳ ಮತ್ತು ಇಂಡಿಯಾ ಸರ್ಕಾರದ ಕರ್ತವ್ಯ ಎಂದು ತಿಳಿದಿದ್ದಾರೆ. ಕೊನೆಯಲ್ಲಿ ಒಂದು ಬೋರ್ಡ್ ರಚನೆ ಮಾಡಿ 'ಪ್ರತಿವರ್ಷವೂ ಸಹ ಯಾವ ಯಾವ ಬೆಳೆಗೆ ಯಾವ ಯಾವ ರೀತಿ ಎಷ್ಟೆಷ್ಟು ಬೆಲೆ ನಿಗದಿಯಾಗಿರಬೇಕು ಎಂಬುದನ್ನು ಗೊತ್ತುಮಾಡಬೇಕು, ಇಂಥ ಒಂದು ಯೋಜನೆ ಅನುಸರಿಸಬೇಕೆಂದ ಹೇಳಿದ್ದಾರೆ. ಈ ಬಗ್ಗೆ ಮೈಸೂರು ಸರ್ಕಾರದವರೂ ಸಹ ತೀವ್ರವಾಗಿ ಯೋಚನೆಮಾಡಿ ರೈತರ ಸಹಾಯಕ್ಕೆ ಬರದಿದ್ದರೆ ರೈತನ ಕಷ್ಟ ಅನೇಕ ವಾಗುತ್ತಿದೆ ಎಂದು ಹೇಳಿ, ಎಲ್ಲರೂ ಸಹ ಇದಕ್ಕೆ ಬೆಂಬಲಕೊಟ್ಟು ಕೇಂದ್ರ ಸರ್ಕಾರದವರೊಡನೆ ಈ ವಿಷಯದಲ್ಲಿ ಪತ್ರವ್ಯವಹಾರ ನಡೆಸಿ ಅತಿ ಜಾಗ್ರತೆಯಾಗಿ ಇದರ ಬಗ್ಗೆ ಕಾರ್ಯಕ್ರಮ ಕೈಕೊಳ್ಳಲು ಒತ್ತಾಯಪಡಿಸಬೇಕೆಂದು ಹೇಳಿ ಈ ನಿರ್ಣಯಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಶ್ರೀಮತಿ ಸಿದ್ದಮ್ಮನವರು ತಂದಿರುವ ಈ ನಿರ್ಣಯವನ್ನು ಪುಷ್ಟೀಕರಿಸಲು ಬಹಳ ಸಂತೋಷವಾಗುತ್ತದೆ. ಇದಕ್ಕೆ ಸಂಬಂಧಿಸಿರತಕ್ಕಂಥ ಅಭಿಪ್ರಾಯಗಳನ್ನು ಮತ್ತು ಇನ್ನೂ ಕೆಲವು ಅಭಿಪ್ರಾಯಗಳನ್ನು ಒಳಗೊಂಡಿರತಕ್ಕ 29ನೆಯ ನಿರ್ಣಯವನ್ನು ನಾನು ಕಳುಹಿಸಿಕೊಟ್ಟಿದ್ದೇನೆ. ಇದರಲ್ಲಿ ಬಹಳ ಮುಖ್ಯವಾಗಿರತಕ್ಕ ಕೆಲವು ಅಂಶಗಳನ್ನು ನಮ್ಮ ಮಾನ್ಯ ಮಿತ್ರರು ಈಗಾಗಲೇ ಚರ್ಚೆಮಾಡಿದ್ದಾರೆ. ವ್ಯವಸಾಯಗಾರನ ಸ್ಥಿತಿ ವ್ಯವಸಾಯದ ಬೆಳೆಗಳ ಸ್ಥಿತಿ ಇವೊತ್ತು ಏನಿದೆ, ಯುದ್ಧಕ್ಕೆ ಮುಂಚೆ ಏನಿತ್ತು, ಯುದ್ಧ ಕಾಲದಲ್ಲಿ ಏನಿತ್ತು ಎಂಬುದನ್ನು ಪರಿಶೀಲನೆ ಮಾಡುವುದಾದರೆ, ಒಂದು ವಿಹಂಗಮ ದೃಷ್ಟಿಯಿಂದ ನೋಡುವುದಾದರೆ, ಮುಂದೆ ವ್ಯವಸಾಯದ ಬೆಳೆಗಳ ಬಗ್ಗೆ ಸಾರ್ವಜನಿಕರ ಮತ್ತು ಸರ್ಕಾರದ ಕರ್ತವ್ಯ ಏನೆಂಬುದರ ತೀರ್ಮಾನಕ್ಕೆ ಬರಲು ಮತ್ತು ಈ ನಿರ್ಣಯವನ್ನು ಪುಷ್ಟೀಕರಿಸಲು ಅನುಕೂಲವಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. 1939ನೇ ಇಸವಿಗಿಂತ ಮುಂಚೆ, ಎಂದರೆ ಯುದ್ಧ ಪ್ರಾರಂಭವಾಗುವುದಕ್ಕಿಂತ ಮುಂಚೆ ವ್ಯವಸಾಯಗಾರನ ಸ್ಥಿತಿ ಬಹಳ ಕೀಳುದರ್ಜೆಯಲ್ಲಿತ್ತು. ಎಂದರೆ ಅವನು ಜೀವಂತನಾಗಿ ವ್ಯವಸಾಯ ನಡೆಸಿಕೊಂಡು ಹೋಗುವುದಕ್ಕೇ ಕಷ್ಟವಾಗುತ್ತಾ ಇತ್ತು. ವರ್ಷಕ್ಕೆ ಬೇಕಾಗತಕ್ಕ ಖರ್ಚು ಕೂಡ ಅದರಿಂದ ದುಡಿದುಕೊಳ್ಳುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ವ್ಯವಸಾಯ ಮಾಡಬೇಕಾಗಿತ್ತು. ಅದನ್ನು ಆಗಿನ ಸಂದರ್ಭದಲ್ಲಿದ್ದ ಧಾರಣವಾಸಿಗಳನ್ನು ನೋಡಿದರೇ ಗೊತ್ತಾಗುತ್ತದೆ. ಒಂದು ಉದಾರಣೆ ಕೊಡುವುದಾದರೆ, 1939 ನೆಯ ಇಸವಿಯಲ್ಲಿ ಸಾವಿರಾರು ಪಲ್ಲ ಬತ್ತವನ್ನು ಪಲ್ಲಾಕ್ಕೆ 2¾-3 ರೂಪಾಯಿಗಳಂತೆ ಮಾರಿರುವ ದೊಡ್ಡ ದೊಡ್ಡ ರೈತರನ್ನು ನಾವು ಕಣ್ಣಾರೆ ನೋಡಿದ್ದೇವೆ. ಆಗ ಸರ್ಕಾರದವರು ನೂರು ಎಕರೆ ಗದ್ದೆ ಕೊಡುತ್ತೇವೆಂದು ಹೇಳಿದರೂ ತೆಗೆದುಕೊಂಡು ವ್ಯವಸಾಯ ಮಾಡದಿರುವ ಅನೇಕ ರೈತರನ್ನು ನಾವು ನೋಡಿದ್ದೇವೆ. ಕಂದಾಯ ಕಟ್ಟಲಾರದೆ ಜಮೀನುಗಳನ್ನು ಫಡಕ್ಕೆ ತಂದು ಅವನ್ನು ವಾಪಸು ತೆಗೆದುಕೊಂಡು ಅವುಗಳ ಮೇಲಿರುವ ಜವಾಬ್ದಾರಿ ಇಳಿಸಬೇಕೆಂದು ಸರ್ಕಾರದವರನ್ನು ಅನೇಕ ಸಲ ಕೇಳಿರುವುದನ್ನು ಕಣ್ಣಾರೆ ನೋಡಿದ್ದೇವೆ. 1939 ನೆಯ ಇಸವಿಯಲ್ಲಿ ಯುದ್ಧ ಷುರುವಾಯಿತು. ಮೂರು ನಾಲ್ಕು ವರ್ಷಗಳಕಾಲ ಸುಮಾರು 1942-43 ನೆಯ ಸಾಲಿನವರೆಗೆ ರೈತರ ಪರಿಸ್ಥಿತಿ ಯಾವ ರೀತಿಯಲ್ಲೂ ಉತ್ತಮವಾಗಲಿಲ್ಲ. ಕಾರಣವೇನೆಂದರೆ ಮುಖ್ಯವಾದ ಅಂಶ ಇದರಿಂದ ಹೊರಪಡುತ್ತದೆ. ದೇಶದಲ್ಲಿ ನಡೆಯುತ್ತಿರುವ ವಿಚಾರ ರೈತನ ಕಿವಿಗೆ ತಲಪಿ ರೈತನ ಮನಸ್ಸಿನ ಮೇಲೆ ಪರಿಣಾಮವಾಗುವುದಕ್ಕೆ ಬಹಳ ಕಾಲಹಿಡಿಯುತ್ತಿತ್ತು. ಕಾರಣ ಹಳ್ಳಿಗಳಿಗೆ ವೃತ್ತ ಪತ್ರಿಕೆ ಅಥವಾ ವರ್ತಮಾನ ಬರುವ ಸೌಲಭ್ಯವಿಲ್ಲದಿದ್ದುದರಿಂದ ಪೇಟೆ ಧಾರಣೆವಾಸಿ ವ್ಯತ್ಯಾಸ ಜಾಗ್ರತೆ ರೈತರಿಗೆ ತಿಳಿಯುತ್ತಿರಲಿಲ್ಲ. ಅದನ್ನು ತಿಳಿದ ಬುದ್ಧಿವಂತರು, ವರ್ತಕರು ಹಳ್ಳಿಗಳಿಗೆ ಹೋಗಿ ಸುಲಭ ಬೆಲೆಗೆ ರೈತರಿಂದ ದವಸ ಧಾನ್ಯಗಳನ್ನು ಕೊಂಡು ಕೊಂಡು ಹೋಗಿ ಮಾರಿ ಹೆಚ್ಚು ಲಾಭ ಪಡೆಯುತ್ತಿದ್ದರೇ ಹೊರತು 3-4 ವರ್ಷ ರೈತರಿಗೆ ಸ್ವಲ್ಪವೂ ಸಹಾಯ ದೊರೆಯಲಿಲ್ಲ. ಇದೊಂದು ಬಹಳ ಮುಖ್ಯವಾದ ಅಂಶ. ಮಾರ್ಕೆಟ್ಟಿನಲ್ಲಿ ಏರುಪೇರು ಜಾಗ್ರತೆ ಆದ ಸಂದರ್ಭಗಳಲ್ಲಿ ಅದರಿಂದ ಅನುಕೂಲಸ್ಥರಾದ ವರ್ತಕರಿಗೆ ಲಾಭ ಬಂತೇ ವಿನಾ ರೈತರಿಗೆ ಯಾವ ವಿಧದಲ್ಲೂ ಅನುಕೂಲವಾಗಲಿಲ್ಲ. ಅದರಿಂದ ಆ ನಾಲ್ಕಾರು ವರ್ಷಗಳ ಅವಧಿಯಲ್ಲಿ ಬೆಲೆ ಏರಿದಾಗ್ಯೂ ಕೂಡ ರೈತರಿಗೆ ಹೆಚ್ಚು ಲಾಭಪಡೆಯುವುದಕ್ಕೆ ಸಾಧ್ಯವಾಗಲಿಲ್ಲ. ಅಲ್ಲಿಂದಾಚೆಗೆ ಕಂಟ್ರೋಲ್ ಷುರುವಾಯಿತು. ಆಗ ರೈತರೂ ಕೂಡ ಓಡಾಡುವುದು ಜಾಸ್ತಿಯಾಗಿ ವ್ಯವಹಾರ ಸ್ವಲ್ಪ ತಿಳಿದವರಿಗಾದರೂ ಮಾರ್ಕೆಟ್ಟಿನ ಬದಲಾವಣೆ ತಿಳಿಯುತ್ತಿದ್ದರೂ, ಹೆಚ್ಚಿನ ಅನುಕೂಲ ಪಡೆಯಬಹುದೆಂಬ ಆಸೆ ಅವರ ಕಣ್ಣಿಗೆ ಕಾಣುತ್ತಿದ್ದರೂ, ಆ ಸಂದರ್ಭದಲ್ಲಿ ದೇಶದ ಆರ್ಥಿಕ ಸ್ಥಿತಿಯನ್ನು ಸಮಮಾಡಬೇಕು ಮತ್ತು ಆಡಳಿತ ಸುಗಮವಾಗಿ ನಡೆಸುವುದು ಅವಶ್ಯಕ ಎಂದು ಆಗಿನ ಆಡಳಿತಗಾರರು ಕಂಟ್ರೋಲ್ ವ್ಯವಸ್ಥೆಯನ್ನು ಜಾರಿಗೆ ತಂದರು. ಆಗ ಧಾರಣೆವಾಸಿಯನ್ನು ಸಿಕ್ಕಿದ ಹಾಗೆ ಮುಂದುವರಿಯುವುದಕ್ಕೆ ಬಿಡದೆ ಒಂದು ಮಿತಿಯಲ್ಲಿಡಬೇಕೆಂದು ಮನಸ್ಸನ್ನು ಮಾಡಿ ಮುಖ್ಯವಾದ ಆಹಾರವಸ್ತುಗಳ ಧಾರಣೆಯನ್ನು ಕಂಟ್ರೋಲ್ ಮಾಡಿದರು. ಆಹಾರಧಾನ್ಯಗಳನ್ನು ಮಿತಿಗೊಳಿಸುವುದರಿಂದ ಜೀವನದ ಖರ್ಚು ಕಡಮೆ ಯಾಗುತ್ತದೆ, ಇತರ ಎಲ್ಲಾ ಪದಾರ್ಥಗಳ ಬೆಲೆಯೂ ಅಲ್ಪಸ್ವಲ್ಪ ಕಡಮೆಯಾಗಬಹುದು ಎಂಬ ತತ್ವದ ಮೇಲೆ ಆಹಾರಪದಾರ್ಥಗಳ ಬೆಲೆಯನ್ನು ನಿಗದಿಮಾಡಿದರು. ಇದು ರೈತರಿಗೆ ಕೊಟ್ಟಿರುವ

(ಶ್ರೀ ವಿ. ಮಸಿಯಪ್ಪ.)

ಮೊದಲನೆಯ ಗದೆ ಏಟು ಎಂದು ಹೇಳಬಹುದು. ಆದ್ದರಿಂದ ಆ ಸಂದರ್ಭದಲ್ಲೂ ರೈತರಿಗೆ ಲಾಭಗಳಿಸಲು ಅವಕಾಶವಿದ್ದರೂ ಅನುಕೂಲ ದೊರೆಯಲಿಲ್ಲ. ಅನಂತರ ಯುದ್ಧ ಮುಕ್ತಾಯವಾಯಿತು. ಮುಕ್ತಾಯವಾದ ಮೇಲೂ ಕೆಲವು ಕಾಲ ಕಂಟ್ರೋಲಿತ್ತು. ಆಗಲೂ ಅದರಿಂದ ತೊಂದರೆಯಾಯಿತು. ಯುದ್ಧ ಮುಕ್ತಾಯವಾಗಿ ಕಂಟ್ರೋಲು ಕಡಮೆಯಾಗುತ್ತಾ ಬಂದರೂ ಈಗ ಅದಕ್ಕೆ ವಿರುದ್ಧವಾದ ಇನ್ನೊಂದು ಪರಿಸ್ಥಿತಿಯುಂಟಾಗಿದೆ. ಕಾರಣ ದೇವರದಯೆಯಿಂದ ಮಳೆ ಬೆಳೆ ಆಗುತ್ತಿದೆ. ಇಂಡಿಯಾ ದೇಶವನ್ನು ತೆಗೆದುಕೊಂಡು ಒಂದು ಸಮಗ್ರ ದೃಷ್ಟಿಯಿಂದ ನೋಡಿದರೆ ನಾವು ಈ ದಿವಸ ಒಂದು ಮಟ್ಟಕ್ಕೆ ಬರುತ್ತಿದ್ದೇವೆ. ಹೀಗೆ ಒಂದು ತೃಪ್ತಿಕರವಾದ ಮಟ್ಟಕ್ಕೆ ಬರುತ್ತಿರುವಾಗ ನಮ್ಮ ಪರಿಸ್ಥಿತಿಯೇನಾಗುತ್ತಿದೆಯೆಂಬುದನ್ನು ಆಲೋಚಿಸಬೇಕಾಗಿದೆ. ಈಗ ಪಾಂಚವಾರ್ಷಿಕ ಯೋಜನೆ ಕೂಡ ಇಧ್ದೇ ಅದರಲ್ಲಿ ಪ್ರಥಮತಃ ವ್ಯವಸಾಯಾಭಿವೃದ್ಧಿಗೆ ಬೇಕಾದಷ್ಟು ಯೋಜನೆಮಾಡಿದೆ. ನೀರಾವರಿ ಕಾಂಗಾರಿಗಳು ಪೂರೈಸಿ ಲಕ್ಷಾಂತರ ಎಕರೆಗಳು ನೀರಾವರಿಯಾದಾಗ ಬತ್ತ, ರಾಗಿ ಮುಂತಾದ ಅಹಾರ ವಸ್ತುಗಳ ಮತ್ತು ಹತ್ತಿ ಮೊದಲಾದ ಇತರ ವಸ್ತುಗಳ ಬೆಲೆಯೂ ಇಳಿಮುಖವಾಗುತ್ತದೆ. ಈಗ ನಾವು ನೋಡುವ ಹಾಗೆ ಸೇಂಗಾ ಎರಡು ಬೆಳೆ ಬಂದು ಧಾರಣೆ ಅಪಾರವಾಗಿ ಇಳಿದು ಹೋಗಿದೆ. ಇದರ ಜೊತೆಗೆ ಮೊನ್ನೆತಾನೆ ಕೇಂದ್ರ ಸರ್ಕಾರದವರು ಒಂದು ಕಾನೂನನ್ನು ಪಾಸ್ ಮಾಡಿದ್ದಾರೆ. ಅದರಲ್ಲಿ ಒಂದು ಷೆಡ್ಯೂಲನ್ನು ಹಾಕಿ ಆ ಷೆಡ್ಯೂಲಿನಲ್ಲಿರುವ ವಸ್ತುಗಳನ್ನು ರಫ್ತು ಮಾಡುವುದಕ್ಕೆ ಸರ್ಕಾರದ ಅನುಮತಿಪಡೆಯಬೇಕೆಂದು ಹೇಳಿದ್ದಾರೆ. ಆದ್ದರಿಂದ ಬೆಳೆದುದನ್ನು ಬೇಕಾದ ಹಾಗೆ ಸಾಗಿಸಲು ಅವಕಾಶವಿಲ್ಲ. ಇದು ಸೇಂಗಾ ಮೇಲೆ ಒಂದು ದೊಡ್ಡ ಪರಿಣಾಮವನ್ನುಂಟುಮಾಡಿತು. ಸೇಂಗಾ ಧಾರಣೆ ಇಳಿಯುವುದಕ್ಕೆ ಕಾರಣ ರಫ್ತು ಮಾಡುವುದಕ್ಕೆ ಪರ್ಮಿಟ್ ಕೊಡುವುದನ್ನು ನಿಲ್ಲಿಸಿದ್ದು. ಮಣಕ್ಕೆ 11 ರೂಪಾಯಿಗಳಿದ್ದ ಬೆಲೆ 3-4 ರೂಪಾಯಿಗಳಿಗಿಳಿದರೂ ಅದನ್ನು ಕೇಳುವವರೇ ಇಲ್ಲ. ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿಗಳ ನಷ್ಟವಾಯಿತು. ಆ ಮೇಲೆ ಇದಕ್ಕೆ ಸ್ವಲ್ಪ ರಫ್ತು ಮಾಡಲು ಪರ್ಮಿಟ್ ಕೊಟ್ಟರು. ಹಾಗೆ ಕೊಟ್ಟಾಗ ಧಾರಣೆ ಮಾರ್ಕೆಟ್ಟಿನಲ್ಲಿ ನಾಲ್ಕರಿಂದ ಎಂಟಾಣೆಗಳವರೆಗೆ ಹೆಚ್ಚಿತು. ಹೀಗೆ ಆಮದು ಮತ್ತು ರಫ್ತುಮಾಡುವಾಗ ಅನುಸರಿಸುವ ನೀತಿಗಳಿಂದಲೂ ರೈತರಿಗೆ ಏಟು ಬೀಳುತ್ತಿತ್ತು. ಈಗ ಕೈಕೊಳ್ಳುತ್ತಿರುವ ಹೊಸಹೊಸ ಯೋಜನೆಗಳ ಪರಿಣಾಮವಾಗಿ ಬೆಳೆ ದಿನದಿನಕ್ಕೆ ಹೆಚ್ಚಿತು. ಒಂದು ಎಕರೆಯಲ್ಲಿ ಹಿಂದೆ ಬೆಳೆಯುತ್ತಿದ್ದುದಕ್ಕಿಂತ ಹೆಚ್ಚಾಗಿ ಬೆಳೆಯುವಾಗ ಸ್ವಾಭಾವಿಕವಾಗಿ ಧಾರಣೆವಾಸಿ ಕಡಮೆಯಾಗುವುದಕ್ಕೆ ಅವಕಾಶವಾಗುತ್ತದೆ; ಲೋಕಲ್ ಡಿಮ್ಯಾಂಡು ಹೆಚ್ಚಾಗಿರುವುದಿಲ್ಲ. ಆದ್ದರಿಂದ ಧಾರಣೆವಾಸಿ ಡಿಮ್ಯಾಂಡ್ ಅಂಡ್ ಸಪ್ಲೈ ಥಿಯರಿ ಪ್ರಕಾರ ಕಡಮೆಯಾಗುವ ಸಂಭವ ಬರುತ್ತದೆ. ಈ ಸಂದರ್ಭದಲ್ಲಿ ರೈತರಿಗೆ ಸರಿಯಾದ ರಕ್ಷಣೆ ಕೊಡದೇ ಹೋದರೆ, ಉತ್ತೇಜನ ಕೊಡದೇ ಹೋದರೆ ವ್ಯವಸಾಯ ಮಾಡುವುದನ್ನೇ ಬಿಡಬೇಕಾಗುತ್ತದೆ. ಏಕೆಂದರೆ ಹಿಂದೂಸ್ಥಾನದಲ್ಲಿ ವ್ಯವಸಾಯ ಯಾವತ್ತೂ ಕೂಡ ಲಾಭದಾಯಕವಾದ ವೃತ್ತಿಯಾಗಿರಲಿಲ್ಲ. ಏನೋ ವಂಶಪಾರಂಪರ್ಯವಾಗಿ ಬಂದ ಕಸಬಾದ್ದರಿಂದ ಲಾಭವಿರಲಿ, ಇಲ್ಲದಿರಲಿ ಶೇಕಡ 75 ಮಂದಿ ಈ ಕಸಬನ್ನು ಮಾಡಿಕೊಂಡು ಬರುತ್ತಿದ್ದಾರೆ. ವ್ಯವಸಾಯಮಾಡದಿದ್ದರೆ ಕೆಲಸವಿಲ್ಲದೆ ಅವರು ಸೋಮಾರಿಗಳಾಗಿರಬೇಕು. ಇಂಥ ಪರಿಸ್ಥಿತಿಯಲ್ಲಿ ಈ ಕಸಬನ್ನು ಲಾಭದಾಯಕವಾಗಿ ಮಾಡುವುದು ಸಂಸ್ಥಾನದ ಕರ್ತವ್ಯ. ಹೀಗೆ ಮಾಡಲು ತಕ್ಕ ರಕ್ಷಣೆ ಕೊಡುವುದು ಆವಶ್ಯಕವಾಗಿದೆ. ಹಾಗೆ ಕೊಡುವಾಗ ಕೆಲವು ವಿಚಾರಗಳನ್ನು ಗಮನಿಸಬೇಕು. 48 ನೆಯ ಆರ್ಟಿಕಲ್ ಪ್ರಕಾರ ರಕ್ಷಣೆ ನೀಡಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ. ಹಾಗಿರುವಾಗ ಸರ್ಕಾರದವರೇನು ಮಾಡುತ್ತಿದ್ದಾರೆಂದು ನೋಡಿದರೆ ಈ ದಿವಸದವರೆಗೂ ಏನೂ ಕಾಣುತ್ತಿಲ್ಲ, ವ್ಯವಸಾಯದ ಅಭಿವೃದ್ಧಿಗಾಗಿ ಏನೂ ವ್ಯವಸ್ಥೆಮಾಡುವ ಹಾಗೆ ಕಾಣುತ್ತಿಲ್ಲ. ಈ ವಿಚಾರದಲ್ಲಿ ಎರಡು ಮೂರು ಮುಖ್ಯವಾದ ಅಂಶಗಳಿವೆ. ಬೆಳೆಯುವ ಧಾನ್ಯಗಳಿಗೆ ಧಾರಣೆ ನಿಗದಿಮಾಡಬೇಕೆಂದು ಹೇಳುವಾಗ ಫಾರಂ ಅಕೌಂಟಿಂಗ್ ಎಂಬುದು ಅತ್ಯಾವಶ್ಯಕ. ಒಂದು ವೇಳೆ ಸರ್ಕಾರದವರು ಧಾರಣೆ ನಿರ್ಧಾರ ಮಾಡುತ್ತೇವೆ, ಅದಕ್ಕೆ ಒಂದು ಸಮಿತಿ ಮಾಡುತ್ತೇವೆ, ಎಂದು ಈ ದಿವಸ ಭರವಸೆ ಕೊಟ್ಟರೂ ನಮ್ಮ ಜನಗಳು ಲೆಕ್ಕವಿಡುತ್ತಿಲ್ಲ. ಯಾವ ರೀತಿಯಲ್ಲಿ ಅವರು ಲೆಕ್ಕವಿಡಬೇಕು ಎಂಬುದನ್ನು ಗೊತ್ತುಮಾಡಬೇಕು. ಉತ್ಪತ್ತಿಮಾಡಲು ತಗಲುವ ಖರ್ಚನ್ನು ನಿಗದಿಮಾಡುವಾಗ ಅಕೌಂಟಿಂಗ್ ಸಿಸ್ಟಂ ಇರಬೇಕು. ರೈತರಿಗೆ ಲೆಕ್ಕವಿಡುವಂತೆ ವಿಧಿಸಲು ಒಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಹಾಗೆ ಧಾರಣೆ ನಿಗದಿಮಾಡಿದಾಗ ಎಲ್ಲಾ ಭೂಮಿಗಳಲ್ಲೂ ಎಲ್ಲಾ ಬೆಳೆಯನ್ನೂ ಬೆಳೆಯಲು ಅವಕಾಶ ಕೊಡುವುದು ತಪ್ಪು; ಯಾವ ಭೂಮಿಯಲ್ಲಿ ಏನು ಬೆಳೆಯಿಡಬೇಕು ಎಂದು ಕೂಡ ನಿಗದಿಮಾಡಬೇಕು. ಹಾಗೆ ಧಾರಣೆ ನಿರ್ಧಾರಮಾಡುವಾಗ ಇನ್ನೂ ಅನೇಕ ಸಮಸ್ಯೆಗಳು ಉದ್ಭವಿಸುವ ಸನ್ನಿವೇಶವಿರುವುದರಿಂದ ಅದನ್ನೆಲ್ಲಾ ಪರಿಶೀಲಿಸಿ ಸರಿಯಾದ ನೀತಿಯನ್ನನುಸರಿಸಲು ಸರ್ಕಾರದವರು ಅಧಿಕಾರಯುತವಾದ ಸಂಸ್ಥೆಗಾಗಲಿ ಅಥವಾ ಅನಧಿಕಾರ ಸಂಸ್ಥೆಗಾಗಲಿ ಉತ್ತೇಜನ ಕೊಡಬೇಕು. ಶ್ರೀ ನರಸಿಂಹರೆಡ್ಡಿಯವರು ಹೇಳಿದ ಹಾಗೆ, ಮೈಸೂರು ವ್ಯವಸಾಯ ಸಂಘದ ಜನರಲ್ ಬಾಡಿಯವರು ಈ ವ್ಯವಸ್ಥೆ ಮಾಡಬೇಕಾದದ್ದು ಅಗತ್ಯವೆಂದು ವ್ಯವಸಾಯ ಸಚಿವರಿಗೂ, ಮುಖ್ಯಮಂತ್ರಿಗಳಿಗೂ ಮತ್ತು ಆಹಾರ ಮಂತ್ರಿಗಳಿಗೂ ಮನವಿಮಾಡಿದ್ದಾರೆ. ಬಹುಶಃ ಇದು ಇಡೀ ಇಂಡಿಯಾದ ನೀತಿಗೆ ಸಂಬಂಧಪಟ್ಟಿದ್ದು, ಆದ್ದರಿಂದ ಕೇಂದ್ರ ಸರ್ಕಾರದ ಲೆವಲ್‌ನಲ್ಲಿ ಮಾಡಬೇಕು ಎಂದು ಮಾನ್ಯ ಮಂತ್ರಿಗಳು ಹೇಳಬಹುದು; ಅವರು ಏನಾದರೂ ಮಾಡುವವರೆಗೆ ನಿಧಾನಿಸೋಣ ಎಂದು ಹೇಳಬಹುದು. ಈ ದಿವಸ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರದವರು ಧಾರಣೆ ನಿಗದಿಮಾಡಲು ಒಂದು ಬೋರ್ಡನ್ನು ರಚಿಸಿದ್ದಾರೆಂದು ವರದಿಯಾಗಿದೆ. ಹಾಗಿರುವಾಗ ನಮ್ಮ ಪರಿಸ್ಥಿತಿಗನುಗುಣವಾಗಿ ಏನು ಮಾಡಿದರೆ ಸರಿಹೋಗುತ್ತದೆಂದು ಕೇಂದ್ರ ಸರ್ಕಾರಕ್ಕೆ ಮನವಿಮಾಡಬೇಕಾದದ್ದು ಅಗತ್ಯ. ಇದನ್ನೆಲ್ಲಾ ಸಮಗ್ರವಾಗಿ ಆಲೋಚಿಸಿ ಸರ್ಕಾರದವರು ಸರಿಯಾದ ನಿರ್ಧಾರಕ್ಕೆ ಬರಲು ಸೂಕ್ತಕ್ರಮ ಕೈಗೊಳ್ಳಬೇಕು. ಇದರ ಅಗತ್ಯ ಬಹಳವಾಗಿದೆ. ಮೊನ್ನೆ ವ್ಯವಸಾಯದ ಕೂಲಿಗಳಿಗೆ ಮಿನಿಮಂ ವೇಜಸ್ ನಿಗದಿ ಮಾಡಿರುವುದು ಯಾವ ಆಧಾರದಮೇಲೆ? ಬೆಳೆಗೆ ಆಗುವ ಖರ್ಚನ್ನು ತಿಳಿದುಕೊಳ್ಳದೆ, ವ್ಯವಸಾಯಗಾರ ಎಷ್ಟು ಕೂಲಿಗಾಗಿ ಕೊಡುತ್ತಾನೆಂಬುದನ್ನು ನೋಡದೆ, ಯಾವ ಆಧಾರದ ಮೇಲೆ ನಿಗದಿ ಮಾಡಿರುವುದು? ಗೊಬ್ಬರಕ್ಕೆ ಸಿಂಧ್ರಿ ಫ್ಯಾಕ್ಟರಿಯವರು ನಿಗದಿಮಾಡಿರುವ ಧಾರಣೆ ನೋಡಿ

ಏನಾದರೂ ಗೊತ್ತುಮಾಡಿದ್ದೀರಾ? ರೈತರಿಗೆ ಉಪಯೋಗಿಸಲು ಒಳ್ಳೆಯ ಗೊಬ್ಬರ ಯಾವುದು ಎಂಬುದನ್ನು ನೋಡಿದ್ದೀರಾ? ಹೀಗೆ ಎಲ್ಲವನ್ನೂ ವಿಚಾರಮಾಡಿ ಸನ್ನಿವೇಶಕ್ಕೆ ತಕ್ಕಂತೆ ರೈತನಿಗೆ ಉಪಯೋಗವಾಗುವಂತೆ ಒಂದು ಆಖೈರು ತೀರ್ಮಾನಕ್ಕೆ ಬರಬೇಕು. ಅಗ್ರಿಕಲ್ಚರಲ್ ಅಂಡ್ ಎಕ್ಸ್‌ಪರಿಮೆಂಟಲ್ ಯೂನಿಯರ್ನವರು ಈ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡಲು ವ್ಯವಸಾಯದ ಸೆಮಿನಾರ್ ಸಹ ಕರೆದು ಅಲ್ಲಿ ರೈತರ ಮತ್ತು ಸರ್ಕಾರಿ ಇಲಾಖೆಗಳ ಎಲ್ಲ ಪ್ರತಿನಿಧಿಗಳನ್ನೂ ಸೇರಿಸಿ ಒಂದು ತೀರ್ಮಾನ ಮಾಡಿ ಬಹಳ ತೀವ್ರವಾಗಿ ಆಲೋಚಿಸುತ್ತಿದ್ದಾರೆ. ಹೀಗೆ ಸರ್ಕಾರದವರಾದರೂ ಸರಿಯೆ ಅಥವಾ ಬೇರೆ ಇಂಥ ಸಂಸ್ಥೆಯಾದರೂ ಸರಿಯೆ ತೀರ್ಮಾನಮಾಡಿ ಮಾಡುವ ನಿರ್ಣಯಗಳು ಯಶಸ್ವಿಯಾಗಲು ಸಹಾಯ ಮಾಡಲು ಮುಂದೆ ಬರಬೇಕೆಂದು ಪ್ರಾರ್ಥಿಸಿ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಈ ನಿರ್ಣಯವನ್ನು ಬಹಳವಾಗಿ ಮನಸ್ಸಿಗೆ ನಾಟುವ ರೀತಿಯಲ್ಲಿ ನಮ್ಮ ಮುಂದಿಟ್ಟಿದ್ದಾರೆ. ಈಗ ಮಾತನಾಡಿರತಕ್ಕಂಥ ಸದಸ್ಯರೆಲ್ಲರೂ ಈ ವಿಚಾರದಲ್ಲಿ ಹೇಳಬೇಕಾದ ವಿಷಯಗಳನ್ನೂ ಹೇಳಿದ್ದಾರೆ. ನಮ್ಮ ಸರ್ಕಾರದವರನ್ನು ಬಹಳ ದಿವಸಗಳಿಂದ ಈ ವಿಷಯದಲ್ಲಿ ಪರ್ಯಾಲೋಚನೆ ಮಾಡಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೆವು. ಈ ಸರ್ಕಾರ ಬಂದಮೇಲೆ ನಡೆದ ಮೊದಲನೆಯ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಮತ್ತು ಆಗ ವ್ಯವಸಾಯ ಶಾಖೆಯ ಮಂತ್ರಿಗಳಾಗಿದ್ದವರು—ಇವರಿಬ್ಬರೂ ಅವರ ಭಾಷಣದಲ್ಲಿ ಕಂಟ್ರೋಲ್ ಹೋಗುವ ಸಂದರ್ಭದಲ್ಲಿ ಮುಂದೆ ರೈತರಿಗೇನು ತೊಂದರೆಯಾಗಬಹುದೆಂಬುದನ್ನು ಪರಿಗಣಿಸಿದಾಗ ಅದನ್ನು ತೆಗೆಯುವುದಕ್ಕೆ ಪ್ರಯತ್ನ ಪಡಬಾರದೆಂದೂ, ಆಹಾರ ಧಾನ್ಯಕ್ಕೆ, ರೈತರು ಬೆಳೆಯುವುದಕ್ಕೆ ಒಂದು ನಿಗದಿಯಾದ ಬೆಲೆಯನ್ನು ಗೊತ್ತುಮಾಡಬೇಕೆಂದೂ ನಾವು ಹೇಳಿದೆವು. ಅದನ್ನು ಅವರು ಒಪ್ಪಿಕೊಂಡರು; ಆ ರೀತಿ ಮಾಡತಕ್ಕಂಥಾದ್ದು ಅಗತ್ಯವೆಂದು ನಮ್ಮೆದುರಿನಲ್ಲಿ ನುಡಿದಿರುವುದು ರಿಕಾರ್ಡಾಗಿದೆ. ಹಾಗೆ ಮಾಡುವುದಾಗಿ ಈ ಸಭೆಗೆ ಭರವಸೆ ಕೊಟ್ಟರು. ಅದರ ವಿಷಯದಲ್ಲಿ ಇದುವರೆಗೂ ಯಾವ ಕಾರ್ಯವನ್ನೂ ಕೈಕೊಂಡಂತೆ ಕಾಣಲಿಲ್ಲ. ದೇಶದಲ್ಲಿ ವ್ಯವಸಾಯದಿಂದ ಉತ್ಪತ್ತಿಯಾಗತಕ್ಕಂಥ ಪದಾರ್ಥಗಳಿಗೆ ಸಾಕಾದಷ್ಟು ನಿಗ ಕೊಡಬೇಕಾಗಿದೆ, ಯುದ್ಧಕಾಲದ ಪರಿಸ್ಥಿತಿಯಿಂದ ಹಾಗೆ ಮಾಡಲು ಸಾಧ್ಯವಿದೆ ಎಂದು ತಿಳಿದುಕೊಂಡಿದ್ದೆವು. ಅನೇಕ ವೇಳೆ ಇದನ್ನು ಹೇಳಿದ್ದೇವೆ. ವ್ಯವಸಾಯಗಾರನ ಸ್ಥಾನವೆಂಥಾದ್ದು ಎಂಬುದು ದೇಶದ ಎಲ್ಲಾ ಸರ್ಕಾರಗಳಿಗೂ ಗೊತ್ತಾಗಿದೆಯೆಂದು ಹೇಳಿದ್ದರೂ ಈ ದಿವಸ ಆಗಲೇ ಅದನ್ನು ಸ್ವಲ್ಪ ಮರೆತಂತೆ ಕಾಣುತ್ತಿದೆ. ಮರೆತುಹೋಗುತ್ತಿದ್ದಾರೆಂಬುದನ್ನು ಜ್ಞಾಪಕಮಾಡುವುದಕ್ಕಾಗಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಈ ಠರಾವನ್ನು ತಂದಿದ್ದಾರೆ. ಸರ್ಕಾರದವರು ಬಹಳ ತೀವ್ರತೆಯಿಂದ ಈ ವಿಷಯವನ್ನು ಪರ್ಯಾಲೋಚಿಸಬೇಕು. ಕಂಟ್ರೋಲಿದ್ದ ಕಾಲದಲ್ಲಿ ಬೆಲೆ ಹೆಚ್ಚಾಗಿ ಬಂದಿದೆ ಎಂದು ಹೇಳುವ ಜನರಿದ್ದಾರೆ; ಬಂದಿದೆ; ಇಲ್ಲ ಎಂದು ಹೇಳುವುದಿಲ್ಲ. ಈಗತಾನೆ ಶ್ರೀ ಚಿಕ್ಕಲಿಂಗಯ್ಯನವರು ರೂಪಾಯಿಗೆ ಎರಡು ಸೇರು ರಾಗಿಯಾಗಿದೆಯೆಂದು ಹೇಳಿದರು. ಎರಡಾಣೆಗೆ ಕೊಡುತ್ತಿದ್ದ ರಾಗಿಗೆ ಈ ದಿವಸ $1\frac{1}{4}$ ರೂಪಾಯಿ ಎಂದು ಹೇಳುತ್ತಾರೆ. ಇದು ಒಂದಕ್ಕೊಂದಕ್ಕೆ ಸಂಬಂಧಪಟ್ಟಿರುವ ವಿಷಯ.

ಆಹಾರ ಪದಾರ್ಥಗಳ ಬೆಲೆಗಳ ಏರಿಳಿತದ ವಿಚಾರ ರೈತರಿಗೆ ಗೊತ್ತಾಗುವುದಿಲ್ಲ. ಈ ಬೆಲೆಗಳ ಏರಿಳಿತದ ವ್ಯವಸ್ಥೆ ವರ್ತಕರ ಮತ್ತು ಮಧ್ಯಸ್ಥಗಾರರ ಹಿಡಿತಕ್ಕೆ ಸಿಕ್ಕಿ ಇದರಿಂದ ರೈತರು ಬಹುಮಟ್ಟಿನ ನಷ್ಟಕ್ಕೆ ಗುರಿಯಾಗುತ್ತಿದ್ದಾರೆ. ದೇಶದಲ್ಲಿ ರೈತರು ಮೂಕಪ್ರಾಣಿಗಳಂತೆ ಇದ್ದಾರೆ. ಪಟ್ಟಣಿಗರು ಹೇಗೋ ಇವರನ್ನು ತಮ್ಮ ಹಿಡಿತಕ್ಕೆ ಸಿಕ್ಕಿಸಿಕೊಂಡು ಬಿಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ರೈತರೇನೂ ದಡ್ಡರಲ್ಲ

ಶ್ರೀ ವಿ. ವೆಂಕಟಪ್ಪ.—ಮುಂದೆ ಗೊತ್ತಾಗಬೇಕು, ರೈತರ ಇಂದಿನ ಪರಿಸ್ಥಿತಿಯನ್ನು ಹೇಳುವುದು ಅಸಾಧ್ಯ. ಒಂದು ಗಳಿಗೆ ವ್ಯವಸಾಯದ ಮಂತ್ರಿಗಳು ನನ್ನ ಜೊತೆಗೆ ಬಂದರೆ ಅವರ ಪರಿಸ್ಥಿತಿ ಹೇಗಿದೆಯೆಂಬುದನ್ನು ತೋರಿಸುತ್ತೇನೆ. ಕಡಲೇಕಾಯಿ ಬಿತ್ತಿರುವುದನ್ನು ಕೀಳುವುದು ಬೇಡ, ಉತ್ತುಬಿಡಬೇಕು ಎಂದು ಹೇಳುತ್ತಾರೆ. ಅವರಿಗೆ ಈ ಉತ್ತು ಬಿತ್ತಿದ ಬೆಲೆಯು ಸಹ ಬಾರದೇ ಇದ್ದರೆ ಮತ್ತೇನುತಾನೇ ಮಾಡಲು ಸಾಧ್ಯ! ಅದನ್ನು ಉತ್ತುಬಿಟ್ಟರೆ ಬರುವ ವರ್ಷ ದವಸವಾದರೂ ಅನುಕೂಲವಾಗುತ್ತದೆ ಎಂದು ಹಾಗೆ ಮಾಡಬೇಕೆಂದಿರುತ್ತಾರೆ. ಇಂಥ ಶೋಚನೀಯ ಪರಿಸ್ಥಿತಿ ರೈತರಿಗೆ ಒದಗಿದೆ.

3 P.M.

Mr. SPEAKER.—Does the Hon'ble Member take some more time?

Sri V. VENKATAPPA.—I will stop now and again continue after 3-30.

Mr. SPEAKER.—The House will now rise for lunch and meet at 3–30.

The House adjourned for Lunch at One Minute past Three of the Clock and reassembled at Thirty Minutes past Three of the Clock.

[MR. SPEAKER in the Chair.]

ಶ್ರೀ ವಿ. ವೆಂಕಟಪ್ಪ.—ರೈತರ ಕಳವಳ ಪರಿಸ್ಥಿತಿಯನ್ನು ತಡೆಗಟ್ಟಲು Regulated market ಎಂಬುದನ್ನು ಸರ್ಕಾರದವರು ಗೊತ್ತುಮಾಡುವುದು ಆವಶ್ಯಕ. ಇದರಲ್ಲಿಯೂ ಸಹ ಒಂದು ಕಷ್ಟಪರಿಸ್ಥಿತಿ ತಲೆದೋರಿದೆ. ಅಲ್ಲಿ ದಿನಸಿ ಮಾರಾಟದ ಬೆಲೆಯ ಬಗ್ಗೆ ಹರಾಜು ಕೂಗುವ ವ್ಯವಸ್ಥೆ ಏರ್ಪಡಿಸಿರುತ್ತಾರೆ. ಲೈಸನ್ಸ್ ಪಡೆದಿರುವವರೇ ಆ ಹರಾಜಿನಲ್ಲಿ ಭಾಗವಹಿಸಬೇಕು. ಅಂಥವರು 8-10 ಮಂದಿ ಮಾತ್ರ ಇರುತ್ತಾರೆ. ಇವರೇನಾದರೂ ಒಬ್ಬರಿಗೊಬ್ಬರು ಮಾತನಾಡಿಕೊಂಡು ಹರಾಜು ಕೂಗಿದರೆ ಫಸಲು ಮಾರಾಟಕ್ಕೆ ತಂದ ರೈತರ ಗತಿ ಮುಗಿದುಹೋಯಿತು.

Sri L. SIDDAPPA (Channagiri).—Similar state of affairs is present in Davangere.

Sri V. VENKATAPPA.—I am glad to hear that.

ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಫಸಲು ಮಾರಾಟದ ಬೆಲೆಯನ್ನು ಸರ್ಕಾರ ನಿರ್ಧರಿಸಬೇಕು. ರೆಗ್ಯುಲೇಟೆಡ್ ಮಾರ್ಕೆಟ್ ದರವನ್ನು ನಿಗದಿ ಮಾಡಿರುವುದರಲ್ಲಿ, ಯಾವನು ಕೊಂಡುಕೊಳ್ಳಬೇಕೆಂದಿರುತ್ತಾನೋ ಅವನಿಗೆ ಅಡ್ಡಿಪಡಿಸಿ ಹರಾಜು ಮೂಲಕ ಈ ಬೆಲೆ ನಿರ್ಧಾರಗೊಳ್ಳುವಂತೆ ಏಕೆ ಏರ್ಪಡಿಸಬೇಕು ? ಲೈಸೆನ್ಸ್‌ದಾರರ ಹತೋಟಿಗೆ ಇದು ಒಳಪಟ್ಟರೆ, ಅವರು ಎಷ್ಟಕ್ಕೆಬೇಕೋ ಅಷ್ಟಕ್ಕೆ ಮಾತ್ರ ಹರಾಜು ಕೂಗಿ ಬೆಲೆಯ ಏರಿಳಿತವನ್ನು ತಮ್ಮ ಹತೋಟಿಗೆ ಸಿಲುಕಿಸಿಕೊಳ್ಳುತ್ತಾರೆ. ಇದರಿಂದ ರೈತರಿಗೆ ಬಹಳ ತೊಂದರೆಯುಂಟಾಗಲು ಅವಕಾಶವಿದೆ. ಈ ವಿಚಾರದಲ್ಲಿ ಸರ್ಕಾರದವರಿಗೇನೋ ಘನವಾದ ಉದ್ದೇಶವೇ ಇದೆ. ಆದರೂ ಕೊನೆಗೆ ಏಟು ಬೀಳುವುದು ರೈತರಿಗೇ. ಈಗ ಕಡಲೇಕಾಯಿ ವಿಚಾರ ತೆಗೆದುಕೊಳ್ಳೋಣ: ಅದನ್ನು ಹೊರಗೆ ಕಳುಹಿಸಬೇಕಾದರೆ, ನಮ್ಮ ದೇಶದಿಂದ ಹೊರಗೆ ಎಷ್ಟು ಕಳುಹಿಸಬಹುದು ಎಂಬುದನ್ನು ತೀರ್ಮಾನಮಾಡಬೇಕಾದರೆ ತಿಂಗಳುಗಟ್ಟಲೆ ಹಿಡಿಯುತ್ತದೆ. ಹೊರಗೆ ಈ ಫಸಲನ್ನು ಕಳುಹಿಸುವ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಪ್ರಾಂತ್ಯ ಸರ್ಕಾರಗಳಿಂದ ಎಷ್ಟು ಕಳುಹಿಸಲು ಸಾಧ್ಯವೆಂಬ ಬಗ್ಗೆ ಕಾಗದ ಬರೆಯುತ್ತಾರೆ. ಆಗ ಪ್ರಾಂತ್ಯ ಸರ್ಕಾರ ಇಷ್ಟೇ ಆಗುತ್ತದೆಯೆಂಬುದನ್ನು ತಿಳಿಸಲು ಅಂಕಿಅಂಶಗಳನ್ನು ಶೇಖರಿಸಬೇಕು. ಇದೆಲ್ಲ ತೀರ್ಮಾನವಾಗಿ ಆಖೈರು ನಿರ್ಧಾರಕ್ಕೆ ಬರುವವೇಳೆಗೆ ಆ ಫಸಲೇ ಹಾಳಾಗಿ ಹೋಗಿ ರೈತರು ಬಹಳ ತೊಂದರೆಗೆ ಒಳಗಾಗುತ್ತಾರೆ. ಪ್ರತಿಯೊಂದು ಬೆಳೆಯ ವಿಚಾರದಲ್ಲಿಯೂ ಇದು ಅನ್ವಯಿಸುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಅತಿ ಮುಖ್ಯವಾದ ಫಸಲುಗಳ ಬಗ್ಗೆಯಾದರೂ ಬೆಲೆ ನಿಗದಿಮಾಡುವುದು ಸೂಕ್ತವಲ್ಲವೇ ಎಂಬುದನ್ನು ಯೋಚಿಸಬೇಕಾಗಿದೆ. ಮುಂದುವರಿದ ಎಲ್ಲ ದೇಶಗಳಲ್ಲಿಯೂ ಈ ಪದ್ಧತಿ ಇದೆ. ಅಮೆರಿಕಾ ದೇಶದಲ್ಲಿ ಒಂದು ಬೆಲೆ ನಿಗದಿಮಾಡಿ, ಅದು ಕಡಮೆ-ಹೆಚ್ಚು ಆಗುವುದು ಕಂಡುಬಂದರೆ, ಸರ್ಕಾರದವರೇ ಅದರ ಬಗ್ಗೆ ಪೂರ್ಣ ಹತೋಟಿಕ್ರಮ ಕೈಗೊಳ್ಳುತ್ತಾರೆ. ಎಷ್ಟು ಪರಿಮಿತಿಯ ಉತ್ಪತ್ತಿಬೇಕೋ ಅಷ್ಟನ್ನು ಬೆಳೆಯಲು ಅದಕ್ಕೆ subsidy ಸಹ ಕೊಟ್ಟು ಉತ್ತೇಜನಗೊಳಿಸುತ್ತಾರೆ. ಬೆಳೆಗೆ ಏನಾದರೂ ರೋಗ ತಗಲುವ ಸಂಭವವಿದ್ದ ಕೂಡಲೇ ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಾರೆ. ಅನೇಕ ದೇಶಗಳಲ್ಲಿ crop insurance ಸಹ ಜಾರಿಯಲ್ಲಿದೆ. ನಮ್ಮ ದೇಶದಲ್ಲಿಯೂ ಈ ಎಲ್ಲ ಸೌಕರ್ಯಗಳೂ ರೈತರಿಗೆ ಲಭಿಸಬೇಕು. ಈಗಾಗಲೇ ಈ ಬಗ್ಗೆ ಸಮಿತಿಯೊಂದನ್ನು ಏರ್ಪಡಿಸಿ ರೈತರಿಗೆ ಯಾವ ರೀತಿಯಲ್ಲೂ ಅನಾನುಕೂಲವಾಗದ ಹಾಗೆ ಬೆಲೆ ನಿಗದಿಮಾಡುವ ವ್ಯವಸ್ಥೆ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಈ ಸಲಹೆಯನ್ನು ಗಣನೆಗೆ ತೆಗೆದುಕೊಂಡು ಸರ್ಕಾರದವರು ಸೂಕ್ತ ವ್ಯವಸ್ಥೆಮಾಡಬೇಕೆಂದು ಕೋರುತ್ತೇನೆ.

Sri S. SRINIVASA IYENGAR.—Mr. Speaker, I thank you very much for having given me an opportunity to express my views on this resolution.

Agriculture in Mysore State is almost a gamble. It is not of course any industry. If it is an industry then there will be some planned economy, there will be some costing. In an industry we have got the system of costing, cost of production, sale price factor, etc. But for agricultural products in the Mysore State we have nothing of that kind. The farmer will attend to agriculture, his son is interested in agriculture and his grandson also gets into it. So it has come to us as a tradition. It is not an industry; it is a gamble. There have been many failures of rainfall. In those areas where failure of rainfall has been registered neither the Government nor the consuming public has gone to the help of the producer. The producer is simply to be satisfied with what little he can get. Now what happens to the agriculturists? In agriculture, there are two kinds of operations; one is agricultural operations in connection with food crops and the other in connection with money crops. Many people would be very much interested in undertaking money crop and today on account of the advantages of electrical energy, pumpsets subventions, grants, etc.,—all these have gone a long way to increase the money crop value. The agriculturist feels that it will be more profitable to raise money crops. The cost of production of food crops has increased. So, the food crop is at a disadvantage. Naturally the agriculturist is not interested in raising food crops because it does not pay. Perhaps it might be too much on my part if I suggest to this House that "the land follows the law of diminishing returns". As the years pass by the fertility of the soil gets reduced and to maintain it naturally the producer has to put in something else to maintain fertility; that is, manuring. Manuring the crop is an investment. When the investment does not pay, how can he maintain that fertility? Therefore when land follows the law of diminishing returns it is very necessary that Government which represents the producer should come to his aid and see that he maintains that fertility so that he may not allow the land to deteriorate.

Well, Sir, so far as agricultural production is concerned, particularly food crops, I may be permitted to place before this House my own experience about prices. I am an agriculturist; I own large holdings no doubt, but yet I am an agriculturist. I am also having own cultivation. Hon'ble Members interested can go to T.-Narasipur and go round my lands. Sir, I maintain accounts for the sale value on agricultural produce. I have maintained it for the last thirty years. In the year 1914-19 when there was the first World War paddy was being sold at Rs. 14 a palla; it had some relation to the cost of production. By the year 1930, I have sold at the rate of Rs. 3 a palla. Prices went up to Rs. 8 a palla in 1938 and Government when they introduced procurement in the year 1942 fixed the basic value at Rs. 8 per palla of second variety and Rs. 10 per palla for the first variety. In the course of 12 years, by 1952, the Government fixed the rate at Rs. 25 per palla. This is the history of the price structure of paddy from 1914 to 1953. There is such a big variation as that. As the price goes down, naturally the cultivator or the producer would lose interest in raising food crops. When lesser acreage is brought under food crops, it is quite probable that scarcity conditions may once again appear. Once scarcity conditions are there Government come forward with measures of control and other things. That should not be allowed to happen. What I urge upon the Government is that we must have a planned economy. We must fix a particular basic value. This has already been done in the case of coffee. Please take for instance the Coffee Marketing Board. There are rich coffee planters; they have used their influence with the members of the Parliament and got the Coffee Markeing Board Act. Under the Coffee Marketing Board, they have got a basic value below which the Coffee Marketing Board will not allow coffee to be sold at all. While fixing the basic value, they have taken into consideration the cost of production, the return that the planter should get in the shape of percentage. I had the privilege of discussing this issue with one of the planters. I enquired how this basic value was fixed. He said that for the determination of the basic value, the cost of production is takeninto consideration and to that 10 per cent of the total value of the estate is added as a guaranteed return to the planter. Certain percentage of return is guaranteed to the planters apart from the cost of production. Therefore I urge, Sir, that when a thing like that has already been done in the case of coffee, nothing prevents us to do it in the case of main crops like food crops and important money crops, for example mulberry. So, Sir, it is very necessary that we should go into the question in detail and see that a minimum price is fixed.

Then another issue springs up. If the market value is lower than the basic value, how to control it? The Government must be in a position to buy the commodity at the minimum price. Unless the Government is ready, it is no use fixing a minimum price because they cannot check the fall in prices. They must be in a position to check it. They must buy out the stock whenever the price comes down in the market. It is necessary that the minimum basic value has to be fixed properly.

Sir, the next important thing that I wanted to speak about today is the establishment of Marketing Boards. Marketing Boards have to be established in every taluk headquarters, Marketing Boards for the sale of food crops, Marketing Boards for the sale of silk. Sir, in the matter of silk, I am coming from a silk area; I know the difficulties too well. I know the situation too well. The producer does not know what price he will get for the silk that he produces. Sir, he produces silk at great cost, comes to Bangalore and offers it for sale. The wholesaler here who purchases silk offers prices at will. It may perhaps be lower than the cost of production. The agriculturist or silk producer has no other option. He has only to deposit the silk with the wholesaler pending sale and return home. He will probably be awaiting some enhancement in rate; that will never happen. Naturally he gets a low return and the middleman is benefited. That is why I insist that Marketing Board should be established

(SRI S. SRINIVASA IYENGAR.)
in each taluk headquarters, so that the agricultural produce may be marketed properly.

Sri M. MADIAH.—There are a number of other resolutions. This subject has been sufficiently discussed.

Mr. SPEAKER.—This is an important resolution and I think there are many Hon'ble Members desiring to speak on this resolution. We shall limit the time.

Sri S. SRINIVASA IYENGAR.—I shall be finishing my remarks soon, Sir.

I am also suggesting that the Government can come to the aid of the agriculturist in many other ways. Government can offer most of the important articles necessary for agriculture at subsidised rate at the taluk headquarters itself. Government can offer technical advice in the matter of soil classification. We are raising crops in lands which are not properly suited. We are experimenting on several kinds of lands. The Department can certainly examine the soil and advise the agriculturists about the correctness of the crop that he can raise. Such things would minimise the cost of production and it would go a long way in giving proper prices.

Therefore I whole-heartedly support this resolution and in view of the limited time, I close my speech.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಸ್ವಾಮಿ, ಈ ನಿರ್ಣಯದ ಮೇಲೆ ನಾನು ಮಾತನಾಡಬೇಕಾದದ್ದು ಬಹುಶಃ ಅನಾವಶ್ಯಕವಾಗಿತ್ತು. ಆದರೆ ಈ ನಿರ್ಣಯದ ಪ್ರಾಮುಖ್ಯತೆ ಬಹಳ ದೊಡ್ಡದಾದದ್ದು, ಸಾರ್ವತ್ರಿಕವಾದದ್ದು, ಇದು ಹಾಗೂ ದೇಶದಲ್ಲೆಲ್ಲಾ ಚರ್ಚೆಯಾಗುತ್ತ ಇರತಕ್ಕಂಥ ಸಮಸ್ಯೆಯಾಗಿದೆ. ಆದ್ದರಿಂದ ನಾನೂ ಕೂಡ ಈ ನಿರ್ಣಯದ ಮೇಲೆ ಮಾತನಾಡತಕ್ಕಂಥ ಪ್ರಮೇಯ ಬಂತು. ವ್ಯವಸಾಯಗಾರರ ಉತ್ಪನ್ನದ ವಿಷಯದಲ್ಲಿ ಸರ್ಕಾರ ರಕ್ಷಣೆ ಕೊಡಬೇಕಾಗಿರತಕ್ಕಂಥಾದ್ದು ಒಂದು ಒಳ್ಳೆಯ ನೀತಿ. ಅದನ್ನು ನಾನು ಮುಖ್ಯಮಂತ್ರಿ ಆಗುವುದಕ್ಕಿಂತ ಮೊದಲಿನಿಂದಲೂ ಪ್ರತಿಪಾದನೆಮಾಡಿಕೊಂಡು ಬಂದಿದ್ದೇನೆ.

Mr. SPEAKER.—Even in Parliament I remember you have said so.

ಶ್ರೀ ಕೆ. ಹನುಮಂತಯ್ಯ.—ಆದ್ದರಿಂದ ಈ ವಿಷಯದಲ್ಲಿ ಇಲ್ಲಿಯವರೆಗೂ ಕೂಡ ಯಾರಿಗೂ ಮರವು ಉಂಟಾಗತಕ್ಕಂಥ ಪ್ರಮೇಯ, ಪರಿಸ್ಥಿತಿ ಏನೂ ಇಲ್ಲ. ಬಹುಶಃ ಈ ವಿಷಯದಲ್ಲಿ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇದ್ದ ಅನೇಕ ಕಷ್ಟಗಳು ಇವೆ, ಅದನ್ನು ವಿಚಾರಪರರೆಲ್ಲರೂ ಯೋಚನೆಮಾಡಬೇಕು. ಕಾಂಗ್ರೆಸ್ ನೀತಿಯೂ ಕೂಡ ವ್ಯವಸಾಯಗಾರನ ಉತ್ಪನ್ನದ ಮೇಲೆ ಒಂದು ಗೊತ್ತಾದ ಆದಾಯ ಬರತಕ್ಕ ಏರ್ಪಾಡು ಮಾಡಬೇಕು ಎಂಬುದು. ಸುಮಾರು 7-8 ವರ್ಷಗಳ ಹಿಂದೆ ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಒಂದು ಸಬ್‌ಕಮಿಟಿ ಮಾಡಿದ್ದರು. ಆ ಸಬ್‌ಕಮಿಟಿಯ ವರದಿಯಲ್ಲೂ ಕೂಡ ಇದೆ. ಅಲ್ಲಿ ಅಗ್ರಿಕಲ್ಚರಿಸ್ಟ್‌ಗೆ ಮಿನಿಮಂ ಪ್ರಾಫಿಟಬಲ್ ಪ್ರೈಸ್ ಕೊಡಬೇಕೆಂಬ ಶಿಫಾರಸನ್ನು ಮಾಡಿದ್ದಾರೆ. ಅಲ್ಲದೆ ಅಮೆರಿಕಾ ಮತ್ತು ಇತರ ಪಾಶ್ಚಿಮಾತ್ಯ ದೇಶಗಳಲ್ಲೂ ಕೂಡ ಈ ತರಹ ಪ್ರೈಸ್ ಸ್ಟೆಬಿಲಿಟಿ ಪಾಲಿಸಿಯನ್ನು ಅಲ್ಲಿರತಕ್ಕ ಸರ್ಕಾರಗಳೂ ಅನುಷ್ಠಾನದಲ್ಲಿಟ್ಟುಕೊಂಡಿವೆ. ಆದ್ದರಿಂದ ಯಾವ ದೃಷ್ಟಿಯಿಂದ ನೋಡಿದರೂ ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯಕ್ಕೂ ಕಾರಣವಿಲ್ಲ.

ಯುದ್ಧಕಾಲದಲ್ಲಿ ಕೇವಲ ರೈತರ ಮೇಲೆ ಮಾತ್ರ ಒಂದು ಬೆಲೆ ನಿಯಂತ್ರಣವನ್ನು ಸರ್ಕಾರದವರು ವಿಧಿಸಿದ್ದರು ಎಂದು ಹೇಳಿದರು. ಅದು ಪೂರ್ಣ ಸತ್ಯವಲ್ಲ. ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಆಗ ಬೆಲೆ ನಿಯಂತ್ರಣ ಆಹಾರಧಾನ್ಯಗಳಿಗೆ ಮಾತ್ರವೇ ಅನ್ವಯಿಸಲಿಲ್ಲ. ಔಷಧಗಳಿಗೆ, ಕಬ್ಬಿಣದ ಸಾಮಾನುಗಳಿಗೆ, ಬಟ್ಟೆಗೆ, ಕಾಗದಕ್ಕೆ ಈ ಎಲ್ಲ ಪದಾರ್ಥಗಳಿಗೂ ಅನ್ವಯಿಸಲ್ಪಟ್ಟಿತ್ತು. ಹೀಗೆ ಜನಗಳ ಬಳಕೆಯಲ್ಲಿ ಏನೇನು ಸಾಮಗ್ರಿಗಳು ಇದ್ದವೋ ಬಹುಶಃ ಅವೆಲ್ಲಕ್ಕೂ ಕೂಡ ಅನ್ವಯಿಸಿತ್ತು. ಸಮಯ ಬಂದಾಗ ನಾವು ನಮಗೆ ಅನುಕೂಲವಾಗಿರತಕ್ಕದ್ದನ್ನು ಮಾತ್ರವೇ ತೆಗೆದುಕೊಂಡು ಉಗ್ರವಾಗಿ ಟೀಕೆ ಮಾಡುವುದು. ಅಷ್ಟೇನೂ ಸಮಂಜಸವಾಗಿ ಕಾಣುವುದಲ್ಲ. ಈ ದಿವಸ ಈ ರೀತಿ ಆಹಾರ ಪದಾರ್ಥವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಅದರ ಮೇಲೆ ಬೆಲೆ ನಿಗದಿಮಾಡಬೇಕೆಂದು ಹೇಳಿದರೆ ಸ್ವಾಭಾವಿಕವಾಗಿ ಮಿಕ್ಕ ಪದಾರ್ಥಗಳ ಬೆಲೆ ವಿಷಯ ಏನು ಎಂಬುದು ಉದ್ಭವಿಸಿಯೇ ಉದ್ಭವಿಸುತ್ತದೆ. ರೈತನ ಆದಾಯ, ಅದು ಲೋಕಪ್ರಸಿದ್ಧವಾದದ್ದು, ಬಹಳ ಕಡಿಮೆ ಆದಾಯ. ಅವನ ಕಸಬು ಬಹುಶಃ ಆದಾಯವಿಲ್ಲದ ಕಸಬು ಎಂದರೂ ಉತ್ಪ್ರೇಕ್ಷೆ ಏನೂ ಅಲ್ಲ. ಈರೀತಿ ಸಮಾಜದ ವ್ಯವಸ್ಥೆಯಲ್ಲಿ ಕಷ್ಟಕ್ಕೆ ಒಳಗಾಗಿರತಕ್ಕ ರೈತನಿಗೆ ರಕ್ಷಣೆ ಕೊಡಬೇಕಾಗಿರತಕ್ಕದ್ದು ನ್ಯಾಯ. ರಕ್ಷಣೆ ಯಾವ ವಿಧದಲ್ಲಿ ಕೊಡಬೇಕೆಂಬುದನ್ನು ನಾವು ಯೋಚನೆಮಾಡಬೇಕು. ಈ ಮಂತ್ರಿಮಂಡಲ ಬಂದ ಮೇಲೆ ರೈತನ ಹಿತರಕ್ಷಣೆಯನ್ನು ಸಾಧ್ಯವಾದಷ್ಟು ಮಾಡಿದ್ದೇವೆ ಎಂದು ಹೇಳಿ ನಾನು ಧೈರ್ಯವಾಗಿ ಹೇಳಬಲ್ಲೆ. ಹೋದ ವರ್ಷ ಬೆಲೆ ಇಳಿಮುಖವಾಗುತ್ತಾ ಇದ್ದಾಗ ಬತ್ತದ ಬೆಲೆಯನ್ನು 22-23 ರೂಪಾಯಿಗಳಿಗೆ ಕಡಮೆ ಇಲ್ಲದೆ ಕೊಂಡುಕೊಳ್ಳುತ್ತೇವೆ ಎಂದು ಸರ್ಕಾರ ಮುಂದೆ ಬಂದುದರ ಸಲುವಾಗಿ ರೈತನಿಗೆ ಉಪಕಾರವಾಗಿದೆ ಎಂಬುದನ್ನು ಮರೆತಿರುವವರು ಸ್ವಲ್ಪ ಜ್ಞಾಪಕಕ್ಕೆ ತೆಗೆದುಕೊಳ್ಳಬಹುದು. ಆಗ ಪರಿಸ್ಥಿತಿ ಏನಾಯಿತು ಎಂಬುದನ್ನು ಅನುಭವಪೂರ್ವಕವಾಗಿ ಹೇಳುತ್ತೇನೆ. ಸುಮಾರು ಒಂದು ಕೋಟಿ ರೂಪಾಯಿಗಳ ದವಸವನ್ನು ನಾವು ಕೊಂಡುಕೊಂಡೆವು. ಬೆಲೆ ಇಳಿಯುತ್ತಾ ಇರುವಾಗ ನಮ್ಮ ಡಿಪೋಗಳಲ್ಲಿ ಅಕ್ಕಿ ದವಸ ಖರ್ಚಾಗದೆ ಅದೆಲ್ಲಾ ಸ್ಟಾಕ್ ಆಗಿ ಉಳಿದುಕೊಂಡಿತು. ಕೊನೆಕೊನೆಗೆ ಈ ಒಂದು ಕೋಟಿ ರೂಪಾಯಿಗಳ ಅಕ್ಕಿ ಖರ್ಚಾಗದೆ ಹಾಗೆಯೇ ಉಳಿದು ಹುಳಿತುಹೋದರೆ ಏನುಮಾಡುವುದು ಎಂಬ ಒಂದು ಭಯವನ್ನುಂಟುಮಾಡತಕ್ಕ ಪರಿಸ್ಥಿತಿ ಬಂತು. ಆಗ ನಾನಾಮಾರ್ಗಗಳನ್ನನುಸರಿಸಿ ಆ ಸ್ಟಾಕ್ ಎಲ್ಲವನ್ನೂ ಮಾರಬೇಕಾಯಿತು. ಆದ್ದರಿಂದ ಸರ್ಕಾರದವರು ಒಂದು ಬೆಲೆ ನಿಗದಿಮಾಡಿದರೆ ಎರಡು

ತರಹ ಮಾಡಬಹುದು. ಬೆಲೆ ನಿಗದಿಮಾಡಿ ಯಾರುಬೇಕಾದರೂ ಕೊಂಡುಕೊಳ್ಳಿ ಎಂದು ಹೇಳಿದರೆ ಅದು ಕಾಗದದಮೇಲೆ ಮಾತ್ರ ಬರೆದ ಬೆಲೆ ಆಗುತ್ತದೆ, ಯಾರೂ ಕೊಂಡುಕೊಳ್ಳುವುದಿಲ್ಲ. ಆ ನಿಗದಿಯಾದ ಬೆಲೆಗೆ ಭದ್ರತೆ ಬರಬೇಕಾದರೆ ಸರ್ಕಾರ ನಾವೇ ಕೊಂಡುಕೊಳ್ಳುತ್ತೇವೆ ಎಂದು ಮುಂದೆ ಬರಬೇಕು ಅಥವಾ ಯಾವುದಾದರೂ ಕಾರ್ಪೊರೇಷನ್‌ನವರು ಕೊಂಡುಕೊಳ್ಳುತ್ತೇವೆ ಎಂದು ಮುಂದೆ ಬರಬೇಕು. ಆಗ ಆ ಬೆಲೆ ನಿರ್ಧರವಾಗಿದ್ದಕ್ಕೆ seriousness ಇರುತ್ತದೆ. ಈಗ ನಮ್ಮ ಸಮಾಜದಲ್ಲಿ ಆ ರೀತಿ ಒಂದು ನಾನ್ ಅಫಿಷಿಯಲ್ ಕಾರ್ಪೊರೇಷನ್ ಮಾಡಿಕೊಂಡು ಕೊಂಡುಕೊಳ್ಳತಕ್ಕ ಚೈತನ್ಯ ಇಲ್ಲ. ಇನ್ನು ಉಳಿದದ್ದು ಸರ್ಕಾರ ಒಂದೇ. ಆ ಸರ್ಕಾರದವರು ಈ ರೀತಿ ಒಂದು ಬೆಲೆ ನಿರ್ಧರಿಸಿ ಆ ಬೆಲೆ ನಿರ್ಧಾರ ಅನುಷ್ಠಾನಕ್ಕೆ ಬರತಕ್ಕಂಥ ಪ್ರಯತ್ನ ಏನಾದರೂ ಮಾಡಬೇಕಾದರೆ ಸರ್ಕಾರದವರೇ ಕೊಂಡುಕೊಳ್ಳುವುದಕ್ಕೆ ಸಿದ್ಧರಾಗಿರಬೇಕು. ಹೇರಳವಾಗಿ ಬೆಳೆ ಆಗುತ್ತಾ ಇರತಕ್ಕ ಕಾಲದಲ್ಲಿ ಸರ್ಕಾರದವರು ಕೊಂಡು ಕೊಂಡ ಸ್ಟಾಕು ಹಾಗೆಯೇ ಉಳಿಯುತ್ತದೆ. ಖಾಸಗಿಯಾಗಿರುವುದು ಖರ್ಚಾಗುತ್ತದೆ. ಆಗ ಸರ್ಕಾರಿ ಡಿಪೋಗಳಲ್ಲಿ ಯಾರೂ ಕೊಂಡುಕೊಳ್ಳುವುದಿಲ್ಲ. ಹೀಗೆ 1 ಕೋಟಿ, 2 ಕೋಟಿ ರೂಪಾಯಿಗಳ ಸ್ಟಾಕು ಉಳಿತಾಯವಾದರೆ, ನಷ್ಟವಾದರೆ ಆ ಹೊರೆಯನ್ನು ಹೊರುವುದಕ್ಕೆ ಆಯಾ ಸರ್ಕಾರಕ್ಕೆ ಚೈತನ್ಯವಿದೆಯೇ ಎಂಬುದು ದೊಡ್ಡ ಪ್ರಶ್ನೆ. ಆಗ ನಾವೇನು ಮಾಡಬೇಕಾಗುತ್ತದೆ? ಯುದ್ಧಕಾಲದಲ್ಲಿ ಕನ್ಸ್ಯೂಮರ್ಸ್‌ಗೆ ಯಾವರೀತಿ ಸಬ್‌ಸಿಡಿ ಮೊಬಲಗನ್ನು ಕೊಟ್ಟು, ಬೆಲೆಯನ್ನು ಕಡಿಮೆಮಾಡಿ ಮಾರುತ್ತಾ ಇದ್ದೆವೋ ಅದೇ ತತ್ವವನ್ನು ಈ ವ್ಯವಸಾಯಗಾರನ ವಿಷಯದಲ್ಲೂ ಅನ್ವಯಿಸಿ ಸಬ್‌ಸಿಡಿಗಾಗಿ ಹಣ ತೆಗೆದಿಡಬೇಕಾಗುತ್ತದೆ. ಆಗ ಸುಮಾರು 2-3 ವರ್ಷಗಳಲ್ಲಿ ಮೈಸೂರು ಸರ್ಕಾರ 10 ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಮುಡಿಪಾಗಿಟ್ಟು ಖರ್ಚುಮಾಡಬೇಕಾಯಿತು. ಇಂಡಿಯಾ ಸರ್ಕಾರ 300 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಯಿತು. ಆ ನೀತಿಯನ್ನು ಅನುಸರಿಸಬೇಕಾಗುತ್ತದೆ. ಈ ರೀತಿಯಾಗಿ

4 P.M.

ಸಬ್ಸಿಡಿ ಒಂದು ಅಥವಾ ಎರಡು ಕೋಟಿ ರೂಪಾಯಿಗಳು ಎಷ್ಟಾಗುತ್ತದೋ ಅಷ್ಟನ್ನು ನಾವು ಲೆಕ್ಕ ಹಾಕಿ ಆ ಲೆಕ್ಕದ ಪ್ರಕಾರ ಬಡ್ಜೆಟ್ಟಿನಲ್ಲಿ ಹಣ ಒದಗಿಸದಿದ್ದರೆ ನಾವೀಗ ಏನು ನೀತಿಯನ್ನು ಪ್ರತಿಪಾದನೆಮಾಡುತ್ತಿದ್ದೇವೋ ಅದೆಲ್ಲವೂ ಶುಷ್ಕ ವಾದವಾಗುತ್ತದೆ. ಮೈಸೂರು ದೇಶದಲ್ಲಿ ಕಡಲೇಕಾಯಿ, ಮೆಣಸಿನಕಾಯಿ, ರಾಗಿ, ಬತ್ತ ಇಂಥ ಸಾಮಗ್ರಿಗಳೆಲ್ಲವನ್ನೂ ನಿಖರವಾದ ಬೆಲೆಗೆ ಕೊಂಡುಕೊಳ್ಳಬೇಕೆಂಬ ನೀತಿಯನ್ನು ಸರ್ಕಾರದವರು ಅನುಸರಿಸಿದರೆ ವರ್ಷವೊಂದಕ್ಕೆ ಸುಮಾರು ಹತ್ತು ಕೋಟಿ ರೂಪಾಯಿಗಳಾದರೂ ಸಾಲುವುದಿಲ್ಲ. ಇದು ಮೊದಲನೆಯ ಕಷ್ಟ. ಎರಡನೆಯ ಕಷ್ಟವೇನೆಂದರೆ, ಈ ನೀತಿಯನ್ನು ಒಂದು ಸಂಸ್ಥಾನದವರು ಅನುಸರಿಸಿ ಮಿಕ್ಕ ಸಂಸ್ಥಾನಗಳವರು ಏನಾದರೂ ಮಾಡಲಿ ಎಂದು ಬಿಡುವಹಾಗಿಲ್ಲ. ಇಂಡಿಯಾ ದೇಶದಲ್ಲಿರುವ ಎಲ್ಲಾ ಸರ್ಕಾರಗಳೂ ಕೂಡ ಒಂದು ನೀತಿಯನ್ನು ನಿರ್ಧರಿಸಿ ಅದಕ್ಕನುಸಾರವಾಗಿ ನಡೆಯಬೇಕಾಗುತ್ತದೆ. ಒಂದುವೇಳೆ ಅಗ್ರಿಕಲ್ಚರಲ್ ಮಿನಿಸ್ಟರ್ಸ್ ಕಾನ್ಫರೆನ್ಸಿನಲ್ಲಿ ಈ ವಿಷಯ ಬಂದಿರುವುದನ್ನು ತಿಳಿದುಕೊಳ್ಳದೆ ಸರ್ಕಾರದವರು ಮರೆತು ನಿದ್ದೆಹೋಗುತ್ತಿದ್ದಾರೆಂದು ಯಾರಾದರೂ ಹೇಳಿದರೆ ಅವರು ನಿದ್ದೆಮಾಡುತ್ತಿದ್ದಾರೆಂದು ಅರ್ಥಮಾಡಬಹುದೇ ಹೊರತು ಸರ್ಕಾರ ನಿದ್ದೆಮಾಡುತ್ತಿಲ್ಲ. ಈ ಪ್ರಶ್ನೆ ಅಗ್ರಿಕಲ್ಚರಲ್ ಮಿನಿಸ್ಟರ್ಸ್ ಕಾನ್ಫರೆನ್ಸಿನಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಪ್ಲಾನಿಂಗ್ ಕಮಿಷನ್ನಿಗೂ ಭಾರತ ಸರ್ಕಾರಕ್ಕೂ ಮತ್ತು ಸಂಸ್ಥಾನದ ಸರ್ಕಾರಕ್ಕೂ ಈ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. ಮುಂದಿನ ತಿಂಗಳು ನಡೆಯುವ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಈ ವಿಷಯ ಚರ್ಚೆಗೆ ಬರುತ್ತದೆ. ಪ್ಲಾನಿಂಗ್ ಕಮಿಷನ್‌ನವರು ನಮ್ಮ ಇಂಡಿಯಾ ದೇಶದ ಅಭಿವೃದ್ಧಿ ಕಾರ್ಯಗಳೇನೇನಿವೆಯೋ ಅವನ್ನು ಯೋಜನಾರೂಪವಾಗಿ ಮಾಡುತ್ತಿದ್ದಾರೆ. ಅದಕ್ಕೂ ಧಾರಣೆ ವಿಚಾರದಲ್ಲಿ ಅನುಸರಿಸಬೇಕಾದ ನೀತಿಗೂ ನಿಕಟವಾದ ಸಂಬಂಧವಿದೆ. ಇದನ್ನು ಯಾವುದೋ ಒಂದು ವರ್ಗದ ಪರವಾಗಿಯಾಗಲಿ ಅಥವಾ ಒಂದು ಒಳಭಾವನೆಯಿಂದಲಾಗಲಿ ತಿಳಿಸುತ್ತಿಲ್ಲ. ಇದು ತೀಕ್ಷ್ಣವಾಗಿ ಯೋಚನೆ ಮಾಡತಕ್ಕ ವಿಚಾರ. ವ್ಯವಸಾಯದಿಂದ ಉತ್ಪತ್ತಿಯಾಗುವ ಸಾಮಗ್ರಿಗಳ ಬೆಲೆ ಇಳಿದರೆ ಮಿಕ್ಕ ಸಾಮಗ್ರಿಗಳ ಬೆಲೆಯೂ ಇಳಿಯುತ್ತದೆಂಬುದು ಅರ್ಥಶಾಸ್ತ್ರಜ್ಞರು ಒಪ್ಪುವ ಮಾತು. ಇದಕ್ಕೆ ಒಂದು ತಿಂಗಳು ಅಥವಾ ಆರು ತಿಂಗಳು ಆಗಬಹುದು. ಏಕೆಂದರೆ ಎಲ್ಲಾ ಬೆಲೆಗಳಿಗೂ ವ್ಯವಸಾಯದಿಂದ ಉತ್ಪತ್ತಿಯಾಗುವ ಪದಾರ್ಥಗಳ ಬೆಲೆಗಳೇ ಆಧಾರ, ಅಸ್ತಿಭಾರ. ಈ ಅಸ್ತಿಭಾರ ಸ್ವಲ್ಪ ಕೆಳಗಿಳಿದರೆ ಮಿಕ್ಕ ಬೆಲೆಗಳೂ ಕೆಳಗೆ ಬರುತ್ತವೆ ಎಂಬುದು ಎಲ್ಲಾ ಎಕಾನಮಿಸ್ಟ್‌ಗಳೂ ಒಪ್ಪುವ ವಿಷಯ. ಆದ್ದರಿಂದ ಈಗ ವ್ಯವಸಾಯದ ಉತ್ಪನ್ನಗಳ ಬೆಲೆ ಕಡಮೆಯಾದರೆ ಕ್ರಮೇಣ ಮಿಕ್ಕ ಬೆಲೆಗಳು ಕಡಮೆಯಾಗಿ ಇನ್ಫ್ಲೇಟೆಟ್ ಎಕಾನಮಿ ಹೋಗಿ ಸ್ವಾಭಾವಿಕವಾದ ಎಕಾನಮಿ ಬರುತ್ತದೆ; ತತ್ಪರಿಣಾಮವಾಗಿ ಪಾಂಚವಾರ್ಷಿಕ ಯೋಜನೆಗೆ ಇನ್ಫ್ಲೇಟೆಡ್ ಎಕಾನಮಿಯ ಪ್ರಕಾರ 2,500 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿ ಬಂದಿರುವುದು ಬಹುಶಃ 2,000 ಕೋಟಿ ರೂಪಾಯಿಗಳಾದರೆ ಸಾಕಾಗಬಹುದು; ಈಗ ಸರ್ಕಾರಕ್ಕೆ ಎಷ್ಟು ಹಣ ಬೇಕೋ ಅಷ್ಟಕ್ಕಿಂತ ಕಡಮೆಯಾಗಿಯೇ ಆಗುತ್ತದೆ. ಆಗಲೇ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ನಾನು ವಿಚಾರ ಮಾಡಿರುವ ಹಾಗೆ, ಮೊದಮೊದಲು ಟೆಂಡರು ಕರೆದರೆ ಎಷ್ಟಕ್ಕೆ ಬರುತ್ತಿತ್ತೋ ಅದಕ್ಕಿಂತ ಕಡಮೆಗೆ ಬರುತ್ತದೆ; ಬೆಲೆಗಳು ಕಡಮೆಯಾಗುತ್ತಿವೆ. ಈ ರೀತಿ ಧಾರಣೆಗಳು ಕಡಮೆಯಾಗುತ್ತಿರುವಾಗ, ಈ ಸ್ವಭಾವವುಂಟಾಗಿರುವಾಗ ಇದಕ್ಕನುಸಾರವಾಗಿ ಎಲ್ಲಾ ಭಾಗದ ಬೆಲೆಗಳೂ ಕಡಮೆಯಾಗುವ ಹಾಗೆ ವ್ಯವಸ್ಥೆ ಮಾಡಬೇಕೆ ಅಥವಾ ವ್ಯವಸಾಯದ ಉತ್ಪನ್ನಗಳ ವಿಚಾರಕ್ಕೆ ಮಾತ್ರ ಗಮನಕೊಟ್ಟು ಮಿಕ್ಕದ್ದನ್ನೆಲ್ಲಾ ಇದ್ದಹಾಗೆಯೇ ಇರಿಸಬೇಕೇ ಎಂಬುದು ಬಹಳ ದೊಡ್ಡ ಪ್ರಶ್ನೆ. ಈ ಪ್ರಶ್ನೆ ಇನ್ನೂ ಚರ್ಚೆಯಲ್ಲೇ ಇದೆ. ಕೆಲವರು ವ್ಯವಸಾಯದ ಉತ್ಪನ್ನಗಳ ಬೆಲೆ ಕಡಮೆಯಾಗುತ್ತಿರುವಾಗ ಮಿಕ್ಕ ಬೆಲೆಗಳು ಕ್ರಮಕ್ರಮೇಣ ಕಡಮೆಯಾಗುತ್ತವೆ, ಆಗ we will go into a realistic economy ಎಂದು ವಾದಿಸುವವರೂ ಇದ್ದಾರೆ. ವ್ಯವಸಾಯದ ಉತ್ಪನ್ನಗಳಿಗೆ ಈರೀತಿಯಲ್ಲಿ ಕಡಮೆ ಬೆಲೆಯಾದರೆ ರೈತರಿಗೆ ರಕ್ಷಣೆ ಸಿಕ್ಕುವುದಿಲ್ಲ, ರಕ್ಷಣೆ ಸಿಕ್ಕುವಹಾಗೆ ಮಾಡಬೇಕು ಎಂದು ವಾದ ಮಾಡುವವರೂ ಇದ್ದಾರೆ. ಈ ಎರಡು ವಾದಗಳೂ ತುಂಬ ಗಹನವಾದವುಗಳಾಗಿವೆ. ಒಂದೇ ವಾದ ಮನಸ್ಸಿನಲ್ಲಿಟ್ಟು ವಾದಿಸುವುದಕ್ಕೆ ಸಾಧ್ಯವಿಲ್ಲ. ಪ್ಲಾನಿಂಗ್ ಕಾಲದಲ್ಲಿ ಪ್ಲಾನಿಂಗ್ ಎಂಬ ಯೋಜನಾ ಪರಿಚಯವಾಗಬೇಕು. ಈ ಯೋಜನೆಯಿಂದ ಯಾವ

(ಶ್ರೀ ಕೆ. ಹನುಮಂತಯ್ಯ.)

ಪ್ರಭಾವಯುತವಾದ ಪರಿಣಾಮವಾಗುತ್ತದೆಯೆಂದು ಯೋಚನೆಮಾಡಬೇಕಾದ ಕಾಲ ಬಂದಿದೆ. ಇದನ್ನು ತಿಳಿದುಕೊಂಡು ಸರಿಯಾದ ದಾರಿಯಲ್ಲಿ ಮುಂದುವರಿದರೆ, that is planned economy. ಈ ವಿಷಯವನ್ನು ತಾವುಗಳು ಪರ್ಯಾಲೋಚಿಸುವಾಗ ಈ ಬ್ಯಾಕ್‌ಗ್ರೌಂಡಿನಲ್ಲಿ ಈ ಆಧಾರದಮೇಲೆ ಪರಿಗಣನೆ ಮಾಡಬೇಕೆಂಬುದು ನನ್ನ ಸವಿನಯ ಸೂಚನೆ. ಈ ದಿವಸ ವ್ಯವಸಾಯಗಾರನಿಗೆ ರಕ್ಷಣೆ ಕೊಡಬೇಕಾದ ಒಂದು ನೀತಿಯೇನಿದೆಯೋ ಅದನ್ನು, ಆ ನೀತಿಯನ್ನು ಒಂದಲ್ಲ ಒಂದು ರೂಪದಲ್ಲಿ ಕಾರ್ಯಗತ ಮಾಡಬೇಕು ಎಂಬ ಅಭಿಪ್ರಾಯವನ್ನು ನಾನೂ ಇಟ್ಟುಕೊಂಡಿದ್ದೇನೆ. ಆದರೆ ನಾನೊಬ್ಬನೇ ಆ ಅಭಿಪ್ರಾಯವಿಟ್ಟುಕೊಂಡರೆ ಸಾಲದು. ಈ ಸಭೆಯೂ ಕೂಡ ಅದೇ ಅಭಿಪ್ರಾಯವುಳ್ಳದ್ದಾಗಿರಬೇಕು. ಇದರ ಜೊತೆಗೆ ಈ ಸಭೆಯ ಅಭಿಪ್ರಾಯವೇ ಇಂಡಿಯಾದೇಶದ ಎಲ್ಲಾ ಶಾಸನ ಸಭೆಗಳಲ್ಲೂ ಮೂಡಿ ಇಂಡಿಯಾ ಸರ್ಕಾರ ಒಪ್ಪಬೇಕು. ಆದ್ದರಿಂದ ನಾವು ಈಗ ಇದನ್ನು ಗಹನವಾಗಿ ಯೋಚನೆ ಮಾಡುವ ಒಂದು ಪರಿಸ್ಥಿತಿಯಲ್ಲಿದ್ದೇವೆ. ಇದನ್ನು ಸಾವಧಾನವಾಗಿ ಎಲ್ಲಾ ದೃಷ್ಟಿಯಿಂದಲೂ. ಕೂಡ ಯೋಚನೆ ಮಾಡಬೇಕು.

ಅಗ್ರಿಕಲ್ಚರಲ್ ಪ್ರಾಡ್ಯೂಸ್ ವಿಚಾರದಲ್ಲಿ ಮಾತನಾಡುವಾಗ ಬೆಲೆ ನಿರ್ಧಾರ ಮಾಡಬೇಕಾದ ಪ್ರಶ್ನೆಯನ್ನು ಈ ದಿವಸ ನಾವು ಚರ್ಚೆ ಮಾಡುತ್ತಿದ್ದೇವೆ. ಬೆಲೆ ನಿರ್ಧಾರ ಮಾಡುವುದಕ್ಕೆ ಕೈ ಹಾಕಿದರೆ ಅದನ್ನು ಯಾವ ರೀತಿ ಮಾಡಬೇಕೆಂಬುದು ಒಂದು ಮಹಾ ದೊಡ್ಡ ಪ್ರಶ್ನೆಯಾಗುತ್ತದೆ. ಒಂದು ಊರಿನಲ್ಲಿ ರಾಗಿಯಾಗಲಿ, ಬತ್ತವಾಗಲಿ ಒಂದು ಗೊತ್ತಾದ ಖರ್ಚಿನಲ್ಲಿ ಬೆಳೆಯುವುದಕ್ಕೆ ಸಾಧ್ಯವಾದರೆ ಇನ್ನೊಂದು 20 ಮೈಲಿ ದೂರದಲ್ಲಿರುವ ಸ್ಥಳದಲ್ಲಿ ಅಥವಾ ಬೇರೆ ಡಿಸ್ಟ್ರಿಕ್ಟಿನಲ್ಲಿ ಅದರ ಬೆಲೆ ಸ್ವಲ್ಪ ಹೆಚ್ಚುಕಡಮೆಯಾಗುತ್ತದೆ. There is no uniformity of cost of production. ಆ ಸಂದರ್ಭವೊದಗಿದಾಗ ನಾವೇನು ಮಾಡಬೇಕು ಎಂಬುದನ್ನು ಯೋಚನೆಮಾಡಬೇಕು. ಈ ಎಲ್ಲಾ ವಿಷಯಗಳನ್ನೂ ಕೂಡ ನಾವು ಗಮನಕ್ಕೆ ತೆಗೆದುಕೊಂಡು ಉತ್ತರೋತ್ತರ ಯಾವ ರೀತಿಯಲ್ಲಿ ರೈತನ ಹಿತರಕ್ಷಣೆಯನ್ನು ಮಾಡಬೇಕೆಂದು ಯೋಚನೆ ಮಾಡಬೇಕು. ಈ ಸಭೆಯ ಅಭಿಪ್ರಾಯವಾದರೂ ಕೂಡ ಸ್ಪಷ್ಟವಾಗಿದೆ. ಬೆಳೆಯತಕ್ಕವನ ಹಿತರಕ್ಷಣೆ ಈ ದೃಷ್ಟಿಯಿಂದ ಆಗಬೇಕೆಂದು ಈ ನಿರ್ಣಯದ ಯಾವ ಉದ್ದೇಶವಿದೆಯೋ ಅದನ್ನು ಸ್ವಾಗತಿಸಿ ಆ ಸದುದ್ದೇಶವನ್ನು ಸಂಬಂಧಪಟ್ಟ ಕಾನ್ಫರೆನ್ಸುಗಳಲ್ಲಿ, ಮೀಟಿಂಗುಗಳಲ್ಲಿ ಪ್ರತಿಪಾದಿಸಬೇಕು ಎಂಬುದೇ ನನ್ನ ನೀತಿಯಾಗಿದೆ ಎಂಬುದನ್ನು ಈ ಸಭೆಗೆ ತಿಳಿಸಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ಸ್ವಾಮಿ, ಈ ಬಹಳ ಗಹನವಾದ ವಿಚಾರದಲ್ಲಿ . . .

Mr. SPEAKER.—Sri Channabasappa, so many Hon'ble Members have spoken already. If you have any new points you may speak.

Sri H. M. CHANNABASAPPA.—Yes, Sir. ಮುಖ್ಯಮಂತ್ರಿಗಳು ಮಾತನಾಡುತ್ತಾ ಈ ವಿಷಯ ಬಹಳ ಗಹನವಾದುದು, ಈ ವಿಷಯದಲ್ಲಿ ಸರ್ಕಾರದವರು ಬಹಳ ತೀವ್ರಾಸಕ್ತಿಯುಳ್ಳವರಾಗಿದ್ದಾರೆ ಎಂದು ಹೇಳಿದಾಗ ಇದನ್ನು ಯಾವರೀತಿ ಬಗೆಹರಿಸಬೇಕೆಂಬ ಸಲಹೆ ಕೊಡುತ್ತಾರೆಂದು ಬಹಳ ಕಾತರದಿಂದಿದ್ದೆ. ಅವರ ಭಾಷಣದಲ್ಲಿ ಏನೂ ಕಂಡುಬರಲಿಲ್ಲ. ಇದುವರೆಗಾಗಲೇ ಪ್ರಸ್ತಾಪಮಾಡಿದ ಅಂಶಗಳಿಗೆ ನಾನು ಹೋಗುವುದಿಲ್ಲ. ಅವೆಲ್ಲಾ ನಿರ್ವಿವಾದವಾದ ಅಂಶಗಳೇ ಆಗಿವೆ. ದವಸಧಾನ್ಯಗಳನ್ನು ಬೆಳೆಯುವ ರೈತರ ಹಿತರಕ್ಷಣೆಯಾಗದಿದ್ದರೆ ದೇಶ ಏಳಿಗೆಯಾಗುವುದಿಲ್ಲವೆಂಬುದು ನಿಶ್ಚಯ. ಇದು ಬಹಳ ಅಗತ್ಯ ಎಂದು ಹೇಳುವಾಗ ಅದೇ ತೀವ್ರತೆಯಿಂದ ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾದದ್ದು ಅಗತ್ಯವೆಂದು ಸರ್ಕಾರಕ್ಕೆ ನಿವೇದಿಸುತ್ತೇನೆ. ಈಗ ಮುಖ್ಯಮಂತ್ರಿಗಳ ಭಾಷಣದಿಂದ ಒಂದು ಅಂಶ ಹೊರಬಿದ್ದಿತು. ದವಸಧಾನ್ಯಗಳ ಧಾರಣೆ ನಾವು ನಿಗದಿ ಮಾಡಿ ಅದೇ ಬೆಲೆಗೆ ಕೊಳ್ಳಬೇಕೆಂದು ಕಾನೂನು ಮಾಡಿದರೆ ನಮ್ಮ ಉದ್ದೇಶ ಸಾರ್ಥಕವಾಗುವುದಿಲ್ಲ ಎಂದು ಹೇಳಿದರು. ಅದನ್ನು ಒಪ್ಪುತ್ತೇನೆ. ದವಸ ಧಾನ್ಯಗಳ ಧಾರಣೆ ಇಳಿದಾಗ ಇತರ ಸಾಮಾನುಗಳ ಬೆಲೆಯ ಇಳಿಯುವುದು ಸ್ವಾಭಾವಿಕ, ಇದಕ್ಕೆ ಒಂದು ಪ್ಲಾನ್ಡ್ ಎಕಾನಮಿ ವ್ಯವಸ್ಥೆ ಮಾಡಬೇಕು ಎಂದು ಅವರು ಹೇಳಿದರು. ಆದರೆ ಆ ತರಹ ಈಕ್ವಲಿಬ್ರಿಯಂ ಸ್ಟೇಟ್ ಆಗುವವರೆಗೆ ಹಾಗೆಯೇ ಬಿಟ್ಟರೆ ಪರಿಸ್ಥಿತಿ ಕೆಡುತ್ತದೆ. ಜಮೀನು ಮಾಡುವುದೇ ಪಾಪಕರವೆಂಬ ಭಾವನೆ ಬಂದು ಎಲ್ಲರೂ ಪಟ್ಟಣ ಸೇರುತ್ತಾರೆ. ದವಸಧಾನ್ಯದ ಉತ್ಪತ್ತಿಗೆ ಕೇಂದ್ರಸರ್ಕಾರ ಮತ್ತು ಪ್ಲಾನಿಂಗ್ ಕಮಿಷನ್ನಿನವರು ಕೊಟ್ಟಿರುವ ಪ್ರಾಮುಖ್ಯತೆ ಕೇವಲ ಬರವಣಿಗೆಯಲ್ಲಿರುತ್ತದೆಯೇ ಹೊರತು ಕಾರ್ಯರೂಪಕ್ಕೆ ಬರುವುದಿಲ್ಲ. ಧಾನ್ಯಗಳ ಬೆಲೆ ಹತೋಟಿ ಮಾಡುವುದರಲ್ಲಿ ಬೇಕಾದಷ್ಟು ಕಷ್ಟವಿದೆ. ಈಗ ದವಸಧಾನ್ಯದ ಬೆಲೆ ನಿಗದಿಮಾಡಲು ಒಂದು ಕಾನೂನು ಮಾಡಲು ಇದರಿಂದ ಸಾಧ್ಯವಾಗುವುದಿಲ್ಲ. ಕಾನೂನು ಮಾಡಿ ಇದೇ ಧಾರಣೆಗೆ ಕೊಳ್ಳಬೇಕೆಂದು ಹೇಳಿ ಕಡ್ಡಾಯಮಾಡಿದರೂ ಯಥೇಚ್ಛವಾಗಿ ಬೆಳೆದಾಗ ಕೊಂಡುಕೊಳ್ಳುವವರು ಯಾರೂ ಮುಂದೆ ಬರುವುದಿಲ್ಲ. ಅಂಥ ಸಂದರ್ಭದಲ್ಲಿ ಯಾರು ಎಷ್ಟಕ್ಕೆ ತೆಗೆದುಕೊಳ್ಳುತ್ತಾರೋ ಅಷ್ಟಕ್ಕೆ ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಪ್ಲಾನ್ಡ್ ಎಕಾನಮಿಯೆಂದರೆ ಮುಖ್ಯಮಂತ್ರಿಗಳು ಹೇಳಿರುವುದು ಟೊಟಾಲಿಟೇರಿಯನ್ ಸರ್ಕಾರಗಳಲ್ಲಿ ಸಾಧ್ಯವೇ ಹೊರತು ಪ್ರಜಾಪ್ರಭುತ್ವ ಸರ್ಕಾರಗಳಲ್ಲಿ ಸಾಧ್ಯವಿಲ್ಲ. ನಾವೀಗ ಪ್ರಜಾಪ್ರಭುತ್ವದಲ್ಲಿ ಎಕನಾಮಿಕ್ ಪ್ಲಾನಿಂಗ್ ಮಾಡಬೇಕೇ ಹೊರತು ಪ್ಲಾನ್ಡ್ ಎಕಾನಮಿ ಮಾಡುವುದು ಸಾಧ್ಯವಿಲ್ಲ. ಈಗ ದವಸ ಧಾನ್ಯವನ್ನು ಸರ್ಕಾರ ಕೊಂಡು ಅದನ್ನು ವ್ಯಾಪಾರ ಮಾಡಿ ಅದರಿಂದ ಆಗುವ ನಷ್ಟಕ್ಕೆ ತಾವು ಜವಾಬ್ದಾರರಾಗುವುದಕ್ಕೆ ಸಾಧ್ಯವೆ ? ಎಂದು ಹೇಳಿದರು. ಅದು ವಾಸ್ತವ. ಜವಾಬ್ದಾರಿ ಹೊತ್ತ ಸರ್ಕಾರ ಪ್ರತಿವರ್ಷ ವ್ಯಾಪಾರಮಾಡಿ ಆದ ನಷ್ಟವನ್ನು ಸಬ್ಸಿಡಿ ಮೂಲಕ ಸರಿಪಡಿಸಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಈ ಸಮಸ್ಯೆಗೆ ಏನು ಮಾಡಬೇಕೆಂಬುದನ್ನು ಈವರೆಗೆ ಆಲೋಚನೆಮಾಡಿದ್ದೀರಾ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ನೀವು ಯೋಚನೆ ಮಾಡಿದ್ದರೆ ಹೇಳಿ.

Sri H. M. CHANNABASAPPA.—Then, the credit goes to me.

Sri K. HANUMANTHAIYA.—All right; I give you that credit. (*Laughter.*)

Sri H M CHANNABASAPPA.–Thank you. ಈ ದಿವಸದವರೆಗೂ ಈ ವಿಷಯ ಸರ್ಕಾರದ ಆಲೋಚನೆಯಲ್ಲಿದೆ ಎಂದು ಹೇಳುವ ಸ್ಥಿತಿಯಲ್ಲೇ ಇದ್ದೇವೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಮತ್ತು ಇತರ ಸದಸ್ಯರು ಈ ದಿನ ಈ ಪ್ರಶ್ನೆಯನ್ನು ಸಭೆಯ ಮುಂದಿಡದಿದ್ದರೆ ಪುನಃ ಇದು ಸಭೆಯಮುಂದೆ ಬರುವ ವರೆಗೂ ಆಲೋಚನಾಪರಿಸ್ಥಿತಿಯಲ್ಲೇ ಈ ಪ್ರಶ್ನೆ ಉಳಿಯುತ್ತಿತ್ತು. ಈಗಲಾದರೂ ಕಾರ್ಯಸಾಧನೆ ಆಗಲೇ ಬೇಕು. ಇನ್ನು ಮುಂದೆ ಆಹಾರ ಇಲಾಖೆಯ ಮುಖೇನ ದವಸಧಾನ್ಯಗಳನ್ನು ಕೊಂಡು ಮಾರಾಟ ಮಾಡುವ ನೀತಿಯನ್ನು ನಾವು ಒಪ್ಪುವುದಿಲ್ಲ. ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಸೂಚಿಸಿದಂತೆ, ಕಾಫಿ ಮಾರಾಟಕ್ಕೆ ಒಂದು ಮಾರ್ಕೆಟಿಂಗ್ ಬೋರ್ಡ್ ಮಾಡಿ ಬೆಳೆಯುವವನಿಗೆ ನಷ್ಟವಾಗದ ರೀತಿಯಲ್ಲಿ ಇಲ್ಲವೇ ಆದಾಯವಾಗುವ ರೀತಿಯಲ್ಲಿ ಯಾವ ರೀತಿಯಾಗಿ ಕಾಫಿ ಉತ್ಪತ್ತಿಯನ್ನು ಕಂಟ್ರೋಲ್ ಮಾಡಿ ಜನಗಳಿಗೆ ಒದಗಿಸುತ್ತಿದ್ದಾರೋ ಹಾಗೆಯೇ ಈ ಆಹಾರ ಧಾನ್ಯಗಳಿಗೆ ರಕ್ಷಣೆ ಕೊಡುವುದು ಅಗತ್ಯ. ಜೋಳ, ಗೋಧಿ, ಬತ್ತ, ರಾಗಿ ಈಗ ಸದ್ಯದಲ್ಲಿ ಬಹಳ ಮುಖ್ಯವಾದುವು. ಈ ನಾಲ್ಕು ಧಾನ್ಯಗಳ ಮಟ್ಟಿಗೆ ಬೆಲೆ ನಿರ್ಧಾರ ಮಾಡುವ ಕೆಲಸ ಆಗಬೇಕಾದ ಅಗತ್ಯ ವಿದೆ.

ಈ ವಿಚಾರದಲ್ಲಿ ನನ್ನ ಸಲಹೆ ಇಷ್ಟು: ಈಗ ತಾಲ್ಲೂಕು ಕೇಂದ್ರಗಳಲ್ಲಿ ಸೊಸೈಟಿಗಳಿವೆ. ಈ ಸೊಸೈಟಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆಗೆ ನಾನು ಹೋಗುವುದಿಲ್ಲ. ಕೆಲಸ ಮಾಡುವಂತೆ ಮಾಡಬೇಕಾದುದು ನಮ್ಮ ಕರ್ತವ್ಯ. ಸಹಕಾರ ಸಂಸ್ಥೆಗಳ ಮುಖ್ಯ ಧ್ಯೇಯವೇ ಸಹಕಾರವಾಗಿರುವಾಗ ಅವುಗಳ ಮೂಲಕ ಮಾರ್ಕೆಟಿಂಗ್ ಸೊಸೈಟಿಗಳನ್ನು ಪ್ರಾರಂಭಿಸಿ, ಅವುಗಳ ಮೂಲಕ ಬತ್ತ, ರಾಗಿ, ಜೋಳ ಮತ್ತು ಗೋಧಿಯನ್ನು ಕೊಂಡುಕೊಳ್ಳುವ ವ್ಯವಸ್ಥೆಮಾಡಬೇಕು. ಧಾನ್ಯಗಳ ಉತ್ಪತ್ತಿ ಖರ್ಚು ಎಷ್ಟಾಗುತ್ತದೆಯೋ ಅದರಮೇಲೆ ಶೇಕಡ 10ರಷ್ಟು ಸೇರಿಸಿ ಬೆಲೆ ನಿರ್ಧರಮಾಡಿ, ಈ ಸೊಸೈಟಿಗಳ ಮೂಲಕ ಮಾರಾಟ ಆಗುವ ವ್ಯವಸ್ಥೆ ಮಾಡಿದರೆ ಸಮರ್ಪಕವಾಗಿರುತ್ತದೆಂದು ನನ್ನ ಅಭಿಪ್ರಾಯ. ಧಾನ್ಯಗಳ ಮಾರಾಟವನ್ನು ಕೇಂದ್ರ ಸೊಸೈಟಿಗಳ ಮೂಲಕ ಎಲ್ಲಾ ಮಾರ್ಕೆಟಿಂಗ್ ಸೊಸೈಟಿಗಳಿಗೂ ಅನ್ವಯಿಸಿದರೆ ಸ್ವಲ್ಪಮಟ್ಟಿಗೆ ಉದ್ದೇಶ ಸಾಧನೆ ಆಗುವುದರಲ್ಲಿ ಸಂದೇಹವಿಲ್ಲ. ಈಗ ಸರ್ಕಾರದ ಮೇಲೆ ಬಹಳ ದೊಡ್ಡ ಜವಾಬ್ದಾರಿಯೊಂದಿದೆ. ರೈತಾಪಿ ಜನರಿಗೆ ತೊಂದರೆ ಒದಗಿದ ಸಂದರ್ಭದಲ್ಲಿ ಅವರಿಗೆ ತಕ್ಕ ರಕ್ಷಣೆ ಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಶೇಕಡ 70ರಷ್ಟು ಮಂದಿ ಜನರಿಗೆ ಕಷ್ಟಪರಿಸ್ಥಿತಿ ಒದಗಿರುವಾಗ ಅವರ ರಕ್ಷಣೆಯ ವಿಚಾರದಲ್ಲಿ ತೀವ್ರ ಕಾರ್ಯಕ್ರಮ ಕೈಗೊಳ್ಳುವುದು ಅವಶ್ಯಕ. ತಾವು ರೈತರ ಹಿತರಕ್ಷಣೆಗಾಗಿ ನಮ್ಮ ಮನಸ್ಸಿಗೆ ಸಮಾಧಾನವಾಗುವ ಹಾಗೆ ವ್ಯವಸ್ಥೆಮಾಡಿದರೆ ಮಾತ್ರ ನಮ್ಮ ಅಭಿನಂದನೆಗೆ ಅರ್ಹರು. ಹಾಗಿಲ್ಲದಿದ್ದರೆ ತಾವು ಹೇಳುವುದೆಲ್ಲ ಬರೀ ವಾಚಾ ತೃಪ್ತಿಗಾಗಿ ಎಂದು ಹೇಳಬೇಕಾಗುತ್ತದೆ ; ನಿಮ್ಮ ಆಸೆಗೆ ತಕ್ಕಂತೆ ನಿಮ್ಮ ಮನಸ್ಸಿನ ಭಾವನೆ ಇಲ್ಲ ಎಂದು ಹೇಳಬೇಕಾಗುತ್ತದೆ.

Mr. SPEAKER.—It is time, Sri Channabasappa.

Sri H. M. CHANNABASAPPA.–Well, Sir, I will close. ಈ ವಿಷಯದಲ್ಲಿ ಸೂಕ್ತ ಸಲಹೆ ಮಾಡುವುದಕ್ಕೆ ಸರ್ಕಾರದವರು ತಕ್ಷಣ ಅನುಭವಸ್ಥರನ್ನೊಳಗೊಂಡ ಒಂದು ಸಮಿತಿ ರಚಿಸಿ, ಅದು ನಿರ್ದಿಷ್ಟ ಕಾಲದಲ್ಲಿ ವ್ಯವಸ್ಥಿತವಾದ ಯೋಜನೆಯೊಂದನ್ನು ಸರ್ಕಾರಕ್ಕೆ ಕೊಟ್ಟು, ಆ ಆಲೋಚನೆಯ ಪ್ರಕಾರ ಸರ್ಕಾರ ಅತಿ ಕ್ಷಿಪ್ರವಾಗಿ ಕಾರ್ಯಕ್ರಮ ಕೈಗೊಂಡು ರೈತರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ತಿಳಿಸಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

Sri Mulka GOVINDA REDDY (Chitaldrug).—Mr. Speaker, I support the resolution that has been moved.

Sri M. MADIAH.—Sir, the subject has been sufficiently discussed and I move for closure.

Mr. SPEAKER.—The Hon'ble Member is on his legs. I will put the closure motion to the vote of the House after he closes his speech.

***Sri Mulka GOVINDA REDDY.**— This is a very important problem. I quite realise the difficulties enumerated by the Leader of the House that it will be difficult to fix the price for agricultural products while the prices of industrial products will be left to the goodwill of the market. Of course, under a capitalistic economy, it is really difficult to fix the prices of certain commodities and leave the prices of other products to the goodwill of the market. The Chief Minister was pleading for something in economics. If we do not guarantee a minimum price for agriculturists, not only the incentive in him to grow more food crop or any other product to enrich the country will be lost but also it will work as hardship in the larger interests of the consumers in the production of foodgrains and also other necessaries of life. What is happening now is, agricultural products, especially prices of food crops are falling whereas the prices of industrial products are not falling in consonance with the fall in the prices of agricultural products, so much so the agriculturist will be at a risk. It is but right that the Government should come forward to guarantee minimum prices to the agriculturist. Otherwise, the agriculturist will be at the mercy of the market and as we have seen by past experience, the agriculturist is the one man who suffers whereas the manufacturers of industrial products will not suffer. Of course, prices of agricultural

(SRI MULKA GOVINDA REDDY.)

products many a time will depend on what import and export policy the Government of India will adopt. Especially, we have seen how the prices of groundnuts have gone down because some policy has been adopted by the Government of India.

Sri T. MARIAPPA (Mysore City-North).—Now there is no export.

Sri Mulka GOVINDA REDDY.—There is agitation now that the ban imposed on the export of oil seeds has worked havoc on the price structure of oil seeds in India. So the price of agricultural products including food-crops and many other crops will depend on the policy of the Government of India in this respect. Many a time the policy of the Government of India is influenced to a great extent by merchants. The mercantile community will try to see that by the Government of India adopting a certain policy the prices of oil seeds and exportable products are reduced so that the producers may sell these oil seeds and when the merchants buy produce at a very cheap rate they will try to see that the ban is removed and export them. The producer is at a loss and the merchant is the gainer at the cost of the producer. If the foreign trade is in the hands of the Government of India, it is possible to see that whatever profits the Government of India earns may be distributed to the producer of these products. Of course, if there is planned economy, it is possible to have crop planning. To what extent we should grow food crops, to what extent we should grow money crops, etc. We cannot simply say that just because we want food crops you all must grow food crops and not money crops. If you do so, we will not be in a position to earn foreign exchange and bring machinery for our industrial development. So, in that case we must have crop planning which is very necessary. If you want to guarantee minimum price to the agriculturist, you must have crop planning and it is not possible for any one State to introduce or guarantee a minimum price for the agriculturist. The Government of India should come forward and see that the prices are guaranteed for all the products produced by the agriculturist and also that the necessaries required by the agriculturist are supplied at certain rates. The products that are manufactured by the industrialist must be supplied to the agriculturist at prices guaranteed and the Government of India should come forward and guarantee. It is necessary, if we want to improve and go to the aid of agriculturist, that we must give a minimum guarantee of prices.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—I rise to a point of order, Sir. ಮಾನ್ಯ ಸದಸ್ಯರು ಸಭೆಯಲ್ಲಿ ಭಾಷಣ ಮಾಡುವಾಗ ನೀರು ಕುಡಿಯಬಾರದು ಎಂದು ಅಧ್ಯಕ್ಷರು ರೂಲಿಂಗ್ ಹಿಂದೆ ಕೊಟ್ಟಿರುತ್ತಾರೆ. ಆದುದರಿಂದ ಹಾಗೆ ಮಾಡಬಾರದು.

Mr. SPEAKER.—There is no point of order. Now, as Sri Madiah has already moved a closure motion on this resolution, I will put it to the House. The question is.—

"That the question be now put."

The motion was negatived.

Mr. SPEAKER.—The debate will continue.

Sri M. MADIAH.—I rise to a point of order. You gave a ruling that Sri Mulka Govinda Reddy will be the last speaker.

Mr. SPEAKER.—I am sorry; you have evidently misheard me. I said that I would put the closure motion to the vote after the close of his speech.

4-30 P.M.

*ಶ್ರೀ ಟಿ. ಮರಿಯಪ್ಪ.—ಸ್ವಾಮಿ, ಶ್ರೀಮತಿ ಸಿದ್ದಮ್ಮನವರು ಸಭೆಯ ಮುಂದೆ ತಂದಿರುವ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ದೇಶದ ಆರ್ಥಿಕ ಸ್ಥಿತಿಯನ್ನು ಪುನರ್ರಚನೆ ಮಾಡತಕ್ಕ ಉದ್ಯಮಕ್ಕೆ ಕೇಂದ್ರ ಸರ್ಕಾರದವರು ಮತ್ತು ಸಂಸ್ಥಾನಗಳ ಸರ್ಕಾರದವರು ಕೈ ಹಾಕಿದ್ದಾರೆ. ರಾಜಕೀಯ ಸ್ವಾತಂತ್ರ್ಯ ಬಂದ ತಕ್ಷಣ ಪ್ರಜೆಗಳಿಗೆ ಸುಖ, ಸೌಲಭ್ಯ, ಸಮಾಧಾನ ಬರುವುದಿಲ್ಲ. ರಾಜಕೀಯ ಸ್ವಾತಂತ್ರ್ಯವನ್ನು ಸಾಧನೆಯ ಮಾರ್ಗವನ್ನಾಗಿ ಉಪಯೋಗಿಸಿಕೊಂಡು ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯಬೇಕಾದದ್ದು ಅಗತ್ಯ. ಆ ದೃಷ್ಟಿಯಿಂದ ಬಹಳ ಅಧೋಗತಿಗೆ ಹೋಗಿರುವ ಮತ್ತು ದುರವಸ್ಥೆಗೆ ಇಳಿದಿರುವ ಈ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಪುನರುದ್ಧಾರ ಮಾಡಬೇಕು; ಜೀರ್ಣೋದ್ಧಾರ

ಮಾಡಬೇಕು. ಅದನ್ನು ಪುನರ್ರಚನೆ ಮಾಡಿ ನಮ್ಮ ಸನ್ನಿವೇಶಕ್ಕೆ ಸರಿಯಾಗಿ ಹೊಂದಿಸಿಕೊಳ್ಳಬೇಕೆಂಬ ದೃಷ್ಟಿಯಿಂದಲೇ ಯೋಜನಾ ಸಮಿತಿಯವರು ಅನೇಕ ಅರ್ಥಿಕ ಯೋಜನೆಗಳನ್ನು ದೇಶದ ಮುಂದೆ ಇಟ್ಟಿದ್ದಾರೆ. ಅದರ ಪೈಕಿ ವ್ಯವಸಾಯಾಭಿವೃದ್ಧಿ ಆದ ಹೊರತು ನಮ್ಮ ಆಯವ್ಯಯಕ್ಕೆ ಭದ್ರವಾದಂಥ ತಳಹದಿ ಬರುವುದಿಲ್ಲ ಎಂದು ಹೇಳಿ ಈ ಅಗ್ರಿಕಲ್ಚರಲ್ ಪ್ರೊಡಕ್ಷನ್‌ಗೆ ಪ್ರಥಮ ಸ್ಥಾನವನ್ನು ಯೋಜನಾ ಸಮಿತಿಯವರು ಕೊಟ್ಟಿದ್ದಾರೆ. ದೇಶದಲ್ಲಿ 1942ನೇ ಇಸವಿಯಲ್ಲಿ ಉಂಟಾದ ಆಹಾರ ಪರಿಸ್ಥಿತಿ ಮತ್ತು ನಮ್ಮ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಮಾಲುಗಳ ಅಭಾವ ಇದೆಲ್ಲವನ್ನು ಮನಗಂಡು ವ್ಯವಸಾಯದ ಉತ್ಪನ್ನಕ್ಕೆ ಪ್ರಥಮಸ್ಥಾನ ಕೊಟ್ಟಿದ್ದಾರೆ. ಆಹಾರೋತ್ಪನ್ನವಾದ ಹೊರತು ಈ ದೇಶದ ಆರ್ಥಿಕ ಸ್ಥಿತಿ ಭದ್ರವಾಗಿರುವುದಿಲ್ಲ. ಆದ್ದರಿಂದ ವ್ಯವಸಾಯೋತ್ಪನ್ನ ಹೇರಳವಾಗಿ ಆಗಬೇಕು, ನಾವು ಹೊರಗಡೆಯ ದೇಶವನ್ನು ಇದಕ್ಕಾಗಿ ಅವಲಂಬಿಸಬಾರದು, ಇದು ಭದ್ರವಾದರೆ ಅನಂತರ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದಲೂ ಕೂಡ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಗೆ ಪ್ರಥಮಸ್ಥಾನ ಕೊಟ್ಟಿದ್ದಾರೆ. ಇದರಲ್ಲಿ ಒಂದೆರಡು ವಿಷಯಗಳನ್ನು ಸ್ಥೂಲವಾಗಿ ಹೇಳುತ್ತೇನೆ. ಭೂಸಂಬಂಧವಾದ ಸುಧಾರಣೆಗಳು ಆಗಬೇಕು, ಯಾರು ಭೂಮಿಯ ಉತ್ಪನ್ನದಲ್ಲಿ ನಿರತರಾಗಿದ್ದಾರೋ .ಅವರ ದುಡಿಮೆಗೆ ತಕ್ಕ ಫಲ ಬರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಇದನ್ನೆಲ್ಲಾ ಯೋಜನಾ ಸಮಿತಿಯವರು ಮಾಡಿದ್ದಾರೆ.

ಒಂದು ಅಭಿಪ್ರಾಯವನ್ನು ಶ್ರೀಮತಿ ಸಿದ್ದಮ್ಮನವರು ಸಭೆಯ ಮುಂದೆ ಇಟ್ಟಿದ್ದಾರೆ. ನಿಜ, ರೈತ ಕಷ್ಟಪಟ್ಟು ಉತ್ಪನ್ನ ಮಾಡಿದರೆ, ಆತನಿಗೆ ಸರಿಯಾದಂಥ ಬೆಲೆ ಬರದೇ ಹೋದರೆ ಆತ ನಿರಾಶನಾಗುತ್ತಾನೆ, ಆ ಉದ್ಯೋಗದಿಂದ ಆತನಿಗೆ ಸರಿಯಾದ ಪ್ರತಿಫಲ ಬರುವುದಿಲ್ಲ ಎಂದು ಹೇಳಿ ಅವರು ಈ ಸಭೆಯ ಮುಂದೆ ಈ ವಿಷಯವನ್ನು ಇಟ್ಟಿದ್ದಾರೆ. 1951ನೇ ಇಸವಿ ಸೆನ್ಸೆಸ್ ನೋಡಿದರೆ ಆದರಲ್ಲಿ occupational grades ವಿಚಾರ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಸಾಧಾರಣವಾಗಿ ಮೈಸೂರು ದೇಶ ಕೈಗಾರಿಕೆಗಳಲ್ಲಿ ಅಭಿವೃದ್ಧಿ ಹೊಂದಿದ ದೇಶ ಎಂದು ನಾವು ಹೇಳಿಕೊಂಡರೂ ಕೂಡ 10. 2 per cent of the population ಮಾತ್ರ ಕೈಗಾರಿಕೆಯಿಂದ ಪರಿಪೋಷಿತರಾಗುತ್ತಾ ಇದ್ದಾರೆ. ನಮ್ಮ Industrial economy weak ಆಗಿದೆ. ಅಷ್ಟೇ ಅಲ್ಲದೆ ನಮ್ಮ ಮೈಸೂರಿನ ರಿಪೋರ್ಟಿನಲ್ಲಿ extra ಒಂದು ಪದ ಉಪಯೋಗಿಸಿದ್ದಾರೆ. Even though we are boasting that we are an industrialised country, still our economy is weak. ಬಾಕಿ, ಅಕ್ಕಪಕ್ಕದ ಪ್ರಾಂತ್ಯಗಳಲ್ಲಿ ಕೈಗಾರಿಕೆಯಿಂದ ಎಷ್ಟು ಜನ ಪರಿಪೋಷಿತರಾಗುತ್ತಾ ಇದ್ದಾರೋ ಅಷ್ಟುಕೂಡ ನಾವು ಪರಿಪೋಷಿತರಾಗಿಲ್ಲ. ಕೇವಲ 1 ಲಕ್ಷ ಜನಗಳಿಗೆ ಮಾತ್ರ ಅದು ಅನ್ನ ನೀಡುತ್ತಾ ಇದೆ. ಆದ್ದರಿಂದ ಮೈಸೂರಿನ ಮುಖ್ಯವಾದ ಎಕಾನಮಿ ಕೂಡ-ಅಗ್ರಿಕಲ್ಚರಲ್ ಎಕಾನಮಿ. ಹೆಚ್ಚು ಜನಗಳು ಭೂಮಿಯಿಂದಲೇ ಜೀವನ ಮಾಡತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಮೊನ್ನೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು 50 ಲಕ್ಷ ಜನ ಸ್ವಂತ ಜಮೀನು ಇಟ್ಟುಕೊಂಡು ವ್ಯವಸಾಯ ಮಾಡುತ್ತಾ ಇದ್ದಾರೆ ಎಂದು ಹೇಳಿದರು. ಸೆನ್ಸೆಸ್ ರಿಪೋರ್ಟಿನಲ್ಲೂ ಕೂಡ ಸುಮಾರು ಶೇಕಡ 69 ಜನ ವ್ಯವಸಾಯದಿಂದಲೇ ಜೀವನ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. 1921ನೇ ಇಸವಿಯಿಂದ 1951ನೇ ಇಸವಿಯವರೆಗೂ ಅಂಕಿಅಂಶಗಳನ್ನು ಪರಿಶೀಲನೆ ಮಾಡಿದರೆ ಭೂಮಿಯಿಂದ ಜೀವನ ಮಾಡುವವರೇ ಜಾಸ್ತಿ ಆಗುತ್ತಾರೆ, ಭೂಮಿಯ ಮೇಲೆ ಒತ್ತಡ ಜಾಸ್ತಿ ಆಗುತ್ತಾ ಇದೆ ಎಂಬ ಕಾರಣವನ್ನು ನಮೂದಿಸಿದ್ದಾರೆ. 1951ನೇ ಇಸವಿ ಸೆನ್ಸೆಸ್ ರಿಪೋರ್ಟ್ ಪ್ರಕಾರ ಸಣ್ಣಪುಟ್ಟ ಕೈಗಾರಿಕೆಗಳಲ್ಲಿ 2½ ಲಕ್ಷ ಜನ ಜೀವನ ಮಾಡುತ್ತಾ ಇದ್ದ ಸಂಖ್ಯೆ ವರ್ಷೇ ವರ್ಷೇ ಇಳಿಯುತ್ತಹೋಗಿ ಈಗ 1½ ಲಕ್ಷಕ್ಕೆ ಇಳಿದಿದೆ. ಎಂದರೆ ಗೃಹ ಕೈಗಾರಿಕೆಯಿಂದ ಜೀವನ ಮಾಡತಕ್ಕ ಜನ ಕಡಿಮೆ ಆಗಿದೆ. ಅದರಿಂದ ಪ್ರತಿಫಲ ಇಲ್ಲದೆ, ವಿಧಿ ಇಲ್ಲದೆ ಜಮೀನಿನ ಕಡೆಗೆ ಹೊರಟಿದ್ದಾರೆ. 1-2 ಎಕರೆ ಇಟ್ಟುಕೊಂಡು ಜೀವನ ಮಾಡುವವರು ಅಥವಾ ಕೂಲಿಗಾರರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ ಎಂಬುದು ಅದರಿಂದ ವ್ಯಕ್ತಪಡುತ್ತದೆ. ಶ್ರೀಮತಿ ಸಿದ್ದಮ್ಮನವರು, ಬೇರೆ ರಹ ಇಲ್ಲದೆ, ಕಷ್ಟಪಟ್ಟು ಭೂಮಿಯನ್ನು ಪಡೆದುಕೊಂಡು ವ್ಯವಸಾಯೋತ್ಪನ್ನ ಮಾಡತಕ್ಕ ಮನುಷ್ಯನಿಗೆ ಸರಿಯಾದ ಬೆಲೆ ಬರದಿದ್ದರೆ ಬಹಳ ಕಷ್ಟಕ್ಕೆ ಈಡಾಗುತ್ತಾನೆ ಎಂಬ ವಿವರಣೆಯನ್ನು ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಹೇಳುವುದಾದರೆ ಮತ್ತು ಶ್ರೀಮಾನ್ ಚನ್ನಬಸಪ್ಪನವರು ಹೇಳಿದಹಾಗೆ ಇದನ್ನು ಬಹಳ ತೀವ್ರವಾಗಿ ಆಲೋಚನೆ ಮಾಡಬೇಕು. ಇಷ್ಟು ಹೊತ್ತಿಗೆ ಪರ್ಯಾಲೋಚನೆ ಮಾಡಿ ಯೋಜನೆ ಇಡಬೇಕಾಗಿತ್ತು, ನಿಜ. ಆದರೆ ಇದು ಅಷ್ಟು ಸುಲಭವಲ್ಲ. ಹಿಂದೆ ಬ್ರಿಟಿಷರು ನಮ್ಮ ದೇಶದಲ್ಲಿ ಆಳುತ್ತಾ ಇದ್ದಾಗ ಇದ್ದ ಪರಿಸ್ಥಿತಿಯನ್ನು ನೋಡಿದರೆ ಯಾವ ಪ್ರಾಂತ್ಯ ತೀವ್ರ ಕೆಳಮಟ್ಟಕ್ಕೆ ಇಳಿದಿತ್ತು, ತೀರ ಅಧೋಗತಿಗೆ ಹೋಗಿತ್ತು ಎಂದರೆ ಅದು ಬಂಗಾಳ ದೇಶ. Because it was longest under the British rule, it is the poorest country today. ನಾನು ಒಂದು ಅಂಗುಲವನ್ನು ಬಿಡದೆ ನೋಡಿಕೊಂಡುಬಂದಿದ್ದೇನೆ; ಕಷ್ಟಗಳು ಇವೆ. ಮೈಸೂರು ದೇಶ ಇಷ್ಟೊಂದು ಇಂಡಸ್ಟ್ರಿಯಲ್ ಆಗಿರುವಾಗ, ಇಲ್ಲೇ ಹೀಗಿದ್ದರೆ ಅಲ್ಲಿ ಹೇಗಿರಬೇಕು ? ನಮ್ಮಲ್ಲಿ ಒಂದರಿಂದ ಐದು ಎಕರೆ ಹೊಂದಿರತಕ್ಕವರು ವಿಪರೀತ ಜನ ಇದ್ದಾರೆ. ಹೀಗೆ ಅಂಕಿ ಅಂಶಗಳನ್ನು ಹೋಲಿಸಿ ನೋಡಿದರೆ, ವಾಸ್ತವ ಸ್ಥಿತಿಯನ್ನು ನೋಡಿದರೆ ನಮ್ಮ ದೇಶದಲ್ಲಿ ಬೆಳೆಯುತಕ್ಕ ರೈತರಿಗೆ ಸರಿಯಾದ ಬೆಲೆ ಬರಬೇಕಾದದ್ದು ಬಹಳ ಅಗತ್ಯ ಎಂಬುದು ನಿರ್ವಿವಾದವಾದದ್ದು. ಆದರೆ ಈ ವಿಷಯ ಅಷ್ಟು ಸುಲಭವಲ್ಲ. ನಮ್ಮಲ್ಲಿ ಅಂಕಿ ಅಂಶಗಳ ಸಂಗ್ರಹ ಮಾಡತಕ್ಕ ಒಂದು ವ್ಯವಸ್ಥೆ ಇಲ್ಲಿಯವರೆಗೂ ಆಗಿಲ್ಲ. ಯೋಜನಾ ಸಮಿತಿಯವರು ಈ ಯೋಜನೆಗಳನ್ನು ಮಾಡುವಾಗ ಅವರೂ ಸಹ ಹೇಳಿದ್ದಾರೆ. ನಮ್ಮ ದುರದೃಷ್ಟದಿಂದ ದೇಶದಲ್ಲಿ ಬಹಳ ಅಗತ್ಯವಾಗಿ ಬೇಕಾಗಿರತಕ್ಕ ಅಂಕಿ ಅಂಶಗಳನ್ನು ತೋರಿಸತಕ್ಕ ವ್ಯವಸ್ಥೆ ಇಲ್ಲದೇ ಇರುವುದರಿಂದ ನಮ್ಮ ಕೆಲಸಕ್ಕೆ ಬಹಳ ತೊಂದರೆ ಆಗಿದೆ ಎಂದು ಹೇಳಿದ್ದಾರೆ. ಇನ್ನು ಮುಂದೆ ಅದಕ್ಕೂ ಕೇಂದ್ರ ಸರ್ಕಾರದವರೂ, ಸಂಸ್ಥಾನ ಸರ್ಕಾರದವರೂ ವ್ಯವಸಾಯೋತ್ಪನ್ನಗಳ ಬೆಲೆಯನ್ನು ಸರಿಯಾಗಿನೋಡಿ, ಎಂದರೆ ಸರಿಯಾದ, ನ್ಯಾಯವಾದ ಬೆಲೆ ಎಲ್ಲೆಲ್ಲಿ ಯಾವ ಯಾವ ಬೆಲೆ ಇದೆ ಎಂಬ ಅಂಕಿ ಅಂಶ ಸಂಗ್ರಹಿಸಿ, ಆ ಬೆಲೆಯನ್ನು ಟ್ಯಾಬ್ಯುಲೇಟ್ ಮಾಡಿ, ಸರಿಯಾದ ಸ್ಟ್ಯಾಟಿಸ್ಟಿಕ್ಸ್ ತಯಾರುಮಾಡಬೇಕು ; ಸರಿಯಾದ ಅಂಕಿ ಅಂಶಗಳಿಲ್ಲದೆ ಬೆಲೆ ನಿಗದಿಮಾಡತಕ್ಕದ್ದು ಬಹಳ ಕಷ್ಟ; ಆದ್ದರಿಂದ ಸಂಸ್ಥಾನ ಸರ್ಕಾರ, ಕೇಂದ್ರ ಸರ್ಕಾರ ಎರಡೂ ಕೂಡ

(ಶ್ರೀ ಟಿ. ಮರಿಯಪ್ಪ.)

ಈ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಬೇಕು, ಆ ಬಗ್ಗೆ ಸೂಕ್ತ ಸಲಹೆ ಕೊಡಬೇಕೆಂದು ಪ್ರಾಯಶಃ ಕೇಂದ್ರ ಸರ್ಕಾರದಿಂದ ಸಲಹೆ ಬಂದಿರಬಹುದು. ಎರಡನೆಯದಾಗಿ ಯೋಜನಾ ಸಮಿತಿಯವರೂ ಸಹ ಇದನ್ನು ಆಲೋಚನೆ ಮಾಡುತ್ತಾ ಇದ್ದಾರೆ. ಒಂದು ಬಹಳ ಸುಲಭವಾದ ಮಾರ್ಗ ಎಂದರೆ ಇಂಡಿಯಾ ದೇಶಕ್ಕೆ ಒಂದು ಯೋಜನೆ ಇಟ್ಟುಕೊಂಡು ಉತ್ಪನ್ನವಾದಂಥ ಯಾವ ಯಾವ ವಸ್ತು ಇದೆಯೋ ಅದರ ಬೆಲೆ ಒಂದು ಕನಿಷ್ಠಾಂಶಕ್ಕಿಂತ ಕಡಿಮೆ ಆದಾಗ ಸಹಾಯ ಮಾಡಬೇಕು ಎಂಬ ಪ್ರಶ್ನೆ ಬಹಳ ಕಠಿಣವಾದದ್ದು, ಬಹಳ ಕ್ಲಿಷ್ಟವಾದದ್ದು. ಯೋಜನಾ ಸಮಿತಿಯವರೂ ಕೂಡ ಈ ವಿಷಯದಲ್ಲಿ ಒಂದು ನಿರ್ಧಾರಕ್ಕೆ ಬಂದಿಲ್ಲ. ಅವರ ಮನಸ್ಸಿನಲ್ಲೂ ಇದೆ. ನಮ್ಮ ದೇಶದ ಅಭ್ಯುದಯ ಆಗಬೇಕಾದರೆ ರೈತನ ಅಭ್ಯುದಯ ಆಗಬೇಕು. ರೈತ ಉತ್ಪನ್ನ ಮಾಡತಕ್ಕ ವಸ್ತುವಿಗೆ ಸರಿಯಾದ ಬೆಲೆ ದೊರೆಯಬೇಕು ಎಂಬುದನ್ನು ಅವರೂ ಒಪ್ಪಿಕೊಂಡಿದ್ದಾರೆ. ಆದರೆ ಅದನ್ನು ಹೇಗೆ ಮಾಡಬೇಕು ? ವ್ಯವಸಾಯಕ್ಕಾಗತಕ್ಕ ಖರ್ಚನ್ನು ಗೊತ್ತುಮಾಡುವುದು ಕಷ್ಟ. ಒಂದೊಂದು ಸಂಸ್ಥಾನಕ್ಕೂ, ಒಂದೊಂದು ಪ್ರದೇಶಕ್ಕೂ ಮತ್ತು ಅಲ್ಲಿರತಕ್ಕ ಸನ್ನಿವೇಶಕ್ಕೂ ಬಹಳ ವ್ಯತ್ಯಾಸವಿದೆ. ಆ ದೃಷ್ಟಿಯಿಂದಲೂ ಕೂಡ ಇದರ ವಿಷಯದಲ್ಲಿ ಸೈಂಟಿಫಿಕ್ ಎಂಕ್ವೈರಿ ಮಾಡುತ್ತೇವೆ ಎನ್ನುವುದಕ್ಕೂ ಕಷ್ಟ. ನಮಗೆ ಎರಡು ವರ್ಷ ಸರಿಯಾಗಿ ಮಳೆ ಬೆಳೆ ಆದರೆ ದೇಶದಲ್ಲಿ ಬಹು ಬೇಗ ಬೆಲೆ ಇಳಿಯತಕ್ಕ ಪರಿಸ್ಥಿತಿ ಇದೆ. ಹೋದ ವರ್ಷ, ಈ ವರ್ಷ ಮಳೆ ಬೆಳೆ ಸಕಾಲಕ್ಕೆ ಆಗಿದ್ದರೆ ಬೆಲೆ ಇಳಿಯುತ್ತಾ ಇತ್ತು. ಮೈಸೂರು ದೇಶದಲ್ಲಿ ರಾಗಿ ಬೆಳೆಯತಕ್ಕ ಪ್ರದೇಶದಲ್ಲಿ ಮಳೆ ಇಲ್ಲದೆ ರಾಗಿ ಬೆಳೆ ಕೆಟ್ಟಿತು. ಆದ್ದರಿಂದ ರಾಗಿ ಬೆಲೆ ಐದು ಸೇರು ಆಗದೆ ಇದೆ. ಈ ರೀತಿ ವಿಶೇಷ ವ್ಯತ್ಯಾಸವಾಗುತ್ತಾ ಇರುವುದರಿಂದ ನಾವು ಒಂದು ಸೈಂಟಿಫಿಕ್ ಎಂಕ್ವೈರಿ ಮಾಡಿ ಬೆಲೆ ನಿಗದಿಮಾಡುತ್ತೇವೆ ಎನ್ನುವುದು ಬಹಳ ಕಷ್ಟ. ಮತ್ತು ಅದು ಆಯಾಯಾ ಪ್ರದೇಶಗಳನ್ನು ಅನುಸರಿಸಿದೆ. ಒಂದು ಅಂದಾಜಿನಮೇಲೆ ಇಷ್ಟು ಬೆಲೆಗಿಂತ ಕಡಮೆಯಾದಾಗ ಸರ್ಕಾರದವರು ಸಹಾಯಕ್ಕೆ ಬರಬೇಕು ಎಂಬ ತತ್ವವೇನಿದೆಯೋ ಅದನ್ನು ಕೇಂದ್ರ ಸರ್ಕಾರದವರು ಮತ್ತು ಸಂಸ್ಥಾನಗಳ ಸರ್ಕಾರದವರು ಒಪ್ಪಿಕೊಳ್ಳಬೇಕು. ಯಾವಾಗ ಒಂದು ನಿರ್ದಿಷ್ಟವಾದ ಬೆಲೆಗಿಂತ ಕಡಮೆಯಾಗುತ್ತದೋ ಆಗ ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರ ತಿಳಿದು ತಕ್ಕ ಸಹಾಯನೀಡಬೇಕು. ಅಂದಾಜಿನಮೇಲೆ ಒಂದು ರೂಪಾಯಿ ವ್ಯತ್ಯಾಸವಾದರೆ ಪರವಾಗಿಲ್ಲ. ಅದರಲ್ಲೂ ಈಗಿರತಕ್ಕ ವ್ಯವಸಾಯಶಾಖೆ ಮಂತ್ರಿಗಳಾದ ಶ್ರೀ ಪಂಜಾಬ್ ದೇಶಮುಖ್‌ರವರು ಆದಷ್ಟು ಬೇಗ ಈ ವಿಚಾರದಲ್ಲಿ ಸಹಾಯ ನೀಡಲು ಆಸಕ್ತಿಯುಳ್ಳವರಾಗಿದ್ದಾರೆ. ಸಹಕಾರ ಸಂಘಗಳವರು ಕೊಂಡು ಮಾರಬೇಕೆಂದು ಶ್ರೀ ಚನ್ನಬಸಪ್ಪನವರು ಹೇಳುವುದು ಸುಲಭವಲ್ಲ. ಏಕೆಂದರೆ ಸಹಕಾರ ಸಂಘ ಸಾರ್ವಜನಿಕರಿಗೆ ಸೇರಿದೆ ; ಸರ್ಕಾರದ ಕೈವಾಡ ಹೆಚ್ಚಾಗಿ ಅದರಲ್ಲಿರುವುದಿಲ್ಲ. ಬೆಲೆ ವ್ಯತ್ಯಾಸವಾದಾಗ ಸರಿಯಾದ ಬೆಲೆ ಸಿಕ್ಕುವಹಾಗೆ ಸರ್ಕಾರ ವ್ಯವಸ್ಥೆ ಮಾಡಬೇಕು ; ಬೆಲೆ ಸ್ಟೆಬಿಲೈಸ್ ಮಾಡಬೇಕು. ಎರಡನೆಯದಾಗಿ ವೇರ್ ಹೌಸಸ್ ಮಾಡಬೇಕು, ಬೆಲೆ ಇಳಿದಾಗ ಕೂಡಲೆ ಮಾರ್ಕೆಟ್ಟಿಗೆ ಬಾರದಿರುವ ಹಾಗೆ ಮಾಡಬೇಕಾದರೆ ವೇರ್ ಹೌಸಸ್‌ಗೆ ಧಾನ್ಯವನ್ನು ಹಾಕಿ ಶೇಕಡ 60 ರಿಂದ 75ರವರೆಗೆ ಹಣ ತೆಗೆದುಕೊಂಡು ಮೂರು ನಾಲ್ಕು ತಿಂಗಳುಗಳಾದಮೇಲೆ ಖರೀದಿ ಬಂದಾಗ ನೋಡಿ ಆಗ ಕೊಡಬೇಕು. ಷಾರ್ಟ್ ಟರ್ಮ್ ಲೋನ್ ಮತ್ತು ಲಾಂಗ್ ಟರ್ಮ್ ಲೋನ್ ರೈತರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಹೀಗೆ ನಾನಾ ರೀತಿಯಲ್ಲಿ ಯೋಚನೆಮಾಡಿ ಸೂಕ್ತ ಕಾರ್ಯಕ್ರಮ ಕೈಗೊಂಡು ಸರಿಯಾದ ಬೆಲೆ ದೊರೆಯುವ ಏರ್ಪಾಡು ಮಾಡಬೇಕು. ಒಂದೇ ರೀತಿ ಮಾಡಿದರೆ ಕಷ್ಟವಾಗುವುದರಿಂದ ನಾನಾ ತರಹದಲ್ಲಿ ಹೀಗೆ ಸೌಲಭ್ಯ ಒದಗಿಸಬೇಕು. ಬತ್ತ, ರಾಗಿ, ಜೋಳ ಮುಂತಾದವನ್ನು ಸ್ವಲ್ಪ ಕಾಲ ಬಿಟ್ಟು ಸಬ್ಸಿಡೈಸ್ ಮಾಡಿದರೆ ಬೆಲೆ ಇಳಿಯುತ್ತದೆ. ನವೆಂಬರ್ ತಿಂಗಳಲ್ಲಿ ಯಾವಾಗಲೂ ಈ ಧಾನ್ಯಗಳು ಖೋತಾ ಬೀಳುತ್ತವೆ. ಆಗ ಮಾರ್ಕೆಟ್ಟಿಗೆ ಹಾಕಿದರೆ ಸರಿಯಾದ ಬೆಲೆ ದೊರೆಯುತ್ತದೆ. ಇನ್ನು ನಾಲ್ಕೈದು ವರ್ಷಗಳವರೆಗಾದರೂ ನಾಲ್ಕೈದು ಲಕ್ಷ ಪಲ್ಲಗಳಷ್ಟು ಭತ್ತ ದಾಸ್ತಾನು ಮಾಡಬಹುದು, ಮಾರ್ಕೆಟ್ ದರಕ್ಕೆ ಮಾರಿದರೆ ನಫೆ ಬರುತ್ತದೆ. ಹೀಗೆ ಧಾರಣೆಯನ್ನು ಸ್ಟೆಬಿಲೈಸ್ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆದು ಸಂಸ್ಥಾನದ ಸರ್ಕಾರ ಸ್ವಲ್ಪವಾದರೂ ಕೊಂಡು ವ್ಯವಸ್ಥೆ ಮಾಡಬಹುದು. ಆದರೆ ಎಲ್ಲಾ ವ್ಯವಸಾಯದ ಬೆಳೆಗಳಿಗೂ ಹೀಗೆ ಮಾಡಕೂಡದು. ಅದಕ್ಕೆಲ್ಲಾ ಬರೀ ಸಂಸ್ಥಾನದ ಸರ್ಕಾರ ವ್ಯವಸ್ಥೆ ಮಾಡುವುದು ಕಷ್ಟ, ಕೇಂದ್ರ ಮತ್ತು ಸಂಸ್ಥಾನಗಳವರು ಯೋಚನೆಮಾಡಿ ಯೋಜನಾ ಸಮಿತಿ ಸಲಹೆ ಪ್ರಕಾರ ವ್ಯವಸ್ಥಾ ರೂಪದಲ್ಲಿ ಇಂಡಿಯಾ ದೇಶಕ್ಕೆಲ್ಲಾ ಅನ್ವಯಿಸುವ ಹಾಗೆ ಮಾಡಿದರೆ ಅನುಕೂಲ, ಇಲ್ಲದಿದ್ದರೆ ಕಷ್ಟ. ಅದರಲ್ಲೂ ಈ ಪ್ರಜಾ ಪ್ರಭುತ್ವದಲ್ಲಿ ಎಲ್ಲರೂ ವ್ಯಾಪಾರ ಮಾಡುತ್ತಾರೆ, ಇತರರಿಗೆ ನಷ್ಟ ಮಾಡುವುದಕ್ಕಾಗಿ ಪೈಪೋಟಿ ಮಾಡುವವರೂ ನಮ್ಮ ದೇಶದಲ್ಲಿದ್ದಾರೆ. ಇದನ್ನು ಹತೋಟಿ ಮಾಡಲು ಶಾಸನವಿರಬೇಕು. ಈ ಎಲ್ಲಾ ದೃಷ್ಟಿಯಿಂದ ಯೋಚನೆಮಾಡಬೇಕಾದದ್ದು ಅಗತ್ಯ, ಕೇಂದ್ರವನ್ನು ಒತ್ತಾಯಮಾಡುವುದು ಅಗತ್ಯ. ಈ ಮಧ್ಯೆ ತಕ್ಷಣ ಬೆಲೆ ಇಳಿದರೆ ಸಬ್ಸಿಡೈಸ್ ನೀತಿಯನ್ನು ಒಂದುವೇಳೆ ಬೇಕಾದರೂ ಅನುಸರಿಸಬೇಕು ಎಂದು ಹೇಳುತ್ತೇನೆ.

(Several Members rose).

Mr. SPEAKER.—There are only 18 minutes more. The Hon'ble Minister will require some time to reply. I can allow only two minutes to a member.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಈ ನಿರ್ಣಯ ಬಹಳ ಸ್ವಾಗತಾರ್ಹವಾದುದು. ಇದರಲ್ಲಿ ಇನ್ನೊಂದು ವಿಚಾರ ಸೇರಬೇಕಾಗಿತ್ತೆಂದು ನನಗೆ ತೋರುತ್ತದೆ. ಬೆಲೆ ನಿಗದಿ ಮಾಡುವುದಲ್ಲದೆ ಸರ್ಕಾರ ಹತ್ತು ವರ್ಷಗಳವರೆಗಾದರೂ ರೈತರಿಗೆ ಒಂದು ಗ್ಯಾರಂಟಿ ಕೊಡಬೇಕಾಗಿತ್ತು. ಅದು ಬಿಟ್ಟುಹೋಗಿದೆ. ಯಾವಾಗಲೂ ಸರ್ಕಾರ ಒಂದು ನಿಖರವಾದ ಬೆಲೆ ಕೊಡುವುದಾಗಿ ರೈತರಿಗೆ 10 ವರ್ಷಗಳ ಅಥವಾ 5 ವರ್ಷಗಳ ಕಾಲವಾದರೂ ಒಂದು ಗ್ಯಾರಂಟಿ ಕೊಡದೇ ಹೋದರೆ ರೈತರಿಗೆ ಯಾವ ಉಪಕಾರವೂ ಮಾಡಿದಂತಾಗುವುದಿಲ್ಲ. ವರ್ಷೇ ವರ್ಷೇ ಬೆಲೆ ನಿಗದಿಮಾಡಿದರೆ ಪ್ರಯೋಜನವಾಗುವುದಿಲ್ಲ. ಹಳ್ಳಿಗಾಡಿನಲ್ಲಿರುವ 90 ಭಾಗದ ಜನರಿಂದ ಈ ವ್ಯವಸಾಯ ನಡೆಯುತ್ತಿದೆ, ಅದರಿಂದಲೇ ಈ ದೇಶ. ಸರ್ಕಾರವಿರಬೇಕಾದದ್ದೂ ದೇಶಕ್ಕಾಗಿಯೇ, ಬೆಳೆಯುವ ರೈತನ ಕಷ್ಟ ನೋಡಿ ಧಾರಣೆ ನಿಗದಿ ಮಾಡಿ ಎಂದು ಕೇಳುವಾಗ ಸರ್ಕಾರ ಅದನ್ನು ಗಮ

ಸಿಸಬೇಕು. ಇದು ಮುಖ್ಯ ಪ್ರಶ್ನೆ. ಯಾವ ಬೆಳೆಯಾದರೂ ಆಗಲಿ ಅದು ಮುಖ್ಯವಾದ ಜೀವನಾಡಿ, ಶರೀರವನ್ನು ಪುಷ್ಟಿಗೊಳಿಸುವ, ರಕ್ತವೃದ್ಧಿ ಮಾಡುವ ಮತ್ತು ದೇಶವನ್ನು ಕಟ್ಟುವ, ಮತ್ತೇನುಬೇಕಾದರೂ ಮಾಡತಕ್ಕಂಥ ಅನ್ನವಿದೆಯೆಲ್ಲಾ, ಅದಕ್ಕೆ ಯಾವಾಗಲೂ ನಿಖರವಾದ ಬೆಲೆ ದೊರೆಯುವಂತೆ ಹತ್ತು ವರ್ಷಗಳವರೆಗೆ ಸರ್ಕಾರ ಗ್ಯಾರಂಟಿ ಕೊಡಲೇಬೇಕು. ಹಿಂದೆ ಈ ಸರ್ಕಾರ ಬಂದಾಗಲೇ ಈ ಪ್ರಶ್ನೆ ಬಹಳ ಮುಖ್ಯವಾದುದೆಂಬುದು ಸ್ಪಷ್ಟವಾಗಿದೆ. ಇದು ಮುಖ್ಯವೆಂದು ದೇಶವೆಲ್ಲಾ ಹೇಳುವಾಗ ಇನ್ನೂ ಚರ್ಚೆಯಾಗುತ್ತಿದ್ದಾಗಲೇ ಉತ್ತರ ಕೊಟ್ಟು, ಚರ್ಚೆಯೆಲ್ಲಾ ಆದಮೇಲೆ ಉತ್ತರಕೊಡುವ ಕಟ್ಳೆಗೆ ಪ್ರತಿಯಾಗಿ ನಡುವೆ ಮಾತನಾಡಿರುವುದು ಎರಡು ತರಹ ಕಪ್ಪೆ ತಕ್ಕಡಿಗೆ ಹಾಕಿದ ಹಾಗಾಗಿದೆ. ದೇಶವನ್ನೇ ಮೇಲೆ ಹಾಕಿಕೊಳ್ಳುವ ಗತಿ ಸರ್ಕಾರಕ್ಕೆ ಬಂತಲ್ಲಾ ಎಂದು ನನಗೆ ಏಕ್ಕೇ ತೋಚದ ಹಾಗಾಗಿದೆ. ಇದಕ್ಕೆ ಯಾವಾಗಲೂ ಒಂದು ಕಂಡೀರ್ಷ ಇದ್ದೇ ಇರಬೇಕು. ಸರ್ಕಾರ ಇಲ್ಲಿಯವರೆಗೆ ದೇಶದಲ್ಲಿ ಒಳ್ಳೆಯ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದೆ. ಈಗ ಈ ಪ್ರಶ್ನೆ ಬಂದಾಗಲೂ ಇರುವ ಸತ್ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿದ್ದರೆ ಸಾಕಾಗಿತ್ತು, ಇಷ್ಟು ಚರ್ಚೆ ಬೇಕಾಗಿರಲಲ್ಲ. ಇಷ್ಟು ಚರ್ಚೆಗೆ ಅವಕಾಶಕೊಟ್ಟಿರುವುದು ಸಮಂಜಸವಾಗಿ ಕಾಣುವುದಿಲ್ಲ. ಈಗ ಬೆಲೆ ನಿಗದಿಮಾಡದಿದ್ದರೆ ವ್ಯಾಪಾರಸ್ಥ ಬಂದು ಹತ್ತು ರೂಪಾಯಿಗೆ ಕೊಂಡು ಇಪ್ಪತ್ತು ರೂಪಾಯಿಗೆ ಮಾರಿ ಹಿಂದಿನಂತೆ ಪಟ್ಟಣಗಳಲ್ಲಿ ನಾಲ್ಕೈದು ಮನೆ ಕಟ್ಟುತ್ತಾನೆ. ಅದೇ ಹಳ್ಳಿಗಾಡಿನವರು ಒಂದು ಮನೆ ಸಹ ಕಟ್ಟಲು ಅವಕಾಶವಿಲ್ಲ. ಇನ್ನೂ ದಾರಿದ್ರ್ಯವೇ ಅವರನ್ನು ಆವರಿಸಿದೆ. ಇಂಥ ಕಾಲದಲ್ಲಿ ಹೀಗೆ ಹೇಳುತ್ತಿದ್ದರೆ ಬಹಳ ಕಷ್ಟಕರ. ವ್ಯಾಪಾರಕ್ಕೆ ಒಂದು ನಿಮಿಷ, ವ್ಯವಸಾಯಕ್ಕೆ ಒಂದು ವರ್ಷ ಎಂದು ಹೇಳುವುದು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ವರ್ಷಕ್ಕೊಂದು ಬಂಗಲೆಯನ್ನು ಸಿಟಿಗಳಲ್ಲಿ ಕಟ್ಟುತ್ತಾರೆ. ಅದೇ ರೈತ ಹತ್ತು ವರ್ಷಗಳಾದರೂ ಒಂದು ಮನೆ ಕಟ್ಟಲಾರ. ರೈತನ ಕಷ್ಟವನ್ನು ಸರ್ಕಾರವೇ ಪರಿಹರಿಸಬೇಕು. ಇದಕ್ಕಾಗಿ ನಿಖರವಾದ ಬೆಲೆಯನ್ನಾದರೂ ಗೊತ್ತುಮಾಡಬೇಕು. ವ್ಯವಸಾಯಗಾರ ಇಕ್ಕಟ್ಟಿಗೆ ಸಿಕ್ಕಿ ಬಹಳವಾಗಿ ನರಳಿದ್ದಾನೆ. ಅವನ ಸಾಲ ಸೋಲಗಳನ್ನು ತೀರಿಸುವುದಕ್ಕಾದರೂ ಅವಕಾಶ ಮಾಡಿಕೊಡಬೇಕು. ರೈತನ ಹಿತಕ್ಕಾಗಿ ಸರ್ಕಾರ ಕ್ರಮ ಕೈಗೊಳ್ಳುವುದು ಒಳ್ಳೆಯದು, ಇದಕ್ಕೆ ಬೇಕಾದಷ್ಟು ಬೆಂಬಲವಿದೆ. ಇದನ್ನು ಗಮನಿಸದೆ ಏನು ಜವಾಬು ಹೇಳಿದರೂ ಫಲಕಾರಿಯಾಗುವುದಿಲ್ಲ. ಉಳದಿರುವವರು ಹೇಳುವ ಮಾತು, ಉಳುವವರು ಹೇಳುವ ಮಾತು, ಉಳಿಸುವವರು ಹೇಳುವ ಮಾತು ಎಲ್ಲವನ್ನೂ ಪರಿಶೀಲಿಸಬೇಕು.

ರೈತರ ಹಿತರಕ್ಷಣೆ ಸಾಧನೆಯ ದೃಷ್ಟಿಯಿಂದ ಏನು ಕಾರ್ಯಕ್ರಮ ಕೈಗೊಂಡರೂ ಸರ್ಕಾರಕ್ಕೆ ಅದರಿಂದ ಒಳ್ಳೆಯ ಕೀರ್ತಿ ಬರುತ್ತದೆ. ಈ ನಿರ್ಣಯದಲ್ಲಿ ಸೂಚಿತವಾಗಿರುವಂತೆ ರೈತರ ಹಿತಸಾಧನೆಯ ದೃಷ್ಟಿಯಿಂದ ಕೊನೆಯಪಕ್ಷ ಅವರು ಬೆಳೆಯುವ ಅತಿ ಮುಖ್ಯ ಬೆಳೆಗಳಿಗಾದರೂ ಧಾರಣೆಯನ್ನು ನಿಖರವಾಗಿಡುವುದು ಬಹಳ ಸೂಕ್ತವಾದುದೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಡಾ|| ಆರ್. ನಾಗನಗೌಡ (ವ್ಯವಸಾಯ ಇಲಾಖಾ ಮಂತ್ರಿಗಳು).—ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ತಂದಿರುವ ನಿರ್ಣಯದಲ್ಲಿ ಏನು ತಿಳಿಸಿದ್ದಾರೆಯೋ ಅದು—ರೈತರಿಗೆ ಸರಿಯಾದ ಧಾರಣೆ ಕೊಡಬೇಕು ಅನ್ನುವುದು—ಎಲ್ಲ ರೈತರಿಗೂ ಬೇಕಾದ ವಿಷಯವೇ, ಒಪ್ಪತಕ್ಕ ಮಾತೇ ಆಗಿದೆ. ರೈತರಿಗೆ ಸರಿಯಾದ ಧಾರಣೆ ಬರಬೇಕೆಂದು ಸರ್ಕಾರದ ಕೃಷಿ ಇಲಾಖೆಯವರು ಆಗಿಂದಾಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲೇ ಇದ್ದಾರೆ. ಇವೊತ್ತು ರೈತರಿಗೆ minimum price ಬೇಕು, ಅದನ್ನು ಗ್ಯಾರಂಟಿ ಕೊಡಬೇಕೆಂದು ಕೆಲವು ಸದಸ್ಯರು ಹೇಳಿರುತ್ತಾರೆ. ಈ ವಿಷಯ ಕೃಷಿ ಮಂತ್ರಿಗಳೆಲ್ಲರೂ ಕೆಲವು ತಿಂಗಳ ಹಿಂದೆ ಶ್ರೀನಗರದಲ್ಲಿ ಕೂಡಿದಾಗ ಕೂಲಂಕಷವಾಗಿ ಯೋಚಿಸಿ ದವಸಧಾನ್ಯಗಳ ಧಾರಣೆ stabilise ಮಾಡತಕ್ಕದ್ದು ಅವಶ್ಯಕ, ಅದಕ್ಕೆ ಇಂಡಿಯಾ ಸರ್ಕಾರದವರು ಏನುಮಾಡಬೇಕೆಂಬುದನ್ನು ಯೋಚಿಸತಕ್ಕದ್ದು ಅವಶ್ಯಕವೆಂದು ಒಂದು ನಿರ್ಣಯವನ್ನು ಮಾಡಿದ್ದಾರೆ. ಈ ವಿಷಯ ಸರ್ಕಾರದ ಮುಂದೆ ಇಲ್ಲ ಎಂದು ಇಲ್ಲ ಅನ್ನುವುದಕ್ಕೆ ಬರುವುದಿಲ್ಲ. ನಾವು ಇಂದಿನವರೆಗೆ ಈ ವಿಷಯದಲ್ಲಿ ಏನು ನಿರ್ಣಯ ಹಾಕಿಕೊಂಡು ಇದ್ದೇವೆಯೋ ಅದು ಅಷ್ಟು ಸುಲಭವಾದ ಪ್ರಶ್ನೆ ಇದ್ದ ಹಾಗೆ ಇದೆಯೇ ಎಂದು ಕೆಲವರು ಪ್ರಶ್ನೆಮಾಡುತ್ತಾ ಇದ್ದಾರೆ. ಆ ಪ್ರಶ್ನೆ ಬಹಳ ಉಚಿತವಾದುದು. ಈ ವಿಚಾರದಲ್ಲಿ ಅಮೆರಿಕಾ ದೇಶದಲ್ಲಿ ಏನುಮಾಡಿದ್ದಾರೆ ಎಂಬುದನ್ನು ನಾವು ಇಂದು ಹೋಲಿಸಿ ನೋಡುತ್ತಾ ಇದ್ದೇವೆ. ಅವರು ಮಾಡಿರುವುದು ಅಷ್ಟು ಸುಲಭವಾಗಿದ್ದಿದ್ದರೆ ನಾವು ಇಲ್ಲಿನವರೆಗೂ ಆ ರೀತಿ ಮಾಡದೇ ಸುಮ್ಮನಿರುತ್ತಿರಲಿಲ್ಲ. ಅಮೇರಿಕಾದಲ್ಲಿ ಕೇವಲ ಶೇಕಡ 17ರಷ್ಟು ಮಂದಿ ಮಾತ್ರ ವ್ಯವಸಾಯದಲ್ಲಿ ತೊಡಗಿದ್ದಾರೆ. ಇಲ್ಲಿ ಶೇಕಡ 70ರಷ್ಟು ಮಂದಿ ವ್ಯವಸಾಯದಲ್ಲಿ ತೊಡಗಿದ್ದೇವೆ. ಇನ್ನೂ ಹೆಚ್ಚು ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಅಮೇರಿಕಾದಲ್ಲಿ ಶೇಕಡ 83ರಷ್ಟು ಮಂದಿ ಕೈಗಾರಿಕೆಯಲ್ಲಿ ತೊಡಗಿ ವ್ಯವಸಾಯಕ್ಕೆ ಬೇಕಾದ protection ಕೊಟ್ಟಿರುತ್ತಾರೆ. ಉದಾಹರಣೆಯಾಗಿ ಹೇಳುವುದಾದರೆ ಅಲ್ಲಿ ಹಸು ಕರುವಿಗೆ protection ಕೊಡುತ್ತಿದೆ. ಇಲ್ಲಿ ನಮ್ಮದು ಕರುವೇ ಹೋಗಿ ಹಸುವಿಗೆ protection ಕೊಡುವ ಸ್ಥಿತಿಯಲ್ಲಿದೆ. ನಮ್ಮ industries ಹೆಚ್ಚ ಬೆಳೆದಿಲ್ಲ. ನಮ್ಮ ರೈತರು ವರ್ಷಕ್ಕೆ ನಾಲ್ಕಾರು ತಿಂಗಳು ಕೆಲಸ ಇಲ್ಲದೆ ಇರುವುದರಿಂದಲೂ, ನಾವು ನಮ್ಮ industrial productsಗಳನ್ನು ಹೊರದೇಶದಿಂದ ಬಹಳವಾಗಿ ತರಿಸುವುದರಿಂದಲೂ ನಮ್ಮ ರೈತರುಗಳಿಗೆ ಬೇಕಾದ ಸಾಮಾನುಗಳು ಸರಿಯಾದ ಬೆಲೆಗೆ ದೊರಕದಿರುವುದಕ್ಕೆ ಕಾರಣವಾಗಿದೆಯೆಂಬುದನ್ನು ಯಾರೂ ಮರೆಯಬಾರದು. Agriculture ಮತ್ತು Industries—ಇವೆರಡೂ ಸರ್ಕಾರಕ್ಕೆ ಸಮಾನವಾದ ವಿಷಯಗಳು. ನಮ್ಮ industries, cottage industries ಇವು ಮುಖ್ಯವಾಗಿ ಹೆಚ್ಚಾಗಿ ಆದರೆ agricultureಗೆ ಹೆಚ್ಚಿನ ಸಹಾಯ ಬಂದು, ಬರುವ price ಬರುತ್ತದೆ. ಧಾರಣೆ ಗ್ಯಾರಂಟಿ ಮಾಡಬೇಕೆಂದು ಹೇಳಿದರೆ, ಆ ಬಗ್ಗೆ ಇರತಕ್ಕ ಕಷ್ಟ, ಇವೊತ್ತು ರೈತರು ಬೆಳೆದುದನ್ನು ನಿಖರವಾದ ಬೆಲೆಗೆ ಕೊಂಡುಕೊಳ್ಳುವವರು ಯಾರು ? ಅಮೇರಿಕಾ ದೇಶದಲ್ಲಿಯೂ ಈ ಕಷ್ಟವನ್ನು ಅನುಭವಿಸಿದರು. ಅವರು ಅನಂತರ ಒಂದು planned basis ಬೆಳೆ ಬೆಳೆಯಲು ಪ್ರಾರಂಭಿಸಿದರು. ಆ ರೀತಿ ನಮ್ಮಲ್ಲಿ ಮಾಡಲು ಅಷ್ಟು ಸುಲಭ ಸಾಧ್ಯವಾದುದಲ್ಲ. ಅಮೇರಿಕಾದಲ್ಲಿ ಈ ವರ್ಷ ಹತ್ತು ಎಕರೆಯಷ್ಟು ಬೆಳೆದರೆ ಮುಂದಿನ ವರ್ಷ $\frac{1}{4}$ ಭಾಗ ಕಡಿಮೆಮಾಡಬೇಕೆಂದರೆ ಆ ರೀತಿಯೇ

(ಡಾ॥ ಆರ್. ನಾಗನಗೌಡ.)

ಅವರು ಮಾಡಲು ಸಿದ್ಧರಾಗಿರುತ್ತಾರೆ. ನಾವು ಆ ರೀತಿ ಮಾಡುವುದು ಕಷ್ಟ ಸಾಧ್ಯವಾದುದೇ.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡ).—ಮಾರ್ಕೆಟಿಂಗ್ capacity ಜಾಸ್ತಿಯಾಗಿಲ್ಲದೆ ಇದ್ದರೆ ವ್ಯವಸಾಯಗಾರರಿಗೆ ಆ ಸೌಕರ್ಯವನ್ನು ಎಲ್ಲಿಂದ ಒದಗಿಸುತ್ತೀರಿ ?

ಕೆಲವು ಮುಳುಗಿಕೂಡ ಹೋಗಿವೆ. ಜಾಯಿಂಟ್ ಸ್ಟಾಕ್ ಕಂಪೆನಿ ನಡೆಸತಕ್ಕವರು ಲಕ್ಷಾಂತರ ರೂಪಾಯಿ ಹಾಕಿರತಕ್ಕ ಐಶ್ವರ್ಯವಂತರು, ರೈತರಲ್ಲ. ಅಂಥಾದ್ದು ಒಂದುವೇಳೆ ಮುಳುಗಿಹೋದರೂ ಕೂಡ ದೊಡ್ಡದೇನೂ ಆಗುವುದಿಲ್ಲ ಎಂದು ಹೇಳುತ್ತೇನೆ. ಜಾಯಿಂಟ್ ಸ್ಟಾಕ್ ಕಂಪೆನಿ ಮುಳುಗಿದರೆ ದೇಶದ ಮೊರೇಲ್‌ಗೆ ಧಕ್ಕೆ ಬರುವುದಿಲ್ಲ ಎಂದು ಹೇಳುತ್ತೇನೆ. ಏಕೆಂದರೆ ಕೆಲವಾರು ಐಶ್ವರ್ಯವಂತರ ದುಡ್ಡು ಹೋಗಿರಬಹುದು. ಆದರಿಂದ ಸಾರ್ವಜನಿಕರಲ್ಲಿ ಅಶಾಂತಿ ಅಥವಾ ಅಪನಂಬಿಕೆ ಮೂಡುವುದಕ್ಕೆ ಅವಕಾಶವಿಲ್ಲ. ಅದೇ ಕೋ-ಆಪರೇಟಿವ್ ಸೊಸೈಟಿಗಳನ್ನು ತೆಗೆದುಕೊಂಡರೆ ಅನೇಕ ಕಡೆಗಳಲ್ಲಿ ಪೈಸ್ ಕಲೆಕ್ಟಿಂಗ್ ಸೊಸೈಟೀಸ್ ಎಂದು ಹೇಳಿ ಪ್ರತಿಯೊಬ್ಬ ಸದಸ್ಯರಿಂದಲೂ ಕೂಡ ಪ್ರತಿದಿನ ಇಷ್ಟು ಕಾಸು ಸಂಗ್ರಹಮಾಡಬೇಕು ಎಂದು ಹೇಳಿ ಸಂಗ್ರಹಮಾಡುವುದರ ಮೂಲಕ ಲಕ್ಷಾಂತರ ರೂಪಾಯಿ ಬಂಡವಾಳ ಮಾಡಿ ನಡೆಸುವ ಸಹಕಾರ ಸಂಘಗಳಿವೆ. ಆ ರೀತಿ ಪೂನಾದಲ್ಲಿ ಇದೆ. ಚಿತ್ರದುರ್ಗದಲ್ಲೂ ಆ ರೀತಿ ಒಂದು ಷುರುಮಾಡಿದರು. ಹೀಗೆ ಅನೇಕ ವಿಧವಾಗಿ ಕ್ರೆಡಿಟ್ ಸೊಸೈಟಿಗಳು, ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಗಳು, ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗಳು ಎಂದು ಇವೆ. ಇದರಲ್ಲಿ ಷೇರು ಹಣ ಹಾಕಿರುವವರು ಯಾರು, ಎಂದರೆ 5 ರೂಪಾಯಿನ ಷೇರುದಾರರು, ತಿಂಗಳಿಗೆ ಒಂದೊಂದು ರೂಪಾಯಿ ಕೊಡತಕ್ಕ ಶಕ್ತಿ ಇರತಕ್ಕ ಜನರು. ಇಂಥ ಜನರ ಸಂಖ್ಯೆ ಅಪಾರವಾದದ್ದು. ಅವರು ಕೊಡತಕ್ಕ ಹಣ ಕಡಮೆ ಆದರೂ ಸಂಖ್ಯೆ ಹೆಚ್ಚು. ಇದನ್ನು ಏಕೆ ಒತ್ತಿ ಒತ್ತಿ ಹೇಳುತ್ತಿದ್ದೇನೆ ಎಂದರೆ ಇದರಲ್ಲಿರತಕ್ಕ morale aspectನ್ನು ಪರಿಶೀಲನೆಮಾಡಬೇಕಾಗಿರುತ್ತದೆ. ಒಬ್ಬಿಬ್ಬರು ಹಣ ಜಾಸ್ತಿ ಹಾಕಿದ್ದು ಅಂಥ ಸಂಸ್ಥೆ ಹೋದರೂ ಕೂಡ ಸಮಾಜದ ಮೊರೇಲ್ affect ಆಗುವುದಿಲ್ಲ. ಇಲ್ಲಿ ಹಣ ಕಡಮೆ ಆದರೂ ಜಾಸ್ತಿ ಜನಕ್ಕೆ affect ಆಗುತ್ತದೆ. ಯಾವುದಾದರೂ ಒಂದು ಸೊಸೈಟಿಯಲ್ಲಿರತಕ್ಕ ಬಂಡವಾಳದಲ್ಲಿ ಒಂದೆರಡು ಸಾವಿರ ರೂಪಾಯಿ ದುರುಪಯೋಗವಾಯಿತು ಅಥವಾ ಇನ್ನಾವುದಾದರೂ ರೂಪದಲ್ಲಿ ಅದು ಲಿಕ್ವಿಡೇಷನ್‌ಗೆ ಬಂತು ಎಂದರೆ ಆ ಸಹಕಾರ ಸಂಘದಲ್ಲಿರತಕ್ಕ ನೂರಾರು, ಸಾವಿರಾರು ಜನ ಸಾಮಾನ್ಯ ಷೇರುದಾರರ ಮೇಲೆ ದುಷ್ಪರಿಣಾಮವುಂಟಾಗುತ್ತದೆ. ಮುಂದೆ ಸರ್ಕಾರದವರಾಗಲಿ, ಸಾರ್ವಜನಿಕರಾಗಲಿ ಯಾರು ಷೇರ್ ಕ್ಯಾಪಿಟಲ್ ವಸೂಲು ಮಾಡುವುದಕ್ಕೆ ಹೋಗುತ್ತಾರೋ ಅಂಥವರ ಮೇಲೆ ಕೆಟ್ಟ ಅಪವಾದ ಬಂದು ಅವರು ಸಮಾಜದಲ್ಲಿ ತಲೆ ಎತ್ತಿಕೊಂಡು ಓಡಾಡುವುದಕ್ಕೆ ಸಾಧ್ಯವಿಲ್ಲದಹಾಗಾಗುತ್ತದೆ. ಆಯಾ ಪ್ರದೇಶದ ಮುಖಂಡರು, ಸಾರ್ವಜನಿಕ ಸೇವಕರು, ಸರ್ಕಾರದವರು ಎಲ್ಲರೂ ಕೂಡ ಅಪಮಾನಕ್ಕೆ ಗುರಿಯಾಗಬೇಕಾಗುತ್ತದೆ. ಅದು ಸಹಕಾರ ಸಂಘದ ತತ್ವಕ್ಕೇ ಧಕ್ಕೆಯನ್ನುಂಟುಮಾಡುತ್ತದೆ. ಆದ್ದರಿಂದ ಈ ತಿದ್ದುಪಡಿಯನ್ನು ಒಂದು ಅನುಭವದಿಂದ ತಂದಿದ್ದಾರೆ. ಆ ಅನುಭವದ ನಿದರ್ಶನ ಇದರಲ್ಲಿ ಕೊಟ್ಟಿದ್ದರೆ ; ಚೆನ್ನಾಗಿತ್ತು ; ಬಹುಶಃ ಇಷ್ಟು ಕಷ್ಟವಾಗುತ್ತ ಇರಲಿಲ್ಲ. ಈ ತಿದ್ದುಪಡಿಯನ್ನು ಸಹಕಾರ ತತ್ವದ ಅನುಷ್ಠಾನದಲ್ಲಿ ಅಡ್ಡಿ ಆತಂಕ ಬರದೇ ಇರಲಿ ಎಂದು ತಂದಿದ್ದಾರೆಯೇ ಹೊರತು ಯಾರಿಗೋ ಕೆಲವರಿಗೆ ತೊಂದರೆಮಾಡಬೇಕೆಂಬ ದೃಷ್ಟಿಯಿಂದ ತಂದಿದ್ದಾರೆ ಎಂದು ಯಾರೂ ಭಾವಿಸಬಾರದು. ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಗಳಲ್ಲಿ ಲಕ್ಷಾಂತರ ರೂಪಾಯಿ ಅನಾಯಕವಾಗಿ ಖರ್ಚಾಗಿದೆ. ಉದಾಹರಣೆಗೆ ಡೂಪ್ಲಿಕೇಟ್ ಮೇಲೆ ಒಂದು ರಸೀತಿ, ಕೆಳಗೊಂದು ರಸೀತಿ ನಡುವೆ ಕಾರ್ಬನ್ ಷೀಟ್ ಇಲ್ಲ. ಪಾರ್ಟಿಗಳಿಗೆ ಡಾಕ್ಯುಮೆಂಟನ್ನು ವಾಪಸುಮಾಡಿದ್ದಾರೆ. ಸೊಸೈಟಿಗಳಲ್ಲಿ ಜಮಾ ಆಗಿರುವುದಕ್ಕೆ ದಾಖಲೆಯೇ ಇಲ್ಲ.

Mr. SPEAKER.—May I know what more time the Hon'ble member requires to conclude ?

Sri V. MASIYAPPA.—I require some more time, Sir.

Mr. SPEAKER.—Then, we shall now take up the discussion on question No. 79, regarding the future of Mysore and the formation of Karnataka.

DISCUSSION ON QUESTION No. 79.

Formation of Karnataka.

***ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).**—ಸ್ವಾಮಿ, ನಾನು ಅಖಿಲ ಕರ್ಣಾಟಕದ ವಿಷಯವಾಗಿ ಕೆಲವು ಅಂಕಿಅಂಶಗಳನ್ನು ತಿಳಿದುಕೊಳ್ಳಲು ಪ್ರಶ್ನೆಯನ್ನು ಕಳುಹಿಸಿದ್ದೆ. ಅದು 79ನೆಯ ಪ್ರಶ್ನೆ. ಆ ಪ್ರಶ್ನೆಯಲ್ಲಿ ಫಜಲ್ ಅಲಿ ಕಮಿಷನ್ ಇಲ್ಲಿಗೆ ಬಂದಾಗ ಅವರಿಗೆ ಮೈಸೂರಿಗೆ ಸಂಬಂಧಪಟ್ಟ ಮತ್ತು ಕರ್ಣಾಟಕಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ತಿಳಿಸಲು ಸರ್ಕಾರದವರು ಏನು ಸಲಕರಣೆ ಒದಗಿಸಿದ್ದಾರೆ, ಸರ್ಕಾರದವರು ಈ ವಿಷಯವಾಗಿ ಯಾವ ತೀರ್ಮಾನಕ್ಕೆ ಬಂದಿದ್ದಾರೆ, ಈ ವಿಚಾರದಲ್ಲಿ ಪ್ರಜೆಗಳಿಗೆ ಮತ್ತು ನಮಗೆ ಯಾವ ಸೂಚನೆಯನ್ನು ಕೊಡುತ್ತಾರೆ ಎಂಬುದಾಗಿ ಕೇಳಿದ್ದೆ. ಸರ್ಕಾರದವರು ಅವರ ಜವಾಬಿನಲ್ಲಿ ಇನ್ನೂ ತಾವು ಯೋಚನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇದು ಬಹಳ ಶೋಚನೀಯವಾದುದು. ಅವರು ಯೋಚನೆ ಮಾಡುತ್ತಿದ್ದಾಗಲೇ ಕೇಂದ್ರ ಸರ್ಕಾರದಿಂದ ನಿಯಮಿಸಲ್ಪಟ್ಟ ಸಮಿತಿಯು, ಫಜಲ್ ಅಲಿಯವರು ಅಧ್ಯಕ್ಷರಾಗಿರುವ ಸಮಿತಿಯು ನಮ್ಮ ಸಂಸ್ಥಾನಕ್ಕೆ ಬಂತು, ನೋಡಿತು ಮತ್ತು ವಾಪಸು ಹೋಯಿತು. ಆ ಸಮಿತಿಯವರು ನಿರಾಶರಾಗಿಯೇ ವಾಪಸು ಹೋದರೆಂದು ಹೇಳಿದರೆ ಖಂಡಿತವಾಗಿಯೂ ನಾನು ಸತ್ಯವನ್ನೇ ಹೇಳುತ್ತಿದ್ದೇನೆಂದು ತಿಳಿಯಬೇಕು. ಅವರು ಅಸಮಾಧಾನದಿಂದ ನಮ್ಮ ಸಂಸ್ಥಾನವನ್ನು ಬಿಟ್ಟು ಹೋದರೆಂದು ನಮಗೆ ಖಂಡಿತವಾಗಿಯೂ ಗೊತ್ತಾಗಿದೆ. ನನ್ನ ಪಕ್ಷದವರ ಪರವಾಗಿಯೂ ಸಹ ನಾನು ಅವರನ್ನು ಕಂಡು ನಮ್ಮ ಪಕ್ಷದ ತತ್ವ ಮತ್ತು ನಾವು ಅನುಸರಿಸಬೇಕಾದ ನೀತಿ ಇವುಗಳನ್ನು ಅವರ ಮುಂದೆ ನಿರೂಪಿಸಿದ್ದೇನೆ. ಆಗ ಅವರ ‘ಇಲ್ಲಿನ ವಿಚಾರ ತಿಳಿದು ನಮ್ಮ ಸಂಸ್ಥೆ ಇಲ್ಲಿಗೆ ಬಂದಾಗ, ಅಖಿಲ ಕರ್ಣಾಟಕ ಬಹಳ ಮುಖ್ಯವಾದ ಸಮಸ್ಯೆಯಾಗಿರುವಾಗ, ಸರ್ಕಾರದವರಿಂದ ಕೊಂಚವೂ ಸಹಾಯ ದೊರೆಯಲಿಲ್ಲ, ಸಹಕಾರ ದೊರೆಯಲಿಲ್ಲ ಮತ್ತು ಸರ್ಕಾರ ಯಾವ ಪಂಗಡವನ್ನು, ಯಾವ ಪಕ್ಷವನ್ನು ಪ್ರತಿನಿಧಿಸುತ್ತದೆಯೋ ಆ ಪಕ್ಷದಿಂದ ಸಹಕಾರ ದೊರೆಯಲಿಲ್ಲ’ ಎಂದು ಬಹಳ ವಿಷಾದದಿಂದ ಹೇಳಿದರು. ಆ ಕಾಲದಲ್ಲಿ ಸಮಿತಿಯ ಮುಂದೆ ಹೋಗಿದ್ದ ಅನೇಕ ಮಹನೀಯರು ‘ನಮಗೆ ನಿಮ್ಮ ಮುಂದೆ ಅಭಿಪ್ರಾಯ ಸೂಚಿಸಲು ಅಧಿಕಾರವಿಲ್ಲ’ ಎಂದು ಹೇಳಿದರು. ಈ ಸಮಿತಿ ಕರ್ಣಾಟ

(ಶ್ರೀ ಜೆ. ಮಹಮ್ಮದ್ ಇಮಾಂ.)

ಕಕ್ಕೆ ಸಂಬಂಧಪಟ್ಟ ವಿಷಯವನ್ನು ಪೂರ್ಣವಾಗಿ ತಿಳಿಯದೆ ವಾಪಸು ಹೋಯಿತು. ಇದು ಬಹಳ ದೊಡ್ಡ ಅಪಾಯ. ಏಕೆಂದರೆ ಪೂರ್ಣವಾದ ಅಂಕಿಅಂಶ ಅವರ ಮುಂದಿಲ್ಲದಿರುವಾಗ ಅವರು ಯಾವ ತೀರ್ಮಾನಕ್ಕೆ ಬೇಕಾದರೂ ಬರಬಹುದು. ಅದು ನಮ್ಮ ದೇಶಕ್ಕೆ ಕ್ಷೇಮಕರವಾಗಿರಬಹುದು ಅಥವಾ ಧಕ್ಕೆ ತರತಕ್ಕದ್ದಾಗಿರಬಹುದು. ಇಂಥ ದೊಡ್ಡ ಸಮಸ್ಯೆಯ ವಿಚಾರದಲ್ಲಿ ನಮ್ಮ ಸರ್ಕಾರ ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ, ಯೋಚನೆಮಾಡುತ್ತಿದ್ದೇವೆ ಎಂದು ಹೇಳಿದರೆ ಒಂದು ಗಾದೆ ನೆನಪಿಗೆ ಬರುತ್ತದೆ. 'ಬಣವೆ ಸುಟ್ಟ ಮೇಲೆ ನೀರಿಗಾಗಿ ಭಾವಿ ತೆಗೆಯುವುದಕ್ಕೆ ಷುರು ಮಾಡಿದರು' ಎಂದು ಹೇಳುವಂತಿದೆ ಇದು. ಸರ್ಕಾರಕ್ಕೆ ಸಾಕಾದಷ್ಟು ಕಾಲವಿರಲಿಲ್ಲವೆ ? ಏಕೀಕರಣ, ಕರ್ಣಾಟಕ ನಿರ್ಮಾಣ ಎಂಬುದು ಪಕ್ಷದ ಸಮಸ್ಯೆಯಲ್ಲ. ಈ ಸಮಸ್ಯೆಯು ಸುಮಾರು ಏಳೆಂಟು ವರ್ಷಗಳಿಂದಲೂ ನಮ್ಮ ಮುಂದಿದೆ. ನಾನು ಹಿಂದಿನ ಕೌನ್ಸಿಲ್ಲನಲ್ಲೂ ಒಂದು ನಿರ್ಣಯ ತಂದಿದ್ದೆ. ಕರ್ಣಾಟಕ ನಿರ್ಮಾಣವು ಒಂದು ದೊಡ್ಡ ಸಮಸ್ಯೆಯಾಗಿರುವುದರಿಂದ ಮತ್ತು ಬಹಳ ಪ್ರಾಮುಖ್ಯವಾಗಿರುವುದರಿಂದ ಅದಕ್ಕಾಗಿ ಒಂದು ಸಮಿತಿ ಮಾಡಬೇಕು, ಈ ನಿರ್ಮಾಣದಿಂದಿರುವ ಅನುಕೂಲ ಮತ್ತು ಅನಾನುಕೂಲ, ಸಾಧಕ ಬಾಧಕ ಏನೆಂಬುದನ್ನು ಪರಿಶೀಲಿಸಲು ಒಂದು ಸಮಿತಿ ರಚಿಸಬೇಕು ಎಂದು ಆ ನಿರ್ಣಯವನ್ನು ಕೌನ್ಸಿಲ್ ಮುಂದೆ ಇಟ್ಟಿದ್ದೆ. 1949ನೆಯ ಇಸವಿಯಲ್ಲಿ ಅದು ಚರ್ಚೆಯಾಯಿತು. ಆಗಿನ ಮುಖ್ಯ ಮಂತ್ರಿಗಳು ಬಹುಶಃ ಸಕಾಲದಲ್ಲಿ ಇದಕ್ಕಾಗಿ ಒಂದು ಸಮಿತಿ ಮಾಡುತ್ತೇವೆಂದು ಹೇಳಿದರು. ಆಮೇಲೆ ಎರಡನೆಯ ಸಲ 1951ನೆಯ ಇಸವಿಯಲ್ಲಿ ಪ್ರಶ್ನಾರೂಪವಾಗಿ ಈ ವಿಷಯವನ್ನು ತಂದು ಏಕೆ ಸಮಿತಿಮಾಡಲಿಲ್ಲ, ಯಾವಾಗ ಮಾಡುವುದು ಎಂದು ಕೇಳಿದಾಗ ಶ್ರೀ ಚಂಗಲರಾಯರೆಡ್ಡಿಯವರು ಮಾಡುತ್ತೇವೆಂದು ಹೇಳಿದರು. ಬಡ್ಜೆಟ್ ಅಧಿವೇಶನದಲ್ಲೂ ಕೂಡ ಹೇಳಿದೆ. ಆದರೂ ಸಹ ಏನೂ ಮಾಡದೆ ಇದ್ದು ಫಜಲ್ ಆಲಿ ಸಮಿತಿ ಬಂದನಂತರ ಒಂದು ಸಮಿತಿ ಮಾಡಿದರೆ ಏನು ಪ್ರಯೋಜನ ? ಹಿಂದೆ ಬಂದ ಸಮಿತಿಯವರು ನಮ್ಮ ಸಲಹೆ ಪಡೆಯದಿರುವುದರಿಂದ ಈಗ ಕಷ್ಟವಾಗಿದೆ. ಆಗಿನ ಲಾಗಾಯ್ತು ಈ ಸಮಸ್ಯೆಯು ಎಲ್ಲರ ಆಲೋಚನೆಯಲ್ಲೂ ಇದೆ. ಇದು ಪ್ರತಿಯೊಬ್ಬರಿಗೂ ಗೊತ್ತು. ಇಷ್ಟಾದರೂ ಈ ವಿಷಯದಲ್ಲಿ ಉದಾಸೀನ ಮಾಡಿರುವುದು ಬಹಳ ಶೋಚನೀಯವಾಗಿದೆ.

ಇದೇ ತಿಂಗಳು ಹೋದವರ್ಷ ಬಳ್ಳಾರಿ ವಿಲೀನೀಕರಣವಾಗುವ ವಿಷಯ ಈ ಸಭೆಯ ಮುಂದೆ ಬಂತು. ಆಗ ಬಳ್ಳಾರಿಯ ಕೆಲವು ತಾಲ್ಲೂಕುಗಳು ಮೈಸೂರಿಗೆ ಸೇರಿದ್ದಕ್ಕೆ ಬಹಳ ಸಂತೋಷಪಟ್ಟರು : ಎಲ್ಲಕ್ಕಿಂತ ಮೊದಲು ಮುಖ್ಯ ಮಂತ್ರಿಗಳು ಬಹಳವಾಗಿ ಸಂತೋಷಪಟ್ಟರು, ಪ್ರತಿಯೊಬ್ಬರೂ ಅದನ್ನು ಸ್ವಾಗತಮಾಡಿದರು. ಅದು ಅಖಿಲ ಕರ್ಣಾಟಕದ ಮೊದಲನೆಯ ಅಸ್ತಿಭಾರ, ಫೌಂಡೇಷನ್ ಎಂದು ಎಲ್ಲರೂ ಆನಂದಪಟ್ಟರು. ಆಗ ವಿಲೀನೀಕರಣವಾಗುವ ಸಂದರ್ಭದಲ್ಲಿ ಬಳ್ಳಾರಿಗೆ ಹೋದೆವು. ಅಲ್ಲಿ ಮುಖ್ಯಮಂತ್ರಿಗಳಿಗೂ ನಮಗೂ ಜನರು ಅದ್ಭುತವಾದ ಸ್ವಾಗತವನ್ನು ನೀಡಿದರು. ಆಗ ಬಳ್ಳಾರಿಯವರ ಹುರುಪು ವಿಶೇಷವಾಗಿತ್ತು. ಅವರು ಅಖಿಲ ಕರ್ಣಾಟಕಕ್ಕೆ ಇದು ಅಡಿಪಾಯ, ಮೊದಲನೆಯ ಹಂತ ಎಂದು ಹೇಳಿದರು. ನಾವೆಲ್ಲಾ ಮೈಸೂರಿನವರೆಂದು ಎಲ್ಲರನ್ನೂ ಸ್ವಾಗತಿಸಿದರು. ಆಗ ಹೇಳಿರುವ ಎರಡು ಮೂರು ವಿಷಯಗಳು ನನಗೆ ಚೆನ್ನಾಗಿ ಜ್ಞಾಪಕದಲ್ಲಿವೆ. ನಾನು ಹೋದಾಗ ನನ್ನನ್ನೂ ಸಹ ಸ್ವಾಗತ ಮಾಡಿದ್ದಾರೆ. 'ಹಸುವನ್ನು ಬಿಟ್ಟು ದೂರ ಕಿತ್ತುಕೊಂಡು ಹೋಗಿದ್ದ ಕರು ಪುನಃ ಬಂದು ತನ್ನ ತಾಯಿಯನ್ನು ಸೇರಿದ ಹಾಗಾಗಿದೆ. ಬಳ್ಳಾರಿಯಲ್ಲಿ ಹಂಪಾ ಕ್ಷೇತ್ರವಿದೆ, ಪೂರ್ವ ಕಾಲದ ಕಿಷ್ಕಿಂಧಾ ನಗರವಿದೆ—ಅದು ಹಿಂದೆ ಆಂಜನೇಯನಿಗೂ ರಾಮನಿಗೂ ಸಖ್ಯವಾದ ಸ್ಥಳ. ಅಂಥ ಆಂಜನೇಯನ ನಾಮಧೇಯವುಳ್ಳ ಹನುಮಂತಯ್ಯನಾದ ನಾನು ಇದನ್ನು ಬಹಳ ಆದರದಿಂದ ಸ್ವಾಗತಿಸುತ್ತೇನೆ' ಎಂದು ಅಂದು ಮ್ಯಾಕ್ ಸ್ಟೇಡಿಯಂನಲ್ಲಿ ಮುಖ್ಯ ಮಂತ್ರಿಗಳು ಹೇಳಿದರು. ಆಮೇಲೆ ಅವರು ಇನ್ನೊಂದು ಮಾತನ್ನು ಹೇಳಿದರು. 'ಅವರು ಮಹಾ ಭಕ್ತರು, ಮಹಾಭಾರತ ಪ್ರಪಂಚದಲ್ಲೆಲ್ಲಾ ಬಹಳ ಪ್ರಸಿದ್ಧವಾದ ಕಾವ್ಯ. ಅದನ್ನು ಬರೆದವರು ಗದುಗಿನ ನಾರಣಪ್ಪನವರು. ಅವರು ಬರೆದುದು ಗದುಗಿನ ವೀರ ನಾರಾಯಣನ ಪ್ರೇರಣೆಯಿಂದ. ಗದುಗಿರುವುದು ಧಾರವಾಡದಲ್ಲಿ. ಅಂಥ ಗದುಗಿನ ವೀರನಾರಾಯಣನಿರುವ ಧಾರವಾಡದವರು ಬಂದರೆ ಅವರನ್ನು ಬೇಡವೆಂದು ಹೇಳಿ ಹೇಗೆ ನಿರಾಕರಿಸಲ.' ಎಂದು ಹೇಳಿದರು. ಇನ್ನು ನನ್ನ ಪರವಾಗಿ ಕೆಲವು ವಿಚಾರಗಳನ್ನು ಹೇಳಬೇಕಾದರೆ ಸಂಗಮದೇವ, ಅಲ್ಲಮ ಪ್ರಭು, ಬಸವೇಶ್ವರ-ಇವರು ಜನ್ಮಿಸಿದ ಕನ್ನಡ ನಾಡಿನವರು, ಸಂಗಮವಿರುವ ಬಿಜಾಪುರ ಡಿಸ್ಟ್ರಿಕ್ಟಿನವರು ಬಂದರೆ ಬೇಡವೆಂದು ಹೇಳುವುದಕ್ಕಾಗುತ್ತದೆಯೆ ?

ಆಗಿನ ಲಾಗಾಯ್ತು ಮುಖ್ಯಮಂತ್ರಿಗಳೂ ಮತ್ತು ಸರ್ಕಾರದವರೂ ಈ ಸಮಸ್ಯೆಯಲ್ಲಿ ನಿರತರಾಗಿರುತ್ತಾರೆ. ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಸ್ವಂತ ಅನುಭವವನ್ನು ಪಡೆದು ನಿರ್ದಿಷ್ಟ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗಿ ಉತ್ತರ ಕರ್ಣಾಟಕದ ಪರಿಸ್ಥಿತಿಯನ್ನು ಖುದ್ದಾಗಿ ನೋಡಿಕೊಂಡು ಬರಲು ಪ್ರವಾಸ ಹೊರಟರು. ಆಗ ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋದರು. ಅಲ್ಲಿನ ವಿದ್ಯಮಾನಗಳನ್ನು ಖುದ್ದಾಗಿ ತಿಳಿದುಕೊಂಡರು. ಅಲ್ಲಿಗೆ ಹೋದಾಗ ಆ ಜನರು ನಮಗೆ ನೀಡಿದ ಅದ್ಭುತಸ್ವಾಗತ, ಪ್ರೀತ್ಯಾದರಣೆಗಳನ್ನು ಅವರು ಮರೆತರೂ ನಾನು ಮರೆಯುವ ಹಾಗಿಲ್ಲ. ನಾನು ಅಲ್ಲಿನ ಭಾಷಣಗಳಲ್ಲಿ ಭಾಗವಹಿಸಲಿಲ್ಲ. ಎಲ್ಲಾ ಭಾಷಣಗಳನ್ನು ಕೇಳುತ್ತಿದ್ದೆ, ಎಲ್ಲಾ ವಿದ್ಯಮಾನಗಳನ್ನೂ ನೋಡುತ್ತಿದ್ದೆ. ಮುಖ್ಯಮಂತ್ರಿಗಳು ಭಾಷಣಗಳಲ್ಲಿ ಭಾಗಿಯಾಗಿದ್ದರು. ಆ ಭಾಷಣದಲ್ಲಿ ಅಖಿಲಕರ್ಣಾಟಕದ ವಿಚಾರದಲ್ಲಿ ಅವರು ತೋರಿಸಿದ ಶ್ರದ್ಧೆ, ಆಸಕ್ತಿ ನನಗೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಎಲ್ಲಕ್ಕಿಂತ ಮಿಗಿಲಾಗಿ ಈ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳು ಮಾಡಿದ ಭಾಷಣಗಳನ್ನು ಕೇಳಿದ ಮೇಲೆ ನಾನಂತೂ ಅಖಿಲಕರ್ಣಾಟಕದ ಭಕ್ತನಾಗಿದ್ದೇನೆ. ನಾನು ಅಖಿಲಕರ್ಣಾಟಕಕ್ಕೆ ನನ್ನ ಬೆಂಬಲವನ್ನು ಕೊಡಲು ಯಾವಾಗಲೂ ಸಿದ್ಧನಾಗಿದ್ದೇನೆ. ಹಾಗೂ ಅಖಿಲಕರ್ಣಾಟಕಕ್ಕೆ ಪೀಠ ಹಾಕಿರುವವರಲ್ಲಿ ನಾನೊಬ್ಬ—ಅಲ್ಲಿಗೆ ನನ್ನ ಇಬ್ಬರು ಹೆಣ್ಣು ಮಕ್ಕಳನ್ನು ಕೊಟ್ಟಿರುತ್ತೇನೆ. ಅಲ್ಲಿಂದ ಬರುವಾಗ ಮುಖ್ಯಮಂತ್ರಿಗಳು ಅಖಿಲಕರ್ಣಾಟಕದ ವಿಚಾರವಾಗಿ ಒಂದು ನಿರ್ಧಾರ ಮಾಡಿಕೊಂಡು ಬಂದರು. ಅವರ ಮನಸ್ಸು ನನಗೆ ಗೊತ್ತು. ಅವರಿಗೆ ಕರ್ಣಾಟಕ ರಚನೆಯ ವಿಚಾರದಲ್ಲಿರತಕ್ಕ ಪ್ರೀತಿ ಮತ್ತು ಮಮತೆ ನನಗೆ ಚೆನ್ನಾಗಿ ಗೊತ್ತು. ಅಲ್ಲಿಂದ ಬಂದಮೇಲೆ ಪ್ರಾಯಶಃ ಅವರ ಮನಸ್ಸು ಬದಲಾವಣೆ ಆಗಿರಬಹುದು. ಫಜಲ್ ಆಲಿ ಕಮಿಷನ್ ಬಂದಾಗ ಇಲ್ಲಿ

ಕೆಲವು ವಿದ್ಯಮಾನಗಳು ನಡೆದುವು. ಕರ್ಣಾಟಕದ ವಿಚಾರದಲ್ಲಿ ಯಾವಾಗಲೂ ಈ ಸಭೆಯ ಅನುಮತಿ ಹೊಂದಿದ ನಂತರವೇ ಪ್ರೆಸಿಡೆಂಟರು ಆ ವಿಷಯವನ್ನು ನಿರ್ಧಾರಮಾಡುವುದು. ಇದನ್ನು ನಿರ್ಧರಿಸತಕ್ಕ ಹಕ್ಕು ಅವರಿಗಿದೆ. ಆದರೆ, ಈ ಬಗ್ಗೆ ಕೆಲವು ವಿದ್ಯಮಾನಗಳು ನಡೆದುದರಿಂದ ಮುಖ್ಯಮಂತ್ರಿಗಳ ಕೈಕಾಲು ಕಟ್ಟಿ ಹಾಕಿದ ಹಾಗಾಯಿತು. ಕರ್ಣಾಟಕ ಏಕೀಕರಣದ ಬಗ್ಗೆ ಅವರವರಲ್ಲಿಯೇ ಭಿನ್ನಾಭಿಪ್ರಾಯಗಳುಂಟಾಗಿ, ಈ ಬಗ್ಗೆ ಜನಾಭಿಪ್ರಾಯ ಪಡೆಯಲು, ಜನರ ಅಭಿಮತವೇನೆಂಬುದನ್ನು ತಿಳಿಯಲು canvassing of signatures ಗೆ ಪ್ರಾರಂಭವಾಯಿತು. This canvassing of signatures from the members of families is a thing which I strongly deprecate. Members of this House were treated like a pack of children, people went about from door to door, including the leaders, and even to the Union Ministers, canvassing for signatures. This is very bad, I think, because all the members of this House are very highly placed. They can use their discretion. But to teach them like villagers is not good. These tactics generally prevail in villages.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ನಾವೆಲ್ಲಾ ಹಳ್ಳಿಯವರೇ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಳ್ಳಿಯವರೇ ಭವಿಷ್ಯ ನಿರ್ಧರಿಸತಕ್ಕವರು. ಅದಕ್ಕೇ ಈ ಬಗ್ಗೆ ನನ್ನ ತಿಳಿವಳಿಕೆಗೆ ಬಂದುದನ್ನು ನಾನು ಹೇಳಿದೆ. ಅಖಿಲ ಕರ್ಣಾಟಕದ ವಿಚಾರದಲ್ಲಿ ಜನರಲ್ಲಿ ಇಲ್ಲಸಲ್ಲದ ತಪ್ಪು ತಿಳಿವಳಿಕೆಯನ್ನು ಹುಟ್ಟಿಸುವುದು ನಮ್ಮ ಘನತೆಗೆ ಸರಿಯಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಯಾವ ರೀತಿಯಾಗಿ ?

ಶ್ರೀ ಜೆ. ಮಹಮ್ಮದ್ ಇಮಾಂ.—ಆ ಗೊಂದಲಕ್ಕೆ ನಾವು ಕೈಹಾಕುವುದು ಬೇಡವೆಂದು ಕೆಲವರನ್ನೊಳಗೊಂಡ ತಂಡದ ವಾದ ಅಲ್ಲಲ್ಲಿ ಕೇಳಿಬರುತ್ತಿದೆ. ಇದೊಂದು ವಿಷಾದಕರವಾದ ಘಟನೆ. ಇದನ್ನು ನಾವು ಖಂಡಿಸಬೇಕಾಗಿದೆ. ಈ ಬಗ್ಗೆ ಏನಿದ್ದರೂ ಈ ಸಭೆಯ ಮುಂದೆ ಬರಲಿ. ಆಗ ಇದನ್ನು ಕೂಲಂಕಷವಾಗಿ, ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತವಾಗಿ ಯೋಚಿಸಿ ದೇಶದ ಹಿತಕ್ಕೆ ಯಾವುದು ಯೋಗ್ಯವೋ ಆ ರೀತಿ ಒಂದು ಮುಂದಿನ ಮಾರ್ಗವನ್ನು ನಿರ್ಧರಿಸುವುದು ಸೂಕ್ತವಾದ ಮಾರ್ಗ. ಇನ್ನು ಮುಂದಾದರೂ ಈ ರೀತಿ ಆಗಬಾರದು. We are the people who regulate the destiny of the people. ಈಗ ನಡೆದಿರುವ ವಿದ್ಯಮಾನಗಳು ನಮ್ಮ ಮನಸ್ಸಿಗೆ ಒಪ್ಪುವುದಿಲ್ಲ. It is not in consonance with the dignity of this House. If there is anything let us consider frankly.

A MEMBER.—Is that in connection with no-confidence ?

ಶ್ರೀ ಜೆ. ಮಹಮ್ಮದ್ ಇಮಾಂ.—No-confidence ವಿಚಾರವೂ ಒಂದು. ಈ ರೀತಿಯ ಪ್ರಸಂಗಗಳಿಗೇ ಅವಕಾಶಕೊಡಬಾರದು. This is all village politics.

A MEMBER.—Is that not a democratic method ?

Sri J. MOHAMED IMAM.—Yes, which will cut the interests of the country. ಈಗ ಈ ಬಗ್ಗೆ ಅಂಕಿಅಂಶಗಳನ್ನು ಶೇಖರಿಸಲು ಸಮಿತಿಯೊಂದನ್ನು ನೇಮಿಸಿರುತ್ತಾರೆ. ಆ ಸಮಿತಿಯ ವರದಿ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಅಂತೂ ಈ ವಿಚಾರದಲ್ಲಿ ಮುಖ್ಯಮಂತ್ರಿಗಳೂ ಮತ್ತು ಮಂತ್ರಿಮಂಡಲವು ಒಂದು ನಿರ್ಧಾರಕ್ಕೆ ಬರಲು ಅಡಚಣೆಯಾಗಿದೆ. ನನ್ನ ಉದ್ದೇಶ, ಈ ಫಜಲ್ ಆಲ ಕಮೀಷನ್ ಪುನಃ ಬರುವುದಿಲ್ಲ. ನಾವು ಆ ಸುಸಮಯವನ್ನು ಕಳೆದುಕೊಂಡಿದ್ದೇವೆ. ಈ ವಿಚಾರದಲ್ಲಿ ಮುಂದೇನಾಗುವುದೋ ಎಂಬ ಭಯ ನಮ್ಮಲ್ಲಿ ಮೂಡಿದೆ. ಅದಕ್ಕಾಗಿ ಮೊನ್ನೆ ನಾನು ಮುಖ್ಯಮಂತ್ರಿಗಳನ್ನು ಕೇಳಿದೆ, ತಮ್ಮ ಅಭಿಪ್ರಾಯವನ್ನು ಕಳುಹಿಸುವುದಕ್ಕೆ ಮುಂಚೆ ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೀರಾ ಎಂದು. ಮಂತ್ರಿಮಂಡಲದ ಅಭಿಪ್ರಾಯದ ಜೊತೆಗೆ ಈ ಸಭೆಯ ಅಭಿಪ್ರಾಯವನ್ನೂ ಕ್ರೋಡೀಕರಿಸಿ ಫಜಲ್ ಆಲ ಕಮೀಷನ್ನಿಗೆ ಕಳುಹಿಸಿದರೆ ಅದು authorised version ಆಗುತ್ತದೆ. ಈಗಲಾದರೂ ಈ ವಿಚಾರವಾಗಿ ನಿರ್ದಿಷ್ಟವಾಗಿ ಹೇಳಲಿ, ಈ ಸಭೆಯ ಅಭಿಪ್ರಾಯವನ್ನು ಯಾವಾಗ ತೆಗೆದುಕೊಳ್ಳುತ್ತಾರೆ ಎಂದು. ಈ ವಿಚಾರದಲ್ಲಿ ರಾಜ್ಯಾಂಗದಲ್ಲಿ ಸಹ "the President will decide in consultation and after ascertaining the views of the Legislatures" ಎಂದಿದೆ. ಈಗಾಗಲೇ ಬಳ್ಳಾರಿ ವಿಚಾರದಲ್ಲಿ ಎರಡು ಸಮಿತಿಗಳ ಅಭಿಪ್ರಾಯಗಳನ್ನು ಪಡೆದು ಪ್ರೆಸಿಡೆಂಟರು ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸಿ ಉಳಿದ ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸಿದ್ದಾರೆ. ಅವರ decision ನಮಗೆ binding ಆಗಿದೆ. He is the President of the organisation and also the Head of the Indian Administration and when he makes such a statement, no one can go against him. ಈ ವಿಚಾರದಲ್ಲಿ ಈಗ ನಮ್ಮನ್ನು ಕಟ್ಟಿಹಾಕಿದ ಹಾಗಾಗಿದೆ. ಈಗ ಆಲೂರು, ಆದವಾನಿ ಮತ್ತು ರಾಯದುರ್ಗ ಈ ಮೂರು ತಾಲ್ಲೂಕುಗಳನ್ನು ಇಲ್ಲಿಗೆ ಸೇರಿಸಿಕೊಳ್ಳುವವರೆಗೂ ಇವು ಒಂದು economic unit ಆಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಈ ವಿಚಾರವನ್ನು ನಾವು ಹೀಗೆಯೇ ಬಿಟ್ಟರೆ ನಿಸ್ಸಹಾಯಕರಾಗುತ್ತೇವೆ. ಮುಂದೆ ಇದರಿಂದ ಬಹಳ ತೊಂದರೆಗಳೊದಗಬಹುದು. So, this is a very great matter which requires the immediate attention of this House. ಆದುದರಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ ಈ ವಿಚಾರವನ್ನು ಸಭೆಯ ಮುಂದೆ ಇಟ್ಟು ಜನರ ಪ್ರತಿನಿಧಿಗಳ ಅಭಿಪ್ರಾಯವನ್ನು ಕ್ರೋಡೀಕ ಸಿ; ಇಲ್ಲವಾದರೆ ಬೇರೆಯವರಿಗೆ ಅವಕಾಶ ಕೊಡಿ. Sir, I feel that in this respect the Government have failed and I think it is necessary that the Opposition steps in. So, I propose to bring in a resolution in this regard unless you yourself bring in one as soon as possible regarding this matter, to ascertain the views of this House. ಈ ವಿಚಾರದಲ್ಲಿ ಇನ್ನು ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ, I do not want

(SRI J. MOHAMED IMAM.)

to go into the merit of it at this stage. I only brought this to point out that the Government have not taken necessary measures regarding this important problem. It was their duty to give the necessary guidance, and to gather public opinion. Till now they have not made any attempt to gather it and they are simply keeping quiet. Perhaps they have their own difficulties but they must break off all stockades and come out and give a lead to the country and I hope we will do this before it is too late.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ವಾಮಿ, ಬಹುಶಃ ಇಂಥ ಮಹಾ ಪ್ರಶ್ನೆಯನ್ನು ಸರಿಯಾದ ಒಂದು ಅವಕಾಶ ತೆಗೆದುಕೊಂಡು ಚರ್ಚೆ ಮಾಡಿದ್ದರೆ ಚೆನ್ನಾಗಿತ್ತು. ಅರ್ಧ ಘಂಟೆಯಲ್ಲಿ ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬರತಕ್ಕಂಥ ಪ್ರಶ್ನೆ ಇದು ಅಲ್ಲ. ಪ್ರತಿಪಕ್ಷದ ನಾಯಕರು ಈ ವಿಷಯದಲ್ಲಿ ಪ್ರಶ್ನೆ ಕೇಳಿದರು ; ಆ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಅಷ್ಟೇ ಅಲ್ಲ, ಸುಮಾರು 30-40 ನಿಮಿಷ ಉಪಪ್ರಶ್ನೆಗಳನ್ನು ಕೇಳಿದ್ದಕ್ಕೂ ಉತ್ತರ ಕೊಟ್ಟಿದ್ದೇನೆ. ಇದಕ್ಕಿಂತಲೂ ಹೆಚ್ಚಾಗಿ ಈ ದಿವಸ ವಿವರಣೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಭಾಷಣಮಾಡಿದ ವಿಷಯವನ್ನೂ ಅವರು ಹೇಳಿದರು. ಅವರು ಹೇಳಿದ್ದೆಲ್ಲಾ ನಿಜ. ನನ್ನ ಅಭಿಪ್ರಾಯವನ್ನು ನಾನೀಗ ಬದಲಾಯಿಸಿಕೊಂಡು ಕೂಡ ಇಲ್ಲ. ಬದಲಾಯಿಸಬೇಕಾದ ಪ್ರಮೇಯ ಕೂಡ ಇಲ್ಲ. ಏನೇನು ಭಾಷಣಗಳನ್ನ ಮಾಡಿದ್ದೇನೆಯೋ ಅದು ಎಲ್ಲರಿಗೂ ಗೊತ್ತೇ ಇದೆ. ಆಗ ಮಾಡಿದ ಭಾಷಣಗಳನ್ನೆಲ್ಲಾ ಕ್ರೋಡೀಕರಿಸಿ ನಾನು ಬಡ್ಜೆಟ್ ಭಾಷಣದಲ್ಲೂ ಕೂಡ, 1954ನೇ ಇಸ್ವಿ ಮಾರ್ಚಿ ತಾರೀಖು 6ರಲ್ಲಿ, ಈ ಸಭೆಯಲ್ಲಿ ನಾನೇ ಭಾಷಣಮಾಡಿ ತಿಳಿಸಿದ್ದೇನೆ. ಅದೆಲ್ಲವೂ, ನಾನು ಈ ಸಭೆಗೆ ಅರಿಕೆಮಾಡಿಕೊಂಡ ಹಾಗೆ, ನನ್ನ ವೈಯಕ್ತಿಕ ಅಭಿಪ್ರಾಯ. ಈ ಸಭೆಯವರು ಇದನ್ನು ಚರ್ಚೆಮಾಡಿ ಒಂದು ನಿರ್ಧಾರಕ್ಕೆ ಇನ್ನೂ ಬಂದಿಲ್ಲ. ಹಾಗೆಯೇ ಮಂತ್ರಿಮಂಡಲದವರೂ ಕೂಡ ಈ ವಿಷಯವನ್ನ ಚರ್ಚೆಮಾಡಿ ಒಂದು ಅಧಿಕೃತ ಎಂದರೆ ಅಫಿಷಿಯಲ್ ಅಥವಾ ಕ್ಯಾಬಿನೆಟ್ ಲೆವಲ್ ತೀರ್ಮಾನಕ್ಕೆ ಇನ್ನೂ ಬಂದಿಲ್ಲ ; ಬರಬೇಕಾಗುತ್ತದೆ. ಆದರೆ ಯಾವಾಗ ಬರಬೇಕಾಗುತ್ತದೆ ಎಂಬುದೇ ಪ್ರಶ್ನೆ. ಪ್ರತಿಪಕ್ಷದ ನಾಯಕರು 'ಈಗಾಗಲೇ ಬರಬೇಕಾಗಿತ್ತು, ಈಗಾಗಲೇ ವಿಳಂಬವಾಗಿದೆ' ಎಂಬ ವಾದವನ್ನು ಹೇಳಿದ್ದಾರೆ. ನಾನಾದರೋ ಇನ್ನೂ ಇದಕ್ಕೆ ಕಾಲ ಇದೆ, ಯೋಚನೆಮಾಡೋಣ ಎಂದು ಹೇಳುತ್ತಾ ಇದ್ದೇನೆ. ಬಣವೆ ಬೆಂದುಹೋದಮೇಲೆ ಬಾವಿ ತೆಗೆಸಿ ಏನು ಪ್ರಯೋಜನ ಎಂದು ಅವರು ಹೇಳಿದರು. ಗಾದೆಯೇನೋ ಚೆನ್ನಾಗಿದೆ. ಆದರೆ ಬಣವೆ ಸುಟ್ಟುಹೋಗುತ್ತದೆಯಲ್ಲ ಎಂದು ಬಾವಿತೆಗೆದು ಇಟ್ಟುಕೊಂಡು, ಹೇಗಿದ್ದರೂ ಬಣವೆ ಸುಟ್ಟುಹೋಗಲಲ್ಲ ಬಾವಿ ತೆಗೆದದ್ದು ಅನಾವಶ್ಯಕವಾಯಿತು ಎಂದುಹೇಳಿ ಬಾವಿಯನ್ನು ಸಾರ್ಥಕಮಾಡುವುದಕ್ಕೆ ಬಣವೆಗೇ ಬೆಂಕಿ ಇಡೋಣ ಎನ್ನುವುದಕ್ಕಾಗುತ್ತದೆಯೇ! ಬಾವಿ ಇದ್ದಾಕ್ಷಣಕ್ಕೆ ಆ ನೀರನ್ನು ಉಪಯೋಗಿಸುವುದಕ್ಕೋಸ್ಕರ ಮೆದೆ ಸುಟ್ಟುಹಾಕುವುದಕ್ಕಾಗುವುದಿಲ್ಲ. ಈ ಸಭೆಯಲ್ಲೂ, ದೇಶದಲ್ಲೂ ಈ ವಿಚಾರದಲ್ಲಿ ಭಿನ್ನಾಭಿಪ್ರಾಯ ಇರತಕ್ಕದ್ದು ಅವರಿಗೂ ಗೊತ್ತು, ಎಲ್ಲರಿಗೂ ಗೊತ್ತು. ಪ್ರಜಾಪ್ರಭುತ್ವದ ಪ್ರಕಾರ ಭಿನ್ನಾಭಿಪ್ರಾಯ ಇರಬೇಕಾದದ್ದೆ. ಏನೋ ಶೇಕಡ 70-80 ಭಾಗ ಒಂದು ಅಭಿಪ್ರಾಯ ಇದ್ದು, ಇನ್ನೊಂದು ಅಭಿಪ್ರಾಯ ಶೇಕಡ 10-20 ಭಾಗ ಇದ್ದರೆ ಜಾಗ್ರತೆಯಾಗಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ನನಗೆ ಕಂಡು ಬಂದಿರುವಹಾಗೆ ಹೆಚ್ಚು ಕಡಮೆ ಬಲಾಬಲ ಸರಿಸಮವಾಗಿರುವ ಹಾಗೆ ಕಾಣುತ್ತದೆ. ರುಜು ಹಾಕಿದ್ದಾರೆ ಎಂದು ಹೇಳಿದರು. ಆ ರುಜು ಹಾಕಿರುವವರು ನಿಷ್ಪಕ್ಷಪಾತವಾಗಿ ಎರಡು ಕಡೆಯೂ ರುಜು ಹಾಕಿದ್ದಾರೆ. (ಸಭೆಯಲ್ಲಿ ನಗು!) ಆದ್ದರಿಂದ ಈ ಸಭೆಯ ಅಭಿಪ್ರಾಯವನ್ನು ಸಮಂಜಸವಾದ ರೀತಿಯಲ್ಲಿ, ದೇಶದ ಹಿತಸಾಧನೆಯ ದೃಷ್ಟಿಯಿಂದ ರೂಪಿಸಬೇಕಾಗಿರತಕ್ಕದ್ದು ನನ್ನೊಬ್ಬನ ಕರ್ತವ್ಯವೇ ಅಲ್ಲ ; ಈ ಸಭೆಯ ಎಲ್ಲ ಮಾನ್ಯ ಸದಸ್ಯರ ಕರ್ತವ್ಯವೂ ಆಗುತ್ತದೆ. ನಾನು ಸಾರಿಸಾರಿ ಹೇಳುತ್ತಾ ಇದ್ದೇನೆ. ಈ ದೇಶ ವಿಸ್ತಾರವಾಗತಕ್ಕ ಈ ಮಹಾ ಪ್ರಶ್ನೆಯ ವಿಷಯದಲ್ಲಿ ಎಲ್ಲರ ಸಹೃದಯವಾದ ಸರ್ವಸಮ್ಮತವಾದ ಅಭಿಪ್ರಾಯವನ್ನು ರೂಪಿಸುವುದಕ್ಕೆ ನಾನು ಪ್ರಯತ್ನಪಡುತ್ತಾ ಇದ್ದೇನೆ. ಆರೀತಿ ಆಗಲಿ ಎಂದು ಹೇಳಿ ದೇವರನ್ನು ಪ್ರಾರ್ಥಿಸುತ್ತಾ ಇದ್ದೇನೆ. ನನ್ನ ನೀತಿಯಾದರೂ ಕೂಡ ಹೇಗಿದೆ ಎಂದರೆ ಒಂದೇ ರಸ್ತೆಯಲ್ಲಿ ಹೋಗುತ್ತಾ ಇರತಕ್ಕದ್ದು. ಯಾರು ಏನಾದರೂ ಅಪಾರ್ಥ ಮಾಡಿಕೊಂಡರೂ ಕೂಡ ಅದು ಪ್ರಜಾಪ್ರಭುತ್ವದಲ್ಲಿ ಅವರಿಗಿರುವ ಹಕ್ಕು. ಆ ಹಕ್ಕಿನ ಚಲಾವಣೆಯಲ್ಲಿ ಆರೀತಿ ಅಪಾರ್ಥ ಮಾಡಿಕೊಳ್ಳಬೇಕಾಗುತ್ತದೆ. ಒಂದೇ ದಾರಿಯಲ್ಲಿ ಹೋಗುತ್ತಾ ಇದ್ದರೂ ಕೆಲವುಕಡೆ ಇಳಿಜಾರಾಗಿರುತ್ತದೆ, ಕೆಲವುಕಡೆ ಮೋಡು ಆಗಿರುತ್ತದೆ; ಇಳಿಜಾರಿರುವ ಕಡೆ ಗಾಡಿ ಜೋರಾಗಿ ಹೋಗುತ್ತದೆ; ಮೋಡು ಬಂದಾಗ ಗಾಡಿ ತಿಣಕಿ, ತಿಣಕಿ ಮೇಲೆ ಹತ್ತಬೇಕಾಗುತ್ತದೆ. ಆದ್ದರಿಂದ ಪರಿಸ್ಥಿತಿ ಸುಲಭವಾಗಿದ್ದಾಗ ಅಭಿಪ್ರಾಯವನ್ನು ಸುಲಭವಾಗಿ ರೂಪಿಸಬಹುದು. ಪರಿಸ್ಥಿತಿ ಕಷ್ಟವಾಗಿ ಕಂಡುಬಂದಾಗ ತಿಣಕಿ, ತಿಣಕಿ ಮುಂದಕ್ಕೆ ಹೋಗಬೇಕಾಗುತ್ತದೆ. ಇದು ಇರತಕ್ಕ ಗುಟ್ಟು, ಇನ್ನೇನೂ ಕಷ್ಟಬರುವುದಿಲ್ಲ. ಈ ಪ್ರಶ್ನೆ ಬರೀ ಡಿಸ್ಟ್ರಿಕ್ಟುಗಳನ್ನೂ ಅಥವಾ ಕೆಲವು ಪ್ರದೇಶಗಳನ್ನೂ ಒಂದುಗೂಡಿಸಿ ಒಂದು ಸಂಸ್ಥಾನವನ್ನು ಮಾಡುವುದಾಗಿದ್ದರೂ ಕೂಡ, ಅದರ ಜೊತೆಗೆ ಮುಂದೆ ರೂಪಿತವಾಗತಕ್ಕ ಸಂಸ್ಥಾನ ಹಣಕಾಸಿನ ದೃಷ್ಟಿಯಿಂದಲೂ ಕೂಡ ನೆಮ್ಮದಿಯಿಂದ ಕೂಡಿದ್ದಾಗಬೇಕು ಎಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇಂಡಿಯಾ ಸರ್ಕಾರದವರು ಏನೊಂದು ತೀರ್ಮಾನಕೊಟ್ಟರೂ ಆ ತೀರ್ಮಾನವನ್ನು ಅವರು ಅನುಷ್ಠಾನಕ್ಕೆ ತರುವಾಗ ಈ ಸಂಸ್ಥಾನದ ಆರ್ಥಿಕ ಭದ್ರತೆಯನ್ನೂ ಸಹ ಕಾಪಾಡತಕ್ಕ ಹೊಣೆಗಾರಿಕೆಯನ್ನು ಅವರು ಹೊತ್ತುಕೊಳ್ಳುವಹಾಗೆ ನಾವು ಮಾಡಬೇಕು. ಬಳ್ಳಾರಿಯನ್ನು ನಾವು ಸರ್ವರೂ ಸಂತೋಷದಿಂದ ಸೇರಿಸಿಕೊಂಡಿದ್ದಾಗ್ಯೂ ಕೂಡ ಹಣಕಾಸಿನ ದೃಷ್ಟಿಯಿಂದ ನಮಗೆ ಸ್ವಲ್ಪ ಹೊರೆ ಆಯಿತು ; ಅದನ್ನು ಎಲ್ಲರೂ ಒಪ್ಪುತ್ತಾರೆ. ಇಂಡಿಯಾದೇಶದ ರಾಜ್ಯಾಂಗದ ಪ್ರಕಾರ ಎಲ್ಲ ಸಂಸ್ಥಾನಗಳೂ ಕೂಡ ಆರ್ಥಿಕದೃಷ್ಟಿಯಿಂದ ಸಮಾನತ್ವವುಳ್ಳವುಗಳಾಗಿರಬೇಕೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆ ತತ್ವವನ್ನು ನಾವು ಪ್ರತಿಪಾದಿಸಿ, ಮುಂದೆ ರೂಪಿತವಾಗತಕ್ಕ ಸಂಸ್ಥಾನ ಏನಿದೆಯೋ ಆ ಸಂಸ್ಥಾನಕ್ಕೂ ಆ

ಆರ್ಥಿಕ ಭದ್ರತೆಯನ್ನು ಹಣಕಾಸಿನ ಭದ್ರತೆಯನ್ನು ಉಂಟುಮಾಡಿಕೊಡತಕ್ಕ ಜವಾಬ್ದಾರಿ ನಮ್ಮದು ಎಂಬ ವಾದವನ್ನೂ ಕೂಡ ಮನಸ್ಸಿನಲ್ಲಿಟ್ಟುಕೊಂಡು ಪ್ರತಿಪಾದಿಸಬೇಕಾಗಿದೆ. ಈ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಯೋಚನೆಮಾಡಿ ತಿರ್ಮಾನಕ್ಕೆ ಬಂದು ಫಜಲ್ ಆಲಿ ಕಮೀಷನ್ನಿನವರಿಗೆ ತಿಳಿಸುವುದಕ್ಕೆ ಸಮಯವಿದೆ ಎಂದು ಬಿನ್ನೈಸಿಕೊಂಡಿದ್ದೇನೆ. ಫಜಲ್ ಆಲಿ ಕಮೀಷನ್ನಿನವರು ವಿಷಾದಪಟ್ಟುಕೊಂಡು ಹೊರಟುಹೋದರು, ನಿರಾಶವಾಗಿ ಹೋದರು ಎಂಬ ಏನೊಂದು ವಾದವನ್ನು ಪ್ರತಿಪಕ್ಷದ ನಾಯಕರು ಇಟ್ಟಿದ್ದಾರೋ ಅದು ನನಗಾದರೂ ಕಂಡುಬಂದಿಲ್ಲ. ನಾನು ಈ ಮೊದಲೇ ಸಭೆಗೆ ತಿಳಿಸಿರುವ ಹಾಗೆ ವೈಯಕ್ತಿಕವಾಗಿ ಅವರ ಸಂಗಡ ಈ ವಿಷಯವನ್ನು ಪ್ರಸ್ತಾಪಮಾಡಿದ್ದೇನೆ. ಅವರಿಗೆ ಇಲ್ಲಿರತಕ್ಕ ಕಷ್ಟಪರಿಸ್ಥಿತಿ ಗೊತ್ತು. ಆದ್ದರಿಂದ ‘ ಈ ವಿಷಯದ ಮೇಲೆ ಸರ್ಕಾರ ಒಂದುವೇಳೆ ಅಭಿಪ್ರಾಯ ಕೊಡುವುದಾದರೆ, ಕಮೀಷನ್ನಿನವರು ರಿಪೋರ್ಟ್ ಬರೆಯುವುದಕ್ಕೆ ಪೂರ್ವಭಾವಿಯಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಬಹುದು ’ ಎಂದು ಹೇಳಿದ್ದಾರೆ. ಇನ್ನು ಎರಡು ಮೂರು ತಿಂಗಳು ಉಪಯೋಗಿಸಿಕೊಂಡರೂ ಕೂಡ ಸಮಯವಿದೆ, ಅವಕಾಶವಿದೆ. ಆದ್ದರಿಂದ ನಾವೇನೂ ಆತುರಪಡಬೇಕಾಗಿಲ್ಲ. ಅನಾಹುತವೇನೂ ಆಗಿಲ್ಲ. ಈ ಮಹಾಪ್ರಶ್ನೆಯನ್ನು ಸಾವಧಾನದಿಂದ ಪರಿಶೀಲನೆಮಾಡುವುದರಲ್ಲಿ ಬುದ್ಧಿವಂತಿಕೆ ಇದೆಯೇ ಹೊರತು ಆತುರ ಆತುರವಾಗಿ ಒಂದು ತೀರ್ಮಾನ ತೆಗೆದುಕೊಳ್ಳುವುದರಿಂದ ಅಷ್ಟಾಗಿ ಪ್ರಯೋಜನವಾಗುವುದಿಲ್ಲ. ಕಾರ್ಯದಲ್ಲಿ ಸುತ್ತಾದರೂ ಸುಲಭ ಮೇಲು ಎಂಬ ಗಾದೆಯನ್ನನುಸರಿಸಿ ನಾವು ನಡೆಯಬೇಕಾಗಿದೆ. ಫ್ಯಾಕ್ಟ್ ಫೈಂಡಿಂಗ್ ಸಮಿತಿಯನ್ನು ನಿರ್ಮಿಸಿದೆ. ಆ ರೀತಿಯ ಒಂದು ಸಮಿತಿಯಾಗಬೇಕೆಂದು ಪ್ರತಿಪಕ್ಷದ ಸದಸ್ಯರೂ, ಇತರ ಸದಸ್ಯರೂ ತಿಳಿಸಿದರು. ಅದಕ್ಕನುಗುಣವಾಗಿ ಶೇಷಾದ್ರಿ ಸಮಿತಿಯನ್ನು ನಿರ್ಮಿಸಲಾಗಿದೆ. ಆ ಸಮಿತಿಯವರು ಇನ್ನು ಎಂಟು-ಹತ್ತು ದಿವಸಗಳಲ್ಲಿ ವರದಿಯನ್ನು ಸಲ್ಲಿಸುತ್ತಾರೆ. ಅದನ್ನು ಆಧಾರವಾಗಿಟ್ಟುಕೊಂಡು ಚರ್ಚೆ ಮಾಡಬೇಕೆಂಬ ಮನಸ್ಸು ಈ ಸಭೆಗೂ ಮತ್ತು ಮತ್ತೊಂದು ಸಭೆಗೂ ಇದೆ. ಆ ರೀತಿಯಲ್ಲಿ ಒಂದು ಅವಕಾಶ ಕಲ್ಪಿಸಿಕೊಟ್ಟು ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಅನಂತರ ಈ ವಿಷಯದಲ್ಲಿ ಮಂತ್ರಿಮಂಡಲದವರು ಒಂದು ನಿಲುವನ್ನು ತಾಳುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ನಂಬಿದ್ದೇನೆ.

Mr. SPEAKER.—The House will now rise for the day and meet at Twelve of the Clock tomorrow.

The House adjourned at Thirty-five Minutes past Five of the Clock to meet at Twelve of the Clock on Thursday, 21st October 1954.

MYSORE LEGISLATIVE ASSEMBLY.

TENTH DAY.

Thursday, 21st October 1954.

The House met in the Assembly Hall, Old Public Offices, Bangalore, at Twelve of the Clock.

Mr. SPEAKER (Sri H. S. RUDRAPPA, B.SC., LL.B.) in the Chair.

QUESTIONS AND ANSWERS

Arrack Shop in Kalasipalyam (Shifting)

Q.—178. **Sri P. R. RAMAIYA** (Basavangudi).—

Will the Government be pleased to state:—

(*a*) whether it has come to their notice that the arrack shop situated in Kalasipalyam, Bangalore City, is causing much inconvenience and disturbance also to the people living in that area;

(*b*) whether it has also come to their notice that on account of the existence of the arrack shop there, much annoyance is created to the people going to and returning from the Krishnarajendra Market in the evenings;

(*c*) whether they will consider the advisability of shifting the arrack shop from there to some other place?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) Yes.

(*c*) This will be examined.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, 'ಎ' ಭಾಗಕ್ಕೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿದೆಯೆಂದು ತಿಳಿಸಿದ್ದೀರಿ. ಇದರ ಬಗ್ಗೆ cases ಎಷ್ಟಾಗಿವೆ?

ಶ್ರೀ ಟಿ. ಚನ್ನಯ್ಯ.—ಅವು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ ಅಂಗಡಿ ರಾತ್ರಿ ಎಷ್ಟು ಗಂಟೆಯವರೆಗೆ ತೆರೆದಿರುತ್ತದೆ?

ಶ್ರೀ ಟಿ. ಚನ್ನಯ್ಯ.—ರಾತ್ರಿ 9 ಗಂಟೆಯವರೆಗೆ.

ಶ್ರೀ ಪಿ. ಆರ್. ರಾಮಯ್ಯ.—ಇದಕ್ಕೆ ಸಮೀಪದಲ್ಲಿಯೇ slum area ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಪಿ. ಆರ್. ರಾಮಯ್ಯ.—ಅಲ್ಲಿ ವಾಸಮಾಡುತ್ತಿರುವ ನಿವಾಸಿಗಳಿಗೆ ರಾತ್ರಿ ಹೊತ್ತು ಈ ಕುಡಿತದವರ ಜಗಳದಿಂದ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಜಗಳವಾಗಿರುವುದು ನಮ್ಮ ಗಮನಕ್ಕೆ ಬಂದಿಲ್ಲ; ಕುಡಿತಕ್ಕೆ ಸಿಕ್ಕಿಬಿದ್ದವರು ಆ ರಸ್ತೆಗಳಲ್ಲಿ ತಿರುಗಾಡುತ್ತಾರೆಂಬುದು ಗಮನಕ್ಕೆ ಬಂದಿದೆ.

ಶ್ರೀ ಪಿ. ಆರ್ ರಾಮಯ್ಯ.—ಈ ಅಂಗಡಿಯನ್ನು ಅಲ್ಲಿಂದ ತೆಗೆದುಹಾಕಬೇಕೆಂದು ಅನೇಕ ವರ್ಷಗಳಿಂದ ವರ್ಷ ವರ್ಷವೂ ಸಹ ಸರ್ಕಾರವನ್ನು ಅರ್ಜಿಗಳ ಮೂಲಕ ಒತ್ತಾಯ ಮಾಡಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅರ್ಜಿಗಳು ಬಂದಿವೆ. ಈ ವಿಚಾರದಲ್ಲಿ ಹಿಂದೆ ಇದ್ದ ಬಸ್ ಸ್ಟ್ಯಾಂಡ್ ಜಾಗವನ್ನು ಇಲ್ಲಿಗೆ ಬದಲಾವಣೆ ಮಾಡಬೇಕೆಂದು ಕ್ರಮ ಜರುಗಿತ್ತು. ಆದರೆ ಕಾರ್ಪೊರೇಷನ್ನಿನವರು ಈ ಜಾಗವನ್ನು ಬೇರೆ ಉದ್ದೇಶಕ್ಕೆ ಕೊಟ್ಟರು. ಈಗ ಸ್ಥಳವಿಲ್ಲದುದರ ದೆಸೆಯಿಂದ ಈ ಅಂಗಡಿಯನ್ನು ಎಲ್ಲಿಗೆ ಬದಲಾಯಿಸಬೇಕೆಂಬುದನ್ನು ಇನ್ನೂ ನಿರ್ಧರಿಸಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಕಾರ್ಪೊರೇಷನ್ನಿನವರು ಈ ಅಂಗಡಿಯನ್ನು ಬದಲಾಯಿಸಬೇಕೆಂದು ತಿಳಿಸಿಲ್ಲವೇ?

ಶ್ರೀ ಟಿ. ಚನ್ನಯ್ಯ.—ತಿಳಿಸಿರುತ್ತಾರೆ; ಜನರೂ ಸಹ ತಿಳಿಸಿರುತ್ತಾರೆ. ಆದರೆ ಇದಕ್ಕೆ ಜಾಗ ಯಾವುದು ಎಂಬುದನ್ನು ಕಾರ್ಪೊರೇಷನ್ನಿನವರು ತೀರ್ಮಾನ ಮಾಡಿಲ್ಲ.

ಶ್ರೀ ಆರ್. ಅನಂತರಾಮನ್.—ಇದಕ್ಕೆ ಬೇರೆ ಜಾಗ ಸಿಕ್ಕದೇ ಇದ್ದರೆ ಯಾವುದಾದರೂ ಮನೆಯನ್ನು ಅಕ್ವೈರ್ ಮಾಡಿಕೊಳ್ಳಲಾಗುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ಇದಕ್ಕೆ ಸರಿಯಾದ ಸ್ಥಳ ಸಿಕ್ಕದೇ ಇರುವುದರಿಂದ ಅದೇ ಸ್ಥಳದಲ್ಲಿದೆ.

Prohibition Offences (K. G. F.)

Q.—328. **Sri P. M. SWAMI DURAI** (Kolar Gold Fields-Scheduled Castes).—

Will the Government be pleased to state:—

(*a*) the number of prohibition offences in the State for the year 1952 and 1953;

(*b*) the amount of money recovered as fines in the above two years;

(SRI P. M. SWAMI DURAI.)

(*c*) the number of prohibition offences and the amount realised as fine in the above two years in Kolar Gold Fields ?

A.—**Sri T. CHANNIAH** (Minister for Public Health and Local Self-Government).—

	Year	No. of Prohibition offences	Rs.
(*a*)	1952	13,716	...
	1953	12,304	...
(*b*)	1952	...	2,24,727
	1953	...	2,36,748
(*c*)	1952	2,363	31,149
	1953	1,980	28,009

Sri P. M. SWAMI DURAI.—I have no supplementaries.

District Board Roads In Chitaldrug District

Q.—374. **Sri G. BASAPPA** (Hosadurga).—

Will the Government be pleased to state :—

(*a*) the total length of roads in Chitaldrug District which are in charge of the District Board ;

(*b*) the amount spent for the maintenance of these roads in the years 1953-54 and 1954-55 ;

(*c*) the condition of these roads ;

(*d*) whether there are any incomplete roads handed over to the District Board ; if so, what is the action taken to complete such roads ?

A.—**Sri T. CHANNIAH** (Minister for Public Health and Local Self-Government).—

(*a*) 458 miles and 1 furlong,

(*b*)	1953-54	...	Rs. 1,39,000
	1954-55	...	Rs. 53,000 spent till now.

(*c*) Not very satisfactory.

(*d*) Some of the roads that are taken to the control of the Boards recently are incomplete. Materials have been collected by the Section contractors of the Public Works Department. Estimates are also prepared and these road works will be taken up shortly. Some of the works are under progress. These will have to be completed by the District Board as and when funds permit.

ಶ್ರೀ ಜಿ. ಬಸಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳು ಈಗಿರುವ ಸ್ಥಿತಿಯಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆಯೆಂಬುದು ಪತ್ರಿಕೆಗಳಲ್ಲಿ ವರದಿಯಾಗಿರುವುದು ನಿಜವೇ ?

ಶ್ರೀ ಟಿ. ಚನ್ನಯ್ಯ.—ಪತ್ರಿಕೆಗಳಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಬಸಪ್ಪ.—ಕೆಲವು ರಸ್ತೆಗಳ formation ಅರ್ಧಂಬರ್ಧವಾಗಿ ಕೆಲಸವನ್ನು ಹಾಗೆಯೇ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಜಿ. ಬಸಪ್ಪ.—ಅಂಥ ಸಂದರ್ಭಗಳನ್ನು ಗಮನಕ್ಕೆ ತಂದರೆ ಕೂಡಲೇ ತಕ್ಕ ವ್ಯವಸ್ಥೆ ಮಾಡಲು ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈ ವಿಚಾರವನ್ನು, ಇಲಾಖೆಯವರ ಗಮನಕ್ಕೆ ತಂದರೆ ಅವರೇ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳುತ್ತಾರೆ.

Sri G. SIVAPPA.—By whom are these roads maintained ?

Sri T. CHANNIAH.—By the District Board.

Sri G. SIVAPPA.—But is it not a fact that the District Board has no funds available for maintaining these roads ?

Sri T. CHANNIAH.—The District Board may not have sufficient funds but Government have given it grants to attend to the maintenance of these roads.

Sri G. SIVAPPA.—Is not the classification of these roads into State Fund and District Fund arbitrary ?

Sri T. CHANNIAH.—Not arbitrary. On the representations made by the District Board of Chitaldrug, they have been classified.

Sri G. SIVAPPA.—May I bring it to the notice of the Government that the President of the District Board has differed from the way in which this classification has been made by the Government ?

Sri Kadidal MANJAPPA.—It is only after consulting the District Board President and the Assistant and Executive Engineers this classification has been made.

Sri G. SIVAPPA.—But the President of the District Board, Chitaldrug, has differed.

Mr. SPEAKER.—Both questions are the same. Answer has been given.

Sri Mulka GOVINDA REDDY.—Are the Government aware that the repairs of these roads are not undertaken for want of approval by the Government to the budget proposals sent by the District Board of Chitaldrug ?

Sri T. CHANNIAH.—No, no. Government are aware that all the District Fund roads in Chitaldrug cannot be taken up for maintenance this year for want of funds. Only a few roads will be taken up this year.

Sri Mulka GOVINDA REDDY.—Have the Government approved the budget proposals sent by the District Board of Chitaldrug ?

Sri T. CHANNIAH.—Yes.

Sri J. MOHAMED IMAM.—What are the roads taken over by the State and the roads that are earmarked for the District Boards ?

Sri Kadidal MANJAPPA.—There is a Government Order which contains a list of all the State Fund roads and District Fund roads. I would like to draw the attention of the Hon'ble Member to that order.

Sri J. MOHAMED IMAM.—When was this classification made ?

Sri Kadidal MANJAPPA.—Last year ; I do not remember the exact date.

Sri J. MOHAMED IMAM.—Is it a good enough classification for the Chitaldrug because the total length of the road in charge of the District Board is about 458 miles as stated in the answer ?

(No answer.)

Sri J. MOHAMED IMAM.—Does it include the recently constructed inter-village roads and distress relief works roads ?

Sri Kadidal MANJAPPA.—No.

Industrial and Testing Laboratory (Circular to Heads of Departments to purchase products).

Q.—420. **Sri B. NARAYANA SWAMY** (Mysore City South).—

Will the Government be pleased to state :—

(*a*) whether it is a fact that Government have issued a Circular to all Heads of Departments to purchase materials manufactured by the Industrial and Testing Laboratory only ; if so, the reasons ;

(*b*) whether they are aware of several complaints made by the Medical Stores and Electrical Departments regarding bad supply and high cost of commodities supplied by the above firm ?

A.—**Sri T. CHANNIAH** (Minister for Public Health and Local Self-Government).—

(*a*) No.
(*b*) No.

Sri B. NARAYANASWAMY.—The Hon'ble Minister is pleased to say that no circular has been issued. May I know whether any oral instructions have been issued to all departments in the matter ?

Sri T. CHANNIAH.—No oral intructions have been issued.

Sri B. NARAYANASWAMY.—I am given to understand that oral instructions have been given. Is that true ?

Sri T. CHANNIAH.—My information is that the Medical Department Stores are also purchasing certain drugs from the Testing Laboratory.

Sri B. NARAYANASWAMY.—My question is that the Minister for Industries has given some instructions to some departments to purchase materials manufactured by the Laboratory. Is that a fact ?

(No answer)

Mr. SPEAKER.—Does the Hon'ble Minister require notice ?

Sri B. NARAYANASWAMY.—Is it a fact that the Industrial and Testing Laboratory is making use of a Government Order while giving their quotations to the effect that as the company has to get only 10 per cent profit, the Government want that preference should be given to their products while purchases are made by departments ? Is that a fact ?

Sri H. SIDDAVEERAPPA.—Government are not aware of it. But it is a fact that whenever a department wants to purchase any goods, as far as

(SRI H. SIDDAVEERAPPA.)

possible preference is given to indigenous goods, whether medicine or other goods. There is a circular that all those goods which are readily available and manufactured in Mysore must be preferred.

Mr. SPEAKER.—I will not allow further supplementaries regarding the scope of the order. It is only concerned with the circular issued to that particular institution. You can ask only that.

Sri B. NARAYANASWAMY.—Yes Sir. In answer to (*a*) it has been said that no circular has been given and now the Minister for industries has been pleased to say that there has been a circular.

Sri H. SIDDAVEERAPPA.—I do not say there is a circular. There are general instructions to the Stores Purchase Committee to the effect that whenever we want goods required for Government needs, we must purchase as far as possible goods of indigenous manufacture.

Sri B. NARAYANASWAMY.—Are the Government aware that the Industrial Testing Laboratory Company is saying that they have a circular from the Government to the effect that Heads of Departments should give preference to their articles while purchasing their requirements ?

Sri H. SIDDAVEERAPPA.—If they were to say like that, I will look into it. They have no business to make use of that circular for business purposes.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರದವರು ಅದರಲ್ಲಿ ಶೇಕಡ 30ರಷ್ಟು ಷೇರು ಹಾಕಿದ್ದಾರೆಯಲ್ಲವೆ ?

Mr. SPEAKER.—I do not allow that question. Next Question Sri Narayanaswamy.

Dispute with respect to certain properties in Ittigegud, between the Palace Mysore and Trust Board.

Q.—422. **Sri B. NARAYANASWAMY** (Mysore City South).—

Will the Government be pleased to state :—

(*a*) whether any dispute of claims regarding certain properties in Ittigegud, Nazarabad Mohalla, Mysore, or between Palace and the City Improvement Trust Board, Mysore, has been referred to Government for settlement ;

(*b*) if so, when and what are the details of the dispute ; and

(*c*) what action Government has taken in the matter ?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) and (*c*) The matter is being looked into and it is not desirable to disclose the details in the public interests.

Sri B. NARAYANASWAMY.—What time does the Government take to settle the matter, Sir ?

Sri T. CHANNIAH.—The entire issue is under the consideration of the Government.

Sri B. NARAYANASWAMY.—What will be the time that Government will take to settle this matter ? How long and how much more time do they require to settle this matter, may I know ?

Sri T. CHANNIAH.—As early as possible.

Sri B. NARAYANASWAMY.—May I know what is that important matter which involves public interest that you have referred to in the answer ?

Sri T. CHANNIAH.—The real dispute is to settle which are the properties which really belong to His Highness and the properties that belong to the Trust Board and in respect of this matter the Chairman of the Trust Board has agreed to go and speak to His Highness ; afterwards the matter will be settled.

Excise contractors in default in Mysore District.

Q.—442. **Sri S. H. THAMMIAH** (Krishnarajanagar).—

Will the Government be pleased to state :—

(a) the number of Excise Contractors who are in default in Mysore District;

(b) the names of such defaulters and the amount of default;

(c) the action taken for the recovery of the same?

A.—Sri T. CHANNIAH (Minister for Public Health and Local Self-Government).—

(a) 11.

(b) and (c) Statement appended below.

Name of the taluk and defaulter	Amount due			Action taken
Sriyuts—	Rs.	a.	p.	
Chamarajanagar—				
G. Swaminath ...	511	0	0	Distraint warrant issued
Nanjangud—				
T. Ramakrishnaiah ...	400	0	0	Prosecuted in Mysore City Magistrate's Court for having declared another's property as his own.
T-Narasipur—				
T. Ramakrishnaiah ...	1,512	5	4	Do do
Hunsur—				
M. V. Sambhulingappa ...	7,386	10	0	Amildar, Mysore Taluk, has been requested to sell the properties of the defaulter.
S. L. Mari Gowda ...	701	0	0	Properties kept for sale
Heggadadevanakote—				
Raja Sab ...	146	10	0	The amount has to be adjusted from Forest to Excise.
S. Kasi Rao ...	180	8	0	Distraint warrant issued
Krishnarajanagar—				
M. Rudrappa ...	14,603	14	0	Properties of the surety kept for sale.
K. R. S. Swamy ...	6,336	8	0	Properties of the defaulter at Tumkur kept for sale.
K. R. S. Swamy ...	14,606	4	0	Do do
M. Nagappa ...	10,256	0	0	Distraint warrant issued
S. K. Thammanna Gowda	6,885	0	0	Deputy Commissioner, Hassan, has been requested to sell the properties of the defaulter.
S. K. Javare Gowda ...	8,002	0	0	Distraint warrant and notices issued.
S. L. Mari Gowda ...	1,530	0	0	Do do
Periyapatna—				
M. V. Shambhulingappa ...	72,450	2	0	Amildar, Mysore Taluk, has been requested to sell the properties of the defaulter.

ಶ್ರೀ ಎಸ್. ಎಚ್. ತಮ್ಮಯ್ಯ.—ಈ ಬಾಕಿ ಎಲ್ಲಾ ತಾವು ಅಧಿಕಾರಕ್ಕೆ ಬಂದಮೇಲೆ ತಾನೆ ?

ಶ್ರೀ ಟಿ. ಚೆನ್ನಯ್ಯ.—ನಾವು ಬರುವುದಕ್ಕೆ ಮುಂಚೆ ಇದ್ದ ಬಾಕಿ ಕೂಡ ಕೆಲವು ಇವೆ.

ಶ್ರೀ ಎಚ್. ಎಸ್. ತಮ್ಮಯ್ಯ.—ಈ ಬಾಕಿ ವಸೂಲಿ ಕ್ರಮ ನಡೆಯುತ್ತ ಇರುವುದು ಸರಿಯಲ್ಲ ಎಂದು ಹೇಳಿ ಡೆಪ್ಯುಟಿ ಕಮೀಷನರು ಸ್ಟೇ ಆರ್ಡರ್ ಕೊಟ್ಟಿದ್ದಾರೆಯೇ ?

ಶ್ರೀ ಟಿ. ಚೆನ್ನಯ್ಯ.—ನೋಟೀಸ್.

ಶ್ರೀ ಎಚ್. ಎಸ್. ತಮ್ಮಯ್ಯ.—ಬಾಕಿ ಇದ್ದವರಿಗೆ ಹರಾಜಿನಲ್ಲಿ ಕೊಡಕೂಡದು ಎಂದು ತಮ್ಮಲ್ಲಿ ಅಪೀಲು ಬಂದಾಗ ಅದನ್ನು ವಜಾ ಮಾಡಿದ್ದೀರಾ ?

ಶ್ರೀ ಟಿ. ಚೆನ್ನಯ್ಯ.—ಇಂಥ ಸಂಬಂಧವಾಗಿ ಎಂದು ಹೇಳಿದರೆ ಉತ್ತರ ಕೊಡಬಹುದು.

ಶ್ರೀ ಎಸ್. ಎಚ್. ತಮ್ಮಯ್ಯ.—ಶ್ರೀ ಎಸ್. ಕೆ. ಜವರೇಗೌಡ ಎಂಬವರ ವಿಚಾರದಲ್ಲಿ.

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಎಚ್. ತಮ್ಮಯ್ಯ.—ಈ ವಿಷಯದಲ್ಲಿ ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಿಯಮಿತ ಸದಸ್ಯರೊಬ್ಬರು ತಮ್ಮ ಪ್ರಭಾವವನ್ನು ಬೀರಿದ್ದಾರೆಯಿಲ್ಲವೇ ?

Mr. SPEAKER.—That question need not be answered.

ಶ್ರೀ ಎಸ್. ಎಚ್. ತಮ್ಮಯ್ಯ.—ಅವರು ಸರ್ಕಾರಕ್ಕೆ ಮೋಸಮಾಡಬೇಕೆಂತಲೋ ಅಥವಾ ಇನ್ನಾವ ಕಾರಣದಿಂದಲೋ ಅವರ ಆಸ್ತಿಪಾಸ್ತಿಗಳನ್ನು ಬೇರೆಯವರಿಗೆ ಬರೆದುಕೊಟ್ಟಿರುತ್ತಾರೆ. ಈಗ ತಾವು ಜಪ್ತಿ ಆಗತಕ್ಕದ್ದು ಎಂದು ಮಾಡಿದರೆ ಯಾವುದು ಸಿಂಧುವಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಅವರು ಬೇರೆಯವರಿಗೆ ಆಧಾರ ಮಾಡಿರತಕ್ಕ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಎಲ್. ಬೋರಣ್ಣಗೌಡ.—ಶ್ರೀ ಶಂಭುಲಿಂಗಪ್ಪ, ಕೆ. ಆರ್. ಎನ್. ಸ್ವಾಮಿ, ಮರೀಗೌಡ ಇವರುಗಳು ಈಗಲೂ ಕಂಟ್ರಾಕ್ಟ್‌ದಾರರಾಗಿದ್ದಾರಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಬಿ. ಎಲ್. ಬೋರಣ್ಣಗೌಡ.—ಇಷ್ಟು ಬಾಕಿ ನಿಂತಿರುವಾಗ ಈ ವರ್ಷ ಮತ್ತೆ ಪುನಃ ಕಂಟ್ರಾಕ್ಟ್ ಹೇಗೆ ಕೊಟ್ಟಿರಿ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಬಾಕಿ ಇರತಕ್ಕವರಿಗೇ ಕೊಟ್ಟರೆ ಅವರು ಅಷ್ಟಿಷ್ಟು ಹಣ ಸಂಪಾದನೆ ಮಾಡಿಕೊಂಡು ಬಾಕಿ ಕೊಡುತ್ತಾರೆ ಎಂಬ ಭರವಸೆಯಿಂದ ಕೊಡುತ್ತಾರೆ.

ಶ್ರೀ ಬಿ. ಎಲ್. ಬೋರಣ್ಣಗೌಡ.—ಈಗ ಈ ಶಂಭುಲಿಂಗಪ್ಪ ಎಂಬವರು 81,736 ಚಿಲ್ಲರೆ ರೂಪಾಯಿ, ಕೆ. ಆರ್. ಎನ್. ಸ್ವಾಮಿ ಎಂಬವರು 20,946 ಚಿಲ್ಲರೆ ರೂಪಾಯಿ, ಎಂ ರುದ್ರಪ್ಪ ಎಂಬವರು 14,603 ಚಿಲ್ಲರೆ ರೂಪಾಯಿ—ಇಷ್ಟು ಹಣ ಬಾಕಿ ಇರುವುದನ್ನು ಕ್ರಮ ಜರುಗಿಸಿ ವಸೂಲು ಮಾಡುವುದಕ್ಕಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಇದನ್ನು ಕೊಡುವಾಗ ಸೆಕ್ಯೂರಿಟಿ ತೆಗೆದುಕೊಂಡೇ ಕೊಡುವುದು.

ಶ್ರೀ ಬಿ. ಎಲ್. ಬೋರಣ್ಣಗೌಡ.—ಹಾಗಾದರೆ ಈ ವರ್ಷ ಕಂಟ್ರಾಕ್ಟ್ ಕೊಡುವಾಗ ಬೇರೆ ಸೆಕ್ಯೂರಿಟಿ ತೆಗೆದುಕೊಂಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ತೆಗೆದುಕೊಂಡಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಎಂ. ವಿ. ಶಂಭುಲಿಂಗಪ್ಪನವರು 80 ಸಾವಿರ ರೂಪಾಯಿ ಕೊಡಬೇಕು ಅದಕ್ಕೆ ಸರಿಯಾದ ಆಸ್ತಿ ಸೆಕ್ಯೂರಿಟಿ ಇದೆಯೇ, ವಿಚಾರ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಈ ಬಾಬುಗಳನ್ನು ಕೊಡುವಾಗ ಆಯಾ ಲೋಕಲ್ ರೆವಿನ್ಯೂ ಅಫೀಸರುಗಳು ಸಾಕಾದಷ್ಟು ಆಸ್ತಿ ಇದ್ದರೆ ಕೊಡುತ್ತಾರೆಯೇ ಹೊರತು ಇಲ್ಲದೇ ಇದ್ದರೆ ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಇದು question of fact Sir. 80 ಸಾವಿರ ರೂಪಾಯಿಗೆ ಸರಿಯಾದಷ್ಟು ಆಸ್ತಿ ಈಗ ಇದೆಯೇ ಎಂದು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಸ್. ಸಿದ್ದಪ್ಪ.—ಕಂಟ್ರಾಕ್ಟ್ ಫಾರಂ ತುಂಬುವಾಗ ಸೆಕ್ಯೂರಿಟಿ ಡಿಪಾಸಿಟ್ ಎರಡು ತಿಂಗಳಿಗೆ ಕೊಟ್ಟಿದ್ದಾರೆಯೋ ನಾಲ್ಕು ತಿಂಗಳಿಗೆ ಕೊಟ್ಟಿದ್ದಾರೆಯೋ ?

ಶ್ರೀ ಟಿ. ಚನ್ನಯ್ಯ.—ಎರಡು ತಿಂಗಳಿಗೆ ಕೊಡಬೇಕೆಂದು ರೂಲ್ ಇದೆ.

Government Ayurvedic and Unani College.

Q.—459. **Sri S. GOPALA GOWDA** (Sagar-Hosanagar).—

Will the Government be pleased to state :—

(*a*) the number of subjects—Ayurvedic, Unani and Allopathic—of the curricula of studies in the Government Ayurvedic and Unani College ;

(*b*) the number of Professors, Assistant Professors and Lecturers to handle them ;

(*c*) whether it is true that each Lecturer in Ayurvedic and Unani is called upon to take 3 or 4 subjects and lecture 3 to 4 hours a day on all working days of the week ;

(*d*) whether it is true that there is inadequacy of staff to teach subjects of modern medicine and that only 3 part-time lecturers have been appointed for the purpose ;

(*e*) whether they have considered the desirability of shifting the College to Bangalore with a view to utilise the clinical material available in Sri Jayachamarajendra Institute of Indian Medicines, Bangalore, for ensuring adequate clinical training to students, if not why ?

A.—**Sri T. CHANNIAH** (Minister for Public Health and Local Self-Government).—

(*a*) *Number of Subjects.*

	I Year	*II Year*	*III Year*	*IV Year*	*Total*
Ayurvedic ..	4	4	5	3	16
Unani ..	4	4	5	4	17
Allopathic ..	2	3	4	7	16
Science ..	3	...	...	...	3

(*b*)

1	Ayurvedic Section	... 6	Lecturers
2	Unani Section	... 5	do
3	Part-time Allopathic Lecturers	... 6	do
4	Part-time Science Lecturers	... 6	do

(*c*) Yes.

(*d*) No. Six part-time Lecturers have been appointed for the purpose.

(*e*) No. It is not necessary.

ಶ್ರೀ ಎಸ್. ಗೋಪಾಲಗೌಡ.—ಆಯುರ್ವೇದ ಸೆಕ್ಷನ್ನಿನ 6 ಜನ ಲೆಕ್ಚರರುಗಳು, ಯುನಾನಿ ಸೆಕ್ಷನ್ನಿನ 5 ಜನರು, ಪಾರ್ಟ್ ಟೈಂ ಅಲೋಪಥಿಕ್ ಮತ್ತು ವಿಜ್ಞಾನ ಶಾಸ್ತ್ರವನ್ನು ಬೋಧಿಸುವ ಲೆಕ್ಚರರುಗಳು ಯಾವಾಗಿನಿಂದ ಕೆಲಸ ಮಾಡುತ್ತಾ ಇದ್ದಾರೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—ಈ ಆಸ್ಪತ್ರೆಯನ್ನು ಬೆಂಗಳೂರಿಗೆ ವರ್ಗಮಾಡುವ ವಿಚಾರದಲ್ಲಿ ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೆ? ಅಥವಾ ಪರಿಶೀಲನೆಮಾಡದೆಯೆ ಅವಶ್ಯಕತೆ ಇಲ್ಲ ಎಂದು ಹೇಳಿಕೆ ಹೇಳಿದ್ದಾರೆಯೆ?

ಶ್ರೀ ಟಿ. ಚನ್ನಯ್ಯ.—ಹಿಂದೆ ಅದನ್ನು ಬೆಂಗಳೂರಿಗೆ ಬದಲಾಯಿಸಬೇಕೆಂಬುದಾಗಿ ಸರ್ಕಾರದ ಉದ್ದೇಶ ಇತ್ತು. ಆದರೆ ಶಾಸನ ಸಭೆಯ ಸದಸ್ಯರು ಮತ್ತು ಮೈಸೂರು ಸಿಟಿಯ ಅನೇಕ ಜನರು ಆ ಕಟ್ಟಡ ಡೊನೇಷನ್ ಮೂಲಕ ಕಟ್ಟಿದ್ದರಿಂದ ಅದು ಅದೇ ಸ್ಥಳದಲ್ಲಿ ಇರಬೇಕು ಮತ್ತು ಅದನ್ನು ಬೆಂಗಳೂರಿಗೆ ಬದಲಾಯಿಸಿದರೆ ಅಲ್ಲಿನ ಜನಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿ ಕೇಳಿಕೊಂಡದ್ದರ ಮೇಲೆ ಆ ಪ್ರಶ್ನೆಯನ್ನು ಸದ್ಯಕ್ಕೆ ಬಿಡಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಕಟ್ಟಡಕ್ಕಾಗಿ 15 ಸಾವಿರ ರೂಪಾಯಿ ಮತ್ತು 5 ಸಾವಿರ ರೂಪಾಯಿ 1928 ಮತ್ತು 1930ನೆಯ ಇಸವಿಗಳಲ್ಲಿ ಸಹಾಯ ನೀಡಿದವರೇನಾದರೂ ತಮ್ಮ ಹೆಸರಿನಲ್ಲೇ ಕಟ್ಟಬೇಕು, ಮೈಸೂರಿನಲ್ಲೇ ಇರಬೇಕು ಎಂದೇನಾದರೂ ಷರತ್ತು ಹಾಕಿದ್ದಾರೆಯೆ?

Mr. SPEAKER.—It does not arise out of this question.

Sri S. GOPALA GOWDA.—Is it not a fact that the facilities available in the College such as rooms for holding classes, dissection room, pharmacy, meeting rooms for students and members of the staff are inadequate?

Sri T. CHANNIAH.—Yes, there are some inconveniences. But, Government are considering how best more facilities can be provided.

Sri S. GOPALA GOWDA.—Is it not a fact that the staff when compared to the number of students is quite inadequate and the knowledge imparted, therefore, is below standard?

Sri T. CHANNIAH.—The question of increasing the strength of the staff is also under the consideration of Government.

Sri S. GOPALA GOWDA.—Have the Government examined the recommendations of the Chopra and Pandit Committees regarding this matter?

Sri T. CHANNIAH.—Yes.

Sri S. GOPALA GOWDA.—What are the recommendations of the Committees Sir?

Sri T. CHANHIAH.—To upgrade the College.

Sri S. GOPALA GOWDA.—Have Government implemented those recommendations, Sir?

Sri T. CHANNIAH.—We have implemented some of their recommendations.

Sri S. GOPALA GOWDA.—What are the recommendations made and which of them Government have partly implemented?

Sri T. CHANNIAH.—Important recommendations relate to increasing the staff, provision of better equipment, and creation of more facilities for clinical training. Government are thinking of increasing the bed strength and to provide better clinical facilities. Government have implemented the recommendation to give clinical facilities in the Krishnarejendra Hospital to students of the Ayurvedic and Unani College.

Sri S. GOPALA GOWDA.—Are Government aware that due to lack of these facilities, the Bombay, Madras and other States have denied due recognition to the qualified diploma holders of this College?

Sri T. CHANNIAH.—Madras Government has recognised our Diploma subject to certain conditions. We are in correspondence with the Bombay Government in this behalf.

ಶ್ರೀ ಎಸ್. ಗೋಪಾಲಗೌಡ.—ಈಗ ಬೆಂಗಳೂರಿನಲ್ಲಿರುವ ಇಂಡಿಯನ್ ಮೆಡಿಸಿನ್ಸ್ ರಿಸರ್ಚ್ ಇನ್ಸ್ಟಿಟ್ಯೂಟನ್ನು ಉಪಯೋಗಿಸಿಕೊಳ್ಳದೆ ಅಲ್ಲಿರತಕ್ಕಂಥ ಅನೇಕ ಬೆಲೆಯುಳ್ಳ ವಸ್ತುಗಳು ಅನುಪಯುಕ್ತವಾಗಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಅಲ್ಲಿ ಕ್ಲಿನಿಕಲ್ ಫೆಸಿಲಿಟೀಸ್ ಮತ್ತು ಬೆಡ್ ಸ್ಟ್ರೆಂಗ್ತ್ ಹೆಚ್ಚಾಗಿರುವುದರಿಂದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದಿತ್ತು. ಆದರೆ ವರ್ಗಾವಣೆಗೆ ಅಡಚಣೆಗಳು ಬಹಳ ಬಂದಿದ್ದರಿಂದ ಆಗಲಿಲ್ಲ. ಈಗ ರಿಸರ್ಚ್ ಕಡೆ ಹೆಚ್ಚು ಗಮನ ಕೊಡಬೇಕೆಂದಿದೆ.

Hospitals Started in Chikmagalur District.

Q.—544. **Sri Y. M. CHANDRASEKHARIAH** (Kadur).—

Will the Government be pleased to state:—

(SRI Y. M. CHANDRASEKHARIAH.)

(*a*) the number of places in Chikmagalur District to which hospitals have been asked for;

(*b*) out of these, the number of hospitals granted during 1954-55 to this district;

(*c*) the hospital already started and those likely to be started?

A.—**Sri T. CHANNIAH** (Minister for Public Health and Local Self-Government).—

(*a*) Four.

(*b*) None so far.

(*c*) Does not arise in view of reply to (*b*).

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಸ್ಪತ್ರೆ ಬೇಕೆಂದು ಕೇಳಿರುವ ನಾಲ್ಕು ಸ್ಥಳಗಳು ಯಾವುವು ?

ಶ್ರೀ ಟಿ. ಚನ್ನಯ್ಯ.—ಶಿವನಿ-ತರೀಕೆರೆ ತಾಲ್ಲೂಕು, ಸೊಲ್ಲಾಪುರ-ತರೀಕೆರೆ ತಾಲ್ಲೂಕು, ಕೃಷ್ಣರಾಜಪೇಟೆ-ಚಿಕ್ಕಮಗಳೂರು ತಾಲ್ಲೂಕು, ಪಂಚನಹಳ್ಳಿ-ಕಡೂರು ತಾಲ್ಲೂಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೊನ್ನೆ ಬಡ್ಜೆಟ್ ಅಧಿವೇಶನದಲ್ಲಿ ಶಿವನಿ ಮತ್ತು ಸೊಲ್ಲಾಪುರ ಗ್ರಾಮಗಳಿಗೆ ಆಸ್ಪತ್ರೆ ಕೊಡುತ್ತೇವೆಂದು ಹೇಳಿರಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಶಿವನಿಗೆ ಕೊಡುವುದಾಗಿ ಭರವಸೆ ಕೊಟ್ಟಿದೆ. ಆದರೆ ಸೊಲ್ಲಾಪುರಕ್ಕೆ ಬೇರೆ ಆಸ್ಪತ್ರೆ ಕೊಡುವುಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ, ಏಕೆಂದರೆ ಅದು ಅಜ್ಜಂಪುರಕ್ಕೆ ಮೂರು ಮೈಲ ದೂರದಲ್ಲಿದೆ. ಅಜ್ಜಂಪುರದಲ್ಲಿ ಹೆಲ್ತ್ ಯೂನಿಟ್ ಇರುವುದರಿಂದ ಸೊಲ್ಲಾಪುರಕ್ಕೆ ಆಸ್ಪತ್ರೆ ಕೊಡಲು ಸಾಧ್ಯವಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸೊಲ್ಲಾಪುರದಲ್ಲಿ ಕಟ್ಟಡ ಕಟ್ಟಿಸಿಕೊಟ್ಟು, ಅದು ದೊಡ್ಡ ಗ್ರಾಮವಾದದ್ದರಿಂದ ಅಲ್ಲಿಗೊಂದು ಆಸ್ಪತ್ರೆ ಕೊಡಬೇಕೆಂದು ಅನೇಕಸಾರಿ ಮನವಿಮಾಡಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಈಗ ಸದ್ಯಕ್ಕೆ ಕೊಡಲು ಸಾಧ್ಯವಿಲ್ಲವೆಂದು ಹೇಳಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬಾಕಿ ಗ್ರಾಮಗಳಲ್ಲಿ ಎಷ್ಟು ದಿವಸಗಳಲ್ಲಿ ಆಸ್ಪತ್ರೆ ಕೊಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಿಂದ ಸರ್ಕಾರಕ್ಕೆ ಪ್ರಪೋಸಲ್ ಬಂದನಂತರ.

ಶ್ರೀ ಟಿ. ಸಿ. ಬಸಪ್ಪ.—ಸೊಲ್ಲಾಪುರದ ಆಸ್ಪತ್ರೆ ಕಟ್ಟಡಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿರುವವರು ಯಾರು ?

ಶ್ರೀ ಟಿ. ಚನ್ನಯ್ಯ.—ಹಿಂದೆ ಮಂತ್ರಿಗಳಾಗಿದ್ದ ಶ್ರೀ ಗುಂಡಪ್ಪಗೌಡರು.

ಶ್ರೀ ಟಿ. ಸಿ. ಬಸಪ್ಪ.—ಆಗ ಭರವಸೆ ಕೊಟ್ಟಮೇಲೆ ತಾನೆ ಅಲ್ಲಿ ಕಟ್ಟಡ ಆಗಿರುವುದು ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಟಿ. ಸಿ. ಬಸಪ್ಪ.—ಅಂದಮೇಲೆ ಹಿಂದಿನ ಸರ್ಕಾರ ಭರವಸೆ ಕೊಟ್ಟಿರುವುದನ್ನು ಈಗಿನ ಸರ್ಕಾರ ಈಡೇರಿಸಬಾರದೆ ?

ಶ್ರೀ ಟಿ. ಚನ್ನಯ್ಯ.—ಅಜ್ಜಂಪುರದಲ್ಲಿ ಹೆಲ್ತ್ ಯೂನಿಟ್ ಸ್ಥಾಪನೆ ಮಾಡದಿದ್ದರೆ ಕೊಡುತ್ತಿದ್ದರು. ಈಗ ಆ ಗ್ರಾಮ ಮೂರು ಮೈಲ ದೂರದಲ್ಲಿ ಹತ್ತಿರವೇ ಇರುವುದರಿಂದ ಕೊಡುವುದಕ್ಕೆ ಸಾಧ್ಯವಿಲ್ಲ.

Mobile Dispensary (irregular touring in the villages of Chintamani).

Q.—559. **Sri M. C. ANJANEYA REDDY** (Chintamani).—

Will the Government be pleased to state:—

(*a*) whether it has come to their notice that the Mobile Dispensary is not touring in the villages of Chintamani every day;

(*b*) the reasons for not touring every day;

(*c*) whether they are aware that it serves a useful purpose to the people in the rural parts in case touring is taken every day;

(*d*) whether it has come to their notice that this inconvenience is caused by the Local Body which having taken the entire responsibility of meeting the expenditure connected with the maintenance of the van has not paid the petrol and other expenditure charges;

(*e*) whether they are aware that this system would work satisfactorily if the Government should take over the charge from the local bodies?

A.—**Sri T. CHANNIAH** (Minister for Public Health and Local Self-Government).—

(*a*) Yes. It is sent on alternate days only.

(*b*) For want of sufficient grants to meet petrol charges.

(*c*) Yes.

(*d*) No.

(*e*) This is a matter of opinion.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ವ್ಯಾನು ಹಳ್ಳಿಗಳಿಗೆ ಹೋಗಿಬರಲು ಪೆಟ್ರೋಲು ಖರ್ಚು ತಿಂಗಳಿಗೆ ಎಷ್ಟಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಅವರು ಯಾವ ಯಾವ ಹಳ್ಳಿಗಳಿಗೆ ಹೋಗುತ್ತಾರೋ ಅದನ್ನು ಅನುಸರಿಸಿ ಖರ್ಚಾಗುತ್ತದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ದಿನಬಿಟ್ಟು ದಿನ ಹೋಗುವುದಕ್ಕೆ ಪೆಟ್ರೋಲಿಗಾಗಿ ತಿಂಗಳೊಂದಕ್ಕೆ ಸುಮಾರು ಎಷ್ಟು ಖರ್ಚು ಬೀಳಬಹುದ ?

ಶ್ರೀ ಟಿ. ಚನ್ನಯ್ಯ.—ಈಗ ನಿಗದಿಮಾಡಿರುವ ಪ್ರಕಾರ ತಿಂಗಳಿಗೆ 125 ರೂಪಾಯಿಗಳಂತೆ ಖರ್ಚು ಮಾಡಬೇಕು; ಅವಶ್ಯವಿದ್ದಲ್ಲಿ 500 ರೂಪಾಯಿಗಳ ವರೆಗೂ ಮಾಡಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ವ್ಯಾನಿನಲ್ಲಿ ಒಬ್ಬ ಡಾಕ್ಟರು, ಒಬ್ಬ ಕಾಂಪೌಂಡರು, ಒಬ್ಬ ಜವಾನ, ಡ್ರೈವರು, ಕ್ಲೀನರು ಇಷ್ಟು ಜನ ಹೋಗುತ್ತಾರಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಸಿಬ್ಬಂದಿಗಾಗಿ ತಿಂಗಳಿಗೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—500 ರೂಪಾಯಿಗಳ ಮೇಲೆ ಆಗಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇಷ್ಟು ಸಿಬ್ಬಂದಿ ಒಂದು ದಿವಸ ಹಳ್ಳಿಕಡೆ ಹೋಗಿ ಇನ್ನೊಂದು ದಿವಸ ಆಸ್ಪತ್ರೆ ಹತ್ತಿರವಿದ್ದರೆ ಹಳ್ಳಿಗೆ ಹೋಗದಿರುವ ದಿನ ಕೊಡುವ ಸಂಬಳ ನಿರರ್ಥಕವಾಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಡಾಕ್ಟರು, ಕಾಂಪೌಂಡರುಗಳು ಮುಂತಾದವರ ಸರ್ವಿಸ್ಸನ್ನು ಟೌನುಗಳಲ್ಲಿ ಉಪಯೋಗಿಸಿಕೊಳ್ಳಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡ್ರೈವರಿಂದ ಟೌನಿನಲ್ಲಿ ಉಪಯೋಗವೇನಿದೆ ?

ಶ್ರೀ ಟಿ. ಚನ್ನಯ್ಯ.—ಏನೂ ಇಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ ತಾಲ್ಲೂಕಾಮಾಳೆ 300 ಹಳ್ಳಿಗಳಮೇಲಿರುವುದರಿಂದ ವಾರಕ್ಕೆ ಮೂರು ದಿವಸ ದಿನಕ್ಕೆ ಮೂರು ಹಳ್ಳಿಯಂತೆ ವ್ಯಾನಿನಲ್ಲಿ ಹೋಗಿ ಔಷಧಿ ಕೊಡುವಾಗ ಎಲ್ಲಾ ಗ್ರಾಮಗಳಿಗೂ ಅನುಕೂಲ ಒದಗಿಸಲು ಸಾಧ್ಯವೇ ?

ಶ್ರೀ ಟಿ. ಚನ್ನಯ್ಯ.—ಈಗಿರುವ ವ್ಯವಸ್ಥೆ ಸಾಕಾಗಿದೆ. ಚಿಂತಾಮಣಿಯಲ್ಲಿರುವ ಅನುಕೂಲತೆ ಬೇರೆ ತಾಲ್ಲೂಕುಗಳಲ್ಲಿ ಇಲ್ಲ. ಅಲ್ಲಿ ದೊಡ್ಡ ಹೆರಿಗೆ ಆಸ್ಪತ್ರೆ ಮತ್ತು ಇತರ ಆಸ್ಪತ್ರೆಗಳಿವೆ, ಮೊಬೈಲ್ ಆಸ್ಪತ್ರೆ ಕೂಡ ಇದೆ. ಬೇರೆ ತಾಲ್ಲೂಕುಗಳಲ್ಲಿ ಅಷ್ಟು ಆಸ್ಪತ್ರೆಗಳಿದ್ದರೆ ಬಹಳವಾಗಿ ಸಂತೋಷಪಡುತ್ತಿದ್ದರು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಚಲಿಸುವ ಆಸ್ಪತ್ರೆ ಉಪಯೋಗ ಹಳ್ಳಿಗಳಿಗೆ ಪೂರ್ಣವಾಗಿ ಆಗುವಂತೆ ಮಾಡಲು ಮತ್ತು ಇದರ ಸಿಬ್ಬಂದಿಗಾಗುವ ಖರ್ಚು ನಿರರ್ಥಕವಾಗದಂತೆ ಮಾಡಲು ಪ್ರತಿದಿನವೂ ವ್ಯಾನು ಹಳ್ಳಿಕಡೆ ಹೋಗುವಂತೆ ಏರ್ಪಾಡು ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇದಕ್ಕಾಗಿ ತಿಂಗಳಿಗೆ ನೂರು ರೂಪಾಯಿ ಪೆಟ್ರೋಲಿಗಾಗಿ ಕೊಡುತ್ತಿದ್ದುದನ್ನು ಈಗ 125 ರೂಪಾಯಿಗಳಿಗೇರಿಸಿ ತಿಂಗಳಿಗೆ 25 ರೂಪಾಯಿ ಹೆಚ್ಚಾಗಿ ಕೊಡಲಾಗುತ್ತಿದೆ.

Land Revenue (distribution to Village Panchayets).

Q.—575. **Sri U. M. MADAPPA** (Chamarajanagar).—

Will the Government be pleased to state :—

(*a*) whether they have sanctioned the grant of 12 1/2 per cent of the land revenue collections to all village panchayets in the State for the years 1953-54 and 1954-55 according to the provisions of section 38 of the Village Panchayets and District Boards Act, 1952;

(*b*) if so, the total amount sanctioned each year (Districtwar information to be given);

(*c*) the land revenue realised from each District;

(*d*) the authority competent to distribute the amount to each Village Panchayet;

(*e*) while distributing, whether each Village Panchayet is being given 12 1/2 per cent of the realisations of land revenue of that village ?

A.—**Sri T. CHANNIAH** (Minister for Public Health and Local Self-Government).—

(*a*) Pending the preparation of final accounts of Land Revenue collections, a sum of Rs. 17,15,000 has been distributed to the Village Panchayets for the period from 14th February 1952 to 31st March 1954. The distribution for 1954-55 is not made yet.

(*b*) Statement appended below.

(*c*) Statement appended below.

(*d*) The Commissioner for Local Self-Government in Mysore.

(*e*) This is not necessary according to the provisions of Section 38 of the Village Panchayets and District Boards Act. A larger amount is given to Village Panchayets which undertake development works in the village and contribute some amount themselves The priorities are determined by the Commissioner for Local Self-Government.

(SRI T. CHANNIAH.)

	District		Amount distributed out of Land Revenue assignments	Land Revenue collected on average
			Rs.	Rs.
1	Bangalore	... ...	2,22,500	21,70,205
2	Kolar	... ...	2,40,000	13,11,335
3	Tumkur	... ...	2,75,000	16,15,072
4	Mysore	... ...	1,48,000	20,17,507
5	Mandya	... ...	1,23,000	11,31,705
6	Hassan	... ...	1,80,000	16,87,392
7	Shimoga	... ...	1,50,000	16,29,360
8	Chickmagalur	... ...	1,56,500	13,62,469
9	Chitaldrug	... ...	2,20,000	11,38,624
			17,15,000	1,40,63,669

12-30 P. M.

ಶ್ರೀ ಯು. ಎಂ. ಮಾದಪ್ಪ.—ಗ್ರಾಮಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟ್ 38ನೆಯ ಸೆಕ್ಷನ್ನಲ್ಲಿ ನಮೂದಾಗಿರುವಂತೆ ಈ ಹಂಚಿಕೆ ಆಗದೆ ಇರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಹಂಚಿಕೆಯಾದರೆ ಪ್ರತಿಯೊಂದು ಗ್ರಾಮಕ್ಕೂ ಇಷ್ಟಿಷ್ಟು ಎಂದು ಹರಿದು ಹಂಚಿಹೋಗಿ ಕೊನೆಗೆ ಯಾವ ಒಂದು ಗ್ರಾಮಕ್ಕೂ ಸಹ ಅಭಿವೃದ್ಧಿಕಾರ್ಯಕ್ಕೆ ಬೇಕಾಗುವಷ್ಟು ಹಣ ದೊರೆಯುವುದಿಲ್ಲ. ಆದುದರಿಂದ ಅವಶ್ಯಕತೆ ನೋಡಿಕೊಂಡು ಯುಕ್ತರೀತಿಯಲ್ಲಿ ಹಣವನ್ನೊದಗಿಸುತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಈ ಆಕ್ಟನ್ನು ಜಾರಿಗೆತಂದುದರ ಉದ್ದೇಶವೇನು?

ಶ್ರೀ ಟಿ. ಚನ್ನಯ್ಯ.—ಈ ಆಕ್ಟ್‌ನಿಂದ ಜನರಿಗೆ ಹೆಚ್ಚಿನ ಪ್ರಯೋಜನವಾಗಲಿ ಎಂಬ ಉದ್ದೇಶದಿಂದ ಇದನ್ನು ಜಾರಿಗೆತಂದಿದೆ; ಅಂದಮಾತ್ರಕ್ಕೆ ಒಂದೇಸಾರಿ ಸರ್ಕಾರದವರು ಒದಗಿಸುವ ಹಣದಿಂದ ಎಲ್ಲಾ ಕೆಲಸಗಳೂ ಆಗುವುದಕ್ಕೆ ಸಾಧ್ಯವಿಲ್ಲ. ಈ ವರ್ಷ ಕೆಲವು ಗ್ರಾಮಗಳಲ್ಲಿ ಮುಂದಿನ ವರ್ಷ ಇನ್ನು ಕೆಲವು ಗ್ರಾಮಗಳಲ್ಲಿ ಅಭಿವೃದ್ಧಿಕಾರ್ಯವನ್ನು ನಡೆಸಿಕೊಂಡು ಹೋದರೆ ಈ ಕೆಲಸ ಸಾಧ್ಯವಾದೀತು.

ಶ್ರೀ ಯು. ಎಂ. ಮಾದಪ್ಪ.—ಈ ಬಗ್ಗೆ ತಾವು ಒದಗಿಸುವ ಹಣದ ಹಂಚಿಕೆಯನ್ನು ತೀರ್ಮಾನ ಮಾಡುವ ಅಧಿಕಾರಿಗಳಾರು ?

ಶ್ರೀ ಟಿ. ಚನ್ನಯ್ಯ.—ಆಯಾ ಜಿಲ್ಲಾಧಿಕಾರಿಗಳ ಶಿಫಾರ್ಸಿನ ಮೇಲೆ ಎಲ್.ಎಸ್.ಜಿ. ಕಮೀಷನರ್ ಅದನ್ನು ಇದನ್ನು ತೀರ್ಮಾನಿಸುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಡೆಪ್ಯುಟಿ ಕಮೀಷನರ್ ಯಾರಿಗೆ ಶಿಫಾರ್ಸುಮಾಡುತ್ತಾರೋ ಅವರಿಗೆ ಸಿಕ್ಕುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—ಹಾಗಲ್ಲ; ಅವರ ಮೇಲೆ ಅದನ್ನು ತನಿಖೆ ಮಾಡಿ ತೀರ್ಮಾನಿಸುವ ಅಧಿಕಾರ ಎಲ್. ಎಸ್. ಜಿ. ಕಮೀಷನರಿಗಿದೆ.

ಶ್ರೀ ಬಿ. ರಾಚಯ್ಯ.—ಎಲ್.ಎಸ್.ಜಿ. ಕಮೀಷನರ್ ಡಿಸ್ಟ್ರಿಕ್ಟಿಗೆ ಹಂಚಿಕೆಮಾಡಿರುವ ಹಣವನ್ನು ಪೂರ್ತಿಯಾಗಿ ಕೊಡಲು ಸರ್ಕಾರದಲ್ಲಿ ಹಣದ ಅಭಾವದಿಂದ ಸಾಧ್ಯವಿಲ್ಲವೆಂದು ತಿಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ರಾಚಯ್ಯ.—ಮೈಸೂರು ಡಿಸ್ಟ್ರಿಕ್ಟಿಗಾಗಿ 75 ಸಾವಿರ ರೂಪಾಯಿ ಹಂಚಿಕೆಯಾಗಿ ಆ ಪೈಕಿ 50 ಸಾವಿರ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡಿರುವುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ರಾಚಯ್ಯ.—ಹಾಗಿದ್ದರೆ ಅಲ್ಲಿಗೆ ಹಂಚಿಕೆಯಾಗಿರುವ ಹಣವನ್ನು ಪೂರ್ತಿಯಾಗಿ ಖರ್ಚುಮಾಡುವಂತೆ instruction ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ವಿಚಾರಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ.—ಕಡ್ಡಾಯವಾಗಿ ಶೇಕಡ 12½ಯಷ್ಟು ಲ್ಯಾಂಡ್ ರೆವೆನ್ಯೂ ಕಲೆಕ್ಷನ್ನನ್ನು ಗ್ರಾಮಪಂಚಾಯಿತಿಗಳಿಗೆ ಕೊಡಬೇಕೆಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇದೆ.

ಶ್ರೀ ಟಿ. ಸಿ. ಬಸಪ್ಪ.—ಹಾಗಾದರೆ ಇದಕ್ಕೆ ವಿರುದ್ಧವಾಗಿ ವರ್ತಿಸುವುದು ಸರಿಯೇ ?

ಶ್ರೀ ಟಿ. ಚನ್ನಯ್ಯ.—ಹಾಗಲ್ಲ ; ಆವಶ್ಯಕತೆ ನೋಡಿಕೊಂಡು ಈ ಹಂಚಿಕೆಯನ್ನು ಯುಕ್ತರೀತಿಯಲ್ಲಿ ಉಪಯೋಗಿಸಿಕೊಳ್ಳುವುದರಿಂದ ಪ್ರಯೋಜನ ಲಭಿಸಲಿ ಎಂಬ ದೃಷ್ಟಿಯಿಂದ ಹೀಗೆ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಇದರ ಪ್ರಕಾರ ಲೆಕ್ಕಾಚಾರ ಹಾಕಿದರೆ ನಮ್ಮ ಜಿಲ್ಲೆಯಲ್ಲಿ 30 ಲಕ್ಷ ರೂಪಾಯಿಗಳ ಹಂಚಿಕೆಯಾಗಬೇಕಾಗಿತ್ತು. ಹಾಗಿಲ್ಲದೆ ಬಡ್ಜೆಟ್‌ನಲ್ಲಿ ಬಹಳ ಕಡಮೆ ಒದಗಿಸಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಈ ಬಗ್ಗೆ final accounts ಅಕೌಂಟೆಂಟ್ ಜನರಲ್ ಅವರಿಂದ ಬರದೇ ಏನೂ ಹೇಳುವ ಹಾಗಿಲ್ಲ.

Village Panchayet Elections.

Q.—609. **Sri B. HUTCHE GOWDA** (Turuvekere).—

Will the Government be pleased to state:—

(*a*) when the election of the present members of the village panchayets was held;

(*b*) when the Government have arranged to hold these elections;

(*c*) whether Government have framed suitable election rules for the conduct of these elections; if so, whether a copy of it will be placed on the table for reference;

(*d*) the Act according to which the proposed election would be held?

A.—**Sri T. CHANNIAH** (Minister for Public Health and Local Self-Government).—

(*a*) On different occasions prior to 1951 as and when the elections fell due.

(*b*) During the current year, between January and March 1955.

(*c*) Yes. A copy of the Mysore Village Panchayet Election Rules, 1954, is placed on the table of the House.

(*d*) The Mysore Village Panchayets and District Boards Act, 1952 (Mysore Act IV of 1952).

ಶ್ರೀ ಬಿ. ಹುಚ್ಚೇಗೌಡ.—1942ರಲ್ಲಿ ಸಾರ್ವತ್ರಿಕ ಚುನಾವಣೆಯಾದನಂತರ ಹೊಸ ಚುನಾವಣೆ ನಡೆದಿಲ್ಲ, ಅಲ್ಲವೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈಗ್ಗೆ ಎಂಟು ವರ್ಷಗಳಿಂದೀಚೆಗೆ ಎರಡು ಮೂರು ಸಾರಿ ಚುನಾವಣೆ ನಡೆಸುತ್ತೇವೆ ಎಂದು ಭರವಸೆ ಕೊಟ್ಟಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಬರುವ ಜನವರಿ-ಮಾರ್ಚಿಯಲ್ಲಿ ಚುನಾವಣೆ ನಡೆಸುತ್ತೀರಾ?

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆಯ ಮುಂದೆ ಸರ್ಕಾರದವರು ಮಂಡಿಸತಕ್ಕಂಥ ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ವಿದ್ಯುಚ್ಛಕ್ತಿಯನ್ನು ಒದಗಿಸುವಾಗ ಸರ್ಕಾರದವರು ಯಾವ ಒಂದು ಗೊತ್ತಾದ ನಿಯಮಾವಳಿಯನ್ನೂ ಅನುಸರಿಸುತ್ತಿಲ್ಲ. ಏಕೆಂದರೆ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 1936ನೇ ಇಸವಿಯಿಂದಲೂ ಸೋಮನಹಳ್ಳಿ ಸರ್ಕಲ್ಲಿಗೆ ದೀಪಗಳಿಗಾಗಿಯೂ ಮತ್ತು ನೀರಾವರಿ ಪಂಪಗಳಿಗೂ ಸಹ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಅನೇಕ ರೂಪಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಸಾಧಾರಣವಾಗಿ ಮೂರು ವರ್ಷಗಳಿಂದಲೂ ಸರ್ಕಾರದ ಮುಂದೆ ಈ ಒಂದು ಅರಿಕೆಯನ್ನು ನಾವೂ ಕೂಡ ಮಾಡುತ್ತಾ ಬಂದಿದ್ದೇವೆ. ಸಂಸ್ಥಾನದ ನಾನಾ ಭಾಗಗಳಲ್ಲಿ ವಿದ್ಯುಚ್ಛಕ್ತಿಯನ್ನು ಸರ್ಕಾರದವರು ಒದಗಿಸುತ್ತಿದ್ದರೂ ಈ ಕ್ಷೇತ್ರಕ್ಕೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಡುವುದಾದರೆ ಪರ್ಸೆಂಟೇಜ್ ಕಡಮೆ ಬೀಳುತ್ತದೆ, ರಿಟರ್ನ್ ಕಡಮೆ ಬರುತ್ತದೆ, ಟೆಕ್ನಿಕಲ್ ಅಬ್ಜೆಕ್ಷನ್ ಇದೆ ಎಂದು ಹೇಳಿ ಅನೇಕ ಕುಂಟುನೆಪ ಹೇಳಿಕೊಂಡು ಬರುತ್ತಾ ಇದ್ದಾರೆ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಈ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಸುಮಾರು 20 ಗ್ರಾಮಗಳು ಬಹಳ ಹಿಂದುಳಿದು ಕೇವಲ ಒಂದು ದ್ವೀಪದೋಪಾದಿಯಲ್ಲಿ ಇವೆ. ಈ ಭಾಗಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಹೇಳಿ ಕೇಳುತ್ತಾ ಇದ್ದರೂ ಸಹ ಸರ್ಕಾರದವರು ಏಕೆ ಈ ಕಡೆಗೆ ಗಮನ ಕೊಡುತ್ತಿಲ್ಲವೋ ಗೊತ್ತಿಲ್ಲ. ಕಾನ್‌ಕಾನ್‌ಹಳ್ಳಿಯಲ್ಲಿ ಒಂದು ಎಲೆಕ್ಟ್ರಿಕ್ ಸ್ಟೇಷನ್ ಇದೆ. ಕೆ.ಜಿ.ಎಫ್.ನಲ್ಲಿ ಒಂದು ಎಲೆಕ್ಟ್ರಿಕ್ ಸ್ಟೇಷನ್ ಇದೆ. ಎಲೆಕ್ಟ್ರಿಕ್ ಕರೆಂಟು ಈ ಹಳ್ಳಿಗಳ ಮುಖೇನ ಅಲ್ಲಿಗೆ ಒದಗಿಸಲ್ಪಡುತ್ತಾ ಇದೆ. ಅಷ್ಟಾದರೂ ಸಹ ಈ ಕ್ಷೇತ್ರಕ್ಕೆ ವಿದ್ಯುಚ್ಛಕ್ತಿ ಕೊಡಲು ಸರ್ಕಾರದವರಿಗೆ ಯಾವ ರೀತಿ ನಷ್ಟವಾಗುತ್ತದೆ ಎಂಬುದನ್ನು ನಮಗೆ ತಿಳಿಸಿಲ್ಲ, ಮತ್ತು ಯಾವ ರೀತಿ work out ಆಗುತ್ತದೆ, ಎಲ್ಲಿ ರಿಟರ್ನ್ ಕಡಮೆ ಬರುತ್ತದೆ ಎಂಬುದನ್ನೂ ಸಹ ನಮಗೆ ಮನವರಿಕೆ ಮಾಡಿಲ್ಲ.

ಈ ಕ್ಷೇತ್ರದಲ್ಲಿರುವ ಜನರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಸರ್ಕಾರ ಇದುವರೆಗೆ ಮನಸ್ಸು ಮಾಡದಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಸರ್ಕಾರದವರು ಈ ಕಡೆ ತಮ್ಮ ಗಮನವನ್ನು ಕೊಟ್ಟು ಈ ಕೆಲಸವನ್ನು ಕಾರ್ಯಗತ ಮಾಡುತ್ತಾರೆಂದು ಭಾವಿಸಿದ್ದೇನೆ.

ಇದೇ ರೀತಿ ನಾಲೆಗಳು ಮತ್ತು ನಾಲೆಗಳನ್ನು ದುರಸ್ತು ಮಾಡುವ ವಿಚಾರವನ್ನು ಗಮನಿಸಬೇಕಾಗಿದೆ. ವರ್ತೂರು ಕೆರೆ ಕೋಡಿ ಬಿದ್ದು ಸುಮಾರು ನೂರು ಜನ ರೈತರಿಗೆ ವಿಪರೀತ ನಷ್ಟವಾಗಿದೆ. ಸುಮಾರು 50-60 ಸಾವಿರ ರೂಪಾಯಿಗಳವರೆಗೆ ನಷ್ಟವಾಗಿ ಅಧಿಕಾರಿಗಳು ಬಂದು ತನಿಖೆ ಮಾಡಿ ಕೆರೆ, ನಾಲೆ ಮತ್ತು ಕೋಡಿ ರಿಪೇರಿ ಮಾಡಿಸುತ್ತೇವೆಂದು ಭರವಸೆ ಕೊಟ್ಟರು. ಆದರೆ ಆ ಬಗ್ಗೆ ಇದುವರೆಗೆ ಯಾವ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಸುಮಾರು ಒಂದೂವರೆ ವರ್ಷದಿಂದ ರಿಪೇರಿ ಮಾಡದೆ ಮಳೆಗಾಲದಲ್ಲಿ ಕೆರೆ ಹಿಂದೆ ಗದ್ದೆ ತೋಟ ಮುಂತಾದುವುಗಳಲ್ಲಿರುವ ಫಸಲು ಹಾಳಾಗುತ್ತಿದೆ. ರೈತರಿಗೆ ವಿಪರೀತ ತೊಂದರೆಯಾಗುತ್ತಿದೆ. ಈ ರೀತಿಯಾಗಿ ತೊಂದರೆಯಾಗುತ್ತಿರುವ ವಿಚಾರವನ್ನು ಸರ್ಕಾರಕ್ಕೆ ಅರ್ಜಿಯ ಮುಖಾಂತರವೂ ಮತ್ತು ವೈಯಕ್ತಿಕವಾಗಿಯೂ ಅರಿಕೆ ಮಾಡಿಕೊಂಡರೂ ಸಹ ಆ ಕಡೆ ಸರಿಯಾಗಿ ಗಮನ ಕೊಟ್ಟಿಲ್ಲ.

ಕೆಂಗೇರಿ ಹೋಬಳಿ ಕುಂಬಳಗೋಡು ಬಳಿ ವೃಷಭಾವತಿ ನದಿ ಹರಿಯುತ್ತದೆ. ಇತ್ತೀಚೆಗೆ ಬೆಂಗಳೂರು ಕಾರ್ಪೊರೇಷನ್ನವರು ಕೆಂಪಾಂಬುಧಿ ಕೆರೆ ಒಡೆದ ಮೇಲೆ ಕೊಚ್ಚೆ ನೀರೆಲ್ಲಾ ವೃಷಭಾವತಿ ನದಿಗೆ ಹೋಗುತ್ತಿದೆ. ಕುಂಬಳಗೋಡು ಹತ್ತಿರ ವೃಷಭಾವತಿ ನದಿಯ ದಕ್ಷಿಣ ಭಾಗದಲ್ಲಿ ಸೇತುವೆಯಿಲ್ಲದೆ ಮಳೆಗಾಲದಲ್ಲಿ ಆ ನದಿ ಕೊಚ್ಚೆಯ ನೀರಿನಿಂದ ತುಂಬಿ

(ಶ್ರೀ ಬಿ. ಟಿ. ಕೆಂಪರಾಜ್.)

ಸುಮಾರು 30 ಹಳ್ಳಿಗಳ ಜನರು ಹೋಗಿಬರಲು ತಡೆಗಟ್ಟುತ್ತದೆ. ಆದ್ದರಿಂದ ಅಲ್ಲಿ ಒಂದು ಸೇತುವೆ ಕಟ್ಟಿಸಬೇಕೆಂದು ಸುಮಾರು 20—25 ವರ್ಷಗಳಿಂದಲೂ ಆ ಹಳ್ಳಿಗಳವರು ಸರ್ಕಾರಕ್ಕೆ ಅಹವಾಲು ಮಾಡಿಕೊಳ್ಳುತ್ತಾ ಬಂದಿದ್ದಾರೆ. ಆದರೂ ಸಹ ಸರ್ಕಾರ ಆ ಕಡೆ ನಿಗಾ ಕೊಟ್ಟಿಲ್ಲ. ಒಂದು ಪಕ್ಷ ಕಾಸ್‌ವೇಯನ್ನಾದರೂ ಅಲ್ಲಿ ಮಾಡಿಕೊಡದಿರುವುದು ತುಂಬ ಅನಾನುಕೂಲವಾಗಿದೆ. ಆದ್ದರಿಂದ ಈಗಲಾದರೂ ಸರ್ಕಾರದವರು ಅಲ್ಲಿ ಒಂದು ಕಾಸ್‌ವೇ ಅಥವಾ ಸೇತುವೆ ನಿರ್ಮಿಸಿ ಜನರಿಗಿರುವ ತೊಂದರೆಯನ್ನು ನಿವಾರಿಸಬೇಕೆಂದು ಈ ಮೂಲಕ ಕೋರುತ್ತೇನೆ.

ಇನ್ನು ರೂರಲ್ ಡೆವಲಪ್‌ಮೆಂಟ್ ವಿಚಾರ. ಹಳ್ಳಿಯ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಯಥೇಚ್ಛವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಆ ರೀತಿ ಹಣ ಖರ್ಚು ಮಾಡುವಾಗ ಯಾವುದಾದರೂ ಒಂದು ಮಾರ್ಗವನ್ನನುಸರಿಸಿ ಖರ್ಚುಮಾಡುವುದು ಅತ್ಯಾವಶ್ಯಕ. ಈಗ ಪಂಚಾಯಿತಿಯ ಹಣ ಮತ್ತು ಸರ್ಕಾರದ ಹಣ ಎರಡನ್ನೂ ಸೇರಿಸಿ ಹಳ್ಳಿಗಳ ಅಭಿವೃದ್ಧಿ ಮಾಡಬೇಕೆಂಬ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುತ್ತಿರುವುದರಿಂದ ಅನೇಕ ಹಳ್ಳಿಗಳಲ್ಲಿ ಕೆಲಸಗಳು ಪೂರ್ತಿಯಾಗದೆ ಅರ್ಧಂಬರ್ಧವಾಗುವ ಪರಿಸ್ಥಿತಿಯುಂಟಾಗಿದೆ. ಕೆಲಸವನ್ನು ಮೊದಲು ಮಾಡುವಾಗ ಸರ್ಕಾರ ಮತ್ತು ಪಂಚಾಯಿತಿ ಹುಮ್ಮಸ್ಸಿನಿಂದ ಯೋಜನೆಯನ್ನು ಹಾಕಿ ಕೆಲಸ ಪ್ರಾರಂಭಿಸಿದರೂ ಅದನ್ನು ಪೂರ್ಣ ಮಾಡಬೇಕೆಂಬ ಉತ್ಸಾಹ ಕೈಬಿಟ್ಟು ಹೋಗುತ್ತಿರುವುದರಿಂದ ಬಹಳ ದುಸ್ತರವಾದ ಪರಿಸ್ಥಿತಿಯುಂಟಾಗುತ್ತಿದೆ. ಆದ್ದರಿಂದ ಸರ್ಕಾರ ಹಣ ಒದಗಿಸುವಾಗ ಎಷ್ಟು ಸಾಧ್ಯವೋ ಅಷ್ಟು ಯೋಜನೆಗಳನ್ನು ಹಾಕಿ ಕೆಲಸ ಮಾಡತಕ್ಕದ್ದು ಸೂಕ್ತ. ಹಾಗೆ ಮಾಡದೆ ಅರ್ಧ ಕೆಲಸ ಮಾಡಿ ಇನ್ನರ್ಧಕ್ಕೆ ಹಣವಿಲ್ಲವೆಂದು ಹೇಳಿ ಸುಮ್ಮನೆ ಬಿಡುವುದರಿಂದ ಉಳಿದ ಕೆಲಸ ಪೂರ್ತಿಯಾಗಬೇಕಾದರೆ ಹತ್ತಾರು ವರ್ಷಗಳಾಗುವುದೂ ಅಲ್ಲದೆ ಮಾಡಿರುವ ಅರ್ಧ ಕೆಲಸ ಕೂಡ ಕೆಟ್ಟು ಹೋಗುವ ಪರಿಸ್ಥಿತಿಯೊದಗುತ್ತದೆ. ಆದ್ದರಿಂದ ಸರ್ಕಾರದವರು ಎಷ್ಟು ಹಣ ಒದಗಿಸುವುದಕ್ಕೆ ಸಾಧ್ಯವೋ ಅಷ್ಟು ಯೋಜನೆಗಳನ್ನು ಹಾಕಿ, ಮಾಡಿದ ಕೆಲಸ ಕೆಡದಂತೆ, ಪುನಃ ಪುನಃ ರಿಪೇರಿ ಮಾಡಬೇಕಾದ ಪ್ರಮೇಯ ಬಾರದಂತೆ ಮಾಡುವುದು ಸೂಕ್ತವೆಂದು ಕಾಣುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಇನ್ನೊಂದು ವಿಚಾರ ತಿಳಿಸಬೇಕಾಗಿದೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಆ ಸಂಬಂಧವಾಗಿ ಮಾತನಾಡಿದ್ದಾರೆ. ನಾನೂ ಅದನ್ನು ಹೇಳಿದರೆ ಪುನರುಕ್ತಿಯಾಗಬಹುದು. ಆದರೂ ಸಹ ವಿಧಿಯಿಲ್ಲದೆ ಹೇಳಬೇಕಾಗಿದೆ. ಸರ್ಕಾರದವರು ಅನೇಕ ವರ್ಷಗಳಿಂದ ನಿಮ್ನವರ್ಗದವರ ಅಭಿವೃದ್ಧಿಗಾಗಿ ಮಾಡುತ್ತಿರುವ ಸಹಾಯಕ್ಕೆ ಸಂಬಂಧಪಟ್ಟುದು ಆ ವಿಚಾರ. ಸರ್ಕಾರದ ಉದ್ದೇಶ ಬಹಳ ಗುರುತರವಾದುದು ಮತ್ತು ಜವಾಬ್ದಾರಿಯುತವಾದುದು ಎಂದು ನಾನೂ ಸಹ ಮನವರಿಕೆ ಮಾಡಿಕೊಂಡಿದ್ದೇನೆ. ಸರ್ಕಾರದವರು ಹರಿಜನರ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕೆಂದು ರಾಜ್ಯಾಂಗದಲ್ಲಿ ನಮೂದಾಗಿದೆ. ಹಾಗೆ ನಮೂದಾಗುವುದಕ್ಕಿಂತ ಹಿಂದಿನಿಂದಲೂ ಮೈಸೂರು ಸರ್ಕಾರದವರು ಹೆಚ್ಚಿನ ಒಂದು ದೂರದೃಷ್ಟಿಯನ್ನಿಟ್ಟುಕೊಂಡು ಈ ಜನಾಂಗದ ಅಭಿವೃದ್ಧಿಗೆ ಸಹಾಯವನ್ನು ಮಾಡುತ್ತಾ ಬಂದಿದ್ದಾರೆ. ತನ್ಮೂಲಕ ಈ ದಿನ ನಮ್ಮಲ್ಲಿ ಕೆಲವರು ಈ ಸಭೆಯ ಮುಂದೆ ನಿಂತು ಅಹವಾಲುಗಳನ್ನು ಸರ್ಕಾರದ ಮುಂದೆ ಹಾಗೂ ದೇಶದ ಮುಂದೆ ಇಡಲು ಶಕ್ತರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಈ ಸಂದರ್ಭದಲ್ಲಿ ಒಂದು ಮುಖ್ಯ ವಿಚಾರವನ್ನು ಪ್ರತಿಯೊಬ್ಬರೂ ಯೋಚನೆ ಮಾಡಬೇಕಾಗಿದೆ. ಈ ಮಾನ್ಯ ಸಭೆಯಲ್ಲಿರುವ ಚುನಾಯಿತರಾಗಿ ಬಂದಿರುವ ಸದಸ್ಯರು, ಮೀಸಲು ಕ್ಷೇತ್ರದಿಂದ ನಿಮ್ನವರ್ಗದ ಪರವಾಗಿ ಬಂದಿರುವ ಸದಸ್ಯರು ಎಲ್ಲರಿಗೂ ಈ ದಿವಸ ವಿಶೇಷ ಜವಾಬ್ದಾರಿಯಿದೆಯೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಪ್ರತಿಯೊಬ್ಬ ವಯಸ್ಕನೂ ಪ್ರಜಾಪ್ರಭುತ್ವದ ನಿಯಮದ ಪ್ರಕಾರವಾಗಿ ಮತದಾನ ನೀಡಿರುವಾಗ ದೇಶದಲ್ಲಿ ಬಹಳ ಪ್ರಾಮುಖ್ಯವಾಗಿರುವ ಅಸ್ಪೃಶ್ಯತಾ ವಿಚಾರವನ್ನು ಮನದಟ್ಟು ಮಾಡಿಕೊಳ್ಳದೇಹೋದರೆ ಅದಕ್ಕಿಂತಲೂ ಬಹಳ ವ್ಯಸನಕರವಾದ ಪ್ರಸಂಗ ಮತ್ತೊಂದಿಲ್ಲ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಏಕೆಂದರೆ ಓಟು ಕೊಟ್ಟಿರುವವರು ಅಸ್ಪೃಶ್ಯರಿಗೇ ಅಲ್ಲದೆ, ಮೀಸಲು ಸ್ಥಾನಗಳಲ್ಲಿ ಚುನಾವಣೆಗೆ ನಿಂತಿದ್ದ ನಿಮ್ನವರ್ಗದ ಉಮೇದುವಾರರಿಗೇ ಅಲ್ಲದೆ ಇತರರಿಗೂ ಸಹಾಯ ಮಾಡಿದ್ದಾರೆ ; ನಿಮ್ನವರ್ಗದವರು ಇತರ ಪಂಗಡಗಳವರಿಗೂ ಓಟು ಕೊಟ್ಟಿದ್ದಾರೆ. ಹಾಗಿರುವಾಗ ಯಾವುದಾದರೂ ನಿಮ್ನವರ್ಗದವರಿಗೆ ಸಬಂಧಪಟ್ಟ ಪ್ರಶ್ನೆ ಬಂದಾಗ ಮೀಸಲು ಕ್ಷೇತ್ರಗಳಿಂದ ಚುನಾಯಿತರಾಗಿ ಬಂದಿರುವ ಸದಸ್ಯರು ಮಾತ್ರ ಪ್ರಶ್ನೆ ಹಾಕುವ ಪರಿಸ್ಥಿತಿ ಉದ್ಭವಿಸಿರುವುದು ಬಹಳ ವ್ಯಸನವನ್ನುಂಟು ಮಾಡಿದೆ. ನಮ್ಮ ಜವಾಬ್ದಾರಿ ಎಷ್ಟುಮಟ್ಟಿಗಿದೆಯೋ ಅಷ್ಟೇ ಮಟ್ಟಿಗೆ ಇತರರ ಜವಾಬ್ದಾರಿಯೂ ಇದರಲ್ಲಿ ಅಡಕವಾಗಿದೆ ಎಂಬುದನ್ನು ನಾನು ಒತ್ತಿ ಹೇಳಬೇಕಾದ್ದು ಅನಾವಶ್ಯಕ. ಶರೀರದಲ್ಲಿ ರೋಗವಿರುವಾಗ ಅಂಗಗಳು ಅಥವಾ ಅವಯವಗಳು ಯಾವ ರೀತಿಯಲ್ಲಿ ತಮ್ಮ ತಮ್ಮ ಕರ್ತವ್ಯವನ್ನು ಸರಿಯಾಗಿ ಹೇಗೆ ನಿರ್ವಹಿಸಲಾರವೋ ಅದೇ ರೀತಿಯಲ್ಲಿ ಅಸ್ಪೃಶ್ಯತೆಯೆಂಬ ರೋಗವಿರುವವರೆಗೆ ಏನು ಮಾಡಿದರೂ ಯಶಸ್ವಿಯಾಗುವುದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಎಲ್ಲರಿಗಿಂತ ಹಿಂದುಳಿದಿರತಕ್ಕಂಥ ಈ ಒಂದು ಜಾತಿಯ ಪ್ರಶ್ನೆ ಬಹಳ ಮುಖ್ಯವಾದುದು. ಕಾನೂನು ಬದ್ಧವಾಗಿ ರಾಜ್ಯಾಂಗದ ಪ್ರಕಾರ ದತ್ತವಾಗಿರುವ ಹಕ್ಕಿಗನುಸಾರವಾಗಿ ಅದರ ಪರಿಮಿತಿಯಲ್ಲಿ ಸಾಧ್ಯವಾದಷ್ಟು ಮುಖ್ಯವಾದ ಯೋಜನೆಗಳನ್ನು ಹಾಕಿಕೊಂಡು ಈ ಜಾತಿಯ ಜನರ ಅಭಿವೃದ್ಧಿಗೆ ತಕ್ಕ ಕೆಲಸ ಮಾಡಬೇಕೆಂದು ನಮ್ಮ ಅರಿಕೆಯನ್ನಿಡುತ್ತಿದ್ದೇನೆ. ಹೀಗಿಡುವುದು ಮೀಸಲು ಕ್ಷೇತ್ರಗಳಿಂದ ಚುನಾಯಿತರಾಗಿ ಬಂದಿರುವ ನಮ್ಮ ಜವಾಬ್ದಾರಿ. ಸರ್ಕಾರದವರು ಈ ಸಾರಿ 25 ಲಕ್ಷ ರೂಪಾಯಿಗಳನ್ನು ಖರ್ಚಿಗಾಗಿ ಒದಗಿಸಿ ಈ ಜನರ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಯೋಜನೆಯನ್ನಿಟ್ಟುಕೊಂಡಿದ್ದರು. ಈ ಹಣವನ್ನು ಜಿಲ್ಲಾವಾರು ಹಂಚಿ ಹೆಂಚುಗಳು, ನಿವೇಶನ, ಮನೆ ಮುಂತಾದವನ್ನು ಈ ಜನರಿಗೆ ಕೊಡಲು ಏರ್ಪಾಡು ಮಾಡಿದ್ದಾರೆ. ಈ ಕೆಲಸದಿಂದ ಈ ಜನರ ಅಭಿವೃದ್ಧಿಯಾಗಲು ಸಾಧ್ಯವಿದೆಯೆಂಬ ಮನೋಭಾವ ಸರ್ಕಾರಕ್ಕಿರುವಹಾಗೆ ನಾನು ಭಾವಿಸಿಕೊಂಡಿದ್ದೇನೆ. ಸರ್ಕಾರದ ಮುಂದೆ ಯಾವುದೂ ಗೊತ್ತಾದ ಗುರಿಯಿರತಕ್ಕಂಥ ಯೋಜನೆಯಿಲ್ಲ. ಕೆಲಸಕಾರ್ಯ ಕೊಡುವ ವಿಚಾರ ನೋಡಿದರೆ ಶೇಕಡ $16\frac{2}{3}$ರಷ್ಟು ಕೆಲಸಗಳನ್ನು ಮೀಸಲಾಗಿಡಬೇಕೆಂಬ ನಿರ್ಣಯವನ್ನು ಈ ಸಭೆ ಅಂಗೀಕಾರ ಮಾಡಿದೆ ;

ಸರ್ಕಾರ ಆಜ್ಞೆ ಸಹ ಮಾಡಿದೆ. ಈ $16\frac{2}{3}$ ಭಾಗ ಕೆಲಸಗಳನ್ನು ಯಾವ ರೂಪದಲ್ಲಿ, ಯಾವ ವಿಧದಲ್ಲಿ ಯಾವ ನೀತಿಯನ್ನನುಸರಿಸಿ ಕೊಡುತ್ತಾರೆ ಎನ್ನುವ ಪ್ರಶ್ನೆ ಹಾಕಿದರೆ ಅದಕ್ಕೆ ಸರ್ಕಾರದವರು ನಿರ್ದಿಷ್ಟವಾದ ರೀತಿಯಲ್ಲಿ ಉತ್ತರ ಕೊಡುತ್ತಿಲ್ಲ. ಕೆಲಸವನ್ನು ಇಷ್ಟು ಪ್ರಮಾಣದಲ್ಲಿ ಕೊಡಬೇಕು, ಕೊಡುತ್ತೇವೆ ಎಂದು ಹೇಳುತ್ತಾರೆಯೇ ವಿನಾ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಡುತ್ತಿಲ್ಲ. ಯಾವ ದಿವಸ ಪಬ್ಲಿಕ್ ಸರ್ವಿಸ್ ಕಮಿಷನ್ ಪ್ರಾರಂಭವಾಯಿತೋ ಆ ದಿವಸ ಮಾಡಬೇಕಾಗಿದ್ದಂಥ ಒಂದು ನಿರ್ಣಯವನ್ನು, ಸರ್ಕಾರದ ಆಜ್ಞೆಯನ್ನು 1953ನೆಯ ಇಸವಿಯಲ್ಲಿ ಮಾಡಿ ಅಲ್ಲಿಂದೀಚೆಗೆ ಕೆಲಸಗಳಿಗೆ ಜನರನ್ನು ತೆಗೆದುಕೊಳ್ಳುವಾಗ ಈ ಶೇಕಡಾವಾರಿನ ಪ್ರಕಾರ ತೆಗೆದುಕೊಳ್ಳುತ್ತೇವೆ ಎಂದು ವಾದಿಸುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇದು ಸರಿಯಾದ ವಾದವೇ ಎಂದು ನನಗಾದರೂ ಅನ್ನಿಸುತ್ತದೆ. ಯಾವದಿವಸ ಪಬ್ಲಿಕ್ ಸರ್ವಿಸ್ ಕಮಿಷನ್ ಸ್ಥಾಪಿತವಾಯಿತೋ, ಯಾವ ದಿವಸ ಪಬ್ಲಿಕ್ ಸರ್ವಿಸ್ ಕಮಿಷನ್ ಪ್ರಾರಂಭವಾಯಿತೋ ಆ ದಿವಸವೇ ಈ $16\frac{2}{3}$ ಭಾಗದ ಕೆಲಸಗಳನ್ನು ನಿಮ್ನ ವರ್ಗದವರಿಗೆ ಮೀಸಲಾಗಿಡಬೇಕಾಗಿತ್ತು. ಸರ್ಕಾರದ ಒಂದು ಅಚಾತುರ್ಯದಿಂದಲೋ ಅಥವಾ ಸರ್ಕಾರ ಮನಸ್ಸು ಮಾಡದೆ ಹೋದದ್ದರಿಂದಲೋ ಆ ರೀತಿ ಮಾಡಲ್ಪಡಲಿಲ್ಲ. $16\frac{2}{3}$ ಭಾಗ ಕೆಲಸಗಳನ್ನು ಮೀಸಲಾಗಿಡಬೇಕೆಂದು 1953ರಲ್ಲಿ ನಿಗದಿಮಾಡಿರಬಹುದು. ಆದರೆ ಈ ಜನಾಂಗಕ್ಕೆ ದೊರೆಯಬೇಕಾಗಿದ್ದ ಕೆಲಸಗಳನ್ನು ಯಾವ ದಿವಸ ಪಬ್ಲಿಕ್ ಸರ್ವಿಸ್ ಕಮಿಷನ್ ಸ್ಥಾಪಿತವಾಯಿತೋ ಅವೊತ್ತಿನಿಂದ ಕೊಡುವುದು ಅತ್ಯಾವಶ್ಯಕ. ಇದಕ್ಕೆ ಸರ್ಕಾರದವರು ಸರಿಯಾದ ಮತ್ತು ಸೂಕ್ತವಾದ ಕಾನೂನನ್ನು ಮಾಡಬೇಕಾಗಿತ್ತು. ಹಿಂದೆ ಬೇಜವಾಬ್ದಾರಿ ಸರ್ಕಾರವಿತ್ತು ಎಂದು ಹೇಳುತ್ತಿದ್ದರು. ಆದರೆ ಈಗ ಜವಾಬ್ದಾರಿ ಸರ್ಕಾರವಿರುವುದರಿಂದ ಈಗಲಾದರೂ ಸರಿಯಾದ ರೀತಿಯಲ್ಲಿ $16\frac{2}{3}$ ಭಾಗದ ಕೆಲಸಗಳನ್ನು ಕೊಡುವುದಕ್ಕೆ ಮನಸ್ಸು ಮಾಡಬೇಕು, ಇದಕ್ಕೆ ಸರಿಯಾದ ಕಾನೂನನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಸ್ವಾಮೀ, ಇನ್ನೊಂದು ವಿಚಾರ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ನಿಮ್ನ ವರ್ಗದವರಿಗೆ . . .

Mr. SPEAKER.—May I bring to the notice of the Hon'ble Member, - I was very lenient with regard to the debate on this Bill,—that he is going out of the scope of this Bill? He should strictly confine himself to the particular items of expenditure referred to in the supplementary grants.

Sri B. T. KEMPA RAJ.—I am speaking on the General Administration.

Mr. SPEAKER.—No, no. You must confine yourself to the items mentioned in the Bill.

ಶ್ರೀ ಬಿ. ಟಿ. ಕೆಂಪರಾಜ್.—Yes, Sir. ಈಗ ನಾನು ಸರ್ಕಾರದ ಮುಂದೆ ಇಟ್ಟಿರತಕ್ಕ ಕೋರಿಕೆಗಳಿಗೆ ಮನಸ್ಸುಕೊಟ್ಟು ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು ಈ ಜನಾಂಗಕ್ಕೆ ಆಗಬೇಕಾದ ಕೆಲಸಕಾರ್ಯಗಳನ್ನು ಸರಿಯಾದ ಮತ್ತು ಗೊತ್ತಾದ ಗುರಿಯಲ್ಲಿ ಸಾಧಿಸಬೇಕೆಂದು ಹೇಳಿ ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಅನುಮೋದಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸಂಸ್ಥಾನದಲ್ಲಿಯ ಕೈಮಗ್ಗಗಳ ಬೆಳವಣಿಗೆಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ಸಪ್ಲಿಮೆಂಟರಿ ಗ್ರಾಂಟ್ ಮೂಲಕ ಒದಗಿಸುವುದರ ಬದಲು, ಬಡ್ಜೆಟ್ಟಿನಲ್ಲಿಯೇ ಈ ಬಗ್ಗೆ ಹಣವನ್ನೊದಗಿಸಿದ್ದರೆ ಅನೇಕ ಕೈಮಗ್ಗಗಳಿಗೆ ಸಹಾಯವಾಗುತ್ತಿತ್ತು. ಈಗಲೂ ಕೇಂದ್ರ ಸರ್ಕಾರದಿಂದ ಈ ಬಗ್ಗೆ 20 ಲಕ್ಷ ರೂಪಾಯಿಗಳವರೆಗೆ ನೆರವು ಬಂದಿದೆ. ಆದರೂ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿರುವುದರಲ್ಲಿ ಅರ್ಥವಿಲ್ಲ. ಈ ಕೈಗಾರಿಕೆಯ ಅಭಿವೃದ್ಧಿ ಬಗ್ಗೆ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿರುತ್ತಾರೆ. ಆ ಸಮಿತಿಯಲ್ಲಿ ನಾನೂ ಸಹ ಸದಸ್ಯನಾಗಿದ್ದೇನೆ. ಇದು ವಾಸ್ತವಿಕವಾಗಿ ಒಂದು ಅಡ್ವೈಸರಿ ಸಮಿತಿಯಾಗಿದ್ದು ಹಲವಾರು ಸಲಹೆಗಳನ್ನು ಕೊಟ್ಟಿದ್ದರೂ ಅವುಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಟ್ಟಿಲ್ಲ. ಮೈಸೂರು ಸಂಸ್ಥಾನದಲ್ಲಿ ತಯಾರಾಗತಕ್ಕ Handloom ಬಟ್ಟೆ ಎಷ್ಟು ತಯಾರಾಗುತ್ತದೆ, ಎಷ್ಟು ಮಾರಾಟವಾಗುತ್ತದೆಯೆಂಬ ಬಗ್ಗೆ ಅಂಕಿಅಂಶಗಳನ್ನು ಎಷ್ಟು ಬಾರಿ ಕೇಳಿದರೂ ಒದಗಿಸುತ್ತಿಲ್ಲ. ಅನೇಕ ಮಾನ್ಯ ಸದಸ್ಯರು ಮೈಸೂರು ಸಂಸ್ಥಾನದಲ್ಲಿ ತಯಾರಾಗತಕ್ಕ ಕೈಮಗ್ಗದ ಬಟ್ಟೆಗಳಿಗೆ ಸರಿಯಾದ ಖರೀದಿ ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಏರ್ಪಡಿಸಬೇಕೆಂದು ಹೇಳಿದ್ದರೂ ಸಹ ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ವರ್ಷದ ಆಖೈರಿನಲ್ಲಿ ಸರ್ಕಾರಕ್ಕೆ ಬೇಕಾದ ಬಟ್ಟೆಗಳ ಬಗ್ಗೆ quotation call for ಮಾಡುವ ಪದ್ಧತಿ ಇಟ್ಟುಕೊಂಡಿದ್ದಾರೆ. ಇಷ್ಟೇ ಅಲ್ಲದೆ ಬಟ್ಟೆಗಳು ಹೆಚ್ಚಾಗಿ ಬೇಕಾದ ಸಮಯದಲ್ಲಿ ಅವುಗಳನ್ನು ತಯಾರಿಸಿ ಕೊಡಲು ಸಾಕಷ್ಟು ಕಾಲಾವಕಾಶವನ್ನೂ ಸಹ ಕೊಡುವುದಿಲ್ಲ. ವಾಸ್ತವಿಕವಾಗಿಯೂ ಈ ಕ್ರಮ ಗ್ರಾಮಕೈಗಾರಿಕೆಯ ಅಭಿವೃದ್ಧಿ ದೃಷ್ಟಿಯಿಂದ ಸರಿಯಾದ ಕ್ರಮವಲ್ಲ. ಗ್ರಾಮಕೈಗಾರಿಕೆಗೆ ಪ್ರೋತ್ಸಾಹ ಕೊಡುವ ವಿಚಾರದಲ್ಲಿ ಇಂತಹ ಶೋಚನೀಯ ಪರಿಸ್ಥಿತಿಗೆ ಅದನ್ನು ತರುವುದು ಯುಕ್ತವಾದ ನೀತಿಯಲ್ಲ. Industries Department ವಿಚಾರದಲ್ಲಿ ಸಂಸ್ಥಾನ ಇನ್ನು ಮುಂದಾದರೂ ಗ್ರಾಮ ಕೈಗಾರಿಕೆಯ ಬಗ್ಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ಬಗ್ಗೆ ಸರ್ಕಾರದವರು ಹೆಚ್ಚಿನ ಸಹಾನುಭೂತಿ ತೋರಿಸಬೇಕಾದುದು ಅತ್ಯಗತ್ಯವೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. C. LINGA REDDY (Malur).—Sir, I would like to say a few words on some of the demands. Now Demand No. 23. Very large sums are spent under this head in the State. I have enough experience of how these funds are utilised in my district, *i.e.*, Kolar. The less said about it the better. Unfortunately rural development committees have been abolished and the agency now is only the official agency. There is no scope for non-official agency to function at all. Especially

(SRI H. C. LINGA REDDY.)

the amelioration fund amount is wasted. We have got to consider that every pie that is spent for the people is very important. We have a responsible Government. We are responsible members. And in spite of all these things, it is unfortunate that these funds are wasted. Unfortunately, part of the amelioration fund has been diverted for the construction of hostels. And in the Kolar Town it is good that the Government have been pleased to give a hostel for Harijans and I thank the Government for that. But what amount has been allotted and how it should be utilised there, these are the things which are very important. Government selected a certain site against the will of the Public Works Department and even against the will of the public there in the first instance. Even the foundation stone was laid and a function also took place under the presidency of the Hon'ble the Minister for Local Self-Government and Public Health. It was pointed out that the site was not good; but he persisted. Fortunately for the people and others, the tank discharged. By that time a sum of Rs. 500 had been spent. The water flowed into the foundation of the building. it was only then that the Hon'ble Minister for Local Self-Government was pleased to say 'Oh yes, it is not a suitable site'. Nearly Rs. 500 had been wasted already, though it was pointed out that it was not a good place.

Sri T. CHANNIAH (Minister for Public Health and Local Self-Government).—Mr. Speaker, what the Hon'ble Member says is not correct. It is not correct to say that Rs. 500 has been wasted. No amount has been wasted. It has been spent on the site.

(*Laughter.*)

Sri H. C. LINGA REDDY.—Some amount must have been spent for laying the foundation. If not, I do not know how the Government were in a position to utilise the services of labourers free of cost. Anyway some work has been done and it must have been paid for. Fortunately for us, the tank discharged. If it had not discharged, there would have been a building by now and if the tank had discharged after the construction of the building, the whole building would have collapsed.

Sri T. CHANNIAH.—The Hon'ble Member who is a resident of the town could have as well suggested a better site for the hostel. Even buildings constructed by the side of the sea do not collapse. I do not think that the building would have collapsed. His statement is not correct.

Sri H. C. LINGA REDDY.—The Hon'ble Minister was pleased to say that as there was no suggestion made for a better site they were entitled to build the building in any place. I have no objection. But the very fact that the Government subsequently chose another site showed that the first selection was wrong.

Sri M. CHIKKALINGIAH (Malavalli-Scheduled Castes).—On a point of clarification. ಕೋಲಾರದಲ್ಲಿ ಹರಿಜನ ಹಾಸ್ಟೆಲ್‌ಗಾಗಿ ಸೈಟ್ ಕೊಡುವ ವಿಚಾರದಲ್ಲಿ ಅಲ್ಲಿ agitation ಪ್ರಾರಂಭವಾಗಿ ಅದಕ್ಕೆ ಮೊದಲು ನಿಗದಿಯಾಗಿರುವ ಸ್ಥಳದಲ್ಲಿ ಸೈಟ್ ಕೊಡಬಾರದೆಂದು ವ್ಯವಹಾರ ನಡೆಯುತ್ತಿದೆ. ಈ ಬಗ್ಗೆ ಸರ್ಕಾರದವರೇ ಆ ಪತ್ರ ವ್ಯವಹಾರ ನೋಡಿದರೆ ವಿದ್ಯಮಾನಗಳು ತಿಳಿಯುತ್ತವೆ.

Sri H. C. LINGA REDDY.—It is absolutely false that there was any agitation that no site should be given for the construction of the hostel. The only opinion given by them was that the site was not suitable or that it is an unhealthy place, that if a building were to be built there, it would be destroyed by the water when the tank discharged. That has been amply proved within about a month or two when the tank discharged. Therefore it is absolutely false to say that a certain section of the town was against the grant of the site. It was not so at all. In fact we want a building for the Harijan hostel. In fact there is a Harijan hostel in the town. Let me make it clear. Subsequently, what happened was, the question of selection of a site came up again. Now another place has been chosen and the construction is going on there. When I make this observation let it be clearly understood that I am not against Harijan uplift. I am not against the construction of a hostel for Harijans. In fact I am one of those who have been working for this. But let the funds be utilised properly for the benefit of the Harijans. That is all my object in saying all this. The place selected was about 15 feet deep. It is almost a ditch. Water is likely to stagnate in that place. I do not know why a building is proposed to be constructed in that ditch and at what cost.

Sri T. CHANNIAH.—May I clarify the position before this House ? There was a small ditch by the side of the Municipal Town Hall. That area had become almost a public latrine. Now it has been converted into a first class area for the construction of the hostel. The Public Works Department have constructed a drain to lead off water that would collect on the land.

Sri H. C. LINGA REDDY.—For the drains to drain out water from this ditch, nearly Rs. 15,000 has been spent. That amount itself would have been sufficient for the construction of the Harijan hostel.

Again, the estimate for the building has not been sanctioned. But storey after storey is being built. After all, the number of Harijan students in the locality is about 50 and in the hostel there are about 30 students. Even for about 100 students if the hostel were to be built, about Rs. 20,000 to Rs. 15,000 would have been sufficient. But a huge building is being constructed there. I do not know whether in future it will be given away either for Intermediate College or for a general hostel. Probably if it is given away for a general hostel. . . .

Sri T. CHANNIAH.—If that is your intention, why oppose the construction of the hostel at that place ?

Sri H. C. LINGA REDDY.—A lot of money is being wasted and these funds, Sir, have been diverted from the amelioration funds; and what is the state of affairs in villages for the construction of buildings for the Harijans ? About 17 lakhs had been set apart in the Budget for the construction of Houses in villages, and if money is to be diverted for the construction of hostels alone, the result should naturally be that people in villages—a vast number of Harijans--will be waiting for buildings. They are not in a position to get timber, tiles, etc., because of the construction of these hostels. Let them build hostels, I do not mind. But some other money should have been utilised for the construction of these hostels. Unfortunately that is not the case. Funds which were absolutely essential for the construction of houses in villages have been diverted for the construction of hostels and that too, they are spending money very extravagantly—for drains and pipes.

Sri L. SIDDAPPA (Chennagiri).—What is the total population of Harijans in Kolar District ?

Sri H. C. LINGA REDDY.—The population in the district is 12 lakhs and the Harijan population will be about 3 to 4 lakhs in the District. There are so many people in the area and if sufficient money is not made available for buildings, it is unfortunate that these funds are diverted and so extravagantly spent on unncessary things; money has been wasted. This money should have come from some other sources. I am also told that the Government of India were about to give some money for the construction of hostels.

Sri A. G. RAMACHANDRA RAO (Minister for Law and Education).—In order to avoid unnecessary discussion of this subject, I might say that it is on the decision of the Policy Committee of the Harijans that that work has been taken up, Sir.

Sri H. C. LINGA REDDY.—It was said even that the Government of India was about to give some money for the construction of this hostel, but unfortunately when they saw that lavish and huge expenditure, even the Government of India did not come forward to grant any money.

About the expenditure of money on rural reconstruction in villages, Sir, it only depends upon the whims and fancies of the Minister for Local Self-Government. He goes to some villages and inspects a few places and gives heavy grants to them only, while a number of other villages go without any funds. For example, in the villages of Vadalavadi, Melur, and Jangamkota he has given grants to the tune of 25,000, 13,000 and 15,000 while a

(SRI H. C. LINGA REDDY.)

number of other villages more backward than these have not been allowed any rural development funds at all. Therefore I humbly bring to your notice that for the utilisation of the rural development funds, it is better they have advisory committees in the taluks and have also the Assembly members in these committees, take their opinion in the matter and make use of these funds for villages which are more backward and where these funds could be more usefully spent.

Sri T. CHANNIAH.—May I know whether the Hon'ble Member is going to consider as waste any money spent on drains and roads in villages?

Sri H. C. LINGA REDDY.—For example in a village two or three miles from Kolar, for unnecessary things money has been spent.

Sri T. CHANNIAH.–It is not correct.

Mr. SPEAKER.—The Hon'ble Minister need not intervene at every stage. He can reserve his reply.

Sri H. C. LINGA REDDY.—A number of sites have been given for the construction of buildings for Harijans. We are very thankful to the Government for it. But what I want to impress upon the Government is when they give these sites, let them not give them to people who have already houses and to people who have already sites. Let them not choose people from outside the villages and outside places when there are needy people in the same locality. For example, in Kolar Town Government have been pleased to give sites to some Harijans. In the same house the father has his son, his wife (*laughter*) who in other words is the daughter-in-law of the family and two or three people. They have houses and also sites. There is the son-in-law along with the daughter and the father and a number of other relatives in the same house; if six of them should be given one site each in the same family, what an unfortunate thing it is!!

Sri T. CHANNIAH.—It is the Municipal Council which has granted all these sites and the Government have nothing to do with it. Why the Hon'ble Member is venting his grievance against me, I cannot understand, Sir (*Laughter*).

Sri H. C. LINGA REDDY.—In what way the Government should be held responsible is a well-known fact. Sites are given by the municipality, the municipality sends the proposal to the Government and unless the Government approves, the municipality cannot give the sites.

Sri T. CHANNIAH.—It is a statutory body. Government have nothing to do with it.

Sri H. C. LINGA REDDY.—If the municipality were to give the sites, there is the responsibility of the Government in giving the amelioration funds towards the adjustment of the acquisition cost; and if the Government were to help one single family to get six sites from the municipality, why should the Government give money out of the amelioration funds for adjustment towards acquisition costs?

Mr. SPEAKER.— The point of the Hon'ble Minister is that the Government has no hand in the disposal of the sites.

Sri H. C. LINGA REDDY.—My submission is that Government can certainly interfere and they are certainly competent to set right any injustice done by the municipality.

Sri V. VENKATAPPA (Channapatna).—How should the Government know that these people belong to the same family?

Sri H. C. LINGA REDDY.—It has been brought to the notice of the Government; the Minister for Local Self-Government comes from the same place. He has visited this place; he has himself approved the sanction of these sites to these people. There is the responsibility of the Government.

Sri A. G. RAMACHANDRA RAO.—Sir, in the Municipal Council of Kolar, there is only one Harijan Member and it is on a resolution of the Municipal Council that the acquisition and further action is being taken. Government is not at all to blame.

Sri H. C. LINGA REDDY.—May I submit that he has the responsibility because the resolution has to be approved by the Government.

Mr. SPEAKER.—The Hon'ble Member must be sure of his ground while making allegations. Supposing the Municipal Council asks for grants for acquisition of lands which have been granted as sites to Harijans. How could the Government know whether these sites are granted to particular individuals ?

Sri H. C. LINGA REDDY.—I was submitting that it was brought to the notice of the Government that sites have been given to a number of individuals in the same house and the same family, and under the Municipalities Act Government have enough power to interfere with the municipal administration where injustice has been done.

Mr. SPEAKER.—Please go to the next point.

Sri H. C. LINGA REDDY.—I was also submitting that the Government is adjusting amelioration funds towards costs of acquisition of lands for these sites. Government can certainly withdraw this money. If Government were to give heavy sums and heavy grants out of the amelioration funds which are intended for the construction of houses in villages to Harijans, it only results in a great injustice to the Harijans in the District.

Mr. SPEAKER.—The funds are not misappropriated.

Sri H. C. LINGA REDDY.—The Constitution makes very many concessions in their favour. Let us feel happy over it. But what a collossal waste of money in trying to build these hostel buildings with meagre resources! Therefore I submit that this amelioration funds should be properly made use of, so that the money may go to the needy and the poor, the lowly and the humble folk. Let us not misuse these funds.

And with regard to electricity . . . .

Sri K. PRABHAKAR.—Before my friend goes to the question of electricity, I would like to know whether he has taken any trouble of looking into the plans of the hostel building and the provisions that have been made therein.

Mr. SPEAKER.—This is not question hour. The Hon'ble Member can proceed.

Sri H. C. LINGA REDDY.—With regard to Demand No. 42, I wish to state that we have been depending upon electricity for our increased prosperity in the cities and in rural areas. So far as Kolar District is concerned, no doubt the Government have been giving irrigation facilities to a number of places and even during the question hour there was a reference to this subject. But what I would like you to appreciate is that a number of pumps are concentrated in Goribidanur Taluk and there may be reason for it. But if that alone should be considered to be sufficient in the District, there are a number of other taluks which will suffer on account of paucity of these facilities especially Malur, Kolar, Srinivasapur and other taluks in other Sub-Divisions. I think it will be a serious handicap, and specially, this expectation of a return of 7½ per cent is very heavy and we have therefore been requesting the Hon'ble Minister for Electricity a number of times that this return expected by the Government is very high and it should be reduced at least to 7 per cent. He promised that he would look into it, but so far nothing has been done and on account of that we are not in a position to take sufficient pumps for the villages. I therefore request the Government once again to consider the question of reducing the limit of return and give more facilities.

Again, this conversion of frequency from 25 to 50 cycles is hanging fire for a very long time and unless it is expedited, I think it will take a very long time for us and Government will not be in a position to give sufficient electric power to pumps in Kolar District. I therefore request them to expedite this frequency conversion so that Government may be in a position to sanction more and more irrigation pumps.

With these observations I welcome this Bill.

Mr. SPEAKER.—Now the House will rise and meet at 3-30.

The House adjourned for Lunch at Three of the Clock and re-assembled at Thirty Minutes past Three of the Clock.

[MR. SPEAKER in the Chair.]

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ನಮ್ಮ ಮುಂದಿರತಕ್ಕಂಥ ಈ ಬಿಲ್ಲನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ಕೈಮಗ್ಗದ ಕೈಗಾರಿಕೆಗೆ ಸರ್ಕಾರದವರು ಹೆಚ್ಚು ಹೆಚ್ಚಾಗಿ ಉತ್ತೇಜನ ಕೊಡುತ್ತಿದ್ದಾರೆ. ಅದರಂತೆ ರೇಷ್ಮೆ ಮಗ್ಗಗಳಿಗೂ ಹೆಚ್ಚಿನ ಉತ್ತೇಜನ ಕೊಡಬೇಕಾದದ್ದು ಅತ್ಯಗತ್ಯ. ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಕೈಗಾರಿಕೆ ಬಹಳ ದಿವಸಗಳಿಂದಲೂ ನಡೆದುಕೊಂಡು ಬಂದಿದೆ. ಘನ ಸರ್ಕಾರದವರು ಇದಕ್ಕೆ ಉತ್ತೇಜನ ಕೊಡದೆಹೋದರೆ ಈ ಕೈಗಾರಿಕೆಯ ಜನರು ಬಹಳ ಕಷ್ಟಕ್ಕೆ ಸಿಕ್ಕಿ ನಷ್ಟಹೊಂದಲು ಅವಕಾಶವಾಗುತ್ತದೆ. ಮಂತ್ರಿಗಳು ತಮ್ಮ ಪ್ರವಾಸ ಕಾಲಗಳಲ್ಲಿ ಈ ಕೈಗಾರಿಕೆಯ ಜನರು ಅವರ ಮುಂದೆ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಂಡಾಗ ಕೆಲವು ಕಡೆ ಸಹಾಯಮಾಡುವುದಾಗಿ ವಾಗ್ದಾನ ಮಾಡಿದ್ದಾರೆ. ಅದರಂತೆ ರೇಷ್ಮೆ ಕೈಗಾರಿಕೆಗೂ ಇತರ ಕೈಗಾರಿಕೆಗಳಿಗೂ ಉತ್ತೇಜನ ಕೊಟ್ಟಿರುವ ಹಾಗೆ ಹೆಚ್ಚಿನ ಉತ್ತೇಜನ ನೀಡಿ ಅನುಕೂಲ ಕಲ್ಪಿಸಿ ಕೊಡಬೇಕು.

ಎರಡನೆಯದಾಗಿ ಹರಿಜನರ ಏಳಿಗೆಗಾಗಿ ಅಕ್ವಿಜಿಷನ್ ಸಂಸ್ಥಾನದ ನಾನಾ ಭಾಗಗಳಲ್ಲಿ ಮಾಡುತ್ತಿದ್ದಾರೆ. ಈ ಅಕ್ವಿಜಿಷನ್ ಕಾರ್ಯಕ್ರಮ ಜಾಗ್ರತೆ ಆಗದೇ ಹೋದ ಕಾರಣದಿಂದ ತಾವು ಹರಿಜನರಿಗಾಗಿ ಕೊಡುವ ಅಲಾಟ್‌ಮೆಂಟ್ ಸರಿಯಾಗಿ ವಿನಿಯೋಗವಾಗದೆ ಯಾವ ಊರಿನವರಿಗಾಗಿ ಕೊಟ್ಟಿತ್ತೋ ಅದು ಅವರಿಗಾಗಿ ಉಪಯೋಗವಾಗದೆ ಆ ಅಲಾಟ್‌ಮೆಂಟ್ ಬೇರೆ ಊರಿನವರಿಗೆ ವಿನಿಯೋಗವಾಗುತ್ತಿದೆ. ಆದ್ದರಿಂದ ಸರ್ಕಾರದವರು ಈ ಅಕ್ವಿಜಿಷನ್ ವಿಚಾರದಲ್ಲಿ ಹೆಚ್ಚಿನ ಕಾರ್ಯಕ್ರಮ ಕೈಕೊಳ್ಳಬೇಕು. ಅಕ್ವಿಜಿಷನ್ ಶೀಘ್ರವಾಗಿ ಆಗಿ ಹರಿಜನರಿಗೂ ಜಮೀನ್ದಾರರಿಗೂ ಜಾಗ್ರತೆ ಅನುಕೂಲವೊದಗಬೇಕೆಂದು ನಾವು ಬಹಳ ದಿವಸಗಳಿಂದಲೂ ಹೇಳುತ್ತಿದ್ದೇವೆ. ಆದರೂ ಕೂಡ ಪ್ರಜಾ ಸರ್ಕಾರ ಬಂದಮೇಲೂ ಸಹ ಈ ವಿಚಾರದಲ್ಲಿ ಯಾವ ವಿಧವಾದ ಬದಲಾವಣೆಯೂ ಆಗಿಲ್ಲ. ಯಾವುದು ಉತ್ತರೋತ್ತರ ದೇಶಕ್ಕೆ ಉಪಯೋಗವಾದುದೋ, ಯಾವುದರಿಂದ ಅಲ್ಪಸ್ವಲ್ಪ ಅನುಕೂಲವಾಗುತ್ತದೆಯೋ ಅವೆಲ್ಲಕ್ಕೂ ಸರ್ಕಾರ ಹೆಚ್ಚಾಗಿ ಗಮನ ಕೊಡದೇ ಹೋದರೆ ದೇಶಕ್ಕೆ ಯಾವ ಸಹಾಯವನ್ನೂ ಮಾಡಿದಂತಾಗುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ನನಗೆ ಗೊತ್ತಿರುವ ಹಾಗೆ ಹತ್ತು ವರ್ಷಗಳಾದರೂ ಅಕ್ವಿಜಿಷನ್ ಕಾರ್ಯಕ್ರಮ ಮುಗಿದಿರುವುದಿಲ್ಲ. ಆದ್ದರಿಂದ ಈಗಿರತಕ್ಕ ಪದ್ಧತಿಯನ್ನು ಬದಲಾಯಿಸಿ ಜಾಗ್ರತೆ ಎಲ್ಲಾ ಅಕ್ವಿಜಿಷನ್ ಆಗಿ ರೈತರಿಗೆಲ್ಲಾ ಅನುಕೂಲ ದೊರೆಯುವ ಹಾಗೆ ಮಾಡಬೇಕೆಂದು ಅರಿಕೆಮಾಡುತ್ತೇನೆ.

ಸಂಸ್ಥಾನದಲ್ಲಿ ರೂರಲ್ ಡೆವಲಪ್‌ಮೆಂಟ್ ವಿಷಯದಲ್ಲಿ ಎಲ್ಲಾ ಪ್ರಾಂತಗಳಿಗೂ ಅನುಕೂಲ ಕಲ್ಪಿಸಿ ಕೊಡಬೇಕೆಂದು ವ್ಯವಸ್ಥೆಮಾಡಿದ್ದಾರೆ. ಆದರೆ ಕೆಲವು ಕಡೆ ಮಾತ್ರ ಅನುಕೂಲ ದೊರೆತು ಮತ್ತೆ ಕೆಲವು ಕಡೆ ದೊರೆಯುತ್ತಿಲ್ಲ. ಯಾವಾಗಲೂ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಕೊಂಡು ಸಾಮಾನ್ಯವಾಗಿ ದೇಶದ ಇಡೀ ಜನರಿಗೆಲ್ಲಾ ಅನ್ವಯಿಸುವ ರೀತಿಯಲ್ಲಿ ಅಲಾಟ್‌ಮೆಂಟ್ ಹಂಚಿ ತನ್ಮೂಲಕ ಎಲ್ಲರಿಗೂ ಅನುಕೂಲವಾಗುವಂತೆ ಮಾಡಬೇಕು. ಈಗಿರುವ ಕಾರ್ಯಕ್ರಮದಂತೆ ಕೆಲವು ಕಡೆ ಮಾತ್ರ ಪ್ರಯೋಜನ ಲಭಿಸಿದೆ, ಮಿಕ್ಕ ಕಡೆಗಳಿಗೆ ಸಹಾಯ ದೊರೆತಿಲ್ಲ. ನಮ್ಮ ನಮ್ಮ ಪ್ರದೇಶಗಳಲ್ಲಿ ಮಂತ್ರಿಗಳು ಪ್ರವಾಸ ಮಾಡಿದಾಗ ಅಲ್ಲಿನ ಕಷ್ಟವೇನೆಂಬುದನ್ನು ಗಮನಕ್ಕೆ ತಂದಿದ್ದೇವೆ. ಇದನ್ನು ಗಮನಿಸಿ ಇನ್ನು ಮೇಲಾದರೂ ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಸರಿಯಾದ ಕಾರ್ಯಕ್ರಮ ಕೈಕೊಂಡು ಎಲ್ಲರಿಗೂ ಸಹಾಯ ದೊರೆಯುವಂತೆ ಮಾಡಬೇಕು.

ಹೀಗೆಯೇ ಪಾಂಚವಾರ್ಷಿಕ ಯೋಜನೆಯ ವಿಚಾರವನ್ನು ಸ್ವಲ್ಪ ಗಮನಿಸಬೇಕು. ಕೆಲವು ಕಡೆ ಮಾತ್ರ ಇದರ ಪ್ರಯೋಜನ ಲಭಿಸಿದೆ; ನಿಜವಾಗಿ ಬೆಟ್ಟ, ಗುಟ್ಟೆ, ಕಾಡುಮೇಡು ಇರುವ ಮಾಗಡಿ ತಾಲ್ಲೂಕು ಮುಂತಾದುವಕ್ಕೆ ಇದರ ಲಾಭ ದೊರೆಯಬೇಕಾಗಿದೆ. ಮೈನ್ ರೋಡುಗಳಲ್ಲಿರುವ ಸ್ಥಳಗಳಿಗೇ, ಹೆಚ್ಚು ಲಾಭ ದೊರೆತಿರುವವರಿಗೇ ಇದರ ಪ್ರಯೋಜನ ಲಭಿಸುವಂತೆ ಸರ್ಕಾರ ಮಾಡುವುದಾದರೆ ಹಿಂದಿನ ಸರ್ಕಾರದಲ್ಲಿ ಯಾವ ಪದ್ಧತಿಯಿತ್ತೋ ಅದೇ ಪದ್ಧತಿಯನ್ನೇ ತಾವು ಮುಂದುವರಿಸಿದ ಹಾಗಾಗುತ್ತದೆಯೇ ವಿನಾ ಹೆಚ್ಚಿಗೆ ಸಹಾಯ ನೀಡಿದಂತಾಗುವುದಿಲ್ಲ; ಪ್ರಜೆಗಳಿಗೆ ಹೆಚ್ಚಿನ ಲಾಭ ಸಿಕ್ಕಬೇಕೆಂದು ಪ್ರಜಾ ಸರ್ಕಾರ ಮನಸ್ಸು ಮಾಡಿರುವುದು ಕಾರ್ಯಗತವಾಗುವುದಿಲ್ಲ.

ವಿದ್ಯುಚ್ಛಕ್ತಿ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ತಾವೇನೋ ವಿದ್ಯುಚ್ಛಕ್ತಿಯನ್ನು ಸಂಸ್ಥಾನಾವಳಿ ಒದಗಿಸಿ ದೀಪದ ಸೌಕರ್ಯ ಮುಂತಾದ್ದನ್ನು ಕಲ್ಪಿಸಿ ಅನುಕೂಲ ಕಲ್ಪಿಸಬೇಕೆಂದು ಮಾಡಿದ್ದರೂ ಸಾರ್ವತ್ರಿಕವಾಗಿ ಈ ಸೌಲಭ್ಯ ಸಿಕ್ಕುತ್ತಿಲ್ಲ. ಎಲ್ಲಿಗೆ ಅನುಕೂಲ ಒದಗಿದೆಯೋ ಅಲ್ಲಿಗೇ ಹೆಚ್ಚು ಅನುಕೂಲ ದೊರೆಯುತ್ತಿದೆಯೇ ವಿನಾ ಸಾರ್ವತ್ರಿಕವಾಗಿ ದೊರೆಯುತ್ತಿಲ್ಲ ಇದಕ್ಕೆ ಒಂದು ಯೋಜನೆ ತಯಾರಿಸಿ ಆ ಮೂಲಕ ಎಲ್ಲಾ ಕಡೆಗೂ ವಿದ್ಯುಚ್ಛಕ್ತಿ ದೀಪ ಮತ್ತು ಲಿಫ್ಟ್ ಇರಿಗೇಷನ್ ಸೌಕರ್ಯ ದೊರೆಯುವಂತೆ ಮಾಡಬೇಕು. ಮಾಗಡಿ ತಾಲ್ಲೂಕಿನಲ್ಲಿ 120 ಪಂಪುಗಳಿಗೆ ಹಣ ಕಟ್ಟಿದ್ದಾರೆ. ಮಂತ್ರಿಗಳಿಗೆ ಈ ವಿಚಾರ ಹೇಳಿದ್ದೇನೆ. ಈ ವಿಚಾರದಲ್ಲಿ ಕಾಲಹರಣ ಮಾಡುವುದರಿಂದ ಜನರಿಗೆ ಅನುಕೂಲ ಮಾಡಿದಂತಾಗುವುದಿಲ್ಲ. ಆದ್ದರಿಂದ ದಯಮಾಡಿ ಈ ಕೆಲವು ನ್ಯೂನತೆಗಳನ್ನು ಸರಿಪಡಿಸಿ ಅನುಕೂಲ ಕಲ್ಪಿಸಿ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ನಾನು ತತ್ವ ದೃಷ್ಟಿಯಿಂದ ವಿರೋಧಿಸುತ್ತೇನೆ. ಸರ್ಕಾರದವರು ಇದನ್ನು ತಂದಿದ್ದಾರೆ, ಅವರು ಎದುರು ಪಕ್ಷದವರು ಎಂದು ನಾನು ವಿರೋಧಿಸುತ್ತಿಲ್ಲ. ಇರುವ ಕೆಲವು ಲೋಪದೋಷಗಳ ದೆಸೆಯಿಂದ ಇದನ್ನು ವಿರೋಧಿಸಬೇಕಾಗಿದೆ. ಮುಖ್ಯವಾಗಿ ಈ ಬಿಲ್ಲಿಗೆ ಸಂಬಂಧಪಟ್ಟ ವಿಷಯದಮೇಲೆ ಮಾತನಾಡಬೇಕೆಂದು ಅಧ್ಯಕ್ಷರು ಅಪ್ಪಣೆ ಕೊಟ್ಟಿರುವುದರಿಂದ ಮತ್ತು ಹರಿಜನರ ಸಮಸ್ಯೆ ಹೆಚ್ಚಾಗಿ ಪ್ರಸ್ತಾಪಿಸಲ್ಪಟ್ಟು ಈ ಬಿಲ್ಲಿಗೆ ಸಂಬಂಧಪಟ್ಟಿರುವುದರಿಂದ ಆ ವಿಚಾರದಲ್ಲಿ ಮೊದಲು ಎರಡು ಮಾತನ್ನು ಹೇಳುತ್ತೇನೆ.

ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ನೀರು ಸರಬರಾಯಿಗಾಗಿ ಉದಾರವಾಗಿ ಹಣ ಕೊಡುತ್ತೇವೆ, ಲಕ್ಷಗಟ್ಟಲೆ ಸಹಾಯಮಾಡಿದ್ದೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಆದರೆ ಗ್ರಾಮಾಂತರಗಳಲ್ಲಿ ಇನ್ನೂ ಕುಡಿಯುವ ನೀರಿನ ತೊಂದರೆ ತಪ್ಪಿಲ್ಲ. ಈ ವಿಚಾರವನ್ನು ಪದೇ ಪದೇ ಹೇಳುತ್ತಿದ್ದೇವೆ. ಶ್ರೀ ರಾಚಯ್ಯನವರು ಬಾವಿ ವಿಚಾರದಲ್ಲಿ ಕೆಲವು ಅಂಶಗಳನ್ನು ತಿಳಿಸಿದರು. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ

ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಸೌಕರ್ಯವನ್ನು ಹೆಚ್ಚಾಗಿ ಒದಗಿಸುತ್ತಿದ್ದರು. ಈ ಸರ್ಕಾರ ಬಂದಮೇಲೆ ಬಾವಿಗಳ ವಿಚಾರದಲ್ಲಿ ಉದಾಸೀನ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಹಿಂದೆ ಡಿಸ್ಟ್ರಿಕ್ಟಿನಲ್ಲಿ ರೂರಲ್ ವಾಟರ್ ಸಪ್ಲೈಗೆ ಸಮಿತಿ ಮಾಡಿ ಮೂರು ತಿಂಗಳಿಗೊಂದುಸಲ ತಾಲ್ಲೂಕುಗಳಲ್ಲಿ ಎಷ್ಟು ಬಾವಿಗಳಾಗಿವೆಯೆಂಬುದನ್ನು ಪರಿಶೀಲಿಸುತ್ತಿದ್ದರು, ನಾಲ್ಕೈದು ವರ್ಷಗಳ ಯೋಜನೆ ಇತ್ತು, ಮುಖ್ಯವಾಗಿ ಗ್ರಾಮಾಂತರಗಳ ನೀರು ಸರಬರಾಯಿಗೆ ಹೆಚ್ಚು ಗಮನ ಕೊಡುತ್ತಿದ್ದರು. ಅದೇ ಪ್ರಜಾ ಸರ್ಕಾರ ಬಂದಮೇಲೆ ಎಷ್ಟೋಸಲ ಹೇಳಿದರೂ ಉದಾಸೀನ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಸಹಾಯ ಮಾಡುವವರೆಗೂ ಏನು ಮಾಡಿದರೂ ಸರಿಯಾದ ಸಹಾಯ ನೀಡಿದಂತಾಗುವುದಿಲ್ಲ. ಒಂದು ಗ್ರಾಮದಲ್ಲಿ ಒಂದು ಬಾವಿ ತೆಗೆಸುವುದರಿಂದ ಆಗವಷ್ಟು ಸಂತೋಷ ಇನ್ನಾವುದರಿಂದಲೂ ಆಗುವುದಿಲ್ಲ. ಆದ್ದರಿಂದ ಮತ್ತೊಂದು ಸಾರಿ ಈ ವಿಚಾರವನ್ನು ಹೇಳುವುದು ಅತ್ಯವಶ್ಯಕ.

ಎರಡನೆಯದಾಗಿ, ಹಿಂದೆ ಅರಿಕೆ ಮಾಡಿದ ಹಾಗೆ, ಹರಿಜನರು ಈ ಸಭೆಯಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದಾರೆ, ಇಲ್ಲಿ ಅವರ ಕೂಗೇ ವಿಪರೀತವಾಗಿದೆ ಎಂದು ಹೇಳಿದ್ದು ಕಿವಿಗೆ ಬಿದ್ದದೆ. ಆದರೆ ಶ್ರೀ ಕೆಂಪರಾಜ್‌ರವರು ಹೇಳಿದಹಾಗೆ ಇಲ್ಲಿಗೆ ಬಂದಿರುವ ಮಾನ್ಯ ಸದಸ್ಯರು ಬರೀ ಇತರ ಕೋಮಿನವರ ಓಟಿನಿಂದಲೇ ಚುನಾಯಿತರಾಗಿ ಬಂದಿಲ್ಲ; ಹರಿಜನರೂ ಬೇಕಾದಷ್ಟು ಪ್ರೋತ್ಸಾಹ ಮಾಡಿದ್ದಾರೆ. ಈ ಸರ್ಕಾರ ಸ್ಥಾಪಿಸಿರುವುದು ಸಂಪೂರ್ಣವಾಗಿ ಹರಿಜನರ ಬೆಂಬಲದಿಂದ ಎಂದು ಹೇಳಿದರೆ ತಪ್ಪಾಗಲಾರದು.

Sri A. BHEEMAPPA NAIK (Molakalmuru).—On a point of order, Sir. I want to know whether this speech would come within the purview of the grants asked for. I have absolutely no objection to my friend's making any observation or criticising the Government on the floor of this House. But, it must be relevant to the demand.

Mr. SPEAKER.—Ruling has already been given more than once. It is proper and right that the Hon'ble members should confine their remarks to the particular item of expenditure.

ಶ್ರೀ ಎಂ. ಚಿಕ್ಕಲಿಂಗಯ್ಯ.—ರೂರಲ್ ಡೆವಲಪ್‌ಮೆಂಟ್ ಯೋಜನೆಯಲ್ಲಿ ಹರಿಜನರ ಸ್ಪೆಷಲ್ ವೆಲ್‌ಫೇರ್‌ಗಾಗಿ ಎಷ್ಟು ಹಣ ಮೀಸಲಾಗಿಟ್ಟದೆ, ಅದರಿಂದ ಎಷ್ಟು ಮಟ್ಟಿನ ಪ್ರಯೋಜನ ಈ ಕೋಮಿನವರಿಗೆ ಲಭಿಸುತ್ತಿದೆ ಎಂಬ ವಿಚಾರದಲ್ಲಿ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರದಿದ್ದರೆ ವಿಧಿಯಿಲ್ಲವಾದ್ದರಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ಇದು ಬಹಳ ಮುಖ್ಯವಾದ ವಿಷಯ. ಸರ್ಕಾರ ಮಾಡುವ ಪಾಂಚವಾರ್ಷಿಕ ಯೋಜನೆಯಲ್ಲಿ, ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಹರಿಜನರ ಅಪ್‌ಲಿಫ್ಟ್ ಬಹಳ ಮುಖ್ಯವಾದುದು. ಈ ವಿಚಾರದಲ್ಲಿ ಮೈಸೂರು ಸರ್ಕಾರದವರು ಸಾಕಷ್ಟು ನಿಗಾ ತೆಗೆದುಕೊಳ್ಳದಿದ್ದರೆ ಇಂಡಿಯಾ ಸರ್ಕಾರದಲ್ಲಿ ನಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳಬೇಕಾಗುತ್ತದೆ, ಅಲ್ಲೂ ಸರಿಯಾದ ಪರಿಹಾರ ದೊರೆಯದೇ ಹೋದರೆ ವಿಶ್ವಸಂಸ್ಥೆಗೆ ಹೋಗಬೇಕಾಗುತ್ತದೆ. ಮುಂದಿನ ಅಸೆಂಬ್ಲಿಗೆ ಈ ವಿಚಾರ ಬಾರದಿರುವಂತೆ ಸರಿಯಾದ ಸಹಾಯ ನೀಡುತ್ತೀರೆಂಬ ಭರವಸೆಯಿಂದ ಈ ವಿಷಯದಲ್ಲಿ ಇಷ್ಟುಮಾತ್ರ ಹೇಳಿದ್ದೇನೆ.

ಎರಡನೆಯದಾಗಿ, ಹರಿಜನರ ಅಭಿವೃದ್ಧಿ ವಿಚಾರದಲ್ಲಿ ಕೆಲವು ನ್ಯೂನತೆಗಳಿರುವುದನ್ನು ಮಾನ್ಯ ಸದಸ್ಯರು ಕೆಲವರು ಹೇಳಿದ್ದಾರೆ. ಈಗ ಪಾಲಿಸಿ ಕಮಿಟಿಯವರು ಯಾವ ಬಾಬುಗಳಿಗೆ ಹಣ ಒದಗಿಸಬೇಕೆಂದು ಹೇಳುತ್ತಾರೋ, ಸಿಬ್ಬಂದಿಗೆ ಎಷ್ಟು ಖರ್ಚು ಮಾಡಬೇಕು, ಮನೆ ಕಟ್ಟುವುದಕ್ಕೆ, ಅಕ್ವಿಜಿಷನ್, ಹಾಸ್ಟಲ್ ಕಟ್ಟಡ ಮುಂತಾದುವಕ್ಕೆ ಎಷ್ಟು ಹಣ ಕೊಡಬೇಕು ಎಂದೇನು ಸಲಹೆಮಾಡುತ್ತಾರೋ ಅದರಂತೆ ಸರ್ಕಾರ ಹಣ ಒದಗಿಸುವುದರಿಂದ ನಷ್ಟವಿಲ್ಲವೆಂದು ಕಾಣುತ್ತದೆ. ಸಕಾಲದಲ್ಲಿ ಸಹಾಯ ನೀಡಬೇಕು, ಆದಷ್ಟು ಜಾಗ್ರತೆ ಖರ್ಚುಮಾಡಿ ಬಡಜನರಿಗೆ ಅನುಕೂಲವಾಗುವ ಹಾಗೆ ಮಾಡಬೇಕು, ಇಲ್ಲದಿದ್ದರೆ ಸರಿಯಾದ ಪ್ರಯೋಜನವಾಗುವುದಿಲ್ಲ ಎಂದು ಒತ್ತಾಯಮಾಡಿ ಮತ್ತೊಂದು ಸಾರಿ ಹೇಳದಿದ್ದರೆ ವಿಧಿಯಿಲ್ಲ. ಏಕೆಂದರೆ ಈ ವಿಚಾರದಲ್ಲಿ ಒಂದು ಪ್ಲಾನ್ ಇಲ್ಲ, ಹತ್ತು ವರ್ಷಗಳಲ್ಲಿ ಅಥವಾ ಇಪ್ಪತ್ತು ವರ್ಷಗಳಲ್ಲಿ ಇಷ್ಟು ಅನುಕೂಲ ಕಲ್ಪಿಸುತ್ತೇವೆಂಬ ಪ್ಲಾನ್ ಇಲ್ಲ. ಸರ್ಕಾರ ಈ ಬಗ್ಗೆ ಸರಿಯಾದ ಭರವಸೆ ಕೊಟ್ಟರೆ ಕೂಗಬೇಕಾದ ಪ್ರಮೇಯವಿಲ್ಲ, ನಿಮ್ಮ ಮನಸ್ಸಿಗೆ ವ್ಯಥೆಯನ್ನುಂಟುಮಾಡಬೇಕಾದ ಪ್ರಮೇಯವಿಲ್ಲ. ಈ ರೀತಿಯ ಯೋಜನೆಯಿಲ್ಲದೆ, ಕೆಲಸಕಾರ್ಯ ಮಾಡದಿರುವುದರಿಂದ ಪದೇ ಪದೇ ಹೇಳಬೇಕಾಗಿದೆ.

ನಮ್ಮ ಮಾನ್ಯ ಮಿತ್ರರು ಹಾಸ್ಟಲು ಕೊಡುವ ವಿಚಾರದಲ್ಲಿ ಒಂದು ವಿಷಯ ಹೇಳಿದರು. ಹಾಸ್ಟಲು ಕಟ್ಟುವುದಕ್ಕೆ ಸೈಟುಗಳನ್ನು ಅಕ್ವೈರ್ ಮಾಡಿಕೊಳ್ಳುವಾಗ ಇರುವ ತೊಂದರೆಯನ್ನು ಶ್ರೀ ಸಿದ್ದಪ್ಪನವರು ಹೇಳಿದರು. ಅಮಿಲಿಯೊರೇಷನ್ ಫಂಡಿನಿಂದ ಸೈಟನ್ನು ಅಕ್ವೈರ್‌ಮಾಡಿ ಕಲ್ಲುಗಳನ್ನು ಕಟ್ಟಿರುವುದನ್ನು ರೈತರು ಕಿತ್ತುಹಾಕಿ ಹೊಲವನ್ನು ಉತ್ತಿರುವ ನಿದರ್ಶನಗಳು ಬಹಳವಾಗಿವೆ ; ಐದಾರು ಸಲ ಹೀಗೆ ತೊಂದರೆಯಾಗಿದೆ. ಕೋಲಾರದಲ್ಲಿ ಹಾಸ್ಟಲಿಗೆ ಸೈಟನ್ನು ಚುನಾಯಿಸುವಾಗ ಬಹಳ ಕಷ್ಟವಾಯಿತು. ಲಕ್ಷಾಂತರ ರೂಪಾಯಿಗಳು ಮುನಿಸಿಪಾಲಿಟಿಗೆ ಬರುವುದು ತಪ್ಪಿ ಹೋಗುತ್ತದೆ, ಆದ್ದರಿಂದ ಸೈಟನ್ನು ಹರಿಜನರಿಗೆ ಕೊಡಕೂಡದು ಎಂದು ಪತ್ರವ್ಯವಹಾರ ನಡೆಯಿತು. ಮೈಸೂರಿನಲ್ಲಿ ಸಹ ಹರಿಜನರ ಹಾಸ್ಟಲಿಗೆ ಜಾಗ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಮೇಲೆ ಆ ವಿಚಾರ ಟ್ರಸ್ಟ್ ಬೋರ್ಡಿನ ಮುಂದೆ ಬಂದಿದೆ. ಸೈಟನ್ನು ಅಕ್ವೈರ್ ಮಾಡಲು ಜಾಗ್ರತೆ ಸಾಧ್ಯವಾಗದೆ ಕಟ್ಟಡ ಕಟ್ಟುವುದಕ್ಕೆ ಅವಕಾಶವಿಲ್ಲದಂತಾಗಿದೆ. ಹರಿಜನರ ವಿಚಾರದಲ್ಲಿ ಸವರ್ಣೀಯರ ಸಹಾನುಭೂತಿ ದೊರಕುತ್ತಿಲ್ಲ ಎಂಬ ವಿಚಾರವನ್ನು ಹೇಳಲು ತುಂಬ ವಿಷಾದಪಡುತ್ತೇನೆ. ನಿರೀಕ್ಷೆ ಮಾಡಿದಷ್ಟು ಸಹಾಯ ಪ್ಲಾನ್ ಪ್ರಕಾರ ಜಾಗ್ರತೆ ದೊರೆಯುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಈ ವಿಚಾರವನ್ನು ಸರ್ಕಾರದವರು ಪರಿಶೀಲಿಸಿ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು 5-10 ವರ್ಷಗಳ ಯೋಜನೆಯೊಂದನ್ನು ಹಾಕಿಕೊಂಡು ಕೆಲಸ ಮುಂದುವರಿಸಿದರೆ ನಮ್ಮ ಕೂಗಿಗೆ ಸ್ವಲ್ಪಮಟ್ಟಿಗಾದರೂ ಪರಿಹಾರ ನೀಡಿದಹಾಗಾಗುತ್ತದೆಂದು ನಮಗೆ ಮನವರಿಕೆಯಾಗಿದೆ. ಈಗಾಗಲೇ ನಮ್ಮ ಕೋರಿಕೆಗಳು ನ್ಯಾಯವಾದುವೆಂದು ಸರ್ಕಾರದವರು ಮನಗಂಡು ಸರ್ಕಾರಿ ನೌಕರಿಗಳಲ್ಲಿ ಶೇಕಡ $16\frac{2}{3}$ರಷ್ಟು ಪ್ರಾತಿನಿಧ್ಯವನ್ನು ನಿಮ್ನವರ್ಗದವರಿಗೆ ಸಲ್ಲಿಸಬೇಕೆಂಬ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಬಗ್ಗೆ ಸರ್ಕಾರಿ ಹುಕುಂ ಸಹ ಹೊರಡಿಸಿರುತ್ತಾರೆ. ಜನ ಸಂಖ್ಯೆಯ ಆಧಾರದಮೇಲೆ ಇದು ನ್ಯಾಯವಾಗಿ ಶೇಕಡಾ 18ರಷ್ಟು ಆಗಬೇಕಾಗಿತ್ತು. ಹೋಗಲಿ ಇಷ್ಟಾದರೂ ಆಗಿದೆಯಲ್ಲಾ, ಇದಕ್ಕೇ ತೃಪ್ತಿಪಟ್ಟು ಕೊಳ್ಳೋಣವೆಂದರೆ, ಈ ವಿಚಾರದಲ್ಲಿ ಸರ್ಕಾರಿ ಆರ್ಡರ್ ಆಗಿದ್ದರೂ ಕೆಲವು ಅಧಿಕಾರಿಗಳು ಕಾಠಿಣ್ಯ ಮನೋಭಾವನೆಯನ್ನು ತೋರಿಸುತ್ತಿರುವುದನ್ನು ವಿಧಿ ಇಲ್ಲದೇ ಸರ್ಕಾರದ ಗಮನಕ್ಕೆ ತರಬೇಕಾಗಿದೆ.

Mr. SPEAKER.—This matter has been sufficiently discussed.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು ಪುನಃ ಈ ವಿಚಾರವನ್ನು ದೀರ್ಘವಾಗಿ ಚರ್ಚಿಸಬೇಕೆಂದಿಲ್ಲ. ಆದರೂ ಸರ್ಕಾರದವರು ಎಲ್ಲ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಒಂದು ಆರ್ಡರ್ ಹೊರಡಿಸಿರುವಾಗ ಅದಕ್ಕೆ ಪೂರ್ಣ ಮನ್ನಣೆಯನ್ನು ಪ್ರತಿಯೊಬ್ಬ ಅಧಿಕಾರಿಯೂ ಕೊಡಬೇಕಾದುದು ಅತ್ಯಗತ್ಯವೆಂಬ ವಿಷಯವನ್ನು ಮಾತ್ರ ತಿಳಿಸುತ್ತಿದ್ದೇನೆ. ಆ ರೀತಿ ಮನ್ನಣೆ ದೊರೆತರೇ ಸರ್ಕಾರದ ಉದ್ದೇಶ ಸಾಧನೆಯಾಗಿ ದೇಶಕ್ಕೂ ಕಲ್ಯಾಣವುಂಟಾಗುತ್ತದೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

***Sri M. V. RAMA RAO** (Tumkur).—Sir, I shall confine my observations on the Appropriation Bill to one particular item contained in the Schedule to this Bill. It is described as "Vote No. 42" and pertains to the supplementary expenditure proposed to be incurred in respect of Capital Account of Electricity Schemes outside the Revenue account. The total amount proposed to be expended is of the order of Rs. 25,00,000. The major sum of this very large sum of money relates to the expenditure proposed to be incurred for power supply to irrigation pumps at a cost of Rs. 15 lakhs and power supply to irrigation in the transferred territory at a cost of Rs. 10 lakhs. These items will be found in page 11 of the supplementary estimates that have been previously discussed in this House. It appears to me that these relate to two different kinds of expenditure, which are not adequately explained.

Further, it is not my intention to make any observations in respect of these large sums of money because it is explained that that sum is required for the installation of electric pumps and for supply of power to irrigation pumps in certain areas, especially in the area in which these pumps are proposed to be installed, namely Bellary District. Sir, I do not want to make any special observations on these items. I will pass on to other items in respect of which no explanations have been made but only token grants are asked for. It will be seen that in respect of all the other demands comprised in the Schedule to this Appropriation Bill, no new service grants are asked for. But in respect of Demand No. 42, there are two big items of expenditure proposed and excepting items 1 and 6 referring to those big items, the other items, four in number—2nd, 3rd, 4th and 5th items—relate to grant of expenditure to meet new services. Item No. 2 is described in this Book on page 11 as follows.—

> "To meet the Frequency Conversion at Thippagondanahalli Water Works, Nelamangala, Magadi, Kunigal, Amruthur and Marconahalli and surrounding areas. These works were not foreseen at the time of preparation of Budget Estimates of the current year. The estimated cost of the works is Rs. 4,30,000 and is awaiting sanction. This is a new service and a token vote of Rs. 100 is sought for."

It is not clear why after the estimate of Rs. 4,30,000 has been prepared, sanction by the appropriate authority could not have been accorded to the estimate and the entire estimate placed before the House for its vote; why the Government seek to obtain a token grant of Rs. 100 for incurring expenditure in respect of which an estimate is said to have been prepared and is said to have been not sanctioned. This is a thing which may not be easily comprehended.

It is also said that these works were unforeseen at the time of preparation of the Budget Estimates of 1954-55. I ask why. Why could they not have foreseen? What was it that prevented the vision of Government extending to this particular place at the time of preparation of the Budget Estimates? Is it because these estimates are being prepared haphazardly and in a manner in which the Government are driven to this or other expenditure on account of demands in particular areas or is it because the department has no programme drawn up for a particular area in question ? What is the reason ? Why should not this demand have been foreseen ? Why no adequate provision was made at the time of the preparation of Budget Estimates for the current year ? I do not suggest that expenditure should not be incurred for the frequency conversion at Thippagondanahalli Water Works, Nelamangala, Magadi, Kunigal, Amruthur and Marconahalli and surrounding areas. These areas are represented by Hon'ble Members who are my esteemed and dearest friends whose friendship I want to retain in spite of the observation I make on this Bill. But what is not explained to this House is what prevented the Government from making these estimates at the time of the preparation of the Budget Estimates for the current year.

Sri A. BHEEMAPPA NAIK.—A token vote of Rs. 100 is sought for. I want to know whether that is a mistake. What is meant by token vote ?

Sri A. G. RAMACHANDRA RAO.—It means token grant.

Sri A. BHEEMAPPA NAIK.—But it is put down as token vote.

Sri M. V. RAMA RAO.—Item No. 3 is also for a taken grant of Rs. 100. It is also in respect of a new service. It is described as expenditure to meet the cement-concreting of the road between Talaguppa and Jog. Sir, I have not had the advantage of travelling in this road till now. But I do hope that many Hon'ble Members have had that advantage and know the length of this road. Probably it is 10 miles or so ; or a little more or less. In any case cement-concreting of this road ought to cost very considerable amount of money and it would have been very much more reasonable if the Government had awaited the preparation of a detailed estimate for an important piece of work like this costing some considerable sum of money. Instead of that they merely ask for a token grant of Rs. 100 in respect of the new service the cost of which is not even estimated and Government do not claim that the cost of it has been estimated or that an estimate is under preparation. Nothing is said about any estimate in this item.

Then, item No. 4 : this is also a token grant for Rs. 100 and also in respect of a new service. The words 'new service' are underlined in respect of all these four items. This token grant is required for the electrification of Periyapatna, Kalhalli, Chilkunda and Kampalapura in Mysore District. As Periyapatna is the only taluk headquarter in the State which has not been electrified, the work of electrification is proposed to be taken up this year. This work was not contemplated while framing the current year's Budget. This is a new service and a token vote of Rs. 100 is sought for. Sir, the reason given for asking a token vote has got to be examined. This work was not contemplated while framing the current year's Budget. Although they knew that Periyapatna was the only taluk headquarter which had not been electrified inspite of the State having had electricity generated and distributed, it was not contemplated by the Government to electrify this taluk headquarter place. And therefore the Periyapatna people and people like me who are intimate, old and esteemed friends of the Hon'ble Member who now happens to represent the Periyapatna constituency, Sri H. M. Channabasappa, should congratulate him on his election to this House, because this item shows what great potentiality Sri Channabasappa has for being effective ; and let us remember that these estimates were prepared, if the printing of this Book is any evidence, on 4th October 1954. Therefore the probability of Sri H. M. Channabasappa being elected as member of this House for the Periyapatna Constituency has driven the Government to prepare itself for the incurring of expenditure for the electrification of Periyapatna Taluk. It is extremely gratifying and I hope the Government will be as responsive in respect of demands for electrification of other areas in the State which have remained without electricity for years and years in spite of representations having been made perhaps by members less effective and possessing less potentiality for being effective than my

(SRI M. V. RAMA RAO.)

friend Sri H. M. Channabasappa. I particularly requested my friend who represents the Periyapatna Constituency to be present in this House and I told him that I would be going to make a reference to this matter. I requested him to be present so that he may not have any misapprehension of what I was saying in the matter.

Sir, I quite understand the Government taking up urgent works in great hurry without details of the expenditure proposed to be incurred being prepared. I also do not object to any Government bringing forward proposals for supplementary grants and asking the House to vote the supplementary demands in order to enable the Government to meet these cases of urgent expenditure. But I do object and I emphatically object and every Hon'ble Member of this House, I believe, equally emphatically objects to any expenditure being incurred in regard to a work in respect of which estimates had not been prepared and the size and the dimensions of the work had not been determined in the manner in which they ought to be determined in the expenditure of funds. My friend Sri H. M. Channabasappa, who has himself been the President of the District Board in Mysore and has the reputation of being an able administrator, will, I am sure, share with me the objection to the proposed expenditure in this indeterminate manner upon a token vote for Rs. 100 in respect of an expenditure which is bound to go up to quite a few lakhs of rupees.

***Sri H. M. CHANNABASAPPA** (Periyapatna).—I would like to draw the attention of the Hon'ble Member to Rule 129 of the Rules of Procedure which says :

> " When funds to meet proposed expenditure on a new service can be made available by reappropriation, a demand for the grant of a token sum may be submitted to the vote of the Assembly, and, if the Assembly assents to the demand, funds may be so made available "

By way of a token grant of Rs. 100 the entire amount required for this item can be met by re-appropriation. It does not involve any extra expenditure.

Sri M. V. RAMA RAO.—Even if it involves extra expenditure, I should welcome it. What I was trying to emphasise was the manner in which the Government goes about this business in expending public funds and the manner in which it selects the works, the manner in which it gives preference, the manner in which priorities are determined by the Government. Item No. 5 :

> " The electrification of Kampli in Bellary District is proposed to be taken up and as this is a new service a token vote of Rs. 100 is asked for."

This is another instance. Sir, I do not want to labour this point further than I have already done.

What I wish to say is, I do expect my esteemed friends who adorn the treasury benches at the moment to explain these matters satisfactorily, because earlier in the course of the day my esteemed friend the Law Minister made an observation that certain matters to which I made reference immediately after the question-hour was over, should not have been made, because the particular Minister to whom those references were addressed was not present in the House. I do not except every Minister to be present in this House and I cannot expect Hon'ble Members to be under any necessity to make observations only when the concerned Ministers are present in the House. It is the business of the Minister concerned to be present in the House when observations are made relating to his subjects. I expect the Minister in charge of finance to be present in the House when demands are moved. The Bill is presented in his name. It is his business to pilot this Bill. I have no objection however to my esteemed friend the Law Minister and the Minister for Local Self-Government to deputise for the Finance Minister, but they should be prepared to take the responsibility to answer the objections raised and take note of observations made by Hon'ble Members. To expect and to ask the Members to make their observations only when the particular Minister is present in the House is to ask them to be silent for the major part of the day.

Sri A. G. RAMACHANDRA RAO.—Sir, my only objection was to personal references being made. Any references pertaining to the subject on hand can certainly be made. I only request the Hon'ble Member to note this.

Mr. SPEAKER.—Now we shall go on.

Sri M. V. RAMA RAO.—I cannot accept I made any personal references to the Chief Minister. I challenge I have not made personal references.

Sri A. G. RAMACHANDRA RAO.—Not now, previously.

Mr. SPEAKER.—We shall go on with the subject on hand.

Sri M. V. RAMA RAO.—Sir, what I wish to say is that, in determining the order of priorities, Government must have a programme in asking for expenditure being incurred and money being voted; Government must be able to present a satisfactory statement of the urgency which made it necessary for them to ask for this supplementary grant.

Another important unforeseen expenditure, which the Government could have easily foreseen, is the frequency conversion works or whatever it is, that is proposed to be done at Thippagondanahalli. I can understand there may not be perhaps political arguments affecting every case. There could not have been any thing of that nature in regard to the work at Thippagondanahalli. But it is absolutely inconceivable why Government could not have foreseen the necessity for this item of expenditure being incurred in proper time and estimates prepared in proper time.

Then, Sir, with regard to another work proposed to be undertaken is the construction of transmission lines, etc., it is unfortunate that the Hon'ble Minister in charge of electricity portfolio is absent from this House and I hope I shall not be understood as making a personal reference because he is not present and I hope my friends in the Treasury Bench will bear me out. I only say with regard to the facts. In the case of construction and maintenance of these transmission lines the Government or the head of the Electrical Department does not seem to know that there is a rule or something to the effect of a rule concerning the stay of a Government officer in that place for a period exceeding three years. My esteemed friend Sri Hutchamasthi Gowda put an interpellation yesterday or the day before relating to the stay of certain officer for a period exceeding three years and elicited certain answers from the Chief Minister himself. There appears to be a rule that normally a Government employee should not be kept in the same place for over three years. There is a Transmission Line Inspector in my place, Tumkur Town, who has been there for over six years, and he is kept on. Another Transmission Line Inspector who was transferred to that place in May 1954 was ordered out of Tumkur in October 1954. I approached the Minister concerned but no remedy was forthcoming. The man was ordered out of Tumkur and had to shift himself to Mysore. He has his family and his children were admitted to schools and colleges. He was originally transferred from Pavagada to Tumkur; he came to Tumkur in May and was shunted out in October, while another Transmission Line Inspector is kept on there for six years running and is allowed to remain for the seventh year! Is there any method in carrying on the administration? Is it intended that the rule relating to transfer of Government employees should be applied normally to all, or is it intended for those who have no spokesmen in this House and applies only to those who cannot get their claims urged by proper quarters and does not apply to those who can get things done. This is an absolutely unsatisfactory state of affairs. I do hope that the Hon'ble Minister in charge of the portfolio who is not present in this House will, at least after reading the proceedings of this House, apply his mind to these matters and see that these defects are remedied.

4 P.M.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಈ ಮೈಸೂರು ಅಪ್ರೋಪ್ರಿಯೇಷನ್ ಬಿಲ್ಲನ್ನು ಅಂಗೀಕರಿಸುತ್ತಾ 40ನೇ ನಂಬರಿನ ಡಿಮ್ಯಾಂಡ್ ವಿಚಾರದಲ್ಲಿ ಮಾತ್ರ ಒಂದೆರಡು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಭದ್ರಾ ಅಣೆಕಟ್ಟಿನ ಕೆಲಸ ಪ್ರಾರಂಭವಾದ ಮೇಲೆ ಹೋದ ವರ್ಷದಿಂದ ಈ ಕೆಲಸ ಬಹಳ ಚುರುಕಾಗಿ ನಡೆಯುತ್ತಾ ಇದೆ. ಆ ಬಗ್ಗೆ ಇಂಡಿಯಾ ಸರ್ಕಾರದವರು ಕೊಡತಕ್ಕ ಸಹಾಯದ ಜೊತೆಗೆ ಮೈಸೂರು ಸರ್ಕಾರದವರೂ ಸಹ ಹಣ ವಿನಿಯೋಗಮಾಡಿ ಬಹಳ ಚುರುಕಾಗಿ ಕೆಲಸ ಮಾಡುತ್ತಾ ಇದ್ದಾರೆ. ಅದಕ್ಕಾಗಿ ಉಭಯ ಸರ್ಕಾರಗಳಿಗೂ ಬಹಳ ವಂದನೆಗಳನ್ನರ್ಪಿಸಬೇಕಾಗಿದೆ. ಆದರೆ ಅವರು ಒಂದು ಕರ್ತವ್ಯ ಲೋಪ ಮಾಡುತ್ತಾ ಇದ್ದಾರೆ ಎಂಬುದನ್ನು ಅವರ ಗಮನಕ್ಕೆ ತರಬೇಕಾಗಿದೆ. ಅದು ಬಹಳ ಗುರುತರವಾದದ್ದು ಮತ್ತು ಈ ಬಗ್ಗೆ ತ್ವರಿತವಾಗಿ ಸೂಕ್ತಕ್ರಮ ತೆಗೆದುಕೊಳ್ಳಬೇಕಾಗಿದೆ. ಅದು ಏನೆಂದರೆ, ಈ ಭದ್ರಾ ಅಣೆಕಟ್ಟಿನ ಕೆಲಸ ಶುರು ಆದಮೇಲೆ ಭದ್ರಾ ಅಣೆಕಟ್ಟಿನ ರೈಟ್ ಬ್ಯಾಂಕ್ ಮತ್ತು ಲೆಫ್ಟ್ ಬ್ಯಾಂಕಿನಲ್ಲಿ ಕೆಲಸ ಮಾಡುವವರು ಮತ್ತು ಅವರನ್ನವಲಂಬಿಸಿರುವ ಜನರೆಲ್ಲ ಸೇರಿ ಹೆಚ್ಚು ಕಡಮೆ ಒಂದು ಲಕ್ಷ ಜನ ವಾಸ ಮಾಡುತ್ತಾ ಇದ್ದಾರೆ. ಲಕ್ಕವಳ್ಳಿ ಸುತ್ತಮುತ್ತಲೂ ಸಹ 9 ಲೇಬರ್ ಕ್ಯಾಂಪುಗಳು ಇವೆ, 11 ಸಾವಿರ ಜನ ಇದ್ದಾರೆ. ತರೀಕೆರೆ, ಲಕ್ಕವಳ್ಳಿ ರಸ್ತೆಯ ಮಾರ್ಗದಲ್ಲಿ 8 ಕ್ಯಾಂಪುಗಳಿವೆ, 9,600 ಜನ ಇದ್ದಾರೆ. ಬಿ. ಎಚ್. ರಸ್ತೆಯ ಮಾರ್ಗದಲ್ಲಿ 5 ಕ್ಯಾಂಪುಗಳಿವೆ, 10 ಸಾವಿರ ಜನ ಇದ್ದಾರೆ. ಹೀಗೆ ಎಲ್ಲಾ ಒಟ್ಟು 50 ಸಾವಿರ ಜನ ಕೆಲಸ ಮಾಡುತ್ತಾ ಇದ್ದಾರೆ. ಹೊರಗಡೆಯಿಂದ ಎಂದರೆ ಕಡಪ ಮುಂತಾದ ಕಡೆಗಳಿಂದಲೂ ಮತ್ತು ಮದ್ರಾಸಿನ ಕಡೆಯಿಂದಲೂ ತಮಿಳರು ಪ್ರತಿ ದಿವಸ ಲಕ್ಕವಳ್ಳಿ ಕಡೆಗೆ ಬರುತ್ತಾ ಇದ್ದಾರೆ. ಈಗ ಅಲ್ಲಿರತಕ್ಕ ಆರೋಗ್ಯ ಪರಿಸ್ಥಿತಿಯನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಈ ರೀತಿ ಹೊರಗಡೆಯಿಂದ ಬಂದ ಜನರು ಎಲ್ಲಾ ಕಡೆಯೂ ಸಹ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ನಿರ್ದಿಷ್ಟವಾದ ಕ್ರಮದಲ್ಲಿ ಮನೆಗಳನ್ನು ಕಟ್ಟಿಕೊಂಡಿಲ್ಲ, ಅಲ್ಲಿ ನೀರಿನ ಸೌಕರ್ಯವಿಲ್ಲ, ಸ್ಯಾನಿಟೇಷನ್ ಆರೋಗ್ಯ ನಿಯಮಗಳಿಗನುಸಾರವಾಗಿ ಯಾವ ವ್ಯವಸ್ಥೆಯೂ ಇಲ್ಲ ಎಂದು ಹೇಳಿದರೂ ತಪ್ಪಾಗಲಾರದು, ಕಾಲರಾ ಅಥವಾ ಅದರಂತೆ ಕಾಣುವ ರೋಗ ಉಲ್ಬಣಾವಸ್ಥೆಯಲ್ಲಿದೆ. ಸುಮಾರು ಇಲ್ಲಿಯವರೆಗೂ ಅಂದರೆ ಈ ಮಳೆಗಾಲದಲ್ಲೂ ಸಹ ಕನಿಷ್ಟವೆಂದರೆ 200-300 ಜನ ಸತ್ತಿದ್ದಾರೆ ಎಂದರೆ ಬಹಳ ವಿಷಾದವಾಗುತ್ತದೆ. ಈ ಬಗ್ಗೆ ಲಕ್ಕವಳ್ಳಿಯಿಂದ ನನಗೆ ಟೆಲಿಗ್ರಾಂ ಬಂತು; ಅದನ್ನೂ ಸಹ ಸರ್ಕಾರದವರ ಗಮನಕ್ಕೆ ತರಲಾಗಿದೆ. ಈಗಲೂ ಸಹ ಜನ ಅಲ್ಲಿ ಸಾಯುತ್ತಾ ಇದ್ದಾರೆ. ಅಲ್ಲಿನ ಪರಿಸ್ಥಿತಿ ಈ ದಿನ ಹೇಗಿದೆ ಎಂದರೆ, ಒಂದೇ ಒಂದು ನಿದರ್ಶನ ಕೊಟ್ಟರೆ ಸಾಕೆಂದು ಕಾಣುತ್ತದೆ. ಹೊರಗಡೆಯಿಂದ ತಮಿಳು ನಾಡಿನ ಜನ ಗುಂಪುಗುಂಪಾಗಿ ಬರುತ್ತಾ ಇದ್ದಾರೆ. ಬಂದಕೂಡಲೇ ಅವರಿಗೆ ಇನಾಕ್ಯುಲೇಷನ್ ಮಾಡಲು ಸರಿಯಾದ ಕ್ರಮ ಇಲ್ಲ. ಹೀಗಾಗಿ ಪ್ರತಿ ತಿಂಗಳೂ ಅನೇಕ ಜನ ಸಾಯುತ್ತಾ ಇದ್ದಾರೆ. ಅವರ ಜೀವನ ಕ್ರಮ ಹೇಗೆ ಇದೆ ಎಂದರೆ ಒಂದು ಉದಾಹರಣೆ ಹೇಳಿದರೆ ಎಲ್ಲರಿಗೂ ಗೊತ್ತಾಗುತ್ತದೆ. ಅವರು ಅಲ್ಲಿಗೆ ಬಂದಕೂಡಲೇ ಒಂದೊಂದು ಗುಂಪಿನವರು ತಮ್ಮಲ್ಲಿ ಯಾರಾದರೂ ಒಬ್ಬರನ್ನು ತರೀಕೆರೆ ಟೌನ್ ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಭಿಕ್ಷೆ ಎತ್ತಲಿಕ್ಕೆ ಕಳುಹಿಸುತ್ತಾರೆ. ಹೀಗೆ ಬೆಳಗ್ಗಿನಿಂದ ಸಾಯಂಕಾಲದವರೆಗೂ ಭಿಕ್ಷೆಮಾಡಿ ತಂದು, ಒಂದು ಮಡಕೆಯಲ್ಲಿ ನೀರು ಹಾಕಿ, ಅದರಲ್ಲಿ ಭಿಕ್ಷೆಮಾಡಿ ತಂದಿದ್ದನ್ನು ಹಾಕುತ್ತಾರೆ. ಬೆಳಿಗ್ಗೆ ಎದ್ದು ಅದರ ಗಂಜಿಯನ್ನು ಕುಡಿದು ಕೆಲಸಕ್ಕೆ ಹೊರಡುತ್ತಾರೆ. ಕೆಲಸದಿಂದ ಬಂದಮೇಲೂ ಅದನ್ನು ಉಪಯೋಗಿಸುತ್ತಾರೆ. ಹೀಗೆಯೇ ಪ್ರತಿ ದಿವಸ ಅದೇ ಮಡಕೆಗೆ ಹಾಕುವುದು, ಕೆಲಸಕ್ಕೆ ಹೋಗುವುದು, ಕೆಲಸದಿಂದ ಬಂದಕೂಡಲೇ ಅದನ್ನೇ ತಿನ್ನುವುದು, ಇದರ ಜೊತೆಗೆ ಅದರಲ್ಲೇ ಹಸಿ ಹಿಟ್ಟನ್ನು ನೀರಿನಲ್ಲಿ ಕಲಸಿಕೊಂಡು ತಿನ್ನುವುದು. ಇದರಿಂದ ಏನಾಗಿದೆ ಎಂದರೆ, ದಿನದಿನಕ್ಕೂ ತರೀಕೆರೆ, ಲಕ್ಕವಳ್ಳಿ, ಬಿ. ಎಚ್. ರಸ್ತೆಯಲ್ಲಿ ಪ್ರತಿ ದಿನವೂ ವಾಂತಿ ಭೇದಿ ರೋಗದಿಂದ ನರಳಿ ಸತ್ತಿರುವ ಅಥವಾ ಸಾಯುತ್ತಿರುವವರನ್ನು ಕಾಣುವುದು ಸಾಮಾನ್ಯವಾಗಿದೆ. ತರೀಕೆರೆಯಲ್ಲಿ ಒಂದು ಹೆಣ ಮೂರುದಿವಸ ಅಲ್ಲೇ ಬಿದ್ದಿದ್ದುದನ್ನು ನಾನೇ ನೋಡಿದ್ದೇನೆ. ಈ ಜನರ ನಡವಳಿಕೆಗಳು ಬಹಳ ವಿಚಿತ್ರವಾಗಿವೆ. ಅವರು ತಮ್ಮಲ್ಲಿ ಯಾರಾದರೂ ಸತ್ತು ಹೋದ ಎಂದರೆ ಅವನನ್ನು ಅಲ್ಲೇ ಬಿಟ್ಟುಬಿಟ್ಟು ಹೊರಟುಹೋಗುತ್ತಾರೆ. ಆಮೇಲೆ ಮುನಿಸಿಪಾಲಿಟಿಯವರು ಅಥವಾ ಪೋಲೀಸು ಇಲಾಖೆಯವರು ಅಲ್ಲಿಗೆ ಹೋಗಿ ಮುಂದಿನ ವ್ಯವಸ್ಥೆ ಮಾಡಬೇಕಾಗಿದೆ. ಈ ವಿಚಾರದಲ್ಲಿ ಮೂರು ನಾಲ್ಕು ಸಾರಿ ಸೂಕ್ತಪರಿಹಾರ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಲು ಸಂಬಂಧಪಟ್ಟ ಪಿ.ಡಬ್ಲ್ಯು.ಡಿ. ಮತ್ತು ಹೆಲ್ತ್ ಇಲಾಖೆಯವರಿಗೆ ಹೇಳಿ ಸಾಕಾಯಿತು. ಅಲ್ಲಿರತಕ್ಕ ಕೆಲಸಗಾರರು ಬಹಳ ಬಡವರು, ಅವರಿಗೆ ನೀರಿನ ಸೌಕರ್ಯ ಇಲ್ಲ. ಈಗೇನೋ ನೀರಿನ ಸರಬರಾಯಿಗೆ ಎರಡು ಲಾರಿಗಳನ್ನು ಕೊಟ್ಟಿದ್ದಾರೆ. ಆದರೂ ಒಂದು ಟ್ಯಾಂಕ್ ಭರ್ತಿ ಮಾಡಿದರೆ ಆ ನೀರು ಸಾಕಾಗುವುದಿಲ್ಲ ಮತ್ತು ಅಲ್ಲಿಗೆ ಹೊರಗಿನಿಂದ ಬರತಕ್ಕ ಜನರಿಗೆ ಸರಿಯಾಗಿ ಇನಾಕ್ಯುಲೇಷನ್ ಮಾಡುತ್ತಿಲ್ಲ. ಈ ಬಗ್ಗೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಮಳೆಗಾಲದಲ್ಲೇ ಈ ಪರಿಸ್ಥಿತಿ ಉಂಟಾಗಿರುವಾಗ ಬೇಸಿಗೆಯಲ್ಲಿ ಯಾವ ರೀತಿ ಆಗುತ್ತದೆಯೋ! ತರೀಕೆರೆ ಟೌನನ್ನೇ ಖಾಲಿ ಮಾಡಬೇಕಾಗುತ್ತದೆಯೋ, ಏನೋ ಎಂಬ ಭೀಕರ ಪರಿಸ್ಥಿತಿ ಉದ್ಭವಿಸಿದೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತರುತ್ತಾ ಈ ಬಗ್ಗೆ ತೀವ್ರ ಕಾರ್ಯಕ್ರಮವನ್ನು ಅತಿಜಾಗ್ರತೆಯಾಗಿ ಕೈಕೊಳ್ಳಲು ಅತಿ ಆಗ್ರಹಪೂರ್ವಕವಾಗಿ ಒತ್ತಾಯಪಡಿಸುತ್ತೇನೆ. ಹೆಲ್ತ್ ಇಲಾಖೆಯವರು ಈ ಬಗ್ಗೆ 2 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರದವರ ಮಂಜೂರಾತಿಗಾಗಿ ಕಳುಹಿಸಿದ್ದಾರೆ ಎಂದು ಕೇಳಿದ್ದೇವೆ. ಸುಮಾರು 20 ಕೋಟಿ ರೂಪಾಯಿ ಖರ್ಚು ಮಾಡುವ ಕಡೆ—ಜೋಗ್‌ನಲ್ಲೂ ಸಹ ಈ ಬಗ್ಗೆ ಬಹಳ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡಿದ್ದರು, ಜೋಗ್‌ನಲ್ಲಿ ಈ ತರಹ ಭೀಕರ ಪರಿಸ್ಥಿತಿಯಾಗುವುದಕ್ಕೆ ಅವಕಾಶವಾಗಲಿಲ್ಲ—ಒಂದು ಲಕ್ಷ ರೂಪಾಯಿಗಳನ್ನು ಹೆಲ್ತ್ ಮತ್ತು ಸ್ಯಾನಿಟೇಷನ್‌ಗಾಗಿ ಏತಕ್ಕೆ ಖರ್ಚು ಮಾಡಬಾರದೆಂದು ಕೇಳುತ್ತೇನೆ. ಈ ರೈಟ್ ಮತ್ತು ಲೆಫ್ಟ್ ಬ್ಯಾಂಕ್ ಚಾನಲ್ ಕಡೆಗಳಲ್ಲಿ ಅಸಿಸ್ಟೆಂಟ್ ಹೆಲ್ತ್ ಆಫೀಸರುಗಳು, ಸ್ಯಾನಿಟರಿ ಇನ್‌ಸ್ಪೆಕ್ಟರುಗಳನ್ನು ನಿಯಮಿಸಬೇಕು. ಈ ಕ್ಯಾಂಪ್‌ಗಳನ್ನು ನಿರ್ದಿಷ್ಟವಾದ ಸ್ಥಳಗಳಲ್ಲಿ ಸ್ಥಾಪಿಸಬೇಕು, ಸ್ಯಾನಿಟರಿ ವ್ಯವಸ್ಥೆ ಮಾಡಬೇಕು, ನೀರಿನ ಸೌಕರ್ಯಕೊಡಬೇಕು. ಐಸೋಲೇಷನ್ ಕ್ಯಾಂಪು ಇದೆ.

ಅದು 8-10 ಮೈಲಿ ದೂರದಲ್ಲಿರುವುದರಿಂದ ಅಲ್ಲಿಗೆ ಕರೆದುಕೊಂಡು ಹೋಗುವಹೊತ್ತಿಗೆ ರೋಗಿಯು ಸತ್ತುಹೋಗುವ ಸಂಭವವಿರುತ್ತದೆ. ಇದರಿಂದ ಸತ್ತವನನ್ನು ಅಲ್ಲೇ ದಾರಿಯಲ್ಲಿ ಬಿಟ್ಟು ಹೊರಟು ಹೋಗುತ್ತಾರೆ. ಪೋಲೀಸ್‌ನವರು ಹೋಗಿ ಹೆಣ ಸಾಗಹಾಕಬೇಕು. ಪಿ. ಡಬ್ಲ್ಯು. ಡಿ. ಇಲಾಖೆಯವರು ಅವರ ಕೆಲಸವನ್ನು ನೋಡಿಕೊಳ್ಳುವುದೇ ಸಾಕಾಗಿದೆ ಎಂದಮೇಲೆ ಹೆಲ್ತ್ ಇಲಾಖೆಯವರು ಈ ಬಗ್ಗೆ ಸೂಕ್ತ ಕಾರ್ಯಕ್ರಮ ಜಾಗ್ರತೆ ತೆಗೆದುಕೊಳ್ಳಬೇಕಾದದ್ದು ಅಗತ್ಯವಾಗಿದೆ. ಲೆಫ್ಟ್ ಬ್ಯಾಂಕ್ ಛಾನಲ್ ಬಳಿ ಮತ್ತು ಲಕ್ಕವಳ್ಳಿಯಲ್ಲಿ ಇದೇ ರೀತಿಯಿದೆ. ಅಲ್ಲಿ ನೀರು ಸರಬರಾಯಿಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಲಕ್ಕವಳ್ಳಿ ಟವನ್ನಿಗೆ 1949ರಲ್ಲಿ ಅಂದಾಜ ಮಾಡಿದರೂ ಸಹ 1954ರ ವರೆಗೂ ಲಕ್ಕವಳ್ಳಿಗೆ ನೀರು ಸರಬರಾಯಿ ಮಾಡಿರುವುದಿಲ್ಲ. ಅದೇ ಬಾಕಿಕಡೆ ಕ್ಯಾಂಪಿಗೆ ಸರಬರಾಯಿ ಮಾಡಿದೆ; ಟೌನಿಗೆ ವ್ಯವಸ್ಥೆ ಮಾಡಿಲ್ಲ. ಎಷ್ಟೋ ಸಲ ಕೇಳಿದ್ದರೂ ಸಹ ಈ ದಿವಸದವರೆಗೂ ನೀರು ಸರಬರಾಯಿ ಮಾಡಿಲ್ಲ. ಅಣೆಕಟ್ಟಿನ ಒಂದುಕಡೆ ಇರುವ ಕೆಲಸಮಾಡುವ ಜನರಿಗೆ ಮಾತ್ರ ಸಹಾಯಮಾಡಿ ಇನ್ನೊಂದುಕಡೆ ಇರುವ ಮತ್ತು ಹತ್ತಿರವಿರುವ ಲಕ್ಕವಳ್ಳಿ ಗ್ರಾಮದಲ್ಲಿ ವಾಸಮಾಡುವ ಕೂಲಿಗಾರರಿಗೆ ಮಾಡದಿರುವುದು ಸೂಕ್ತವಲ್ಲ. ಇದಕ್ಕೆ ಕೂಡಲೆ ಗಮನ ಕೊಡಬೇಕು. ಲೆಫ್ಟ್ ಬ್ಯಾಂಕ್ ಛಾನಲ್ ಮತ್ತು ರೈಟ್ ಬ್ಯಾಂಕ್ ಛಾನಲ್ ಪ್ರದೇಶಕ್ಕೆ ಬೇರೆ ಆರೋಗ್ಯ ಇಲಾಖಾ ಸಿಬ್ಬಂದಿಯನ್ನು ಎಂದರೆ, ಹೆಲ್ತ್ ಆಫೀಸರರು ಸ್ಯಾನಿಟರಿ ಇನ್ಸ್‌ಪೆಕ್ಟರು ತೋಟಿಗಳೇ ಮುಂತಾದವರನ್ನು ನೇಮಿಸಬೇಕು. ಐಸೊಲೇಷನ್ ಕ್ಯಾಂಪುಗಳನ್ನು ಸ್ಥಾಪಿಸಬೇಕು. ಡಿ.ಡಿ.ಟಿ. ಸ್ಪ್ರೇ ಮಾಡಿಸಬೇಕು; ಮೊಬೈಲ್ ಡಿಸ್ಪೆನ್ಸರಿ ಮಾಡಿದರೆ ಬಹಳ ಅನುಕೂಲ. ಕಾಲರಾ ಇನಾಕ್ಯುಲೇಷನ್ ಬಗ್ಗೆ ಸರ್ಟಿಫಿಕೇಟ್ ಇಲ್ಲದೆ ಯಾರನ್ನೂ ಕ್ಯಾಂಪಿನೊಳಕ್ಕೆ ಬಿಡಕೂಡದು. ಹೀಗೆ ಒಂದು ನಿರ್ದಿಷ್ಟವಾದ ಯೋಜನೆ ಮಾಡಿ ಕೆಲಸ ಮಾಡಬೇಕು. ಈ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳುತ್ತಾರೆಂದು ನಂಬಿ ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಒಪ್ಪಬಹುದೆಂದು ಸೂಚಿಸಬಯಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಈಗತಾನೆ ಮಾತನಾಡಿದ ಶ್ರೀ ಟಿ. ಸಿ. ಬಸಪ್ಪನವರು ಭದ್ರನಾಲೆ ಕೆಲಸಗಾರರ ಅನಾರೋಗ್ಯ ಪರಿಸ್ಥಿತಿಯಿಂದ ತರೀಕೆರೆ ತಾಲ್ಲೂಕಿನಲ್ಲಿ ಯಾವ ವಿಧವಾದ ಕಳವಳವುಂಟಾಗಿದೆಯೆಂದು ಹೇಳಿದರೋ ಅದೇರೀತಿಯಲ್ಲಿ ಅಷ್ಟೇ ಕಳವಳ ಅದರ ಪಕ್ಕದ ತಾಲ್ಲೂಕಾದ ಭದ್ರಾವತಿಯಲ್ಲೂ ಉಂಟಾಗಿದೆಯೆಂದು ಹೇಳಬೇಕಾಗಿದೆ. ಅಷ್ಟೇ ಅಲ್ಲದೆ ಕೆಲಸ ಮುಂದುವರಿದ ಹಾಗೆ ಚನ್ನಗಿರಿ, ಚಿತ್ರದುರ್ಗ ತಾಲ್ಲೂಕುಗಳಲ್ಲಿ ಕೆಲವುಕಡೆ ಕೆಲಸ ಪ್ರಾರಂಭವಾಗುತ್ತದೆ. ಅಲ್ಲಿಗೆ ಬಹಳ ಜನರು ಬಂದು ಕಾಲರ ಮುಂತಾದ ರೋಗಗಳಿಗೆ ತುತ್ತಾಗುತ್ತಾರೆ. ಅದನ್ನು ತಡೆಗಟ್ಟಲು ಈಗಲೇ ಕಾರ್ಯಕ್ರಮ ಕೈಕೊಳ್ಳಬೇಕು. 8-10 ವರ್ಷ ಭದ್ರನಾಲೆ ಕೆಲಸ ನಡೆದರೆ ಅಷ್ಟರವರೆಗೂ ಕಾಲರ ಶಾಶ್ವತವಾಗಿ ನಿಲ್ಲಬಹುದೆಂಬ ಭಯವಿದೆ. ಆ ರೀತಿಯಾಗಿ ಈ ರೋಗ ಹರಡದಂತೆ ಮಾಡಲು ಹೆಚ್ಚು ಗಮನ ಕೊಡಬೇಕು ಮತ್ತು ಅಲ್ಲಿ ಕೆಲಸಮಾಡುವ ಕೆಲಸಗಾರರ ಸ್ಥಿತಿಗತಿ ನೋಡಿ ಕಂಟ್ರಾಕ್ಟ್ ಲೇಬರ್ ಅನ್ನು ಮಾನವೀ ದೃಷ್ಟಿಯಿಂದ ನೋಡಿ ಅವರಿಗೆ ಬೇಕಾದ ಸೌಕರ್ಯ ಮಾಡಿಕೊಡಬೇಕು. ಕೆಲವು ದಿವಸಗಳ ಹಿಂದೆ ಪಾರ್ಲಿಮೆಂಟ್ ಸದಸ್ಯರು ಮಲೆನಾಡನ್ನು ನೋಡಲು ಬಂದಾಗ ಅಲ್ಲಿ ಕಷ್ಟಪಟ್ಟು ಕೆಲಸಮಾಡುವವರು ಕೇವಲ ರಸ್ತೆಗಳಲ್ಲಿ ಮರದಕೆಳಗೆ ಮಲಗುತ್ತಿದ್ದುದನ್ನು ನೋಡಿದರು, ಅಂಥ ಕೆಲಸಗಾರರಿಗೆ, ಫಾರೆಸ್ಟ್ ಇಲಾಖೆಯಲ್ಲಿ ಕೆಲಸಮಾಡುವವರಿಗೆ, ಜಿಂಕ್‌ಷೀಟು ಮುಂತಾದ್ದನ್ನು ಕೊಟ್ಟು ವಸತಿ ಸೌಕರ್ಯ ಕಲ್ಪಿಸಿಕೊಡುವಂತೆ ಕಲ್ಪಿಸಿ, ನಾಲೆಗಳಲ್ಲಿ ಕೆಲಸಮಾಡುವವರಿಗೆ ಮತ್ತು ಊರಿಂದೂರಿಗೆ ಬಂದು ಕೆಲಸಮಾಡುವವರಿಗೆ ವಸತಿಗೆ ಏರ್ಪಾಡು ಮಾಡುವುದು ಅಗತ್ಯ. , ಮತ್ತು ಅವರಿಗೆ ಉತ್ತಮವಾದ ಕುಡಿಯುವ ನೀರನ್ನೊದಗಿಸಲು ಅನುಕೂಲ ಮಾಡಬೇಕು. ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದನ್ನು ಕಡ್ಡಾಯಮಾಡಿ ಕೆಲಸಗಾರರಿಗೆ ಆರು ತಿಂಗಳಿಗೊಂದುಸಲ ಇನಾಕ್ಯುಲೇಷನ್ ಮಾಡುವುದು ಅತ್ಯಗತ್ಯ. ಇಷ್ಟು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಈ ಬಿಲ್ಲನ್ನು ಸಮರ್ಥಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ತಂದಿರುವ ಅಪ್ರೋಪ್ರಿಯೇಷನ್ ಬಿಲ್ಲನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಿಚ್ಛಿಸುತ್ತೇನೆ. ರೂರಲ್ ಡೆವಲಪ್‌ಮೆಂಟ್ ಸ್ಕೀಮಿಗೆ 13,83,500 ರೂಪಾಯಿಗಳನ್ನು ಕೇಳಿದ್ದೀರಿ. ಹಿಂದೆ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ರೂರಲ್ ವಾಟರ್ ಸಪ್ಲೈ ಸಮಿತಿಯಿರುತ್ತಿತ್ತು. ಆಗ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಲು ಹೆಚ್ಚು ಫಂಡನ್ನು ಕೊಡುತ್ತಿದ್ದರು. ಆದರೆ ಈಗ ನನಗೆ ತಿಳಿದಮಟ್ಟಿಗೆ ಅರ್ಬನ್ ಪ್ರದೇಶಕ್ಕೇ ಹೆಚ್ಚಾಗಿ ಖರ್ಚಾಗುತ್ತಿದೆ, ಶೇಕಡ 20 ಭಾಗ ಜನರಿರುವ ಪ್ರದೇಶಕ್ಕೆ ಹೆಚ್ಚಾಗಿ ನೀರಿನ ಅನುಕೂಲತೆಯನ್ನೊದಗಿಸುತ್ತಿದ್ದಾರೆ. ಉಳಿದ 80 ಭಾಗದ ಜನರಿಗೆ ನೀರಿನ ಅನುಕೂಲವಿಲ್ಲ. ಹರಿಜನರಿಗಂತೂ ನೀರಿಗೆ ಬಹಳ ತೊಂದರೆಯಾಗಿದೆ. ಈ ವಿಚಾರದಲ್ಲಿ ಅನೇಕ ಪ್ರಶ್ನೆಗಳನ್ನು ಹಾಕಿದ್ದೇನೆ. ಸಾಧಾರಣವಾಗಿ ಗ್ರಾಮಾಂತರಗಳಲ್ಲಿ ಕುಡಿಯಲು ಕೂಡ ನೀರಿಲ್ಲದೆ ನೀರನ್ನೆತ್ತಿಹಾಕುತ್ತಿದ್ದಾರೆ. ಸರ್ಕಾರದವರು ಇದಕ್ಕೆ ಬಹಳ ಹೆಚ್ಚಾಗಿ ಗಮನಕೊಟ್ಟು ಇಂಡಿಯಾ ಸರ್ಕಾರದಿಂದ ಗ್ರಾಂಟನ್ನಾದರೂ ಕೇಳಿ ಅನುಕೂಲ ಒದಗಿಸಬೇಕು. ಪ್ರಜಾಪ್ರಭುತ್ವ ಬಂದಮೇಲೂ ಸಹ ಹಿಂದಿದ್ದ ಸರ್ಕಾರದವರೇನು ಮಾಡುತ್ತಿದ್ದರೋ ಅದೇ ರೊಟೀನ್ ಕೆಲಸ ಮಾಡುತ್ತಿದ್ದಾರೆ. ಪಟ್ಟಣವಾಸಿಗಳು ಮಂತ್ರಿಗಳು ತಮ್ಮ ಕಡೆ ಬಂದಾಗ ಅಡ್ರೆಸ್ ಕೊಟ್ಟರೆ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಗ್ರಾಮಾಂತರಗಳಲ್ಲಿ ಖಂಡಿತವಾಗಿಯೂ ಕೂಡ ನೀರಿಗೆ ತುಂಬ ತೊಂದರೆಯಾಗಿದೆ. ಅದರಲ್ಲೂ ಹರಿಜನರ ಕಷ್ಟ ಹೇಳತೀರದು. ಸರ್ಕಾರ ಹೆಚ್ಚು ನಿಗಾ ಕೊಟ್ಟು ಇನ್ನು ಮುಂದಾದರೂ ನೀರಿನ ಅನುಕೂಲ ಮಾಡುತ್ತಾರೆಂದು ನಂಬಿದ್ದೇನೆ.

ಕೈಗಾರಿಕಾ ಇಲಾಖೆಗೆ 10,35,700 ರೂಪಾಯಿಗಳನ್ನು ಕೇಳಿದ್ದಾರೆ. ಸಾಧಾರಣವಾಗಿ ಯಾವ ತತ್ವದ ಮೇಲೆ ಹೋರಾಡುತ್ತಿದ್ದೇವೋ ಅದನ್ನು ಮರೆತಿದ್ದಾರೆಂಬ ಭಾವನೆಯಿದೆ. ಏಕೆಂದರೆ ಸಾಧಾರಣವಾಗಿ ಪ್ರತಿವರ್ಷವೂ ಖಾದಿ ಉದ್ಯಮಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಹಿಂದಿನ ಸರ್ಕಾರ ಸಹ ಅಷ್ಟನ್ನು ಒದಗಿಸುತ್ತಿತ್ತು. ಈಗ ಆ ಉದ್ಯಮಕ್ಕೆ ಕೊಡುತ್ತಿರುವುದನ್ನು ನೋಡಿದರೆ ಖಂಡಿತ ವ್ಯಸನವಾಗುತ್ತದೆ. ಇದಲ್ಲದೆ ಮಂತ್ರಿಗಳಾಗಿರುವವರು ಖಾದಿ ಹಾಕಿಕೊಂಡು ಬರುವಾಗ ಅಧಿಕಾರಿಗಳು ಉಣ್ಣೆಯ ಬಟ್ಟೆಗಳನ್ನು ನೀಟಾಗಿ ಹಾಕಿಕೊಂಡು

(ಶ್ರೀ ಟಿ ಹನುಮಯ್ಯ.)

ಅವರ ಮುಂದೆ ಓಡಾಡುತ್ತಾರೆ. ಆ ಅಧಿಕಾರಿಗಳೆಲ್ಲರೂ ಖಾದಿಯನ್ನೇ ಹಾಕಬೇಕೆಂದು ಏಕೆ ನಿರ್ಬಂಧ ಮಾಡಬಾರದು? ಪ್ರಜಾಪ್ರಭುತ್ವ ದೇಶದಲ್ಲಿರುವಾಗ ಎಲ್ಲಾ ಆಫೀಸರುಗಳೂ ಖಾದಿ ಹಾಕಬೇಕು, ಆಸ್ಪತ್ರೆಗಳಲ್ಲೂ ಮತ್ತು ಇತರ ಎಲ್ಲಾ ಇಲಾಖೆಗಳಲ್ಲೂ ಖಾದಿಯನ್ನೇ ಉಪಯೋಗಿಸಬೇಕು ಎಂದು ಒತ್ತಾಯ ಮಾಡಿದರೆ ಖಾದಿ ಉದ್ಯಮ ಹೆಚ್ಚಿ ಹೆಚ್ಚಾಗಿ ಹಳ್ಳಿಗಾಡಿನಲ್ಲಿರುವ ಖಾದಿ ಕೆಲಸಗಾರರಿಗೆ ಉದ್ಯೋಗ ದೊರೆಯುತ್ತದೆ. ಏಕೆಂದರೆ ಈ ದಿವಸ ಕೈಮಗ್ಗದವರಗೆ ಅನೇಕ ಸಂದರ್ಭಗಳಲ್ಲಿ ನೂಲು ಸಿಕ್ಕದೆ ಕಷ್ಟವಾಗುತ್ತಿದೆ. ಅಂಥವರಿಗೆ ಖಾದಿ ದಾರ ಕೊಟ್ಟು ಆ ಉದ್ಯಮಕ್ಕೆ ಸಹಾಯಮಾಡಬಹುದು. ಆದ್ದರಿಂದ ಮುಖ್ಯವಾಗಿ ಹಳ್ಳಿಗಾಡುಗಳಲ್ಲಿರುವ ಜನರಿಗೆ ಹೆಚ್ಚು ಕೆಲಸ ಕಲ್ಪಿಸಬೇಕಾದರೆ ಖಾದಿ ಉದ್ಯಮಕ್ಕೆ ತಕ್ಕಷ್ಟು ಪ್ರೋತ್ಸಾಹ ಕೊಡಬೇಕು.

ನ್ಯಾಷನಲ್ ಎಕ್ಸ್‌ಟೆನ್ಷನ್ ಸರ್ವಿಸ್‌ಗಾಗಿ ಇಂಡಿಯಾ ಸರ್ಕಾರದಿಂದ ಎರಡು ಲಕ್ಷ ರೂಪಾಯಿಗಳ ಸಾಲ ತೆಗೆದುಕೊಂಡು ಆ ಸಂಬಂಧದಲ್ಲಿ ಕೆಲಸಮಾಡುವವರಿಗೆ ಕ್ವಾರ್ಟರ್ಸ್ ಕಟ್ಟಬೇಕೆಂದಿದ್ದೀರಿ. ಆದರೆ ಆ ಕೆಲಸಕ್ಕಾಗಿ ನೇಮಕಮಾಡಲ್ಪಡುವವರು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಸುಮಾರು ಎರಡು ವರ್ಷಗಳಿರಬಹುದು. ಅಷ್ಟು ಅಲ್ಪ ಕಾಲಕ್ಕೋಸ್ಕರ ಅವರಿಗಾಗಿ ಕಟ್ಟಡ ನಿರ್ಮಾಣ ಮಾಡುವುದು ಉಚಿತವಲ್ಲ. ಖಾಯಂ ನೌಕರರಾದ ಅಮಲ್ದಾರರು ಮುಂತಾದವರಿಗೇ ಕಟ್ಟಡ ಕಟ್ಟಿಸಿಕೊಟ್ಟಿಲ್ಲದಿರುವಾಗ ಹಂಗಾಮಿಯಾಗಿರುವವರಿಗೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ. ಕ್ವಾರ್ಟರ್ಸ್ ಕಟ್ಟುವುದು ಸರಿಯಲ್ಲ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

***Sri R. ANANTARAMAN** (Chamarajapet).—Mr. Speaker, Sir, I want to say a few words about the disbursement of Advances and Loans. While welcoming the Bill, I wish to bring to the notice of the Hon'ble Minister that the Corporation has been requesting Government, both the Central and the State, for a loan of about 1½ crores for using it for removing the slums in the City. So far, they are not successful in getting a loan. Sir; there are 100 slums in Bangalore City area, mostly inhabited by Harijans. Nearly three lakhs of people live in these areas. The other day the Minister for Local Self-Government was saying that this year Rs. 50,000 was granted by the Government and Rs. 50,000 by the Corporation. But, this amount is not sufficient at all. In fact, it is not possible to remove even a small slum with this amount. Most of the Amelioration Fund is spent on villages and not on towns. In Bangalore the sites are so costly that it is beyond the reach of the poor Harijans to purchase them. In Madras, there is an Act to acquire sites in the city area and give them to Harijans at a nominal price. I had sent a motion that such a practice may be followed here also. But, it is not brought into effect. Even now, Government may acquire lands on a cheaper rate and dispose them of to these Harijans who live in these slums. If this had been done, no grant would have been asked for. The Corporation itself is not in a position to raise such a big loan. Either the State Government should recommend to the Centre or the State Government itself must come to the aid of the Corporation and give the loan. Sir, in Madras Sri Rajagopalachari used to visit the slum areas and grant some amount for the removal of the same. Some such method must be followed here also. At least in the next Budget, I hope, some amount would be allotted for granting loan to the Corporation for removing the slums.

4-30 P. M.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ರೂರಲ್ ಡೆವಲಪ್‌ಮೆಂಟ್ ಹೆಡ್ಡಿಗೆ ಸ್ವಲ್ಪ ಹಣವನ್ನು ನಮೂದಿಸಿದ್ದೀರಿ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸುಂಕದ ಕಟ್ಟೆ ಎಂಬ ಹಳ್ಳಿಯಲ್ಲಿ ಬಹಳ ವರ್ಷಗಳಿಂದ ಕುಡಿಯುವುದಕ್ಕೆ ನೀರಿಲ್ಲದೆ ಎರಡು ಮೂರು ಮೈಲಿಗಳ ದೂರದಿಂದ ಎತ್ತರವಾದ ದಿಣ್ಣೆ ಹತ್ತಿ ತಗ್ಗು ಇಳಿದು ನೀರು ತರಬೇಕಾದ ಸ್ಥಿತಿಯಿದೆ. ಇದಕ್ಕಾಗಿ ದೊಡ್ಡ ಪೈಪ್ ಲೈನ್ ಹಾಕಿ sluice ನಿಂದ ನೀರನ್ನು ಒದಗಿಸುತ್ತಿದ್ದಾರೆ. ಆದರೂ ಹಳ್ಳಿಯವರಿಗೆ ಕುಡಿಯುವ ನೀರಿನ ಅಭಾವ ತಪ್ಪಿಲ್ಲ. ಈ ವಿಚಾರವಾಗಿ ಸಂಬಂಧಪಟ್ಟ ಎಗ್ಜಿಕ್ಯುಟಿವ್ ಇಂಜನಿಯರಿಗೆ ಡೆಪ್ಯುಟಿ ಕಮಿಷನರೂ ಮತ್ತು ನಾನೂ ಎಷ್ಟು ಒತ್ತಾಯ ಮಾಡಿದರೂ ಸಾರ್ಥಕವಾಗಿಲ್ಲ. ಸರ್ಕಾರದವರು ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ. ಬೆಂಗಳೂರು ನಾರ್ತ್ ತಾಲ್ಲೂಕ್‌ನಲ್ಲಿಯೂ ಕುಡಿಯುವ ನೀರಿಗೆ ಬಹಳ ಅಭಾವವಾಗಿದೆ. ರಾಜಾನುಕುಂಟೆಯಲ್ಲಿಯೂ ಇದೇ ಪರಿಸ್ಥಿತಿ ಒದಗಿದೆ. ಈ ಪರಿಸ್ಥಿತಿ ನಮ್ಮ ಮಾನ್ಯ ಜನಾರೋಗ್ಯ ಸಚಿವರಿಗೂ ಇತ್ತೀಚೆಗೆ ಆ ಕಡೆ ಭೇಟಿಕೊಟ್ಟಿದ್ದಾಗ ಅರಿವಾಗಿದೆ. ಈ ಬಗ್ಗೆ ಎಸ್ಟಿಮೇಟ್ ಸರಿಯಾಗಿ ಆಗಿ ಜಾಗ್ರತೆ ಕೆಲಸ ಕಾರ್ಯಗಳನ್ನು ನಿರ್ವಹಿಸದೆ ಆ ಪ್ರದೇಶದ ಜನರಿಗೆ ಕುಡಿಯುವ ನೀರನ್ನು ಸಾಕಷ್ಟು ಪರಿಮಾಣದಲ್ಲಿ ಒದಗಿಸದೇ ಇರುವುದು ವಿಷಾದಕರವಾದ ಸಂಗತಿಯೇ ಆಗಿದೆ.

ದೇವನಹಳ್ಳಿ ತಾಲ್ಲೂಕಿಗೆ ಸೇರಿದ ಐದಾರು ಹಳ್ಳಿಗಳಲ್ಲಿ ಹೊಸ ಭಾವಿಗಳಲ್ಲಿ ನೀರು ಬತ್ತಿಹೋಗಿದೆ. ಈ ರೀತಿ ಪರಿಸ್ಥಿತಿಗೆ ಯಾವ ಅಧಿಕಾರಿಗಳು ಕಾರಣರು ಎಂಬುದನ್ನು ಮನಗಂಡು ಸರ್ಕಾರದವರು ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುವುದಲ್ಲದೆ,

ಅಲ್ಲಿ ಕುಡಿಯುವ ನೀರಿನ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ದೇವನಹಳ್ಳಿ ತಾಲ್ಲೂಕು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು ರೇಷ್ಮೆ ವ್ಯವಸಾಯಕ್ಕೆ ಮುಖ್ಯ ಕೇಂದ್ರವಾಗಿದೆ. ಆ ಪ್ರದೇಶಗಳಲ್ಲಿ ಈ ವ್ಯವಸಾಯವು ಕುಂದದೆ ಅವಿಚ್ಛಿನ್ನವಾಗಿ ಬೆಳೆದುಕೊಂಡು ಬರಲು ಏಡೆಡ್ ಗ್ರೈನೇಜ್‌ಗಳನ್ನು ಸ್ಥಾಪಿಸಿ ಕೊಡಬೇಕೆಂದು ಸೂಚಿಸಿ, ಈ ಬಿಲ್ಲನ್ನು ಸಮರ್ಥಿಸುತ್ತೇನೆ.

Mr. SPEAKER.—I have to put the Bill at Five of the Clock to the vote of this House. If we do not want to listen to the replies to be given by the Government, all this talk will be of no avail. Therefore, may I request Hon'ble Members to give an opportunity to the Minister to reply ?

Sri S. GOPALA GOWDA (Sagar-Hosanagara).—The Minister may take some fifteen minutes. That is all.

Mr. SPEAKER.—If you do not wish for a reply, he may not reply. But it is better to know what the reply is.

Sri S. GOPALA GOWDA.—Anyhow, the concerned Minister is not here and has not heard the debate.

Mr. SPEAKER.—It is not necessary that the Finance Minister or the particular Minister should reply to the debate. Any member of the Government on behalf of the Government can reply. Therefore there is no illegality or any impropriety in that.

Sri P. R. RAMAIYA (Basavanagudi).—I will take only two minutes.

Mr. SPEAKER.—I think you may take some five minutes more, Sri Gopala Gowda.

***ಶ್ರೀ ಎಸ್. ಗೋಪಾಲಗೌಡ.**—ಸ್ವಾಮಿ, ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಚರ್ಚೆ ಮಾಡುವ ಸಂದರ್ಭದಲ್ಲಿ ನಮಗೆ ತೊಂದರೆ ಏನು ಕಂಡುಬರುತ್ತದೆಯೆಂದರೆ, ಪ್ಲಾನಿಂಗ್ ಕಮಿಷನ್‌ನವರೂ ಮತ್ತು ಪ್ರಾಂತೀಯ ಮಂತ್ರಿಮಂಡಲದವರೂ ಕಾಲವನ್ನು ಯಾವ ರೀತಿ ಹರಣಮಾಡಿ, ಅನೇಕ ಸ್ಕೀಂಗಳನ್ನು ಸಕಾಲದಲ್ಲಿ ಗ್ರಾಂಟು ಮಾಡದೆ ಹಣ ಸಹ ಗ್ರಾಂಟ್ ಆಗದೆ ಹಿಂದೆ ಬೀಳುತ್ತಿದೆ ಎಂಬುದನ್ನು ಅನೇಕವೇಳೆ ಇಲ್ಲಿ ನೋಡಬಹುದಾಗಿದೆ. ಲೋಕಲ್ ಡೆವೆಲಪ್‌ಮೆಂಟ್ ವರ್ಕ್ಸ್‌ನಲ್ಲಿ ಇವರು explanatory note ಕೊಟ್ಟಿರುತ್ತಾರೆ.

"Urder Local Development works programme for 1953-54, works at a total cost of Rs. 13,42,209 were approved. The grant due from the Planning Commission on this account was Rs. 6,54,688 Of this only Rs. 3,45,300 was received". ಹೀಗೆ ಇದರಲ್ಲಿ ವಿಚಾರವನ್ನು ತಿಳಿಸಿರುತ್ತಾರೆ. ಮುಖ್ಯವಾಗಿ ಕಾಲಾವಕಾಶ ಹೆಚ್ಚಾಗಿ ಇಲ್ಲದೇ ಇರುವುದರಿಂದ ಕಮ್ಯೂನಿಟಿ ಪ್ರಾಜೆಕ್ಟ್ ಮತ್ತು ಅದರ ಅಂಗವಾಗಿ ತೆರೆದಿರತಕ್ಕ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಯಾವರೀತಿ ಕೆಲಸ ಪ್ರಾರಂಭಿಸುತ್ತಿವೆ ಎಂಬ ಬಗ್ಗೆ ಒಂದೆರಡು ಅಂಶಗಳನ್ನು ತಿಳಿಸುತ್ತೇನೆ. ಇಲ್ಲಿ ಎರಡು ಲಕ್ಷ ರೂಪಾಯಿಗಳವರೆಗೆ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಮತ್ತು ಕಮ್ಯೂನಿಟಿ ಪ್ರಾಜೆಕ್ಟ್‌ಗಳಲ್ಲಿ ವಾಸವಾಗಿರತಕ್ಕ ಅಧಿಕಾರಿಗಳ ಮನೆಗಳನ್ನು ಕಟ್ಟುವುದಕ್ಕಾಗಿ ಮಂಜೂರಾಗಿದೆ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇವೆ. ಕೋಲಾರ ಜಿಲ್ಲೆಯಲ್ಲಿ Ghee Heating Centre ಎಂದಿತ್ತು. ಅದಕ್ಕಾಗಿ ಮೈಸೂರು ಸರ್ಕಾರ 78 ಸಾವಿರ ರೂಪಾಯಿಗಳನ್ನು ಪಡೆದಿದ್ದಾರೆ. ಅಲ್ಲಿ ಕೆಲವು ಬಿಲ್ಡಿಂಗ್ಸ್ ಇವೆ. ಅವನ್ನು ಸರ್ಕಾರದವರು ಹರಾಜು ಮಾಡುತ್ತಾರೆಂಬ ವದಂತಿ ಕೇಳಿದೆ. ಹೀಗೆ ಸುಮಾರು ಲಕ್ಷಾಂತರ ರೂಪಾಯಿ ಬಿಲ್ಡಿಂಗ್ ಇದೆ. ಈ ಪ್ರದೇಶವನ್ನು ಸರ್ಕಾರದವರು ಉಪಯುಕ್ತವಾದ ರೀತಿಯಲ್ಲಿ ಉಪಯೋಗಿಸುವುದಕ್ಕೆ ಅನೇಕ ಮಾರ್ಗಗಳಿವೆ. ಅಲ್ಲಿ ಒಂದು ಟೀ ಇಂಡಸ್ಟ್ರಿ ಸ್ಥಾಪನೆಯಾಗಿದೆ. ಅದಕ್ಕೆ ಸಂಬಂಧಪಟ್ಟ ಟೀ ಇಲ್ಲದೆ, ಕೆಲಸವಿಲ್ಲದೆ, ಅದು ತುಕ್ಕು ಹಿಡಿಯುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಟಿಕಾಣಿ ಇಲ್ಲ. ಈ ಇಂಡಸ್ಟ್ರಿ ಬೆಳೆದು ಬಂದಿಲ್ಲ. ಹೀಗೆ ಒಂದು ಕಡೆ ಕಟ್ಟಿಸಿರತಕ್ಕ ಬಿಲ್ಡಿಂಗ್ ಉಪಯೋಗಿಸುವುದಕ್ಕೆ ಮನಸ್ಸು ಇಲ್ಲದೆ ಅಥವಾ ಮಾರ್ಗ ಇಲ್ಲದೆ ಅದನ್ನು ಹಾಳುಮಾಡುವುದು, ಬೇರೆ ಕಡೆಗಳಲ್ಲಿ ಬಿಲ್ಡಿಂಗ್ ಕಟ್ಟಿಸುವುದಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಎಂದು ಹೇಳುವುದು ಬುದ್ಧಿವಂತಿಕೆಯಲ್ಲ. ಈ ವರ್ಷ ಸುಮಾರು ಏಳು ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಇದಕ್ಕಾಗಿ ಕೊಡುತ್ತೇವೆಂದು ಹೇಳಿದರೆ, ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ತಗೆದುಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇದಕ್ಕೆ ಕಾರಣ ಈ ವರ್ಷವೇ ಪೂರ್ತಿ ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರದವರಿಗೆ ಸಾಧ್ಯವಾಗಿಲ್ಲ. ಇದನ್ನು ನೋಡಿದರೆ, ಕೇಂದ್ರದ ಯೋಜನೆಗೂ ಸಂಸ್ಥಾನದ ಯೋಜನೆಗೂ ಹೊಂದಾಣಿಕೆ ಇಲ್ಲವೆಂಬುದು ವ್ಯಕ್ತಪಡುತ್ತದೆ. ಅಲ್ಲದೆ, ಈ ಕಮ್ಯೂನಿಟಿ ಪ್ರಾಜೆಕ್ಟ್ ಬಗ್ಗೆ ತಿಂಗಳುಗಟ್ಟಲೆ, ವರ್ಷಗಟ್ಟಲೆ ಹಣ ಮಂಜೂರಾಗುವುದಿಲ್ಲ. ಸುಮ್ಮನೆ ಪ್ರಚಾರದಲ್ಲಿ ರಾಷ್ಟ್ರಾಭಿವೃದ್ಧಿ, ಸಾಮುದಾಯಿಕ ಯೋಜನೆ ಬಗ್ಗೆ ಅಂಕಿಅಂಶಗಳನ್ನು ಶೇಖರಿಸಿ ಸಾರ್ವಜನಿಕರ ಮುಂದೆ ಇಡಲಾಗುತ್ತಿದೆ. ಇಷ್ಟೇ ಹೊರತು, ಈ ಬಗ್ಗೆ ಕೆಲಸ ಅಷ್ಟು ಶ್ಲಾಘನೀಯವಾಗಿ ನಡೆದಿಲ್ಲ. ಇಂಥ ಸಂದರ್ಭಗಳು ಅನೇಕವಿವೆ. ಮುಖ್ಯವಾಗಿ ಇಲ್ಲಿ ಒತ್ತಿ ಹೇಳಬೇಕಾದ ಒಂದೇ ಅಂಶವಿದೆ. ಹಣವನ್ನು ಖರ್ಚುಮಾಡುವ ವಿಚಾರದಲ್ಲಿ ಮಾಮೂಲಾಗಿ ಹಣವನ್ನು ಬಡ್ಜೆಟ್‌ನಲ್ಲಿ ಒದಗಿಸಲಾಗಿದೆ. ಈ ವರ್ಷದ ಬಡ್ಜೆಟ್‌ನಲ್ಲಿ 1½ ಕೋಟಿ ರೂಪಾಯಿಗಳವರೆಗೂ ಖೋತಾ ಆಗಿರುವುದು ನಮಗೆ ಕಂಡುಬಂದಿದೆ. ಇದಕ್ಕೆ ಕಾರಣ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಎರಡು ಮೂರು ವಸೂಲಿಗಳು ನಿಂತಿರುವ ಬಗ್ಗೆ ಸಭೆಯ ಮುಂದೆ ಬಂದಿವೆ. ಹೀಗೆ rural development works ಕೆಲಸದ ವಿಚಾರವಾಗಿಯಾಗಲಿ, ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸದ ವಿಚಾರವಾಗಿಯಾಗಲಿ,—ಈ ಬಗ್ಗೆ ಸೂಕ್ಷ್ಮವಾಗಿ ಅಧಿಕಾರಿಗಳಿಗೆ ಕೆಲಸಗಳನ್ನು ಮುಂದುವರಿಸುವ ಅಥವಾ ಕೈಬಿಡುವ ಬಗ್ಗೆ ಸೂಕ್ತ ತಿಳಿವಳಿಕೆ ಕೊಡಲಾಗಿದೆಯೆಂದು ಕೇಳಿದ್ದೇನೆ. ಅಂತೂ ಯಾವ ಯೋಜನೆಯನ್ನು ಕೈಗೊಳ್ಳಬೇಕಾದರೂ ಸರ್ಕಾರದ

(ಶ್ರೀ ಎಸ್. ಗೋಪಾಲಗೌಡ)

ಕೈವಾಡ ಅದರಲ್ಲಿ ಯಾವ ರೀತಿಯಾಗಿದೆಯೆಂಬುದು ಕಂಡುಬರುತ್ತಿದೆ.

***Sri T. MARIAPPA** (Mysore City North).—Sir, it is admitted that there is a great demand for the supply of power in all the Districts. Therefore they have asked for 25 lakhs of rupees. In this connection, may I draw the attention of the Government to the fact that even the Shimsha expansion scheme initiated 2½ years ago, they have taken the whole thing in hand. They have not been able to do much work with a view to augment the power supply. It is also said that the Government of India had made available nearly a crore and a half of rupees in respect of it; that money I am not very sure has been diverted to other purposes. I hope the Government would throw light on this aspect.

Sri T. CHANNIAH.—Mr. Speaker Sir, within the short time available, I want to touch upon a few points. With regard to providing drinking water wells in rural areas, some of the Hon'ble Members averred that Government have not bestowed sufficient care or interest in providing water wells to most of the villages. In this connection, I want to place before this House that on no occasion the Government of Mysore have provided so much fund as they have done this year, for the construction of drinking water wells in rural areas.

Sri T. MARIAPPA.—Every year they were providing seven lakhs continuously.

Sri T. CHANNIAH.—We have provided this year more than 28 lakhs for drinking water wells. We have provided as much as 10 lakhs for drinking water wells in rural areas. Secondly we have allotted 7 lakhs for the purpose out of "L. R. Assignments". We have earmarked 10 lakhs for these works out of the grant which the Government of India have given to us and an equal sum will be provided by the Government of Mysore. We have thus provided nearly 28 lakhs for providing drinking water facilities in rural areas. Government therefore cannot be accused of lack of interest or earnestness in the matter of providing drinking water wells to rural parts. It may not be out of place to mention that Government have been taking equal interest with regard to water supply schemes in regard to urban areas.

With regard to another point raised by Sri Muniswamiah in regard to a drinking water well and tap at Sunkatha katte, the Superintending Engineer and the Chief Engineer have come to the conclusion that it is not possible to divert water from the main to provide taps in that village. What he wants is to extend the existing tap to the villagers also. With regard to that aspect also I will consult the Chief Engineer and see whether it is possible to extend the tap to that village.

Regarding drinking water wells to Rajankunte, we have not received proposals yet from the Deputy Commissioner and as soon as they are received, Government will take steps to sanction a well to that village.

Regarding another point raised by my Hon'ble friends, Sri T. C. Basappa and Sri Madiah concerning the health and sanitary conditions that exist in Tarikere and Bhadravathi, it is true Sir, that, on account of the large influx of the people from the Madras State seeking employment in Bhadravathi and Lakkavalli, the health conditions in these areas have very much deteriorated. Government are alive to the problem and have taken all possible public health measures in that area. Measures to check the spread of epidemic diseases like cholera and plague are taken in time whenever they appear. The Director of Public Health has been duly instructed and we have left no stone unturned in this connection. Mass inoculations are also done. At present the Project authorities have located one dispensary there to cater to the needs of the people working in Lakkavalli.

Speaking on Depressed Classes Amelioration Funds, Sri Linga Reddy referred to the construction of the Depressed Classes Hostel at Kolar. The site originally thought of for this hostel was in the District Office premises, It was a Government land. The plot of land is within the contour of the tank. But the tank fills once in six or even ten years depending on rainfall, and there was no danger of the site submerging. Fortunately for us, the tank was full last year, and it was thought that the site selected originally was not suitable and was accordingly given up. As regards the site on which the hostel is now built, I must tell Sri Linga Reddy that several gentlemen of the town including Sri K. Pattabhiraman and the Municipal Councillors of Kolar Town were of unanimous opinion that the site was most suitable for construction of the hostel. On their approval to the site, the Kolar Town Municipal Council unanimously recommended the grant of the site for construction of the Depressed Class Hostel. Government approved of the recommendation and what was a low lying area unattended to and insanitary has now become very pleasing to the eye and has been utilised for a very good purpose. It is situated near the Intermediate College, the High School, the bus stand and the market. People of that Town are unanimous that the place is best for the hostel. Formerly it was marshy but now the water is being drained by big pipes away from the town. After completion, the building would not only be a beauty but would be a permanent benefit to Harijans. I do not know why the Hon'ble Member has raised such strong objection to the construction of a hostel meant for the poor Harijan students.

Sri Linga Reddy raised another point that several sites were given in Kolar town directly by Government. It is not correct. It is the primary responsibility of the Municipal Council to distribute house building sites within municipal limits and not the Government. I am sure, Sri H. C. Linga Reddy has not visited the locality and much less seen the conditions there. He does not know the A B C of the locality and he is not justified in making such a remark. I belong to that place and I know how the distribution is done. The Municipal Council have given those sites. If the Hon'ble Member wanted to know the details, he could have approached the Municipal Council. It is not right on the part of the member to have raised objections for giving sites to poor Harijans. On the other hand, he should have taken a sympathetic attitude in the matter. Moreover, this is the concern of a person who has been elected from that place and not the concern of a person who has been elected from the Malur Constituency.

Sri H. C. LINGA REDDY.—On a point of clarification

Mr. SPEAKER.—There is no time; otherwise, I could have allowed you to speak.

* **Sri A. G. RAMACHANDRA RAO.**—Sir, with great pleasure I thank all the Hon'ble Members who have participated in the discussion as well as heard the discussion. Two general points were raised by the Leader of the Opposition; one is, that it was customary to give details about the financial position of the State on a Supplementary Budget. I have gone through the several reports that have been available regarding the Supplementary Budget. I may at once bring it to his notice that at no time has that been done. Only reflections have been made about the financial position of the previous years. So, that does not arise. The other point that was raised by him was, whether Government of India would so readily place at the disposal of the State Government all the amount that they have promised. Sir, they have never failed to do this and all the grants promised by them would be made available. Therefore, Sir, no apprehension need be felt about this point.

Now, coming to the general discussion, the Chair has been pleased to give wide latitude to the discussion. The pendulum of discussion has moved forward as well as backward instead of remaining still. Regarding moving forward, we have gone so far as to touch the subject of amelioration of Depressed Classes such as scholarships, etc., and regarding moving backward, there was discussion on demands which have already been scrutinised, passed

(SRI A. G. RAMACHANDRA RAO.)

after cut motions, etc. Even so, I wish to answer a few points, in particular the point raised by Hon'ble Member Sri M. V. Rama Rao. He was rather very keen on that point. Sir, it was a coincidence and the credit was given to Sri H. M. Channabasappa. The coincidence was, Sri Channabasappa was elected to the Assembly and the scheme was sanctioned. The scheme costs four and odd lakhs of rupees. It should have been done earlier but for the delay on the part of the Coorg Government. But, fortunately for Sri Channabasappa and fortunately for the Government of Mysore, the grant came from the Centre and I am glad that the coincidence brings credit to Sri H. M. Channabasappa.

Next, cement-concreting the road of Talaguppa and Jog. For that 11 lakhs were allotted. This is a new service which was not included in the Budget. In the Public Accounts Committee it is said that all amounts over two lakhs must be called a new service.

Sri M. V. RAMA RAO.—No estimate is referred to in the book.

Sri A. G. RAMACHANDRA RAO.—Sir, when the money became available, that was included. Regarding token grants, there is no need to mention all the details for one reason that it may not be right and for another that it is not possible also, because the amount that would be asked for depends on the availability of the amount. That will have to be adjusted in the course of the year. Therefore, all this discussion is, I submit, a little wide of the mark.

Then, Sir, a point was raised about the figures regarding the Palace. The point is simple. It refers to the period between June 1950 and March 1951. That was a period of transition. As a matter of fact, these amounts have been paid by the Palace and we have been reimbursing: Telephone charges Rs. 900, Saloon charges prior to 1950, Rs. 9,161-8-0, after January Rs. 75-0-0 and Rs. 525-1-6.

Regarding the N.E.S. blocks, one block was allotted to each District except Shimoga and Mandya. While we asked for 9 blocks, they granted only 7 and therefore, we had to eliminate two Districts. No favouritism was shown. Next, Sir, regarding the putting up of houses: houses are necessary. We want our village workers and others to whom these blocks are entrusted to live in those villages. Without houses, we cannot ask them to live there. That is the reason, and I believe it is a proper and cogent reason for putting up these houses.

Lastly, a remark was made that the Government of Mysore had asked for Rs. 8,70,000 for welfare schemes and the schemes were sent up by Government but only a lakh and odd was sanctioned by Government of India. That is not the case. For the sum of five lakhs asked for, for the removal of untouchability, Rs. 4,05,000 was granted. For the welfare of the Tribes Rs. 1,10,000 was asked and it was granted. For welfare of Scheduled Castes and Tribes a sum of Rs. 2,50,000 was asked and Rs. 2,50,000 was granted. Thus, Sir, the demand has been passed and the amounts are there without any difficulty because the Government of India have been pleased to grant us those amounts. I pray that these sums asked for may be permitted to be appropriated.

Mr. SPEAKER.—The question is:

> "That the Mysore Appropriation (No. 4) Bill, 1954 be taken into consideration."

The motion was adopted.

Mr. SPEAKER.—Clauses 2 and 3. The question is:

> "That clauses 2 and 3, stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is:

> "That the schedule stand part of the Bill."

The motion was adopted.

Mr. SPEAKER.—Clause 1. question is;

"That clause 1 stands part of the Bill."

The motion was adopted.

Clause 1 was added to the Bill.

Mr. SPEAKER.—Title and preamble. The question is:

"The Title and the Preamble stand part of the Bill"

The motion was adopted.

The Title and the Preamble were added to the Bill.

Motion to Pass.

Sri A. G. RAMACHANDRA RAO.—I move:

"That the Mysore Appropriation (No. 4) Bill, 1954, be passed."

Mr. SPEAKER.—The question is:

"That the Mysore Appropriation (No. 4) Bill, 1954 be passed."

The motion was adopted.

Debate on Question No. 471, Re: Number of Schools annually started in Rural Parts.

Mr. SPEAKER.—Now I have to make one statement. Sri B. Hutche Gowda has given notice to raise a discussion on question No. 471 which was answered on the floor of the House on 15th October 1954. The question relates to the number of schools annually sanctioned to the rural parts of the State during 1954-55. Since the matter is of public importance, discussion will take place on 22nd October 1954, after the discussion regarding the breach of Tuppadahalli and Sangenahalli tanks, given notice of by Sri J. Mohamed Imam, is disposed of.

Now, the House will rise and meet at 12 o'clock tomorrow.

The House adjourned at Five Minutes past Five of the Clock to meet at Twelve of the Clock on Friday 22nd October 1954.

WD 3539—GPB—550—31-12-54

MYSORE LEGISLATIVE ASSEMBLY

ELEVENTH DAY.

Friday, 22nd October 1954.

The House met in the Legislative Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Mr. SPEAKER.—Q. Nos. 113, 156, 319, 523 may be taken up together.

Drayton Murder Case.

Q.—113. **Sri S. SRINIVASA IYENGAR** (T.-Narasipur).—

Will the Government be pleased to state :—

(*a*) whether judgment has been delivered by the Hon'ble the High Court of Mysore in the "Drayton Murder Case";

(*b*) if so, whether Their Lordships have in the course of their judgment been pleased to express their views on the efficiency or otherwise of the prosecution;

(*c*) if so, what the nature of the view is;

(*d*) whether the Government of Mysore have received any communication from the Scotland Yard, London, in connection with this case ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) Yes.

(*c*) Copy of the judgment of the High Court is placed on the Table of the House. (Placed in the Library No. 40/L.A.—1954).

(*d*) Confidential and cannot be disclosed.

Q.—156. **Sri V. R. NAIDU** (Malleswaram).—

Will the Government be pleased to state :—

(*a*) whether Government has taken stringent action to detect the murderer in the Drayton Murder Case that took place at Bangalore ;

(*b*) the details and the result of the action taken ?

A.—**Sri H. SIDDAVEERAPPA** (Minister for Home and Industries).—

(*a*) and (*b*) Investigation is proceeding.

Q.—319. **Sri M. V. RAMA RAO** (Tumkur).—

Will the Government be pleased to state :—

(*a*) whether any action is being taken to apprehend the real culprit in the Drayton Murder Case ;

(*b*) whether any reward has been offered by any person for the apprehension of the real culprit ;

(*c*) whether the offer of reward has been communicated to the Government and if so, on what date ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) Yes ; by the D.S.P., Bangalore South ; Rs. 500.

(*c*) The reward announced by the District Superintendent of Police, Bangalore South, has been communicated to Government by the Inspector-General of Police on 4th August 1953.

Q.—523. **Sri S. GOPALA GOWDA** (Sagar-Hosanagar).—

Will the Government be pleased to state :—

(*a*) whether they would place on the table a copy of judgment delivered by the High Court of Mysore in connection with the Miss Drayton

(SRI S. GOPALA GOWDA)

murder case which took place in Bangalore ;

(*b*) the action taken by Government to detect the murderer ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) Investigation is proceeding.

Sri S. SRINIVASA IYENGAR.—Sir, has not the High Court remarked that an innocent man was prosecuted and a grave and serious crime has been left undetected ?

***Sri H. SIDDAVEERAPPA.**—I have placed a copy of the judgment of the High Court on the Table. What the High Court has observed is to be found in the judgment.

Sri S. SRINIVASA IYENGAR.—Sir, will the Government be pleased to state the material clues that were taken into consideration in this case?

Sri H. SIDDAVEERAPPA.—Since the matter is already concluded on the materials placed before them by the prosecution, I do not think I can improve it any further. Whatever material was available has been datailed in the High Court judgment.

Sri S. SRINIVASA IYENGAR.—Will the Government be pleased to state whether it is not a fact that the High Court have observed that a press conference was held by the police authorities ?

Mr. SPEAKER.—Details recorded in the judgment cannot be answered in a brief statement.

Sri S. SRINIVASA IYENGAR.—Had the police officers obtained the permission of the Government to offer a reward to any person who would detect the offender ?

Sri H. SIDDAVEERAPPA.—Government have sanctioned the offer of Rs. 500 for rewards ?

Sri S. SRINIVASA IYENGAR.—Did any other organisation also offer similar rewards ?

Sri H. SIDDAVEERAPPA.—Government have not been informed of it.

Sri S. SRINIVASA IYENGAR.—Did the police officers accept these offers ?

Sri H. SIDDAVEERAPPA.—Government have not received any communication in that behalf except some news published in a paper that a sum of Rs. 5,000 was offered as a reward. Government have not received any information on that point. Virtually, as a matter of fact, if a reward has to be offered there are rules, and it was not done according to rules.

Sri S. SRINIVASA IYENGAR.—Did the Government enquire and find out that it has been done in contravention of the rules ?

Sri H. SIDDAVEERAPPA.—Government has not been informed. It has not been brought to our notice.

Sri S. SRINIVASA IYENGAR.—Was it in private capacity ?

Sri H. SIDDAVEERAPPA.—That I cannot say. I cannot take notice of what takes place privately.

Sri S. SRINIVASA IYENGAR.—Are the Government making use of the information received from Scotland Yard to re-investigate ?

Sri H. SIDDAVEERAPPA.—I regret I cannot throw more light than what I have already done.

Sri S. SRINIVASA IYENGAR.—Are the High Commissioner's Office in India interfering in this case ?

Sri H. SIDDAVEERAPPA.—They addressed a letter to the Government.

Sri S. SRINIVASA IYENGAR.—Are the Government having full co-operation for the re-investigation of this case, Sir ?

Sri H. SIDDAVEERAPPA.—Full co-operation from whom ?

Sri S. SRINIVASA IYENGAR.—Has there been a correct approach to this question in the re-investigation ?

Sri H. SIDDAVEERAPPA.—I cannot say at this stage. I presume everything will have to be done correctly.

ಶ್ರೀ ವಿ. ಆರ್. ನಾಯ್ಡು.—ಮಿಸ್ ಡ್ರೈಟನ್ ಕೊಲೆ ಮೊಕದ್ದಮೆಯಲ್ಲಿ ತನಿಖೆ ಕಾರ್ಯಗಳು ಮುಂದುವರಿಯುತ್ತವೆ ಎಂದು ಹೇಳಿದ್ದೀರಿ. ಏನು ತನಿಖೆ ನಡೆಯುತ್ತಾ ಇದೆ ಎಂಬುದನ್ನು ದಯವಿಟ್ಟು ಹೇಳುತ್ತೀರಾ, ಸ್ವಾಮಿ ?

ಅಧ್ಯಕ್ಷರು.—ಏನೇನು ತನಿಖೆ ನಡೆಸುತ್ತಿದ್ದಾರೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

---

*Indicates that the remarks or speeches have not been revised by the Member concerned.

ಶ್ರೀ ವಿ. ಆರ್. ನಾಯ್ಡು.—ಕೊಲೆ ಆಗಿರುವ ಪ್ರೇರ್ಟರವರು ಪೋಲೀಸ್ ಆಫೀಸರ ಅಥವಾ ಮಿನಿಸ್ಟರ್‌ರವರ ಕನಸಿನಲ್ಲಿ ಬಂದು ನನ್ನನ್ನು ಕೊಲೆ ಮಾಡಿದವನು ಜೋಕರ್ ಅಲ್ಲ ಎಂದು ಹೇಳಿರುವುದು ನಿಜವೇ? (ಸಭೆಯಲ್ಲಿ ನಗು !) ಹಾಗಾದರೆ ಪೋಲೀಸ್‌ನವರು ಕೊಲೆ ಮಾಡಿದವನು ಎಂದು ಹೇಳಿ ಹಿಡಿದಿದ್ದವನನ್ನು ಕೊಲೆ ಮಾಡಿದವನಲ್ಲ ಎಂದು ಹೇಳಿ ಕೋರ್ಟ್ ತೀರ್ಮಾನ ಮಾಡಿರುವುದನ್ನು ತಾವು ಒಪ್ಪಿಕೊಳುತ್ತೀರಿ ತಾನೆ?

ಶ್ರೀ ಎಚ್. ಸಿದ್ದವೀರಪ್ಪ.—ಕೋರ್ಟಿನ ತೀರ್ಮಾನ ಒಪ್ಪಿಕೊಳ್ಳಲೇ ಬೇಕು.

ಶ್ರೀ ವಿ. ಆರ್. ನಾಯ್ಡು.—ಇತ್ತೀಚೆಗೆ ಕೊಲೆ ಮೊಕದ್ದಮೆಗಳು ಜಾಸ್ತಿಯಾಗುತ್ತಿರುವುದರಿಂದ ಸ್ಕಾಟ್‌ಲೆಂಡ್ ಯಾರ್ಡ್ ಪೋಲೀಸ್‌ನವರನ್ನು ಕೆಲವು ಕಾಲ ಇಲ್ಲಿಗೆ ಕರೆಸಿಕೊಂಡು ನಮ್ಮವರಿಗೆ ಟ್ರೈನಿಂಗ್ ಕೊಡಲು ಸರ್ಕಾರದವರು ಯೋಚನೆ ಮಾಡಿದ್ದಾರೆಯೋ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ಯೋಜನೆ ಏನೂ ಇಲ್ಲ.

Sri M. V. RAMA RAO.—May I know, Sir, when this re-investigation was ordered and by whom?

Sri H. SIDDAVEERAPPA.—After the High Court Judgment was delivered, the Advocate-General addressed a letter to the Government stating that in view of the indications shown in the High Court Judgment, it is a fit case where the matter will have to be further investigated. The Law Secretary concurred with that opinion. Afterwards, the Inspector-General of Police was consulted in the matter and a decision was taken to probe further into the matter by having recourse to further investigation.

Sri M. V. RAMA RAO.—Do I understand that the direction that the case should be reinvestigated in pursuance of the advice received from the Law Officers of the Government was given by the Government?

Sri H. SIDDAVEERAPPA.—The opinion of the Advocate-General and the Law Secretary were duly sent to the Inspector-General for his opinion in the matter. Afterwards, the whole circumstance was reviewed and a decision was taken and that decision was duly conveyed to the Inspector-General of Police. While taking that decision, the Inspector-General was also a party and he was also a member.

Sri M. V. RAMA RAO.—I am seeking to know whether the Government took the decision to have the case reinvestigated or whether the matter was left entirely to the Head of the Police Department?

Sri H. SIDDAVEERAPPA.—Government did not take any independent decision.

Sri M. V. RAMA RAO.—May I know, Sir, whether it is a fact that the Chief Minister in a Press Conference at which questions were put to him by certain representatives of the Press said that Government did not intend to issue any direction for the re-investigation of the case as such, but would leave it to the Head of the Police Department?

Sri H. SIDDAVEERAPPA.—I have read a statement to that effect.

Sri M. V. RAMA RAO.—Therefore, Sir, may I ask the Hon'ble Minister once again if he will kindly tell us whether the Government ordered re-investigation or whether, in pursuance of the Chief Minister's opinion expressed in the Press Conference, left it to the Head of the Department to do what he thought was right?

Sri H. SIDDAVEERAPPA.—In pursuance of the opinion expressed by the Chief Minister the matter was left very largely to the officers concerned for taking a decision and that decision was okayed by the Government.

Sri S. SRINIVASA IYENGAR.—May I know who is at present in charge of this investigation?

Sri H. SIDDAVEERAPPA.—I regret I cannot disclose.

Sri M. V. RAMA RAO.—May I know, Sir, whether the particular officer who may have been deputed for this investigation possesses special qualification such as having training in Scotland Yard or any other equivalent qualification and specialisation in investigation of cases of this kind?

Sri H. SIDDAVEERAPPA.—An experienced police officer who is reputed to be a good investigator has been placed in charge of this investigation. He is an officer of the rank of A.S.P.

Sri M. V. RAMA RAO.—Are there any officers in the Mysore Police Department who have had specialised training in Scotland Yard?

Sri H. SIDDAVEERAPPA.—Yes.

Sri M. V. RAMA RAO.—Is there any particular reason why Government

(SRI M. V. RAMA RAO.)

should not depute one of these specially trained officers for the investigation of this case?

Sri H. SIDDAVEERAPPA.—Sir, it was again left to the discretion of the Inspector-General who in his discretion thought that it would be better to entrust the investigation to a particular officer and I have not interfered in his discretion.

Sri M. V. RAMA RAO.—Will the Government examine the desirability, at least now, of seeing that the investigation is carried out by the most competent officer we happen to possess in the Police Department and who possesses this qualification acquired at Scotland Yard?

Sri H. SIDDAVEERAPPA.—I will consult the Inspector-General of Police and I will bring this point to his notice and leave it to his discretion.

ಶ್ರೀ ಎಸ್. ಗೋಪಾಲಗೌಡ.—ಈಗ ಹೊಸದಾಗಿ ತನಿಖೆ ಮಾಡಬೇಕೆಂದು ಸರ್ಕಾರ ಆಜ್ಞೆ ಮಾಡಿರತಕ್ಕದ್ದು ಹಿಂದೆ ನಡೆದ ತನಿಖೆ ಸಮರ್ಪಕವಾಗಿಲ್ಲವೆಂದೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಲ್ಲ, ಹೈಕೋರ್ಟಿನವರು ನಿಜವಾದ ಅಪರಾಧಿಯನ್ನು ಕೋರ್ಟಿನ ಮುಂದೆ ಇಟ್ಟಿಲ್ಲ ಎಂಬ ಅಂಶವನ್ನು ವ್ಯಕ್ತಪಡಿಸಿದ ಮೇಲೆ, ಅದರ ವಿಚಾರದಲ್ಲಿ ಮುಂದಿನ ತನಿಖೆ ಕ್ರಮ ಸರಿ ಎಂಬತಕ್ಕದ್ದು ಸ್ಪಷ್ಟಪಟ್ಟ ಮೇಲೆ, ಈ ಕಾರ್ಯಕ್ರಮವನ್ನು ಕೈಕೊಳ್ಳಲಾಯಿತು.

ಶ್ರೀ ಎಸ್. ಗೋಪಾಲಗೌಡ.—ಇದರ ಹಿಂದೆ ನಡೆದಿರತಕ್ಕಂಥ ಇನ್‌ವೆಸ್ಟಿಗೇಷನ್ ಸಮರ್ಪಕವಾಗಿರಲಿಲ್ಲ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಮೇಲೆ ಹೊಸದಾಗಿ ಮತ್ತೆ ಇನ್‌ವೆಸ್ಟಿಗೇಷನ್ ನಡೆಸಬೇಕೆಂದು ಆಜ್ಞೆ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹೈಕೋರ್ಟಿನವರ ತೀರ್ಪಿನಲ್ಲಿ ಅದೆಲ್ಲವೂ ಇದೆ. ಅದನ್ನು ಪುನಃ ನಾನು ಹೇಳಬೇಕಾಗಿಲ್ಲ.

ಶ್ರೀ ಎಸ್. ಗೋಪಾಲಗೌಡ —ಹಿಂದೆ ಇನ್‌ವೆಸ್ಟಿಗೇಟ್ ಮಾಡಿದಾಗ ಕೆಲವು ಎಫ್.ಐ.ಆರ್. ಮತ್ತು ಇತರ ಮುಖ್ಯವಾದ ಕಾಗದ ಪತ್ರಗಳನ್ನು ಮುಚ್ಚಿಟ್ಟಿದ್ದಾರೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.— ಈಗಲೇ ವಿವರಗಳನ್ನು ಕೊಡುವುದು ನನಗೆ ಸರಿಯಾಗಿ ಕಾಣುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಒಂದು ಪತ್ರಿಕೆಯವರು ಐದು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಪ್ರಚಾರಮಾಡಿದ್ದರೆಂದು ತಾವು ಹೇಳಿದಿರಲ್ಲ, ಅದು ಯಾವ ಪತ್ರಿಕೆ ?

ಶ್ರೀ ಎಚ್. ಸಿದ್ದವೀರಪ್ಪ.—‘ ಸತ್ಯ.’

ಶ್ರೀ ಎಸ್. ಗೋಪಾಲಗೌಡ.—ಈ ‘ ಸತ್ಯ ’ ಪತ್ರಿಕೆಯನ್ನು ಯಾರು ನಡೆಸುತ್ತಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—“ Edited and printed by C. G. Gillespy for R.M.D. Chamarbaugvala.” ಎಂದು ಪತ್ರಿಕೆಯಲ್ಲಿ ನಮೂದಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಶ್ರೀಮತಿ ಡ್ರೈಟನ್‌ರವರಿಗೂ ಮತ್ತು ಈ ಪತ್ರಿಕೆಯ ಎಡಿಟರು ಅಥವಾ ಪ್ರೊಪ್ರೈಟರು ಮತ್ತು ಇತರರು ಯಾರಿಗಾದರೂ ಯಾವುದಾದರೂ ಸಂಬಂಧವಿರುವುದು ಸರ್ಕಾರಕ್ಕೆ ಕಂಡು ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ತನಿಖೆ ಅಂಶವಾದ್ದರಿಂದ ನಾನು ಜವಾಬು ಹೇಳಲಾರೆ.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯದಲ್ಲಿ ಇತ್ತೀಚೆಗೆ ‘ ಜ್ವಾಲಾಮುಖಿ ’ ಎಂಬ ಪತ್ರಿಕೆಯು ‘ ಷರ್ಲಾಕ್ ಹೋಮ್ಸ್ ’ ಎಂಬ ಶೀರ್ಷಿಕೆಯಲ್ಲಿ ಒಬ್ಬರ ಹೆಸರಿನಲ್ಲಿ ಆರ್ಟಿಕಲ್ಸ್ ಬರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಪತ್ರಿಕೆಯನ್ನು ಓದಿದ್ದೇನೆ.

Sri J. MOHAMED IMAM.—According to the judgment of the High Court, was not the case launched against the person Jokar, a cooked up case?

Mr. SPEAKER.—The Minister cannot be expected to give a substance of the full judgment.

Sri J. MOHAMED IMAM.—According to the judgment, is not the case launched by the Prosecution, a cooked up one?

Sri H. SIDDAVEERAPPA.—Apart from what is said in the judgment of the High Court, I have no more information to offer.

Sri J. MOHAMED IMAM.—According to the judgment of the High Court, I am asking.

Mr. SPEAKER.—That can be looked into, as it is placed on the Table of the House.

Sri J. MOHAMED IMAM.—So, what action has Government taken against those persons who were responsible for building up the prosecution story and what action Government propose to take to prevent a repetition of a similar case?

Sri H. SIDDAVEERAPPA.—That matter is under the active consideration of the Government.

ಶ್ರೀ ಎಂ. ಚಿಕ್ಕಲಿಂಗಯ್ಯ —ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರು 500 ರೂಪಾಯಿಗಳ ಬಹುಮಾನವನ್ನು ಕೊಡುತ್ತೇವೆಂದು ಹೇಳಿದ್ದು ಯಾವಾಗ

ಶ್ರೀ ಎಚ್. ಸಿದ್ದವೀರಪ್ಪ.—1953ನೆಯ ಇಸವಿ ಜೂನ್ ತಿಂಗಳಿನಲ್ಲಿ ಅನೌನ್ಸ್ ಮಾಡಿದರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಯಾರನ್ನು ಕಂಡು ಹಿಡಿದುಕೊಟ್ಟಿದ್ದಾರೋ ಅವನು ನಿಜವಾದ ಅಪರಾಧಿಯಲ್ಲವೆಂದು ತೀರ್ಮಾನವಾಗಿದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಆಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಈಗ ಕಂಡುಹಿಡಿದುಕೊಟ್ಟವರಿಗೆ ಆ ಬಹುಮಾನ ಕೊಡಬೇಕಾಗಿಲ್ಲವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಕೊಡುವುದಿಲ್ಲ.

Sri H. C. LINGA REDDY.—What were the reasons that prevailed upon Government to think that this is a matter not to be taken up by the Government but it is a matter to be left for the Department for action being taken?

Sri H. SIDDAVEERAPPA.— Because, essentially it is within the domain of the Department.

Toll-Gate at Tallaghattapura on Kanakapura—Bangalore Road.

Q.—183. **Sri K. G. THIMME GOWDA** (Kanakapura).—

Will the Government be pleased to state:—

(*a*) whether a toll-gate is existing at Tallaghattapura on the Kanakapura—Bangalore Road;

(*b*) on what vehicles toll is collected?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) Toll is collected on charcoal and fuel laden lorries and carts loaded with fuel, bamboos and charcoal.

Sri K. G. THIMME GOWDA.—Are there any such toll-gates leading to Bangalore, Sir?

Sri H. SIDDAVEERAPPA.—Notice.

Sri K. G. THIMME GOWDA.—Will you take it from me that there are no such toll-gates anywhere leading to Bangalore?

Sri H. SIDDAVEERAPPA.—I understand that this is the only such toll-gate.

Sri K. G. THIMME GOWDA.—Then, why this discrimination, Sir?

Sri H. SIDDAVEERAPPA.—Sir, at that time it was thought necessary, in order to have effective control over charcoal and fuel, that this toll-gate might be put there. It was also for the purpose of collecting statistics as to how many carts were coming into Bangalore area. It is only a temporary toll-gate.

Sri K. G. THIMME GOWDA.—Will Government see that the toll-gate is removed at least now?

Sri H. SIDDAVEERAPPA.—I will examine and see what can be done.

State Transport Authority.

Q.—297. **Sri R. ANANTARAMAN** (Chamarajpet).—

Will the Government be pleased to state:—

(*a*) when the State Transport Authority was constituted;

(*b*) the number and names of the authority;

(*c*) the total amount of allowance drawn by the members so far (month-wise statement to be given);

(*d*) whether the Government have contemplated to merge this with the Revenue Board to be formed?

A.—**Sri H. SIDDAVEERAPPA** (Minister for Home and Industries).—

(*a*) 8th May 1952.

(*b*) List appended below.

(*c*) Rs. 11,939 list appended.

(*d*) No.

List of Members of the Mysore State Transport Authority.

Sriyuths—

1 G N Nagaraja Rao, I.A.S., Revenue Commissioner in Mysore, Bangalore (*Chairman*), *Ex-officio.*
2 J Devasahayam, I.P., Inspector-General of Police in Mysore, Bangalore, *Ex-officio.*
3 K S Gangadhara, B.E., Chief Engineer, Bangalore, *Ex-officio.*
4 M L Nanjaraj Urs, B.A., LL.B., Mavathur, Krishnarajanagar **Taluk,** Mysore District.

(SRI H. SIDDAVEERAPPA.)

5 N G Rudrappa, Nidige P.O., Shimoga Taluk.
6 M Hutche Gowda, Coffee Planter, Chattaghatta, Makonahalli Post, Mudigere, Chikmagalur District.
7 K Pattabhiraman, B.A., B.L., Advocate and Member, Legislative Assembly, Kolar.
8 S Vasudeva Rao, Post Box No. 27, Chitaldrug.
9 K V Veerappa, Malavalli, Mandya District.
10 D Govinda Das, Dammaningala P.O., Sravanabelagola Hobli, Channarayapatna Taluk, Hassan District.
11 R S Aradhya, "Arya Bhavan", Tumkur.
12 H M Shivalingiah, Journalist, Hoskote, Bangalore District.
13 B Ananthachar, B.A., B.L., Vakil, Hospet, Bellary District.
14 L Kantharaja Urs, B.A. (*Secretary*), *Ex-officio*.

Monthwar statement of the Travelling Allowance drawn by the Members of the State Transport Authority, from June 1952 to September 1954.

		Rs.	a.	p.			Rs.	a.	p.
1	June 1952 ...	414	7	0	13	December 1953 ...	546	11	0
2	August 1952 ..	538	2	0	14	February 1954 ...	616	3	0
3	October 1952 ...	512	0	0	15	March 1954 ...	514	14	0
4	November 1952 ...	478	0	0	16	April 1954 ...	583	2	0
5	December 1952 ...	642	0	0	17	May 1954 ...	468	3	0
6	February 1953 ...	805	12	0	18	June 1954 ...	461	14	0
7	April 1953 ...	440	8	0	19	July 1954 ...	681	2	0
8	May 1953 ...	501	6	0	20	August 1954 ...	709	1	0
9	July 1953 ...	620	14	0	21	September 1954 ...	549	14	0
10	September 1953 ...	629	14	0					
11	October 1953 ...	614	14	0		Total ...	11,939	0	0
12	November 1953 ...	610	3	0					

Sri R. ANANTARAMAN.—Is not the appended list very big ?

(*d*) Yes, Gowdanakere is one of the big tanks fed by the Anicut.

(*e*) Rs. 6,88,808.

(*f*) Not available.

(*g*) The surplus water of Gowdanakere Tank flows into Sowlanga Tank and the latter surpluses into Tunga River. There is no question of stored water being let out from either source without proper use.

Hunasekatte Tank (Repairs).

Q.—456. **Srimathi BELLARY SIDDAMMA** (Davangere).—

Will the Government be pleased to state :—

(*a*) the action taken in the matter of repairing the tank of Hunasekatte Village, Davangere Taluk;

(*b*) whether survey has been conducted?

A.—**Sri Kadidal MANJAPPA** (Minister for Revenue and Public Works).—

(*a*) The proposal was not for the repairs but for the construction of a new tank. Preliminary investigations were made and the proposal was found not feasible.

(*b*) No detailed surveys were undertaken.

Electricity (Projects to Augment Production).

Q.—521. **Sri S. GOPALA GOWDA** (Sagar-Hosanagar).—

Will the Government be pleased to state :—

(*a*) the quantity of electricity generated in the State at present;

(*b*) out of the quantity generated, the quantity of electricity that is being utilised in the State and the quantity supplied to provinces outside;

(*c*) the additional quantity of electricity that would be made available

(SRI S. GOPALA GOWDA.)

on the completion of Honnemaradu and Shimsha Projects;

(*d*) whether the Central Planning Commission has agreed to include these two projects in the First Five-Year Plan?

A.— **DR. R. NAGAN GOWDA** (Minister for Agriculture).—

(*a*) 1,15,000 K.W.

	Within the State	*Outside the State*
(*b*)	1,11,900 K.W.	3,100 K.W.

(*c*) Honnemaradu 5,40,000 K.W.
Shimsha Extension 28,800 K.W.

(*d*) The Shimsha Extension Scheme alone is included in the First Five-Year Plan and the inclusion of the Honnemaradu Scheme is under correspondence.

Malnad (Development of Communications).

Q.—522. **Sri S. GOPALA GOWDA** (Sagar-Hosanagar).—

Will the Government be pleased to state:—

(*a*) whether the Centre has agreed to extend financial help for development of communications in Malnad;

(*b*) if so, the amount that they might grant;

(*c*) the action taken by the State Government in this behalf?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) and (*c*) Do not arise.

Health Centres and Health Cess.

Q.—547. **Sri A. MUNIYAPPA** (Sidlaghatta-Chikballapur — Scheduled Castes).—

Will the Government be pleased to state:—

(*a*) the amount of Health Cess collected since 1952 up to August 1954 (yearwar and districtwar information to be given);

(*b*) the places where there are Health Centres, the amount they are spending every year (districtwar information to be given)?

A.—**Sri T. CHANNIAH** (Minister for Public Health and Local Self-Government).—

(*a*) Annexure "A" (Appended below). The figures for August 1954 are not yet available.

(*b*) (i) Annexure "B" (Appended below).

(ii) Annexure "C" (Appended below.)

ANNEXURE 'A'.

Statement of Health Cess collected since 1952-53 (Districtwar).—

District	1952-53			1953-54			(April 1954 to end of July 1954) 1954-55		
	Rs.	as.	ps.	Rs.	as.	ps.	Rs.	a.	p.
Bangalore ...	* 3,55,290	11	3	* 3,96,130	9	2	* 1,94,535	12	6
Kolar ...	51,822	2	0	68,806	11	3	29,938	1	10
Tumkur	54,001	15	7	70,554	2	9	23,422	12	7
Shimoga ...	46,971	13	0	48,113	12	8	16,940	0	11
Chikmagalur ...	43,991	2	2	72,302	8	7	20,317	5	0
Chitaldrug ...	42,119	4	9	46,643	1	0	13,806	13	1
Mysore ...	1,30,177	7	2	1,68,603	14	8	68,057	8	7
Mandya ...	95,491	9	4	1,22,134	4	7	45,282	7	3
Hassan ...	1,47,982	8	5	1,48,739	9	7	50,066	6	11
Total ...	9,67,848	9	8	11,42,028	10	3	4,62,367	4	8

* This amount includes the total receipts of Health Cess collected by the Forest Department, Public Works Department, Imperial Bank of India and the Bank of Mysore, during the year.

ANNEXURE 'B'.

List of places where there are Health Centres.

District	*Name of the Secondary Centre*	*Name of the Primary Centre*	*Modified Health Units (44)*
1 Bangalore	Health Training Centre, Ramanagaram.	Ramanagaram	
2 Chitaldrug	Hiriyur	1 V. V. Sagar	
		2 Ranganathapura	
3 Hassan	Alur	1 Alur	1 Palya
		2 K. Hoskote	2 Kundur
		3 Royarkoppal	3 Bikkodu
		4 Ponnathapura.	4 Bhennur
		5 Srinivaspur	5 Arkalgud
			6 Mallipatna
	Belur	1 Belur	7 Basavapatna
		2 Kesagodu	8 Konanur
		3 Gendehalli	9 Rudrapatna
		4 Arehalli	10 Handarangi
		5 Nagenahalli	11 Doddamaggi
		6 Halebidu	
		7 Hagare	
	Saklespur	1 Saklespur	
		2 Balupet	
		3 Hethur	
		4 Belgodu	
		5 S.V. Santhe	
		6 Hanabal	
		7 Yeslurpet	
		8 Uchangi	
	Arkalgud	...	
4 Chikmagalur	Chikmagalur	1 Chikmagalur.	1 Lakya
		2 Attigundi	2 Bendiga
		3 Kalasapura	3 Ambale (K.R. Pet)
		4 Sakrepatna	4 Pandaravalli
		5 Mallandur	5 Janakanahalli
		6 Aldur	6 Devavrinda (Kanchur)
	Mudigere	1 Mudigere	7 Tanudi
		2 Banakal	8 Hirebailu
		3 Gonibidu	9 Situr
		4 Nandipura	10 Nelagadde
			11 Begur (Mallenahalli)
	Kalasa	1 Kalasa	
		2 Niduvale	12 Nemmar
		3 Javali	13 Vaikuntapura
	Koppa	1 Koppa	14 Yemmedoddi
		2 Hariharpura	15 Tanigebylu
		3 Sringeri	
		4 Narasimharajpur.	
		5 Tadasa	
		6 Kattinamane	
		7 Kammaradi	

(SRI T. CHANNIAH.)

District	*Name of the Secondary Centre*	*Name of the Primary Centre*	*Modified Health Units (44)*
	Balehonnur	1 Balehonnur	
		2 Jaipura	
		3 Basarikatte	
		4 Jannagadde	
	Tarikere	1 Tarikere	
		2 Lakkavalli	
		3 Lingadahalli	
		4 Ajjampura	
		5 Bukkambudhi	
		6 Hunsaghatta	
		7 Santhaveri	
		8 Vasthara	
5 Shimoga District	Shimoga	1 Sowlanga	1 Ayyanur
		2 Kumsi	2 Mathikote
		3 Bhadra	3 Mulakoppa
		4 Holehonnur	4 Hosur
		5 Thyavangi	5 Chickajogihalli
		6 Kulambi	6 Shadagar Ara-manekoppal.
	Sorab	1 Sorab	
		2 Jade	7 Arehalli
		3 Chandraguthi	8 Venkanahalli
		4 Anavatti	9 Konandur
		5 Ulvi	10 Aralasurali
		6 Kuppagadde	11 Salur
		7 Thattur	12 Araga
		8 Sigga	13 Hurali
		9 Motaguppa	14 Channagiri
	Shikaripur	1 Shikaripur	15 Maravangi
		2 Anjanapura	16 Thavarekere
		3 Shiralkoppa	17 Nallur
			18 Basavapatna
	Hosanagar	1 Hosanagar	
		2 Nagar	
		3 Humchadakatte	
		4 Haridravathi	
		5 Yedur	
		6 Kodur	
		7 Sonli	
	Anandapuram	1 Anandapuram	
		2 Ripponpet	
		3 Thyagarthi	
	Thirthahalli	1 Thirthahalli	
		2 Agumbe	
		3 Megaravalli	
		4 Malur	
		5 Devangi	
		6 Mandagadde	
	Sagar	1 Sagar	
		2 Talaguppa	
		3 Hirenellur	
		4 Avinahalli	
		5 Tumari	
		6 Bhimanakone	
		7 Arlagodu	
		8 Hirebhasgar	

District	Name of the Secondary Centre	Name of the Primary Centre	Modified Health Units (44)
6. Mandya ...	Mandya ...	1 Mandya	
		2 Shivalli	
		3 Kothathi	
		4 French-Rocks (Pandavapura)	
		5 Kilara	
	Maddur ...	1 Maddur	
		2 Gejjalgere	
		3 Besagarahalli	
		4 Koppa	
		5 Doddarsinkere	
	Srirangapatna...	1 Srirangapatna	
		2 Arakere	
		3 Bandihole	
	Malavalli ...	1 Malavalli	
		2 Dugganahalli	
		3 Agasanapura	
		4 Chandagal	
		5 Kirgaval	
7. Mysore ...		1 Periyapatna	
		2 Bannur	
		3 Kalkuni	
	K. R. Nagar ...	1 K. R. Nagar	
		2 Hampapura	
		3 Saligrama	
		4 Hebbalur	
		5 Thippur	
		6 Mirle	
		7 Hansoge	
	H. D. Kote ...	1 H. D. Kote	
		2 Saragur	
		3 Hampapura	
		4 Nisna	
8. Tumkur ...		1 Amruthur	
		2 Yedavanne	

ANNEXURE 'C.'

Statement showing the annual expenditure incurred on Health Units districtwise, in the State.

		Rs.
1	Shimoga	5,41,848
2	Chikmagalur	4,09,040
3	Hassan	1,80,296
4	Mandya	2,40,000
5	Mysore	1,70,000
6	Chitaldrug	20,000
7	Tumkur	20,000
8	Bangalore	69,978
9	Kolar	...
10	Bellary	...

Tanks in Gundlupet Taluk (Improvement).

Q.—567. Sri H. K. SHIVA RUDRAPPA (Gundlupet-Heggadadevankote).—

Will the Government be pleased to state:—

the action taken by them in the matter of improving the following tanks in Gundlupet Taluk and the stage in which they are:—

(i) Bombalapuradakere,
(ii) Devarahallikere,
(iii) Somahallikere,
(iv) Halladamadahallikere,
(v) Malavallikere,
(vi) Naluru Amanikere?

A.—Sri Kadidal MANJAPPA (Minister for Revenue and Public Works).—

(i) Bombalapuradakere—

A revised estimate has been got up for the work.

(ii) Devarahallikere—

An estimate for the work has been prepared.

(iii) Somahallikere—

Proposals for improving the tank have been called for.

(iv) Halladamadahallikere—

Sanction to the estimate for the work is under consideration.

(v) Malavallikere—

There is no tank by this name but a breached tank by name Malavalli Guruva Setty katte is being proposed for improvements.

(vi) Nalur Amanikere—

Proposals for improving the tank have been called for.

Electricity (Supply to Villages).

Q.—612. Sri B. HUTCHE GOWDA (Turuvekere).—

Will the Government be pleased to state:—

(*a*) the number of villages electrified in the State;

(*b*) the percentage of villages electrified out of the total number of villages in the State?

A.—Dr. R. NAGAN GOWDA (Minister for Agriculture).

(*a*) 588 (to end of September 1954).

(*b*) 3·47 per cent.

Anti-Corruption Department (Action taken on Complaints in Tumkur District).

Q.—633. Sri C. M. ANNAYYAPPA (Gubbi).—

Will the Government be pleased to state:—

(*a*) the number of petitions received by the Anti-Corruption Department from each taluk of Tumkur District;

(*b*) of them, (i) the number of signed petitions; (ii) the number of signatures affixed, and (iii) the taluks to which they pertain;

(*c*) (i) the officers of the several departments against whom anonymous petitions have been received from Gubbi taluk; (ii) the number of signed petitions received; (iii) the action taken against each officer on the basis of these petitions?

A.—Sri Kadidal MANJAPPA (Minister for Revenue and Public Works).—

(*a*)	1.	Tumkur Taluk ...	190
	2.	Madhugiri Taluk ...	55
	3.	Gubbi Taluk ...	46
	4.	Sira Taluk ...	46
	5.	Turuvekere Taluk.	37
	6.	Tiptur Taluk ...	64
	7.	Kunigal Taluk ...	72
	8.	Pavagada Taluk ...	37
	9.	Chiknaikanahalli Taluk ...	33
	10.	Koratagere Taluk.	30

(*b*) (i) 385.

(ii) The information is not available.

(iii)	Tumkur Taluk ...	130
	Madhugiri Taluk	37
	Gubbi Taluk ...	29
	Sira Taluk	26
	Turuvekere Taluk ...	24
	Tiptur Taluk ...	39
	Kunigal Taluk ...	48
	Pavagada Taluk ..	23
	Chiknaikanahalli Taluk. ...	17
	Koratagere Taluk ...	12
	Total ...	385

Departments—

(c)	(i)	Revenue ..	8 officers
		Police ...	2 ,,
		Agriculture ...	1 officer
		Public Works	7 officers
		Registration ...	1 officer
		Education ...	1 ,,
		Insurance ...	1 ,,

(ii) 29.

(iii) One Revenue Inspector was dismissed; one Special Revenue Inspector was posted as Clerk and reduced by Rs. 5; three Revenue Inspectors, one Amildar and two Fieldmen of the Agricultural Department were warned; the services of one Agricultural Inspector and one Salesman were terminated, the amount misappropriated by them (the latter two) being ordered to be recovered.

Speaker's Ruling on Point of Order with Respect to Cattle Trespass Bill, 1954

Mr. SPEAKER.—On the 20th instant when the motion for consideration of the Cattle Trespass (Amendment) Bill, 1954 was proposed to be made, some Hon'ble Members objected to the making of the motion on the ground that the Statement of Objects and Reasons accompanying the Bill bore no relation to the Bill as laid on the Table of this House and that thereafter this Bill should not be proceeded with. I stated that I would consider this matter and give a ruling later.

A perusal of the Rules of Procedure indicates that it is only in the case of Bills originating in this House that the Bill is required to be accompanied by a Statement of Objects and Reasons. The Cattle Trespass (Amendment) Bill did not originate in this House. It was introduced in the other House and passed by that House after certain amendments were made in the original Bill. The Bill as passed by the Council was thereafter laid on the Table of this House as required by rule 90-F. This rule merely requires that the Bill as passed by the Council shall be laid on the Table of the House and does not say anything about a Statement of Objects and Reasons. In the several Legislatures in India the practice in this matter appears to differ. In some Legislatures the Bill as passed by the originating chamber together with the Statement of Objects and Reasons is laid on the Table of the other House. This is done though the Bill may have undergone extensive changes in the originating chamber so that the Statement of Objects and Reasons does not correctly indicate the purposes of the Bill as it emerges from the originating House. In certain other Legislatures the Bill as passed by one House is laid on the table of the other without the Statement of Objects and Reasons.

So far as we are concerned in Mysore, the practice has been to lay on the Table of one House the Bill as passed by the other accompanied by the Statement of Objects and Reasons as it was originally appended to the Bill. This was intended to give the members of the House an idea of the purposes underlying the Bill when it was first introduced in the other House. It was felt that to merely lay the Bill unaccompanied by such a Statement would deprive members of such information, whatever it may be worth. However, it is desirable that the Government should always amend the Statement of Objects and Reasons in conformity with the amendments effected by the originating House before taking it up in the other House. I shall also get this question examined again.

It must however be stated that, as a Statement of Objects and Reasons is not part of the Bill, there can be no

(MR. SPEAKER.)

objection to taking up the Bill for consideration. It is quite open to any Hon'ble Member to argue that, as the Bill has been considerably changed, the purpose of the Government in bringing forward this measure would not be achieved by passing the Bill in the present form. That would be an argument on merits which an Hon'ble Member is entitled to pursue. But no objection can be taken for making the motion. If the Hon'ble Minister wants to move that the Bill be taken into consideration, he may do so.

Personal explanation by Member.

Sri H. C. LINGA REDDY (Malur).—Sir, yesterday on a matter of personal explanation, I had requested the Chair to give me an opportunity, when the L. S. G. Minister made personal references to me while speaking on the Appropriation Bill. I request I may kindly be given an opportunity now to explain myself, Sir.

Mr. SPEAKER.—Yes.

***Sri H. C. LINGA REDDY.**—What I meant was that the amelioration funds are misused and wasted. But the Hon'ble Minister said that I was not sympathetic to the poor and that I did not know the A B C of the locality. He also said that a Member representing a particular constituency should not refer to the affairs of any other constituency in the State. I think both the personal explanation which I am going to give and also the other one that a Member should not refer to the affairs of the Government in another constituency raise a matter of right and privilege of a Member to criticise the Government or to call the Government to order with regard to the utilisation of funds properly. I am in Kolar; I know the locality. Both of us hail from the same area. I should admit that I am not aware of any other activity of the L. S. G. Minister in that locality.

With regard to the other point that I do not know the A. B. C. of the locality and that a Member should not refer to the affairs of Government's activity in another constituency, that raises a fundamental issue and I seek the protection of the Chair and request the Chair to give a ruling with regard to the principle of criticising the actions of the Government in so far as it relates to the utilisation of funds properly for the benefit of the people. I believe and feel that every Member has a right. It is a fundamental right that each Member has with regard to the utilisation of every pie that the *Boregowda* pays to the State Exchequer. I am interested in the welfare of the humble and the poor and I am one of those working for their welfare. My only idea in making that statement was to show that the funds were wasted. In the same family six to eight people have been given sites and in many other families people have not been given one site. I only brought these points to the notice of the L.S.G. Minister so that the matter may be rectified. He never answered my point that the amelioration funds had been wasted. On the other hand he began to hoodwink me and told me that I should not be allowed to speak about his constituency and I do not know the A.B.C. of the locality. These personal remarks may kindly be expunged and a ruling given about the rights of a Member in safeguarding the interests of the people who have elected him and to see that every pie paid by the people to the State coffers is utilised properly. Sir, I leave it to the Members of the House to judge whether I know the A B C of the locality or whether the Hon'ble Minister knows the A.B.C. of the Constitution, and the Rules of Procedure.

Sri K. HANUMANTHAIYA (Chief Minister).—You are making some allegation.

Mr. SPEAKER.—I regret that occasion should have arisen for me to have to remind the House that no personal recrimination should be made by one Hon'ble Member against another Member of the House. Therefore, if I have allowed any such remarks on the floor of the House, it is a lapse on my part. I might have allowed them inadvertently. There are rules of procedure to be followed by the Hon'ble

Members and it would not add to the dignity of this House for one Hon'ble Member to make any personal references regarding any other Hon'ble Member. No such personal references should be made in the future.

Sri T. MARIAPPA (Mysore City-North).—Sir, this point whether one Member representing a particular constituency can participate in a debate relating to affairs of another constituency has been raised and it requires a ruling.

Mr. SPEAKER.—Let us not make a big issue of these small things. It is hardly in keeping with the dignity of this House to carry on personal quarrels on the floor of this House. Probably, while refuting allegations, he might have referred to certain points. To take one side of the issue and go on arguing it, is hardly fair.

Regarding the point raised by Sri Mariappa, it appears to me that it does not require any ruling. Any Hon'ble Member of this House can refer to matters pertaining to the whole State on appropriate occasions. It does not require any ruling.

Sri J. MOHAMED IMAM (Jagalur).—I am not concerned with this issue. You were pleased to say that no personal references should be made. I do agree that no personal attacks should be made. But very often we allude to certain Ministers, and say that the Minister for L.S.G. did so and so in the course of his official duties. Strictly speaking, it may be taken as a personal reference.

Mr. SPEAKER.—Recrimination, I said.

Sri J. MOHAMED IMAM.—It depends upon how we take it. It may be said the Local Self-Government Minister was responsible in changing the site from one place to another. It may be taken as personal reference or as reference to the Minister as such. When we make reference to them in their capacity of Ministers, then it cannot be taken as personal reference.

Sri K. HANUMANTHAIYA.—Whether there has been personal reference in a particular case, it is left to the discretion of the Speaker to determine. There is no question of our arguing over the matter.

BUSINESS OF THE HOUSE.

Sri Mulka GOVINDA REDDY (Chitaldrug).—Yesterday, you promised to take up Q. No. 275 tabled for 14th October.

Mr. SPEAKER.—I understand the Hon'ble Minister in charge of this question has to answer some interpellations in the other House. I shall take up the question tomorrow.

Sri M. PALANIYAPPAN (Ulsoor).—We are going to sit for only one more day according to our programme and only two of my questions have been answered hitherto. I want to know whether the rest of the questions will be answered and published in the Proceedings.

Further, Sir, there is one more thing. There is a strong rumour in the State that our Rajpramukh is going to take leave for two months and that Sri C. Rajagopalachari is going to be appointed as Governor. I do not know whether this House is going to be consulted and whether there is any truth in that rumour.

Mr. SPEAKER.—Unless some business concerning this House is placed on the table and a motion is moved, I do not think any outside matter can be discussed on the floor of this House.

We shall now resume discussion on Co-operative Societies (Amendment) Bill.

MYSORE CO-OPERATIVE SOCIETIES (AMENDMENT) BILL, 1954.

Motion to consider (contd.)

ಶ್ರೀ ಪಿ. ಮರಿಯಪ್ಪ (ಹಿರಿಯೂರು).—ಸ್ವಾಮಿ, ಮೊನ್ನೆ ಈ ಮಸೂದಾ ಕಾನೂನಿನ ಮೇಲೆ ಮಾತನಾಡುತ್ತ ಇದನ್ನು ಸರ್ಕಾರದವರು ಈ ಸಭೆಯ ಮುಂದೆ ತರುವುದಕ್ಕೆ ಹಿನ್ನೆಲೆ ಏನು ಎಂಬುದನ್ನು ನಾನು ಪ್ರಸ್ತಾಪಿಸುತ್ತಾ ಇದ್ದೆ. ಆ ಸಂದರ್ಭದಲ್ಲಿ ಮಾನ್ಯ ಸಭೆಯವರ ಮತ್ತು ಸಹಕಾರ ಸಂಘಗಳವರ ಒತ್ತಾಯದ ಮೇಲೆ, ಅಲ್ಲದೆ ಈಗ ರಿಸರ್ವ್ ಬ್ಯಾಂಕ್‌ನಿಂದ ರೈತರಿಗೆ ಹಣ ಸಹಾಯವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಿರುವ ಒಂದು ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತರುವುದಕ್ಕೆ ಇಂಥ ಒಂದು ಅವಶ್ಯಕತೆ ಬಂದಿದ್ದರಿಂದ

(ಶ್ರೀ ವಿ. ಮಸಿಯಪ್ಪ.)

ಇದನ್ನು ತರಬೇಕಾದಂಥ ಒಂದು ಸನ್ನಿವೇಶ ಉಂಟಾಯಿತು ಎಂದು ಹೇಳುತ್ತಾ ಇದ್ದೆ. ಸರ್ಕಾರದ ಹಣ ಲೋಪವಾಗದ ರೀತಿಯಲ್ಲಿ, ಸರ್ಕಾರ ಕೈಕೊಳ್ಳತಕ್ಕ ಯೋಜನೆಗಳು ಜನತೆಯಲ್ಲಿ ನಿರುತ್ಸಾಹವನ್ನು, ನಿರಾಶೆಯನ್ನು ಉಂಟುಮಾಡುವುದಕ್ಕೆ ಬದಲಾಗಿ ಆಶೆಯನ್ನು, ಉತ್ಸಾಹವನ್ನು ಉಂಟುಮಾಡಿ ಆ ಯೋಜನೆಗಳು ಯಶಸ್ವಿಯಾಗುವ ರೀತಿಯಲ್ಲಿ ಕೆಲಸಮಾಡುವುದಕ್ಕೆ ಅನುಗುಣವಾಗುವ ರೀತಿಯಲ್ಲಿ, ಅಂಥ ಒಂದು ರಚನಾತ್ಮಕವಾಗಿರತಕ್ಕ ಯೋಜನೆಯನ್ನು ಜಾರಿಗೆ ತರತಕ್ಕ ಸಂದರ್ಭದಲ್ಲಿ ಕೆಲವು ವಿಶೇಷವಾಗಿರತಕ್ಕ ಅಧಿಕಾರಗಳು ಅವಶ್ಯಕ ಎಂಬುದನ್ನು ನಾನು ವಿವರಿಸುತ್ತಾ ಇದ್ದೆ. ಈಗ ಈ ಬಿಲ್ಲಿನಲ್ಲಿ ಕೆಲವು ಮೂಲ ತತ್ವಗಳಿವೆ. ಅವುಗಳ ವಿಚಾರದಲ್ಲಿ ಮಾತನಾಡಿರುವ ಕೆಲವು ವಿರೋಧಪಕ್ಷದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವು ಎಷ್ಟರಮಟ್ಟಿಗೆ ಸೂಕ್ತವಾದುವು, ಅವರು ವ್ಯಕ್ತಪಡಿಸಿರುವುದರಲ್ಲಿ ಏನಾದರೂ ಬದಲಾವಣೆಯಾಗಬೇಕೆ ಎಂಬ ಬಗ್ಗೆ ಒಂದೆರಡು ಸಲಹೆಗಳನ್ನೀಯಲು ಇಚ್ಛಿಸುತ್ತೇನೆ. ವಿರೋಧ ಮಾಡಿ ಮಾತನಾಡಿದವರು ಇದು ಬಹಳ ಅವಸರದಿಂದ ತಂದಿರುವ ಮಸೂದೆ, ಇದರಲ್ಲಿ ಬಹಳ ತೀವ್ರವಾಗಿರತಕ್ಕ ಬದಲಾವಣೆ ಮಾಡಲು ಆಲೋಚಿಸಿದ್ದಾರೆ ಅಂದರೆ ರ್ಯಾಡಿಕಲ್ ಛೇಂಜಸ್ ಮಾಡಬೇಕೆಂದು ಹೇಳಿದ್ದಾರೆ. ಇಂಥ ಬದಲಾವಣೆ ಮಾಡುವ ಸಂದರ್ಭದಲ್ಲಿ ಇದನ್ನು ಬಹಳ ದೀರ್ಘವಾಗಿ ಅಲೋಚನೆ ಮಾಡಬೇಕಾದ ಆವಶ್ಯಕತೆಯಿದೆ ಎಂದು ಹೇಳಿದ್ದಾರೆ. ನಾನು ಬಹಳವಾಗಿ ಯೋಚನೆ ಮಾಡಿದೆ. ಇದು ಬಹಳ ಅವಸರದಿಂದ ತಂದಿರುವ ಮಸೂದೆಯಲ್ಲ, ಬಹಳ ವಿಳಂಬವಾಗಿ ತಂದಿರುವ ಮಸೂದೆ ಎಂದು ನನಗೆ ಕಂಡು ಬಂತು. ನಮ್ಮ ಸಂಸ್ಥಾನದಲ್ಲಿ ಇದು ಬಹಳ ಕಾಲದ ಹಿಂದೆಯೇ ಬರಬೇಕಾಗಿದ್ದ ಮಸೂದೆ. ಸರ್ಕಾರದ ಗಮನಕ್ಕೆ ಬಾರದೆಯೋ ಅಥವಾ ಇನ್ನೊಂದು ಕಾರಣದಿಂದಲೋ ಅಥವಾ ಆಲಸ್ಯದಿಂದಲೋ ಈ ವಿಚಾರ ಬಹಳ ವಿಳಂಬವಾಗಿದೆ ಎಂದು ನನಗೆ ಕಂಡು ಬಂದಿದೆ. ಈ ಮಸೂದೆಯಲ್ಲಿರುವ ಅಧಿಕಾರಗಳನ್ನು ಇನ್ನೂ ಕೆಲವು ವರ್ಷಗಳ ಹಿಂದೆಯೇ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು ಕೆಲಸವನ್ನು ಮಾಡುವ ರೀತಿಯಲ್ಲಿ ಏರ್ಪಾಡು ಮಾಡಿದ್ದರೆ ಸಹಾಯವಾಗುತ್ತಿತ್ತು, ಈ ದಿವಸ ಅನುಭವಿಸುತ್ತಿರುವ ಕಷ್ಟ ಇರುತ್ತಿರಲಿಲ್ಲ ಎಂದು ನನಗೆ ಅನ್ನಿಸಿತು. ಈ ದಿವಸ ವಿವಿಧೋದ್ದೇಶ ಸಹಕಾರ ಸಂಘಗಳನ್ನು ದೇಶದ ಆದ್ಯಂತ ಪ್ರಾರಂಭಿಸಿದ್ದೇವೆ. ನಾಳೆ ವಿಶ್ವೇಶ್ವರಯ್ಯನವರ ಗ್ರಾಮ ಕೈಗಾರಿಕಾ ಯೋಜನೆಯ ಪ್ರಕಾರ ಗೃಹ ಕೈಗಾರಿಕೆಯನ್ನು (cottage industry) ಸಂಸ್ಥಾನದ ಎಲ್ಲಾ ಕಡೆಯೂ ಸಹಕಾರ ಸಂಘದ ತತ್ವದ ಮೇಲೆ ಪ್ರಾರಂಭ ಮಾಡಬೇಕಾಗಿದೆ. ಈಗಾಗಲೇ ವಿವಿಧೋದ್ದೇಶ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡದೆ ಬಹಳ ಕಷ್ಟಸ್ಥಿತಿಗೆ ಬಂದಿವೆ. ಮುಂದೆ ಗೃಹ ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ಸಹಕಾರ ಸಂಘಗಳನ್ನು ಸ್ಥಾಪಿಸುವಾಗ ರೈತರ ಹತ್ತಿರ ಹೋಗಿ 'ಷೇರು ತೆಗೆದುಕೊಳ್ಳಿ, ಈ ಸಂಘಗಳಿಂದ ಹೆಚ್ಚಿನ ಸಹಾಯವಾಗುತ್ತದೆ. ಎಂದು ಯಾವ ನಾಲಗೆಯಿಂದ ಹೇಳಬೇಕು, ಇಂಥ ಕಷ್ಟಪರಿಸ್ಥಿತಿಯಿದೆ. ಬಹುಶಃ ಇಂಥ ಬಲವಾದ ಕಾನೂನು ಮೊದಲೇ ಆಗಿದ್ದರೆ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ ಎಂದು ಅನ್ನಿಸುತ್ತದೆ. ಇದರಲ್ಲಿ ಮಾಡಬೇಕೆಂದು ಉದ್ದೇಶಪಟ್ಟಿರುವ ಬದಲಾವಣೆಗಳು ದೇಶದಲ್ಲಿ ಬಹಳವಾಗಿ ಉಲ್ಲೋಲ ಕಲ್ಲೋಲವನ್ನುಂಟು ಮಾಡುವಷ್ಟು ಶಕ್ತಿಯುತವಾಗಿರುತ್ತವೆಯೋ ಅಥವಾ ಸಾಧಾರಣವಾಗಿ ಒಂದು ಯೋಜನೆಯನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಅತ್ಯಗತ್ಯವಾಗಿರುತ್ತವೆಯೋ ಎಂಬುದನ್ನು ನೋಡಬೇಕಾಗಿದೆ. ಇಲ್ಲಿರುವುದು ರ್ಯಾಡಿಕಲ್ ಛೇಂಜಸ್ ಎಂದು ನನಗೆ ಕಾಣಿಸುವುದಿಲ್ಲ. ಕೇವಲ ರಿಸರ್ವ್ ಬ್ಯಾಂಕಿನಿಂದ ಬಂದಿರುವ ಸಹಾಯವನ್ನು ರೈತರಿಗೆ ಹಂಚುವ ಸಂದರ್ಭದಲ್ಲಿ ನಡುವೆ ಕೆಲವು ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಅಪೆಕ್ಸ್ ಬ್ಯಾಂಕ್, ಡಿಸ್ಟ್ರಿಕ್ಟ್ ಕ್ರೆಡಿಟ್ ಬ್ಯಾಂಕುಗಳು ಎಂದು ಮಾಡಿ ಅವುಗಳ ಮೂಲಕ ಮತ್ತು ತಾಲ್ಲೂಕುಗಳಲ್ಲಿ, ಗ್ರಾಮಗಳಲ್ಲಿ ಬೇರೆ ಕ್ರೆಡಿಟ್ ಸೊಸೈಟಿಗಳನ್ನು ಸ್ಥಾಪಿಸಿ ಅವುಗಳ ಮೂಲಕ ರೈತರಿಗೆ ಹಣ ಒದಗಿಸಬೇಕಾಗಿದೆ. ಇಲ್ಲಿ ಒಂದು ಅಂಶ ಮುಖ್ಯವಾಗಿ ಹೇಳಬೇಕಾದರೆ, ನನಗೆ ತಿಳಿದಿರುವ ಹಾಗೆ, ರಿಸರ್ವ್ ಬ್ಯಾಂಕು ಅಪೆಕ್ಸ್ ಬ್ಯಾಂಕಿಗೆ ಅಥವಾ ಸಂಸ್ಥಾನಕ್ಕೆ ಹಣ ಒದಗಿಸುವಾಗ ಬಹಳ ಕಠಿಣವಾದ ನಿಯಮ ಹಾಕಿದೆ ಎಂದು ಹೇಳುತ್ತಾರೆ. ಇದಕ್ಕೆ ಸರ್ಕಾರದವರು, ಅಪೆಕ್ಸ್ ಬ್ಯಾಂಕಿನವರು ರಿಸರ್ವ್ ಬ್ಯಾಂಕಿಗೆ ಒಂದು ನಿರ್ದಿಷ್ಟವಾದ ಮೊತ್ತದ ಸೆಕ್ಯೂರಿಟಿ ಕಟ್ಟಬೇಕು, ಷೇರು ತೆಗೆದುಕೊಂಡಿರಬೇಕು ಮತ್ತು ಸಾಲವನ್ನು ರಿಸರ್ವ್ ಬ್ಯಾಂಕಿನವರಿಗೆ ವಾರ್ಷಿಕ ಕಂತಿನಲ್ಲಿ ವಾಪಸು ಕೊಡಬೇಕು, ಗೊತ್ತಾದ ದಿವಸ ಕಡ್ಡಾಯವಾಗಿ ವಾಪಸು ಕೊಡಬೇಕು; ಹಾಗೆ ಕೊಡದಿದ್ದರೆ ಹೊಸ ಸಾಲ ಸಿಕ್ಕದೆ ಹಿಂದಿನ ಸಾಲ ಬಾಕಿ ಉಳಿಯುವುದಕ್ಕೆ ದುಬಾರಿ ಬಡ್ಡಿ ಕೊಡಬೇಕಾಗಿದೆ. ಇಂಥ ನಿಯಮವನ್ನು ರಿಸರ್ವ್ ಬ್ಯಾಂಕು ಹಾಕಿರುವುದು ಕಠಿಣವಾದುದೆಂದರೆ, ಸಾಲ ಕೊಡುವವರು ಅಪೆಕ್ಸ್ ಬ್ಯಾಂಕಿನ ಮೇಲೆ ಅಥವಾ ಡಿಸ್ಟ್ರಿಕ್ಟ್ ಬ್ಯಾಂಕಿನ ಮೇಲೆ ಹೀಗೆ ನಿಯಮ ಹಾಕದಿದ್ದರೆ ಈ ಯೋಜನೆಯನ್ನು ಯಶಸ್ವಿಯಾಗುವಂತೆ ಮಾಡುವದು ಹೇಗೆ? ಸಾಲವನ್ನು ತೆಗೆದುಕೊಂಡರೆ ವಾಯಿದೆಗೆ ಸರಿಯಾಗಿ ಯಾವ ಉದ್ದೇಶಕ್ಕಾಗಿ ಸಾಲ ತೆಗೆದುಕೊಂಡರೋ ಆ ಉದ್ದೇಶ ನೆರವೇರಿದ ಮೇಲೆ ವಾಪಸು ಕೊಡದಿದ್ದರೆ ಹೇಗೆ? ರೈತರು ಬೆಳೆ ಕೈಗೆ ಬಂದ ಕೂಡಲೆ ಅಥವಾ ಆದಾಯ ಬಂದ ಮೇಲೆ ಸಾಲವನ್ನು ಸಕಾಲದಲ್ಲಿ ವಾಪಸು ಕೊಡದೆ ಹೋದರೆ ಮುಂದೆ ಸಲೀಸಾಗಿ ಅವರಿಗೆ ಸಾಲ ಹೇಗೆ ದೊರೆತೀತು? ಸಾಲವನ್ನು ವಾಪಸುಕೊಡದಿದ್ದರೆ ಬೇರೆ ಅವಕಾಶವಿಲ್ಲ, ಇದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಆದ್ದರಿಂದ 22ನೆಯ ಸೆಕ್ಷನ್ ಒರಿಜಿನಲ್ ಆಕ್ಟಿನಲ್ಲಿ ಏನಿದೆಯೋ ಅದರ ಜೊತೆಗೆ 22-A ಎಂಬ ಹೊಸ ಸೆಕ್ಷನ್ ಸೇರಿಸಿದ್ದಾರೆ. ಅಲ್ಲಿ ಕೊಟ್ಟಿರುವ ಪ್ರತಿಯೊಂದು ಶಬ್ದವನ್ನು ನೋಡಿದರೂ ಹೊಸದಾಗಿ ರೈತರೇನೂ ಹೊರೆ ಹೊರಬೇಕಾಗುವುದಿಲ್ಲ. ಈಗಾಗಲೆ ಜಮೀನನ್ನು ಸಹಕಾರ ಸಂಘಕ್ಕೆ ಆಧಾರ ಮಾಡಿ ಸಾಲ ಪಡೆಯುವುದಕ್ಕೆ ರೈತನಿಗೆ ಅವಕಾಶವಿದೆ. ಇದಕ್ಕೆ ಸಹಕಾರ ಸಂಘ ಅಧಿಕಾರ ಪಡೆದಿದೆ. ಆ ಆಧಾರ ಮಾಡಿಸಿಕೊಳ್ಳುವಾಗ ಒಂದು ಹೊಸ ಬದಲಾವಣೆ ಮಾಡಿದ್ದಾರೆ; ಇದನ್ನು ಅನುಭವದಿಂದ ಆವಶ್ಯಕವೆಂದು ಕಂಡು ಮಾಡಿದ್ದಾರೆ. ಜಮೀನು ಅಭಿವೃದ್ಧಿಗಾಗಿ ಸಾಲ ತೆಗೆದುಕೊಳ್ಳುವವನು ಆಸ್ತಿಯ ಒಂದು ಪಟ್ಟಿಯನ್ನು ಸಹಕಾರ ಸಂಘಕ್ಕೆ ಕೊಡಬೇಕು. ಎಷ್ಟು ವರ್ಷ ಸಾಲ ತೆಗೆದುಕೊಳ್ಳುತ್ತಾರೋ ಅಲ್ಲಿಯವರೆಗೂ ಸಹಕಾರ ಸಂಘದ ಅಧಿಕಾರ ಆಸ್ತಿಯ ಮೇಲಿರಬೇಕು ಎಂಬ ಕಂಡೀಷನ್ನಿಗೆ ಒಪ್ಪಿಕೊಳ್ಳಬೇಕು ಎಂದು ಹೇಳಿದ್ದಾರೆ. ಇದರಲ್ಲಿ ತಪ್ಪೇನಿದೆ? ಪದೇಪದೇ ಆಸ್ತಿ ಆಧಾರಮಾಡಿಕೊಡು

ವಾಗ ಕೊಡುವ ಸ್ಟ್ಯಾಂಪ್ ಡ್ಯೂಟಿ ವಜಾ ಮಾಡಿ, ಅದು ದುಬಾರಿಯಾಗುತ್ತದೆ ಎಂದು ರೈತರು ಹೇಳುತ್ತಿದ್ದರು. ಅದನ್ನು ಗಮನಿಸಿ ಆ ಕಷ್ಟವನ್ನು ತಪ್ಪಿಸಲು ಈ ಮಾರ್ಗ ಅನುಸರಿಸಿ ತಕ್ಕ ಬದಲಾವಣೆ ಮಾಡಿದ್ದಾರೆ. ಒಂದುಸಾರಿ ಆಧಾರ ಮಾಡಿದಮೇಲೆ ಪುನಃ ಸಾಲ ತೆಗೆದುಕೊಂಡಿರುವುದನ್ನು ಸಂಪೂರ್ಣವಾಗಿ ತೀರಿಸುವವರೆಗೂ ಆಸ್ತಿಯಮೇಲೆ ಸೊಸೈಟಿಗೆ ಅಧಿಕಾರವಿರುತ್ತದೆ. ಅದರ ಆಧಾರದ ಮೇಲೆ ಸುಗ್ಗಿಕಾಲದಲ್ಲಿ ಕೂಡ ಸಾಲ ತೀರಿಸಿದಮೇಲೆ ಹೊಸ ಸಾಲ ಕೊಡಲು ಒಂದು ನಿಯಮವಿರುವ ಹಾಗೆ ಮಾಡಿದರೆ ಅದು ರ್ಯಾಡಿಕಲ್ ಛೇಂಜೆ ? ಇನ್ನೊಂದು ವಿಚಾರ. ಸಾಲ ತೆಗೆದುಕೊಳ್ಳುವ ರೈತ ತನ್ನ ಜಮೀನನ್ನು ಸಹಕಾರ ಸಂಘಕ್ಕೆ ಆಧಾರ ಮಾಡಿದ ಮೇಲೆ ಬೇರೆ ಸಾಹುಕಾರರ ಹತ್ತಿರ ಸಾಲ ತರುವುದಕ್ಕೆ ಅವನಿಗೆ ಅವಕಾಶವಿಲ್ಲ, ಹೀಗೆ ಒಂದುಕಡೆ ಮಾಡಿರುವ ಆಧಾರ ಇರುವವರೆಗೆ ಬೇರೆಯವರು ಸಾಲ ಕೊಡುವುದಿಲ್ಲ ಎಂದು ಹೇಳುತ್ತಾರೆ, ನಿಜ, ಇದು ಸ್ವಾಭಾವಿಕವಾಗಿಯೇ ಇದೆ. ಎಲ್ಲರೂ ಇದನ್ನು ಒಪ್ಪಲೇಬೇಕು. ಇದರಿಂದ ಬೇರೆಯವರ ಹತ್ತಿರ ಹೋಗಬೇಕಾದ ಅವಶ್ಯಕತೆಯಿಲ್ಲದೆ ಹೆಚ್ಚು ಸಾಲವನ್ನ ಈ ಸಂಘಗಳಲ್ಲೇ ತೆಗೆದುಕೊಳ್ಳಬಹುದು. ಸಹಕಾರ ಸಂಘದ ಸಾಲಬೇಡ, ಮುಂದೆ ಬೇರೆಯವರ ಹತ್ತಿರ ವ್ಯವಹಾರ ಮಾಡೋಣ ಎಂಬ ಅಭಿಪ್ರಾಯ ಬಂದರೆ ಆಗ ತನ್ನ ಜಮೀನನ್ನು ಪರಭಾರೆಮಾಡಿ, ಕ್ರಯಮಾಡಿ, ಬೇರೆಯವರಿಂದ ಹಣತಂದು ಸಹಕಾರ ಸಂಘಕ್ಕೆ ಕೊಟ್ಟು ಸಾಲ ತೀರಿಸಲು ಅವಕಾಶವಿಲ್ಲ ಎಂದು ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಹೇಳಿದಹಾಗೆ ಜ್ಞಾಪಕ. ಅದು ಅಷ್ಟು ಸಮರ್ಪಕವಾದ ಇಂಟರ್‌ಪ್ರೆಟೇಷನ್ ಅಲ್ಲವೆಂದು ಕಾಣುತ್ತದೆ. ಏಕೆಂದರೆ, ಮೂರನೆಯ ಸಬ್ ಕ್ಲಾಸಿನಲ್ಲಿ ಬೇರೆಯವರಿಗೆ ಪರಭಾರೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ. ಮೂರನೆಯ ಸಬ್ ಕ್ಲಾಜಿನಲ್ಲಿ ಹೇಳಿರುವುದು ಈ ರೀತಿಯಿದೆ :—

> “(iii) no member shall alienate the whole or any part of the land specified in the declaration made under clause (i) or varied under clause (ii) until the whole amount borrowed by the member together with interest thereon is paid in full :”

ಪೂರ್ತಿಯಾಗಿ ಸಾಲವನ್ನು ಪಾವತಿ ಮಾಡುವವರೆಗೆ ಬೇರೆಯವರಿಗೆ ಪರಭಾರೆ ಮಾಡುವುದಕ್ಕೆ ಹಕ್ಕಿಲ್ಲ ಎಂದು ಹೇಳಿದೆ, ನಿಜ. ಆದರೆ ಅದನ್ನು ಓದುವಾಗ ಅದರ ಜೊತೆಗೆ ನಾಲ್ಕನೆಯ ಕ್ಲಾಜನ್ನು ಸಹ ಓದಬೇಕು. ಅಲ್ಲಿ

> “(iv) any alienation made in contravention of the provisions of clause (iii) shall be void as against the society”

ಎಂದು ಹೇಳಿದೆ. ಆದ್ದರಿಂದ ಆ ಎರಡು ಕ್ಲಾಜುಗಳನ್ನೂ ಜೊತೆಯಲ್ಲಿ ಓದಿದರೆ ಬೇರೆಯವರಿಗೆ ಪರಭಾರೆ ಮಾಡುವ ಹಕ್ಕನ್ನು ಸಂಪೂರ್ಣವಾಗಿ ರದ್ದುಮಾಡಿಲ್ಲವೆಂದು ಕಂಡುಬರುತ್ತದೆ. ಒಂದುವೇಳೆ ಯಾರಿಗಾದರೂ ಬೇರೆಯವರಿಗೆ ಪರಭಾರೆ ಮಾಡಿದರೆ ಆ ಪರಭಾರೆ ಸಹಕಾರ ಸಂಘದಮೇಲೆ ಊರ್ಜಿತವಾಗುವುದಿಲ್ಲ. ಇದರಿಂದ ಸಹಕಾರ ಸಂಘದ ಹಕ್ಕೂ ಮೊಟಕಾಗುವುದಿಲ್ಲ. ಬೇರೆಯವರಿಗೆ ಪರಭಾರೆಮಾಡಿ ಆ ಹಣದಿಂದ ಸಹಕಾರ ಸಂಘದ ಸಾಲವನ್ನು ತೀರಿಸಬಹುದು. ಆದ್ದರಿಂದ ಬೇರೆಯವರಿಗೆ ತನ್ನ ಆಸ್ತಿಯನ್ನು ವಿಕ್ರಯ ಮಾಡುವ ಸೌಲಭ್ಯ ಹೋಗುವುದಕ್ಕೆ ಈ ಮಸೂದೆಯಲ್ಲಿ ಅವಕಾಶವಿದೆಯೆಂದು ಹೇಳುವುದು ಅಷ್ಟು ಸೂಕ್ತವಲ್ಲವೆಂದು ಹೇಳಬೇಕಾಗಿದೆ.

ಆಮೇಲೆ ಹತ್ತನೆಯ ಕ್ಲಾಜಿನಲ್ಲಿ ‘Recovery of cost’ ಎಂಬ ವಿಚಾರ ಹೇಳಿದೆ. 43ನೆಯ ಸೆಕ್ಷನ್ನಿಗೆ ತಿದ್ದುಪಡಿ ಸೂಚಿಸಿರುವುದು ಎರಡನೆಯ ಕ್ಲಾಜಿನಲ್ಲಿ ಈ ರೀತಿಯಿದೆ :—

> “...such magistrate shall proceed to recover the sum in the same manner as if it were a fine imposed by himself”.

ಇದರಮೇಲೆ ಬಹಳ ದೀರ್ಘವಾಗಿಯೂ ವಿಪುಲವಾಗಿಯೂ ಚರ್ಚೆಮಾಡಿದರು. ಮ್ಯಾಜಿಸ್ಟ್ರೇಟರು ಅವರಿಗಿರುವ ಅಧಿಕಾರದ ಪ್ರಕಾರ ಜುಲ್ಮಾನೆ ಹಾಕಿದರೆ ಯಾವರೀತಿಯಲ್ಲಿ ವಸೂಲು ಮಾಡುತ್ತಿದ್ದರೋ ಆ ರೀತಿಯಲ್ಲಿ ಈ ಸಾಲವನ್ನೂ ವಸೂಲು ಮಾಡುವುದಕ್ಕೆ ಈ ಕಾನೂನು ಮೂಲಕ ಅವಕಾಶ ಕೊಡಲಾಗಿದೆ, ಒಂದುವೇಳೆ ಜುಲ್ಮಾನೆ ಅಥವಾ ಸಾಲ ವಸೂಲು ಮಾಡಲು ರಹ ಇಲ್ಲದಿದ್ದರೆ ಅದಕ್ಕೆ ಶಿಕ್ಷೆ ಅನುಭವಿಸಬೇಕು ಎಂದು ಹೇಳುವ ಅಧಿಕಾರ ಮ್ಯಾಜಿಸ್ಟ್ರೇಟರಿಗಿದೆ, ಸಿವಿಲ್ ಲಯಬಿಲಿಟಿಗೆ ಕ್ರಿಮಿನಲ್ ಪನಿಷ್‌ಮೆಂಟ್ ಕೊಡುವುದು ಸರಿಯೆ ಎಂದು ಚರ್ಚೆಮಾಡಿದರು. ಒಂದನೆಯ ಕ್ಲಾಜಿನಲ್ಲಿ “after the words ‘on application’, the words ‘by the Registrar’ shall be inserted ;” ಎಂದಿದೆ. ಒರಿಜಿನಲ್ ಆಕ್ಟಿನಲ್ಲಿದ್ದಂತೆ ಒಂದು ಅಪ್ಲಿಕೇಷನ್ ಕೊಟ್ಟರೆ ಸಾಕು ಎಂದು ಹೇಳಿದ್ದರೆ ಸರಿಯಾಗಿರುತ್ತಿತ್ತು, ಈಗ ರಿಜಿಸ್ಟ್ರಾರ್ ಅಪ್ಲಿಕೇಷನ್ ಕೊಟ್ಟಾಗ ಮ್ಯಾಜಿಸ್ಟ್ರೇಟರಿಗೆ ಈ ತರಹ ಅಧಿಕಾರ ಚಲಾಯಿಸಲು ಅವಕಾಶವಿದೆ ಎಂದು ಕ್ಲಾಜು ಒಂದು ಮತ್ತು ಎರಡರಲ್ಲಿ ಅರ್ಥವಾಗುತ್ತದೆ, ಈ ರೀತಿ ರಿಜಿಸ್ಟ್ರಾರ್‌ರವರಿಗೆ ಅಧಿಕಾರ ಕೊಡುವುದು ಸರಿಯೆ ಎಂಬ ಪ್ರಶ್ನೆ ಬಂದಿದೆ. ರಿಜಿಸ್ಟ್ರಾರ್‌ರವರಿಗೆ, ಇಲಾಖಾ ಮುಖ್ಯಾಧಿಕಾರಿಗಳಿಗೆ, ಇಂಥ ಒಂದು ಅಧಿಕಾರ ಕೊಟ್ಟಾಗ ಅವರು ಅದನ್ನು ದುರುಪಯೋಗಪಡಿಸಿಕೊಳ್ಳುತ್ತಾರೆಯೆ ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ಸಹಕಾರ ಸಂಘಕ್ಕೆ ಬರಬೇಕಾಗಿರುವ ಮೊಬಲಗನ್ನು ಜಮೀನಿನಲ್ಲಿರುವ ಬೆಳೆಯ ಮೂಲಕವೋ ಅಥವಾ ಚರಸ್ವತ್ತನ್ನೋ, ಜಮೀನನ್ನೋ ಹರಾಜು ಮಾಡುವುದರಿಂದಲೋ ಡೆಪ್ಯುಟಿ ಕಮಿಷನರು ವಸೂಲುಮಾಡಿಕೊಡಲು ಸಾಧ್ಯವಾಗದಿದ್ದರೆ ಅಂಥ ಸಂದರ್ಭದಲ್ಲಿ ಮಾತ್ರ ರಿಜಿಸ್ಟ್ರಾರ್‌ರವರು ಈ ಮಾರ್ಗಕ್ಕೆ ಕೈಹಾಕುತ್ತಾರೆಯೇ ವಿನಾ ಬೇರೆ ಯಾವ ಸಂದರ್ಭಗಳಲ್ಲೂ ಕೈಹಾಕುವುದಿಲ್ಲ ಎಂದು ನಾವು ಅವರಲ್ಲಿ ನಂಬಿಕೆ ಇಡಬೇಕಾಗುತ್ತದೆ. ಒಂದು ಇಲಾಖೆಯ ಸಂಪೂರ್ಣ ಅಧಿಕಾರವನ್ನು ಅವರಿಗೆ ಕೊಟ್ಟಿರುವಾಗ, ಇಂಥ ಒಂದು ಅಧಿಕಾರ ಚಲಾಯಿಸುವಾಗ ದುರುಪಯೋಗಪಡಿಸುತ್ತಾರೆಂದು ನಂಬುವುದಾದರೆ ಈ ಇಲಾಖೆಯನ್ನೇ ಮುಚ್ಚಿಬಿಡಬೇಕಾಗುತ್ತದೆ. ಇಂಥ ಸಂದರ್ಭದಲ್ಲಿಯೂ ರಿಜಿಸ್ಟ್ರಾರ್‌ರವರು ಏಕಾಏಕಿ ಅಧಿಕಾರವನ್ನು ಚಲಾಯಿಸುವುದಿಲ್ಲ. ಇದಕ್ಕೆ ಸಂಬಂಧಿಸಿದ ತಿದ್ದುಪಡಿಯಲ್ಲಿ ಈ ರೀತಿ ಹೇಳಿದೆ :

(ಶ್ರೀ ವಿ. ಮುನಿಯಪ್ಪ.)

1-30 P.M.

"...the Registrar may, on the application of the officer conducting the audit or holding the inquiry or inspection, or of the liquidator or of any creditor or contributory or of his own motion, examine into the conduct of such person and after giving reasonable opportunity to the person concerned to submit his explanation, make an order requiring him to repay or restore the money or property or any part thereof respectively with interest at such rate as the Registrar thinks just or to contribute such sum to the assets of the society by way of compensation in regard to the misapplication, retainer, misfeasance or breach of trust as the registrar thinks just."

ಆದುದರಿಂದ ಯಾವ ವ್ಯಕ್ತಿಗೆ ಈ ವ್ಯವಹಾರ ಸಂಬಂಧಿಸಿರುತ್ತದೆಯೋ ಆ ವ್ಯಕ್ತಿಗೆ ಸಮಜಾಯಿಷಿ ಕೊಡಲು ಪೂರ್ಣ ಅವಕಾಶ ಕೊಟ್ಟನಂತರವೇ ತೀರ್ಮಾನ ಕೊಡುವುದಕ್ಕೆ ರಿಜಿಸ್ಟ್ರಾರ್‌ರಿಗೆ ಅಧಿಕಾರ ಇರತಕ್ಕದ್ದು; ಅದೂ ಸಹ

"...make an order requiring him to repay or restore the money or property or any part thereof respectively with interest at such rate as the Registrar thinks just".

ಎಂದು ಹೇಳಿದೆ. ಹೀಗೆಂದಮೇಲೆ ಒಂದಕ್ಕೆ ಎರಡರಷ್ಟು ಕೇಳುವ ಹಾಗಿಲ್ಲ. ಇಷ್ಟೇ ಅಲ್ಲದೆ

"The order of the Registrar under sub-section (i) shall be final unless it is set aside by the Government on application made."

ಎಂದು ಹೇಳಿದೆ. ಅಂದಮೇಲೆ ರಿಜಿಸ್ಟ್ರಾರ್‌ರವರು ತೀರ್ಮಾನಿಸಿದಮೇಲೆ ಅದನ್ನು ಪುನರ್ವಿಮರ್ಶಿಸಲು ಸರ್ಕಾರಕ್ಕೆ ಅವಕಾಶವಿದೆ. ಈಗ ಮುಖ್ಯವಾಗಿರತಕ್ಕ ಪ್ರಶ್ನೆ, ಇದರಲ್ಲಿ judicial announcement ಅಧಿಕಾರವನ್ನೂ ರಿಜಿಸ್ಟ್ರಾರ್‌ರವರಿಗೆ ಕೊಡುವ ಬಗ್ಗೆ ಈ ಕಾನೂನು ಮಾಡಿರುವುದು ಸೂಕ್ತವೇ ಎಂದು. ತತ್ವಶಃ ಒಂದು *prima facie* case ಇದ್ದು ಸಹಕಾರ ಸಂಘಗಳಲ್ಲಿ ಸಹಕಾರ ತತ್ವದ ಆಧಾರದ ಮೇಲೆ ನ್ಯಾಯ ನಿರ್ವಹಣೆ ನಡೆಯುವ ವಿಚಾರವನ್ನು ಪರಿಶೀಲಿಸಿದರೆ ಇಂಥ ಒಂದು ವಿಶೇಷಾಧಿಕಾರ ಅವರಿಗೆ ಕೊಡುವುದು ಅವಶ್ಯಕವೆಂದು ಹೇಳುತ್ತೇನೆ. ಏಕೆಂದರೆ, ಇಂಥ ಸಂದರ್ಭಗಳು ಇದುವರೆಗೆ ಎಷ್ಟು ಸಹಕಾರ ಸಂಘಗಳಲ್ಲಿ ದೊರೆತಿವೆ, ಎಷ್ಟು ಕೇಸುಗಳು ಕೋರ್ಟಿಗೆ ಹೋಗಿ ಊರ್ಜಿತವಾಗಿವೆ, ಎಷ್ಟು ಆಗಿಲ್ಲ ಎಂಬ ಬಗ್ಗೆ ಅಂಕಿ ಅಂಶಗಳನ್ನೂ ಕೊಟ್ಟಿದ್ದರೆ ಚೆನ್ನಾಗಿತ್ತು. ಹತ್ತು ಕೇಸುಗಳು ತಕರಾರಿನಲ್ಲಿದ್ದರೆ ಅವುಗಳಪೈಕಿ ಅನೇಕವು ಖುಲಾಸೆಯಾಗಿರತಕ್ಕವೇ ಹೊರತು ಬೇರೆ ಅಲ್ಲ. ಸಹಕಾರ ಸಂಘಗಳಲ್ಲಿ ಮ್ಯಾನೇಜಿಂಗ್ ಕಮಿಟಿಯಲ್ಲಿರತಕ್ಕವರಲ್ಲಿ ಹಲವರು ತಿಳಿವಳಿಕಸ್ಥರಾಗಿರುವುದಿಲ್ಲ. ಏನೋ ಅವರ ಸ್ವಂತ influence ಮೇಲೆ ಮ್ಯಾನೇಜಿಂಗ್ ಕಮಿಟಿಗೆ ಚುನಾಯಿತರಾಗಿ ಬಂದಿರುತ್ತಾರೆ. ಇವರಿಗೆ ಆ ಸಹಕಾರ ಸಂಘದ ವಿದ್ಯಮಾನಗಳನ್ನೂ ತೀಕ್ಷ್ಣವಾಗಿ ಟೀಕಿಸುವ ಧೈರ್ಯವಿರುವುದಿಲ್ಲ.

[At this time an Hon'ble Member saw the Hon'ble Minister for Revenue being seated by the side of Sri J. Mohamed Imam.]

Sri Y. M. CHANDRASEKHARAIYA (Kadur).—I rise to a point of order, Sir. ಮಂತ್ರಿಗಳು ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದೇ ?

Mr. SPEAKER.—There is no point of order. He can sit in any place. But he cannot take the position of the Leader of the Opposition.

Sri J. MOHAMED IMAM (Jagalur).—They are nervous that the Opposition party is so attractive that the Minister has crossed the floor!

ಶ್ರೀ ವಿ. ಮುನಿಯಪ್ಪ.—ಹೀಗಿರುವುದರಿಂದ ಕ್ರಿಮಿನಲ್ ಮತ್ತು ಸಿವಿಲ್ ಕೋರ್ಟ್‌ಗಳಲ್ಲಿ ವಿವಾದಗಳು ಜಾಗ್ರತೆ ಇತ್ಯರ್ಥವಾಗದೇ ಇರುವುದರಿಂದ ಈ ಸಹಕಾರ ಸಂಘಗಳಿಗೆ ಹಣದ ವಸೂಲಿ ಸಕಾಲದಲ್ಲಿ ಆಗದೇ ಅವುಗಳ ಏಳಿಗೆ ಮತ್ತು ತತ್ವಗಳ ಬಗ್ಗೆ ಜನರ ನಂಬಿಕೆಗೆ ಕೊಡಲಿ ಪೆಟ್ಟು ಬೀಳುವ ಸಂಭವವಿರುವುದರಿಂದ ಈ ವಿಶೇಷಾಧಿಕಾರವನ್ನು ರಿಜಿಸ್ಟ್ರಾರ್‌ರವರಿಗೆ ಕೊಡುವುದು ಅವಶ್ಯಕ. ಈ ಅಧಿಕಾರವನ್ನು ಅವರಿಗೆ ಕೊಡುವುದರಿಂದ ಜನರಿಗೆ ಆಗುವ ತೊಂದರೆಯಾದರೂ ಏನು ?

ಇನ್ನು 'Recovery of moneys due to societies' ಬಗ್ಗೆ—54 (A) ರಿಜಿಸ್ಟ್ರಾರ್‌ರವರು ಪೂರ್ಣ ವಿಚಾರಣೆನಡೆಸಿ, arrears ವಸೂಲಿ ಬಗ್ಗೆ ಸರ್ಟಿಫಿಕೇಟ್ ಕೊಡುವ ಅಧಿಕಾರವನ್ನು ಕಲ್ಪಿಸಲಾಗಿದೆ. ಇದು ಸಹ ಸೂಕ್ತವಾದುದು. ಅಲ್ಲದೆ ಈ ಅಧಿಕಾರ ಅವರಿಗೆ ವಹಿಸಿರತಕ್ಕದ್ದು ಸಹಕಾರ ಸಂಘಗಳ ಏಳಿಗೆಯ ದೃಷ್ಟಿಯಿಂದ ಅತ್ಯಗತ್ಯವಾದುದು.

ಮತ್ತೊಂದು ವಿಚಾರ. ಈಗ ನಮ್ಮ ಸಂಸ್ಥಾನಕ್ಕೆ ಬಳ್ಳಾರಿ ಜಿಲ್ಲೆ ಸೇರಿದೆ. ಅದು ಇದುವರೆಗೂ ಮದ್ರಾಸ್ ಸರ್ಕಾರದ ಆಡಳಿತಕ್ಕೆ ಒಳಪಟ್ಟಿತ್ತು. ಅಂದಮೇಲೆ ಅಲ್ಲಿನ ಸಹಕಾರ ಸಂಘಗಳ ವಿದ್ಯಮಾನಗಳೆಲ್ಲವೂ ಆ ಸರ್ಕಾರದ ಆಡಳಿತ ನೀತಿಗನುಸಾರವಾಗಿ ನಡೆಯುತ್ತಿದ್ದವು. ಅಲ್ಲಿ ಸಹಕಾರ ಸಂಘಗಳು ಬಹಳ ಮೆಹನತ್ತಿನಿಂದ ನಡೆಯುತ್ತಿವೆ. ಬಾಕಿ ವಸೂಲಿ ಸಹ ಚುರುಕಿನಿಂದ ಸಾಗಿದೆ. ಎಲ್ಲೋ ಬಹಳ ಕಡಮೆ ಮುಲ್ಕಿ ಬಿದ್ದಿರಬಹುದು. ಆ ರೀತಿ ನಮ್ಮ ಸಂಸ್ಥಾನದಲ್ಲಿ ಸಹಕಾರ ಸಂಘಗಳು ಇರಬೇಕಾದರೆ ಈ ವಿಶೇಷಾಧಿಕಾರ ರಿಜಿಸ್ಟ್ರಾರ್‌ರವರಿಗೆ ಇರುವುದು ಅಗತ್ಯ. ಈಗ ಈ ಬಿಲ್ಲನ್ನು ಮೇಲ್ಕನೆಯವರು ಯಾವ ಬಲವತ್ತರವಾದ ಕಾರಣಗಳಿಂದ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ refer ಮಾಡಿ ಇಲ್ಲಿಗೆ ಕಳುಹಿಸಿದ್ದಾರೋ ತಿಳಿಯದು. ಅಂತೂ ಈ ರೀತಿ refer ಮಾಡಲು ಸಕಾರಣಗಳಿಲ್ಲವೆಂದೇ ನನ್ನ ಅಭಿಪ್ರಾಯ. ಒಂದು

ವೇಳೆ ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಲೇಬೇಕೆಂದು ಈ ಸಭೆಯ ಸದಸ್ಯರೂ ಅಭಿಪ್ರಾಯ ಪಡುವುದಾದರೆ ಜಾಗ್ರತೆ refer ಮಾಡಿ, ಅಲ್ಲಿಯ ಅಭಿಪ್ರಾಯಗಳನ್ನು ಬೇಗ ತರಿಸಿ ಮುಂದಿನ ಅಧಿವೇಶನದಲ್ಲಾದರೂ ಈ ಬಿಲ್ಲನ್ನು ಅಂಗೀಕರಿಸಬೇಕೆಂದು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಸಿಂಗಾರಿಗೌಡ (ನೆಲಮಂಗಲ).—ಸ್ವಾಮಿ, ಈ ಮಸೂದಾ ಕಾನೂನನ್ನು ನಾನು ಸ್ವಾಗತಿಸುತ್ತೇನೆ. ಇದನ್ನು ವಿರೋಧಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕರು, ಸಹಕಾರ ಸಂಘಗಳ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ, ಇದನ್ನು ಸರಿಪಡಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯವೆಂದು ತಿಳಿಸಿದ್ದಾರೆ. ಅದಕ್ಕೆ ಸರ್ಕಾರಕ್ಕೆ ತಕ್ಕ ಸಾಧನೆ ಇರಬೇಕು ಎಂಬುದನ್ನು ಅವರು ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಈಗ ಸಹಕಾರ ಸಂಘಗಳಲ್ಲಿ ಏನು ಲೋಪದೋಷಗಳಿವೆಯೋ ಅವುಗಳನ್ನು ಸರಿಪಡಿಸಬೇಕಾದರೆ, ಸಹಕಾರ ಸಂಘಗಳ ಬೆಳವಣಿಗೆಯಾಗಬೇಕಾದರೆ ಮತ್ತು ಜನರ ಮನಸ್ಸಿನಲ್ಲಿ ಸಹಕಾರ ಸಂಘಗಳ ಬಗ್ಗೆ ನಂಬಿಕೆ ಮೂಡಬೇಕಾದರೆ ಈ ಮಸೂದಾ ಕಾನೂನು ಅಗತ್ಯವೆಂಬುದನ್ನು ಶ್ರೀ ಮಹಮ್ಮದ್ ಇಮಾಂರವರು ಸಾವಧಾನ ಚಿತ್ತದಿಂದ ಯೋಚಿಸಿ ನೋಡಿದರೆ ಒಪ್ಪುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಶ್ರೀನಿವಾಸಯ್ಯಂಗಾರ್ಯರು ಈ ಮಸೂದೆಯನ್ನು ವಿರೋಧಿಸುತ್ತಾ ಮೂರು ತೆರನಾದ ವಾದವನ್ನು ಸಭೆಯ ಮುಂದಿಟ್ಟರು. ಮೊದಲನೆಯದಾಗಿ, ಸಹಕಾರ ಸಂಘದ ರಿಜಿಸ್ಟ್ರಾರ್‌ರವರು ಸರ್ವಾಧಿಕಾರಿಯೆಂದೂ, ಎರಡನೆಯದಾಗಿ clauses 2, 3, 9, ಮತ್ತು 11ನೆಯವು ಈ ತಿದ್ದುಪಡಿ ಮಸೂದೆಯಲ್ಲಿ ಸೂಚಿತವಾಗಿರುವುವು ಸಹಕಾರ ಸಂಘದ ವಿಚಾರದಲ್ಲಿ ತೀವ್ರ ವ್ಯತಿರಿಕ್ತವಾಗಿವೆ, ಭಿನ್ನವಾಗಿವೆ, ಪ್ರಜಾಪ್ರಭುತ್ವಕ್ಕನುಗುಣವಾಗಿಲ್ಲವೆಂದೂ, ಮೂರನೆಯದಾಗಿ ತೀರ್ಪು ಕೊಡತಕ್ಕ ಪರಮಾಧಿಕಾರ ರಿಜಿಸ್ಟ್ರಾರ್‌ರವರಿಗೆ ಕೊಡುವುದರಿಂದ ಸಹಕಾರ ಸಂಘಗಳ ಬೆಳವಣಿಗೆಗೆ ಧಕ್ಕೆ ಬರುತ್ತದೆಯೆಂದೂ ತಿಳಿಸಿದರು. ಹೀಗೆ ಮಾತನಾಡಿದ ಕಾಲದಲ್ಲಿ ಅವರು ಹಿಂದೆ ಏಪೆಕ್ಸ್ ಬ್ಯಾಂಕಿನಲ್ಲಿ ಮತ್ತು ಮೈಸೂರು ಸಿಟಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಿ, ಅವುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಹೇಳಿರುತ್ತಾರೆ. ಹಾಗೂ ಅವರಿಗೆ ಏಪೆಕ್ಸ್ ಬ್ಯಾಂಕಿನ ಕೆಲಸಕಾರ್ಯದ ಅವ್ಯವಸ್ಥೆ ಮತ್ತು ಮೈಸೂರು ಸಿಟಿ ಸಹಕಾರ ಸಂಘದ ಅವ್ಯವಸ್ಥೆ ಪೂರ್ಣವಾಗಿ ಗೊತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಈ ತಿದ್ದುಪಡಿ ಮಸೂದಾ ಕಾನೂನು ಜಾರಿಗೆ ಬಂದುದೇ ಆದರೆ, ಸಹಕಾರ ಸಂಘದ ಬೆಳವಣಿಗೆಗೆ ಬಹುಮಟ್ಟಿಗೆ ಸಹಕಾರಿಯಾಗುತ್ತದೆಯೆಂಬುದನ್ನು ಅವರೂ ಸಹ ಸಾವಧಾನಚಿತ್ತದಿಂದ ಆಲೋಚಿಸಿ ನೋಡಿದರೆ, ಒಪ್ಪುತ್ತಾರೆಂದು ನಾನು ಆಶಿಸುತ್ತೇನೆ. ಮೊದಲನೆಯದಾಗಿ, clauses 2, 3, 9 ಮತ್ತು 11 ಸಹಕಾರ ತತ್ವಕ್ಕೇ ವಿರುದ್ಧವೆಂದು ಅವರು ವಾದಿಸಿದರು.

ಎರಡನೆಯ ಕ್ಲಾಜ್ ಪ್ರಕಾರ ಷೇರು ಮೊಬಲಗಿನ ಪರಮಾವಧಿ ಒಂದು ಸಾವಿರ ರೂಪಾಯಿ ಎಂದಿತ್ತು. ಯಾವ ಒಬ್ಬ ವ್ಯಕ್ತಿಗೂ ಇದಕ್ಕಿಂತ ಹೆಚ್ಚಿನ ಮೊತ್ತದ ಷೇರು ಪಡೆಯುವ ಅವಕಾಶವಿಲ್ಲ. ಈಗ ಹೌಸ್ ಬಿಲ್ಡಿಂಗ್ ಬಗ್ಗೆ credit system ವ್ಯವಸ್ಥೆ ಜಾರಿಗೆ ಬಂದಮೇಲೆ ಈ ಸಹಕಾರ ಸಂಘಗಳ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿ, ಹೆಚ್ಚಿನ ಹಣವನ್ನು ರಿಜರ್ವ್ ಬ್ಯಾಂಕಿನ ಮೂಲಕ ಪಡೆಯಲು ಅವಕಾಶವಿದೆ. Original Act ಪ್ರಕಾರ ಸಹಕಾರ ಸಂಘಗಳು ಸಾವಿರ ರೂಪಾಯಿಗಿಂತ ಹೆಚ್ಚಿನ ಷೇರು ಮೊಬಲಗು ಪಡೆಯಬೇಕಾದರೆ ಸರ್ಕಾರದ ಅನುಮತಿ ಪಡೆಯಬೇಕು. ಹೀಗೆ ಪ್ರತಿಯೊಂದುಸಾರಿಯೂ ಅನುಮತಿ ಪಡೆಯಬೇಕೆಂದರೆ ಸಹಕಾರ ಸಂಘದ ಕೆಲಸ ಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಸುವುದು ಕಷ್ಟವೆಂದು ಅಭಿಪ್ರಾಯ ವ್ಯಕ್ತಪಟ್ಟಿದೆ. ಆದುದರಿಂದ ಈ ಬಗ್ಗೆ ಹೆಚ್ಚಿನ ಅನುಕೂಲತೆ ಪಡೆಯಲು ತಂದಿರುವ ತಿದ್ದುಪಡಿಯ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಾ ಅಧಿಕಾರ ಕೇಂದ್ರೀಕೃತವಾದಂತಾಗುತ್ತದೆಂದು ಹೇಳುವ ವಾದದಲ್ಲಿ ತಿರುಳಿಲ್ಲವೆಂದು ಹೇಳಬೇಕಾಗುತ್ತೆ.

Clause 3 ರ ವಿಚಾರದಲ್ಲಿ ನಂಬಿಕೆ ವಿಚಾರವನ್ನು ಕೆಲವರು ಪ್ರಸ್ತಾಪಿಸಿದರು. ಅವರಲ್ಲಿ ನನ್ನ ಮನವಿ ಇಷ್ಟು : ಸಹಕಾರ ಸಂಘದಲ್ಲಿ ಸರ್ಕಾರ ನಂಬಿಕೆ ಇಟ್ಟುಕೊಂಡಿದೆ. ಅದೇ ರೀತಿಯ ನಂಬಿಕೆಯನ್ನು ಜನತೆ ಸಹ ಇಟ್ಟುಕೊಂಡು ತನ್ಮೂಲಕ ಸಹಕಾರ ತತ್ವದ ವಿಚಾರದಲ್ಲಿ ಸರ್ಕಾರಕ್ಕೂ ಜನತೆಗೂ ನಿಕಟ ಬಾಂಧವ್ಯವಿರಲಿ ಎಂಬ ಘನೋದ್ದೇಶದಿಂದ ಈ ತಿದ್ದುಪಡಿಯನ್ನು ಸೂಚಿಸಲಾಗಿದೆ.

ಇನ್ನು 9 ಮತ್ತು 11ನೆಯ ಕ್ಲಾಜುಗಳ ವಿಚಾರದಲ್ಲಿ ಟೀಕೆಗಳು ಬಂದಿವೆ. ಸಹಕಾರ ಸಂಘದ ಬೆಳವಣಿಗೆಗೆ ಸರ್ಕಾರ ಪೂರ್ಣ ಸಹಕಾರ ನೀಡುವ ಜವಾಬ್ದಾರಿಯನ್ನು ಹೊತ್ತಮೇಲೆ ಅದಕ್ಕೆ ತಕ್ಕ ರೀತಿಯ ಬಂದೋಬಸ್ತಿನ ಕಾರ್ಯಕ್ರಮವನ್ನೂ ಸಹ ಹಾಕಿಕೊಳ್ಳಬೇಕೆಂಬುದನ್ನು ವಿರೋಧ ಪಕ್ಷದ ಸದಸ್ಯರು ಒಪ್ಪುತ್ತಾರೆಂದು ನಾನು ನಂಬುತ್ತೇನೆ. ಆ ಉದ್ದೇಶದಿಂದ ಈ ತಿದ್ದುಪಡಿ ಸಾಧುವಾಗಿದೆ. ಸಹಕಾರ ಸಂಘಗಳ ಬೆಳವಣಿಗೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದಲೇ ಸರ್ಕಾರದವರು ಈ ತಿದ್ದುಪಡಿಯನ್ನು ಸೂಚಿಸಿರುತ್ತಾರೆಂದು ನಾನು ಅಭಿಪ್ರಾಯಪಡುತ್ತೇನೆ.

ಷೇರು ರೂಪದಲ್ಲಾಗಲಿ ಅಥವಾ ಸಾಲ ಕೊಡತಕ್ಕ ಪದ್ಧತಿಯಲ್ಲಾಗಲಿ ಈ ಸಹಕಾರ ಸಂಘಗಳ ಬೆಳವಣಿಗೆಗೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ಈ ತಿದ್ದುಪಡಿಯನ್ನು ಸೂಚಿಸಿದ್ದಾರೆ. ಇದು ಸದ್ಯಕ್ಕೆ ಅತ್ಯವಶ್ಯಕವಾಗಿದೆ ಎಂದು ನಾನು ಹೇಳುತ್ತೇನೆ.

ಕ್ಲಾಸ್ (11)ರಲ್ಲಿ, (b). For sub-section (2), the following sub-section shall be substituted ಎಂದು ಹೇಳಿದ್ದಾರೆ. 1948ರ ಕಾನೂನಿನ ಪ್ರಕಾರ ಸಹಕಾರ ಸಂಘದ ಆಡಳಿತ ಅಸ್ತವ್ಯಸ್ತವಾಗಿರತಕ್ಕ ಕಾಲದಲ್ಲಿ ಅದನ್ನು ಸರಿಪಡಿಸುವುದಕ್ಕೆ ರಿಜಿಸ್ಟ್ರಾರ್‌ರವರಿಗೂ ಕೂಡ ಸಾಕಾದಷ್ಟು ಸಮರ್ಪಕವಾದ ಅಧಿಕಾರವಿರಲಿಲ್ಲ. ಸಹಕಾರ ಸಂಘ ಸರಿಯಾಗಿ ಕೆಲಸಮಾಡದೆ ಅಸ್ತವ್ಯಸ್ತವಾಗಿದ್ದು, ಅಧ್ಯಕ್ಷರೋ ಅಥವಾ ಇನ್ನಾರಾದರೋ ಅದಕ್ಕೆ ಸಂಬಂಧಪಟ್ಟವರು ಹಣವನ್ನು ತಿಂದುಹಾಕಿದ್ದ ಪಕ್ಷದಲ್ಲಿ ಆ ಸಹಹಾರ ಸಂಘದ ಕೆಲಸವನ್ನು ನಿಲ್ಲಿಸದೆ ಮುಂದುವರಿಸಿಕೊಂಡು ಹೋಗಬೇಕು, ಆಗಿರತಕ್ಕ ಲೋಪದೋಷವನ್ನು ತಿದ್ದಬೇಕು ಎಂಬ ದೃಷ್ಟಿಯಿಂದ ಈ ಸಹಕಾರಸಂಘದ ಜವಾಬ್ದಾರಿ ಅರಿತಿರುವ ರಿಜಿಸ್ಟ್ರಾರ್‌ರವರೋ ಅಥವಾ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರೋ ಅದರ ಆಡಳಿತವನ್ನು ಕಮಿಟಿಯವರಿಂದ ತಪ್ಪಿಸಿ ತಾವೇ ವಹಿಸಿಕೊಂಡು ಜನರ ಮನಸ್ಸಿನಲ್ಲಿ ಅಪನಂಬಿಕೆ ಉಂಟಾಗದಂತೆ ಸಂಘದ ಕೆಲಸ ಕಾರ್ಯಗಳನ್ನು ನಡೆಸಬೇಕಾದದ್ದು ಅತ್ಯವಶ್ಯಕವಾಗಿದೆ. ಹಿಂದಿನ

(ಶ್ರೀ ಕೆ. ಸಿಂಗಾರಿ ಗೌಡ.)

ಕಾನೂನಿನ ಪ್ರಕಾರ ಮೊದಲು ನೋಟೀಸ್ ಕೊಡಬೇಕಾಗಿತ್ತು. ಆಮೇಲೆ ಅವರು ಉತ್ತರ ಕೊಡಬೇಕಾಗಿತ್ತು. ಉತ್ತರ ಕೊಟ್ಟಮೇಲೆ objection ಕೇಳಿ ವಿಮರ್ಶೆ ಮಾಡಬೇಕಾಗಿತ್ತು. ಇಷ್ಟೆಲ್ಲಾ ಆದಮೇಲೆ 30 ದಿವಸ ನೋಟೀಸ್ ಕೊಟ್ಟು ಜನರಲ್ ಬಾಡಿ ಕರೆಯಬೇಕಾಗಿತ್ತು. ಇದರಲ್ಲೆಲ್ಲಾ ಮುಖಂಡರ ಕೈವಾಡ ಇದ್ದು ಅವ್ಯವಸ್ಥೆಗೆ ಕಾರಣವಾಗಿತ್ತು. ಆದ್ದರಿಂದ ಸಹಕಾರ ಸಂಘ ಅಸ್ತವ್ಯಸ್ತವಾಗಿದ್ದ ಪಕ್ಷದಲ್ಲಿ ಅದರ ಕೆಲಸಕಾರ್ಯಗಳು ಅಲ್ಲಿಗೇ ನಿಂತುಹೋಗದೆ, ನೇರವಾಗಿ ರಿಜಿಸ್ಟ್ರಾರ್‌ರವರೇ ಆಡಳಿತ ವಹಿಸಿಕೊಂಡು ಕಾರ್ಯಕಲಾಪಗಳನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡತಕ್ಕ ಈ ಒಂದು substitution ಕ್ಲಾಸು ಬಹಳ ಅಗತ್ಯವಾದದ್ದಾಗಿದೆ ಎಂದು ನಾನು ಭಾವಿಸುತ್ತೇನೆ.

ಆಮೇಲೆ ಈ (6)ನೇ ಕ್ಲಾಸು ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್‌ಗೆ ವಿರುದ್ಧವಾಗಿದೆ ಎಂದು ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರು ಹೇಳಿದರು. ನನ್ನ ದೃಷ್ಟಿಯಿಂದ ಹೇಳುವ ಪಕ್ಷದಲ್ಲಿ ಅವರು ಬಹುಶಃ ಇದರಲ್ಲಡಕವಾಗರತಕ್ಕ ತತ್ವವನ್ನು ಗಮನಿಸಿಲ್ಲ ಎಂದು ಹೇಳುತ್ತೇನೆ. ಸೆಕ್ಷನ್ (7) 22-A ನಲ್ಲಿ

> 7 : " 22-A : . . . Such declaration shall state that the applicant thereby creates a charge on the land owned by him and specified therein for the payment of the amount of the loan which the society may make to the member in pursuance of the application and for all future advances, if any, required by him which the society may make to him as such member subject to such maximum as may be determined by the society together with interest on such amount of the loan and advances ; "

ಸಹಕಾರ ಸಂಘದಿಂದ ಸಾಲ ತೆಗೆದುಕೊಳ್ಳಬೇಕಾದರೆ ಅಗ್ರಿಮೆಂಟ್ ಆಗತಕ್ಕ ಕಾಲದಲ್ಲಿ ನನ್ನ ಇಚ್ಛೆ ಪ್ರಕಾರ ನನ್ನ ಆಸ್ತಿ ಈಡುಮಾಡಿದ ಮೇಲೆಯೇ ಸಹಕಾರ ಸಂಘ ನನಗೆ ಸಾಲಕೊಡಬೇಕಾಗಿದೆ. ಹೀಗಿರುವಾಗ ಇದು ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟಿಗೆ ವ್ಯತಿರಿಕ್ತವಾಗಿದೆ ಎಂದು ವಾದಿಸುವುದು ಅಷ್ಟು ಸಮಂಜಸವಾಗಿಲ್ಲ, ಇದರಲ್ಲಿ ತಪ್ಪೇನೂ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಆದ್ದರಿಂದ ಈ ಕ್ಲಾಸ್ (6) ಮತ್ತು (7) ಅತ್ಯವಶ್ಯಕವಾಗಿದೆ. ಕಾರಣ ನಾನು ಸಹಕಾರ ಸಂಘಗಳಿಗೆ ನನ್ನ ಆಸ್ತಿಯನ್ನು ಈಡುಮಾಡಿದ ಪಕ್ಷದಲ್ಲಿ ನನಗೆ ಯಾವಾಗಬೇಕೋ ಆ ಕಾಲದಲ್ಲಿ ಅವರಿಂದ ಮೊಬಲಗನ್ನು ಪಡೆಯಬಹುದು. ನಾಲ್ಕಾರು ಜನಕ್ಕೆ ಆಧಾರ ಮಾಡಬೇಕಾದ ಪ್ರಮೇಯ ತಪ್ಪುತ್ತದೆ. ಈ ಒಂದು ದೃಷ್ಟಿಯಿಂದ ರೈತರಿಗೆ ಇದರಿಂದ ಬಹುಮಟ್ಟಿಗೆ ಅನುಕೂಲತೆ ಇದೆ ಎಂದು ನಾನು ಭಾವಿಸುತ್ತೇನೆ.

ಆಮೇಲೆ (8) ನೇ ಕ್ಲಾಸ್ ವಿಷಯದಲ್ಲಿ ಅವರು ಸ್ವಲ್ಪ ಪ್ರಸ್ತಾಪಮಾಡಿದರು. ಕೆಲವು ಸಹಕಾರ ಸಂಘಗಳ ಅಕೌಂಟ್ ನೋಡಿದರೆ ಬಹುಶಃ ಹೈಕೋರ್ಟ್ ತೀರ್ಮಾನ ಆಗುವವರೆಗೂ 4-5-6 ವರ್ಷ ಆ ಪುಸ್ತಕಗಳು ನ್ಯಾಯ ಶಾಲೆಯಲ್ಲೇ ಇರಬೇಕಾದ ಪ್ರಮೇಯ ಬರುತ್ತದೆ ಎನ್ನಿಸುತ್ತದೆ. ನಾವು ಒಂದು ವೇಳೆ ಯಾವಾಗಲಾದರೂ ಸಾಕ್ಷ್ಯ ಸಾಬೀತ ಕೊಡಬೇಕಾದ ಪಕ್ಷದಲ್ಲಿ ಈ ಸಹಕಾರ ಸಂಘಗಳ ಕಾಗದ ಪತ್ರಗಳನ್ನು ಹಾಜರುಪಡಿಸಲು ನಿರ್ಬಂಧಮಾಡುವುದಕ್ಕೆ ಅವಕಾಶವಿಲ್ಲ. ಒಂದು ವೇಳೆ ಕೋರ್ಟಿನವರೇ ಏನಾದರೂ ಅದರ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಡುವುದಾದರೆ ತರಿಸುವುದಕ್ಕೆ ಒಂದು ಅವಕಾಶವನ್ನು ಈ ತಿದ್ದುಪಡಿಯಿಂದ ಕಲ್ಪಿಸಿಕೊಟ್ಟಿದ್ದಾರೆ.

ಸೆಕ್ಷನ್ (49) ಸರ್‌ಚಾರ್ಜ್. ಹಿಂದೆ ಇದ್ದಂಥ ಸೆಕ್ಷನ್ನಿಗೂ ಈಗಿರತಕ್ಕ ಸೆಕ್ಷನ್ನಿಗೂ ಎರಡು ಪದಗಳಲ್ಲಿ ಮಾತ್ರ ವ್ಯತ್ಯಾಸವಿದೆ ಎಂದು ನನಗೆ ಕಾಣುತ್ತದೆ. ಮೊದಲು "ಫ್ರಾಡ್ಯುಲೆಂಟ್ ಇಂಟೆನ್ಷನ್" ಅಂಡ್ "ಮಿಸ್‌ಅಪ್ರೋಪ್ರಿಯೇಷನ್" ಎಂದು ಈ ಎರಡು ತರಹ ಪದಗಳನ್ನು ಉಪಯೋಗಿಸಿದ್ದರು ; ಅವಕ್ಕೆ ಬದಲಾಗಿ "ಮಿಸ್ ಅಪ್ಲೈಡ್" "ರೀಟೇನ್ಡ್" ಎಂಬ ಪದಗಳನ್ನು ಉಪಯೋಗಿಸಿದ್ದಾರೆ. 'Misappropriation and fraudulent intention' ಪ್ರಕಾರ ದುಡ್ಡು ದುರ್‌ವಿನಿಯೋಗ ಅಥವಾ ದುರುಪಯೋಗವಾಗಿದ್ದ ಪಕ್ಷದಲ್ಲಿ ಆತ ತಪ್ಪಿತಸ್ಥ ಎಂಬುದು ಸಾಬೀತ್ತಾಗುವವರೆಗೂ ಕೆಲಸಮಾಡಿಸಿಕೊಂಡು, ಹಣ ಬರಮಾಡಿಕೊಳ್ಳಲಿಕ್ಕೆ ಅವಕಾಶವಿರುತ್ತದೆ. ಎಷ್ಟೋ ಜನ ಈ ರೀತಿ ಹಣವನ್ನು ದುರುಪಯೋಗಪಡಿಸಿಕೊಂಡು ಸಾರ್ವಜನಿಕರ ದುಡ್ಡನ್ನು ನುಂಗಿಹಾಕಿದ್ದರೂ ಕೂಡ ನಮ್ಮ ಸಹಕಾರ ಸಂಘಗಳಲ್ಲಿ ಕೆಲಸಮಾಡುತ್ತಲೇ ಇದ್ದಾರೆ. ಆ ರೀತಿ ಇರತಕ್ಕದ್ದು ಸರಿಯಲ್ಲ, ಅವರು ಸರಿಯಾದ ಲೆಕ್ಕಪತ್ರಗಳನ್ನಿಡುವುದಿಲ್ಲ ಎಂಬ ದೃಷ್ಟಿಯಿಂದ ಈ ಎರಡು ಪದಗಳನ್ನು ಉಪಯೋಗಿಸಿಕೊಂಡು ಆ ಸಹಕಾರ ಸಂಘಗಳಲ್ಲಿರತಕ್ಕ ಅಧ್ಯಕ್ಷರು, ಉಪಾಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಯಾರೇ ಆಗಲಿ ಆ ಸಂಘದ ಹಣವನ್ನು ದುರುಪಯೋಗ ಮಾಡಿದ ಪಕ್ಷದಲ್ಲಿ ಅಥವಾ ತನ್ನ ಹತ್ತಿರ ಇಟ್ಟುಕೊಂಡಿದ್ದ ಪಕ್ಷದಲ್ಲಿ ಅಂಥವನು ತಪ್ಪಿತಸ್ಥ, ಅಂಥವನಿಂದ ಮೊಬಲಗನ್ನು ಬರಮಾಡಿಕೊಳ್ಳಬಹುದು ಎಂಬ ಒಂದು ಸೌಲಭ್ಯವನ್ನು, ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಒಂದು ದೃಷ್ಟಿಯಿಂದ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರಿಗೆ ಈ ಎಲ್ಲಾ ಅಧಿಕಾರಗಳನ್ನು ಕೊಡುವುದರಿಂದ ಈ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗುತ್ತಿರುವುದನ್ನು ನಿಲ್ಲಿಸುವುದಕ್ಕೂ ಮತ್ತು ಬರಬೇಕಾಗಿರತಕ್ಕ ಹಣವನ್ನು ವಸೂಲುಮಾಡಿಕೊಳ್ಳಲಿಕ್ಕೂ ಬಹಳ ಸಹಾಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಇನ್ನು ಸಬ್‌ಕ್ಲಾಸ್ (2) ರಲ್ಲಿ ರಿಜಿಸ್ಟ್ರಾರ್‌ರವರು ಮಾಡಿದ ಆಜ್ಞೆಯಮೇಲೆ ಸರ್ಕಾರದವರಿಗೆ ಅಪೀಲು ಹಾಕಿಕೊಳ್ಳುವುದಕ್ಕೆ ಅವಕಾಶವಿದೆ. ಇದರಲ್ಲಿ ಇನ್ನೊಂದುಪದ ಸೇರಿಸಬೇಕೆಂದು ನನ್ನ ಭಾವನೆ. ಅಪೀಲು ಹಾಕಿಕೊಳ್ಳುವುದಕ್ಕೆ ಎಷ್ಟು ದಿನದ ಅವಕಾಶ ಇದೆ ಎಂಬುದು ಈ ಬಿಲ್ಲಿನಲ್ಲಿ ನಮೂದುಮಾಡಿಲ್ಲ. ಎರಡು ಅಥವಾ ಮೂರು ತಿಂಗಳು ಎಂದು ಇದ್ದರೆ ಚೆನ್ನಾಗಿರುತ್ತದೆ ಎಂದು ನನಗೆ ಅನ್ನಿಸುತ್ತದೆ. ಈ ಮಸೂದೆ ಬಹಳ ಚೆನ್ನಾಗಿದೆ. ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. ಆದರೂ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕೆಂದು ತಿಳಿಸಿರುವುದರಿಂದ ಹೋಗಿ ಬಂದರೂ ಚಿಂತೆಯಿಲ್ಲ. ಈ ಮಸೂದೆ ಅಂಗೀಕಾರ ಮಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ ಎಂದು ಹೇಳಿ ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).— ಸ್ವಾಮಿ, ಈಗ ಸುಮಾರು 50 ವರ್ಷಗಳಿಂದ ಈ ಸಹಕಾರ ಸಂಘಗಳು ಕೆಲಸಮಾಡುತ್ತಾ ಇವೆ. ಆದರೆ ಈಗ ಇವು ಸಮರ್ಪಕವಾಗಿ ಕೆಲಸಮಾಡದೇ ಹೋಗಿರುವ ಪ್ರಸಂಗ ಬಂದಿದ್ದರೆ ಸಂಪೂರ್ಣ ಸ್ವಾಮ್ಯವನ್ನು ಸಾರ್ವಜನಿಕರಿಗೆ ಕೊಡದೇ ಹೋದದ್ದೇ ಇದಕ್ಕೆ ಕಾರಣ ಎಂದು ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರವರು ತಿಳಿಸಿದರು. ಅವರು ಈಗ ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಈ ಸಹಕಾರ ಸಂಘಗಳು 50 ವರ್ಷಗಳಿಂದ ಕೆಲಸಮಾಡಿ ಇವೊತ್ತು ಬಹಳ ಅಸಮರ್ಪಕವಾದ ಪರಿಸ್ಥಿತಿಯಲ್ಲಿ ಕೆಲಸಮಾಡುತ್ತಾ ಇದ್ದರೆ ಅದಕ್ಕೆ ಮೂಲ ಕಾರಣ ಏನು ಎಂಬುದನ್ನು ಅವರು ಹೇಳಲಿಲ್ಲ. ಈಗ ತಂದಿರತಕ್ಕ ತಿದ್ದುಪಡಿ ಇಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಿ, ಸಹಕಾರ ಸಂಘಗಳು ಸಡಿಲವಾಗಿ ಬೀಳದೆ, ಸುಭದ್ರವಾದ ಸಹಕಾರ ಸಂಘಗಳಾಗಿ ಬಹಳ ಯಶಸ್ವಿಯಾಗಿ ಬೆಳೆಯಲಿ ಎಂಬ ಸದುದ್ದೇಶದಿಂದ ತಂದಿರತಕ್ಕದ್ದು. ಇದರಲ್ಲಿ ಅಡಕವಾಗಿರತಕ್ಕಂಥ ಪ್ರತಿಯೊಂದು ಕ್ಲಾಸನ್ನೂ ತೆಗೆದುಕೊಂಡು ಮಾನ್ಯ ಸದಸ್ಯರು ಎಷ್ಟುಮಟ್ಟಿಗೆ ಅದು ಸಹಾಯಕವಾಗಿದೆ ಎಂಬುದನ್ನು ತೋರ್ಪಡಿಸಿದ್ದಾರೆ. ಆದ್ದರಿಂದ ನಾನು clause by clause ತೆಗೆದುಕೊಂಡು ಪುನಃ ಹೇಳಿ, ಪುನರುಕ್ತಿಮಾಡಲಿಕ್ಕೆ ಇಷ್ಟಪಡುವುದಿಲ್ಲ. ಈ ಸಹಕಾರ ಸಂಘಗಳು ಇವೊತ್ತಿನವರೆಗೂ ಏನು ಕೆಲಸಮಾಡಿಕೊಂಡು ಬಂದಿವೆ ಮತ್ತು ಈಗ ಯಾವ ಸ್ಥಿತಿಯಲ್ಲಿವೆ ಎಂಬುದಕ್ಕೆ ಉದಾಹರಣೆಯಾಗಿ, ಸಹಕಾರ ಸಂಘಗಳೆಲ್ಲಕ್ಕೂ ಕೂಡ ಮೂಲಾಧಾರವಾದ ಏಪೆಕ್ಸ್ ಬ್ಯಾಂಕಿನ ಸ್ಥಿತಿಗತಿಗಳು, ಅದರ ಕೆಲಸ ಕಾರ್ಯಗಳು, ಕಾರ್ಯಚಟುವಟಿಕೆ ಎಷ್ಟುಮಟ್ಟಿಗೆ ಇದೆ ಎಂಬುದನ್ನು ಅವರ ರಿಪೋರ್ಟಿನಲ್ಲಿರತಕ್ಕ ಒಂದು ಕ್ಲಾಸನ್ನು ನಾನು ಓದಿದರೆ ಈ ಸಭೆಗೆ ಅದರ ಸಹಕಾರ ತತ್ವ ಎಷ್ಟರಮಟ್ಟಿಗೆ ಕೆಳದರ್ಜೆಗೆ ಇಳಿದಿದೆ ಎಂಬುದು ಗೊತ್ತಾಗುತ್ತದೆ. ಅದರಲ್ಲಿ ಮಾನ್ಯ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರವರೂ ಕೂಡ ಕೆಲವು ಕಾಲ ಡೈರೆಕ್ಟರಾಗಿದ್ದರು ಎಂದು ನನಗೆ ಖಚಿತವಾಗಿ ತಿಳಿದು ಬಂದಿದೆ. ಏಪೆಕ್ಸ್ ಬ್ಯಾಂಕಿನ ಸಹಕಾರ ಸಂಘದ ವಾರ್ಷಿಕ ವರದಿಯ ಪ್ರಕಾರ ಒಟ್ಟು Bad Debts ಇರತಕ್ಕದ್ದು 9,12,233 ರೂಪಾಯಿಗಳು. ಅದಕ್ಕೆ ಈ ರೀತಿ ಹೇಳುತ್ತಾರೆ :—

> " The prospects of recovery of the above heavy arrears are indeed very very gloomy. The available assets of almost all these societies have already been sold and adjusted towards arrears and in the case of unlimited societies attempts are being made to levy contribution on the members. This is a difficult and complicated process involving much delay. It is however feared that nearly the whole of the amount due from these societies will have ultimately to be written off as bad debt."

ಸ್ವಲ್ಪ ಯೋಚನೆಮಾಡಿ. ಇದು ನಮ್ಮ ಕೋ-ಆಪರೇಟಿವ್ ಬ್ಯಾಂಕುಗಳಿಗೆಲ್ಲಾ ಆದರ್ಶವಾದಂಥ ಬ್ಯಾಂಕು. ಮೈಸೂರು ಸಂಸ್ಥಾನಕ್ಕೇ ಆದರ್ಶವಾದದ್ದು, ಬೆಂಗಳೂರು ಪಟ್ಟಣದಲ್ಲಿರತಕ್ಕದ್ದು. ಇದರ ಮೇಲ್ವಿಚಾರಣೆ ಸಂಸ್ಥಾನದ ಪ್ರಮುಖ ಜನರೆನಿಸಿದ ಕೋ-ಆಪರೇಟರ್ಸ್‌ನಿಂದ ನಡೆಯತಕ್ಕದ್ದಾಗಿದೆ. ಈ ಸಂಸ್ಥೆಯವರ ವಾರ್ಷಿಕ ವರದಿಯಲ್ಲಿ ಬರೆದಿರುವ ರೀತ್ಯಾ 10 ಲಕ್ಷ ರೂಪಾಯಿಗಳವರೆಗೂ Bad Debts ಇದೆ. ಇದರ ಬಂಡವಾಳ ಎಷ್ಟು ಎಂದರೆ 4 ಲಕ್ಷ 65 ಸಾವಿರ ರೂಪಾಯಿ. ಷೇರ್ ಕ್ಯಾಪಿಟಲ್ paid and not recovered 9,12,000+1,00,000. ಒಟ್ಟು 10 ಲಕ್ಷದ 12 ಸಾವಿರ ರೂಪಾಯಿ ಆಯಿತು.

> " This is another item of bad debt in the books of the Bank amounting to one lakh of rupees, representing accrued interest not realised but treated as profit in the previous years. For meeting these losses, a request has been made to Government to give a subsidy of five lakhs to the Bank."

(Extract from the Annual Report of the Apex Bank).

2 P.M.

ಇದರಲ್ಲಿ ಓವರ್ ಡ್ಯೂಸ್ ಎಷ್ಟೆಂದರೆ ಶೇಕಡ 24. ಒಟ್ಟು ಸಾಲ ಲೇವಾದೇವಿ ಮಾಡಿರುವುದು ಸುಮಾರು 40 ಲಕ್ಷ, ಅದರಲ್ಲಿ 10 ಲಕ್ಷ ಓವರ್ ಡ್ಯೂಸ್ ನಿಂತಿವೆ. ಸುಮಾರು 10 ಲಕ್ಷ ಬ್ಯಾಡ್ ಡೆಟ್ ವಜಾ ಮಾಡುವುದು ಇದೆ. ಇದಕ್ಕೆ ಉಪಾಯ " ಸ್ವಾಮಿ, ನಾವೆಲ್ಲಾ ಬೇಜವಾಬ್ದಾರಿ ಕೆಲಸ ಮಾಡಿದ್ದೇವೆ, ಹತ್ತು ಲಕ್ಷ ಖೋತಾಬಂದಿದೆ, ಸರ್ಕಾರದಿಂದ ಐದು ಲಕ್ಷ ರೂಪಾಯಿಗಳ ಸಬ್ಸಿಡಿ ಕೊಡಿ" ಎಂದು ಕೇಳುತ್ತಿದ್ದಾರೆ. ಈ ಬ್ಯಾಂಕಿನ ಗತಿಯೇ ಇಷ್ಟು ಮಟ್ಟಿಗಿರುವಾಗ ಹಳ್ಳಿಗಳಲ್ಲಿರುವ ಸಣ್ಣಪುಟ್ಟ ಬ್ಯಾಂಕುಗಳ ಗತಿಯೇನು, ಸೊಸೈಟಿಗಳ ಹಿನ್ನೆಲೆಯೇನು ಎಂಬುದನ್ನು ಅಧ್ಯಕ್ಷರೇ ಊಹಿಸಿಕೊಳ್ಳಬಹುದು. ಈ ಅಪೆಕ್ಸ್ ಬ್ಯಾಂಕ್ ಬ್ಯಾಡ್ ಡೆಟ್ ಫಂಡ್ ಹತ್ತು ಲಕ್ಷ ರೂಪಾಯಿತ್ತು, ಈಗ ಒದಗಿಸಿರುವುದು ಒಟ್ಟು 16 ಲಕ್ಷ ರೂಪಾಯಿ. What a miserable state of affairs, Mr. Speaker! ಹೀಗಿರುವಾಗ ಈ ಬಿಲ್ಲಿಗೆ ಆಕ್ಷೇಪಣೆ ಮಾಡುತ್ತಿದ್ದಾರೆ. ಇಷ್ಟೆಲ್ಲಾ ದುಸ್ಥಿತಿಯಲ್ಲಿರುವ ಬ್ಯಾಂಕುಗಳನ್ನು ಉತ್ತಮಪಡಿಸಬೇಕೆಂದು ಸರ್ಕಾರದವರು ತಂದಿರುವ ಈ ತಿದ್ದುಪಡಿ ಮಸೂದೆಯನ್ನು ಇದು ಬೇಡವೆಂದರೆ ಎಷ್ಟುಮಟ್ಟಿಗೆ ಜವಾಬ್ದಾರಿಯಿಂದ ಹೇಳಿದರೆಂಬುದನ್ನು ಯೋಚನೆ ಮಾಡಿ. 50 ವರ್ಷಗಳಿಂದ ಎಷ್ಟೋ ಸರ್ಕಾರಗಳು ಕೆಲಸ ಮಾಡಿದವು, ಎಷ್ಟೋ ಸಾರ್ವಜನಿಕ ಮುಖಂಡರು ಕೆಲಸ ಮಾಡಿದರು. ಆದರೆ ದುಸ್ಥಿತಿಯಲ್ಲಿರುವ ಈ ಸಂಘಗಳ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು, ಸಾರ್ವಜನಿಕರಿಗೆ ಸ್ಥಾನ ಭದ್ರತೆಯಿರಬೇಕು, ಸಹಕಾರ ತತ್ವದಲ್ಲಿ ನಂಬಿಕೆಯನ್ನುಂಟುಮಾಡಬೇಕು ಎಂಬ ಕೀರ್ತಿ ಈ ದಿವಸ ಈ ಮಸೂದೆಯನ್ನು ತಂದ ಈ ಸರ್ಕಾರಕ್ಕೆ ಬಂದಿದೆ. ಹೀಗಿರುವಾಗ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಮಾಡಿದ ಭಾಷಣ ನೋಡಿದರೆ ವಾಸ್ತವವಾಗಿಯೂ ಸರ್ಕಾರದವರು ಈ ತಿದ್ದುಪಡಿ ಮಸೂದೆಯನ್ನು ತಂದು ಸಹಕಾರ ತತ್ವಕ್ಕೇ ಧಕ್ಕೆ ತರುತ್ತಿದ್ದಾರೆ ಎಂದು ಭಾಸವಾಯಿತು. ಆದರೆ ಅಂಕಿ ಅಂಶ ನೋಡಿದಮೇಲೆ ಶ್ರೀ ಶ್ರೀನಿವಾಸಯ್ಯಂಗಾರ್‌ರವರಿಂದ ಮಾಡಲ್ಪಟ್ಟ ಭಾಷಣದ ಬಂಡವಾಳ ಎಷ್ಟರಮಟ್ಟಿಗಿದೆ ಎಂಬುದು ಗೊತ್ತಾಯಿತು.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಅಂಕಿ ಅಂಶಗಳನ್ನು ಮುಂದಿಟ್ಟರೆ ಅದು ವ್ಯಕ್ತವಾಗುತ್ತದೆ.

ಅಪೆಕ್ಸ್ ಬ್ಯಾಂಕಿನ ಆಡಿಟ್ ರಿಪೋರ್ಟಿನ ಇನ್ನೊಂದು ಪೇಜಿನಲ್ಲಿರುವ ಪ್ರತಿಯೊಂದು ವಾಕ್ಯವನ್ನೂ ತಾವು ಕೇಳಬೇಕು. ಇದು ಬಹಳ ಪ್ರಾಮುಖ್ಯವಾದುದು. ಆ ಆಡಿಟ್ ರಿಪೋರ್ಟಿನ ಲೆಡ್ಜರ್ ಫೋಲಿಯೋ 90/2ರಲ್ಲಿ "This Institution seems to have been registered as R. C. S. No. 1598, dated 15th June 1949" ಎಂದಿದೆ. ಇದು ಕಂಟೋನ್ಮೆಂಟಿನಲ್ಲಿರುವ ಟ್ರೇಡ್ಸ್ ಕಾರ್ಪೊರೇಷನ್ ಸೊಸೈಟಿಗೆ ಸಂಬಂಧಪಟ್ಟದು. ಈ ಸೊಸೈಟಿಯು ಅಪೆಕ್ಸ್ ಬ್ಯಾಂಕಿಗೆ 15-6-1949ರಲ್ಲಿ ರಿಜಿಸ್ಟರಾಯಿತು. The then Registrar of Co-operative Societies in Mysore was its *ex-officio* President. The said institution applied for Membership of the Apex Bank on 20th June 1949. ಈ ಸೊಸೈಟಿಯು ಅಪೆಕ್ಸ್ ಬ್ಯಾಂಕಿನ ಮೆಂಬರಾಗಿ 10-7-1949ರಲ್ಲಿ ಅಡ್ಮಿಟ್ ಆಯಿತು. 15-6-1949ರಲ್ಲಿ ರಿಜಿಸ್ಟ್ರೇಷನ್ ಆಯಿತು, ಅಪೆಕ್ಸ್ ಬ್ಯಾಂಕ್ ಮೆಂಬರಾಗಲು ಅರ್ಜಿ ಹಾಕುವುದಕ್ಕೆ ಮುಂಚೆ ಆ ದಿವಸವೇ the said *ex-officio* President of the said institution sent a loan application for Rs. 50,000. 15-6-1949ರಲ್ಲಿ ರಿಜಿಸ್ಟರಾಗಿ ಅದೇ ದಿವಸ ಸಾಲಕ್ಕೆ ಅರ್ಜಿ ಹಾಕಿದೆ. ಇನ್ನೂ ಮೆಂಬರಾಗದೇ ಹೋಗಿದ್ದರೂ, 20-7-1949ರಲ್ಲಿ ಮೆಂಬರಾದರೂ, ಮೆಂಬರಾಗುವುದಕ್ಕೆ ಮೊದಲೇ ರಿಜಿಸ್ಟರಾದ ದಿನವೇ 50 ಸಾವಿರ ರೂಪಾಯಿಗಳ ಸಾಲಕ್ಕೆ ಅಪೆಕ್ಸ್ ಬ್ಯಾಂಕಿಗೆ ಅರ್ಜಿ ಹಾಕಿದರು. The then Secretary of the Bank who was an Assistant Registrar lent by the Department of Co-operation, for obvious reasons, without getting the case worked out by the case worker, put up a note on 16th June 1949, recommending for the sanction of the loan. 15ನೆಯ ತಾರೀಖು ರಿಜಿಸ್ಟರಾಗಿ ಆ ದಿವಸ ಅರ್ಜಿ ಕೊಟ್ಟರೆ 16ನೆಯ ತಾರೀಖೇ ಅದಕ್ಕೆ ಶಿಫಾರ್ಸು ಮಾಡಿದರು. ಆ ಸಂಸ್ಥೆಯು ಅಪೆಕ್ಸ್ ಬ್ಯಾಂಕ್ ಮೆಂಬರು ಹೌದೇ, ಅಲ್ಲವೇ ಎಂದು ವಿಚಾರ ಮಾಡದೆ, ಅಪ್ಲಿಕೇಷನ್ ಕೊಟ್ಟ ದಿವಸ ಸಂಸ್ಥೆಯು ಷೇರು ಬಂಡವಾಳಕ್ಕೆ ಎಷ್ಟು ಹಣ ಕೊಟ್ಟಿದೆ ಎಂಬುದನ್ನು ತಿಳಿದುಕೊಳ್ಳದೆ ಅರ್ಜಿ ಹಾಕಿರುವ ಸೊಸೈಟಿ ಅಥವಾ ಸಂಸ್ಥೆಯ ಅಸೆಟ್ಸ್ ಮತ್ತು ಲಯಬಿಲಿಟೀಸ್ ಎಷ್ಟು ಎಂದು ತಿಳಿದುಕೊಳ್ಳದೆ, ಅಂಥ ಸಂಸ್ಥೆ ಇದೆಯೆ, ಇಲ್ಲವೆ ಎಂದು ಪರಿಶೀಲಸದೆ, whether the said *ex-officio* President has been authorised by the General Body of the Institution to raise the funds ಎಂಬುದನ್ನು ವಿಚಾರಿಸದೆ, ಸಾಲ ಹೀಗೆ ತೆಗೆದುಕೊಳ್ಳಲು ಜನರಲ್ ಬಾಡಿ ಅಧಿಕಾರ ಕೊಟ್ಟಿದೆಯೆ ಇಲ್ಲವೆ ಎಂದು ನೋಡದೆ, ಶಿಫಾರ್ಸು ಮಾಡಿದ್ದಾರೆ. Meanwhile, a recommendation for sanctioning a sum of Rs. 75,000 to the said Institution was received from the then Registrar.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಇಲಾಖೆ ಎಷ್ಟುಮಟ್ಟಿಗೆ ಕೆಲಸಮಾಡುತ್ತಿದೆಯೆಂದು ನೀವು ಹೇಳುತ್ತಿದ್ದೀರಿ. ನನಗೂ ಅದೇ ಅಭಿಪ್ರಾಯವಿದೆ. ಅಂಥದಕ್ಕೆ ಹೆಚ್ಚು ಅಧಿಕಾರ ಕೊಟ್ಟರೇನಾಗುತ್ತದೆ ಎಂಬುದನ್ನು ಹೇಳಿ.

Sri H. M. CHANNABASAPPA.—I am very happy that you have come. (*Laughter*). 50 ಸಾವಿರ ರೂಪಾಯಿಗಳಿಗೆ ಅರ್ಜಿ ಹಾಕಿರುವಾಗ 75 ಸಾವಿರ ರೂಪಾಯಿಗಳ ಸಾಲಕ್ಕೆ ಶಿಪಾರ್ಸಾಗಿದೆ. Meanwhile a recommendation for sanctioning a sum of Rs. 75,000 to the said Institution was received from the then Registrar, who was also *Ex-officio* President of the institution from his camp at Shimoga, which seems to have not been registered in the Bank's Registers. ಆ ಕಾಗದ ಬಂದು ಹೋಗಿರುವುದಕ್ಕೆ ಬ್ಯಾಂಕಿನ ರಿಜಿಸ್ಟರಿನಲ್ಲಿ ದಾಖಲೆಯೇ ಇಲ್ಲ. The matter was pushed through and a loan of Rs. 50,000 was sanctioned and a sum of Rs. 30,000 paid on 20th June 1949. ಮೆಂಬರ್‌ಷಿಪ್‌ಗೆ ಅಪ್ಲಿಕೇಷನ್ ಕೊಟ್ಟ ದಿವಸವೇ 30 ಸಾವಿರ ರೂಪಾಯಿಗಳನ್ನು ಕೊಟ್ಟೇಬಿಟ್ಟರು. ಸಾಲಕ್ಕೆ ಅರ್ಜಿಕೊಟ್ಟ ಐದು ದಿವಸಗಳೊಳಗಾಗಿ ಸಾಲ ಮಂಜೂರು ಮಾಡಿಕೊಟ್ಟರು. Further, an additional loan of Rs. 25,000 was sanctioned within seventeen days of sanctioning of the first loan. It is therefore clearly seen that the then Registrar of Co-operative Societies who has to enforce the rules and regulations of the Department, pushed through the loan against grave irregularities and the whole amount seems to be doubtful of recovery. My friends oppose a measure which has been brought forward to put down such kind of irregularities.

Sri Mulka GOVINDA REDDY (Chitaldrug).—That is an officer of the Government; we all agree to that indictment.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನ್-ಅಫಿಷಿಯಲ್ಸ್ ಕೈಗೆ ಅಧಿಕಾರ ಕೊಟ್ಟರೆ ಕೆಲಸ ಚೆನ್ನಾಗಿ ನಡೆಯುತ್ತದೆ ಎಂಬ ಅಭಿಪ್ರಾಯವಿರಬಹುದು. ಅಪೆಕ್ಸ್ ಬ್ಯಾಂಕಿಗೆ ನಾನ್ ಅಫಿಷಿಯಲ್ ಪ್ರೆಸಿಡೆಂಟೇ ಇದ್ದರು. ಅವರ ಹೆಸರು ಹೇಳುವುದು ಅನಗತ್ಯ. ಆ ಪ್ರೆಸಿಡೆಂಟೇ ಇನ್ನೊಂದು ಅಪೆಕ್ಸ್ ಬ್ಯಾಂಕ್ ಮೆಂಬರಾಗಿದ್ದ ಸೊಸೈಟಿ ಸೆಕ್ರೆಟರಿ. He obtained 20,000 rupees as loan from the Apex Bank to this Society. He is the President there and Secretary here. ಆ ಸಾಲಕ್ಕೆ ಶೇಕಡ ಆರರಂತೆ ಬಡ್ಡಿ. ಖಾಸಗೀ ಸದಸ್ಯರಾದ ಒಬ್ಬ ಮಹನೀಯರು ಅಪೆಕ್ಸ್ ಬ್ಯಾಂಕಿನ ಚುನಾಯಿತ ಅಧ್ಯಕ್ಷರು. ಅದೇ ಅಧ್ಯಕ್ಷರು ರಸಲ್ ಮಾರ್ಕೆಟ್ ಸೊಸೈಟಿ ಲಿಮಿಟೆಡ್ ಎಂಬ

ಇನ್ನೊಂದು ಸೊಸೈಟಿಗೂ ಅಧ್ಯಕ್ಷರು. ಆ ಸೊಸೈಟಿಯ ಅಧ್ಯಕ್ಷರಾಗಿ ಅದಕ್ಕೆ ಸಾಲ ಕೇಳಿ ಬ್ಯಾಂಕಿನಿಂದ 20 ಸಾವಿರ ರೂಪಾಯಿಗಳನ್ನು ಶೇಕಡ ಆರರ ಬಡ್ಡಿಯಂತೆ ಮಂಜೂರು ಮಾಡಿದರು. ಮಂಜೂರಾದ ಮೇಲೆ ಶೇಕಡ ಎರಡರಂತೆ ಅವರು ತೆಗೆದುಕೊಂಡರು. ಹೀಗೆ ಸಾರ್ವಜನಿಕ ಮುಖಂಡರ ಕೈಗೆ ಸಂಪೂರ್ಣವಾಗಿ ಅಧಿಕಾರ ಕೊಟ್ಟಿದ್ದರೆ ಬಹುಶಃ 50 ವರ್ಷಗಳಲ್ಲಿ ಒಂದು ಸೊಸೈಟಿಯೂ ಈ ದೇಶದಲ್ಲಿ ಇರುತ್ತಿರಲಿಲ್ಲ.

ಆ ಮೇಲೆ ಟ್ರೇಡ್ಸ್ ಕಾರ್ಪೊರೇಷನ್ ಸೊಸೈಟಿ ಆಡಿಟ್ ರಿಪೋರ್ಟ್ ಮೇಲೆ, everything has been done according to rules and law. The loan has been duly sanctioned by the Board. ಇನ್ನು ಬೋರ್ಡಿನಲ್ಲಿರುವವರೆಲ್ಲಾ ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಶ್ರೀನಿವಾಸಯ್ಯಂಗಾರ್‌ರವರಂಥ ನಾನ್ ಅಫಿಷಿಯಲ್ಸ್. ಇಂಥವರು ಬೋರ್ಡಿನಲ್ಲಿದ್ದು ಈ ಸಾಲ ಮಂಜೂರು ಮಾಡಿರುವುದು. ಇದನ್ನು ಯೋಚನೆ ಮಾಡಿ.

Then, this definition of 'agriculturist' raises some difficulty. I would like to know from the Hon'ble Minister in the course of his reply, whether he has considered the effect of the word 'agriculturist'. 'Agriculturist' is a word which has been defined in various laws, the most important of them being the Mysore Agriculturists' Act. Here, this word is not separately defined. Therefore, we must naturally take it as stated in the General Clauses Act, namely, where a word used in a particular Statute is not defined, the general law is, it will come into effect as it is defined elsewhere. 'Agriculturist' is defined in the Mysore Agriculturists' Act in a particular manner. Is it what is contemplated ? What is more is, it is said, "......a society of which the majority of the members are agriculturists......". Now, I ask, is it to the advantage of the co-operative movement to draw this definition ? In a co-operative society all sorts of people will be there ; merchants will be there, traders will be there, agriculturists, Government employees, all who own lands will be there. There is an attempt here to draw distinction between an urban area and a rural area. Even in the rural area, different avocations that the people have, is going to be another basis of division. I am not going to enter into a controversy whether that kind of legislation is constitutionally right or not ; but I must give my misgiving and say, this is not to the advantage. That is another suggestion that I want this House to consider.

The next question I want to deal with—I do not want to take up all clauses of the Bill at this stage because I shall reserve my remarks on them after the Bill emerges from the Select Committee—is the role of the Registrar. I have absolutely no quarrel with you in clothing the Registrar with such wide powers. But my difficulty is this. If one looks at the several clauses of the Bill, one will see that the work of the Registrar will become so marked and so extensive that I should, really congratulate that happy person who can hold such wide powers ; if he has the talent, the time and the taste for such work, if there is such a superhuman being, nobody would be more happy than my humble self to congratulate him. But it is not possible to have such a person. Just now, from the wonderful instances given by Sri H. M. Channabasappa of what one Registrar in 1949 did in respect of one Apex Bank and in respect of only two transactions in the metropolis of Bangalore, if the Registrar were to behave like that here, you want to make the Registrar an every-day officer of every society, according to this Bill. Every clause in this amending Bill will bring in the Registrar and his voice will be the final one. No court can question it. Even the civil courts cannot interfere. I want to know why does this Government think that their Registrar, that superhuman individual, should really exercise all these powers ? Sri V. Masiyappa said that we should not suspect that the Registrar would not be doing his duty properly. I have no such suspicion. So far, I have always been of the view that our officers have always maintained certain standards of rectitude and conduct which certainly have to extort the admiration of everybody and my humble self is one of them. But is it possible to have such a superhuman being who can be clothed with such wide powers ? It is not possible. And what is more, in one breath you want the Magistrate to come into the picture and in another breath you want the civil courts to go. I do not want any person, be he a person in the street—he may have a legitimate good case to offer—to be denied the opportunity of any civil process in the country. It may be that some persons make some money, because lawyers on account of their profession have to. I must concede that. But so far as I am concerned, it is not the lawyer instinct in me that really propels me to oppose this. After all I know how my lawyer instinct generally works itself up. But why should you curtail the normal civil process available in the country ?

(SRI K. PATTABHIRAMAN.)

I do not know for what purpose. You seem to have placed so much of confidence in the wisdom and wonderful powers of your own Registrar with all the experience of 1949 referred to by Sri H. M. Channabasappa that you want to set at naught the civil court process. The entire judicial process, the entire judicial machinery of the State you are not going to trust? I am afraid it looks to me that the executive type of the Government which you want to run is something that needs to be shattered. I feel my allegiance is somewhat out of the gear. You want to take away the ordinary civil court process and you want even the Magistrate to be your handmaid for your collection. I feel that the very approach as it were is something which I cannot understand.

There is one other suggestion made with reference to the powers of supersession in the course of the debate. My objection to your clothing the Registrar or the Government with powers of supersession are not based on merely academic considerations. I am always a practical idealist. I am prepared to agree if, in certain contingencies, in order to meet a situation, you clothe the Registrar with certain powers. But I cannot understand such wide powers being given to the Registrar to supersede the society. Non-official life is just growing. We must have a number of experiments made very soon. Great strides have to be made if at all we are really serious about the co-operative movement. My friend was saying that officialization cannot be considered to be against the co-operative movement. I am afraid I am one of those who believe that it is officialization of this movement that has retarded the progrees of the movement in Mysore. Possibly, in fact, in other States, particularly in Madras the movement is better. The seven taluks of Bellary are with us now. I am happy that the Minister in charge of the protfolio hails from these seven taluks. Here is the rest of the State. I ask you, not by way of interrogation but at least to convince myself; if you really feel the way in which these two areas are administered, so far as the progress of the movement is concerned, you will find that the movement in the seven taluks is much better than in the rest of the State. I am convinced from the reports I have, I have no reason to disbelieve the versions in these reports, and I am also told, that the working of the societies in those seven taluks, compared man to man and institution to institution, fares much better, far better than in the rest of the State. I feel therefore that the powers of supersession as contemplated are unnecessary. Sri Srinivasa Iyengar has made some very pertinent observations about this and I request the Hon'ble Minister to consider the suggestion. As the law now stands, when there is a case made out for supersession, you generally ask the general body to meet, exercise its mind, have an opportunity to consider the position and then take the necessary action. Even then if it does not correct itself, there are other stages and ways of setting the matter right. But you now want to take away every thing and make the Registrar a powerful man. I am not using the word democratic or undemocratic. I know the democratic body as yours will feel rather tilted or jolted if from this side of the House the words are used, because there seems to be a feeling that democracy is all your copyright and mobocracy is all the monopoly of others. (*Hear, hear!*) So long as that feeling persists in you, there is no use in my saying all these. Nevertheless I want you to understand this. I will not say more; I will reserve my remarks on the several clauses. Even at this stage I do not know how far I have carried conviction in you because I do not see any physical change in the Hon'ble Minister in charge of Co-operation and the smile of the Chief Minister only adds to my difficulty. (*Laughter*) However, let me say with a sincere feeling,—I do not merely say this with a view to gas off or show myself off,—that it is not too late for you to consider whether the time has not come when consistent with our requirements and with our finance we should not reconsider the whole matter, examine the possibilities of the co-operative movement, find out how far and in what manner or in what measure we could suggest improvements and take the next important forward strides. Such a thing is overdue. Until then I feel that this object of providing some safeguard for the prompt recovery of the moneys that may come to you from the Reserve Bank should not be the sole criterion that should entail such an important amendment as this to make the co-operative societies, bad as they are, worse even by making them merely money-lending institutions. On the top of it comes the idea that the State of Mysore wants to join the category of money-lenders as shareholders in the societies. I cannot have a better commentary and an eloquent commentary to find out the intentions of the Government. The whole thing, if I may say, has let the cat out of the bag when the Government comes forward and says 'We are going to be shareholders of societies'. Therefore I would suggest and appeal to the Minister, let us bifurcate the two, bring forward a Bill for the district and taluk banks and introduce Joint Stock principles, make it as fool-proof as possible. Let the agriculturist know that the money that you want to give him is on loan and not a co-operative gift. If the money is to be distributed, even now it would not be too late for you to consider apportioning all these loans to separate banks. So far as co-operative societies are concerned, if such difficulties as you have referred to are there, bring forward comprehensive legislation, after your enquiry is complete, so that we may really make good and substantial progress in the advancement of co-operative movement.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಮಸೂದೆಯ ಮೇಲೆ ವಿರೋಧಪಕ್ಷದ ಪರವಾಗಿ ನಮ್ಮ ಮಿತ್ರರು ಆಗಲೇ ಕೆಲವು ಸಲಹೆಗಳನ್ನು ಕೊಟ್ಟಿರುತ್ತಾರೆ. ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ನನ್ನ ಮಿತ್ರರಾದ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್‌ರವರು ಮಾಡಿದ ಭಾಷಣದ ಕೆಲವು ವಿಷಯಗಳನ್ನು ವಿಮರ್ಶಿಸಲು ತೊಡಗಿ—ಈಗ ಅವರು ಇಲ್ಲಿದ್ದಿದ್ದರೆ ಚೆನ್ನಾಗಿತ್ತು—ಅತಿ ಭಯಂಕರ ಭಾಷಣಮಾಡಿ ಈ ತಿದ್ದುಪಡಿ ಮಸೂದಾ ಕಾನೂನಿನಲ್ಲಿ ಅಡಗಿರತಕ್ಕ ಕೆಲವು ಅಂಶಗಳನ್ನು ಅತಿ ತೀವ್ರವಾಗಿ ವಿರೋಧಿಸುವುದಕ್ಕೆ ನಮಗೆ ಸಾಧನ ಸಾಮಾಗ್ರಿಗಳನ್ನು ಒದಗಿಸಿಕೊಟ್ಟಿದ್ದಾರೆ. ಆ ಪ್ರಯುಕ್ತ ಈಗ ನಾನು ಮಾತನಾಡಬೇಕಾಗಿ ಬಂದಿದೆ. ಸಹಕಾರ ಸಂಘ ಚೆನ್ನಾಗಿ ಬೆಳೆಯಬೇಕಾದರೆ, ಅದರ ತತ್ವವನ್ನು ಪರಿಪೂರ್ಣವಾಗಿ ಜನರು ತಿಳಿಯಬೇಕಾದರೆ ಅದರ ಮೂರು ಅಂಗಗಳು ಸಮರ್ಪಕವಾಗಿರಬೇಕು. ಒಂದನೆಯದು ಸಂಘದ ಸದಸ್ಯರು, ಎರಡನೆಯದು ಸಂಘದ ಮೇಲ್ವಿಚಾರಣೆ ನೋಡಿಕೊಳ್ಳತಕ್ಕ ಅಧಿಕಾರ ವರ್ಗ, ಮೂರನೆಯದು ಸದಸ್ಯರ ಮತ್ತು ಅಧಿಕಾರ ವರ್ಗದ ಮೇಲೆ ವಿಚಾರ ಮಾಡತಕ್ಕ ಉತ್ತಮ ಸರ್ಕಾರ. ಯಾವ ಸದಸ್ಯನು ಸಹಕಾರ ಸಂಘದಿಂದ ಸಾಲ ಪಡೆದು, ಅದನ್ನು ವಾಪಸು ಕೊಡುವ ವಿಚಾರದಲ್ಲಿ ಕಾನೂನು ಕಟ್ಟಳೆಯನ್ನು ಮೀರಿ ವರ್ತಿಸಿ ಕೊಡದೇ ಸತಾಯಿಸುತ್ತಾನೆಯೋ ಅಂಥ ಸದಸ್ಯನ ವಿಚಾರದಲ್ಲಿ ಕಾನೂನು ಪ್ರಯೋಗ ಮಾಡಬೇಕಾದುದು ಅತ್ಯಗತ್ಯ. ಸಾಮಾನ್ಯವಾಗಿ ಈಗ ಸದಸ್ಯರ ಮನೋಭಾವ ಹೇಗೆ ಬೆಳೆಯುತ್ತಿದೆಯೆಂದರೆ, ಎಲ್ಲಿ ಸಾಲ ತೆಗೆದುಕೊಳ್ಳಲು ಅವಕಾಶ ಸಿಕ್ಕುತ್ತದೆಯೋ ಅದನ್ನು ತೆಗೆದುಕೊಳ್ಳುವುದು, ಪುನಃ ಅದನ್ನು ತೀರಿಸುವ ಹವ್ಯಾಸಕ್ಕೇ ಹೋಗದೆ ತಾತ್ಸಾರ ಮನೋಭಾವದಿಂದಿರುವುದು—ಈ ರೀತಿ ವರ್ತನೆ ಸಹಕಾರ ಸಂಘದ ಬೆಳವಣಿಗೆಗೆ ಯೋಗ್ಯವಾದುದಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಆದರೂ ಈ ದಿನ ನಮ್ಮ ದೇಶದಲ್ಲಿ ಸಹಕಾರ ಸಂಘಗಳು ಬಹಳ ಕೆಳಮಟ್ಟಕ್ಕೆ ಹೋಗಿರುವುದು ಕಾನೂನು ಲೋಪದೋಷದಿಂದ ಅಲ್ಲ ಎಂದು ನಾನು ತಿಳಿಯುತ್ತೇನೆ. ಹಿಂದೆ ಶ್ರೀ ಟಿ. ಮರಿಯಪ್ಪನವರು ಮಂತ್ರಿಮಂಡಲದಲ್ಲಿದ್ದ ಕಾಲದಲ್ಲಿ ಸಮಗ್ರ ಸಹಕಾರ ಸಂಘಗಳನ್ನು ಏರ್ಪಡಿಸಿದ್ದರು. ಅವು ಪ್ರಾರಂಭದಲ್ಲಿ ಹುರುಪಿನಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದು ಇಂದು ಜನರ ಟೀಕೆಗೆ ಗುರಿಯಾಗಿರುವುದು ಸರ್ವರಿಗೂ ವೇದ್ಯವಾಗಿದೆ. ಅದಕ್ಕೆ ಕಾರಣ, ಕಾನೂನಿನ ಪ್ರಕಾರ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳದೆ ಇರುವುದು. ಆ ವಿಚಾರದಲ್ಲಿ ಸರ್ಕಾರದವರು ತಮ್ಮ ಸೋಲನ್ನು ಒಪ್ಪಿಕೊಂಡಿದ್ದಾರೆಂದೇ ನಾನು ಭಾವಿಸುತ್ತೇನೆ. ಕಂಟ್ರೋಲ್ ಕಾಲದಲ್ಲಿ, ಯಾವಯಾವ ಸಾಮಾಗ್ರಿಗಳ ಮಾರಾಟ ಕಂಟ್ರೋಲ್ ವ್ಯವಸ್ಥೆಗೆ ಒಳಪಟ್ಟಿದ್ದಿತೋ ಅಂಥವುಗಳನ್ನು ಸಹಕಾರ ಸಂಘಗಳಿಂದ ಮಾರಾಟ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದರು. ಈ ಬಗ್ಗೆ ಹಣದದುರುಪಯೋಗ ಎಷ್ಟೋ ಸಂದರ್ಭಗಳಲ್ಲಿ ಆಗಿ, ಕಾನೂನು ಬಲದಿಂದ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಸರ್ಕಾರಕ್ಕೆ ಅವಕಾಶವಿದ್ದರೂ ಸಹ ಕೈಗೊಳ್ಳದೆ, ಸಹಕಾರ ಸಂಘಗಳು ಮುಚ್ಚಲ್ಪಡುವುದಕ್ಕೆ ಅವಕಾಶ ಕೊಟ್ಟಿರತಕ್ಕ ಸನ್ನಿವೇಶ ಹಲವಾರು ನಮ್ಮ ಕಣ್ಣುಮುಂದಿವೆ.

4-30 P.M.

ಇಂಥ ಕಾನೂನುಗಳನ್ನು ಬಹಳ ಸಡಿಲವಾದ ರೀತಿಯಲ್ಲಿ ಪ್ರಯೋಗಮಾಡಿ ಯಾರು ಹಣವನ್ನು ದುರುಪಯೋಗ ಮಾಡಿಕೊಂಡರೋ ಅಂಥವರ ಮೇಲೆ, ಸರಿಯಾದ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದ ಪ್ರಯುಕ್ತ ಎಷ್ಟೋ ಸಂಘಗಳಲ್ಲಿ ಹಣ ದುರುಪಯೋಗವಾಗಿ ಅದರಿಂದ ಸರಿಯಾದ ಫಲ ಜನರಿಗೆ ದೊರೆಯದೇ ಹೋಗಿದೆ. ಎಲ್ಲಿಯವರೆಗೆ ಮುಖನೋಡಿ ಮಣೆ ಹಾಕುವ ರೀತಿ ನೀತಿಯನ್ನು ಸರ್ಕಾರದವರು ಅನುಸರಿಸುತ್ತಾರೆಯೋ ಅಲ್ಲಿಯವರೆಗೂ ಎಂಥ ಉಗ್ರ ಕಾನೂನನ್ನು ಮಾಡಿದರೂ ಕೂಡ

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

ಅದರ ಫಲ ಜನರಿಗೆ ದೊರೆಯುವುದಿಲ್ಲ. ಆದ್ದರಿಂದ ಈ ಮೂರನೇ ಅಂಗವಾಗಿರತಕ್ಕ ಸರ್ಕಾರ ಉಚಿತವಾದ ರೀತಿಯಲ್ಲಿ ಕಾನೂನಿನ ಪ್ರಯೋಗ ಮಾಡುವುದಕ್ಕೆ ಪ್ರಯತ್ನಪಟ್ಟ ಹೊರತು ಯಾವ ತಿದ್ದುಪಡಿ ಮಾಡಿದರೂ ಪ್ರಯೋಜನವಾಗುವುದಿಲ್ಲ. ಸದಸ್ಯರು, ಎಂಥವನೇ ಆಗಿರಲಿ ಅವನ ಪ್ರಭಾವಕ್ಕೆ ಅಥವಾ ದಾಕ್ಷಿಣ್ಯಕ್ಕೆ ಒಳಗಾಗಿ ಅವನಿಗೆ ಉಪಕಾರ ಮಾಡುವ ದೃಷ್ಟಿಯಿಂದ ಸಾಲ ಕೊಟ್ಟು ಮತ್ತೆ ಸಾಲ ವಾಪಸು ಪಡೆಯುವುದಕ್ಕೆ ಶಕ್ತಿ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರೆಗೂ ಕಾನೂನು ಇದ್ದೂ ಪ್ರಯೋಜನವಿಲ್ಲ. ಹಂದೆಯ ಕೈಯಲ್ಲಿ ಚಂದ್ರಾಯುಧ, ಕೊಟ್ಟಂತೆ ಆಗುತ್ತದೆ. ಆ ಆಯುಧವನ್ನು ಉಪಯೋಗಿಸತಕ್ಕ ವ್ಯಕ್ತಿ ದಿನ ದಿನಕ್ಕೆ ಬದಲಾಯಿಸುತ್ತ ಇರಬಹುದು. ಆದರೆ ಯಾವ ಒಂದು ಆಯುಧವನ್ನು ಈ ಸಭೆಯಲ್ಲಿ ನಾವು ತಯಾರುಮಾಡಿಕೊಡುತ್ತೇವೆಯೋ ಅದು ಖಾಯಂ ಆಗಿ ಇರುತ್ತದೆ. ಇಂಥ ಒಂದು ಆಯುಧ ದುರುಪಯೋಗ ಮಾಡತಕ್ಕ ಮನುಷ್ಯನ ಕೈಗೆ ಸಿಕ್ಕಿದರೆ ಎಂತಹ ದುರ್ಧುವಸ್ಥೆಯಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಈಗಿರತಕ್ಕ ಕಾನೂನಿನಿಂದಲೇ, ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರವರು ಹೇಳಿದಹಾಗೆ, ಹಣವನ್ನು ವಸೂಲುಮಾಡಿಕೊಳ್ಳುವುದಕ್ಕೆ ಸಾಕಾದಷ್ಟು ಸೌಲಭ್ಯ ಇದ್ದಾಗ್ಯೂ, ಅದನ್ನು ಸರಿಯಾಗಿ ಪ್ರಯೋಗಮಾಡದೆ, ಹಣವನ್ನು ವಸೂಲು ಮಾಡಿಕೊಳ್ಳದೇ ಇರತಕ್ಕ ಸಂದರ್ಭದಲ್ಲಿ ಇದು ಸಹಕಾರ ತತ್ವಕ್ಕೇ ಕೊಡಲಿ ಪೆಟ್ಟು ಹಾಕಿದ ಹಾಗಿದೆ. ಸಾಲ ತೆಗೆದುಕೊಂಡು ಹಿಂದಕ್ಕೆ ವಾಪಸು ಕೊಡಬೇಕಾಗಿರತಕ್ಕ ಒಬ್ಬ ಭಾರಿ ದೊಡ್ಡ ಮನುಷ್ಯ ಆ ಸಹಕಾರ ಸಂಘದ ಕಟ್ಟಡ ಯಾವ ಕಡೆಗೆ ಇದೆ ಎಂಬುದನ್ನು ಸಹ ನೋಡಿರುವುದಿಲ್ಲ. ಅಷ್ಟೇ ಅಲ್ಲದೆ, ಸತ್ಯಸಂಧರಾದ ಮತ್ತು ಶೀಲತ್ವವುಳ್ಳ ಒಳ್ಳೆಯ ಅಧಿಕಾರಿಗಳು ಇಲ್ಲದೇ ಇರುವುದರಿಂದ ಅನೇಕ ಜನ ಈ ಸಹಕಾರಸಂಘದ ತತ್ವದಲ್ಲೇ ನಂಬಿಕೆ ಕಳೆದುಕೊಂಡಿದ್ದಾರೆ. ಹೀಗಿರುವಾಗ ಹೊಸ ಹೊಸದಾಗಿ ಸಹಕಾರತತ್ವಕ್ಕನುಗುಣವಾದ ಎಷ್ಟೋ ಯೋಜನೆಗಳನ್ನು ಜಾರಿಗೆ ತರುತ್ತಾ ಇದ್ದೀರಿ. ವಿಶ್ವೇಶ್ವರಯ್ಯನವರ ಕೈಗಾರಿಕಾ ಯೋಜನೆಯನ್ನು ಫಲಪ್ರದವಾಗಿ ಮಾಡುವುದಕ್ಕೂ ಸಹ, ಸಹಕಾರ ತತ್ವವನ್ನೇ ಅನುಸರಿಸುತ್ತಾ ಇದ್ದೀರಿ. ಪ್ರತ್ಯಕ್ಷ ಅನುಭವದಮೇಲೆ ಸಹಕಾರ ಸಂಘಗಳನ್ನು ಯಶಸ್ವಿಯಾಗಿ ನಡೆಸಿ ನ್ಯೂನಾತಿರಿಕ್ತಗಳು ಬಂದ ಪಕ್ಷದಲ್ಲಿ ಅವುಗಳನ್ನು ಹೋಗಲಾಡಿಸುವುದಕ್ಕೆ ಕೆಲವು ತಿದ್ದುಪಡಿಗಳನ್ನು ತಂದರೆ ಸರ್ವಾನುಮತದಿಂದ ಸ್ವಾಗತಿಸಬಹುದು. ಈಗಿರತಕ್ಕ ಕಾನೂನನ್ನೇ ಸರಿಯಾಗಿ ಪ್ರಯೋಗಮಾಡದೆ ಇನ್ನೂ ಹೆಚ್ಚಿನ ಅಧಿಕಾರ ಬೇಕು ಎಂದು ಹೇಳಿ ಸರ್ವಾಧಿಕಾರವನ್ನು ಕೇಳುತ್ತಿರುವುದರ ಅರ್ಥವೇ ಗೊತ್ತಾಗುವುದಿಲ್ಲ. ಈಗಿರತಕ್ಕ ಪರಿಸ್ಥಿತಿಯಲ್ಲಿ ಯಾರು ನಿಜವಾಗಿಯೂ ಸಾಲಕ್ಕಾಗಿ ಹೋಗುತ್ತಾನೆಯೋ ಅಂಥವನಿಗೆ ಸಾಲ ದೊರಕುತ್ತಿಲ್ಲ; ಸಾಲ ತೆಗೆದುಕೊಂಡು ಪುನಃ ವಾಪಸು ಕೊಡಬಾರದು ಎಂಬ ಮನೋಭಾವವನ್ನಿಟ್ಟುಕೊಂಡಿರುವವನಿಗೆ ಸುಲಭವಾಗಿ ಸಾಲ ದೊರಕುತ್ತಿದೆ. ಹೀಗಿರುವಾಗ ಈ ಕಾನೂನಿಗೆ ತಿದ್ದುಪಡಿ ಮಾಡಿದರೇನು ಮಾಡದೇ ಇದ್ದರೇನು? ಆದ್ದರಿಂದ ಸರ್ಕಾರ ನಿಷ್ಪಕ್ಷಪಾತವಾಗಿ, ನಿರ್ದಾಕ್ಷಿಣ್ಯದಿಂದ ಈಗಿರತಕ್ಕ ಕಾನೂನನ್ನು ಪ್ರಯೋಗ ಮಾಡುತ್ತೇವೆ ಎಂದು ಧೈರ್ಯದಿಂದ ಕುಳಿತುಕೊಳ್ಳುವವರೆಗೂ ಇಂಥ ಹೊಸ ತಿದ್ದುಪಡಿಗಳನ್ನು ಮಾಡಿ ಸರ್ವ ಅಧಿಕಾರವನ್ನೂ ಪಡೆದುಕೊಂಡದ್ದೇ ಆದರೆ ಅದರಿಂದ ಜನರಿಗೆ ಕಷ್ಟವೇ ಹೊರತು ಪ್ರಯೋಜನವಾಗುವುದಿಲ್ಲ ಎಂದು ಹೇಳಿ ಈ ಮಸೂದೆಯನ್ನು ಇಷ್ಟು ಆತುರಾತುರವಾಗಿ ತಂದಿರುವುದು ಅಪಾಯಕರ ಎಂದು ತಿಳಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಶ್ರೀ ಪಟ್ಟಾಭಿರಾಮ್‌ರವರು ಅವರ ಉಜ್ವಲ ಭಾಷಣದಲ್ಲಿ, ಸಹಕಾರತತ್ವದ ವಿಚಾರದಲ್ಲಿ ಅದರ ಮೂಲ ತತ್ವಗಳನ್ನೂ ಮತ್ತು ಅವುಗಳು ಮೈಸೂರು ದೇಶದಲ್ಲಿ ಯಾವ ರೀತಿ ಕಾರ್ಯರೂಪದಲ್ಲಿವೆ ಎಂಬುದನ್ನೂ ವಿವರಿಸಿದ್ದಾರೆ. ಮದರಾಸು ಪ್ರಾಂತದಲ್ಲಿದ್ದ ಬಳ್ಳಾರಿಯಿಂದ ಬಂದ ಶ್ರೀಮಾನ್ ನಾಗನಗೌಡರ ಅನುಭವದ ಮೇಲೆ ಇಲ್ಲೂ ಸಹ ಯಾವ ರೀತಿ ಮಾರ್ಪಾಡು ಮಾಡಬೇಕೆಂಬುದನ್ನು ಸಹ ವಿವರಿಸಿದ್ದಾರೆ. ' ನಾನು ಸ್ವಲ್ಪಮಟ್ಟಿಗೆ ನನಗೆ ತಿಳಿದಹಾಗೆ, ಅವರ ಹಾಗೆ ಉಜ್ವಲ ಭಾಷಣದ ಮೂಲಕ ಹೇಳಲಿಕ್ಕೆ ಸಾಧ್ಯವಿಲ್ಲದೆ ಇದ್ದರೂ, ಅವರು ಹೇಳಿದ ಕೆಲವು ವಿಚಾರಗಳಲ್ಲಿ ನನ್ನ ಅಭಿಪ್ರಾಯ ತಿಳಿಸಬೇಕೆಂದು ಇದ್ದೇನೆ. ನಾವು ಮೈಸೂರು ದೇಶದಲ್ಲಿ ಏನೊಂದು ಸಹಕಾರತತ್ವವನ್ನು ಬೆಳೆಸಿಕೊಂಡು ಬಂದಿದ್ದೇವೋ, ಅದನ್ನು ಹೆಚ್ಚು ಸರ್ಕಾರದ ಸಹಾಯ, ಸಹಕಾರ, ಸಹಾನುಭೂತಿಯಿಂದ ಬೆಳೆಸಿಕೊಂಡು ಬಂದಿದ್ದೇವೆಯೇ ಹೊರತು ಸ್ವಯಂಪ್ರೇರಿತವಾದ ಒಂದು ಸಹಕಾಗತತ್ವವನ್ನು ಜನಗಳೇ ಬೆಳೆಸಿಕೊಂಡು ಬಂದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಶ್ರೀಮಾನ್ ಪಟ್ಟಾಭಿರಾಮ್‌ರವರು ಒಪ್ಪಿಕೊಳ್ಳುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಅವರು ಹೇಳಿದ ಹಾಗೆ ನಮ್ಮಲ್ಲಿ ಸಹಕಾರ ಬೆಳವಣಿಗೆ ಶೈಶವಾವಸ್ಥೆಯಲ್ಲಿದೆ. ಇದನ್ನು ಬೆಳೆಸಬೇಕಾದ ಜವಾಬ್ದಾರಿ ನಮ್ಮ ಜನಗಳ ಹಾಗೂ ಸರ್ಕಾರದ ಮೇಲೆ ಬಿದ್ದಿದೆ ಎಂದು ಹೇಳಬೇಕಾಗಿದೆ. ಇಂಥ ಬಾಲ್ಯಾವಸ್ಥೆಯಲ್ಲಿರುವಾಗ ಸರ್ಕಾರದ ಸಹಾಯ ದೊರೆಯದೇ ಇದ್ದಿದ್ದರೆ ನಿಶ್ಚಯವಾಗಿಯೂ ಸಹಕಾರ ತತ್ವ ಇಷ್ಟರವರೆಗೂ ಕೂಡ ಬೆಳೆಯುತ್ತಾ ಇರಲಿಲ್ಲ ಎಂದು ಹೇಳಬೇಕಾಗಿದೆ. ಶ್ರೀಮಾನ್ ಪಟ್ಟಾಭಿರಾಮ್‌ರವರು, ಶ್ರೀಮಾನ್ ಮರಿಯಪ್ಪನವರು ಪ್ರಾರಂಭಮಾಡಿದ ಸಮಗ್ರಸಹಕಾರಸಂಘಗಳ ಬಗ್ಗೆ ವಂದನೆಗಳನ್ನರ್ಪಿಸುತ್ತ ಅವು ಬಹಳ ಚೆನ್ನಾಗಿ ಕೆಲಸಮಾಡಿರುತ್ತವೆ ಎಂದು ಹೇಳಿದರು. ಈ ಸಹಕಾರ ಸಂಘಗಳು ಬೆಳೆಯುವುದಕ್ಕೆ ಸರ್ಕಾರದ ಗ್ರಾಂಟು ಮತ್ತು ಇನ್ನೂ ಅನೇಕ ಸೌಕರ್ಯಗಳನ್ನು ಕೊಟ್ಟ ಮೇಲೆ ಇವು ಬೆಳೆದವೇ ಹೊರತು ಏಕಾಏಕಿ ತಮ್ಮಷ್ಟಕ್ಕೆ ತಾವೇ ಬೆಳೆದವು ಎಂದು ಶ್ರೀಮಾನ್ ಮರಿಯಪ್ಪನವರೂ ಸಹ ಹೇಳಲಿಲ್ಲ, ಶ್ರೀಮಾನ್ ಪಟ್ಟಾಭಿರಾಮ್‌ರವರೂ ಕೂಡ ಆ ರೀತಿ ತಮ್ಮಷ್ಟಕ್ಕೆ ತಾವೇ ಬೆಳೆದವು ಎಂದು ಹೇಳುವುದಕ್ಕೂ ಸಾಧ್ಯವಿಲ್ಲ ಎಂದು ತಿಳಿದುಕೊಂಡಿದ್ದೇನೆ. ಎಂದಮೇಲೆ ನಮ್ಮ ಮುಂದಿರುವ ಪ್ರಶ್ನೆ, ರಿಸರ್ವ್‌ಬ್ಯಾಂಕು ಕೊಡತಕ್ಕ ಹಣವನ್ನು ತೆಗೆದುಕೊಂಡು ಯಾವರೀತಿ ವ್ಯವಸಾಯಗಾರರಿಗೆ ಅನುಕೂಲಪಡಿಸಿ ಕೊಡಬೇಕು, ಸಾಲ ಕೊಟ್ಟಮೇಲೆ ಅದನ್ನು ಹೇಗೆ ವಸೂಲುಮಾಡಿಕೊಳ್ಳಬೇಕು ಎಂಬುದೇ ಆಗಿದೆ. ಶ್ರೀಮಾನ್ ಪಟ್ಟಾಭಿರಾಮ್‌ರವರು ಸಹಕಾರ ತತ್ವಕ್ಕೂ, ಈ ರೀತಿ ಸಾಲ ಕೊಟ್ಟು ವಸೂಲು ಮಾಡಿಕೊಳ್ಳತಕ್ಕದ್ದಕ್ಕೂ ಬೇರೆ ಬೇರೆ ಮಾಡಿ, ಇವನ್ನು, ಹೊಂದಿಸಿಕೊಳ್ಳಬೇಡಿ ಎಂದು ಹೇಳಿದರು. ಅವರು ಈ ಅಂಶವನ್ನು ಗಹನವಾಗಿ ವಿಮರ್ಶಿಸಿ ವಿಚಾರಪೂರಿತ ಭಾಷಣಮಾಡಿದ್ದಾರೆ. ಅದು ನ್ಯಾಯವಾದದ್ದು ಎಂದರೂ ಈಗಾಗಲೇ ದೇಶಾದ್ಯಂತ ಇರುವ ಸಹಕಾರ

ಸಂಘಗಳ ಒಂದು ಆಡಳಿತ ಯಂತ್ರವನ್ನು ಉಪಯೋಗಿಸಿಕೊಳ್ಳದೆ ರೈತರಿಗೆ ಸಾಲಹಂಚಿ ವಸೂಲ್ಮಾಡಿಕೊಳ್ಳಲು ಬೇರೆ ಬ್ಯಾಂಕ್ ಮತ್ತು ಅದರ ಶಾಖೆಗಳನ್ನು ಎಲ್ಲಾ ಕಡೆಯೂ ಸ್ಥಾಪಿಸಬೇಕೆಂದರೆ ಅದು ಈಗ ಸಾಧ್ಯವಿದೆಯೇ ಮತ್ತು ಅದು ಸಾಧುವೇ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಸಹಕಾರ ಸಂಘಗಳಲ್ಲಿ ನಿಸ್ಪೃಹತೆಯಿಂದ ಕೆಲಸಮಾಡುವ ಕೆಲಸಗಾರರು ಸಿಕ್ಕುವುದೇ ವಿರಳ. ನಮಗೆ ಗೊತ್ತಿರುವ ಹಾಗೆ ಈಗಾಗಲೇ ಸಹಕಾರ ಸಂಘಗಳಲ್ಲಿರತಕ್ಕ ಜನಗಳೇ ಬ್ಯಾಂಕು ಮತ್ತು ಅದರ ಶಾಖೆಗಳನ್ನು ಪ್ರಾರಂಭ ಮಾಡಿದರೆ ಅಲ್ಲಿಯೂ ಸಹ ಕೆಲಸಮಾಡಲು ಬರುತ್ತಾರೆ ಎಂದಮೇಲೆ, ಈ ಸಹಕಾರ ಸಂಘಗಳಲ್ಲಿ ಏನು ಮತ್ತು ಯಾರು ಕೆಲಸ ನಡೆಸುತ್ತಿದ್ದಾರೆಯೋ ಅವರೇ ಬ್ಯಾಂಕ್‌ನಲ್ಲೂ ಸಹ ಕೆಲಸ ನಡೆಸಲು ಬರುತ್ತಾರೆ ಎಂಬ ಶಂಕೆ ನನಗಿದೆ ಎಂದಮೇಲೆ, ಇವೆರಡನ್ನೂ ಬೇರೆ ಬೇರೆ ಮಾಡಿ ಅದಕ್ಕೆ ಒಂದು ಎಸ್ಟಾಬ್ಲಿಷ್‌ಮೆಂಟ್ ಖರ್ಚು, ಇದಕ್ಕೆ ಒಂದು ಎಸ್ಟಾಬ್ಲಿಷ್‌ಮೆಂಟ್ ಖರ್ಚು ಆಗುವುದಕ್ಕೆ ಬದಲಾಗಿ, ಇರತಕ್ಕ ಒಂದು ಡಿಪಾರ್ಟ್‌ಮೆಂಟಿನಲ್ಲೇ ಸಹಕಾರಸಂಘದ ಆಡಳಿತ, ಬ್ಯಾಂಕಿನ ಆಡಳಿತ ಎರಡನ್ನೂ ಅದರಲ್ಲೇ ಅಳವಡಿಸಿಕೊಂಡು ವ್ಯವಸಾಯಗಾರರಿಗೆ ಏಕೆ ಸಹಾಯ ಮಾಡಬಾರದು ? ಅಂಥ ಒಂದು ಯೋಜನೆಯನ್ನಿಟ್ಟುಕೊಂಡು ಕೆಲಸಮಾಡುವುದರಲ್ಲಿ ತಪ್ಪೇನೂ ಇಲ್ಲ ಎಂದು ನಾನು ಭಾವಿಸುತ್ತೇನೆ. ಈಗ ನನಗೆ ಗೊತ್ತಿರುವ ಹಾಗೆ ಲ್ಯಾಂಡ್‌ಮಾರ್‌ಗೇಜ್ ಬ್ಯಾಂಕ್ ಅದೇರೀತಿ ಕೆಲಸ ಮಾಡುತ್ತಿದೆ. ಸರ್ಕಾರದ ಸಹಾಯದಿಂದ ಲ್ಯಾಂಡ್‌ಮಾರ್‌ಗೇಜ್ ಬ್ಯಾಂಕ್‌ನವರೂ ಸಹ ಸಾಲ ಎತ್ತಿ ಲ್ಯಾಂಡ್‌ಮಾರ್‌ಗೇಜ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಸಾಲ ಕೊಡುತ್ತಾ ಇದ್ದಾರೆ. ನನಗೆ ಗೊತ್ತಿರುವಹಾಗೆ ಈಗ ಲ್ಯಾಂಡ್‌ಮಾರ್‌ಗೇಜ್‌ನವರು ಹೆಚ್ಚು ಕಮ್ಮಿ 1½ ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ. ಅದೂ ಅಲ್ಲದೆ ಷಾರ್ಟ್ ಟರ್ಮ್‌ಲೋನ್ ಮೂಲಕ 50 ಸಾವಿರ ರೂಪಾಯಿ ಸಾಲ ಕೊಟ್ಟಿದ್ದಾರೆ. ಲ್ಯಾಂಡ್‌ಮಾರ್‌ಗೇಜ್ ಬ್ಯಾಂಕ್ ಸಹ ಈ ದಿವಸ ಒಂದೂವರೆಕೋಟಿ ರೂಪಾಯಿಗಳ ಸಾಲ ಕೊಟ್ಟಿದೆ. ಅದರಲ್ಲೂ ಸಹ ಸರ್ಕಾರದ ಅಧಿಕಾರಿಗಳೂ ಮತ್ತು ಸರ್ಕಾರದಿಂದ ನಾಮಕರಣ ಮಾಡಲ್ಪಟ್ಟವರೂ ಇದ್ದು ಕೆಲಸಮಾಡುತ್ತಿದ್ದಾರೆ. ಹೀಗಿದ್ದರೂ ಅನೇಕ ನ್ಯೂನಾತಿರಿಕ್ತಗಳುಂಟಾಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಸಾಲ ಮಂಜೂರ್ಮಾಡುವಾಗ ಅಥವಾ ವಸೂಲ್ಮಾಡುವಾಗ ಅನೇಕ ತಪ್ಪುಗಳಿಗೆ ಅವಕಾಶವಾಗಲು ಈಗಿರುವ ಕಾನೂನಿನಲ್ಲಿ ನ್ಯೂನತೆಗಳಿವೆ. ಹೀಗಿರುವ ನಾನಾ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಈ ಕಾನೂನಿನಲ್ಲಿರುವ ಕೆಲವು ತಿದ್ದುಪಡಿಗಳಾಗಲೇಬೇಕು. ಹಣ ಕೊಡುವುದಕ್ಕೆ ಅಥವಾ ತೆಗೆದುಕೊಳ್ಳುವುದಕ್ಕೆ ಈ ತಿದ್ದುಪಡಿಗಳಿಲ್ಲದಿದ್ದರೆ ಬಹಳ ಕಷ್ಟವಾಗಬಹುದು. ಇರುವ ಎಲ್ಲಾ ಸಂಸ್ಥೆಗಳೂ ತಪ್ಪುದಾರಿಯಲ್ಲಿ ನಡೆಯುತ್ತಿವೆಯೆಂದು ಹೇಳುವುದಕ್ಕಾಗುವುದಿಲ್ಲ. ಶ್ರೀ ಪಟ್ಟಾಭಿರಾಮರವರು ಮತ್ತು ಇತರ ಮಾನ್ಯ ಸದಸ್ಯರು ಸೂಚಿಸಿರುವ ಅಭಿಪ್ರಾಯಗಳನ್ನು ಪರಿಶೀಲಿಸಿ ಸೂಕ್ತವಾದ ಮಾರ್ಪಾಡುಮಾಡುವ ಕೆಲಸವನ್ನು ಸೆಲೆಕ್ಟ್ ಕಮಿಟಿಗೆ ಬಿಟ್ಟಿದೆ.

ಇನ್ನು ಲ್ಯಾಂಡ್‌ಮಾರ್‌ಗೇಜ್ ಬ್ಯಾಂಕಿನ ವಿಚಾರದಲ್ಲಿ 19ನೆಯ ಕ್ಲಾಜಿನಲ್ಲಿ ತಿದ್ದುಪಡಿ ಸೂಚಿಸಿದ್ದಾರೆ. ಆ ವಿಚಾರದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಬಾಕಿ ಕ್ಲಾಜುಗಳ ವಿಚಾರ. ಅನೇಕ ಮಿತ್ರರು ಹೇಳಿರುವುದರಿಂದ ಅವುಗಳ ಗೋಜಿಗೆ ಹೋಗುವುದಿಲ್ಲ. ಲ್ಯಾಂಡ್ ಮಾರ್‌ಗೇಜ್ ಬ್ಯಾಂಕಿನಲ್ಲಿ ಈಗ ಆಧಾರದ ಮೇಲೆ ಸಾಲ ಕೊಡುವುದು ಮತ್ತು ಪ್ರಾಮಿಸರಿ ಮೇಲೆ ಸಾಲ ಕೊಡುವುದು ವಾಡಿಕೆಯಲ್ಲಿದೆ. ಮುಂಚೆ ಆಧಾರ ಪತ್ರದ ಮೇಲೆ ಮುಕ್ಕಾಲು ಪಾಲು, ಪ್ರಾಮಿಸರಿ ಪತ್ರಗಳಮೇಲೆ ಕಾಲು ಪಾಲು ಸಾಲ ಕೊಡುತ್ತಿದ್ದರು. ಈಚೆಗೆ ಕಾನೂನು ತಿದ್ದುಪಡಿಮಾಡಿ ಆಧಾರವಿರಲಿ ಇಲ್ಲದಿರಲಿ ಪ್ರಾಮಿಸರಿ ಮೇಲೆ ಸಾಲ ಕೊಡುವುದಕ್ಕೆ ಅವಕಾಶ ಮಾಡಿದ್ದಾರೆ. 1951ರಲ್ಲಿ ಲ್ಯಾಂಡ್ ಮಾರ್‌ಗೇಜ್ ಬ್ಯಾಂಕಿನಲ್ಲಿ ಹತ್ತು ಲಕ್ಷ ರೂಪಾಯಿಗಳ ಸಾಲವನ್ನು ಆಧಾರವಿಲ್ಲದೆ ಪ್ರಾಮಿಸರಿ ಮೇಲೆ ಕೊಟ್ಟಿದ್ದಾರೆ. ಹೀಗೆ ಪ್ರಾಮಿಸರಿ ಮೇಲೆ ಹೆಚ್ಚು ಸಾಲ ಪಡೆಯುವಾಗ ಹಿಂದಿನ ತಾರೀಖು ಹಾಕಿ ಹೊಸ ಪ್ರೊನೋಟ್‌ಮಾಡಿ ಲ್ಯಾಂಡ್ ಮಾರ್‌ಗೇಜ್ ಕೋ ಆಪರೇಟಿವ್ ಸೊಸೈಟಿಗಳಿಗೆ ಅರ್ಜಿ ಹಾಕಿ ಸಾಲ ಪಡೆಯುವುದು ಕಂಡುಬರುತ್ತಾ ಇದೆ. ಹೀಗೆ ಆಧಾರದ ಸಾಲಗಳ ಮೇಲೆ ಅಥವಾ ಪ್ರಾಮಿಸರಿ ಸಾಲಗಳ ಮೇಲೆ ಈ ಬ್ಯಾಂಕು ಸಾಲ ಕೊಡುವುದಕ್ಕೆ ಬದಲಾಗಿ ನೇರವಾಗಿ ಜಮೀನಿನಮೇಲೆ ಏಕೆ ಕೊಡಬಾರದು ? ಏಕೆಂದರೆ ಪ್ರಾಮಿಸರಿ ಸಾಲಗಳು ಅನೇಕ ಸಂದರ್ಭಗಳಲ್ಲಿ ಪ್ರಾಮಾಣಿಕತೆಯಿಂದ ಕೂಡಿದವುಗಳಲ್ಲ. ಅಲ್ಲದೆ ಸಾಲಗಳ ಕಾರಣಗಳನ್ನೊದಗಿಸಬೇಕು. ಉದಾಹರಣೆಗೆ ಲಗ್ನಕ್ಕೆ ಸಾಲಮಾಡಿದ್ದರೆ ಲಗ್ನಪತ್ರಿಕೆ ಹಾಜರು ಮಾಡಬೇಕು. ಆ ರೀತಿ ಅನವಶ್ಯಕವಾದ ವಿವರಗಳನ್ನೊದಗಿಸಿ ಸಾಲ ಮಂಜೂರಾಗಲು ಕನಿಷ್ಟಪಕ್ಷ. ಆರು ತಿಂಗಳಿಂದ ಎಂಟು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಈ ರೀತಿ ನಿಧಾನವಾಗುವುದನ್ನು ತಪ್ಪಿಸಿ ಇದಕ್ಕೆ ಬದಲಾಗಿ ರೈತರಿಗೆ ಅನುಕೂಲಮಾಡಬೇಕಾದರೆ ನೇರವಾಗಿ ಜಮೀನಿನ ಮೇಲೆ ಏಕೆ ಸಾಲ ಕೊಡಬಾರದು ? ಹಾಗೆ ಜಮೀನಿನ ಮೇಲೆ ಕೊಡಲು ಕಾನೂನನ್ನು ತಕ್ಕಂತೆ ಏಕೆ ಬದಲಾಯಿಸಬಾರದು ? ಇದನ್ನು ಮಾನ್ಯ ಮಂತ್ರಿಗಳು ಯೋಚನೆಮಾಡುತ್ತಾರೆಂದು ನಂಬಿದ್ದೇನೆ.

ಎರಡನೆಯ ವಿಚಾರ. ಲ್ಯಾಂಡ್‌ಮಾರ್‌ಗೇಜ್ ಬ್ಯಾಂಕು ಮುಂಚೆ ಐದು ಸಾವಿರ ರೂಪಾಯಿ ಸಾಲ ಮಾತ್ರ ಕೊಡಬೇಕೆಂದಿತ್ತು. ಈಚೆಗೆ ಅದನ್ನು ಹತ್ತು ಸಾವಿರ ರೂಪಾಯಿಗಳವರೆಗೆ ಹೆಚ್ಚಿಸಿದ್ದಾರೆ. ವೈಯಕ್ತಿಕವಾಗಿ ನಾನು ಹೇಳುವುದಾದರೆ ಇಷ್ಟು ಹೆಚ್ಚಿಸಬಾರದಾಗಿತ್ತು. ಹೀಗೆ ಹೆಚ್ಚಿಸಿರುವುದರಿಂದ ಅನೇಕ ಅನುಕೂಲಸ್ತರು ಹತ್ತುಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಸಾಲ ಪಡೆದಿರುವ ಉದಾಹರಣೆಗಳಿವೆ.

Mr. SPEAKER.—May I inform Hon'ble Member that he can only speak within the scope of the provisions of this amending Bill ?

Sri T. C. BASAPPA.—I am only drawing the attention of the Minister to clause 19 of the amending Bill. ಸಾಲಗಳ ಮಂಜೂರಿ ವಿಚಾರದಲ್ಲಿ ಕಾನೂನಿನಲ್ಲಿರುವ ನ್ಯೂನತೆಗಳನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಲ್ಯಾಂಡ್ ಮಾರ್‌ಗೇಜ್ ಬ್ಯಾಂಕಿನ ವ್ಯವಹಾರ ನಡೆಸಲು ಒಂದು ಬೋರ್ಡಿದೆ, ಅದರಲ್ಲಿ ಇಪ್ಪತ್ತು ಜನ ಸದಸ್ಯರಿದ್ದಾರೆ. ಇದಲ್ಲದೆ ಒಂದು ಎಗ್ಸಿಕ್ಯುಟಿವ್ ಸಮಿತಿಯಿದೆ. ಅದರಲ್ಲಿ ಐದು ಜನರಿದ್ದಾರೆ. ಆ ಸಮಿತಿಯಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟಿರುವ ಪ್ರೆಸಿಡೆಂಟರು ಮತ್ತು ಬೋರ್ಡಿನಿಂದ

(ಶ್ರೀ ಟಿ. ಸಿ. ಬಸಪ್ಪ.)

ಚುನಾಯಿತರಾಗಿರುವ ನಾಲ್ಕು ಜನ ಸದಸ್ಯರು ಇರುತ್ತಾರೆ. ಆ ಸ್ಥಾನಗಳಿಗೆ ಈಗಿರುವ ಬೈಲಾ ಪ್ರಕಾರ ಹೆಚ್ಚಾಗಿ ಬೆಂಗಳೂರಿನವರು ಮಾತ್ರ ಚುನಾಯಿತರಾಗಿ ಬರಲಿಕ್ಕೆ ಮಾತ್ರ ಸಾಧ್ಯವಿದೆ. ಇದರಿಂದ ಹೆಚ್ಚು ಸಾಲ ಹೊರಗಿನವರಿಗೆ ಮಂಜೂರಾಗುವುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲದೆ ಕೆಲವರಿಗೆ ಒಟ್ಟು ಕುಟುಂಬ ವಿಭಾಗವಾದ ನೆಪದಿಂದ ಒಬ್ಬೊಬ್ಬರಿಗೆ ಹತ್ತುಸಾವಿರದಂತೆ ಐವತ್ತು ಸಾವಿರ ರೂಪಾಯಿಗಳ ವರೆಗೂ ಒಂದು ಸಂಸಾರಕ್ಕೆ ಸಾಲ ದೊರಕಿರುವ ನಿದರ್ಶನಗಳಿವೆ. ಇದಲ್ಲದೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಸಹ ಕೊಟ್ಟರೆ ಇನ್ನೂ ಜಾಸ್ತಿ ಸಾಲಕೊಟ್ಟಂತಾಗುತ್ತದೆ. ಅಂದರೆ 50+25 =75 ಸಾವಿರ ರೂಪಾಯಿಗಳವರೆಗೂ ಕೊಟ್ಟಿರುವ ಉದಾಹರಣೆಗಳಿವೆ. ಲ್ಯಾಂಡ್ ಮಾರ್ಗೇಜ್ ಬ್ಯಾಂಕು ಪಡೆದಿರುವ ಸಾಲಕ್ಕೆ ಸರ್ಕಾರವೇ ಜವಾಬ್ದಾರಿಯಾಗಿರುವುದರಿಂದ ಈ ತಿದ್ದುಪಡಿ ಬಹಳ ಜರೂರಾದುದು ಎಂದು ಒತ್ತಿ ಹೇಳಲು ಬಯಸುತ್ತೇನೆ. ಎಗ್ಸಿಕ್ಯುಟಿವ್ ಸಮಿತಿ ಸರ್ಕಾರದಿಂದ ನೇರವಾಗಿ ನಿಯಮಿತವಾಗಿಲ್ಲ. ಸಾಲಕ್ಕೆಲ್ಲಾ ಸರ್ಕಾರದ ಜವಾಬ್ದಾರಿ ಇದ್ದು ಸಾವಿರ ರೂಪಾಯಿಗಳಿಂದ ಎರಡುಸಾವಿರದ ಐನೂರು—ಹತ್ತು ಸಾವಿರ ರೂಪಾಯಿಗಳವರೆಗೆ ಸಾಲ ಮಂಜೂರ್ಮಾಡುವ ಅಧಿಕಾರ ಸರ್ಕಾರಕ್ಕೆ ಜವಾಬ್ದಾರಿಯಿಲ್ಲದ ಎಗ್ಸಿಕ್ಯುಟಿವ್ ಕಮಿಟಿಗಿರುವಾಗ, ಮೇಲೆ ವಿವರಿಸಿದಂತೆ ಅನೇಕ ನ್ಯೂನತೆಗಳಿಗೆ ಅವಕಾಶವಾಗಿದೆ. ಹೊರಗಡೆಯವರಿಗೆ ಸಾಲ ಸಿಗುತ್ತಿಲ್ಲ. ಸಾಲಕ್ಕೆ ಸಾಕಾದಷ್ಟು ಜಮೀನಿಲ್ಲದಿರುವವರಿಗೆ, ನ್ಯಾಯಕ್ಕಿಂತ ಹೆಚ್ಚಾಗಿ ಬೆಲೆ ಕಟ್ಟಿರುವ ಜಮೀನುಗಳಮೇಲೆ ದುಬಾರಿ ಸಾಲಕೊಟ್ಟಿರುವ ಅನೇಕ ನಿದರ್ಶನಗಳಿವೆ. ಈ ದಿವಸ ಹತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟಿರುವ ಸಾಲಗಳು ಬಹಳವಾಗಿ ಬಾಕಿಯಲ್ಲಿವೆಯೆಂದು ಕೇಳುತ್ತೇವೆ. ಆದ್ದರಿಂದ ಹತ್ತುಸಾವಿರ ರೂಪಾಯಿಗಳಿಗೆ ಹೆಚ್ಚಿಸಿರುವುದನ್ನು ಐದುಸಾವಿರ ರೂಪಾಯಿಗಳಿಗೆ ಇಳಿಸಿ ಐದುಸಾವಿರ ರೂಪಾಯಿಗಳವರೆಗೆ ಮಾತ್ರ ಕೊಡುವಂತೆ ನಿಗದಿಮಾಡುವುದು ಒಳ್ಳೆಯದು, ಅದರಿಂದ ಹೆಚ್ಚು ರೈತರಿಗೆ ಸಹಾಯವಾಗುತ್ತದೆ, ಹಾಗೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ.

ಇನ್ನು ಈ ಆಕ್ಟ್‌ಪ್ರಕಾರ ಎಗ್ಸಿಕ್ಯುಟಿವ್ ಕಮಿಟಿಯಲ್ಲಿ ‘‘President and four other members of the Board of whom two shall be nominated by the State Government and the other two elected from among the members of the Board’’ ಇರುವಂತೆ ತಿದ್ದುಪಡಿ ಮಾಡುವುದು ಬಹಳ ಒಳ್ಳೆಯದು. ಈ ವಿಚಾರದಲ್ಲಿ ಅನೇಕ ಸಾರಿ ಮಾನ್ಯ ಮಂತ್ರಿಗಳಲ್ಲಿ ಒತ್ತಾಯಮಾಡಲಾಗಿತ್ತು. ಆದಷ್ಟು ಜಾಗ್ರತೆ ಇದನ್ನು ಮಾಡಿದರೆ ನಿಜವಾಗಿಯೂ ಬ್ಯಾಂಕಿನ ಮುಂದಿನ ಪುರೋಭಿವೃದ್ಧಿಗೆ ಮತ್ತು ಸರಿಯಾದ ಜನಗಳಿಗೆ, ಸಾಮಾನ್ಯವಾಗಿ ಸಾಲ ತೀರಿಸುವವರಿಗೆ, ಸಾಲ ನೇರವಾಗಿ ಸಿಕ್ಕುತ್ತದೆ ಎಂದು ಹೇಳುವುದರಲ್ಲಿ ಅಭ್ಯಂತರವಿಲ್ಲ. ಇದನ್ನು ಗಮನಿಸಿ ಜಾಗ್ರತೆ ತಕ್ಕ ತಿದ್ದುಪಡಿ ತಂದಿರುವುದಕ್ಕೆ ವಂದಿಸಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಸಭಾಪತಿಗಳೆ, ನಮ್ಮ ಘನ ಸರಕಾರದವರು ತಂದಿರತಕ್ಕಂಥ 1954ನೆಯ ಇಸವಿಯ ಈ ಮೈಸೂರು ಸಹಕಾರ ಸಂಘಗಳ ಮಸೂದೆಯ ತಿದ್ದುಪಡಿ ಕಾನೂನನ್ನು ಕುರಿತು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ನಮ್ಮ ಸರ್ಕಾರದವರು ರಿಸರ್ವ್ ಬ್ಯಾಂಕಿನಿಂದ ಬರುವ ಹಣವನ್ನು ಸಂಸ್ಥಾನದ ರೈತರಿಗೆ ಒದಗಿಸಲು ಯಾವ ಮಾರ್ಗವನ್ನನುಸರಿಸುತ್ತಾರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಈಗಾಗಲೆ ಬಹಳ ಸದಸ್ಯರು ಪ್ರಯತ್ನಪಟ್ಟಿದ್ದಾರೆ. ಈ ಸಾಲ ಪಡೆಯುವುದಕ್ಕೆ ರಿಸರ್ವ್ ಬ್ಯಾಂಕಿನವರು ಕೆಲವು ನಿಯಮಗಳನ್ನು ಮತ್ತು ಷರತ್ತುಗಳನ್ನು ಪಾಲಿಸಬೇಕೆಂದು ತಿಳಿಸಿದ್ದಾರೆ. ಇದರ ವಿಷಯ ಬಹಳ ವರ್ಷಗಳಿಂದ ವಿವಾದಕ್ಕೆ ಆಸ್ಪದವಾಗಿತ್ತು. ಮಾನ್ಯ ಸಭೆಯಲ್ಲಿ ಅನೇಕ ಶಾಸನಸಭಾ ಸದಸ್ಯರಿಂದ ಒತ್ತಾಯ ಬಂದಮೇಲೆ ಈಗ ಒಂದು ತಿದ್ದುಪಡಿ ಕಾನೂನನ್ನು ತಂದಿದ್ದಾರೆ. ಇಲ್ಲಿ ಚರ್ಚೆಯಾದಂಥ ವಿಷಯಗಳನ್ನು ನೋಡಿದ್ದರಲ್ಲಿ ಇನ್ನೂ ಬಹಳ ಜಿಜ್ಞಾಸೆಯಿರುವಂತೆ ಕಂಡುಬಂದಿದೆ. ಮುಖ್ಯವಾಗಿ ಈ ತಿದ್ದುಪಡಿ ಮಸೂದೆಯನ್ನು ನೋಡಿದರೆ ಒಟ್ಟಿನಲ್ಲಿ ಒಂದೆರಡು ಅಂಶಗಳನ್ನ ಹೊರತು ಇದನ್ನು ಅಂಗೀಕಾರ ಮಾಡುವುದು ಆವಶ್ಯಕ ಎಂದು ಕಾಣುತ್ತದೆ. ನಮ್ಮ ಮಾನ್ಯ ವಿರೋಧಪಕ್ಷದ ಕೆಲವು ಮಿತ್ರರು ಇದು ಪ್ರಜಾಪ್ರಭುತ್ವ ತತ್ವದ ಬೆಳವಣಿಗೆಗೆ ಸಹಕಾರಿಯಾಗಿಲ್ಲವೆಂದು ಅಭಿಪ್ರಾಯಪಟ್ಟರು. ಆ ತತ್ವಕ್ಕೆ ಸಂಬಂಧಪಟ್ಟ ವಿಷಯ ಇದರಲ್ಲಿ ಯಾವುದೂ ಇಲ್ಲ ಎಂದು ನಾನು ವಿಶದೀಕರಿಸುತ್ತೇನೆ. ಇದರಲ್ಲಿ ವ್ಯವಸಾಯಗಾರರನ್ನು ಮಾತ್ರ ಸೇರಿಸಿ ಮಿಕ್ಕವರನ್ನು ದೂರಮಾಡಿದ್ದಾರೆ ಎಂದು ಶ್ರೀ ಪಟ್ಟಾಭಿರಾಮಯ್ಯರವರು ಹೇಳಿದರು. ಈ ಮಸೂದೆಯಲ್ಲಿ 22ನೆಯ ಸೆಕ್ಷನ್ ಜೊತೆಗೆ ಹೊಸದಾಗಿ ಒಂದು ಸೆಕ್ಷನ್ ಸೇರಿಸುವುದಕ್ಕೆ ಪ್ರಯತ್ನವಿದೆಯೇ ಹೊರತು ಆಕ್ಟಿನಲ್ಲಿರುವ ಸೆಕ್ಷನ್‌ಬಿಟ್ಟು ಬೇರೊಂದು ತಿದ್ದುಪಡಿಯನ್ನು ತಂದು ಪೂರ್ಣವಾದ ಸೆಕ್ಷನ್ ಆಗಿ ಸೇರಿಸಿಲ್ಲ.

ಇನ್ನೂ 7ನೆಯ clause ನಲ್ಲಿ principal Act ನಲ್ಲಿರುವ 22ನೆಯ ಸೆಕ್ಷನ್ ಆದಮೇಲೆ ಒಂದು ಹೊಸ ಸೆಕ್ಷನ್ ಇರುವಂತೆ ತಿದ್ದುಪಡಿಯ ಮೂಲಕ ಸೂಚಿಸಿರುವುದು ಸಾರ್ವಜನಿಕರಿಗೇ ಬಹಳ ಉಪಯುಕ್ತವಾಗಿದೆ. ಈ ಸಹಕಾರ ಸಂಘಗಳಲ್ಲಿ ಸರ್ಕಾರದವರು ಷೇರುಗಳನ್ನು ಸೊಸೈಟಿಯಲ್ಲಿ ಹೊಂದಿರತಕ್ಕದ್ದು, ಅನೇಕರು ಹೇಳಿರುವ ಹಾಗೆ, ಸರಿಯಾದುದಲ್ಲ. ಈ ಅಂಶವನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲಿಸುತ್ತಾರೆಂದು ನಂಬಿ ಇದನ್ನು ಇಲ್ಲಿಗೇ ಬಿಡುತ್ತೇನೆ.

22 (A) ಸೆಕ್ಷನ್ ಪ್ರಕಾರ ಸಹಕಾರ ಸಂಘದ ಸದಸ್ಯನೊಬ್ಬನು ಸಾಲ ಪಡೆಯಬೇಕಾಗಿದ್ದರೆ ತನ್ನ ಇಡೀ ಆಸ್ತಿಯನ್ನೇ ಸಹಕಾರ ಸಂಘಕ್ಕೆ ಬರೆದುಕೊಡಬೇಕೆಂದಿದೆ. ಆತನಿಗೆ ಒಂದುನೂರು ರೂಪಾಯಿಯೋ ಅಥವಾ ಒಂದು ಸಾವಿರರೂಪಾಯಿಯೋ ಸಾಲ ಬೇಕಾಗಿದ್ದರೆ ಆತನ ಇಡೀ ಆಸ್ತಿಯನ್ನೇ ಸೊಸೈಟಿಗೆ ಬರೆದು ಕೊಡಬೇಕೆಂಬ ವಿಚಾರದಲ್ಲಿ ಅರ್ಥವಿಲ್ಲ. ಒಂದು ಸಾರಿ ಸೊಸೈಟಿಗೆ ಬರೆದುಕೊಟ್ಟಮೇಲೆ ಬೇರೆ ಸಾಲದ ಹಣ ತನಗೆ ಎಲ್ಲಿಯೂ ದೊರಕುವ ಹಾಗಿಲ್ಲ. ಇದರಿಂದ ಈ ತಿದ್ದುಪಡಿಯು ಅಷ್ಟು ಉಪಯುಕ್ತವಾದುದಾಗಿಲ್ಲವೆಂದೇ ಹೇಳಬೇಕಾಗಿದೆ. ಸಾಲಕ್ಕೆ ತಕ್ಕಷ್ಟು ಆಸ್ತಿ ನಿಗದಿಮಾಡಿ ಬರೆಸಿಕೊಳ್ಳುವ ವ್ಯವಸ್ಥೆ ಮಾಡಿ ಅದಕ್ಕನುಗುಣವಾದ ತಿದ್ದುಪಡಿಯನ್ನು ತರುವುದು ಸೂಕ್ತವೆಂದು ಸಲಹೆ ಮಾಡುತ್ತೇನೆ. ಇಷ್ಟು ತಿಳಿಸಿ ನನ್ನ ಮಾತನ್ನು ಇಲ್ಲಿಗೆ ಮುಗಿಸುತ್ತೇನೆ.

ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮೀ, ನಾನು ಈ ತಿದ್ದುಪಡಿಯ ಮಸೂದೆಯನ್ನು

ಸ್ವಾಗತಿಸುತ್ತಾ ಮೂರು ನಾಲ್ಕು ಅಂಶಗಳನ್ನು ಮಾತ್ರ ಸಭೆಯ ಗಮನಕ್ಕೆ ತರುತ್ತೇನೆ.

ಮೊದಲನೆಯದಾಗಿ, ಸಹಕಾರ ಸಂಘದಲ್ಲಿ ಸರ್ಕಾರದ ಷೇರು ಇರಬಾರದೆಂದು ಕೆಲವರು ವಾದಮಾಡಿದರು. ಸರ್ಕಾರದ ಷೇರು ಇಲ್ಲದೇ ಇರುವ ಸಹಕಾರ ಸಂಘ ಎಂದಿಗೂ ಬದುಕುವುದಿಲ್ಲ. ಪ್ರಜಾಪ್ರಭುತ್ವ ಬಂದು ಈಗ್ಗೆ 3-4 ವರ್ಷಗಳಾದರೂ ಜನರಲ್ಲಿ ಸಹಕಾರ ಮನೋಭಾವ ಈ ದಿವಸದವರೆಗೆ ಬದಲಾವಣೆ ಹೊಂದಿಲ್ಲ. ಸಹಕಾರ ಸಂಘಗಳ ವಿಚಾರದಲ್ಲಿ ಜನರಿಗೆ ಹಿಂದೆ ಬೇಜವಾಬ್ದಾರಿ ಸರ್ಕಾರ ವಿದ್ದಾಗ ಇದ್ದ ಮನೋಭಾವವೇ ಉಳಿದಿದೆ. ಪ್ರಜಾ ಸರ್ಕಾರ ಬಂದಮೇಲೆ, ಪ್ರಜಾಪ್ರಭುತ್ವ ನೆಲೆಸಿದಮೇಲೆ, ಸಹಕಾರ ಸಂಘದಲ್ಲಿ ಸರ್ಕಾರದ ಪ್ರವೇಶಕ್ಕೆ ಅವಕಾಶವಿದ್ದರೇ ಆ ಸಂಘ ಊರ್ಜಿತ ಸ್ಥಿತಿಗೆ ಬರಲು ಸಹಕಾರಿ ಎಂಬುದನ್ನು ಜನರು ಅರಿಯಬೇಕು. ಕೆಲವು ಸೊಸೈಟಿಗಳಲ್ಲಿ ಸಾಲ ತೆಗೆದುಕೊಂಡವರು ಅದನ್ನು ವಾಪಸ್ಸು ಕೊಡುವ ವಿಚಾರದಲ್ಲಿ ಆ ಸೊಸೈಟಿಗಳಿಗೆ ದ್ರೋಹವೆಣಿಸಿರತಕ್ಕ ಸಂದರ್ಭಗಳು ನನ್ನ ಗಮನಕ್ಕೂ ಬಂದಿವೆ. ಸಹಕಾರ ಸಂಘದ ಮೇಲ್ವಿಚಾರಣೆ ಬಹು ಯಶಸ್ವಿಯಾಗಿರಬೇಕಾದರೆ, ಸಹಕಾರ ಸಂಘ ಕೊಟ್ಟ ಸಾಲವನ್ನು ಸಲೀಸಾಗಿ ವಸೂಲು ಮಾಡಿಕೊಳ್ಳಬೇಕಾದರೆ, ಸಹಕಾರ ಸಂಘದ ಹಣದ ಭದ್ರತೆ ಸಮರ್ಪಕವಾಗಿರಬೇಕಾದರೆ ಸರ್ಕಾರಧ ಕೈವಾಡ, ಹತೋಟಿ ಅದರ ವಿಚಾರದಲ್ಲಿ ಪೂರ್ಣವಾಗಿರಬೇಕು. ಸಹಕಾರ ಸಂಘದ ವಿಚಾರದಲ್ಲಿ ಜನರ ಮನಸ್ಸು ಬಹುಮಟ್ಟಿಗೆ ಪರಿವರ್ತನೆಯಾಗಬೇಕು, ಸಹಕಾರ ಸಂಘದ ತತ್ವಗಳು ಜನರ ಮನಸ್ಸಿನಲ್ಲಿ ಚೆನ್ನಾಗಿ ಮೂಡಬೇಕು, ಹೆಚ್ಚಿನ ಪ್ರಯೋಜನ ಅದರಿಂದ ಪಡೆಯಬೇಕಾಗಿದ್ದರೆ ಸಹಕಾರ ಸಂಘದ ಬೆಳೆವಣಿಗೆ ಸಾರೋದ್ಧಾರವಾಗಿ ಜರುಗಬೇಕು. ಹೀಗೆ ಆಗಬೇಕಾದರೆ ಆ ಸಂಘದಲ್ಲಿ ಸರ್ಕಾರದ ಕೈವಾಡ ಇರಲೇಬೇಕು. ಇಂದಿನವರೆಗೂ ಸಹಕಾರ ಸಂಘದ ಲೆಕ್ಕ ಪತ್ರಗಳು ಸರ್ವ ಸಮರ್ಪಕವಾಗಿ ಇಡಲ್ಪಟ್ಟಿವೆಯೆಂದು ನಾನು ಯಾವ ಸಂಘದ ವಿಚಾರದಲ್ಲಿಯೂ ಕೇಳಿಲ್ಲ. ಇದರಿಂದ ಈ ಸಂಘದ ಬಾಕಿ ವಸೂಲಿ ಬಹುಮಟ್ಟಿಗೆ ಮೂಲ್ಕ ಬೀಳುವುದಕ್ಕೆ ಕಾರಣವಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಈ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡು ಇರತಕ್ಕ ಲೋಪದೋಷಗಳನ್ನು ಯಾವರೀತಿ ಸರಿಪಡಿಸಬೇಕೆಂಬುದನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲಿಸುತ್ತಾರೆಂದು ನಾನು ನಂಬುತ್ತೇನೆ. ಸಹಕಾರ ಸಂಘದ ಊರ್ಜಿತ ಸಂಧನೆಗೆ ಹಣದ ವಸೂಲಿ ಬಹು ಮುಖ್ಯವಾದ ಸಾಧನೆಯೆಂಬುದನ್ನು ಅರಿತು ಈ ಬಗ್ಗೆ ಸೂಕ್ತ ಕಾರ್ಯಕ್ರಮ ಅತ್ಯವಶ್ಯಕವೆಂದು ಒತ್ತಾಯಪೂರ್ವಕವಾಗಿ ತಿಳಿಸುತ್ತೇನೆ.

DISCUSSION ON QUESTIONS.

Q. No. 471 re. Necessity to start Schools in Rural parts.

5 P.M.

Mr. SPEAKER.—Now discussion under Rule 39 in respect of question 471 V set given notice of Sri B. Hutche Gowda will take place. There are two questions and we cannot allot more than one hour. Therefore I request the Hon'ble Members to confine their remarks to half-an-hour for each question.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ನಾನು 471ನೇ ಪ್ರಶ್ನೆಯಮೇಲೆ ಈ ನಿರ್ಣಯವನ್ನು ತಂದಿದ್ದೇನೆ. ಇದು ಬಹಳ ಪ್ರಾಮುಖ್ಯವಾದ ಅಂಶ ಎನ್ನುವುದರಲ್ಲಿ ಯಾರದೂ ವಿರೋಧವಿಲ್ಲ. ಸಂಸ್ಥಾನದಲ್ಲಿ ಬಹಳ ಮುಖ್ಯವಾಗಿ ನಡೆಯಬೇಕಾಗಿರತಕ್ಕ ಈ ಅಭಿವೃದ್ಧಿ ಕೆಲಸ ಎಷ್ಟುಮಟ್ಟಿಗೆ ಹಿಂದೆ ಬಿದ್ದು ಹೋಗಿದೆ ಎಂಬುದನ್ನು ಹೇಳಬೇಕೆಂಬುದಕ್ಕಾಗಿ ಇದನ್ನು ತಂದಿದ್ದೇನೆ. ರಾಜ್ಯಾಂಗದ ಪ್ರಕಾರ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಗೂ ಕೂಡ 14 ವರ್ಷಗಳವರೆಗೂ ವಿದ್ಯಾಭ್ಯಾಸವನ್ನು ಕೊಡಬೇಕಾದದ್ದೂ ಅದೂ ಈ ಹತ್ತು ವರ್ಷಗಳೊಳಗೆ ಈ ಕಾರ್ಯ ಸಾಧನೆ ಮಾಡಬೇಕಾದದ್ದೂ ಪ್ರತಿಯೊಂದು ಸರ್ಕಾರದಮೇಲೂ ಮತ್ತು ಶಾಸನ ಸಭೆಯ ಸದಸ್ಯರಮೇಲೂ ಬಿದ್ದಿರತಕ್ಕ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಿರ್ವಹಿಸದೇ ಹೋದರೆ ನಾವು ಈ ಸ್ವಾತಂತ್ರ್ಯವನ್ನು ಅನುಭವಿಸುವುದಕ್ಕೆ ಯೋಗ್ಯರಲ್ಲ ಎಂದು ಖಂಡಿತವಾಗಿಯೂ ಹೇಳಬಹುದು. ಏಕೆಂದರೆ, ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಕೂಡ ಓಟಿನ ಹಕ್ಕು ಇದ್ದು, ದೇಶದ ಆಡಳಿತದಲ್ಲಿ ಆತನ ಭಾಗ ಇರಬೇಕಾಗಿದ್ದರೆ ಆತನಿಗೆ ಸಾಕಾದಷ್ಟು ತಿಳಿವಳಿಕೆ, ಅದೂ ಕೂಡ ವಿದ್ಯಾಭ್ಯಾಸದ ಮೂಲಕ, ಬಂದಿರಬೇಕು. ಅಂತಹ ತಿಳಿವಳಿಕೆಯನ್ನುಂಟುಮಾಡತಕ್ಕ ವಿದ್ಯಾಭ್ಯಾಸವನ್ನು ಕೊಡಬೇಕಾದುದು ಸರ್ಕಾರದ ಮೊದಲನೆಯ ಕರ್ತವ್ಯ. ಆ ರೀತಿ ಕೊಡದೇ ಇರುವುದು ಸರ್ಕಾರದ ಬಹಳ ಪ್ರಾಮುಖ್ಯವಾದ ಲೋಪ ಎಂಬುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಹಿಂದಿನ ಸರ್ಕಾರದಲ್ಲಿ ಅವರೂ ಕೂಡ ಈ ವಿದ್ಯಾಭ್ಯಾಸದ ಪ್ರಾಮುಖ್ಯತೆಯನ್ನು ಗಮನಿಸಿ ಎಷ್ಟುಮಟ್ಟಿಗೆ ವಿದ್ಯಾಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದರು ಎಂಬುದನ್ನು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಸುಮಾರು 16,000 ಚಿಲ್ಲರೆ ಗ್ರಾಮಗಳು ಇವೆ. 1945ರ ವೇಳೆಗೆ ಸುಮಾರು 6,000 ಗ್ರಾಮಗಳಲ್ಲಿ ಮಾತ್ರ ವಿದ್ಯಾಭ್ಯಾಸ ದೊರೆಯುತ್ತಾ ಇತ್ತು. ಅನಂತರ ಒತ್ತಾಯ ಶಿಕ್ಷಣಕ್ರಮ ಇಟ್ಟುಕೊಂಡು, 200 ರಿಂದ 300 ಪ್ರಜಾ ಸಂಖ್ಯೆ ಇರತಕ್ಕ ಪ್ರತಿಯೊಂದು ಗ್ರಾಮಕ್ಕೂ ಕೂಡ ಸ್ಕೂಲು ಕೊಡಬೇಕೆಂದು ಹೇಳಿ ಹಿಂದಿನ ಮಂತ್ರಿಮಂಡಲಗಳವರು ಒಂದು ನೀತಿಯನ್ನು ಹಾಕಿದ್ದರು. ಆ ಪ್ರಕಾರ 1945-46ರ ರಿಂದ ಪ್ರತಿವರ್ಷ ಕನಿಷ್ಠ ಪಕ್ಷ 400 ಪ್ರೈಮರಿ ಸ್ಕೂಲುಗಳನ್ನು ತೆಗೆಯಬೇಕೆಂದು ಹೇಳಿ ನಿರ್ಧರಿಸಲಾಗಿತ್ತು. ಈ ಕಡ್ಡಾಯ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಲು ಮೊದಲನೆ ಹೆಜ್ಜೆ ಇಟ್ಟದ್ದು 1942ರಲ್ಲಿ. ಯಾವ ಹುಡುಗರು ಒಂದುಸಾರಿ ಪ್ರಾಥಮಿಕ ವಿದ್ಯಾಶಾಲೆಗೆ ಸೇರುತ್ತಾರೆಯೋ ಅವರು ಕೊನೆಯವರೆಗೂ ನಾಲ್ಕು ವರ್ಷ ವಿದ್ಯಾಭ್ಯಾಸ ಮಾಡಿಯೇತೀರಬೇಕೆಂಬ ಕಾನೂನು ತಂದರು. ಅದನ್ನು ಪ್ರತಿಯೊಂದು ಜಿಲ್ಲೆಯ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲೂ ಪ್ರಾರಂಭಮಾಡಿದರು. 1945ರ ಹೊತ್ತಿಗೆ ಕಡ್ಡಾಯ ವಿದ್ಯಾಭ್ಯಾಸವನ್ನು ಎಲ್ಲಾ ಕಡೆಗೂ ಎಂದರೆ ಪ್ರತಿ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಜಾರಿಗೆ ತಂದರು. ಈ ಸರ್ಕಾರ ಬಂದಮೇಲೆ ಅ ಒಂದು ನೀತಿಯನ್ನು ಮುಂದುವರಿಸಬೇಕಾಗಿತ್ತು. ಅಲ್ಲದೆ ಈ ಸರ್ಕಾರಕ್ಕೆ ಪ್ರಗತಿದಾಯಕವಾದ ತನ್ನ

(ಶ್ರೀ ಬಿ. ಹುಚ್ಚೇಗೌಡ.)

ಪ್ರಜಾಪ್ರಭುತ್ವ ತತ್ವವನ್ನು ಅನುಷ್ಠಾನಕ್ಕೆ ತರಬೇಕೆಂಬ ಇಚ್ಛೆ ಇದ್ದಿದ್ದ ಪಕ್ಷದಲ್ಲಿ, ಅದರಲ್ಲಿ ನಂಬಿಕೆ ಇದ್ದಿದ್ದರೆ ಇನ್ನೂ ಹೆಚ್ಚಿನ ಸಂಖ್ಯೆಯ ಸ್ಕೂಲುಗಳನ್ನು ತೆರೆಯಬೇಕಾಗಿತ್ತು. ಅದಕ್ಕೆ ಬದಲಾಗಿ ಈ ಕಡ್ಡಾಯ ವಿದ್ಯಾಭ್ಯಾಸ ನಿಂತೇ ಹೋಯಿತು. ಅದಕ್ಕೆ ಪೂರ್ಣಗಮನ ಕೊಡುವುದನ್ನು ನಿಲ್ಲಿಸಿಯೇ ಬಿಟ್ಟರು. 400 ಸ್ಕೂಲುಗಳನ್ನು ಕೊಡುತ್ತಾ ಇದ್ದಕಡೆ ಈ ವರ್ಷ ಒಂದು ಸ್ಕೂಲು ಸಹಾ ಕೊಟ್ಟಿಲ್ಲ. ಹಿಂದಿನ ವರ್ಷ 56 ಸ್ಕೂಲುಗಳು, ಅದರ ಹಿಂದಿನ ವರ್ಷ 110 ಸ್ಕೂಲುಗಳನ್ನು ಕೊಟ್ಟಿದ್ದಾರೆ. ಈ ರೀತಿ ವರ್ಷೇ ವರ್ಷೇ ಕಡಮೆ ಆಗಿ ಕೊನೆಗೆ ಸೊನ್ನೆ nil balance ಆಯಿತು.

1945-46ನೇ ಇಸವಿಯಲ್ಲಿ 7,535 ಪ್ರೈಮರಿ ಸ್ಕೂಲುಗಳು ;

1947ನೇ ಇಸವಿಯಲ್ಲಿ 8872 ಪ್ರೈಮರಿ ಸ್ಕೂಲುಗಳು ಇವೆ.

1945ರಲ್ಲಿ	400	ಸ್ಕೂಲುಗಳು.
1946ರಲ್ಲಿ	370	,,
1947ರಲ್ಲಿ	430	,,
1948ರಲ್ಲಿ	377	,,

1949ರಲ್ಲಿ ಹಾಗೆಯೇ ಇಟ್ಟುಕೊಂಡು ಬಂದು 1949-50 ರಿಂದ ಅದನ್ನು ಕಡಿಮೆ ಮಾಡಿಕೊಂಡು ಬಂದಿದ್ದಾರೆ. ಈ ರೀತಿ ಕಡಿಮೆ ಆಗಿರುವುದು ಅಲ್ಲದೆ ವಿದ್ಯಾಭ್ಯಾಸ ಎಷ್ಟುಮಟ್ಟಿಗೆ ಮುಂದುವರಿದಿದೆ ಎಂದರೆ 1951ನೇ ಇಸವಿ ಸೆನ್ಸಸ್ ಪ್ರಕಾರ 14 ವರ್ಷದೊಳಗಿರತಕ್ಕ ಹುಡುಗರು 14 ಲಕ್ಷ ಇರತಕ್ಕವರ ಪೈಕಿ ಐದು ಲಕ್ಷ 80 ಸಾವಿರ ಜನ ಹುಡುಗರು ಮಾತ್ರ ಸ್ಕೂಲಿಗೆ ಹೋಗುತ್ತಾ ಇದ್ದಾರೆ. ಉಳಿದ ಶೇಕಡ 60 ಅಥವಾ ಎಂಟು ಲಕ್ಷ ಚಿಲ್ಲರೆ ಜನಕ್ಕೆ ವಿದ್ಯಾಭ್ಯಾಸ ದೊರೆಯುತ್ತಾ ಇಲ್ಲ. ಇದರಿಂದ ಏನಾಗುತ್ತಿದೆ ಎಂದರೆ, ನಮ್ಮ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಕೂಡ 'ಏನಪ್ಪ ನಾನು ಕಂದಾಯ ಕೊಡುವುದಿಲ್ಲವೇ, ವಿದ್ಯಾಭ್ಯಾಸದ ಸೆಸ್ಸು ಕೊಡುವುದಿಲ್ಲವೇ, ನಾನೂ ಒಬ್ಬ ಪ್ರಜೆ ಅಲ್ಲವೇ, ಸರ್ಕಾರದವರು ವಿದ್ಯಾಭ್ಯಾಸದ ಸೆಸ್ಸು ಹಾಕಿ ನಮ್ಮಿಂದ ವಸೂಲು ಮಾಡಿಕೊಂಡರೂ ಕೂಡ ನಾಲ್ಕು ವರ್ಷದ ಪ್ರೈಮರಿ ವಿದ್ಯಾಭ್ಯಾಸವನ್ನೂ ಸಹ ಒದಗಿಸಿಕೊಡುತ್ತಿಲ್ಲವಲ್ಲಾ, ಇಂಥ ಸರ್ಕಾರ ಇರತಕ್ಕ ದೇಶದಲ್ಲಿ ಪ್ರಜೆ ಆಗಿರುವುದು ಎಂಥಾ ದೌರ್ಭಾಗ್ಯ' ಎಂದು ಹೇಳುತ್ತಾ ಇದ್ದಾರೆ. ಸ್ವಾಮಿ, ಹಿಂದೆ ಯಾವ ಒಂದು ನೀತಿಯನ್ನು ಇಟ್ಟುಕೊಂಡಿದ್ದರೋ ಅದೇ ಒಂದು ನೀತಿಯನ್ನು ಮುಂದುವರಿಸಿದ್ದರೆ ವರ್ಷಕ್ಕೆ 400 ಸ್ಕೂಲುಗಳಂತೆ ಸುಮಾರು 1½ ಸಾವಿರ ಸ್ಕೂಲುಗಳು ಆಗುತ್ತಾ ಇದ್ದವು. ಈಗ ತಾವು ತಂದಿರತಕ್ಕ ವಿದ್ಯಾಭ್ಯಾಸ ಸುಧಾರಣೆ ಆಗಬೇಕು, ಅದನ್ನು ಸ್ವಾಗತಿಸಬಹುದು ಎಂದು ಹೇಳುತ್ತಾ ಇದ್ದಾರೆ. ಆದರೆ ಅದನ್ನು ಸ್ವಾಗತಿಸುವುದಾದರೂ ಹೇಗೆ ಸ್ವಾಮಿ ? ಪ್ರತಿಯೊಬ್ಬ ಪ್ರಜೆಗೂ ಪ್ರೈಮರಿ ವಿದ್ಯಾಭ್ಯಾಸ ಒದಗಿಸಿದಮೇಲೆ ತಾನೆ ಬಾಕಿ ವಿಚಾರ ನೋಡಿಕೊಳ್ಳುವುದು ! ಈಗ ತಾವು ಟ್ರೈನಿಂಗ್ ಆದ ಉಪಾಧ್ಯಾಯರುಗಳಿಲ್ಲ, ಆದ್ದರಿಂದ ವಿದ್ಯಾಭ್ಯಾಸ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. 26 ಸಾವಿರ ಜನ ಪ್ರೈಮರಿ ಸ್ಕೂಲು ಉಪಾಧ್ಯಾಯರು ಇದ್ದಾರೆ ; ಅವರಲ್ಲಿ ಕೇವಲ ಹತ್ತು ಸಾವಿರ ಜನಗಳಿಗೆ ಮಾತ್ರ ಟ್ರೈನಿಂಗ್ ಆಗಿದೆ. ಹೀಗಿರುವಾಗ ಇನ್ನೂ ಅಷ್ಟು ಜನ ಉಪಾಧ್ಯಾಯರುಗಳನ್ನು ತೆಗೆದುಕೊಂಡಿದ್ದರೆ ಏನೂ ಮುಳುಗಿ ಹೋಗುತ್ತಿರಲಿಲ್ಲ. ಆ 16 ಸಾವಿರ ಜನದ ಜೊತೆಗೆ ಇನ್ನೊಂದು 3,000 ಜನ ಸೇರಿಕೊಂಡು 19 ಸಾವಿರ ಜನ untrained teachers ಆಗುತ್ತಾ ಇದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಬ್ಬನಿಗೂ ವಿದ್ಯಾಭ್ಯಾಸದ ಸೌಕರ್ಯ ಒದಗಿಸಿಕೊಟ್ಟು ಆಮೇಲೆ ಬಾಕಿ ವಿಷಯಗಳನ್ನು ಮುಂದುವರಿಸಬಹುದು. ತಾವು ಈಗ ಕೊಟ್ಟಿರುವ ಸುಧಾರಣೆಯ ಪ್ರಕಾರ ಉಪಾಧ್ಯಾಯರಿಗೆ ಶಿಕ್ಷಣ ಕೊಡುವುದಕ್ಕಾಗಿ ವರ್ಷಕ್ಕೆ 40 ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಹೇಳುತ್ತೀರಿ. ಇರುವ ಸ್ಕೂಲುಗಳನ್ನು ಅಭಿವೃದ್ಧಿಪಡಿಸಲು 44 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೇವೆ ಎಂದು ಹೇಳುವಾಗ ಅದಕ್ಕೆ ಬದಲಾಗಿ 22 ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದೇಸಲ ಬೇಕಾಗಿರುವ ಸ್ಕೂಲುಗಳನ್ನು ಸ್ಥಾಪಿಸಬಹುದು. ನಾಳೆ ಇದನ್ನು ಮಾಡುತ್ತೇವೆ, ಪರಿಶೀಲಿಸುತ್ತೇವೆ ಎಂದು ಹೇಳುತ್ತಾ ಹೋದರೆ ನಾಳೆ ಹಣದ ಸೌಲಭ್ಯವಿದ್ದರೆ ತಾನೆ ಅನುಕೂಲ ದೊರೆಯುವುದು ? ಇಲ್ಲಿಯವರೆಗೂ ಕೂಡ ಈ ವಿದ್ಯಾಭ್ಯಾಸದ ವಿಷಯದಲ್ಲಿ ದೇಶದ ಜನರು ಇದು ಅತಿ ಮುಖ್ಯವಾದುದೆಂದು ಎಷ್ಟೋ ಒತ್ತಾಯ ಮಾಡಿದರೂ ಕೂಡ ಅವರ ನಿರೀಕ್ಷಣೆಯನ್ನು ತೃಣೀಕರಿಸಿ ಈ ಸರ್ಕಾರ ಆಡಳಿತ ನಡೆಸುತ್ತಿದೆಯೆಂದು ಇದೊಂದು ಅಂಶದಿಂದ ನಾವು ಹೇಳಬಹುದು. ಹೈಸ್ಕೂಲುಗಳ ವಿಚಾರ ನೋಡಿದರೆ ಹಿಂದಿನ ಸರ್ಕಾರ 1945-46ರಲ್ಲಿ ಕೇವಲ 76 ಸ್ಕೂಲುಗಳಿದ್ದುದನ್ನು ಹೆಚ್ಚಿಸಿದರು, ವರ್ಷಕ್ಕೆ 16 ಸ್ಕೂಲುಗಳನ್ನು ಹೆಚ್ಚಿಸಿದರು. 1944-45ರಲ್ಲಿ 21 ಸ್ಕೂಲುಗಳನ್ನು ಕೊಟ್ಟರು. ಪ್ರಜಾ ಪ್ರತಿನಿಧಿಗಳ ಆಶೋತ್ತರಕ್ಕೆ ಸ್ವಲ್ಪಮಟ್ಟಿಗಾದರೂ ಬೆಲೆ ಕೊಡಬೇಕೆಂಬ ಉದ್ದೇಶ ಹಿಂದಿನವರಿಗಿತ್ತು. ಈ ಸರ್ಕಾರಕ್ಕೆ ಆ ತರಹ ಯಾವುದೂ ಇಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇದೊಂದು ವಿಚಾರದಲ್ಲಿ ಬಹಳಮಟ್ಟಿಗೆ ಅನಾದರಣೆಯನ್ನು ತೋರಿಸಿದೆ. ಇದನ್ನು ಪ್ರಜೆಗಳು ಯಾವ ರೀತಿ ಸರಿಪಡಿಸುತ್ತಾರೆಂಬುದನ್ನು ಮುಂದೆ ನೋಡಬೇಕಾಗಿದೆ. ಈಗ 7,200 ಹಳ್ಳಿಗಳಲ್ಲಿ 200 ಪ್ರಜೆಗಳಿಗಿಂತ ಕಡಮೆ ಜನಸಂಖ್ಯೆಯಿದೆ. ಕೊನೆಯಪಕ್ಷ ಮೂರು ಸಾವಿರ ಸ್ಕೂಲುಗಳನ್ನು ಹೊಸದಾಗಿ ಕೊಟ್ಟಿದ್ದರೂ ಕೂಡ ಏಳು ಸಾವಿರ ಗ್ರಾಮಗಳಿಗೆ ವಿದ್ಯಾಸೌಕರ್ಯ ದೊರಕುವುದು. ನಾವೇನು "ಟೆಕ್ನಿಕಲ್ ಕಾಲೇಜುಗಳನ್ನಾಗಲಿ, ಇಂಜನಿಯರಿಂಗ್ ಕಾಲೇಜನ್ನಾಗಲಿ ಕೇಳುತ್ತಿಲ್ಲ. ಪ್ರೈಮರಿ ಸ್ಕೂಲು ಕೊಡುವುದಕ್ಕೇ ಎಷ್ಟೋ ಕಷ್ಟವಾಗಿದೆ. ಸಾಮಾನ್ಯ ಮನುಷ್ಯನಿಗೆ ಈ ಅವಕಾಶ ಸಹ ಇಲ್ಲದಿದ್ದರೆ ಸರ್ಕಾರಕ್ಕೆ ಕಂದಾಯ ಏಕೆ ಕೊಡಬೇಕು ! ಸೆಸ್ ಏಕೆ ಕೊಡಬೇಕು ! ಈ ದೇಶದಲ್ಲಿ ಇಂಥ ಪರಿಸ್ಥಿತಿಯಲ್ಲಿ ಇರಭೇಕೆ ಅಥವಾ ಬಿಟ್ಟು ಹೋಗಭೇಕೆ ಎಂಬುದು ಅರ್ಥವಾಗುವುದಿಲ್ಲ. ಮಿಡ್ಲ್ ಸ್ಕೂಲುಗಳು 1943ರಲ್ಲಿ ಸುಮಾರು 373 ಇದ್ದುವು ; ಪ್ರತಿವರ್ಷ 50 ಸ್ಕೂಲುಗಳನ್ನು ಕೊಟ್ಟರು. ಸುಲಭ ಖರ್ಚಿನಲ್ಲಿ ಮಾಡಬೇಕೆಂದು ನ್ಯೂಟೈಪ್ ಮಿಡ್ಲ್ ಸ್ಕೂಲುಗಳನ್ನು ಸ್ಥಾಪಿಸಿದರು ; ಅದರಲ್ಲಿ ಎರಡು ಕ್ಲಾಸು ಹೆಚ್ಚುಮಾಡಿದರೆ ಆರು ವರ್ಷಗಳ ವಿದ್ಯಾಭ್ಯಾಸವಾದಮೇಲೆ ಕಡೆಯ ಪಕ್ಷ ಕಲಿತದ್ದನ್ನು ಮರೆಯದ ಹಾಗೆ ಅನುಕೂಲವಾಗುತ್ತದೆ ಎಂದು ಗ್ರಾಮಾಂತರಗಳಲ್ಲಿ ಆ ವ್ಯವಸ್ಥೆ ಮಾಡಿದರು. ಈ ದಿವಸ ಮಂತ್ರಿಗಳಿಗೆ ಪಕ್ಷದ ಸದಸ್ಯರ ಬಹುಮತವಿರುವುದರಿಂದ ಅವರು ನಮ್ಮ ಮಾತನ್ನು ತೃಣೀಕರಿಸಬಹುದು. ಆದರೆ ಇಂಥ ಒಂದು ಸಾಮಾನ್ಯ ಸೌಕರ್ಯವನ್ನು ಬೇಜವಾಬ್ದಾರಿ ಸರ್ಕಾರವೆಂದು ಯಾವು

ದನ್ನು ಹೇಳುತ್ತಿದ್ದರೋ ಅದು ಹೋದಮೇಲೂ ಸಹ ಕೊಡದಿರುವುದನ್ನು ನೋಡಿದರೆ ಈ ಜವಾಬ್ದಾರಿ ಸರ್ಕಾರ ಎಷ್ಟುಮಟ್ಟಿಗೆ ಸ್ವಶಕ್ತಿಯಿಂದ ಪ್ರಜೆಗಳ ಒಂದು ಆಶೋತ್ತರವನ್ನು ನಿರಾಕರಿಸಿ ನಡೆಯುತ್ತಿದೆಯೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಒತ್ತಿ ಹೇಳಬೇಕಾಗಿಲ್ಲ. ಈ ದಿವಸ ಮಿಡ್ಲ್ ಸ್ಕೂಲುಗಳು ಸುಮಾರು 700 ಚಿಲ್ಲರೆ ಇವೆ. ಇದರ ಜೊತೆಗೆ ಪ್ರೈಮರಿ ಸ್ಕೂಲುಗಳ ಸಂಖ್ಯೆ ಕೂಡ ಹೆಚ್ಚಬೇಕು. ಉಪಾಧ್ಯಾಯರಿಗೆ ಶಿಕ್ಷಣ ಕೊಡುವುದು ಅವಶ್ಯಕವಾದರೆ ಅದನ್ನು ಬೇಡವೆಂಬು ಹೇಳುವುದಿಲ್ಲ. ಆದರೆ ಪ್ರತಿಯೊಬ್ಬರಿಗೂ ಪ್ರೈಮರಿ ವಿದ್ಯಾಭ್ಯಾಸವನ್ನೊದಗಿಸಿ ಅನಂತರ ಸೆಕೆಂಡರಿ ವಿದ್ಯಾಭ್ಯಾಸ, ಆಮೇಲೆ ಕಾಲೇಜು ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಕೊಡಬೇಕು. ಇಂಥ ಒಂದು ಅನುಕೂಲತೆ ಸರ್ಕಾರ ಒದಗಿಸಬೇಕಾಗಿತ್ತು. ಹಾಗೆ ಒದಗಿಸದಿರುವುದು ಬಹಳ ಖಂಡನೀಯವಾದುದೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖಾ ಮಂತ್ರಿಗಳು).—ಸ್ವಾಮಿ, ವಿದ್ಯಾಭ್ಯಾಸ ಹರಡಬೇಕು, ಅದು ಸಂಸ್ಥಾನದ ಎಲ್ಲಾ ಪ್ರಜೆಗಳಿಗೂ ಸಿಕ್ಕಬೇಕು ಎಂದೇನು ನಮ್ಮ ಮಾನ್ಯ ಮಿತ್ರರು ಒಂದು ಭಾವನೆಯನ್ನು ವ್ಯಕ್ತಪಡಿಸಿದರೋ ಅದರಲ್ಲಿ ನನಗಾದರೂ ಪೂರ್ಣ ಒಪ್ಪಿಗೆಯಿದೆ. ವಿದ್ಯಾಭ್ಯಾಸ ಯಾವ ರೀತಿಯಲ್ಲಿ ವಿಸ್ತಾರವಾಗಬೇಕೋ ಆ ರೀತಿಯಲ್ಲಿ ಆಗುತ್ತಿಲ್ಲ, ಒಂದು ತತ್ವದೃಷ್ಟಿಯಿಂದ ಆಗುತ್ತಿಲ್ಲ ಎಂದು ಅವರು ಆಕ್ಷೇಪಣೆ ಮಾಡಿದ್ದಾರೆ. ಅದನ್ನರಿತೇ ಯಾವ ರೀತಿ ವಿಸ್ತಾರ ಮಾಡಬೇಕು, ವಿದ್ಯಾಭ್ಯಾಸ ಸುಗಮವಾಗಿ ನಡೆಯಲು ವಿದ್ಯಾ ಶಾಖೆಯನ್ನು ಮತ್ತು ವಿದ್ಯಾಭ್ಯಾಸ ಕ್ರಮವನ್ನು ಹೇಗೆ ಮಾರ್ಪಡಿಸಬೇಕು ಎಂದು ನಾವು ನಿರ್ಧಾರಕ್ಕೆ ಬಂದಿರುವುದಕ್ಕೆ ಅವರ ಪೂರ್ಣ ಸಹಕಾರವನ್ನು ಪ್ರಾರ್ಥಿಸುತ್ತೇನೆ. ಈ ವರ್ಷ ಯಾವ ರೀತಿಯ ವಿಸ್ತಾರವನ್ನೂ ಮಾಡಿಲ್ಲವೆಂದು ಹೇಳಿದರು. ಈ ವರ್ಷ 250 ಸಿಂಗಲ್ ಟೀಚರ್ ಸ್ಕೂಲುಗಳನ್ನು ಪ್ರಾರಂಭಿಸಿದ್ದೇವೆಂಬುದನ್ನು ಅವರು ಮರೆತಿರಬಹುದು.

ಶ್ರೀ ಬಿ. ಹುಚ್ಚೇಗೌಡ.—ಅದು ಕೇಂದ್ರ ಸರ್ಕಾರ ಅಡೀಷನಲ್ ಹ್ಯಾಂಡ್ಸ್ ಕೊಟ್ಟಿರುವುದಕ್ಕೆ ಸಂಬಂಧಪಟ್ಟಿದ್ದು. ಟೀಚರ್ಸ್ ಕೊಟ್ಟಿದ್ದಾರೆ, ಸ್ಕೂಲಲ್ಲ ಎಂದು ನನ್ನ ಪ್ರಶ್ನೆಗೆ ಉತ್ತರ ಹೇಳಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ಕೂಲು ಕಟ್ಟಡ ಕೊಟ್ಟಿದೆ, ಅಡೀಷನಲ್ ಟೀಚರ್ಸ್ ಕೊಟ್ಟಿದೆ ಮತ್ತು ಸ್ಕೂಲು ಕೂಡ ಪ್ರಾರಂಭವಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಎಷ್ಟು ಎಂಬುದನ್ನು ಹೇಳುತ್ತೀರಾ?

Mr. SPEAKER,—May I bring it to the notice of the Hon'ble Minister that in the reply it is said that the number of primary schools for 1954-55 is nil?

ಶ್ರೀ ಎ. ಜಿ. ರಾಮಚಂದ್ರರಾವ್.—This refers to 1953-54. ಮಾನ್ಯ ಸದಸ್ಯರು ಕೇಳಿರುವ ಸಾಲಗೆ ಕೊಟ್ಟಿದೆ. 1953-54ನೆಯ ಸಾಲಗೆ ಅನ್ವಯಿಸುವ ಹಾಗೆ ಪ್ರಶ್ನೆಯಿರಲಿಲ್ಲ, ಆದ್ದರಿಂದ ಕೊಟ್ಟಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇಂಡಿಯಾ ಸರ್ಕಾರದವರು ಆರ್ಡರು ಮಾಡಿರುವುದು 1953ನೆಯ ಇಸವಿ ಅಕ್ಟೋಬರಿನಲ್ಲಿ. ಅಗ 275 ಜನರನ್ನು ಅಡೀಷನಲ್ಲಾಗಿ ಕೊಟ್ಟಿರುವುದು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದಕ್ಕೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಅಡೀಷನಲ್ ಹ್ಯಾಂಡ್ಸ್ ಮತ್ತು ಅಡೀಷನಲ್ ಸ್ಕೂಲ್ಸ್ ಎರಡನ್ನೂ ಕೊಟ್ಟಿದೆ. ಬಹುಶಃ ಅವರಿಗೆ ಅದು ಗೊತ್ತಾಗಲಿಲ್ಲ, ಚಿಂತೆಯಿಲ್ಲ. ಈ ಮಧ್ಯ ಕಾಲದಲ್ಲಿ ಮಾನ್ಯ ಸದಸ್ಯರು ಸ್ಕೂಲ್ ಇಲಾಖೆಯಲ್ಲಿರುವ ಉಪಾಧ್ಯಾಯರಿಗೆ ಶಿಕ್ಷಣವಿಲ್ಲ, ಅವರಿಗೆ ಶಿಕ್ಷಣವಿಲ್ಲದೆ ಪಾಠ ಹೇಳಿಕೊಡಲು ನೇಮಿಸಿರುವುದು ವಿದ್ಯಾಭ್ಯಾಸ ಕ್ರಮದಲ್ಲಿ ಒಂದು ಲೋಪ, ಅಂಥ ಸ್ಕೂಲು ನಡೆಸುವುದಕ್ಕೆ ಬದಲು ಮುಚ್ಚುವುದು ಉತ್ತಮ ಎಂದು ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಿ ರಾಜ್ಯಾಂಗದ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಪ್ರಕಾರ ಮುಂದುವರಿಯಬೇಕೆಂದು ವಿದ್ಯಾಸುಧಾರಣಾ ಕ್ರಮದಲ್ಲಿ ವ್ಯವಸ್ಥೆಮಾಡಿದ್ದೇವೆ. ಉಪಾಧ್ಯಾಯರಿಗೆ ಶಿಕ್ಷಣ ಕೊಡುವುದು ಅಗತ್ಯವೆಂದು ಕಂಡು ಈಗಾಗಲೆ ಟೀಚರ್ಸ್ ಕಾಲೇಜುಗಳನ್ನು ಜಾಸ್ತಿಮಾಡಿ ಉಪಾಧ್ಯಾಯರುಗಳನ್ನು ತರಪೇತು ಮಾಡುತ್ತಿದ್ದಾರೆ.

ಎರಡನೆಯದಾಗಿ ಸರಿಯಾದ ಪಠ್ಯಪುಸ್ತಕಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕಾಗಿ ಟೆಕ್ಸ್ಟ್‌ಬುಕ್ ಸಮಿತಿಯನ್ನು ರೀಆರ್ಗನೈಜ್‌ಮಾಡಿ ಬೋರ್ಡನ್ನು ರಚಿಸಿದ್ದೇವೆ ಮತ್ತು ಕರಿಕ್ಯುಲಂ, ಪಠ್ಯ ಕ್ರಮ ಹೇಗಿರಬೇಕು, ಹೇಗೆ ವಿಶಾಲವಾಗಬೇಕು ಎಂದು ಯೋಚನೆಮಾಡಿ ಅದನ್ನು ಕೂಡ ತೀರ್ಮಾನಮಾಡಿದೆ. ಈಗ ಇಂಡಿಯಾ ಸರ್ಕಾರ ಬೇರೆ, ನಮ್ಮ ಮೈಸೂರು ಸರ್ಕಾರ ಬೇರೆ ಎಂದು ವಿಂಗಡಿಸಬಾರದು. ಏಕೆಂದರೆ ನಮ್ಮಲ್ಲಿರುವ ಅನೇಕ ವರಮಾನದ ಬಾಬುಗಳು ಕೇಂದ್ರ ಸರ್ಕಾರಕ್ಕೆ ಹೋಗಿವೆ. ಡೈರೆಕ್ಟಿವ್ ಪ್ರಿನ್ಸಿಪಲ್ಸನಲ್ಲೇನಿದೆಯೋ ಅದನ್ನು ನಿರ್ವಹಿಸಿದ್ದೇವೆ. ಸುಧಾರಣೆಯನ್ನು ಜಾರಿಗೆ ತರಬೇಕಾದರೆ ನಮ್ಮದೆಷ್ಟು ಜವಾಬ್ದಾರಿಯಿದೆಯೋ ಸಾರ್ವಜನಿಕರ ಜವಾಬ್ದಾರಿ ಮತ್ತು ಕೇಂದ್ರ ಸರ್ಕಾರದ ಜವಾಬ್ದಾರಿ ಅಷ್ಟೇ ಇದೆ. ಆದ್ದರಿಂದ ಅವರ ಸಹಕಾರ ಜಾಸ್ತಿಯಾಗಿ ಬೇಕು. ವಿದ್ಯಾಭ್ಯಾಸವು ವಿಸ್ತಾರವಾಗಬೇಕೆಂದು ಯೋಚಿಸಿ ನವೆಂಬರ್ 2, 3 ಮತ್ತು 4ನೆಯ ತಾರೀಖುಗಳಲ್ಲಿ ದೆಹಲಿಯಲ್ಲಿ ಒಂದು ಕಾನ್ಫರೆನ್ಸ್ ಏರ್ಪಡಿಸಿದ್ದಾರೆ. ಅದಕ್ಕೆ ಒಬ್ಬ ಸೆಕ್ರೆಟರಿಯವರು ಮತ್ತು ವಿದ್ಯಾ ಇಲಾಖೆ ಡೈರೆಕ್ಟರು ಮುಂಚೆ ಹೋಗಿ ಯಾವ ರೀತಿ ಮುಂದುವರಿಸಬೇಕು, ಯಾವ ರೀತಿ ವಿಸ್ತಾರ ಮಾಡಬೇಕು ಎಂದು ಚರ್ಚೆ ನಡೆಸಬೇಕಾಗಿದೆ. ಆದ್ದರಿಂದ ವಿದ್ಯಾಭ್ಯಾಸ ಕ್ರಮ ಸರಿಪಡಿಸಿ ಸರಿಯಾದ ಮಾರ್ಪಾಡುಮಾಡಿ ದೇಶದಲ್ಲೆಲ್ಲಾ ವಿದ್ಯಾಭ್ಯಾಸ ಹರಡುವುದು ಸೂಕ್ತವೆಂಬುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಂಬಿದ್ದೇನೆ. ಈ ವಿಚಾರದಲ್ಲಿ ಮೈಸೂರು ಸರ್ಕಾರ ಇತರ ಪ್ರಾಂತ್ಯ ಸರ್ಕಾರಗಳಿಗಿಂತ ಮುಂದುವರಿದಿದೆಯೆಂದು ತಮಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. ವಿದ್ಯಾಭ್ಯಾಸದ ವಿಚಾರದಲ್ಲಿ ಮೈಸೂರು ಸರ್ಕಾರ ಇತರ ಪ್ರಾಂತ್ಯ ಸರ್ಕಾರಗಳಿಗಿಂತ ಹೆಚ್ಚಾಗಿ ಖರ್ಚು ಮಾಡುತ್ತಿದೆಯೆಂಬುದನ್ನು ಯಾರೂ ಮರೆಯಬಾರದು. ಈ ಬಗ್ಗೆ ಕೇಂದ್ರದ ನೆರವು ನಮಗೆ ಬೇಕಾಗಿದೆಯೆಂಬುದನ್ನು ಈಗಾಗಲೇ ನಾವು ಒತ್ತಾಯಪಡಿಸಿದ್ದೇವೆ. ಬಹುಶಃ ಈ ವಿಚಾರ ನವೆಂಬರ್ ಸಮ್ಮೇಳನದಲ್ಲಿ ಇತ್ಯರ್ಥವಾಗಬಹುದೆಂಬ ನಂಬಿಕೆ ಇದೆ. ಆ ರೀತಿ ಆದಮೇಲೆ ನಾವು ಇದನ್ನು ಎಷ್ಟುಮಟ್ಟಿಗೆ ವಿಸ್ತರಿಸಬಹುದು, ಮಾನ್ಯ ಸದಸ್ಯರ ನಿರೀಕ್ಷೆಗಿಂತ ಮುಂದೆ ಹೋಗಲು ಸಾಧ್ಯವೇ

(ಶ್ರೀ ಎ. ಜಿ. ರಾಮಚಂದ್ರರಾವ್.)
ಎಂಬುದನ್ನು ಆಲೋಚಿಸಿ ತೀರ್ಮಾನಿಸುತ್ತೇವೆಂದು ಹೇಳುತ್ತೇನೆ.

Question No. 80 *re*: Breaches in Sangenahalli and Tuppadahalli Tanks.

***Sri J. MOHAMED IMAM** (Jagalur).—Sir, as I speak on this subject I feel as if I am celebrating the first anniversary of the breaches of Sangenahalli and Tuppadahalli Tanks though with a heavy heart because it is exactly two days short of one year since this major disaster occurred. Till now I did not take much part or pursue the matter hoping that the Government would take necessary effective action in this matter. These tanks were sanctioned in the year 1944; the execution commenced from 1946. Necessary facilities were created to speed up the works. I may just state that a sub-division was constituted for each tank and the Assistant Engineer in charge of each sub-division was given the assistance of a number of overseers. To add to the speedy and proper execution of the work a separate division was created solely for these two tanks. His main and sole work was to look after the execution of these works in a proper way. The work went on what I call at a snail's pace for nearly 8 years and last year we thought that the people round about, who had waited fortunately for a long time, would reap the benefit of these two tanks. But unfortunately, these two tanks burst or breached simultaneously and thus dashed off all the hopes entertained by the people round about.

When these two tanks breached there was widespread commotion throughout the State. Both the public and the Press took up the cause. And it was felt that the breaches of these two tanks were not quite natural or entirely due to rains to which they were attributed but mostly due to the gross negligence of the departmental people who were in charge of them. The Government appointed a Committee with Sri L. Siddappa as the Chairman and a Superintending Engineer and a District Board President as members. They visited the two spots, examined both the breaches thoroughly and effectively and have given their findings and I will read relevant portions of their report. I will be very brief. I may mention that this tank breached on 28th October 1953. I may point out that this tank was quite ready to receive full storage of water. The work was supposed to have been completed. There was heavy rainfall and this tank began to receive water. But even before the tank was full, it developed a breach and the bund gave way and all the water flowed out. The finding of the Committee on this is as follows:—

> "Inadequate foundation and keying the bund well into the ground;
>
> Imperfect consolidation and want of picking the newly rolled surface to get a thorough mix of bund material to a uniform homogeneous consistency;
>
> Poor and porous soil with which the bund filling material is made;
>
> Want of water-proof consolidated gravel backing to revetment to afford it support and poor quality construction with rounded boulder stones without keying the face stone to the back; and
>
> Quick rise of water level in the new lake."

I may state that there was not only a breach but the rivetment failed. This was a major disaster and the Committee in their finding have said that a breach of this tank which was not even full, was due to not too much of rainfall but inadequate foundation, imperfect consolidation, want of water-proof consolidated gravel backing, poor quality revetment work, etc. Thus the bund was not erected properly and there was a good deal of negligence on the part of the officers.

Now I come to the question of breach of Tuppadahalli Tank. It reveals a very interesting phase, which is not at all complimentary to our engineers. It is common practice that the level of the waste weir through which the surplus water flows out, will not be constructed unless the bund has raisen to the required height and unless also the revetment is complete. But in this case the reverse method seems to have been followed. Even before the bund was complete, even before it was raised to the required height and even before the revetment was complete somehow, the Engineer thought it fit to construct the waste weir to the full level and when it was constructed the tank was ready to receive full storage of water. This was an unfortunate circumstance. So, when the tank received the full supply of water, it began to discharge, the margin left between the top level of water and the bund having hardly one foot and again in this case also the revetment was not at all completed. So the water came into direct contact with the poor soil with the result that it acted on the soil which was not well consolidated. Let me read the findings of the Committee on this question also.

5-30 P.M.

Report of Enquiry Committee—

> "P-13 | This sudden filling of the lake added to the poor black soil construction with which the whole bund was constructed, incomplete work of revetment in many grades, and most important of all the construction of the masonry weir to full designed height even before the bund was raised to full height and the designed free board secured, etc., are the causes for this tank breaching."

This is a very unfortunate thing. Any Engineer would have first constructed the bund and then he would have thought of raising the waste-weir in order to effect full storage. But here it was very unfortunate that the waste-weir was raised to the designed height while the revetment work was still incomplete. This is most unengineering. One thing has to be said, Sir, that the Engineers responsible for this work have throughout been very grossly negligent. Sir, Sangenahalli Tank breached on 28/10. On the same day information was received that Tuppadahalli Tank was full and it had been overflowing from the waste-weir. On that day, namely, 28/10 when Sangenahalli Tank breached, it was the duty of the Executive Engineer to be forewarned and rush to Tuppadahalli to take adquate and necessary precautionary measures. In fact, I too went there; after seeing Sangenahalli Tank, I rushed to Tuppadahalli. I was there on 29th morning. The entire tank was full. It was discharging. Practically the bund revetment had collapsed and in many places there was no revetment. The local Assistant Engineer was there trying to do something with the date and palm trees that were available. But no responsible engineer was there. The Executive Engineer who is solely meant for this work was not there. He had seen the breach of the Sangenahalli tank and this is hardly 20 miles. He never took the trouble to rush to Tuppadahalli to take necessary steps. Even on the 29th he had not gone there. On the 30th also he had not gone there. He comes there for the first time after the breach and after the disaster has happened. Why I am pressing this point is, to say that there was every chance of saving the Tuppadahalli tank and there was every possibility. Supposing on the 28th alone if the Executive Engineer had rushed to the spot and seen the tank and how it had been discharging from the top level, if he had ripped open the waste-weir, much of the water would have drained out. There was time for that. It is simply criminal on his part not to have visited the spot on that particular day. I do not hold only the Executive Engineer responsible. The Chief Engineer received telegrams and the Superintending Engineer received telegram. Nobody went there. It was only a small Assistant Engineer who was there but he had no authority to take any decisive action. He said, well, Sir, I cannot take the responsibility. I was of course feeling

(SRI J. MOHAMED IMAM.)

within myself. But still the Executive Engineer who was so near did not care to come in time. I asked him afterwards; he said, 'I was expecting the Chief Engineer', as if the breach would wait for the Chief Engineer! I feel that they have not taken immediate action, and I am confident that if timely action had been taken and if the Executive Engineer was more vigilant, at least Tuppadahalli could have been saved. I know, Sir, once in the year 1943 there was heavy rainfall—in one night seven inches. The Jagalur Tank was overflowing. The Executive Engineer Sri Thippiah rushed to the spot immediately. He got the voddars and nearly half the water was drained out and the tank was saved. It is a most collosal mistake that has been committed by the Engineers—when the tank was breached, none of the Engineers in authority either the Superintendenting Engineer or the Chief Engineer or even the Executive Engineer rushed to the spot, and a major disaster was allowed to take place. If only any of the persons in authority were there in time, I feel very much that this tank would have been saved and the gross negligence shown by the Engineering Department can never be excused, or condoned. All the Engineers were there after 30th when the tank had breached. Sir, I do not want to narrate all these facts and hold a *post mortem* examination. This is most unsatisfactory. The attitude of the engineers particularly regarding Thuppadahalli can never be excused. Sir, even otherwise, when two new tanks are constructed and when they are expected to receive water, it is the duty, it is the practice of the engineers to be very vigilant and try to be at the spot to avert any such calamities. The breach has occurred during day time and the tank was filling for the first time and it was the duty of the engineers to be present on the spot and see how the new tank behaved. No officer worth the name was present at Sangenahalli when that tank breached and there was an interval of two or three days before the second tank breached. It is nothing but criminal negligence on the part of the engineers concerned not to have gone there and taken appropriate steps.

In this connection, Sir, I must invite attention to the very fine minutes entered in the note of Sri H. R. Guruv Reddy and Sri L. Siddappa:

> "It is clear from the conclusions reached by us that in the case of both the tanks the work from start to finish has not been done according to specifications. This leads us to an inference that 'the Engineer Officers who were entrusted with the task of executing these two important new works, have, either, as is alleged by the residents of some of the villages surrounding Sangenahalli Tank, been corrupt and have allowed higher rates for manifestly inferior work with a view to share the profits or they have been grossly negligent in their duties, thus causing great loss to the State Exchequer."
>
> "Whether the Engineer Officers allowed this bad work out of corrupt motives or due to indifference or negligence in the discharge of their duties, we are of the opinion they are equally guilty and they should not be allowed to to go unpunished. We leave it to the Government to cause such further enquiry as they deem fit to apportion the guilt . . ."

Sir, the staff employed had ample time to do their work. It was never expected, to rush through their work. They were given the best of materials. Ample provision was made for consolidation. They were given adequate equipment and machinery and with all this, if this is the result, I do not know whom to trust. One thing can be said: from the beginning to the end there has been indifference and criminal negligence.

